# 1

# ಸರ್ವಶಕ್ತನಾದ ದೇವರು ಅಸ್ತಿತ್ವದಲ್ಲಿರುವನೋ?

ಒಂದು ಮನೆಯು ಅದರ ಅಸ್ತಿವಾರಕ್ಕಿಂತ ಹೆಚ್ಚು ಬಲವಾದದ್ದಾಗಿರುವದಿಲ್ಲ. ಮನೆಯ ವಿವಿಧ ಭಾಗಗಳು ಅದು ನಿಂತಿರುವ ಅದರ ಅಸ್ತಿವಾರದಿಂದ ಪರಿಣಾಮಗೊಳ್ಳುವವು.

ಮನೆಗೆ ಅಸ್ತಿವಾರವು ಏನಾಗಿರುವುದೋ ಹಾಗೆಯೇ ಜೀವನಕ್ಕೆ "ಸರ್ವಶಕ್ತನಾದ ದೇವರು ಅಸ್ತಿತ್ವದಲ್ಲಿರುವನೋ?" ಎಂಬ ಪ್ರಶ್ನೆಯಿರುವುದು. ದೇವರಲ್ಲಿ ನಮ್ಮ ನಂಬಿಕೆ ಇಲ್ಲವೇ ಅಪನಂಬಿಕೆಯು ಜೀವನದ ಬಗೆಗಿನ ನಮ್ಮ ಎಲ್ಲಾ ಯೋಚನೆಗಳಿಗೆ ಬಣ್ಣಗಳು ಕೊಡುವ ಇಲ್ಲವೇ ವ್ಯಾಖ್ಯಾನ ಕೊಡುವದಕ್ಕೆ ಅಸ್ತಿವಾರವಾಗುವುದು.

ಆದದರಿಂದ, ಯಾರಾದರೂ ಕೇಳುವ ಅತೀ ಅಗಾಧವಾದ ಪ್ರಶ್ನೆಯು "ದೇವರು ಅಸ್ತಿತ್ವದಲ್ಲಿರುವನೋ?" ಎಂಬುದು. ಈ ಪ್ರಶ್ನೆಯು ಇಷ್ಟು ಮಹತ್ವದ್ದಾಗಿರುವದಕ್ಕೆ ಕಾರಣವು ಇದಕ್ಕೆ ಕೊಡಲ್ಪಡುವ ಉತ್ತರವು ಜೀವನದ ಬಗೆಗಿರುವ ನಮ್ಮ ಇತರ ಪ್ರಶ್ನೆಗಳಿಗೆ ಎಲ್ಲಾ ಉತ್ತರಗಳ ಮೇಲೆ ಪರಿಣಾಮ ಬೀರುತ್ತದೆ.

ಉದಾಹರಣೆಯಾಗಿ, ಒಬ್ಬ ಮನುಷ್ಯನು, "ಇಲ್ಲ, ದೇವರು ಅಸ್ತಿತ್ವದಲ್ಲಿರುವದಿಲ್ಲ" ಎಂದು ಹೇಳಿ ಉತ್ತರ ಕೊಡುವನೆಂದು ತಿಳಿಯಿರಿ. ಆಗ ಈ ಮನುಷ್ಯನು ಪ್ರಶ್ನೆಗೆ ಉತ್ತರವಾಗಿ ಹೀಗೆ ಹೇಳಬಹುದು, "ನಾನು ಈ ಲೋಕದಲ್ಲಿ ಹೇಗೆ ಜೀವಿಸಬಹುದು?" ಆತನು, "ನಾನು ಆಯ್ದುಕೊಳ್ಳುವ ಯಾವುದೇ ವಿಧದಲ್ಲಿ ನಾನು ಜೀವಿಸಬಹುದು. ನಾನು ಸೃಷ್ಟಿಸಲ್ಪಟ್ಟ ಜೀವಿಯಲ್ಲವೇ, ನಾನು ಯಾವುದೇ ಉನ್ನತ ಶಕ್ತಿಗೆ ಲೆಕ್ಕಾ ಕೊಡಬೇಕಾಗಿಲ್ಲ. ಯೋಗ್ಯವಾದ ರೀತಿಯಲ್ಲಿ ಜೊತೆಮಾನವ ಸಂತೋಷಕ್ಕಾಗಿ ಮತ್ತು ಅಭಿವೃದ್ಧಿಗಾಗಿ ಸಹಾಯ ಮಾಡುವುದೇ ನನ್ನ ಒಂದೇ ಒಂದು ಹಂಗಾಗಿದೆ. ಇದನ್ನು ದಾಟಿ, ನನ್ನ ಜೀವನದೊಂದಿಗೆ ನಾನು ಏನು ಮಾಡುವೆನೋ ಅದು ನನಗೆ ಬಿಟ್ಟದ್ದು. ಮರಣದ ನಂತರ ನಾನು ಜೀವಿಸದೇ ಇರುವದರಿಂದ ನಾನು ಜೀವಿಸುವ ಜೀವನದಿಂದ ನನಗೆ ಸಾಧ್ಯ ವಾದಷ್ಟನ್ನು ಹಿಂಡಿಕೊಳ್ಳಬೇಕು" ಎಂದು ಮುಕ್ತಾಯಗೊಳಿಸಿದನು.

ಈಗ ಆ ಮನುಷ್ಯನು "ದೇವರು ಅಸ್ತಿತ್ವದಲ್ಲಿ ಇರುವನೋ?" ಎಂಬ ಪ್ರಶ್ನೆಗೆ "ಹೌದು, ಆತನು ಅಸ್ತಿತ್ವದಲ್ಲಿರುವನು" ಎಂದು ಹೇಳಿ ಉತ್ತರ ಕೊಡುವನೆಂದು ತಿಳಿಯೋಣ. "ನಾನು ಈ ಲೋಕದಲ್ಲಿ ಹೇಗೆ ಜೀವಿಸಬಹುದು?" ಎಂಬ ಪ್ರಶ್ನೆಗೆ ಸಂಪೂರ್ಣವಾಗಿ ಭಿನ್ನವಾದ ಉತ್ತರವಿರುವುದು. ಈ ಪ್ರಶ್ನೆಗೆ ಉತ್ತರವಾಗಿ ಅವನು ಹೀಗೆ ಹೇಳಬಹುದು, "ಸರ್ವಶಕ್ತನಾದವನಿಂದ ನಾನು ಸೃಷ್ಟಿಸಲ್ಪಟ್ಟಿದ್ದೇನೆ. ನನ್ನ ಅಸ್ತಿತ್ವಕ್ಕೆ ಆತನಿಗೆ ಸ್ಪಷ್ಟವಾದ ಉದ್ದೇಶವಿದೆ, ನಾನು ಆ ಉದ್ದೇಶವನ್ನು ಹುಡುಕಿ ಕಂಡುಕೊಳ್ಳಬೇಕು. ಆತನ ಚಿತ್ತವನ್ನು ಕಂಡುಕೊಂಡು ಅದರಂತೆ ಜೀವಿಸುವದರಿಂದ ಸಮಾಧಾನವನ್ನೂ ನನ್ನ ಸೃಷ್ಟಿಕರ್ತನು ನನ್ನ ಜೀವನಕ್ಕಾಗಿ ಉದ್ದೇಶಿಸಿದ ಉದ್ದೇಶವನ್ನೂ ಕಂಡುಕೊಳ್ಳಬಹುದು. ನಾನು ಆತನ ಜಗತ್ತಿನಲ್ಲಿ ಜೀವಿಸಿದ್ದರ ಬಗ್ಗೆ ಒಂದು ದಿನ ಲೆಕ್ಕಾ ಕೊಡಲು ಆತನು ನನ್ನನ್ನು ಕರೆಯುವನು."

"ಸರ್ವಶಕ್ತ ದೇವರು ಅಸ್ತಿತ್ವದಲ್ಲಿರುವನೋ?" ಎಂಬ ಪ್ರಶ್ನೆಯನ್ನು ಬಹಳ ಜಾಗರೂಕತೆಯಿಂದ ಯೋಚಿಸೋಣ. ದೇವರು ಅಸ್ತಿತ್ವದಲ್ಲಿ ಇದ್ದಾನೆ ಎಂದು ನಂಬುವದಕ್ಕೆ ಒತ್ತಾಯ ಪೂರ್ವಕವಾದ ಕಾರಣಗಳಿರುವವೋ? ದೇವರ ಅಸ್ತಿತ್ವದ ಬಗ್ಗೆ ವಾದವಿವಾದದೊಂದಿಗೆ ಬೈಬಲ್ ವಾಕ್ಯ ಪ್ರಾರಂಭವಾಗುವದಿಲ್ಲ: ದೇವರ ಇರುವಿಕೆಯ ಬಗೆಗಿನ ದೃಢವಾದ ಅರ್ಥದೊಂದಿಗೆ ನಿಜವಾಗಿಯೂ ಅದು ಪ್ರಾರಂಭವಾಗುತ್ತದೆ. "ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು" (ಆದಿಕಾಂಡ 1:1). ಹೀಗಿದ್ದರೂ ದೇವರ ಅಸ್ತಿತ್ವಕ್ಕೆ ತರ್ಕ ಸಮ್ಮತವಾದ ಪುರಾವೆಗಳು ಬೈಬಲ್‌ನಲ್ಲೆಲ್ಲಾ ಚದುರಿರುತ್ತವೆ. ಕೆಲವು ನೇರವಾಗಿ ಕೊಡಲ್ಪಟ್ಟಿವೆ, ಇನ್ನೂ ಕೆಲವು ಪರೋಕ್ಷವಾಗಿ ಕೊಡಲ್ಪಟ್ಟಿವೆ; ಕೆಲವು ಸ್ಪಷ್ಟವಾಗಿ ಹೇಳಲ್ಪಟ್ಟಿವೆ ಹಾಗೂ ಇತರವುಗಳು ಅಂತರಾರ್ಥವಾಗಿವೆ. ಎರಡನ್ನು ಯೋಚಿಸು ವದರಿಂದ ಅವುಗಳಲ್ಲಿಯ ಅನೇಕವುಗಳನ್ನು ಸಾರಾಂಶವಾಗಿ ನೋಡೋಣ. ಈ ಎರಡು ಕಾರಣಗಳ ಬಗ್ಗೆ ನೀವು ಆಳವಾಗಿ ಯೋಚಿಸುವದಾದರೆ, ದೇವರು ನಿಜವಾಗಿಯೂ ಅಸ್ತಿತ್ವದಲ್ಲಿ ಇದ್ದಾನೆ ಎಂದು ಭರವಸೆಯಿಂದ ನಂಬಲಿಕ್ಕೆ ಅವು ನಮ್ಮನ್ನು ನಡೆಸುತ್ತವೆ.

## ಜಗತ್ತಿನ ಪುರಾವೆ

ದೇವರು ನಿಜವಾಗಿಯೂ ಅಸ್ತಿತ್ವದಲ್ಲಿರುವನೆಂದು ನಂಬಲು ನಮ್ಮನ್ನು ಒತ್ತಾಯ ಮಾಡಲಿಕ್ಕೆ ನಮಗೆ ಕೊಡಲ್ಪಟ್ಟ ಮೊದಲನೆಯ ಪುರಾವೆಯು ನಮ್ಮ ಪರಿಸರ ಮತ್ತು ನಮ್ಮ ಮೇಲೆ ಇರುವ ಜಗತ್ತು. ಭೂಮಿ ಹಾಗೂ ವಿಶ್ವವು ವಾಕ್ಚಾತುರ್ಯದಿಂದ ದೇವರ ಇರುವಿಕೆಯನ್ನು ಘೋಷಿಸುತ್ತವೆ.

ಭೂಮಿ ಎಂದು ಕರೆಯಲ್ಪಡುವ ಗ್ರಹದ ಮೇಲೆ ನಾವು ಜೀವಿಸುತ್ತಿದ್ದೇವೆ. ಇದು ಸೂರ್ಯನ ಸುತ್ತಲೂ ತಿರುಗುವ ಸೌರವ್ಯೂಹದ ಭಾಗವಾಗಿದೆ. ಈ ಸೌರವ್ಯೂಹಗೆ ಪ್ರಶ್ನಿಸಲಾಗದ ಕ್ರಮ ಹಾಗೂ ಯೋಜನೆಯಿದೆ. ಎಲ್ಲಾ ಗ್ರಹಗಳು ತಮ್ಮ ಕಕ್ಷೆಗಳಲ್ಲಿರುತ್ತವೆ ಮತ್ತು ಅವು ಒಂದಕ್ಕೊಂದು ಎಂದೂ ಅಪ್ಪಳಿಸುವದಿಲ್ಲ, ಸರಿಯಾದದಲ್ಲಿಯೂ ಸರಿಯಾದ ಅಂತರದಲ್ಲಿಯೂ ಅವು ಸೂರ್ಯನ ಸುತ್ತ ತಿರುಗುತ್ತವೆ. ಸೂರ್ಯನೊಂದಿಗಿನ ಭೂಮಿಯ ಸಂಬಂಧವು ದಿನವನ್ನೂ ರಾತ್ರಿಯನ್ನೂ ಋತುಗಳನ್ನೂ ಸೃಷ್ಟಿಸುತ್ತದೆ. ಇದು ಯಾವಾಗಲೂ ಸೂರ್ಯನಿಂದ ಯೋಗ್ಯವಾದ ದೂರದಲ್ಲಿರುತ್ತದೆ. ನಾವು ಸೂರ್ಯನಿಂದ ದೂರ ಹೋದರೆ ಗಡ್ಡೆಗಟ್ಟುತ್ತೇವೆ; ಅದರ ಸಮೀಪಕ್ಕೆ ಬಂದರೆ ಬೆಂದು ಹೋಗುತ್ತೇವೆ.

ಅಂತರಿಕ್ಷದಲ್ಲಿ ನಮ್ಮ ಸೌರವ್ಯೂಹಯನ್ನು ದಾಟಿ ಇತರ ಅಸಂಖ್ಯಾತ ಸೌರವ್ಯೂಹಗಳು ಅಸ್ತಿತ್ವದಲ್ಲಿರುವವೆಂದು ವಿಜ್ಞಾನಿಗಳು ನಮಗೆ ಹೇಳುತ್ತಾರೆ. ವಿಶ್ವದ ವಿಸ್ತೀರ್ಣತೆಗಳನ್ನು ನಾವು ಖಚಿತವಾಗಿ ತಿಳಿದಿರುವದಿಲ್ಲ. ಅದರ ಅಂಚಿಗೆ ನಮ್ಮ ಟೆಲೆಸ್ಕೋಪುಗಳು ನಮ್ಮನ್ನು ತೆಗೆದು ಕೊಂಡು ಹೋಗುವುದಿಲ್ಲ. ಅದರ ಅಗಲವನ್ನು ನಮ್ಮ ಮನಸ್ಸುಗಳು ಗ್ರಹಿಸಿಕೊಳ್ಳುವದಿಲ್ಲ. ವಿಶ್ವದ ಬಗ್ಗೆ ನಮಗೆ ತಿಳಿಯದೇ ಇರುವಂಥದ್ದು ಬಹಳ ಇರುವುದು. ಆದರೂ ಅದರ ಬಗ್ಗೆ ಒಂದು ಸಂಗತಿಯನ್ನು, ಅಂದರೆ ವಿಶ್ವವು - ಕ್ರಮದಿಂದಲೂ ಯೋಜಿಸಿರುವ ವಿಧಾನದ ಗುಣಲಕ್ಷಣದಿಂದಲೂ ಹೊಂದಿಕೊಂಡಿರುವದನ್ನು ಖಚಿತವಾಗಿ ತಿಳಿದು ಕೊಂಡಿದ್ದೇವೆ; ಅದು ಕ್ರಮವಿಲ್ಲದದ್ದಾಗಿಯೂ ಅಸ್ತವ್ಯಸ್ತವಾದದ್ದೂ ಆಗಿರುವದಿಲ್ಲ; ಅದು ಒಂದುಗೂಡಿಸಲ್ಪಟ್ಟಿದೆ ಮತ್ತು ಕ್ರಮವಾಗಿ ರಚಿಸಲ್ಪಟ್ಟಿದೆ.

ವಿಶ್ವದ ಅಸ್ತಿತ್ವವು ಅದರ ಬಗೆಗಿನ ಎರಡು ಸಿದ್ಧಾಂತಗಳಲ್ಲಿ ಒಂದನ್ನು ತೆಗೆದು ಕೊಳ್ಳುವಂತೆ ಕೇಳುತ್ತದೆ: ಅದು ಸೃಷ್ಟಿಸಲ್ಪಟ್ಟಿತು ಇಲ್ಲವೇ ತಾನೇ ಸಂಭವಿಸಿತು. ವಿಶ್ವವು ತಾನೇ ಸಂಭವಿಸಿದ್ದಾಗಿರುತ್ತದೆಂದು ಒಬ್ಬನು ವಾದಿಸಿದರೆ, ವಿಶ್ವವು ಏನೂ ಇಲ್ಲದ್ದರಿಂದ ಸಂಭವಿಸಿತೆಂತಲೂ ಇಲ್ಲವೇ ಈಗಾಗಲೇ ಅಸ್ತಿತ್ವದಲ್ಲಿರುವ ಪದಾರ್ಥದಿಂದ ಒಂದು ರೀತಿಯ ವಿಶ್ವದ ಸ್ಫೋಟದ ಪರಿಣಾಮದಿಂದ ಆಯಿತೆಂತಲೂ ತೀರ್ಮಾನಿಸ ಬೇಕಾಗುತ್ತದೆ. ಈ ಎರಡು ಮುಖ್ಯ ತೀರ್ಮಾನಗಳಲ್ಲಿ ಯೋಗ್ಯವಾದದ್ದು ವಿಶ್ವವು ಸೃಷ್ಟಿಸಲ್ಪಟ್ಟಿತು ಎಂಬುದು. ವಿಶ್ವವು ಏನೂ ಇಲ್ಲದ್ದರಿಂದ ಬಂದಿತೆಂದು ನಾವು ಹೇಗೆ ಪ್ರಾಮಾಣಿಕತೆಯಿಂದ ನಂಬಬಹುದು? ವಿಶ್ವವು ವಿಶ್ವದ ಸ್ಫೋಟದ ಪರಿಣಾಮವಾಗಿ ಬಂದರೆ ಮತ್ತು ಯಾವಾಗಲೂ ಪದಾರ್ಥವು ಮಾತ್ರವೇ ಇತ್ತು ಎಂಬುದನ್ನು ತರ್ಕಬದ್ಧವಾಗಿ ಹೇಗೆ ನಂಬಬಹುದು?

ಒಬ್ಬ ಮನುಷ್ಯನು ತನ್ನ ಕೈಯಲ್ಲಿ ಒಂದು ಪುಸ್ತಕವನ್ನು ಹಿಡಿದುಕೊಂಡು ಬರುವನೆಂದು ತಿಳಿಯಿರಿ. ಅವನು ಆ ಪುಸ್ತಕವನ್ನು ನನಗೆ ಕೊಟ್ಟು ಅದನ್ನು

ನೋಡಿರಿ ಎಂದು ಹೇಳುವನು. ನಾನು ಅದನ್ನು ಪರೀಕ್ಷಿಸಲು ಪ್ರಾರಂಭಿಸುತ್ತೇನೆ. ಪುಸ್ತಕದ ಮುಖಪುಟದ ಮೇಲೆ “Cruden’s Complete Concordance” ಎಂದು ಅಚ್ಚಾಗಿರುವದನ್ನು ಗಮನಿಸಿದೆನು. ಪುಟಗಳನ್ನು ತಿರುಗಿಸಿ ನೋಡಿದಾಗ, ಪ್ರಕಾಶಕರು ಎಂಬಲ್ಲಿ “Zondervan” ಎಂಬುದು ಅಚ್ಚಾಗಿರುವದನ್ನು ಗಮನಿಸಿದೆನು. ಪುಸ್ತಕದಲ್ಲಿ KJV ಇಂಗ್ಲೀಷ್ ಬೈಬಲಿನ ಎಲ್ಲಾ ವಿವಿಧ ಹೆಸರುಗಳೂ ಸ್ಥಳಗಳೂ ಮಾತುಗಳೂ ಅಕ್ಷರ ಕ್ರಮದಲ್ಲಿ ಪಟ್ಟಿ ಮಾಡಿದ್ದನ್ನೂ ಅವುಗಳ ಕೆಳಗೆ ಅವು ಬೈಬಲಿನಲ್ಲಿ ಕಂಡುಕೊಳ್ಳುವ ವಿವಿಧ ವಚನಗಳಿದ್ದುದನ್ನೂ ಗಮನಿಸಿದೆನು. ಆ ಪುಸ್ತಕದ ಮುಖ ಪುಟದ ಮೇಲೆ 200,000ಕ್ಕಿಂತ ಹೆಚ್ಚು ಉಲ್ಲೇಖಗಳು ಈ ಪುಸ್ತಕದಲ್ಲಿ ಪಟ್ಟಿ ಮಾಡಲ್ಪಟ್ಟಿವೆ ಎಂದು ಬರೆದಿತ್ತು. “ನಾನು ಪ್ರಕಾಶಕರನ್ನು ಸಂಪರ್ಕಿಸಿ, ಇದರ ಒಂದು ಪ್ರತಿಯನ್ನು ಪಡೆದುಕೊಳ್ಳುವೆನು” ಎಂದು ಅವನಿಗೆ ಹೇಳುವೆನು.

ಆಗ ಆ ಮನುಷ್ಯನು, “ಈ ಪುಸ್ತಕದ ಪ್ರತಿಯನ್ನು ನೀವು ಕೊಂಡು ಕೊಳ್ಳಲಾರಿರಿ. ಈ ಪುಸ್ತಕವು ಜೊಂಡರ್ವಾನ್ ಅವರಿಂದ ಪ್ರಕಟಿಸಲ್ಪಟ್ಟಿರುವದಿಲ್ಲ. ಇಲ್ಲವೇ ಅಲೆಕ್ಸಾಂಡರ್ ಕ್ರೂಡೆನ್ಸ್ ಅವರಿಂದ ಸಂಗ್ರಹಿಸಲ್ಪಟ್ಟಿರುವದಿಲ್ಲ. ಈ ಪುಸ್ತಕ ತಾನೇ ಬಂದಿದೆ. ಅದರ ಸಂಪೂರ್ಣ ಸ್ಥಿತಿಯಲ್ಲಿ ನಾವು ಅದನ್ನು ಕಂಡುಕೊಂಡಿದ್ದೇವೆ. ಅದು ಏನೂ ಇಲ್ಲದ್ದರಿಂದ ಅಸ್ತಿತ್ವಕ್ಕೆ ಬಂದಿದೆ” ಎಂದು ಹೇಳುವನು. “ಇಂಗ್ಲಿಷ್ ಬೈಬಲಿನ ಈ ಎಲ್ಲಾ ಹೆಸರುಗಳ, ಸ್ಥಳಗಳ ಹಾಗೂ ಮಾತುಗಳ ಪಟ್ಟಿಯು ಯಾರಿಂದಲೂ ಸಂಗ್ರಹಿಸಲ್ಪಟ್ಟಿಲ್ಲ ಎಂದು ನೀನು ಹೇಳುತ್ತಿರುವಿಯೋ? 200,000ಗಳ ಉಲ್ಲೇಖಗಳು ಏನೂ ಇಲ್ಲದ್ದರಿಂದ ಅಸ್ತಿತ್ವಕ್ಕೆ ಬಂದಿದೆ ಎಂದು ಹೇಳುವೆಯೋ? ಈ ಪುಸ್ತಕವು ಅಕ್ಷರ ಜೋಡಣೆ ಮಾಡಲ್ಪಟ್ಟು, ಮುದ್ರಿಸಲ್ಪಟ್ಟು, ಬೈಂಡ್ ಮಾಡಲ್ಪಟ್ಟಿಲ್ಲವೆಂದು ನೀನು ಹೇಳುತ್ತೀಯೋ?” ಎಂದು ಆ ಮನುಷ್ಯನಿಗೆ ಕೇಳುತ್ತೇನೆ.

“ಹೌದು, ಅದನ್ನೇ ನಾನು ಹೇಳುತ್ತಿರುವುದು” ಎಂಬುದು ಆ ಮನುಷ್ಯನ ಉತ್ತರ. “ನೀನು ತಪ್ಪಾಗಿದ್ದೀ ಎಂದು ನನಗೆ ತಿಳಿದದೆ. ಮಾನವ ವ್ಯಕ್ತಿಯಂತೆ ನಾನು ನಿನ್ನನ್ನು ಗೌರವಿಸುತ್ತೇನೆ. ಆದರೆ ಈ ಪುಸ್ತಕದ ಮೂಲದ ಬಗೆಗಿನ ನಿನ್ನ ತೀರ್ಪನ್ನು ನನ್ನ ತಾರ್ಕಿಕ ಶಕ್ತಿಯು ಸ್ವೀಕರಿಸಲು ಒಪ್ಪಿಕೊಳ್ಳುವದಿಲ್ಲ. ಈ ಪುಸ್ತಕವು ತನ್ನಷ್ಟಕ್ಕೆ ತಾನೇ ಬರಲಿಲ್ಲ ಎಂಬುದನ್ನು ಯಾವ ಭಯವೂ ಇಲ್ಲದೇ ಹೇಳುತ್ತೇನೆ” ಎಂದು ಆಗ ನಾನು ಹೇಳುವೆನು. ಈ ಮನುಷ್ಯನಿಗೆ ಕೊಟ್ಟ ನನ್ನ ಉತ್ತರದ ಬಗ್ಗೆ ನನಗೆ ಭರವಸೆಯಿದೆ. ಯಾಕಂದರೆ ಈ ಪುಸ್ತಕದ ಮೂಲವನ್ನು ಕುರಿತು ಯಾವುದೇ ರೀತಿಯಲ್ಲಿ ತೀರ್ಮಾನಿಸಲು ನನ್ನ ವಿವೇಚನಾ ಶಕ್ತಿಯು ಒಪ್ಪಿಕೊಳ್ಳುವದಿಲ್ಲ.

ಇನ್ನೊಬ್ಬ ಮನುಷ್ಯನು ಬಂದು ನನಗೆ ಒಂದು ರೇಡಿಯೋವನ್ನು

ಕೊಡುವನೆಂದು ತಿಳಿಯಿರಿ. ಆ ಮನುಷ್ಯನು ನನಗೆ ಹೀಗೆ ಹೇಳುವನು, "ನೀವು ಈ ರೇಡಿಯೋವನ್ನು ನೋಡಬೇಕೆಂದು ಬಯಸುತ್ತೇನೆ. ಇದರ ತಳದಲ್ಲಿ ಎಲೆಕ್ಟ್ರಿಕ್ ಕಾರ್ಡಿನ ಪ್ಲಗ್‌ನ್ನು ಸೇರಿಸಬೇಕು ವಿದ್ಯುತ್ ಶಕ್ತಿಯ ಉಪಯೋಗದಿಂದ ಈ ರೇಡಿಯೋವನ್ನು ಆನ್ ಮಾಡಿ ಅದನ್ನು ಕೇಳಬಹುದು. ರೇಡಿಯೋದ ಕೆಳ ಭಾಗದ ಒಳಗೆ ಒಂದು ರೀತಿಯ ಬ್ಯಾಟರಿ ಇರುತ್ತದೆ, ರೇಡಿಯೋ ವನ್ನು ವಿದ್ಯುತ್ ಶಕ್ತಿಯ ಪ್ಲಗ್ಗಿನಿಂದ ಕೂಡಿಸಿದಾಗ ಮುಂದಿನ ಉಪಯೋಗ ಕ್ಕಾಗಿ ಈ ಬ್ಯಾಟರಿಯಲ್ಲಿ ವಿದ್ಯುತ್ ಶಕ್ತಿಯು ಸಂಗ್ರಹವಾಗುತ್ತದೆ. ಹೀಗೆ ನೀವು ವಿದ್ಯುತ್ ಶಕ್ತಿಯಿಂದ ದೂರವಿರುವಾಗ ವಿದ್ಯುತ್ ಶಕ್ತಿಯಿಂದ ಸಂಬಂಧಿಸದೇ ಈ ರೇಡಿಯೋದಿಂದ ಕೇಳಬಹುದು. ನೀವು ಇದನ್ನು ಮನೆಯಲ್ಲಿ ಉಪಯೋಗಿ ಸಬಹುದು ಹಾಗೆಯೇ ಪ್ರಯಾಣ ಮಾಡುವಾಗಲೂ ಉಪಯೋಗಿಸಬಹುದು." ಆಗ ನಾನು ಆ ಮನುಷ್ಯನಿಗೆ, "ಇದು ಬಹಳ ಉಪಯುಕ್ತವಾದ ವಸ್ತುವಾಗಿದೆ. ನಾನೂ ಪ್ರಯಾಣ ಮಾಡುತ್ತಿರುತ್ತೇನೆ, ಇಂಥ ರೇಡಿಯೋ ನನಗೆ ಬಹಳ ಉಪಯುಕ್ತವಾದದ್ದಾಗಿದೆ. ಇಂಥ ಒಂದು ರೇಡಿಯೋ ನಾನು ಕೊಂಡುಕೊಳ್ಳ ಬಹುದೆಂದು ಯೋಚಿಸುತ್ತೇನೆ" ಎಂದು ಹೇಳುವೆನು.

"ಇಲ್ಲವೇ ಇಲ್ಲ, ಈ ರೇಡಿಯೋವನ್ನು ನೀವು ಕೊಂಡುಕೊಳ್ಳಲಾರಿರಿ. ಇದು ಸೃಷ್ಟಿಸಲ್ಪಟ್ಟದ್ದಾಗಿರುವದಿಲ್ಲ. ತನ್ನಷ್ಟಕ್ಕೆ ತಾನೇ ಸಂಭವಿಸಿದೆ. ಇಲ್ಲಿಗೆ ಸ್ವಲ್ಪ ದೂರದಲ್ಲಿ ಪ್ಲಾಸ್ಟಿಕ್, ಮೆಟಲ್, ಕಟ್ಟಿಗೆ ಇತ್ಯಾದಿಗಳನ್ನೊಳಗೊಂಡ ಎಲ್ಲಾ ವಸ್ತುಗಳ ಒಂದು ಕಾರ್ಖಾನೆಯಿದೆ. ಆ ಕಟ್ಟಡದಲ್ಲಿ ಕೆಲವು ವಾರಗಳ ಹಿಂದೆ ಒಂದು ಸ್ಫೋಟ ಸಂಭವಿಸಿತು. ಈ ಎಲ್ಲಾ ವಸ್ತುಗಳು ಗಾಳಿಯಲ್ಲಿ ತೂರಲ್ಪಟ್ಟವು. ಗಾಳಿಯಲ್ಲಿರುವ ಈ ವಸ್ತುಗಳಲ್ಲಿ ಕೆಲವು ಒಂದಾಗಿ ಕೂಡಿಬಂದವು. ಒಂದು ರೀತಿಯಲ್ಲಿ ಜೋಡಣೆಯಾದವು. ಈ ವಸ್ತುವಿನ ರೂಪವು ನೆಲದ ಮೇಲೆ ಬಿತ್ತು. ಹಾಳುಗೆಡವಲ್ಪಟ್ಟ ಕಟ್ಟಡದ ರಾಶಿಯಲ್ಲಿ ಕಸದಲ್ಲಿ ನಮಗೆ ಈ ರೇಡಿಯೋ ಸಿಕ್ಕಿತು. ಇದನ್ನು ಯಾರೂ ರೂಪಿಸಲಿಲ್ಲ. ಇಲ್ಲವೇ ಸಿದ್ಧಪಡಿಸಲಿಲ್ಲ. ಇದು ಆ ಸ್ಫೋಟದ ಪರಿಣಾಮವಾಗಿದೆ" ಎಂದು ಆ ಮನುಷ್ಯನು ವಿವರಿಸಿ ಹೇಳಬಹುದು. "ಈ ರೇಡಿಯೋ ರೂಪಿಸಲ್ಪಡಲಿಲ್ಲ, ತಯಾರಿಸಲ್ಪಡಲಿಲ್ಲ ಹಾಗೂ ಜಾಗರೂಕತೆಯಿಂದ ಒಂದಾಗಿ ಕೂಡಿಸಲ್ಪಡಲಿಲ್ಲ ಎಂದು ನಂಬಬೇಕೆಂದು ನನಗೆ ಹೇಳುತ್ತಿರುವಿಯೋ? ರೇಡಿಯೋ ಜ್ಞಾನದಿಂದಲ್ಲ ಆದರೆ ಕ್ರಮವಿಲ್ಲದ ರೀತಿ ಯಲ್ಲಿ ಪರಿಣಾಮವಾಗಿ ಬಂದಿತೆಂದು ನೀನು ಒಪ್ಪಿಕೊಳ್ಳುವಿಯೋ?" ಎಂದು ನಾನು ಆ ಮನುಷ್ಯನಿಗೆ ಪ್ರಶ್ನಿಸುವೆನು. ಈ ರೇಡಿಯೋವಿನ ಒಂದು ಸ್ಫೋಟದ ಪರಿಣಾಮವಾಗಿ ಬಂದಿತೆಂದು ಇನ್ನೂ ಒತ್ತಿ ಹೇಳಿದರೆ, ಅವನಿಗೆ, "ರೇಡಿಯೋದ ಬಗ್ಗೆ ನೀನು ತಪ್ಪಾಗಿ ತಿಳಿದು ಕೊಂಡಿರುವಿ. ಯೋಚಿಸುವಂಥ ಮನುಷ್ಯನು ಅಂಥ ತೀರ್ಮಾನಕ್ಕೆ ಬರುವದಿಲ್ಲ. ಈ ರೀತಿಯಲ್ಲಿ ರೇಡಿಯೋ ಅಸ್ತಿತ್ವಕ್ಕೆ ಬರುತ್ತದೆಂದು

ನಾನು ಭಾವಿಸಲಾರೆನು" ಎಂದು ಹೇಳುವೆನು. ಈ ಮನುಷ್ಯನಿಗೆ ಕೊಟ್ಟ ನನ್ನ ಉತ್ತರದ ಬಗ್ಗೆ ಸಕಾರಾತ್ಮಕವಾಗಿಯೇ ಇರುವೆನು. ನನ್ನ ಯೋಚನಾಶಕ್ತಿಯು ಬೇರೆ ಯಾವುದೇ ರೀತಿಯಲ್ಲಿ ತೀರ್ಮಾನಿಸಿ ಕೊಳ್ಳಲು ಒಪ್ಪುವದಿಲ್ಲ.

ಪುಸ್ತಕದ ಬಗ್ಗೆ ಮತ್ತು ರೇಡಿಯೋದ ಬಗ್ಗೆ ನಾವು ಭರವಸೆಯಿಂದ ತೆಗೆದುಕೊಂಡ ತೀರ್ಮಾನಕ್ಕಿಂತಲೂ ಇನ್ನೂ ಹೆಚ್ಚು ಭರವಸೆಯಿಂದ ವಿಶ್ವದ ಬಗ್ಗೆ ನಾವು ತಿಳಿದು ಕೊಳ್ಳಬಹುದು. ವಿಶ್ವವು ಏನೂ ಇಲ್ಲದ್ದರಿಂದ ಬಂದಿತ್ತು ಇಲ್ಲವೇ ಒಂದು ಸ್ಫೋಟದಿಂದ ಪರಿಣಾಮಗೊಂಡಿತು ಎಂದು ಯಾವುದೇ ವೈಜ್ಞಾನಿಕ ಮಾತಿನಿಂದಾಗಲೀ ತರ್ಕದಿಂದಾಗಲೀ ನಂಬಲಿಕ್ಕಾಗುವದಿಲ್ಲ. ಪುಸ್ತಕಕ್ಕಿಂತಲೂ ರೇಡಿಯೋಕ್ಕಿಂತಲೂ ಎಷ್ಟೋ ಹೆಚ್ಚಾದ ರೀತಿಯಲ್ಲಿ ವಿಶ್ವವು ರೂಪಿಸಲ್ಪಟ್ಟಿದೆ. ಪುಸ್ತಕವೂ ತನ್ನಷ್ಟಕ್ಕೆ ತಾನೇ ಬಂದಿತ್ತು ಅಥವಾ ರೇಡಿಯೋ ಒಂದು ಸ್ಫೋಟದಿಂದ ಬಂದಿತ್ತು ಎಂದು ನಾವು ನಂಬದೇ ಇರುವಾಗ ವಿಶ್ವವು ಏನೂ ಇಲ್ಲದ್ದರಿಂದ ಬಂದಿತು ಇಲ್ಲವೇ ಒಂದು ಸ್ಫೋಟದ ಪರಿಣಾಮವಾಗಿ ಆಯಿತು ಎಂದು ನಾವು ನಂಬುವುದು ಹೇಗೆ? ಯಾವುದೇ ವಿವರಗಳೊಂದಿಗೆ ವಿಶ್ವದ ಬಗ್ಗೆ ಅಧ್ಯಯನ ಮಾಡಿದ ಎಲ್ಲರೂ ವಿಶ್ವವು ಆಶ್ಚರ್ಯಕರವಾಗಿ ರೂಪಿಸಿದ ಕಾರ್ಯವಾಗಿ ಬಂದಿದೆಯೆಂದು ಮತ್ತು ಕಟ್ಟುನಿಟ್ಟಾಗಿ ರೂಪಿಸಲ್ಪಟ್ಟಿದೆಯೆಂದು ಅರ್ಥಮಾಡಿಕೊಂಡಿರುತ್ತಾರೆ.

ನಾವು ತಾರ್ಕಿಕವಾಗಿ ತೀರ್ಮಾನಿಸಿದ್ದನ್ನು ಬೈಬಲು ಸ್ಥಿರಪಡಿಸುತ್ತದೆ. "ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ; ಗಗನವು ಆತನ ಕೈಕೆಲಸವನ್ನು ತಿಳಿಸುತ್ತದೆ" ಎಂದು ಕೀರ್ತನೆ 19:1 ಹೇಳುತ್ತದೆ. ಆಕಾಶದಲ್ಲಿ ಮೋಡಗಳಿಲ್ಲದ ಶುಭ್ರವಾದ ರಾತ್ರಿಯಲ್ಲಿ ನಕ್ಷತ್ರಗಳ ರಾಶಿಯನ್ನು ಆಕಾಶದಲ್ಲಿ ನೋಡುತ್ತ ಕುಳಿತು ಕೊಂಡರೆ ಅದ್ಭುತಕರವಾದ ಆರಾಧನೆಯಲ್ಲಿ ನಾವು ಭಾಗವಹಿಸುತ್ತಿರುವಂತೆ ಆಗುವದೆಂದು ಇನ್ನೊಂದು ಮಾತಿನಲ್ಲಿ ಹೇಳಬಹುದು. ನಕ್ಷತ್ರರಾಶಿಯಿಂದ ತುಂಬಿರುವ ಆಕಾಶವು ಪ್ರಸಂಗಿಯಾಗಿರುವುದು. ನಾವು ಸಭೆಯಾಗಿರುವೆವು. ಆರಾಧನಾ ಸ್ಥಳವು ನಾವು ಕುಳಿತಿರುವ ಹುಲ್ಲು ಪ್ರದೇಶ ವಾಗಿರುವುದು. ನಕ್ಷತ್ರಗಳು ತಾವೇ ಬರಲಿಲ್ಲ ಆದರೆ ಅವು ಸೃಷ್ಟಿಸಲ್ಪಟ್ಟಿವೆ ಎಂದು ಪ್ರಸಂಗಿಯು ಮೌನವಾಗಿ ಸ್ಪಷ್ಟವಾಗಿ ಘೋಷಿಸುವುದು. ನಕ್ಷತ್ರಗಳ ಆಕಾಶವು ದೇವರ ಮಹಿಮೆಯನ್ನು ಘೋಷಿಸುವುದು. ಈ ಆರಾಧನೆಯನ್ನು ಬಿಟ್ಟು ನಾವು ಹೋಗುವಾಗ "ಈ ಪ್ರಸಂಗಿಯಿಂದ ಕೇಳಿದ ಸಂದೇಶವು ಸರಿಯಾದದ್ದಾಗಿರ ಬೇಕು. ಬೇರೆಯಾವುದೇ ಇತರ ಸಂದೇಶವನ್ನು ಸ್ವೀಕರಿಸಲು ನನ್ನ ಆಲೋಚನಾ ಶಕ್ತಿಯು ನ್ನನ್ನು ಬಿಡುವದಿಲ್ಲ" ಎಂದು ನಾವು ಹೇಳುವೆವು.

"ಹೇಗಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ

ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ; ಹೀಗಿರುವದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ" (ರೋಮಾಪುರ 1:20) ಎಂದು ಹೊಸ ಒಡಂಬಡಿಕೆಯ ಬರಹಗಾರರಲ್ಲಿ ಒಬ್ಬನಾದ ಪೌಲನು ಬರೆದಿದ್ದಾನೆ. ದೃಶ್ಯವಾದ, ನಿಜವಾದ ವಿಶ್ವದ ಸಂಗತಿಗಳು ಕಣ್ಣಿಗೆ ಕಾಣದ, ಅದೃಶ್ಯವಾದ ದೇವರ ಹಸ್ತಗಳ ಅಸ್ತಿತ್ವವನ್ನು ರುಜುವಾತು ಪಡಿಸುತ್ತವೆ. ಅವು ಆತನ ಸರ್ವ ಶಕ್ತಿಯನ್ನು ಆತನ ಅಲೌಕಿಕ ಲಕ್ಷಣವನ್ನು ಹೇಳುತ್ತವೆ. ಸಾಮಾನ್ಯ ಪ್ರಕಟಣೆಯ ಮುಖಾಂತರವಾಗಿ ನಮ್ಮ ಸುತ್ತಲಿನ ಹಾಗೂ ನಮ್ಮ ಮೇಲಿರುವ ಜಗತ್ತಿನ ಮೂಲಕವಾಗಿ ನಾವು ದೇವರ ಅಸ್ತಿತ್ವವನ್ನು ಕಲಿತು ಕೊಳ್ಳುತ್ತೇವೆ. "ಆದರೂ ಆತನು ತನ್ನ ವಿಷಯದಲ್ಲಿ ಸಾಕ್ಷಿಕೊಡದೆ ಇರಲಿಲ್ಲ: ನಿಮಗೆ ಆಕಾಶದಿಂದ ಮಳೆಯನ್ನೂ ಸುಗ್ಗೀಕಾಲ ಗಳನ್ನೂ ದಯಪಾಲಿಸಿ ಆಹಾರಕೊಟ್ಟು ನಿಮ್ಮ ಮನಸ್ಸುಗಳನ್ನು ಆನಂದದಿಂದ ತುಂಬಿಸಿ ಉಪಕಾರ ಮಾಡುತ್ತಾ ಬಂದವನು ಆತನೇ" (ಅಪೊಸ್ತಲರ ಕೃತ್ಯಗಳು 14:17) ಎಂದೂ ಪೌಲನು ಹೇಳಿದ್ದಾನೆ. ನಮ್ಮ ಗ್ರಹದ ಜಗತ್ತು ಮತ್ತು ವಿಶ್ವದ ಜಗತ್ತು ಸರ್ವಶಕ್ತ ದೇವರ ಅಸ್ತಿತ್ವಕ್ಕೆ ಸಾಕ್ಷಿಕೊಡುತ್ತದೆ.

ಮಕ್ಕಳ ಪ್ರಸಿದ್ಧ ಕಥೆಯಲ್ಲಿ ರಾಬಿನ್‌ಸನ್ ಕ್ರೂಸೋ ಎಂಬವನ ಹಡಗು ಒಂದು ಜನವಿಲ್ಲದ ನಡುಗಡ್ಡೆಯಲ್ಲಿ ಒಡೆದು ಹೋಗುತ್ತದೆ. ಹಡಗು ಒಡೆದದ್ದರಿಂದ ಅವನು ದಡಕ್ಕೆ ತೇಲಿ ಬಂದನು. ಕೂಡಲೇ ಉಳಿದು ಕೊಂಡಿರುವವರಿಗಾಗಿ ಸುತ್ತಲೂ ನೋಡಿದನು. ಯಾರೂ ಸಿಕ್ಕಲಿಲ್ಲ. ಅವನೊಬ್ಬನೇ ಹಡಗು ಒಡೆದದ್ದರೊಳಗಿಂದ ಉಳಿದುಕೊಂಡಿದ್ದನು. ಇತರ ಮಾನವರಿಗಾಗಿ ಅವನು ನಡುಗಡ್ಡೆಯಲೆಲ್ಲಾ ಹುಡುಕಾಡಿದನು. ಆದರೆ ಯಾರನ್ನೂ ಕಂಡುಕೊಳ್ಳಲಿಲ್ಲ. ತಾನೊಬ್ಬನೇ ಈ ನಡುಗಡ್ಡೆಯಲ್ಲಿರುವನೆಂದು ಅರ್ಥ ಮಾಡಿಕೊಂಡನು. ತನಗಾಗಿ ಇರಲು ಒಂದು ತರದ ಮನೆಯನ್ನು ಗಿಡದ ಕೊಂಬೆಗಳಿಂದಲೂ ಮರದ ತುಂಡುಗಳಿಂದಲೂ ಮಾಡಿಕೊಂಡನು. ನಡುಗಡ್ಡೆಯಲ್ಲಿ ಬೆಳೆದ ಕಾಡು ಹಣ್ಣುಗಳನ್ನು ತಿನ್ನುತ್ತಿದ್ದನು. ಕಾಡು ಪ್ರಾಣಿಗಳನ್ನು ಬಲೆ ಹಾಕಿ ಹಿಡಿದು ಕೊಂದು ಆಹಾರಕ್ಕಾಗಿ ಬಟ್ಟೆಗಾಗಿ ಉಪಯೋಗಿಸಿದನು. ಒಂದು ದಿನ ಸಮುದ್ರದ ದಡದಲ್ಲಿ ನಡೆಯುತ್ತಿದ್ದನು. ಮೃದುವಾದ ಮರಳಿನಲ್ಲಿ ಇನ್ನೊಬ್ಬ ಮಾನವ ಜೀವಿಯ ಹೆಜ್ಜೆ ಗುರುತುಗಳನ್ನು ಕಂಡನು. ಅವನು ಕೂಡಲೇ ಮೂರು ಸಂಗತಿಗಳನ್ನು ಯೋಚಿಸಿದನು: ಯಾರೋ ಒಬ್ಬರು ಈ ಹೆಜ್ಜೆ ಗುರುತುಗಳನ್ನು ಮಾಡಿ ಬಿಟ್ಟು ಹೋಗಿದ್ದಾರೆ. ಒಂದುವೇಳೆ ಈ ಹೆಜ್ಜೆ ಗುರುತು ಮಾಡಿದವನು ಸತ್ತು ಹೋಗಿರಬೇಕು. ಕ್ರೂಸೋ ಆ ಮನುಷ್ಯನು ಸತ್ತು ಹೋಗಿರುವದನ್ನು ಕಂಡುಕೊಳ್ಳುವನು. ಈ ಹೆಜ್ಜೇ ಗುರುತುಗಳನ್ನು ಮಾಡಿದವನು ಈ ನಡುಗಡ್ಡೆಯಲ್ಲಿ ಇನ್ನೂ ಜೀವಂತನಾಗಿರ ಬಹುದು. ಇನ್ನೊಬ್ಬನು ಈ ನಡುಗಡ್ಡೆಯಲ್ಲಿರುವನೆಂಬ ಸತ್ಯವು ಅವನನ್ನು ಆನಂದದಿಂದ ಕುಣಿಯುವಂತೆ ಮಾಡಿತು. ಅವನಿಗೆ ಅದು ಸಂಪೂರ್ಣವಾಗಿ

ನಿಶ್ಚಿತತೆಯನ್ನುಂಟು ಮಾಡಿತು. ನಡುಗಡ್ಡೆಯಲ್ಲಿ ಅವನು ಹುಡುಕಾಡಿದನು. ಒಂದುದಿನ ಅಂದರೆ ಶುಕ್ರವಾರದ ದಿನ, ಹೆಜ್ಜೆ ಗುರುತುಗಳನ್ನು ಮಾಡಿದ ಸ್ಥಳೀಯ ನಿವಾಸಿಯೊಬ್ಬನನ್ನು ಕಂಡುಕೊಂಡನು. ಅವನನ್ನು ಕಂಡುಕೊಂಡ ದಿನದ ಹೆಸರಿನಿಂದ ಆ ಮನುಷ್ಯನನ್ನು ಫ್ರೈಡೇ ಎಂದು ಕರೆದನು.

ಕಥೆಯ ಪುಸ್ತಕದಲ್ಲಿಯ ಪಾತ್ರವಾದ ರಾಬಿನ್‌ಸನ್ ಕ್ರೂಸೋನಂತೆ ನಾವಿದ್ದೇವೆ. ಭೂಮಿಯ, ನಕ್ಷತ್ರಗಳ, ಸೂರ್ಯನ ಹಾಗೂ ಚಂದ್ರನ ಹೆಜ್ಜೇ ಗುರುತುಗಳು ನಮ್ಮ ಮುಂದೆ ಇವೆ. ಈ ಹೆಜ್ಜೆ ಗುರುತುಗಳು ಸರ್ವಶಕ್ತನಿಂದ ಮಾಡಲ್ಪಟ್ಟಿವೆ. ಕ್ರೂಸೋ ಒಂದು ವೇಳೆ ಆ ಹೆಜ್ಜೆ ಗುರುತುಗಳು ಏನೂ ಇಲ್ಲದ್ದರಿಂದ ತಾವೇ ಬಂದಿವೆಯೆಂದು ತೀರ್ಮಾನಿಸಿದ್ದರೆ ಅವನು ಮೂರ್ಖನಾಗುತ್ತಿದ್ದನು. ಹಾಗೆಯೇ ಕಾರಣವನ್ನು ಅಲಕ್ಷಿಸಿ ಭೂಮಿ ಮತ್ತು ವಿಶ್ವವು ತಾನೇ ಸಂಭವಿಸಿತು. ಅದು ಏನೂ ಇಲ್ಲದ್ದರಿಂದ ಬಂದಿದೆ ಎಂದು ತೀರ್ಮಾನಿಸಿ ಕೊಂಡರೆ ನಾವೂ ಸಹ ಬುದ್ಧಿ ಹೀನರಾಗುತ್ತೇವೆ.

ನಮ್ಮ ಸುತ್ತಲೂ ಇರುವ ಜಗತ್ತು ಹಾಗೂ ನಮ್ಮ ಮೇಲಿರುವ ಜಗತ್ತು ಒಂದೇ ತೀರ್ಮಾನವನ್ನು ತೋರಿಸುತ್ತವೆ: ಸರ್ವಶಕ್ತ ದೇವರು ಈ ಪ್ರಕೃತ ಭೂಲೋಕದ ಹಿಂದೆ ಇದ್ದಾನೆ ಮತ್ತು ಈ ಭೌತಿಕ ವಿಶ್ವವು ಅದನ್ನು ದಾಟಿ ಇದೆ. ಪುಸ್ತಕವು ತನ್ನಷ್ಟಕ್ಕೆ ತಾನೇ ಏನೂ ಇಲ್ಲದ್ದರಿಂದ ಸಂಭವಿಸಲಾರದು. ಹಾಗೂ ಎಲೆಕ್ಟ್ರಿಕ್ ರೇಡಿಯೋ ಒಂದು ಸ್ಫೋಟದ ಪರಿಣಾಮವಾಗಿ ಆಗಲಾರದು ಎಂಬ ರೀತಿಯಲ್ಲಿಯೇ ನಾವು ಇದರ ಬಗ್ಗೆ ಭರವಸೆಯುಳ್ಳವರಾಗಿರಬೇಕು.

## ಮನುಷ್ಯನ ಪುರಾವೆ

ಎರಡನೆಯದಾಗಿ, ಮನುಷ್ಯನ ಅಸ್ತಿತ್ವದ ಮುಖಾಂತರ ನಮಗೆ ಬರುವಂಥ ಪುರಾವೆಯ ನಿಮಿತ್ತವಾಗಿ ದೇವರು ನಿಜವಾಗಿಯೂ ಅಸ್ತಿತ್ವದಲ್ಲಿರುವನೆಂದು ನಾವು ಭರವಸೆಯೊಂದಿಗೆ ನಂಬಬಹುದು. ಮನುಷ್ಯನ ಅಸ್ತಿತ್ವವು ದೇವರ ಅಸ್ತಿತ್ವವನ್ನು ಘೋಷಿಸುತ್ತದೆ.

ಮನುಷ್ಯನು ಪ್ರಾಕೃತಿಕ ವಿಶ್ವಕ್ಕಿಂತ ಎಷ್ಟೋ ಹೆಚ್ಚು ದೊಡ್ಡದಾದ ಅದ್ಭುತವಾ ಗಿದ್ದಾನೆ. ಅವನ ಬೌದ್ಧಿಕ ಶಕ್ತಿಗಳನ್ನು ಯೋಚಿಸಿರಿ. ಅವನು ಆಲೋಚಿಸುವನು, ನಂಬುವನು, ಪ್ರೀತಿಸುವನು, ಕನಸು ಕಾಣುವನು, ತರ್ಕ ಮಾಡುವನು, ರೂಪಿಸುವನು, ನಾಲ್ಕು ಇಲ್ಲವೇ ಹೆಚ್ಚು ಭಾಷೆಗಳನ್ನು ಸರಳವಾಗಿ ಮಾತಾಡುವ ಜನರಿದ್ದಾರೆ. ಒಬ್ಬ ವ್ಯಕ್ತಿಯ ಮೆದುಳಿನಲ್ಲಿಯ ಒಂದು ಕಣವು ನಾವಿಂದು ತಾಯಾರಿಸುವ ಅತ್ಯುತ್ತಮವಾದ ಕಂಪ್ಯೂಟರಿಗಿಂತ ಹೆಚ್ಚು ಸಂಕೀರ್ಣವಾಗಿದೆ ಯೆಂದು ವಿಜ್ಞಾನಿಗಳು ಹೇಳುತ್ತಾರೆ.

ಮನುಷ್ಯನ ಆತ್ಮೀಯ ಸ್ವಭಾವವನ್ನು ಯೋಚಿಸಿರಿ. ಮನುಷ್ಯನು ಯಾವಾಗಲೂ ಆರಾಧಿಸುವ ಜೀವಿಯಾಗಿದ್ದಾನೆ. ಅತೀ ಪ್ರಾಚೀನ ಜನರು ಆರಾಧನೆಯಲ್ಲಿ ಯಾವಾಗಲೂ ಉನ್ನತ ಶಕ್ತಿಗಾಗಿ ಮೇಲಕ್ಕೆ ನೋಡಿದರು. ಮನುಷ್ಯನಲ್ಲಿ ತನ್ನ ಜವಾಬ್ದಾರಿಕೆಯ ಭಾವನೆ ಇರುತ್ತದೆ. ಅವನೊಳಗೆ ನೈತಿಕ ಅರುಹು ಇರುವುದು. ಕೆಲವು ಸಲ ಈ ಅರುಹು ಬಹಳ ಸುಧಾರಿಸಿರುವದಿಲ್ಲ ಆದರೆ ಅದು ಯಾವಾಗಲೂ ಇರುತ್ತದೆ.

ಮನುಷ್ಯನ ಪ್ರಾಕೃತ ದೇಹದ ಬಗ್ಗೆ ಯೋಚಿಸಿರಿ. ಮಾನವ ದೇಹದ ಯಾವುದೇ ಭಾಗದ ಬಗ್ಗೆ ಜೀವನವೆಲ್ಲಾ ಅಧ್ಯಯನ ಮಾಡಲು ಕಳೆಯಿರಿ, ನೀವು ಮಾಡಬಹುದಾದ ಸಂಶೋಧನೆಯು ಎಂದೂ ತೀರಿ ಹೋಗುವದಿಲ್ಲ.

ಜೀವನವನ್ನೇ ಯೋಚಿಸಿರಿ. ನೀವು ಅದನ್ನು ಸೃಷ್ಟಿಸಲಾರಿರಿ. ಅದು ಸಾಯುವಾಗ ಪುನಃ ಅದನ್ನು ಜೀವಿಸುವಂತೆ ಮಾಡಲಾರಿರಿ. ನಾವು ಅದನ್ನು ಸಂಪೂರ್ಣವಾಗಿ ವಿವರಿಸಲಾರೆವು. ಅದನ್ನು ಸಂಪೂರ್ಣವಾಗಿ ನಿಯಂತ್ರಿಸಲಾರೆವು. ಮಾನವನ ಆಶ್ಚರ್ಯಕರವಾದ ಸಂಗತಿಯು ಅವನ ನಿರ್ಮಾಣಿಕನ ಅಸ್ತಿತ್ವವನ್ನು ಘೋಷಿಸುತ್ತದೆ.

ನಾವು ಒಂದು ಕ್ಲಾಸ್‌ರೂಮಿನಲ್ಲಿದ್ದು ಒಬ್ಬ ಪ್ರಸಿದ್ಧ ಪ್ರೊಫೆಸರರು ಜೀವದ ಮೂಲದ ಬಗ್ಗೆ ಭಾಷಣ ಮಾಡುತ್ತಿರುವದನ್ನು ಕೇಳುತ್ತಿದ್ದೇವೆ ಎಂದು ಕಲ್ಪನೆ ಮಾಡಿಕೊಳ್ಳಿರಿ. ಅವನು ಉಪಯೋಗಿಸುತ್ತಿದ್ದ ವೈಜ್ಞಾನಿಕ ಪದಗಳನ್ನೂ ವಿವರಣೆಗಳನ್ನೂ ಬಿಟ್ಟು, ಅವನು ಹೇಳಿದ್ದರ ತಿರುಳು ಇಂತಿದೆ, "ಆರಂಭದಲ್ಲಿ ಒಂದು ರೀತಿಯ ಚಿಕ್ಕ ಕಣವು ಅಸ್ತಿತ್ವದಲ್ಲಿತ್ತು. ಅದರಲ್ಲಿ ಒಂದು ರೀತಿಯ ಜೀವದ ರೂಪ ಇತ್ತು. ಅದು ದ್ವಿಗುಣಗೊಂಡಿತು, ಬೆಳೆಯಿತು ಮತ್ತು ಬೆಳವಣಿಗೆ ಹೊಂದಿತು. ಒಂದು ರೀತಿಯ ಭೂಮಿಯ ಜೀವ ಉದಯವಾಯಿತು. ಅದು ಅನೇಕವಾಯಿತು, ಬೆಳೆಯಿತು ಹಾಗೂ ಬೆಳವಣಿಗೆ ಹೊಂದಿತು. ಅಂತಿಮವಾಗಿ, ಮಿಲಿಯನ್ ಗಟ್ಟಲೆ ವರ್ಷಗಳು ದಾಟಿ ಹೋಗುವಾಗ ಮಾನವ ಜೀವಿಗಳು ಎಂದು ತಿಳಿಯಲ್ಪಡುವ ಜೀವಿಗಳು ವಿಕಸಿತ ಗೊಂಡವು" ಎಂಬುದು.

ನಾವು ಪ್ರೊಫೆಸರರ ಮಾತುಗಳನ್ನು ಕೇಳುವಾಗ, ಅವನ ಅಭಿಪ್ರಾಯವು ಬಗೆಹರಿಸದ ಮೂರು ಸಮಸ್ಯೆಗಳನ್ನು ಎದುರಿಸುತ್ತೇವೆ. ಈ ಸಮಸ್ಯೆಗಳು ಮಹತ್ವವಿಲ್ಲದವುಗಳೂ ಹೇಳಲಿಕ್ಕೆ ಅಯೋಗ್ಯವಾದವುಗಳೂ ಎಂಬ ರೀತಿ ಯಲ್ಲಿ ಅವನು ಈ ಸಮಸ್ಯೆಗಳನ್ನೂ ಬಿಟ್ಟುಬಿಡುತ್ತಾನೆ. ಆದರೆ ಅವನು ಈ ಸಮಸ್ಯೆಗಳನ್ನು ವಿವರಿಸಿದರೆ ಅವನ ಅಭಿಪ್ರಾಯವನ್ನು ಸ್ವೀಕರಿಸುವುದು ಅಸಾಧ್ಯ ವಾಗುತ್ತದೆ ಹಾಗೂ ಅವಿವೇಕವಾದದ್ದಾಗುತ್ತದೆ. ಮೊದಲನೆಯ ಸಮಸ್ಯೆಯು ಜೀವದ ಮೂಲವನ್ನು ವಿವರಿಸುವುದು. ಅವನ ಅಭಿಪ್ರಾಯವು ಜೀವವು ಏನೂ ಇಲ್ಲದ್ದರಿಂದ ಬಂತೆಂದು ತಿಳಿಯುತ್ತದೆ. ಒಂದು ಪುಸ್ತಕವು ಏನೂ ಇಲ್ಲದ್ದರಿಂದ

ಬಂತೆಂದೂ ಒಂದು ರೇಡಿಯೋ ಸ್ಫೋಟದಿಂದ ಬಂದಿತೆಂದೂ ಒಬ್ಬ ವ್ಯಕ್ತಿಯು ನಂಬುವುದು ಅಸಾಧ್ಯವಾಗುತ್ತದೆ. ಜೀವವು ಒಂದು ಪುಸ್ತಕಕ್ಕಿಂತ ಇಲ್ಲವೇ ರೇಡಿಯೋಗಿಂತ ಎಷ್ಟೋ ಹೆಚ್ಚಾಗಿ ಸಂಕೀರ್ಣವಾದದ್ದಾಗಿದೆ. ಮನುಷ್ಯನು ಒಂದು ಪುಸ್ತಕವನ್ನು ಮತ್ತು ಒಂದು ರೇಡಿಯೋವನ್ನು ಸೃಷ್ಟಿಸಬಹುದು. ಆದರೆ ಅವನು ಜೀವವನ್ನು ಸೃಷ್ಟಿಸಲಾರನು. ಆದಾಗ್ಯೂ ಪ್ರೊಫೆಸರನು ಜೀವವು ಏನೂ ಇಲ್ಲದ್ದರಿಂದ ಬಂದಿತು ಎಂಬುದನ್ನು ನಂಬಿರಿ ಎಂದು ನಮ್ಮನ್ನು ಕೇಳುತ್ತಾನೆ.

ಎರಡನೆಯ ಸಮಸ್ಯೆಯು, ನೈಸರ್ಗಿಕ ನಿಯಮದ ಅಸ್ತಿತ್ವವನ್ನು ವಿವರಿಸುವುದು. ನೈಸರ್ಗಿಕ ನಿಯಮ ಏನೂ ಇಲ್ಲದ್ದರಿಂದ ಬಂದಿತೆಂದು ಪ್ರೊಫೆಸರನ ಅಭಿಪ್ರಾಯವು ತಿಳಿಸುತ್ತದೆ. ನಮ್ಮ ಜಗತ್ತು ನೈಸರ್ಗಿಕ ನಿಯಮಗಳಿಂದ ನಡಿಸಲ್ಪಡುತ್ತದೆ. ಒಂದು ರೀತಿಯಲ್ಲಿ ನೀವು ತಿನ್ನದಿದ್ದರೆ ಇಲ್ಲವೇ ನಿಮ್ಮ ದೇಹದಲ್ಲಿ ಆಹಾರ ತೆಗೆದು ಕೊಳ್ಳದಿದ್ದರೆ, ನೀವು ಸತ್ತು ಹೋಗುವಿರಿ. ನೀವು ಈ ನಿಯಮವನ್ನು ಕಡೆಗಣಿಸಲಾರಿರಿ ಇಲ್ಲವೇ ತಪ್ಪಿಸಿಕೊಳ್ಳಲಾರಿರಿ. ಅದರಿಂದ ಯಾರೂ ಬೇರೆಯಾಗಿ ಇಡಲ್ಪಟ್ಟಿಲ್ಲ. ನೀವು ನಿದ್ರೆ ಮಾಡದಿದ್ದರೆ, ನಿಮ್ಮ ದೇಹವು ಆಯಾಸದಿಂದ ಬಿದ್ದು ಹೋಗುತ್ತದೆ. ಈ ನೈಸರ್ಗಿಕ ನಿಯಮವನ್ನು ನೀವು ಮುರಿಯಲಾರಿರಿ. ಮರಣದ ನೈಸರ್ಗಿಕ ನಿಯಮವನ್ನು ನೀವು ಜಯಿಸಲಾರಿರಿ. ಮಾನವ ಜೀವಿಗಳ ಮರಣದ ಲೆಕ್ಕವು ನೂರಕ್ಕೆ ನೂರರಷ್ಟಿದೆ. ಅದರಲ್ಲಿ ಅಪವಾದಗಳಿರುವದಿಲ್ಲ. ಪ್ರೊಫೆಸರನು ತನ್ನ ಅಭಿಪ್ರಾಯದಿಂದ ನೈಸರ್ಗಿಕ ನಿಯಮವು ತನ್ನಷ್ಟಕ್ಕೆ ತಾನೇ ಸಂಭವಿಸುತ್ತದೆಂದು ಸೂಚಿಸುತ್ತಾನೆ.

ಮೂರನೆಯ ಸಮಸ್ಯೆಯು ಕುಟುಂಬದ ಅಸ್ತಿತ್ವಕ್ಕಾಗಿ ವಿವರಣೆಯು. ಮಾನವ ಕುಲವು ಕುಟುಂಬಗಳಿಂದ ಮಾಡಲ್ಪಟ್ಟಿದೆ. ಕುಟುಂಬವು ಅಸ್ತಿತ್ವದಲ್ಲಿ ಇರದೇ ಇರುವಂಥ ಸಮಯವು ಮಾನವ ಚರಿತ್ರೆಯಲ್ಲಿ ದಾಖಲೆಯಾದದ್ದದನ್ನು ನಾವು ಕಂಡುಕೊಳ್ಳುವದಿಲ್ಲ. ಸ್ತ್ರೀಯು ಪ್ರೌಢಾವಸ್ಥೆಯಲ್ಲಿ ವಿಕಸಿತಗೊಂಡ ಸಮಯದಲ್ಲಿಯೇ ಪುರುಷನು ಪ್ರೌಢಾವಸ್ಥೆಗೆ ವಿಕಸನಗೊಂಡನೆಂದು ನಾವು ನಂಬ ಬೇಕೆಂದು ಪ್ರೊಫೆಸರ್ ಹೇಳುತ್ತಾನೆ. ಅವರು ಸಂತೋಷ ಪಡುವ ಅನ್ಯೋನ್ಯತೆಯನ್ನು ಕಂಡುಕೊಂಡರು ಹಾಗೂ ಪುರುಷನೂ ಸ್ತ್ರೀಯೂ ದಾಖಲೆಯಾದ ಚರಿತ್ರೆಯೆಲ್ಲೆಲ್ಲಾ ಕುಟುಂಬ ಸಂಬಂಧಗಳನ್ನು ಕಟ್ಟುವದರಲ್ಲಿ ಮುಂದುವರಿದರು. ಪುರುಷನು ಸ್ತ್ರೀಯಿಂದ ಭಿನ್ನವಾಗಿದ್ದಾನೆ, ಸ್ತ್ರೀಯು ಪುರುಷನಿಂದ ಭಿನ್ನವಾಗಿದ್ದಾಳೆ; ಆದರೆ ಅವರು ಸಹವಾಸದಲ್ಲಿಯೂ ಉಪಯುಕ್ತತ್ವದಲ್ಲಿಯೂ ಒಂದೇ ರೀತಿಯಲ್ಲಿದ್ದಾರೆ. ಅವರು ಒಂದೇ ಸಮಯದಲ್ಲಿ ಪ್ರೌಢಾವಸ್ಥೆಯಲ್ಲಿ ಉದ್ಭವಗೊಂಡರು. ಇದು ಕುಟುಂಬದಲ್ಲಿ ಪರಿಣಾಮಗೊಂಡಿತು ಎಂದು ಪ್ರೊಫೆಸರ್ ಹೇಳುತ್ತಾನೆ. ಕುಟುಂಬವೂ ಏನೂ ಇಲ್ಲದ್ದರಿಂದ ಬಂದಿತು. ಅಂದರೆ ಅದು ಕೇವಲ ಆಕಸ್ಮಿಕವಾಗಿ ಸಂಬವಿಸಿದ್ದೆಂದು

ಅವನು ವಾದ ಮಾಡುವನೆಂದು ಬೇರೆ ಮಾತಿನಲ್ಲಿ ಹೇಳಬಹುದು.

ಜೀವವು ಏನೂ ಇಲ್ಲದ್ದರಿಂದ ಬಂದಿತೆಂದೂ ನೈಸರ್ಗಿಕ ನಿಯಮವು ಏನೂ ಇಲ್ಲದ್ದರಿಂದ ಬಂದಿತೆಂದೂ ಮಾನವ ಕುಟುಂಬವು ಏನೂ ಇಲ್ಲದ್ದರಿಂದ ಬಂದಿತೆಂದೂ ಊಹಿಸುವದನ್ನು ನಮ್ಮ ಮನಸ್ಸುಗಳು ಒಪ್ಪುವದಿಲ್ಲ. ಮನುಷ್ಯನ ಅಸ್ತಿತ್ವವನ್ನು ವಿವರಿಸುವುದು ಒಬ್ಬ ಸರ್ವಶಕ್ತ ಜೀವಿಯು ಅವನನ್ನು ಸೃಷ್ಟಿಸಿ ಒಂದು ವಿಶೇಷ ಕಾರಣಕ್ಕಾಗಿ ಈ ಭೂಲೋಕದಲ್ಲಿ ಇಟ್ಟನು ಎಂದು ತಿಳಿದು ಕೊಳ್ಳುವುದು ತರ್ಕಬದ್ಧವಾದ ಮಾರ್ಗವಾಗಿದೆ.

ನಾವು ವಿವೇಚನೆಯಿಂದ ತೀರ್ಮಾನಿಸಿದ್ದನ್ನು ಬೈಬಲು ಸ್ಪಷ್ಟವಾಗಿ ಘೋಷಿಸುತ್ತದೆ.ಬೈಬಲಿನ ಮೊದಲನೆಯ ಅಧ್ಯಾಯದಲ್ಲಿ "ಆ ಮೇಲೆ ದೇವರು, 'ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ; ...' " (ಆದಿಕಾಂಡ 1:26) ಎಂದು ನಮಗೆ ಹೇಳಲ್ಪಟ್ಟಿದೆ. ಬೈಬಲ್ ಪ್ರಕಾರವಾಗಿ, ಮಾನವ ಜೀವವು ದೈವಿಕ ಜೀವದಿಂದ ಬಂದಿತು. "ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು: ದೇವರ ಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು; ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು. ಇದಲ್ಲದೆ ದೇವರು ಅವರನ್ನು ಆಶೀರ್ವದಿಸಿ, 'ನೀವು ಬಹು ಸಂತಾನವುಳ್ಳವರಾಗಿ ಹೆಚ್ಚಿರಿ, ಭೂಮಿಯಲ್ಲಿ ತುಂಬುಕೊಂಡು ಅದನ್ನು ವಶಮಾಡಿ ಕೊಳ್ಳಿರಿ; ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನ ಮಾಡಿರಿ ಅಂದನು' " (ಆದಿಕಾಂಡ 1:27, 28) ಎಂದೂ ನಮಗೆ ಹೇಳಲ್ಪಟ್ಟಿದೆ. ದೇವರು ಮನುಷ್ಯರಿಗೆ ಆಧ್ಯಾತ್ಮಿಕ ಸ್ವಭಾವವನ್ನು, ತನ್ನಂಥ ಸ್ವರೂಪವನ್ನು ಕೊಟ್ಟನು. ಆತನು ಮಾನವ ಗಂಡನ್ನೂ ಹೆಣ್ಣನ್ನೂ ಮಾಡಿ ಕುಟುಂಬವನ್ನು ನಿರ್ಮಿಸಿದನು. ಭೂಲೋಕದ ಜೀವಿಗಳನ್ನು ಆಳುವದಕ್ಕೆ ನೈಸರ್ಗಿಕ ನಿಯಮಗಳನ್ನು ದೇವರು ಸೃಷ್ಟಿಸಿದನು.

ಸರ್ವಶಕ್ತ ಹಸ್ತದಿಂದ ಮತ್ತು ದೈವಿಕ ಕಾರಣಕ್ಕಾಗಿ ಮಾನವ ಜೀವವು ಸೃಷ್ಟಿಸಲ್ಪಟ್ಟಿತೆಂಬುದನ್ನು ನಾವು ಒಪ್ಪಿಕೊಳ್ಳುವದನ್ನು ವಿವೇಕವು ಕೇಳುತ್ತದೆ. "ನನ್ನ ಅಂತರಿಂದ್ರಿಯಗಳನ್ನು ಉಂಟುಮಾಡಿದವನೂ; ತಾಯಿಯ ಗರ್ಭದಲ್ಲಿ ನನ್ನನ್ನು ರೂಪಿಸಿದವನೂ ನೀನಲ್ಲವೋ? ನೀನು ನನ್ನನ್ನು ಅದ್ಭುತವಾಗಿಯೂ ವಿಚಿತ್ರವಾಗಿಯೂ ರಚಿಸಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ; ನಿನ್ನ ಕೃತ್ಯಗಳು ಆಶ್ಚರ್ಯವಾಗಿವೆಯೆಂದು ನನ್ನ ಹೃದಯವು ಚೆನ್ನಾಗಿ ಗ್ರಹಿಸಿಕೊಂಡಿದೆ" (ಕೀರ್ತನೆ 139:13, 14) ಎಂದು ಯಾವ ಆತಂಕವಿಲ್ಲದೇ ನಾವು ಹೇಳಬಹುದು.

ಒಬ್ಬ ಮಿಶನರಿ ಒಮ್ಮೆ ಹೀಗೆ ಹೇಳಿದರು, "ಜಗತ್ತಿನ ಹಲವಾರು ದೇಶಗಳಿಗೆ ನಾನು ಹೋಗಿದ್ದೇನೆ. ಪ್ರತಿಯೊಂದು ದೇಶದಲ್ಲಿಯೂ ಒಂದೇ ರೀತಿಯ ಅನುಭವವಾಗಿದೆ. ಉದಾಹರಣೆಯಾಗಿ, ಎರಡು ಮತ್ತು ಎರಡು

ಕೂಡಿಸಿದರೆ ನಾಲ್ಕು ಆಗುವದೆಂದು ಮಕ್ಕಳಿಗೆ ಕಲಿಸುವಾಗ, ಅವರು ಒಂದೇ ರೀತಿಯಾಗಿ ಉತ್ತರ ಕೊಡುವರು. ಅವರು ಅದರ ಬಗ್ಗೆ ಯೋಚಿಸುವರು ಅದು ಸರಿಯಾಗಿದೆಯೆಂದು ತೀರ್ಮಾನಿಸುವರು. ಅವರ ಮನಸ್ಸಿನಲ್ಲಿಯ ಯಾವುದೇ ಒಂದು ಭಾವನೆ ಆ ಬೋಧನೆಯನ್ನು ತಲುಪಿ, ಅದನ್ನು ಸತ್ಯವೆಂದು ಸ್ವೀಕರಿಸುತ್ತದೆ. ಅದೇ ರೀತಿಯಲ್ಲಿ, ಈ ಎಲ್ಲಾ ಭಿನ್ನವಾದ ದೇಶಗಳಲ್ಲಿ ಜನರಿಗೆ ದೇವರು ಭೂಮಿಯನ್ನೂ, ವಿಶ್ವವನ್ನೂ, ಮನುಷ್ಯನನ್ನೂ, ಸೃಷ್ಟಿಸಿದನೆಂದು ಬೋಧಿಸುವಾಗ ಅವರು ಅದರ ಬಗ್ಗೆ ಯೋಚಿಸುವರು ಮತ್ತು ಈ ಉತ್ತರವು ಸರಿಯಾಗಿದೆಯೆಂದು ತೀರ್ಮಾನಿಸುವರು. ನಾನು ಹೋದ ಪ್ರತಿಯೊಂದು ದೇಶದಲ್ಲಿಯೂ ರಾಷ್ಟ್ರದಲ್ಲಿಯೂ ಈ ಉತ್ತರವನ್ನು ಪಡೆದು ಕೊಂಡಿದ್ದೇನೆ.''

ಮನುಷ್ಯನ ಅಸ್ತಿತ್ವದ ಬಗ್ಗೆ ನೀವು ಯೋಚಿಸಿದರೆ - ಅವನ ಜೀವನ, ಅವನ ಬುದ್ಧಿ ಶಕ್ತಿ, ಅವನ ಆತ್ಮಿಕ ಸ್ವಭಾವ, ಅವನ ನೈತಿಕ ಮನಸ್ಸಾಕ್ಷಿ ಮತ್ತು ಅವನ ಶಾರೀರಿಕ ದೇಹ - ಅವನು ತನ್ನಷ್ಟಕ್ಕೆ ತಾನೇ ಸಂಭವಿಸಿರುವದಿಲ್ಲ, ಆದರೆ ಅವನು ಸರ್ವಶಕ್ತನಿಂದ ಸೃಷ್ಟಿಸಲ್ಪಟ್ಟಿದ್ದಾನೆ ಎಂಬ ನಿಶ್ಚಿತ ತೀರ್ಮಾನಕ್ಕೆ ಬರುವಿರಿ. ದೇವರು ನಿಜವಾಗಿಯೂ ಅಸ್ತಿತ್ವದಲ್ಲಿರುವನೆಂದು ನೀವು ಭರವಸೆಯುಳ್ಳ ವರಾಗುವಿರಿ. ಮನುಷ್ಯನ ಅಸ್ತಿತ್ವವು ಅದನ್ನು ಸಿದ್ಧಪಡಿಸಿ ತೋರಿಸುತ್ತದೆ.

## ಮುಕ್ತಾಯ

ನಾವು ಗಮನಿಸಿದ ಎರಡು ಪುರಾವೆಗಳ ಬಗ್ಗೆ - ಲೋಕದ ಪುರಾವೆ ಮತ್ತು ಮನುಷ್ಯನ ಪುರಾವೆಯ ಬಗ್ಗೆ ಆಳವಾಗಿ ಆಲೋಚನೆ ಮಾಡಿರಿ. ಅವು ಕೇಳುವ ತೀರ್ಮಾನವು, ''ದೇವರು ಇಲ್ಲ ಎಂದು ಮೂರ್ಖನು ಮನಸ್ಸಿನಲ್ಲಿ ಅಂದು ಕೊಳ್ಳುವನು'' (ಕೀರ್ತನೆ 14:1) ಎಂದು ಬೈಬಲು ಹೇಳುವುದನ್ನು ನಿಶ್ಚಿತವಾದದ್ದೂ ತಿರಸ್ಕರಿಸಲ್ಪಡಲಾರದ್ದೂ ಎಂಬುದನ್ನು ತೋರಿಸುತ್ತದೆ.

ನಮ್ಮನ್ನು ಸೃಷ್ಟಿಸಿದ ದೇವರು ಒಂದು ದಿನ ನಮ್ಮನ್ನು ನ್ಯಾಯತೀರಿಕೆಗೆ ಕರೆಯುವುದು ಮತ್ತು ನಾವು ಹೇಗೆ ಜೀವಿಸಿದೆವು ಎಂಬುದರ ಬಗ್ಗೆ ಲೆಕ್ಕ ಕೇಳು ವನು ಎಂದು ನಂಬುವುದೂ ಯೋಗ್ಯವಾದದ್ದಾಗಿದೆ. ಈ ಕಾರಣಕ್ಕಾಗಿಯೇ ದೇವರು ಯೇಸುವನ್ನು ಈ ಲೋಕಕ್ಕೆ ಕಳುಹಿಸಿದನು ಮತ್ತು ಬೈಬಲನ್ನು ನಮಗೆ ಕೊಟ್ಟನು. ನಾವು ಇಲ್ಲಿ ಯಾಕೆ ಇದ್ದೇವೆ, ನಮ್ಮಿಂದ ಏನು ನಿರೀಕ್ಷಿಸಲ್ಪಟ್ಟಿದೆ ಎಂಬುದರ ಬಗ್ಗೆ ನಾವು ತಿಳಿಯಬೇಕೆಂದು ಆತನು ಅಪೇಕ್ಷಿಸುತ್ತಾನೆ. ''ನನ್ನನ್ನು ಲಕ್ಷ್ಯ ಮಾಡದೇ ನನ್ನ ಮಾತುಗಳನ್ನು ಅಂಗೀಕರಿಸದೇ ಇರುವವನಿಗೆ ತೀರ್ಪು ಮಾಡುವಂಥದು ಒಂದು ಇದೆ. ಅದು ಯಾವದಂದರೆ, ನಾನು ಆಡಿದ ಮಾತು, ಅದೇ ಅವನಿಗೆ ಕಡೇ ದಿನದಲ್ಲಿ ತೀರ್ಪು ಮಾಡುವುದು'' (ಯೋಹಾನ 12:48)

ಎಂದು ಯೇಸು ಹೇಳಿದ್ದಾನೆ.

ಯೇಸು ಮತ್ತು ಬೈಬಲು ನಮಗೆ ಪ್ರಕಟಿಸುವ ಅತ್ಯಾಶ್ಚರ್ಯಕರವಾದ ಸತ್ಯವು ದೇವರು ನಮ್ಮನ್ನು ತನ್ನ ಮಕ್ಕಳಾಗಿ ಸ್ವೀಕರಿಸಲು ಬಯಸುವಂಥದ್ದಾಗಿದೆ. ಸೂರ್ಯ, ಚಂದ್ರ, ನಕ್ಷತ್ರ, ಭೂಮಿ ಮತ್ತು ಇಡೀ ವಿಶ್ವವನ್ನು ಸೃಷ್ಟಿಸಿದಾತನು ತನ್ನ ನಿತ್ಯವಾದ ಕುಟುಂಬದಲ್ಲಿ ನನ್ನ ಅನ್ಯೋನ್ಯತೆಯನ್ನು ಹುಡುಕುತ್ತಾನೆ. ಆತನು ತನ್ನ ಕುಮಾರನ ಸುವಾರ್ತೆಯ ಮುಖಾಂತರವಾಗಿ ತನ್ನ ಕುಟುಂಬ ದೊಳಗೆ ನನ್ನನ್ನು ಆಹ್ವಾನಿಸಿದ್ದಾನೆ. ಯೇಸುವಿನಲ್ಲಿ ವಿಶ್ವಾಸದಿಂದ, ಪಾಪದ ಮಾನಸಾಂತರದಿಂದ, ಯೇಸುವನ್ನು ಅರಿಕೆ ಮಾಡುವದರಿಂದ, ಕ್ರಿಸ್ತನ ದೇಹ ದೊಳಗೆ ಬಾಪ್ತಿಸ್ಮ ಹೊಂದುವದರಿಂದ ಈ ಸುವಾರ್ತೆಗೆ ವಿಧೇಯನಾಗುವಾಗ ಆತನ ಆತ್ಮಿಕ ಕುಟುಂಬದಲ್ಲಿ ನಾನು ಸ್ವೀಕರಿಸಲ್ಪಡುವೆನು (ಎಫೆಸ 1:5; ಗಲಾತ್ಯ 4:6). ಪರಿಶುದ್ಧ ಬರಹಗಳ ಪ್ರಕಾರ ದೇವರು ನಿಜವಾಗಿಯೂ ಅಸ್ತಿತ್ವದಲ್ಲಿರು ತ್ತಾನೆಂಬುದನ್ನು ಅಷ್ಟೇ ಅಲ್ಲ, ನೀವು ನಿಜವಾಗಿಯೂ ಆತನ ಮಗುವಾಗಿರುವಿರಿ ಎಂಬುದನ್ನು ನೀವು ತಿಳಿದು ಕೊಳ್ಳುವಿರಿ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ಯಾರಾದರೂ ಕೇಳುವ ಅತೀ ಅಗಾಧವಾದ ಪ್ರಶ್ನೆಯು ಯಾವುದು?
2. "ದೇವರು ಅಸ್ತಿತ್ವದಲ್ಲಿರುವನೋ?" ಎಂಬ ಪ್ರಶ್ನೆಯು ಯಾಕೆ ಅಷ್ಟು ಅಗಾಧ ವಾದದ್ದಾಗಿದೆ?
3. ಬೈಬಲು ಯಾವುದರೊಂದಿಗೆ ಪ್ರಾರಂಭವಾಗುತ್ತದೆ?
4. ದೇವರಲ್ಲಿ ನಂಬಿಕೆಯಿಡುವಂತೆ ನಮ್ಮನ್ನು ಒತ್ತಾಯ ಮಾಡುವ ಮೊದಲನೆಯ ಪುರಾವೆಯು ಯಾವುದು?
5. ಮನುಷ್ಯನ ಅಸ್ತಿತ್ವಕ್ಕಾಗಿ ತನ್ನ ವಿವರಣೆಯಲ್ಲಿ ದೇವರನ್ನು ಬಿಟ್ಟು ಬಿಡುವ ಯಾರೇ ಆಗಲೀ, ಯಾವ ಮೂರು ಸಮಸ್ಯೆಗಳನ್ನು ಎದುರಿಸುವರು?

## 2

# ಬೈಬಲು, ದೇವರ ವಾಕ್ಯ

ಬೈಬಲು ದೇವರಿಂದ ಪ್ರೇರೇಪಿಸಲ್ಪಟ್ಟಿದೆ ಎಂದು ಹೇಳಲಾಗುತ್ತಿದೆ (2 ತಿಮೊಥೆ 3:16, 17). "ದೇವರಿಂದ ಪ್ರೇರೇಪಿಸಲ್ಪಟ್ಟದ್ದು" ಎಂಬ ಗ್ರೀಕ ಮಾತು "ದೇವರು - ಉಸುರಿದನು" ಎಂದು ಅಕ್ಷರಶಃವಾಗಿ ಭಾಷಾಂತರಿಸಲ್ಪಟ್ಟಿದೆ. ಪ್ರಪಂಚದ ಮಹಾ ಲೇಖಕರು ಉತ್ತೇಜಕಗಳ ವಿವಿಧತೆಯಿಂದ "ಪ್ರೇರೇಪಿಸಲ್ಪಟ್ಟಿದ್ದಾರೆ" - ಅವುಗಳಲ್ಲಿ ತತ್ವಗಳೂ ಘಟನೆಗಳೂ ಒಳಗೊಂಡಿರುತ್ತವೆ - ಆದರೆ ಬೈಬಲು ತನ್ನ ಪ್ರೇರಣೆಯ ಮೂಲವು *ದೇವರು* ತಾನೇ ಎಂದು ಪ್ರತಿಪಾದಿಸುತ್ತದೆ. ಅಪೊಸ್ತಲನೂ ಹೊಸ ಒಡಂಬಡಿಕೆಯ ಹಲವಾರು ಪುಸ್ತಕಗಳ ಗ್ರಂಥಕರ್ತನೂ ಆದ ಪೇತ್ರನು ಬೈಬಲಿನ ಪ್ರವಾದನೆಗಳು, "ಮನುಷ್ಯರ ಚಿತ್ತದಿಂದ ಉಂಟಾಗಲಿಲ್ಲ; ಮನುಷ್ಯರು ಪರಿಶುದ್ಧಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು" (2 ಪೇತ್ರ 1:21) ಎಂದು ಬರೆದಿದ್ದಾನೆ.

ಈ ಪಾಠದ ಉದ್ದೇಶವು ಈ ದೈವ ಪ್ರೇರಿತ ಪುಸ್ತಕವನ್ನು ನಿಮಗೆ ಪರಿಚಯ ಮಾಡಿ ಕೊಡುವುದಾಗಿದೆ. ಬೈಬಲು ದೈವಿಕ ಮೂಲದ ಕೆಲವೇ ರುಜುವಾತು ಗಳನ್ನು ಕೂಡಿಸಲಾಗುವುದು. ಆದರೆ ಅಧ್ಯಯನದ ಪ್ರಾಥಮಿಕ ಗುರಿಯು ಈ ಆಶ್ಚರ್ಯಕರವಾದ ಗ್ರಂಥದಲ್ಲಿ ಆಸಕ್ತಿ ಹುಟ್ಟಿಸುವುದು ಮತ್ತು ಇದನ್ನು ನೀವೇ ಓದುವಂತೆ ನಿಮ್ಮನ್ನು ಪ್ರೋತ್ಸಾಹಿಸುವುದು ಆಗಿದೆ. ನೀವು ಬೈಬಲನ್ನು ಓದುತ್ತ, ಅದರ ಬೋಧನೆಗಳನ್ನು ಅನುಸರಿಸುತ್ತ ಹೋಗುವಂತೆ (ಯಾಕೋಬ 1:21-25) ಈ ಪ್ರಸಿದ್ಧವಾದ ಪುಸ್ತಕವು ಎಲ್ಲಾ ಯುಗಗಳ ಜನರ ಮೇಲೆ ಯಾಕೆ ಅಷ್ಟು ಪ್ರಭಾವ ಬೀರಿದೆಯೆಂದು ನೀವು ಅರ್ಥಮಾಡಿಕೊಳ್ಳುವಿರಿ.

ಒಬ್ಬ ಲೇಖಕನು "ಆಶ್ಚರ್ಯಕರ ವಾಕ್ಯದ ಏಳು ಆಶ್ಚರ್ಯಗಳು" ಎಂದು ಕರೆದಿರುವದನ್ನು ಈ ಅಧ್ಯಾಯ ಚಿತ್ರಿಸುತ್ತದೆ: ಅದರ ಪ್ರಾಚೀನತೆ, ಆಧುನಿಕತೆ, ವಿವಿಧತೆ, ಐಕ್ಯತೆ, ಮುಖ್ಯ ಪ್ರಸ್ತಾಪ, ಪ್ರಭಾವ ಹಾಗೂ ಆದರಣೆಯ ಆಶ್ಚರ್ಯಗಳು. ಅದರ ಐತಿಹಾಸಿಕತೆ, ಭೌಗೋಳಿಕ ಸ್ಪಷ್ಟತೆ ಮತ್ತು ಪಕ್ಷಪಾತವಿಲ್ಲದಿರುವಿಕೆಯಂಥ ಬೈಬಲಿನ ಇತರ ಕೌತುಕಗಳ ಬಗ್ಗೆ ನಮೂದಿಸಬಹುದು. ಆದರೆ ಕೀರ್ತನೆಗಳ

ಪುಸ್ತಕದ ಬರಹಗಾರರೊಂದಿಗೆ, "ನಿನ್ನ ಕಟ್ಟಳೆಗಳು ಮಹತ್ವವುಳ್ಳವುಗಳೇ"! (ಕೀರ್ತನೆ 119:129ಎ) ಎಂದು ಘೋಷಿಸಲಿಕ್ಕೆ ಈ ಏಳು ಸಂಗತಿಗಳು ಸಾಕಷ್ಟಾಗಿವೆ.

## ಅದರ ಪ್ರಾಚೀನತೆ

ಬೈಬಲು ಜಗತ್ತಿನಲ್ಲೆಲ್ಲಾ ಅತೀ ಪುರಾತನವಾದ ಪುಸ್ತಕಗಳಲ್ಲಿ ಒಂದಾಗಿದೆ! ಪುಸ್ತಕಗಳಿಗೆ ಸಾಮಾನ್ಯವಾಗಿ ಬಹಳ ಹಳೆಯದಾಗುವ ಅವಕಾಶವಿರುವದಿಲ್ಲ. ಅವು ಅಷ್ಟು ದುರ್ಬಲವಾದವುಗಳಾಗಿರುತ್ತವೆ. ಬೆಂಕಿಯು ಅವುಗಳನ್ನು ಸುಟ್ಟು ಬಿಡುತ್ತದೆ, ನೀರು ಅವುಗಳನ್ನು ಅರಗಿಸಿ ಕೊಳ್ಳುತ್ತವೆ, ಹುಳಗಳು ಅವುಗಳನ್ನು ತಿಂದು ಬಿಡುತ್ತವೆ ಮತ್ತು ಜಾಗರೂಕತೆಯಿಲ್ಲದ ಕೈಬೆರಳುಗಳು ಅವುಗಳನ್ನು ಹರಿಯುತ್ತವೆ.

ತನ್ನ ಪೂರ್ತಿಗೊಂಡ ರೂಪದಲ್ಲಿ ಸತ್ಯವೇದವು ಸುಮಾರು ಎರಡು ಸಾವಿರ ವರ್ಷಗಳಷ್ಟು ಹಳೆಯದಾಗಿದೆ. ಅದರಲ್ಲಿಯ ಕೆಲವು ಭಾಗಗಳು ಅದಕ್ಕಿಂತ ಎರಡು ಪಟ್ಟು ಹೆಚ್ಚು ಹಳೆಯದಾಗಿವೆ. ಇದರೊಂದಿಗೆ ಲೋಕದಲ್ಲಿಯ ಬೇರೆ ಯಾವುದೇ ಪುಸ್ತಕವನ್ನು ಹೋಲಿಸಲಿಕ್ಕಾಗುವದಿಲ್ಲ. ಬೈಬಲಿನ ವಯಸ್ಸು ಅದರ ಸಹಿಸುವಿಕೆಯನ್ನೂ ನಾಶವಾಗದಿರುವಿಕೆಯನ್ನೂ ಪ್ರಕಟಿಸುತ್ತದೆ.

ಅತೀ ಪುರಾತನವಾದ ಬರಹಗಳು ಹಳೇ ಒಡಂಬಡಿಕೆಯಲ್ಲಿ ಇರುತ್ತವೆ: ಆದಿಕಾಂಡ, ವಿಮೋಚನಕಾಂಡ, ಯಾಜಕಕಾಂಡ, ಅರಣ್ಯಕಾಂಡ, ಮತ್ತು ಧರ್ಮೋಪದೇಶಕಾಂಡ. ಇವು ಮೋಶೆಯಿಂದ ಬರೆಯಲ್ಪಟ್ಟವು. ಅವು ಮನುಷ್ಯನ ಪ್ರಾರಂಭದ ಮತ್ತು ದಾಖಲೆಯಾದ ಸಮಯದ ದಿನಗಳ ಪ್ರಾರಂಭ ವಾದ ವಿವರಣೆಗಳನ್ನೂ ಒಳಗೊಂಡಿರುತ್ತವೆ. ಈ ಬರಹಗಳು ಇಂದು ಮನುಷ್ಯನ ವಶದಲ್ಲಿರುವ *ಅತೀ ಪುರಾತನ ಸಂಪೂರ್ಣ ಕೈಬರಹದ ಪ್ರತಿಗಳಿಂದ ಬಂದಿದೆ ಎಂದು ಹೇಳಬಹುದು.*

ಬೈಬಲನ್ನು ನಾಶಪಡಿಸುವದಕ್ಕೆ ಮನುಷ್ಯನು ಆಗಾಗ ಮಾಡಿದ ಮತ್ತು ಮುಂದುವರಿದ ಪ್ರಯತ್ನಗಳಿದ್ದರೂ ಅದು ಇಷ್ಟು ಪುರಾತನವಾದದ್ದಾಗಿರುತ್ತದೆ. ಪುನಃ ಭೂಲೋಕದಲ್ಲಿ ಬಹಳ ಹೆಚ್ಚಾದ ಬಲವುಳ್ಳ ಸರಕಾರಗಳು ಈ ಪುಸ್ತಕವನ್ನು ಇಲ್ಲವಾಗಿ ಮಾಡಲು ಪ್ರಯತ್ನಿಸಿದವು. ಅದನ್ನು ಹೊಂದಿದ್ದಕ್ಕಾಗಿ ಓದಿದ್ದಕ್ಕಾಗಿ ಜನರು ನೇಣುಗಂಬದ ಮೇಲೆ ಸತ್ತಿದ್ದಾರೆ. ಅದನ್ನು ಹೊಂದಿದ್ದಕ್ಕಾಗಿ ಬಹಿರಂಗದಲ್ಲಿ ಸುಡಲ್ಪಟ್ಟಿದ್ದಾರೆ. ವಿವರಿಸಲಿಕ್ಕೆ ಅಸಹ್ಯವಾದ ರೀತಿಯಲ್ಲಿ ಜನರು ಚಿತ್ರಹಿಂಸೆಗೆ ಗುರಿಪಡಿಸಲ್ಪಟ್ಟಿದ್ದಾರೆ. ಹೀಗಿದ್ದರೂ ಬರೆಯಲ್ಪಟ್ಟ ಯಾವುದೇ ಪುಸ್ತಕಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಇಂದು ಭೂಲೋಕದಲ್ಲಿ ಬೈಬಲುಗಳಿವೆ.

ಮೂರನೆಯ ಶತಮಾನದ ಅಂತ್ಯದಲ್ಲಿ ರೋಮ್ ಚಕ್ರವರ್ತಿ ಡಿಯೊಕ್ಲೆಷಿಯನ್‌ನು ಬೈಬಲ್ ಪ್ರತಿಯನ್ನು ಹೊಂದಿದ ಯಾವುದೇ ವ್ಯಕ್ತಿಯನ್ನು

ಕೊಲ್ಲಬೇಕೆಂದು ಆಜ್ಞಾಪಿಸಿದನು. ತನ್ನ ಅವಿಧೇಯತೆಯನ್ನು ವರದಿ ಮಾಡದೇ ಇದ್ದುದಕ್ಕಾಗಿ ಸೆರೆಯಮನೆಯಲ್ಲಿದ್ದವನ ಕುಟುಂಬದ ಸದಸ್ಯರಿಗೆ ಮರಣದಂಡನೆ ವಿಧಿಸಿದನು. ಹೀಗೆ ಬಲಶಾಲೀ ರೋಮನನ್ನು ತನ್ನ ದುಷ್ಟ ಜೀವಿತವನ್ನೂ ಕ್ರೂರ ನಡತೆಯನ್ನೂ ಖಂಡಿಸಿದ ಬರಹಗಳನ್ನು ತೆಗೆದು ಹಾಕಲು ಹೊರಟನು. ಎರಡು ವರ್ಷಗಳ ನಂತರ ಡಿಯೊಕ್ಲೆಷಿಯನ್‌ನು "ನಾನು ಭೂಲೋಕದೊಳಗಿಂದ ಕ್ರೈಸ್ತ ಬರಹಗಳನ್ನು ಸಂಪೂರ್ಣವಾಗಿ ತೆಗೆದು ಹಾಕಿದ್ದೇನೆಂದು" ಕೊಚ್ಚಿಕೊಂಡನು.

ಒಂದು ಶತಮಾನದ ನಂತರ, ಇನ್ನೊಬ್ಬ ರೋಮನ್ ಚಕ್ರವರ್ತಿಯಾದ ಕಾನ್‌ಸ್ಟಂಟೈನನು ಕ್ರೈಸ್ತರಿಂದ ಪ್ರಭಾವಿತನಾಗಿ ತನ್ನ ರಾಜ್ಯದಲ್ಲಿಯ ಎಲ್ಲಾ ಸಭೆಗಳಿಗಾಗಿ ಹೊಸ ಒಡಂಬಡಿಕೆಯ ಪ್ರತಿಗಳನ್ನು ಒದಗಿಸಲು ಇಚ್ಛಿಸಿದನು. ದೇವರ ವಾಕ್ಯದ ಪ್ರತಿಯನ್ನು ಹುಡುಕಿ ತನ್ನ ಅಧಿಕಾರಿಗಳಿಗೆ ತಂದು ಕೊಟ್ಟವರಿಗೆ ದೊಡ್ಡ ಮೊತ್ತದ ಬಹುಮಾನವನ್ನು ಕೊಟ್ಟನು. ಇಪ್ಪತ್ನಾಲ್ಕು ತಾಸುಗಳಲ್ಲಿ ಪರಿಶುದ್ಧ ಬರಹದ ಐವತ್ತು ಪ್ರತಿಗಳು ಚಕ್ರವರ್ತಿಗೆ ಅರ್ಪಿಸಲ್ಪಟ್ಟವು. ಡಿಯೊಕ್ಲೆಷಿಯನ್‌ನು ಎಲ್ಲಾ ಪ್ರತಿಗಳನ್ನೂ ನಾಶಮಾಡಿದ್ದೇನೆಂದು ಯೋಚಿಸಿದ್ದನಲ್ಲವೇ!

ನಾಶವಾಗಿ ಹೋಗುವ ವಸ್ತುಗಳ ಮೇಲೆ ಬೇಗನೇ ಅಳಿಸಿ ಹೋಗುವ ಮಸಿಯಿಂದ ಬರೆಯಲ್ಪಟ್ಟಿದ್ದರೂ - ಸಮಯದ ತಿರಸ್ಕರಿಸುವ ದಾಳಿಗಳಿಂದಲೂ ಸೃಷ್ಟಿಯ ಒತ್ತಡಗಳಿಂದಲೂ ಮನುಷ್ಯನ ಹಾಳುಮಾಡುವ ದುರಾಲೋಚನೆ ಗಳಿಂದಲೂ ಬೈಬಲು ಗ್ರಂಥವು ನಾಶವಾಗದೇ ನಮ್ಮ ಇಂದಿನ ಶತಮಾನದ ವರೆಗೆ ಉಳಿದುಕೊಂಡು ಬಂದಿದೆ. ಅದರ ದೀರ್ಘವಾದ ಮತ್ತು ಅದ್ಭುತಕರವಾದ ಚರಿತ್ರೆಗೆ ಕೇವಲ ದೇವರ ಅನುಗ್ರಹವು ಕಾರಣವಾಗಿದೆ.

## ಅದರ ಆಧುನಿಕತೆ

ಬೈಬಲು ಪುರಾತನವಾಗಿದ್ದಂತೆ, ಅದು ಅನೇಕ ವಿಧದಲ್ಲಿ ಆಧುನಿಕ ಪುಸ್ತಕವೂ ಆಗಿದೆ. ಹಳೇ ಪುಸ್ತಕಗಳು ತಮ್ಮ ಬೋಧನೆಗಳಲ್ಲಿ ಸಮಕಾಲೀನವಾಗಿರುವವೆಂದು ನಾವು ನಿರೀಕ್ಷಿಸುವದಿಲ್ಲ. ಹತ್ತು ವರ್ಷದ ವಿಜ್ಞಾನದ ಪಠ್ಯ ಪುಸ್ತಕವು ಹಳೆಯದಾಗಿ ಹೋಗಿರುತ್ತದೆ. ಒಂದು ಶತಮಾನ ಹಳೆಯದಾದದ್ದು ಕುತೂಹಲಕರವಾದ ದ್ದಾಗಿರುತ್ತದೆ. 1700ರಲ್ಲಿ ಮುದ್ರಿಸಲ್ಪಟ್ಟ ಸಲ್ಮೋನನ "ಭ್ರೂಣಶಾಸ್ತ್ರವು" ಹೇಳುವ ವೈದ್ಯಕೀಯ ಮಾಹಿತಿಯು ಆಧುನಿಕ ವೈದ್ಯನನ್ನು ಹುಚ್ಚು ಹಿಡಿಸುವ ನಗೆಯಲ್ಲಿ ತೇಲಿಸುತ್ತದೆ, 1600ರಲ್ಲಿ ಪ್ರಕಟವಾದ *Pharmacopia Londensis* ಎಂಬುದು ಇದಕ್ಕಿಂತ ಹೆಚ್ಚು ಹಾಸ್ಯಸ್ಪದವಾಗಿ ಕಂಡುಬರುತ್ತದೆ, ಅಂಥ ಪ್ರಸಿದ್ಧ ಪುಸ್ತಕದಂತೆ ಒಬ್ಬ ವೈದ್ಯನು ಔಷಧೋಪಜಾರ ನಡಿಸಿದರೆ ವೈದ್ಯಕೀಯ ಸೇವೆಯನ್ನು ಕ್ರಮಪಡಿಸುವವರು ಅಂಥವನನ್ನು ಸೆರೆಮನೆಗೆ ತಳ್ಳುವರು.

ಕೆಲವೇ ವರ್ಷಗಳು ಹೇಗೆ ಭಿನ್ನತೆ ಮಾಡುತ್ತವೆ ಎಂಬುದನ್ನು ಉದಾಹರಿಸಲು, 150 ವರ್ಷಗಳಷ್ಟು ಹಿಂದಿನದಾದ ಸಸ್ಯಶಾಸ್ತ್ರದ ಮೇಲಿನ ಪಠ್ಯ ಪುಸ್ತಕದಿಂದ ಇಲ್ಲಿ ಒಂದು ಹೇಳಿಕೆಯಿದೆ:

> ಇಟಲಿಯಲ್ಲಿ ಒಂದು ವನಸ್ಪತಿ ಬೆಳೆಯುತ್ತದೆ ... ಅದು ಅಪರೂಪವಾದ ಸುವಾಸನೆಯೊಂದಿಗೆ ಶುದ್ಧ ಬಿಳಿಬಣ್ಣದ ಹೂವುಗಳನ್ನೂ ಬಿಡುತ್ತದೆ. ಇಂಥ ವಿಚಿತ್ರವಾದ ಸಂಗತಿಗಳಿದ್ದರೂ ಹೂವುಗಳು ಒದ್ದೆಯಾದ ಕಲ್ಲುಗಳ ಮೇಲೆ ಇಡಲ್ಪಟ್ಟು ಅಲ್ಲಿಯೇ ಬಿಡಲ್ಪಟ್ಟರೆ, ಹತ್ತು ದಿನಗಳಲ್ಲಿ ಅವು ವಿಷಭರಿತ ಚೇಳುಗಳಾಗಿ ತಾವೇ ಮಾರ್ಪಡುತ್ತವೆ, ಅವು ಕಚ್ಚಿದರೆ ಮರಣವೇ ಬರುತ್ತದೆ.

“ಪ್ರಮಾಣಿಕವಾಗಿ, ಕಳೆದು ಒಂದೂವರೆ ಶತಮಾನದಲ್ಲಿ ನಾವು ಬಹಳಷ್ಟು ಕಲಿತಿದ್ದೇವೆ. ಹಳೇ ಪುಸ್ತಕಗಳು ಸಮಕಾಲಿನವಾಗಿರುವದನ್ನು ನಿರೀಕ್ಷಿಸಲಿಕ್ಕೆ ಆಗುವದಿಲ್ಲ” ಎಂದು ನೀವು ಹೇಳಬಹುದು, ಅದರಲ್ಲಿ ಅರ್ಥವಿದೆ! ಉದಾಹರಣೆಯಾಗಿ, ಮೋಶೆಯು 3,500 ವರ್ಷಗಳ ಹಿಂದೆ ಬರೆದಿರುವನು. ಆದಾಗ್ಯೂ ಅವನ ಬರಹಗಳು ಆಧುನಿಕ ವಿಜ್ಞಾನಕ್ಕೂ ಜ್ಞಾನಕ್ಕೂ ವಿರುದ್ಧವಾದವುಗಳಾಗಿರುವದಿಲ್ಲ. “ಬೈಬಲು ವೈಜ್ಞಾನಿಕ ಪೂರ್ವಜ್ಞಾನದ” ಮೇಲೆ ಇಡೀ ಪುಸ್ತಕಗಳು ಬರೆಯಲ್ಪಟ್ಟಿವೆ, ಬೈಬಲಿನ ಪುಟಗಳಲ್ಲಿ ಕಂಡುಬರುವ ಖಗೋಲ ಶಾಸ್ತ್ರ, ವಿಶ್ವಶಾಸ್ತ್ರ ಮತ್ತು ಇತರ ವೈಜ್ಞಾನಿಕ ಕ್ಷೇತ್ರಗಳ ಆಧುನಿಕ ಘಟನೆಗಳನ್ನು ಒತ್ತಿ ಹೇಳುತ್ತವೆ. ಈ ರೀತಿಯ ಘಟನೆಗಳು ಒಳಗೊಂಡಿವೆ:

ಭೂಮಿಯು ಮಂಡಲಾಕಾರದಲ್ಲಿದೆ (ಯೆಶಾಯ 40:22; ಜ್ಞಾನೋಕ್ತಿ 8:27).

ಭೂಮಿಯು ಯಾವ ಆಧಾರವೂ ಇಲ್ಲದೇ ತೂಗ ಹಾಕಲ್ಪಟ್ಟಿದೆ (ಯೋಬ 26:7).

ಅಂತರಿಕ್ಷವು ಅಳೆಯಕ್ಕಾಗದಷ್ಟು ವಿಶಾಲವಾಗಿದೆ ಇಲ್ಲವೇ ನಕ್ಷತ್ರಗಳು ಎಣಿಸಲ್ಪಡಲಾರದಷ್ಟು ಇವೆ (ಆದಿಕಾಂಡ 15:5; ಯೆರೆಮೀಯ 33:22).

ಮಹಾಸಾಗರದಲ್ಲಿ ನೈಸರ್ಗಿಕ ದಾರಿಗಳಿವೆ (ಅವು ಇಂದು ಹಡಗುಗಳಿಗೆ ಉಪಯೋಗಿಸಲ್ಪಡುತ್ತಿವೆ (ಕೀರ್ತನೆ 8:8).

ಬೈಬಲು ವಿಜ್ಞಾನದ ಗ್ರಂಥವೆಂದು ಈ ಪುಸ್ತಕಗಳು ಒಪ್ಪಿ ಕೊಳ್ಳುವದಿಲ್ಲ. ಬೈಬಲ್ ಬರಹಗಾರರು ವಿಜ್ಞಾನಕ್ಕೆ ಸಂಬಂಧಿಸಿದ ಪ್ರಸ್ತಾಪಗಳ ಬಗ್ಗೆ ಮಾತಾಡು

ವಾಗ ತಮ್ಮ ದಿನದ ಇತರ ಬರಹಗಾರರು ಮಾಡಿದಂತೆ ಅವರು ವೈಜ್ಞಾನಿಕ ಘಟನೆಗಳಿಗೆ ವಿರೋಧವಾಗಿ ಹೇಳಲಿಲ್ಲ.

ಬೈಬಲು ಸಮಯಾರ್ತಿಕ ಗುಣದ ಹೆಚ್ಚಾದ ಆಶ್ಚರ್ಯಕರವಾದ ಉದಾಹರಣೆಗಳಲ್ಲಿ ಕೆಲವು ವೈದ್ಯಕೀಯ ಕ್ಷೇತ್ರದಲ್ಲಿವೆ. ಆಧುನಿಕ ಆರೋಗ್ಯ ಶಾಸ್ತ್ರ ಇಲ್ಲವೇ ಆರೋಗ್ಯದ ಪದ್ಧತಿಗಳ ಬಗ್ಗೆ ಏನನ್ನು ತಿಳಿಯದಿದ್ದ ಜಗತ್ತಿನಲ್ಲಿ, ಬರೆಯಲ್ಪಟ್ಟ ಹಳೇ ಒಡಂಬಡಿಕೆಯಲ್ಲಿ ದಾಖಲೆಯಾದಂತೆ ಮೋಶೆಗೆ ಕೊಡಲ್ಪಟ್ಟ ನಿಯಮವು ಸ್ವಚ್ಛತೆ, ಆರೋಗ್ಯ ರಕ್ಷಣೆ, ರೋಗಿಗಳನ್ನು ಪ್ರತ್ಯೇಕಿಸಿಡುವುದು ಹಾಗೂ ರೋಗಗಳನ್ನು ಪ್ರತಿಬಂಧಿಸುವ ಮತ್ತು ನಿಯಂತ್ರಿಸುವ ಬೋಧನೆಗಳಿಂದ ತುಂಬಿಕೊಂಡಿರುತ್ತದೆ.

ಉದಾಹರಣೆಯಾಗಿ, ಸರ್ಜನ್ನರು ಶಸ್ತ್ರಚಿಕಿತ್ಸೆ ಮಾಡುವಾಗ ಮಾಸ್ಕ್ ಧರಿಸುವುದು ಒಂದು ಪದ್ಧತಿ. ರೋಗಿ ನಿರೋಧಕ ಶಕ್ತಿಯಿಲ್ಲದವರ ಕೋಣೆಯೊಳಗೆ ಹೋಗುವಾಗ ಅವರು ಮಾಸ್ಕ್ ಧರಿಸುವುದು ಯಾಕೆ? ಯಾಕಂದರೆ ಅವರು ರೋಗಾಣುಗಳನ್ನು ಹರಡಲು ಬಯಸುವದಿಲ್ಲ. ವಿಜ್ಞಾನಿಗಳಿಂದ ರೋಗಾಣುಗಳು ಕಂಡು ಹಿಡಿಯುವದಕ್ಕಿಂತ ಮೂರು ಸಾವಿರ ವರ್ಷಗಳ ಹಿಂದೆ ದೇವರು ಮೋಶೆಗೆ ಈ ಆದೇಶಗಳನ್ನು ಕೊಟ್ಟನು. "ಯಾವನಲ್ಲಿ ಕುಷ್ಠದ ಗುರುತು ಕಾಣಬಂತೋ. ಅವನು ... ಬಾಯಿಯನ್ನು ಬಟ್ಟೆಯಿಂದ ಮುಚ್ಚಿಕೊಂಡು - ನಾನು ಅಶುದ್ಧನು, ಅಶುದ್ಧನು ಎಂದು ಕೂಗಿಕೊಳ್ಳಬೇಕು" (ಯಾಜಕಕಾಂಡ 13:45; KJV).

ಇನ್ನೊಂದು ವೈದ್ಯಕೀಯ ಪ್ರಗತಿಯು ರಕ್ತವನ್ನು ಒಬ್ಬನಿಂದ ಇನ್ನೊಬ್ಬನಿಗೆ ಹಾಕುವುದು. ವರ್ಷಗಳ ಹಿಂದೆ ಜನರು "ರಕ್ತ ಸುರಿಸುವಂತೆ" ಮಾಡುವುದು ಯೋಗ್ಯ ವೈದ್ಯಕೀಯ ಕಾರ್ಯವೆಂದು ತಿಳಿದುಕೊಂಡಿದ್ದರು. ಅನೇಕರು ಅಕ್ಷರಶಃವಾಗಿ ರಕ್ತಸುರಿದು ಸತ್ತು ಹೋದರು. ಹೀಗಿದ್ದರೂ ಇಂದು ರಕ್ತವು ದೇಹದ ಜೀವನದಿ ಎಂದು ತಿಳಿದುಕೊಳ್ಳಲ್ಪಟ್ಟಿದೆ. ಈಗ ಆದಿಕಾಂಡ 9:4ರಲ್ಲಿಯ ಮೋಶೆಯ ಹೇಳಿಕೆಯ ಕಡೆಗೆ ತಿರುಗಿರಿ: "ಆದರೆ ರಕ್ತದಿಂದ ಕೂಡಿರುವ ಮಾಂಸವನ್ನು ನೀವು ತಿನ್ನಬಾರದು; *ರಕ್ತವು ಜೀವವಷ್ಟೇ.*" (ಒತ್ತಿ ಹೇಳಿದ್ದು ನನ್ನದು.) ಮಾಂಸದ ಜೀವವು ರಕ್ತದಲ್ಲಿದೆ ಎಂದು ಮೋಶೆ ಹೇಳಿದನು (ಯಾಜಕಕಾಂಡ 17:11-14 ನೋಡಿರಿ).

ಬೈಬಲು ವೈದ್ಯಕೀಯ ಖಚಿತತೆಗೆ ಪುಸ್ತಗಳು ಪ್ರಕಟಿಸಲ್ಪಟ್ಟಿವೆ. ಇಲ್ಲಿ ಒಂದು ಉದಾಹರಣೆ:

ಪುರುಷರೂ ಸ್ತ್ರೀಯರೂ (ಜೀವದ "ಬೀಜ") ಸಂತತಿ ಹೊಂದಿರುವರು (ಆದಿಕಾಂಡ 3:15; 22:18).

ಸತ್ತು ಹೋದ ಮನುಷ್ಯನ ಇಲ್ಲವೇ ಪ್ರಾಣಿಗಳ ಶವಗಳನ್ನು ಮುಟ್ಟಿದ ನಂತರ ನಿಮ್ಮನ್ನೂ ನಿಮ್ಮ ಬಟ್ಟೆಗಳನ್ನೂ ಹೊಲೆ ಮಾಡಿದ್ದನ್ನು

ಹೊಗಲಾಡಿಸಿ ಕೊಳ್ಳುವುದು ಬುದ್ಧಿವಂತಿಕೆಯಾಗಿದೆ
(ಅರಣ್ಯಕಾಂಡ 19:5-22).
ತಾನಾಗಿ ಸತ್ತು ಬಿದ್ದ ಪ್ರಾಣಿಯನ್ನು ತಿನ್ನುವುದು
ಗಂಡಾಂತರಕಾರಿಯಾದದ್ದು (ಯಾಜಕಕಾಂಡ 17:15).

ಇದು ಆಶ್ಚರ್ಯಕರವಾದದ್ದಲ್ಲವೇ? ನಮ್ಮ ವಶದಲ್ಲಿರುವ ಅತೀ ಪುರಾತನವಾದ ಪುಸ್ತಕವು ಇಪ್ಪತ್ತೊಂದನೆಯ ಶತಮಾನದ ವೈದ್ಯಕೀಯ ತತ್ವಗಳಷ್ಟೇ ಆಧುನಿಕ ವಾದದ್ದಾಗಿದೆ.

ಬೈಬಲಿನ ಆಧುನಿಕತೆಯು ಅದರ ಎಲ್ಲಾ ವಿವಿಧ ವಿಷಯಗಳಿಂದ ಉದಾಹರಿಸಲ್ಪಡಬಹುದು. ಈ ಪುಸ್ತಕದ ನೈತಿಕ ಮಟ್ಟವನ್ನು ದಾಟಿ ಜಗತ್ತು ಪ್ರೌಢಾವಸ್ಥೆಗೇರಿದೆಯೆಂದು ಯಾರಾದರೂ ಹೇಳಬಹುದೇ? ತನ್ನ ತತ್ವಗಳನ್ನು ಹಿಂದೆ ಬಿಟ್ಟು ಬಿಡುವ ಹೆಚ್ಚು ಶ್ರೇಷ್ಠ ಜ್ಞಾನವನ್ನು ನಾವು ಕಂಡು ಕೊಂಡಿರು ವೆವೋ? ಇಲ್ಲ! ಆಧುನಿಕ ಮನುಷ್ಯನು ಬೈಬಲಿನ ಜ್ಞಾನವನ್ನು ದಾಟಿ ಹೋಗಲು ಪ್ರಾರಂಭಿಸಿರುವದಿಲ್ಲ: ಜಗತ್ತು ಇನ್ನೊಂದು ಸಾವಿರ ವರ್ಷಗಳವರೆಗೆ ಅಸ್ತಿತ್ವದಲ್ಲಿರುವದನ್ನು ಮುಂದುವರಿಸಿದರೂ, ದೇವರ ವಾಕ್ಯವು ಇಪ್ಪತ್ತೊಂದನೆಯ ಶತಮಾನದಲ್ಲಿ ಸಮಕಾಲೀನವಾದದ್ದಾಗಿರುವಂತೆಯೇ ಮೂವತ್ತೊಂದನೆಯ ಶತಮಾನದಲ್ಲಿಯೂ ಇರುವುದು.

## ಅದರ ವಿವಿಧತೆ

ಬೈಬಲು ಒಂದೇ ವಿಷಯದ ಬಗೆಗಿರುವ ಕೇವಲ ಒಂದೇ ಪುಸ್ತಕವಾಗಿದ್ದರೆ ಇಲ್ಲಿಯವರೆಗೆ ನಾವು ಹೇಳಿದ್ದು ಸಾಕಷ್ಟು ಆಶ್ಚರ್ಯಕರವಾದದ್ದಾಗಿರುತ್ತಿತ್ತು. ಆದರೆ ಇದು ಹಾಗಿರುವದಿಲ್ಲ.

ಬೈಬಲು ಜಗತ್ತಿನಲ್ಲಿ ಬಹಳವಾಗಿ ವಿವಿಧತೆಯುಳ್ಳ ಪುಸ್ತಕಗಳಲ್ಲಿ ಒಂದಾಗಿದೆ. ಮೊದಲನೆಯದು, ಅದರ ವಾಸ್ತವಿಕತೆಯಲ್ಲಿ ಎರಡು ಗ್ರಂಥಗಳಾಗಿದೆ - ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ - ಇವುಗಳ ಮಧ್ಯದಲ್ಲಿ ಸುಮಾರು ನಾಲ್ಕು ಇಲ್ಲವೇ ಐದು ಶತಮಾನಗಳ ಅಂತರವಿದೆ, ಎರಡನೆಯದು, ಪ್ರತಿಯೊಂದು ಗ್ರಂಥವು ಕೆಲವು ಕೆಲವು ಪುಸ್ತಕಗಳಾಗಿ ವಿಭಾಗಿಸಲ್ಪಟ್ಟಿವೆ - ಹಳೇ ಒಡಂಬಡಿಕೆಯಲ್ಲಿ 39 ಪುಸ್ತಕಗಳು ಹೊಸ ಒಡಂಬಡಿಕೆಯಲ್ಲಿ 27 ಪುಸ್ತಕಗಳು ಒಟ್ಟು 66 ಪುಸ್ತಕಗಳು. ಮೂರನೆಯದು, ಈ 66 ಪುಸ್ತಕಗಳು ನಾಲ್ವತ್ತಕ್ಕಿಂತಲೂ ಹೆಚ್ಚು ಭಿನ್ನವಾದ ಲೇಖಕರಿಂದ ಬರೆಯಲ್ಪಟ್ಟಿವೆ. ನಾಲ್ಕನೆಯದು, ಈ ನಾಲ್ವತ್ತಕ್ಕಿಂತ ಹೆಚ್ಚು ಜನರು ಸುಮಾರು ಎರಡು ಸಾವಿರ ವರ್ಷಗಳ ಕಾಲಾವಧಿಯೊಳಗೆ ಜೀವಿಸಿದವರಾಗಿದ್ದಾರೆ. ಅಂತಿಮವಾಗಿ, ಆ ಗ್ರಂಥ ಕರ್ತರು ಸಾಹಿತ್ಯಕ್ಕೆ ತಿಳಿದ

ಪ್ರತಿಯೊಂದು ವಿಷಯಕ್ಕೆ ಹೆಚ್ಚಾಗಿ ಒಂದನ್ನು ಕೂಡಿಸಿ ಬರೆದಿದ್ದಾರೆ: ಆ "ಹೆಚ್ಚಾದ ಒಂದು" ಯಾವುದೇ ಇತರ ಪುಸ್ತಕದಲ್ಲಿ ಒಳಗೊಂಡಿರುವದಿಲ್ಲ: ಅದು ನಿಜವಾದ ಪ್ರವಾದನೆ. ಇದು ದೇವರ ಕ್ಷೇತ್ರ ಮಾತ್ರವೇ ಆಗಿದೆ! ಬೈಬಲ್‌ನಲ್ಲಿಯ ನೂರಾರು ಪ್ರವಾದಿಕ ಹೇಳಿಕೆಗಳು ಪರಿಪೂರ್ಣವಾಗಿಯೂ ಖಚಿತವಾಗಿಯೂ ನೆರವೇರಿವೆ. ಕೆಲವು ಉದಾಹರಣೆಗಳಿಗೆ ಮಾತ್ರವೇ ಇಲ್ಲಿ ಸ್ಥಳವಿರುವುದು:

> *ದೇಶಗಳ ಪ್ರವಾದನೆಗಳು:* ದೇಶಗಳ ಏಳುವಿಕೆ, ಅವನತಿಗೀಡಾಗುವುದು, ಹಾಗೂ ಬೀಳುವಿಕೆಗಳನ್ನು ಕುರಿತು ಬಹಳವಾದ ಪ್ರವಾದನೆಗಳು ಕೊಡಲ್ಪಟ್ಟಿವೆ. ಉದಾಹರಣೆಯಾಗಿ, ಇಸ್ರಾಯೇಲಿನ ಚರಿತ್ರೆಯು ಧರ್ಮೋಪದೇಶಕಾಂಡ 28:47-68ರಲ್ಲಿ ಚಿತ್ರಿಸಲ್ಪಟ್ಟಿದೆ. ಅಸ್ಸೀರಿಯ (ಯೆಶಾಯ 10:12, 24, 25; 2 ಅರಸುಗಳು 17:24; 18:13 ನೋಡಿರಿ) ಹಾಗೂ ಬಬಿಲೋನ (ಯೆಶಾಯ 13; ದಾನಿಯೇಲು 5:28 ನೋಡಿರಿ) ದೇಶಗಳನ್ನೊಳಗೊಂಡು ಅನೇಕ ಇತರ ದೇಶಗಳ ಬಗ್ಗೆ ಸಹ ಪ್ರವಾದನೆಗಳು ಕೊಡಲ್ಪಟ್ಟಿವೆ.
>
> *ಜನರ ಪ್ರವಾದನೆಗಳು:* ಅರಸ ಯೋಷೀಯನ ಕೆಲಸವು ಅವನು ಹುಟ್ಟುವದಕ್ಕಿಂತ ಮುನ್ನೂರು ವರ್ಷಗಳ ಮೊದಲೇ ಮುಂತಿಳಿಸಲ್ಪಟ್ಟಿತು (1 ಅರಸುಗಳು 13:2; 2 ಅರಸುಗಳು 23:15, 16). ಹಾಗೆಯೇ ಪರ್ಶಿಯಾದ ಕೋರೇಷಿನ ಆಳಿಕೆಯ ಬಗ್ಗೆ ತಿಳಿಸಲ್ಪಟ್ಟಿತು (ಯೆಶಾಯ 44:28; 45:1). ಯೆರೂಸಲೇಮನ್ನು ವಶಪಡಿಸಿ ಕೊಳ್ಳುವಲ್ಲಿ ಸನ್ಹೇರಿಬನ ಅಶಕ್ತತೆಯ ಆಶ್ಚರ್ಯಕರವಾದ ಕಥೆಯೂ ಸಹ ನಮೂದಿಸಲು ಯೋಗ್ಯವಾಗಿದೆ (2 ಅರಸುಗಳು 19:32-35 ನೋಡಿರಿ).
>
> *ಕ್ರಿಸ್ತನ ಪ್ರವಾದನೆಗಳು:* ಹಳೇ ಒಡಂಬಡಿಕೆಯಲ್ಲಿಯ ಸುಮಾರು ಎಂಟುನೂರು ಪ್ರವಾದನೆಗಳಲ್ಲಿ ಮುನ್ನೂರಕ್ಕಿಂತಲೂ ಹೆಚ್ಚು, ಯೇಸು ಕ್ರಿಸ್ತನ ವ್ಯಕ್ತಿತ್ವದಲ್ಲಿ ಕೇಂದ್ರೀಕರಿಸಲ್ಪಟ್ಟಿವೆ. ಈ ಪುಸ್ತಕದ 4ನೆಯ ಅಧ್ಯಾಯದಲ್ಲಿ ಅನೇಕ ಪ್ರವಾದನೆಗಳೂ ಅವುಗಳ ನೆರವೇರಿಕೆಯೂ ಪಟ್ಟಿ ಮಾಡಲ್ಪಟ್ಟಿದೆ.

ಬೈಬಲ್ ವಿವಿಧತೆಯು ಅದು ದೇವರಿಂದ ಬಂದದ್ದೆಂದು ರುಜುವಾತು ಮಾಡುತ್ತದೆ. ಆ ವಿವಿಧತೆಯಲ್ಲಿ ನಾವು ಐಕ್ಯತೆಯನ್ನು ಕಂಡುಕೊಳ್ಳುವದರಿಂದ ಇದು ವಿಶೇಷವಾಗಿ ಸತ್ಯವಾದದ್ದಾಗಿದೆ. ಎಲ್ಲಾ ಪುಸ್ತಕಗಳ ಈ ಪುಸ್ತಕದಲ್ಲಿ ಮಾನವ ಜೀವನದ ಮತ್ತು ಆತ್ಮಿಕತೆಯ ಯಾವುದೇ ಭಾಗವು ಅಲಕ್ಷಿಸಲ್ಪಟ್ಟಿರುವದಿಲ್ಲ. ಇದು ತತ್ವದಲ್ಲಿಯೂ ದೈವಿಕ ನಡೆಸುವಿಕೆಯಲ್ಲಿಯೂ ಮಾನವ ಅಸ್ತಿತ್ವದ ಎಲ್ಲಾ ಹಂತಗಳನ್ನು ಸ್ಪರ್ಷಿಸುತ್ತದೆ.

## ಅದರ ಐಕ್ಯತೆ

ಬೈಬಲು ಒಂದು ಪುಸ್ತಕವಾಗಿದ್ದರೆ, ಒಬ್ಬನೇ ಗ್ರಂಥ ಕರ್ತನಾಗಿದ್ದರೆ ಅದರ ಎಲ್ಲಾ ಭಾಗಗಳೂ ಸಾಮರಸ್ಯದಲ್ಲಿರುತ್ತಿದ್ದವೆಂದು ನಾವು ಸಹಜವಾಗಿ ನಿರೀಕ್ಷಿಸುತ್ತಿದ್ದೆವು. ಅದು ಒಂದೇ ವಿಷಯದ ಮೇಲೆ ನಲ್ವತ್ತಕ್ಕಿಂತಲೂ ಹೆಚ್ಚು ಜನರಿಂದ ಬಂದ ಒಂದೇ ಪುಸ್ತಕವಾಗಿದ್ದರೆ ಸಂಪೂರ್ಣ ಒಪ್ಪಂದದ ಅವಕಾಶ ಅಲ್ಲವಾಗಿರುವುದು. ಆದುದರಿಂದ ನಲ್ವತ್ತಕ್ಕಿಂತ ಹೆಚ್ಚು ಜನರು ಅಷ್ಟು ಭಿನ್ನವಾದ ವಿಷಯಗಳ ಮೇಲೆ ಅರವತ್ತಾರು ಪುಸ್ತಕಗಳನ್ನು ಬರೆದರೆಂದು ಹಾಗೂ ಅವರ ಮಾತುಗಳು ಪರಿಪೂರ್ಣವಾದ ಒಪ್ಪಂದದಲ್ಲಿರುವವೆಂದು ಹೇಳುವುದು ಮನಸ್ಸನ್ನು ಸ್ತಬ್ಧಗೊಳಿಸುತ್ತದೆ. "ಅವರು ಅಂಥ ಗಣನೀಯವಾದ ಕಾರ್ಯಸಾಧಿಸಲು ಬಹಳ ನಿಕಟವಾಗಿಯೂ ಜಾಗರೂಕತೆಯಿಂದಲೂ ಕೆಲಸಮಾಡಿರಬಹುದು" ಎಂದು ಒಬ್ಬನು ಹೇಳಬಹುದು. ಅವರು ಹಾಗೆ ಮಾಡಿರುವದಿಲ್ಲವೆಂದು ಚರಿತ್ರೆಯು ಸಿದ್ಧಪಡಿಸಿ ತೋರಿಸುತ್ತದೆ. ಅದರಲ್ಲಿ ಹೆಚ್ಚಾದವರು ಒಬ್ಬರಿಗೊಬ್ಬರು ಎಂದೂ ನೋಡಿರಲಿಲ್ಲ. ಶತಮಾನಗಳಿಂದ ಅವರು ಬೇರೆಯಾಗಿದ್ದರು. ಅವರ ಬರಹ ಗಳನ್ನು ಯೋಚಿಸಲು ಇಲ್ಲವೇ ತಿದ್ದುಪಡಿ ಮಾಡಲು ಅವರಿಗೆ ಅವಕಾಶವಿರಲಿಲ್ಲ. ಸಾಮರಸ್ಯವು ಇತರ ಬೇರೆ ರೀತಿಯಲ್ಲಿ ವಿವರಿಸಲ್ಪಡತಕ್ಕದ್ದು.

ಈ ಸಂಗತಿಯು ಅಲ್ಲಗಳೆಯಲ್ಪಡಲಿಕ್ಕಾಗದು: ಎಲ್ಲಾ ಭಾಗಗಳ ಮತ್ತು ಪರಿಶುದ್ಧ ಬರಹಗಳ ಬರಹಗಾರರ ಮಧ್ಯದಲ್ಲಿ ಸಂಪೂರ್ಣ ಐಕ್ಯತೆ ಇರುತ್ತದೆ. ಜನರು ಪ್ರಯತ್ನಿಸಿದ್ದಾರೆ, ಆದರೆ ಬರಹಗಳಲ್ಲಿ ಒಂದೇ ಒಂದು ಭಿನ್ನಾಭಿಪ್ರಾಯವನ್ನು ಕಂಡುಕೊಳ್ಳಲಿಲ್ಲ, ವಿಫಲವಾಗಿದ್ದಾರೆ. ಬೈಬಲ್ ಒಂದೇ ಪುಸ್ತಕವಾಗಿರುತ್ತದೆ ಏಕೀಕೃತ ಸಂಪೂರ್ಣತೆಯಾಗಿದೆ.

ಉದಾಹರಣೆಯಾಗಿ, ಅದರ ಎರಡು ಭಾಗಗಳನ್ನು, ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಗಳನ್ನು ಯೋಚಿಸಿರಿ. ಅವು ಎರಡು ಪ್ರತ್ಯೇಕವಾದ ಜನರ ಗುಂಪುಗಳಿಗಾಗಿ ಎರಡು ಪ್ರತ್ಯೇಕ ಒಡಂಬಡಿಕೆಗಳನ್ನು (ಇಲ್ಲವೇ ಒಪ್ಪಂದ ಗಳನ್ನು) ಪ್ರತಿನಿಧೀಕರಿಸಿದರೂ ಅವು ಸುಂದರವಾಗಿ ಒಟ್ಟಾಗಿ ಕಟ್ಟಲ್ಪಟ್ಟಿವೆ. "ಹಳೇ ಒಡಂಬಡಿಕೆಯೂ ಹೊಸ ಒಡಂಬಡಿಕೆಯನ್ನು ಅಡಗಿಸಿಟ್ಟುಕೊಂಡದ್ದಾಗಿದೆ ಹಾಗೂ ಹೊಸ ಒಡಂಬಡಿಕೆಯು ಹಳೇ ಒಡಂಬಡಿಕೆಯನ್ನು ಪ್ರಕಟಿಸಿದ್ದಾಗಿದೆ" ಎಂದು ಯಾರೋ ಹೇಳಿದ್ದಾರೆ. ಹಳೇ ಒಡಂಬಡಿಕೆಯು *ಬೇರು*, ಹಾಗೂ ಹೊಸ ಒಡಂಬಡಿಕೆಯು *ಹಣ್ಣು* ಆಗಿದೆ.

ಬೈಬಲಿನ *ಮೊದಲನೆಯ* ಪುಸ್ತಕದ ಮತ್ತು ಬೈಬಲಿನ *ಕೊನೆಯ* ಪುಸ್ತಕದ ಮಧ್ಯದಲ್ಲಿಯ ಕೆಲವು ವ್ಯತ್ಯಾಸಗಳನ್ನು ಗಮನಿಸೋಣ:

(1) ಆದಿಕಾಂಡವು ಭೂಮಿ ಆಕಾಶಗಳ ಸೃಷ್ಟಿಯೊಂದಿಗೆ ಪ್ರಾರಂಭ ವಾಗುತ್ತದೆ. ಪ್ರಕಟನೆಯು ನೂತನ ಭೂಮ್ಯಾಕಾಶಗಳ ಸೃಷ್ಟಿಯೊಂದಿಗೆ

ಅಂತ್ಯಗೊಳ್ಳುತ್ತದೆ.

(2) ಆದಿಕಾಂಡವು ಬೆಳಕಿನ, ಸೂರ್ಯ ಮತ್ತು ಚಂದ್ರನ ಸೃಷ್ಟಿಯ ಬಗ್ಗೆ ಹೇಳುತ್ತದೆ; ಪ್ರಕಟನೆಯು ಮನುಷ್ಯನಿಗೆ ಅವುಗಳ ಸೇವೆಯ ಅಂತ್ಯದ ಬಗ್ಗೆ ಹೇಳುತ್ತದೆ - ಯಾಕಂದರೆ ನೂತನ ಪಟ್ಟಣಕ್ಕೆ (ಪರಲೋಕಕ್ಕೆ) ದೇವರು ಮತ್ತು ಕುರಿಮರಿಯಾದಾತನು (ಯೇಸುವು) ಬೆಳಕಾಗಿದ್ದರೆ.

(3) ಆದಿಕಾಂಡದಲ್ಲಿ ಮನುಷ್ಯನು ಸೈತಾನನನ್ನು ಸಂದರ್ಶಿಸುತ್ತಾನೆ ಮತ್ತು ಸೋಲನ್ನು ಮನುಷ್ಯನು ಅನುಭವಿಸುತ್ತಾನೆ. ಪ್ರಕಟನೆಯಲ್ಲಿ ಇನ್ನೊಂದು ಯುದ್ಧವು ನಡೆಯಿತು; ಈ ಸಮಯದಲ್ಲಿ ಸೈತಾನನು ಸೋತನು ಮತ್ತು ಯೇಸುವಿನ ಮುಖಾಂತರ ಮಾನವನು ಜಯಶಾಲಿಯಾದನು.

(4) ಆದಿಕಾಂಡದಲ್ಲಿ ಮೊದಲು ಪುರುಷನೂ ಸ್ತ್ರೀಯೂ ಜೀವಿಸಿದ ಏದೆನ್ ತೋಟದಿಂದ ಹೊರಗೆ ಹಾಕಲ್ಪಟ್ಟರು; ಪ್ರಕಟನೆಯಲ್ಲಿ ಮನುಷ್ಯನು ದೇವರೊಂದಿಗೆ ಪುನಃ ಸ್ಥಾಪಿಸಲ್ಪಟ್ಟಿದ್ದಾನೆ.

(5) ಅಂತಿಮವಾಗಿ, ಆದಿಕಾಂಡವು - ಪಾಪವು ಅಮರತ್ವವಾಗಿ ಮಾಡಲ್ಪಡದಂತೆ - ಜೀವವೃಕ್ಷವನ್ನು ತಿನ್ನುವ ಅವಕಾಶವನ್ನು ಹೇಗೆ ಮನುಷ್ಯನು ಕಳೆದುಕೊಂಡನೆಂದು ಹೇಳುತ್ತದೆ. ಪ್ರಕಟನೆಯಲ್ಲಿ ಪಾಪವು ನಾಶ ಮಾಡಲ್ಪಡುವದರೊಂದಿಗೆ ಮನುಷ್ಯನು ಸದಾಕಾಲವೂ ಜೀವಿಸಲಿಕ್ಕಾಗುವಂತೆ ಜೀವವೃಕ್ಷದ ಫಲವನ್ನು ತಿನ್ನಲು ಆಹ್ವಾನಿಸಲ್ಪಟ್ಟಿದ್ದಾನೆ.

ಹೌದು, ಪುಸ್ತಕದ ಐಕ್ಯತೆಯು ಆಶ್ಚರ್ಯಕರವಾದದ್ದಾಗಿದೆ. ಆ ಐಕ್ಯತೆಯನ್ನು ನಾವು ನೋಡುವಾಗ ನಾವು ಆಶ್ಚರ್ಯ ಭರಿತರಾಗಿ ನಿಂತು ಕೊಳ್ಳುತ್ತೇವೆ. ಮತ್ತು ದೇವರು ಅದರ ಕರ್ತನು ಎಂದು ನಿರ್ಧರಿಸುತ್ತೇವೆ.

## ಅದರ ಮುಖ್ಯ ಪ್ರಸ್ತಾಪ

ಬೈಬಲಿನ ಐಕ್ಯತೆಯು ಅದರಲ್ಲಿಯ ವಿಷಯಗಳು ಸಂಗ್ರಹಿಸಲ್ಪಡುವದರ ಮೇಲ್ವಿಚಾರಣೆಯನ್ನು *ಒಂದೇ ಮನಸ್ಸು* ಮಾಡಿದ್ದರಿಂದ ಸಾಧ್ಯವಾಗುತ್ತದೆ. ಈ ಸಾಹಿತ್ಯ ಚಟುವಟಿಕೆಯ ಅವಧಿಯಲ್ಲಿ ಹದಿನೈದಕ್ಕಿಂತಲೂ ಹೆಚ್ಚು ಶತಮಾನಗಳ ಕಾಲದ ವರೆಗೆ ಯಾವುದೇ ಒಬ್ಬನೇ ಮಾನವ ಗ್ರಂಥಕರ್ತನು ಜೀವಿಸದಿದ್ದುದರಿಂದ, ಒಬ್ಬನೇ ದೇವರನ್ನು ಮಾತ್ರವೇ ಪುಸ್ತಕದ ಗ್ರಂಥಕರ್ತನೆಂದು ಯೋಗ್ಯವಾಗಿ ಕರೆಯಬಹುದು. "ಮನುಷ್ಯರು ಪವಿತ್ರಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೆ ಮಾತಾಡಿದರು" (2 ಪೇತ್ರ 1:21ಬಿ) ಎಂದು ಹೇಳಿದಾಗ ಪೇತ್ರನ ಮನಸ್ಸಿನಲ್ಲಿ ಇದು ಇತ್ತು.

ಐಕ್ಯತೆಯಿರಲು ಒಬ್ಬ ರಚನಕಾರನ ಅವಶ್ಯಕತೆ ಯಿರುವುದು ಅಷ್ಟೇ ಅಲ್ಲ ಎಲ್ಲವನ್ನೂ ಒಂದು ಗೂಡಿಸಲು ಒಂದು ಮುಖ್ಯ *ಪ್ರಸ್ತಾಪವೂ* ಅಗತ್ಯವಾಗಿರುವುದು.

ಈ ಪುಸ್ತಕದ ಮುಖ್ಯ ಪ್ರಸ್ತಾಪವು ಯಾವುದು? ಮುಖ್ಯ ಪ್ರಸ್ತಾಪಕ್ಕೆ ಮಾನವ ಕುಲವು ಕಾರಣವನ್ನು ಒದಗಿಸಿದರೂ "ಮಾನವ ಕುಲದ ಕಥೆಯು" ಎಂಬುದಲ್ಲ. ಮುಖ್ಯ ಪ್ರಸ್ತಾಪವನ್ನು ವಿವರಿಸುವದರಲ್ಲಿ ಯೆಹೂದ್ಯರು ಪ್ರಾಮುಖ್ಯವಾಗಿ ಕಂಡರೂ ಇದು "ಯೆಹೂದ್ಯರ ಕಥೆಯಾಗಿರುವದಿಲ್ಲ." ಪುಸ್ತಕದ ಮುಖ್ಯ ಪ್ರಸ್ತಾಪವು "ಒಬ್ಬ ಮನುಷ್ಯನ ಕಥೆ," *ಒಬ್ಬ ಮನುಷ್ಯ* - ಯೇಸು ಕ್ರಿಸ್ತ.

ಬರಲಿಕ್ಕಿದ್ದ ಒಬ್ಬಾತನ ಸುತ್ತಲೂ ಬೈಬಲು ಸುತ್ತುತ್ತದೆ ಎಂದು ಚೆನ್ನಾಗಿ ಹೇಳಲ್ಪಟ್ಟಿದೆ. ಹಳೇ ಒಡಂಬಡಿಕೆಯ ಸಂದೇಶವು, *"ಆತನು ಬರಲಿಕ್ಕಿದ್ದಾನೆ"* ಎಂಬುದು. ಸುವಾರ್ತೆಗಳ ವಿವರಣೆಯ ಸಂದೇಶವು "ಆತನು ಇಲ್ಲಿ ಇದ್ದಾನೆ" ಎಂಬುದು. ಹೊಸ ಒಡಂಬಡಿಕೆಯ ಉಳಿದ ಭಾಗದ ಸಂದೇಶವು "ಆತನು *ಪುನಃ ಬರಲಿಕ್ಕಿದ್ದಾನೆ*" ಎಂಬುದು.

ಬೈಬಲಿನ ಪ್ರತಿಯೊಂದು ಪುಸ್ತಕದ ಆಸಕ್ತಿಯುಳ್ಳ ಅಧ್ಯಯನವನ್ನು ಅದು ಯೇಸುವನ್ನು ಹೇಗೆ ಪ್ರಕಟಿಸುವದೆಂಬ ದೃಷ್ಟಿಕೋನದಿಂದ ಮಾಡಬಹುದು. "ಆದಿಕಾಂಡದಲ್ಲಿ ಯೇಸು," "ವಿಮೋಚನಾಕಾಂಡದಲ್ಲಿ ಯೇಸು," "ಯಾಜಕಕಾಂಡದಲ್ಲಿ ಯೇಸು." ಇತ್ಯಾದಿಯಾಗಿ ಪುಸ್ತಕಗಳನ್ನು ಬರೆಯ ಬಹುದು, ಉದಾಹರಣೆಯಾಗಿ:

ಆದಿಕಾಂಡ 1ರಲ್ಲಿ ಯೇಸು, ಯಾಕಂದರೆ "ಆತನ ಮೂಲಕವಾಗಿ ಸಮಸ್ತವೂ ಉಂಟಾಯಿತು" (ಯೋಹಾನ 1:3ಎ).

ಆದಿಕಾಂಡ 3ರಲ್ಲಿ ಯೇಸು, ಯಾಕಂದರೆ ಮುಂದೆ ಆತನು "ಈಕೆಯ (ಸ್ತ್ರೀಯ) ಸಂತಾನದವನಾಗಿರುವನು" ಮತ್ತು ಸೈತಾನನ ತಲೆಯನ್ನು ಜಜ್ಜುವನು (ಆದಿಕಾಂಡ 3:15; ಗಲಾತ್ಯ 3:16).

ಆದಿಕಾಂಡ 4ರಲ್ಲಿ ಯೇಸು, ಹೇಬೆಲನ ಕುರಿಮರಿಯ ಯಜ್ಞದಲ್ಲಿ ಮುನ್ಸೂಚಿ ಸಲ್ಪಟ್ಟಂತೆ (ಇಬ್ರಿಯ 12:24 ನೋಡಿರಿ).

ಆದಿಕಾಂಡ 6ರಲ್ಲಿಯೂ ಯೇಸು ಇದ್ದಾನೆ, ಯಾಕಂದರೆ ನಾವೆಯಲ್ಲಿಯ ರಕ್ಷಣೆಯು ಆತನಲ್ಲಿ ಮಾತ್ರ ಆತನ ಮೂಲಕವಾಗಿ ಕಂಡು ಕೊಳ್ಳುವ ರಕ್ಷಣೆಗೆ ಸಂಕೇತವಾಗಿರುವುದು. ಹೀಗೆ ನಾವು ಅಧ್ಯಯನ ಮಾಡುತ್ತ ಹೋಗಬಹುದು.

ಹೀಗೆ ಈ ಮುಖ್ಯ ಪ್ರಸ್ತಾಪವು ವಾಕ್ಯಕ್ಕೆ ಅಂದರೆ ಯೇಸುಕ್ರಿಸ್ತನಿಗೆ ಅದರ ಅದ್ಭುತ ಐಕ್ಯತೆಯನ್ನು ಕೊಡುತ್ತದೆ. ಯೇಸು ಬರಲಿಕ್ಕಿದ್ದ ವಿಮೋಚಕನು, ಬಂದಂಥ ರಕ್ಷಕನು, ಬರಲಿಕ್ಕಿದ್ದ ಅರಸನು - ಅರವತ್ತಾರು ಪುಸ್ತಕಗಳ ವಾಕ್ಯಗಳನ್ನು ಒಂದು ಗೂಡಿಸಲ್ಪಟ್ಟ ದಾಖಲೆಯಲ್ಲಿ ಬಂಧಿಸಿರುತ್ತದೆ.

# ಅದರ ಪ್ರಭಾವ

ಭೂಲೋಕದ ಗ್ರಂಥಾಲಯಗಳಲ್ಲಿಯ ಎಲ್ಲಾ ಬರಹಗಳಿಗಿಂತ ಹೆಚ್ಚಾಗಿ ಬೈಬಲು ಮಾನವ ಜನಾಂಗದ ಮೇಲೆ ಪ್ರಬಲವಾದ ಪ್ರಭಾವ ಬೀರಿದೆ. ಅದು ಚರಿತ್ರೆಯ ಸರಪಣಿಯನ್ನು ಬದಲಾಯಿಸಿದೆ, ಸಾಮ್ರಾಜ್ಯಗಳನ್ನು ಕಟ್ಟಿದೆ. ಜಯಶಾಲಿಗಳನ್ನೂ ಅರಸರನ್ನೂ ನೆಲಕ್ಕೆ ದೊಬ್ಬಿದೆ. ಅದರ ಬೋಧನೆಗೆ ವಿಧೇಯರಾದವರಿಗೆ ಆಶೀರ್ವಾದವನ್ನೂ ಜಯವನ್ನೂ ತಂದಿದೆ. ಅದಕ್ಕೆ ವಿರುದ್ಧವಾಗಿ ಹೋರಾಡಿದವರಿಗೆ ಮರಣವನ್ನೂ ನಾಶವನ್ನೂ ತಂದಿದೆ. ಬೈಬಲಿನ ಬಲಗಳು ಅನೇಕವೂ ವಿವಿಧ ವಾದವುಗಳೂ ಆಗಿವೆ. ಆದರೆ ಜನರ ಜೀವನಗಳನ್ನೂ ಬದಲಾಯಿಸುವ ಹಾಗೂ ಅವರನ್ನು ಮೇಲಕ್ಕೆ ತರುವ ಅದರ ಶಕ್ತಿಯನ್ನು ವಿಶೇಷವಾಗಿ ಗಮನಿಸೋಣ.

ವರ್ಷಗಳ ಹಿಂದೆ, ದ್ವೀಪಗಳ ಒಂದು ಸಮೂಹದಲ್ಲಿ ವಾಸಿಸುವ ಒಂದು ಕಾಡು ಜನಾಂಗವಿತ್ತು. ಈ ಕಾಡು ಜನರು ಬೆತ್ತಲೆಯಾಗಿ ಯುದ್ಧಕ್ಕೆ ಹೋಗಿ ಖಾಲಿಯಾದ ತಲೆಬರುಡೆಯಲ್ಲಿ ಸತ್ತ ವೈರಿಯ ರಕ್ತವನ್ನು ಹಾಕಿ ಅದನ್ನು ಕುಡಿದು ಜಯವನ್ನು ಆಚರಿಸಿದ್ದರ ಸ್ಪಷ್ಟ ಚಿತ್ರವು ಜೂಲಿಯಸ್ ಸೀಜರನ ಸೈನ್ಯದ ದಾಖಲೆಗಳಲ್ಲಿ ಇರುವುದು. ಧ್ರುಯಿಡರ (Druids) ಬಲಿಪೀಠಗಳಲ್ಲಿ ಮಾನವ ಯಜ್ಞಗಳು ಸಾಮಾನ್ಯವಾಗಿ ಇದ್ದವು. ಆಗ ಒಂದು ಸಂಗತಿ ಸಂಭವಿಸಿತು. ಮಿಶನರಿಗಳು ಆ ಕಾಡು ಜನಾಂಗದವರಿಗೆ ದೇವರ ವಾಕ್ಯವನ್ನು ತೆಗೆದು ಕೊಂಡು ಹೋಗಲು ತಮ್ಮ ಜೀವಿತಗಳನ್ನು ಗಂಡಾಂತರಕ್ಕೊಳ ಪಡಿಸಿದರು. ಸ್ಥಳೀಯರು ದೇವರ ವಾಕ್ಯವನ್ನು ಸ್ವೀಕರಿಸಿದರು. ಸ್ವಲ್ಪ ಸಮಯದ ನಂತರ ಈ ಜನರು ದೊಡ್ಡ ಅಲೇಕ್ಸಾಂಡರನ ಸಾಮ್ರಾಜ್ಯಕ್ಕಿಂತಲೂ ದೊಡ್ಡದಾದ ಸಾಮ್ರಾಜ್ಯದ ಆಡಳಿತೆಗಾರರಾದರು - ಯಾಕಂದರೆ ಈ ದ್ವೀಪಗಳು ಬ್ರಿಟೀಶ ದ್ವೀಪಗಳಾಗಿದ್ದವು.

ಬೈಬಲು ಹೋದಲೆಲ್ಲಾ, ಮಾನವ ಕುಲವು ಹೆಚ್ಚು ಉತ್ತಮವಾಗಿ ಮಾಡಲ್ಪಟ್ಟಿದೆ. ಬದಲಾದ ಜೀವಿತಗಳ ಕಥೆಗಳೊಂದಿಗೆ ಬೈಬಲು ತಾನೇ ತುಂಬಿಕೊಂಡಿರುತ್ತದೆ. ಅಪ್ರಮಾಣಿಕನಾದ ಸುಂಕವಸೂಲಿ ಮಾಡುವವನು ಪ್ರಾಮಾಣಿಕವಾದ ಉದಾರಿಯಾದನು (ಲೂಕ 19:1-9). ಕೊಲೆಗಾರನೂ ದೇವದೂಷಕನೂ ಆದವನು ದೊಡ್ಡ ಅಪೊಸ್ತಲನಾಗಿ ಬೆಳೆದನು (ಅಪೊಸ್ತಲರ ಕೃತ್ಯಗಳು 7:58; 8:1, 3; 22:4-21). ಅನೇಕ ಉದಾಹರಣೆಗಳು ಕೊಡಲ್ಪಟ್ಟಿವೆ.

ಇತರರಿಗೆ ಬೈಬಲ್ ವಾಕ್ಯದ ಬಲದ ಮುಖಾಂತರ ದೇವರು ಏನು ಮಾಡಿದ್ದಾನೋ ಅದನ್ನು ಆತನು ನಮ್ಮ ಜೀವನದಲ್ಲಿಯೂ ಮಾಡಬಲ್ಲನು. ನೀವು ಆತನ ವಾಕ್ಯವನ್ನು ಓದಿ ಅದರಂತೆ ಜೀವಿಸಿದರೆ, ಆತನು ತನ್ನ ಕುಮಾರನ - ಯೇಸು ಕ್ರಿಸ್ತನ ಸಾರೂಪ್ಯದಂತೆ ನಿಮ್ಮನ್ನು ಬದಲಾಯಿಸುವನು.

## ಅದರ ಆದರಣೆ

ಆದರಣೆ ಕೊಡುವದರಲ್ಲಿ ಮನುಷ್ಯನಿಗಾಗಿ ಸೇವೆಯ ಇತರ ಪ್ರತಿಯೊಂದು ಕ್ಷೇತ್ರದಲ್ಲಿಯಂತೆ, ಬೈಬಲು ಅದ್ವಿತೀಯವಾದದ್ದೂ ಅಪೂರ್ವವಾದದ್ದೂ ಸಮಾಂತರತೆಯಿಲ್ಲದ್ದೂ ಆಗಿದೆ. ಮನುಷ್ಯನು ಸಮಾಧಿಯನ್ನು ದಾಟಿ ನೋಡಲು ಮನುಷ್ಯನನ್ನು ಶಕ್ತನನ್ನಾಗಿ ಮಾಡುವ ನಂಬಲರ್ಹವಾದ ಯಾವುದೇ ಇತರ ಬೆಳಕು ಎಂದೂ ಇಲ್ಲ ಮತ್ತು ಎಂದೂ ಇರಲಾರದು. ಪರಿಶುದ್ಧ ಬರಹಗಳು ವಾಚಕನಿಗೆ ಅವನ ಸ್ವಂತ ನಿತ್ಯತ್ವಕ್ಕಾಗಿ ನಿರೀಕ್ಷೆಯನ್ನೂ ಭರವಸೆಯನ್ನೂ ಕೊಡುತ್ತವೆ ಮತ್ತು ಪ್ರೀತಿಯುಳ್ಳವನು ಮರಣದಿಂದ ತೆಗೆದು ಕೊಳ್ಳಲ್ಪಡುವಾಗ ಅವನ ಹೃದಯಕ್ಕೆ ಆದರಣೆಯನ್ನು ತರುವುದು.

ಮರಣವು ಒಂದು ವೈರಿಯಾಗಿದೆ. ಮನುಷ್ಯನು ರಚಿಸುವ ಎಲ್ಲಾ ಪದ್ಯವೂ ತತ್ವಜ್ಞಾನವೂ ಎಂದೂ ಆ ಕಠೋರವಾದ ಹಾಗೂ ದುಃಖಕರವಾದ ಸಂಗತಿಯನ್ನು ಎಂದೂ ಬದಲಾಯಿಸಲಾರದು. ಅದು ಕ್ರೈಸ್ತನಿಗೆ ಮುಂದಾಗಿಯೇ ತೀರ್ಮಾನಿಸಲ್ಪಟ್ಟ ಸೋಲುಳ್ಳ ವೈರಿ ಅದಾಗಿದೆ. ಕ್ರೈಸ್ತನ ಬಲದಿಂದ, ಮರಣವು ವಿಮೋಚನೆ ಹೊಂದಿದವನನ್ನು ಕರ್ತನ ಸನ್ನಿಧಿಯಲ್ಲಿ ಪರಿಚಯಿಸುವ ದ್ವಾರಪಾಲಕನಂತೆ ಸೇವೆ ಮಾಡಲು ಒತ್ತಾಯಿಸಲ್ಪಟ್ಟಿದೆ. ಆದಾಗ್ಯೂ ಅದು *ವೈರಿಯಾಗಿ* ಉಳಿದುಕೊಂಡಿದೆ. ಈ ವೈರಿಯು ಅರಮನೆಗಳನ್ನೂ ಹಾಗೆಯೇ ಗುಡಿಸಲುಗಳನ್ನೂ ಪ್ರವೇಶಿಸುತ್ತದೆ. ಅದು ಗಂಡನನ್ನು ಅವನ ಹೆಂಡತಿಯಿಂದ ಅಗಲಿಸುತ್ತದೆ. ಅದು ಚಿಕ್ಕ ಮಗುವನ್ನು ತಾಯಿಯ ಮಡಿಲಿನಿಂದ ಕಿತ್ತುಕೊಳ್ಳುತ್ತದೆ. ಸಿಹಿಯಾದ ಆನಂದವನ್ನು ಅಂಧಕಾರದ ನಿರಾಶೆಯನ್ನಾಗಿ ಮಾರ್ಪಡಿಸುತ್ತದೆ.

ಪ್ರೀತಿಯುಳ್ಳ ಒಬ್ಬನು ಮರಣ ಹೊಂದುವಾಗ, "ನಮಗೆ ಆದರಣೆ ಕೊಡುವ ಮಾತುಗಳನ್ನು ಹೇಳಿರಿ" ಎಂದು ಜನರು ಕೇಳಿಕೊಳ್ಳುವರು. ಆ ಮಾತುಗಳು ಎಲ್ಲಿಂದ ಬರುವವು? ಸಾಹಿತ್ಯದಿಂದಲೋ? ಪದ್ಯದಿಂದಲೋ? ತತ್ವಜ್ಞಾನದಿಂದಲೋ? ನಿಮ್ಮ ಎಲ್ಲಾ ದೊಡ್ಡ ಪುಸ್ತಕಗಳನ್ನು ಹುಡುಕಿರಿ, ನಿಮ್ಮ ಮನೆಯಲ್ಲಿ ಮರಣ ಬರುವಾಗ ತೀರದಂಥ ಆದರಣೆ ಮತ್ತು ನಿರೀಕ್ಷೆಯನ್ನು ತರುವ ಒಂದು ವಾಕ್ಯ ವಾದರೂ ಮೃತ ಪ್ರಾಯನಾದ ಮನುಷ್ಯನಿಂದ ಬರೆಯಲ್ಪಟ್ಟದ್ದನ್ನು ನೀವು ಕಂಡು ಕೊಳ್ಳುವದಿಲ್ಲ. ಒಂದು ಮೂಲ ಮಾತ್ರವೇ ನಿಮಗೆ ಬಲವನ್ನೂ ಆದರಣೆಯನ್ನೂ ಕೊಡಬಲ್ಲದು: ಅದು ಬೈಬಲ್. ದೇವರ ಪುಸ್ತಕದಿಂದ ನೀವು ಇಂಥ ಮಾತು ಗಳನ್ನು ಓದಬಹುದು:

> ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆದರೂ ನೀನು ನನ್ನ ಸಂಗಡ ವಿರುವುದರಿಂದ ಕೇಡಿಗೆ ಹೆದರೆನು; ನಿನ್ನ ದೊಣ್ಣೆಯೂ ನಿನ್ನ ಕೋಲೂ ನನ್ನನ್ನು ಆದರಿಸುತ್ತವೆ (ಕೀರ್ತನೆ 23:4).

ಆದರೆ ಈಗ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆ ಹೋದವರಲ್ಲಿ ಪ್ರಥಮ ಫಲವಾಗಿದ್ದಾನೆ.

... ಕ್ಷಯವಾಗುವ ಈ ದೇಹವು ಅಕ್ಷಯತೆಯನ್ನು ಧರಿಸಿಕೊಂಡಾಗ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಂಡಾಗ ಬರೆದಿರುವ ಮಾತು ನೆರವೇರುವದು. "ಆ ಮಾತು ಏನಂದರೆ, ಜಯದಲ್ಲಿ ಮರಣವು ನುಂಗಿಯೇ ಹೋಯಿತು" (1 ಕೊರಿಂಥ 15:20-54).

ಆಮೇಲೆ ಜೀವದಿಂದುಳಿದಿರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ಅವರೊಂದಿಗೆ ಮೇಘವಾಹನರಾಗಿ ಫಕ್ಕನೆ ಒಯ್ಯಲ್ಪಡುವೆವು; ಹೀಗಾಗಿ ನಾವು ಸದಾಕಾಲವೂ ಕರ್ತನ ಜೊತೆಯಲ್ಲಿರುವೆವು. ಆದಕಾರಣ ಈ ಮಾತುಗಳಿಂದ ಒಬ್ಬರನೊಬ್ಬರು ಸಂತೈಸಿರಿ (1 ಥೆಸಲೊನೀಕ 4:17, 18).

ಅವರ ಕಣ್ಣೀರನೆಲ್ಲಾ ಒರಸಿಬಿಡುವನು. ಇನ್ನು ಮರಣವಿರುವದಿಲ್ಲ. ಇನ್ನು ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವದಿಲ್ಲ; ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು (ಪ್ರಕಟನೆ 21:4).

ಯುಗಗಳಲ್ಲಿ ಈ ಮಾತುಗಳು - ಹಾಗೂ ಬೈಬಲಿನಲ್ಲಿಯ ಇದರಂತಿರುವ ಇತರ ಮಾತುಗಳು - ಕಣ್ಣೀರುಗಳನ್ನು ಒರೆಸಿವೆ, ನಿರೀಕ್ಷೆಯನ್ನು ಕೊಟ್ಟಿವೆ ಮತ್ತು ಅಕ್ಷರಶಃವಾಗಿ ಮಿಲಿಯನ್‌ಗಟ್ಟಲೆ ಜನರಿಗೆ ಆದರಣೆ ತಂದಿವೆ. ನಿಜವಾಗಿಯೂ ಇದು ಆಶ್ಚರ್ಯಕರವಾದ ಪುಸ್ತಕವಾಗಿದೆ.

## ಮುಕ್ತಾಯ

ಬೈಬಲಿನ ಏಳು ಆಶ್ಚರ್ಯಗಳನ್ನು ನಾವು ಯೋಚಿಸಿದ್ದೇವೆ: ಅದು ಹಳೆಯದು, ಆದರೆ ಯಾವಾಗಲೂ ಹೊಸದಾಗಿಯೇ ಇದೆ. ಅದು ವಿವಿಧತೆಯುಳ್ಳದ್ದು, ಆದರೆ ಪರಿಪೂರ್ಣ ಐಕ್ಯತೆಯೊಂದಿಗೆ - ಯೇಸುವಿನಲ್ಲಿ ಕೇಂದ್ರೀಕರಿಸಿದ ಐಕ್ಯತೆಯಲ್ಲಿ ಇದೆ! ಅದು ತನ್ನ ಪ್ರಭಾವ ಬೀರುವಲ್ಲಿ ಬಲವಾದದ್ದಾಗಿದೆ. ಆದರೆ ಅದರ ಆದರಣೆಯಲ್ಲಿ ಮೃದುವಾದದ್ದಾಗಿದೆ! ಬೈಬಲು ದೈವ ಪ್ರೇರಿತ ದೇವರ ವಾಕ್ಯವಾಗಿದೆ; ಇದಕ್ಕಿಂತ ಬೇರೆ ಸಾಕಷ್ಟಾದ ವಿವರಣೆಯಿಲ್ಲ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. 2 ತಿಮೊಥೆ 3:16ರಲ್ಲಿ ಉಪಯೋಗಿಸಿದಂತೆ "ದೇವರಿಂದ ಪ್ರೇರಿತವಾದದ್ದು" ಎಂಬುದರ ಅರ್ಥವೇನು?
2. ರೋಮನ್ ಚಕ್ರವರ್ತಿ ಡಿಯೊಕ್ಲೆಷಿಯನ್ ಬೈಬಲನ್ನೂ ಅದರ ಸಂದೇಶವನ್ನೂ ಅಳಿಸಿ ಹಾಕಲು ಪ್ರಯತ್ನಿಸಿದನು. ಅವನು ಯಶಸ್ವಿಯಾದನೋ?
3. ಯಾಜಕಕಾಂಡ 13:45 ಬೈಬಲಿನ ಸಂಬಂಧವನ್ನು ಹೇಗೆ ತೋರಿಸುತ್ತದೆ?
4. ಬೈಬಲಿನೊಳಗಿನ ಭಿನ್ನತೆಗಳೂ ಅದು ದೇವರಿಂದ ಬಂದದ್ದೆಂದು ಹೇಗೆ ಸಿದ್ಧಪಡಿಸಿ ತೋರಿಸುತ್ತದೆ?
5. ಬೈಬಲಿನ ಮುಖ್ಯ ಪ್ರಸ್ತಾಪವು ಯಾವುದು?
6. ಭೂಲೋಕದಲ್ಲಿಯ ಪುಸ್ತಕಾಲಯಗಳಲ್ಲಿಯ ಎಲ್ಲಾ ಬರಹಗಳಲ್ಲಿ ಯಾವ ಪುಸ್ತಕವು ಅತೀ ಹೆಚ್ಚಿನ ಪ್ರಭಾವವನ್ನು ಬೀರಿದೆ?
7. ಬೈಬಲು ತನ್ನ ವಾಚಕರಿಗೆ ಯಾವ ಆದರಣೆಯನ್ನು ಕೊಡುತ್ತದೆ?
8. ಬೈಬಲು ದೈವ ಪ್ರೇರಿತವಾದ ದೇವರ ವಾಕ್ಯವಾಗಿದೆಯೆಂದು ರುಜುವಾತು ಮಾಡುವ ಏಳು ಆಶ್ಚರ್ಯಗಳನ್ನು ಪಟ್ಟಿ ಮಾಡಿರಿ.

3

# ತಂದೆಯಾದ ದೇವರು ಯಾರು?

*ದೇವರು.* ಆತನಿಗಿಂತ ಯಾವುದೇ ವ್ಯಕ್ತಿಯಾಗಲೀ ವಸ್ತುವಾಗಲೀ, ಶ್ರೇಷ್ಠವಾದದ್ದಾಗಿರುವದಿಲ್ಲ. ಆತನಿಗೆ ಮಾತ್ರವೇ ಪೂರ್ಣ ಅಧಿಕಾರವಿದೆ. ಆತನು ಎಲ್ಲರ ಮೇಲಿರುವಾತನು.

ಮನುಷ್ಯನು ಮಾನವ ನಿರ್ಮಿತ ಕಲ್ಪನೆಗಳನ್ನೂ ಕಲ್ಲು, ಕಟ್ಟಿಗೆ, ಮಣ್ಣಿನಿಂದ ಮಾಡಿದ ರೂಪಗಳನ್ನೂ ಆರಾಧಿಸಲು ಪ್ರಯತ್ನಿಸುವ ತಪ್ಪು ಮಾಡಿದ್ದರೂ "ದೇವರು" ಎಂಬ ಪದವು ಒಬ್ಬ ಜೀವಿಗೆ ಮಾತ್ರವೇ ಸೂಕ್ತವಾಗಿದೆ. ದೇವರು ಒಂದೇ ಒಂದು ಜೀವಿಯಾಗಿದ್ದಾನೆ; ಆತನು ಮಾತ್ರವೇ ಎಲ್ಲಾ ನಿಜವಾದ ಆರಾಧನೆಯ ಗುರಿಯಾಗಿದ್ದಾನೆ. ಜೀವಿಯೆಂದು ಕರೆಯಲ್ಪಡುವ ಇನ್ನೊಂದಕ್ಕೆ ಕೊಡುವ ಯಾವುದೇ ಆರಾಧನೆಯು ಅದು ಕಲ್ಪಿಸಿದ್ದಾಗಲೀ, ಇಲ್ಲವೇ ಸಜೀವವಾದದ್ದಾಗಲೀ ಆಗಿದ್ದರೂ ಅದು ಸುಳ್ಳು ಆರಾಧನೆಯಾಗಿದೆ.

ದೇವರಿಗೆ ಕೊಡಲ್ಪಡಬೇಕಾದ ಗೌರವವನ್ನು ಕೇವಲ ಕೆಲವೇ ಮಾತುಗಳಲ್ಲಿ ವಿವರಿಸಲು ನಾವು ಬಯಸಿದರೆ 1 ತಿಮೊಥೆ 1:17ಕ್ಕಿಂತ ಹೆಚ್ಚು ದೊಡ್ಡದಾದ ಇಲ್ಲವೇ ಕಡಿಮೆಯಾದ ಪ್ರಕಟನೆಯನ್ನು ನಾವು ಕಂಡುಕೊಳ್ಳುವದಿಲ್ಲ: "ನಿತ್ಯವಾದ ಅರಸನೂ ನಿರ್ಲಯನೂ ಅದೃಶ್ಯನೂ ಆಗಿರುವ ಒಬ್ಬನೇ ದೇವರಿಗೆ ಯುಗಯುಗಾಂತರಗಳಲ್ಲಿಯೂ ಘನತೆಯೂ ಮಹಿಮೆಯೂ ಉಂಟಾಗಲಿ ಆಮೆನ್." ಪುನಃ ಪುನಃ ಇಸ್ರಾಯೇಲಿನಿಂದ ಹೇಳಲ್ಪಟ್ಟ ಅರಿಕೆಯಲ್ಲಿ ದೇವರ ಬಗೆಗಿನ ಬೈಬಲು ಸಾರಾಂಶವಾಗಿ ಹೇಳಲ್ಪಟ್ಟಿದೆ: "... ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು; ನೀವು ನಿಮ್ಮ ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಆತ್ಮದಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು" (ಧರ್ಮೋಪದೇಶಕಾಂಡ 6:4, 5). ದೇವರು ಯಾರಾಗಿರುವನೆಂಬ ಬೆಳಕಿನಲ್ಲಿ, ಪ್ರತಿಯೊಂದು ಹೃದಯದಲ್ಲಿ ನೆಡಲ್ಪಡಬೇಕಾದ ನಿರ್ಧಾರವನ್ನು ಯೇಸುವು ಘೋಷಿಸಿದನು: "ನಿನ್ನ ದೇವರಾಗಿರುವ ಕರ್ತನನ್ನು ಆರಾಧಿಸಿ, ಆತನನ್ನು ಮಾತ್ರ ಸೇವಿಸ ಬೇಕು" (ಮತ್ತಾಯ 4:10ಬಿ).

ನಿಜವಾದ ದೇವರು ಪರಿಶುದ್ಧ ಬರಹಗಳಲ್ಲಿ "ತ್ರಿ" ಸ್ವರೂಪದಲ್ಲಿ ವಿವರಿಸಲ್ಪಟ್ಟಿದ್ದಾನೆ. ಅಂದರೆ ಆತನು ಒಬ್ಬನೇ ಆಗಿದ್ದಾನೆ. ಆದಾಗ್ಯೂ ಆತನು ಮೂರಾಗಿದ್ದಾನೆ - ತಂದೆಯಾದ ದೇವರು, ಕುಮಾರನಾದ ದೇವರು ಮತ್ತು ಆತ್ಮನಾದ ದೇವರು. ದೈವತ್ವದ ಮೂರು ವ್ಯಕ್ತಿಗಳು ಒಬ್ಬರೊಂದಿಗೊಬ್ಬರು ಸರಿಸಮಾನರಾಗಿದ್ದಾರೆ ಮತ್ತು ಪ್ರತಿಯೊಬ್ಬನೂ ನಿತ್ಯನಾಗಿದ್ದಾನೆ. ಪ್ರತಿಯೊಬ್ಬನೂ ಸ್ಪಷ್ಟವಾದ ವ್ಯಕ್ತಿತ್ವವನ್ನು ಹೊಂದಿರುವನು. ದೈವಿಕ ಬುದ್ಧಿವಂತಿಕೆಯನ್ನೂ ಭಾವನೆಯನ್ನೂ ಚಿತ್ತವನ್ನೂ ಪ್ರತಿಬಿಂಬಿಸುವರು; ಹೀಗಿದ್ದರೂ ಈ ಮೂವರು ತಿರುಳಿನಲ್ಲಿಯು ಉದ್ದೇಶದಲ್ಲಿಯೂ ಒಂದೇಯಾಗಿರುವರು.

ದೇವರು ಒಬ್ಬನೇಯಾಗಿರುವಂತೆ ಮೂವರು ಆಗಿದ್ದಾನೆಂಬ ಭಾವನೆಯು ದೈವತ್ವ ಎಂದು ಕರೆಯಲ್ಪಡುತ್ತದೆ (ಅಪೊಸ್ತಲರ ಕೃತ್ಯಗಳು 17:29; ರೋಮಾಪುರ 1:20; ಕೊಲೊಸ್ಸೆ 2:9).[1] ಈ ಮಹಾ ಸತ್ಯವು ಮಾನವ ತಿಳುವಳಿಕೆಯನ್ನು ದಾಟಿ ಇರುವುದು. ಆದರೆ ನಮ್ಮ ನಂಬಿಕೆಯನ್ನು ದಾಟಿ ಇರುವದಿಲ್ಲ. ಯಾಕಂದರೆ ಇದು ದೇವರ ವಾಕ್ಯದಲ್ಲಿ ಸ್ಪಷ್ಟವಾಗಿ ಬೋಧಿಸಲ್ಪಟ್ಟಿದೆ. ಇದನ್ನು ನಾವು ವಿಶ್ವಾಸದಿಂದ ಸ್ವೀಕರಿಸುತ್ತೇವೆ - ನಾವು ಅದನ್ನು ಕಲ್ಪಿಸಿದ್ದರಿಂದ ಅಲ್ಲ, ಅದು ಸತ್ಯವಾಗಿರುವದೆಂದು ನಾವು ಯೋಚಿಸಿದ್ದರಿಂದಲ್ಲ, ನಮ್ಮ ಸುತ್ತುಮುತ್ತಲಿನ ಜಗತ್ತಿನ ಅಧ್ಯಯನದಿಂದ ಅಂಥ ಸತ್ಯವನ್ನು ನಾವು ಕಲಿತುಕೊಂಡಿದ್ದರಿಂದ ಅಲ್ಲ. ಪರಿಶುದ್ಧ ಬರಹಗಳ ದೈವಪ್ರೇರಿತ ಬರಹಗಳಲ್ಲಿ ಅದು ನಮಗೆ ಕೊಡಲ್ಪಟ್ಟದ್ದರಿಂದ ಈ ಸತ್ಯವನ್ನು ನಾವು ಸ್ವೀಕರಿಸುತ್ತೇವೆ ಹಾಗೂ ನಂಬುತ್ತೇವೆ.

ದೇವರು ತಂದೆ, ಕುಮಾರ ಹಾಗೂ ಪರಿಶುದ್ಧಾತ್ಮನಾಗಿದ್ದಾನೆಂಬ ವಿಚಾರವು ಪರಿಶುದ್ಧ ಬರಹಗಳಲ್ಲಿ ನೇರವಾಗಿ ವಿವರಿಸಲ್ಪಟ್ಟಿಲ್ಲ, ಆದರೆ ಪರಿಶುದ್ಧ ಲೇಖನಗಳಲ್ಲಿ ಅಂತರಾರ್ಥವಾಗಿ ಸೂಚಿಸಲ್ಪಟ್ಟಿದೆ. ಹಳೇ ಒಡಂಬಡಿಕೆಯಲ್ಲಿ ದೈವತ್ವದ ಭಾವನೆಯನ್ನು ಸೂಚಿಸುವ ಬರಹಗಳು ದೈವಿಕ ಹೆಸರನ್ನೇ ಒಳಗೊಂಡಿರುತ್ತವೆ. ಅದು *"Elohim,"* ಎಂಬ ಹೀಬ್ರು ಪದವಾಗಿದ್ದು ಬಹುವಚನ ರೂಪದಲ್ಲಿದೆ. ಹಳೇ ಒಡಂಬಡಿಕೆಯಲ್ಲಿಯ ಇತರ ಬರಹಗಳು ದೇವರಿಗೆ ಸಂಬಂಧಿಸಿ ಬಹುವಚನ ಸರ್ವನಾಮಗಳನ್ನು ಉಪಯೋಗಿಸಿವೆ - ಉದಾಹರಣೆ - ಆದಿಕಾಂಡ 1:26, "ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ" ಎಂದು ಹೇಳುತ್ತದೆ.[2]

ಹೊಸ ಒಡಂಬಡಿಕೆಯಲ್ಲಿ ದೈವತ್ವದ ಮೂರು ಸದಸ್ಯರ ಬಗ್ಗೆ ಓದುತ್ತೇವೆ. ಯೇಸುವಿನ ಬಾಪ್ತಿಸ್ಮದಲ್ಲಿ ಪರಿಶುದ್ಧಾತ್ಮನು ಪಾರಿವಾಳದ ರೂಪದಲ್ಲಿ ಆತನ ಮೇಲೆ ಇಳಿದು ಬಂದನು, "ಈತನು ನನ್ನ ಪ್ರಿಯ ಕುಮಾರನು" ಎಂದು ತಂದೆಯ ಧ್ವನಿಯು ಘೋಷಿಸಿತು (ಮತ್ತಾಯ 3:17). ನಮ್ಮ ಕರ್ತನು ತನ್ನ ಶಿಷ್ಯರಿಗೆ

ತಾನು ಪರಿಶುದ್ಧಾತ್ಮನನ್ನು ಕಳುಹಿಸುವೆನೆಂದು ವಾಗ್ದಾನ ಮಾಡಿದಾಗ, ಆತ್ಮನನ್ನು, ದೇವರನ್ನು, ತನ್ನನ್ನು ಸಂಬಂಧಿಸಿ ಮಾತಾಡಿದನು: "*ತಂದೆಯ* ಬಳಿಯಿಂದ ನಾನು ನಿಮಗೆ ಕಳುಹಿಸಿ ಕೊಡುವ *ಸಹಾಯಕನು*, ಅಂದರೆ ತಂದೆಯ ಬಳಿಯಿಂದ ಹೊರಡುವ ಸತ್ಯದ ಆತ್ಮನು, ಬಂದಾಗ ಆತನು ನನ್ನನ್ನು ಕುರಿತು ಸಾಕ್ಷಿ ಹೇಳುವನು" (ಯೋಹಾನ 15:26; ಒತ್ತಿ ಹೇಳಿದ್ದು ನನ್ನದು).

ಮಾನವ ವಿಮೋಚನೆಯ ಕಾರ್ಯವು ದೈವತ್ವದ ಎಲ್ಲಾ ಮೂವರು ಸದಸ್ಯರನ್ನು ಒಳಗೊಂಡಿರುತ್ತದೆ. "*ತಂದೆಯಾದ ದೇವರ* ಭವಿಷದ್ ಜ್ಞಾನಾನುಸಾರವಾಗಿ, *ಪರಿಶುದ್ಧಾತ್ಮನಿಂದ* ಪ್ರತಿಷ್ಠಿಸಲ್ಪಟ್ಟವರಿಗೆ, *ಯೇಸು ಕ್ರಿಸ್ತನಿಗೆ* ವಿಧೇಯರಾಗುವುದಕ್ಕೂ, ಆತನ ರಕ್ತದಿಂದ ಪ್ರೋಕ್ಷಿತರಾಗಿರುವದಕ್ಕೂ ..." (1 ಪೇತ್ರ 1:2; ಒತ್ತಿ ಹೇಳಿದ್ದು ನನ್ನದು) ಎಂದು ಪೇತ್ರನು ಬರೆದಿದ್ದಾನೆ. ಪ್ರಾರ್ಥನೆಯಲ್ಲಿ ನಾವು ದೇವರನ್ನು ಸಮೀಪಿಸುವಾಗ ದೈವತ್ವವು ಕಂಡು ಬರುತ್ತದೆ, ಯಾಕಂದರೆ ಯೇಸುವಿನ ಮುಖಾಂತರವಾಗಿ ನೀವು "ಒಬ್ಬ *ಆತ್ಮನಿಂದ* ತಂದೆಯ ಬಳಿಗೆ ಪ್ರವೇಶಿಸುತ್ತೇವೆ" (ಎಫೆಸ 2:18; ಒತ್ತಿ ಹೇಳಿದ್ದು ನನ್ನದು) ಪೌಲನು ಹೇಳಿದ್ದಾನೆ.

ಮಹಾ ಆಜ್ಞೆಯು ಬಾಪ್ತಿಸ್ಮವನ್ನು ತ್ರೈತ್ವ ನಾಮದಲ್ಲಿ ಆಚರಿಸುವಂತೆ ಚಿತ್ರಿಸುತ್ತದೆ: "ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಕಮಾರನ, ಪರಿಶುದ್ಧಾತ್ಮನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕೈಕೊಳ್ಳುವ ಹಾಗೆ ಅವರಿಗೆ ಉಪದೇಶ ಮಾಡಿರಿ; ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಸದಾಕಾಲ ನಿಮ್ಮ ಸಂಗಡ ಇರುತ್ತೇನೆ" (ಮತ್ತಾಯ 28:19, 20).

ಬೈಬಲ್‌ನಲ್ಲೆಲ್ಲಾ, ತಂದೆಯಾದ ದೇವರು ಯಾವಾಗಲೂ ಪುಲ್ಲಿಂಗದಲ್ಲಿ ವೈಯಕ್ತಿಕವಾದ ಸರ್ವನಾಮದೊಂದಿಗೆ ("ಆತನು" ಎಂದು) ಕರೆಯಲ್ಪಟ್ಟಿದ್ದಾನೆ. ಆತನು ತಂದೆ, ಸೃಷ್ಟಿಕರ್ತ, ಯೆಹೋವ, ಸರ್ವಶಕ್ತ, ಕರ್ತನಾದ ದೇವರು ಆಗಿದ್ದಾನೆ. ದೈವತ್ವದಲ್ಲಿಯ ಮೂವರು ಸದಸ್ಯರಲ್ಲಿ ಆತನು ಯಾವಾಗಲೂ ಮೊದಲನೆಯವನಾಗಿ ಹೇಳಲ್ಪಡುತ್ತಾನೆ. ಆತನು ಜ್ಞಾನದಲ್ಲಿ, ಬಲದಲ್ಲಿ, ಪ್ರೀತಿಯಲ್ಲಿ, ಕರುಣೆಯಲ್ಲಿ ಹಾಗೂ ನ್ಯಾಯದಲ್ಲಿ ಎಲ್ಲರಿಗಿಂತ ಮಿಗಿಲಾಗಿದ್ದಾನೆಂದು ಬೈಬಲು ತೋರಿಸುತ್ತದೆ. ವಿಶ್ವವನ್ನು ಯೋಜಿಸಿ, ರೂಪಿಸಿ ಮತ್ತು ಸೃಷ್ಟಿಸಿದಾತನಾಗಿ ಆತನು ಸರ್ವಶ್ರೇಷ್ಠ ಅಧಿಕಾರಿಯೂ ಎಲ್ಲಾ ಶಕ್ತಿಗಳ ಮತ್ತು ಅಧಿಕಾರಗಳ ಮೇಲೆ ಸಾರ್ವಭೌಮ ಅಧಿಕಾರಿಯೂ ಆಗಿದ್ದಾನೆ. ಆತನು ತನ್ನನ್ನು ಆರಾಧಿಸುವವರಿಗೆ, ತನಗೆ ವಿಧೇಯ ರಾಗುವವರಿಗೆ ತಂದೆಯಾಗಿದ್ದಾನೆ. ಮಾನವ ಜೀವಿಗಳನ್ನೊಳಗೊಂಡು ಎಲ್ಲಾ ಜೀವಿ ಗಳು ಆತನಲ್ಲಿ ಜೀವಿಸುತ್ತಾರೆ, ಚಲಿಸುತ್ತಾರೆ ಮತ್ತು ಅಸ್ತಿತ್ವದಲ್ಲಿರುತ್ತಾರೆ (ಅಪೊಸ್ತಲರ ಕೃತ್ಯಗಳು 17:28).

ದೇವರನ್ನು ಒಬ್ಬನೇ ನಿಜವಾದ ದೇವರೆಂದು ಎಲ್ಲಾ ಜನಾಂಗಗಳೂ

ಎಲ್ಲಾ ದೇಶಗಳೂ, ಎಲ್ಲಾ ಕುಲಗಳೂ ಆರಾಧಿಸಬೇಕು. ಯೇಸು ಕ್ರಿಸ್ತನ ಮುಖಾಂತರ ಮಾತ್ರವೇ ಆತನ ಬಳಿಗೆ ಬರಬಹುದು. ದೇವದೂತರ, ಪರಿಶುದ್ಧರ ಇಲ್ಲವೇ ಇತರ ಜನರ - ಜೀವಿಸುವವರ ಇಲ್ಲವೇ ಸತ್ತವರ - ಅವರು ಎಷ್ಟೋ ಒಳ್ಳೆಯವರಾಗಿರಬಹುದು - ಅವರ ಮುಖಾಂತರ ನಾವು ಆತನ ಬಳಿಗೆ ಬರಲಾರೆವು. ದೇವರಿಗೂ ಮನುಷ್ಯನಿಗೂ ಕೇವಲ ನಿಜವಾದ ಮಧ್ಯಸ್ಥಗಾರನು ಆತನ ಕುಮಾರನಾದ ಯೇಸುವು ಆಗಿರುವನು (1 ತಿಮೊಥಿ 2:5). ತಂದೆಯ ಬಳಿಗೆ ಬರಲು ಮನುಷ್ಯನಿಗಾಗಿ ಲಭ್ಯವಿರುವ ಒಂದೇ ಮಾರ್ಗವು ಯೇಸುವು. “ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ” (ಯೋಹಾನ 14:6) ಎಂದು ಯೇಸು ಹೇಳಿದ್ದಾನೆ.

ದೈವತ್ವದ ಎರಡನೆಯ ಸದಸ್ಯನು ಕರ್ತನಾದ ಯೇಸು ಕ್ರಿಸ್ತನು. ಆತನ ಮುಖಾಂತರವಾಗಿ ತಂದೆಯಾದ ದೇವರು ಭೂಲೋಕವನ್ನೂ ಮನುಷ್ಯನನ್ನೂ ಸೃಷ್ಟಿಸಿದನು (ಕೊಲೊಸ್ಸೆ 1:16). ಮನುಷ್ಯನಿಗೆ ತನ್ನ ಸಂಬಂಧದಲ್ಲಿ, ಯೇಸುವು “ಮನುಷ್ಯ ಕುಮಾರನು” ಎಂದು ಕರೆಯಲ್ಪಟ್ಟಿದ್ದಾನೆ; ದೇವರೊಂದಿಗಿನ ತನ್ನ ಸಂಬಂಧದಲ್ಲಿ ಆತನು “ದೇವರ ಕುಮಾರನು” ಎಂದು ಕರೆಯಲ್ಪಟ್ಟಿದ್ದಾನೆ. ದೈವತ್ವದಲ್ಲಿ ಮಾನವ ಶರೀರವನ್ನು ತೆಗೆದುಕೊಂಡ ಹಾಗೂ ಈ ಭೂಲೋಕದಲ್ಲಿ ದೈಹಿಕವಾಗಿ ಜೀವಿಸಿದ ಸದಸ್ಯನು ಆತನೊಬ್ಬನೇ ಆಗಿದ್ದಾನೆ. ಆತನು ಮಾನವ ಕುಲದ ರಕ್ಷಕನೂ ಸ್ತೋತ್ರಿಸಲ್ಪಡುವವನೂ ಆಗಿದ್ದಾನೆ. ಆತನು ಎಲ್ಲಾ ಜನರಿಂದ ಆರಾಧಿಸಲ್ಪಡುವವನೂ ಸ್ತೋತ್ರಿಸಲ್ಪಡುವನೂ ಆಗಿದ್ದಾನೆ. ಆರಾಧನೆಯಲ್ಲಿ ಇಡೀ ಭೂಲೋಕವು ತಂದೆಯ ಬಳಿಗೆ ಬರುವ ವಿಧಾನಗಳನ್ನು ಆತನು ಒದಗಿಸಿದ್ದಾನೆ.

> ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದದರಿಂದ ಪರಲೋಕ ಭೂಲೋಕ, ಭೂಮಿಯ ಕೆಳಗಿರುವವರಲ್ಲರೂ ಯೇಸುವಿನ ಹೆಸರಿನಲ್ಲಿ ಮೊಣಕಾಲೂರಿ ಮಣಿದು, ತಂದೆಯಾದ ದೇವರಿಗಾಗಿ ಯೇಸುಕ್ರಿಸ್ತನು ಕರ್ತನು ಎಂಬುದಾಗಿ ಪ್ರತಿಯೊಂದು ನಾಲಿಗೆಯೂ ಅರಿಕೆ ಮಾಡುವುದು (ಫಿಲಿಪ್ಪಿ 2:9-11).

ದೈವತ್ವದ ಮೂರನೆಯ ಸದಸ್ಯನು ಪರಿಶುದ್ಧಾತ್ಮನು. ದೇವರು ಮತ್ತು ಕ್ರಿಸ್ತನಂತೆಯೇ ಆತನಿಗೆ ಸ್ವಭಾವಸ್ವರೂಪ ಇರುವುದು. ಅವರಂತೆಯೇ ಆತನು ವೈಯಕ್ತಿಕ ಸರ್ವನಾಮಗಳಿಂದ ಹೇಳಲ್ಪಟ್ಟಿದ್ದಾನೆ ಮತ್ತು

ಪುಲ್ಲಿಂಗದಲ್ಲಿ ("He" ಆತನು) ಸಂಬಂಧಿಸಿರುತ್ತಾನೆ. ದೈವತ್ವದ ಇತರ ಇಬ್ಬರು ಸದಸ್ಯರಿಗೆ ಸಂಬಂಧಿಸಿ ಬೈಬಲು ಮಾತಾಡುವಾಗಲೆಲ್ಲಾ ಮೂರನೆಯದಾಗಿ ನಮೂದಿಸಲ್ಪಟ್ಟಿದ್ದಾನೆ. ಹೊಸ ಒಡಂಬಡಿಕೆಯಲ್ಲಿ ಆತನು ಮನುಷ್ಯನನ್ನು ನಡಿಸಲ್ಪಡುವ ಹಾಗೂ ನಿರ್ದೇಶಿಸಲ್ಪಡುವ ಸಾಧನವಾಗಿ ಮಾತಾಡಲ್ಪಟ್ಟಿದ್ದಾನೆ. ಪರಿಶುದ್ಧ ಬರಹದ ಮುಖಾಂತರ ಆತನು ನಮ್ಮ ಸಹಾಯಕನು. ಹಳೇ ಮತ್ತು ಹೊಸ ಒಡಂಬಡಿಕೆಗಳ ಬರಹಗಳನ್ನೂ ಆತನು ಪ್ರೇರೇಪಿಸಿದ್ದಾನೆ: ಆದುದರಿಂದ ಪರಿಶುದ್ಧ ಬರಹಗಳು "ಆತ್ಮನ ಖಡ್ಗ" ಎಂದು ಹೇಳಲ್ಪಟ್ಟಿವೆ (ಎಫೆಸ 6:17). ಆತನು ತನ್ನ ಕಾರ್ಯಮಾಡಲು ಉಪಯೋಗಿಸುವ ಕಾರಣವಿದಾಗಿದೆ. ದೇವರ ಮಕ್ಕಳಾಗಿರುವವರಲ್ಲಿ ಆತನು ವಾಸಿಸುತ್ತಾನೆ (1 ಕೊರಿಂಥ 6:19, 20).

ಈ ಮೂವರು ನಿತ್ಯವಾಗಿ ಅಸ್ತಿತ್ವದಲ್ಲಿರುವರು ಮತ್ತು ದೈವತ್ವವಾಗಿರುವರು. ಅವರ ಬಗ್ಗೆ ತಿಳಿಯದೇ ಇರುವಂಥದ್ದು ಬಹಳವಾಗಿದ್ದರೂ ಪ್ರತಿಯೊಬ್ಬನೂ ಅಸ್ತಿತ್ವದಲ್ಲಿರುವನು ಹಾಗೂ ಮೂವರು ಮಹಿಮೆಯುಳ್ಳ ತ್ರಿತ್ವವಾಗಿರುವರೆಂಬುದು ನಿಶ್ಚಿತವಾದದ್ದಾಗಿದೆ. ಅವರು ಐಕ್ಯತೆಯಲ್ಲಿದ್ದು ಒಂದೇಯಾಗಿ ಅಸ್ತಿತ್ವದಲ್ಲಿರುವರು. ಅವರು ನಿತ್ಯವಾದವರು, ಸೃಷ್ಟಿಸಲ್ಪಟ್ಟ ಎಲ್ಲಾ ಸಂಗತಿಗಳಿಗಿಂತ ಪ್ರತ್ಯೇಕವಾದವರೂ ಭಿನ್ನವಾಗಿರುವವರೂ ಆಗಿರುವರು, ಚಿತ್ತದಲ್ಲಿಯೂ, ಉದ್ದೇಶದಲ್ಲಿಯೂ ಒಂದಾಗಿರುವವರೂ ಆಗಿದ್ದಾರೆ.

ಮೂರು ವ್ಯಕ್ತಿಗಳಂತೆ, ದೇವರ ಸ್ವಭಾವವನ್ನು ದಾಟಿ ತಂದೆಯಾದ ದೇವರ ಬಗ್ಗೆ ಬೇರೆ ಯಾವುದನ್ನು ತಿಳಿದುಕೊಂಡಿದ್ದೇವೆ? ಮೂಲವಾಗಿ, ಬೈಬಲು ಆತನ ಬಗ್ಗೆ ಒಂದು ದೊಡ್ಡದಾದ, ಎಲ್ಲವನ್ನೂ ಒಳಗೊಂಡ ಸತ್ಯವನ್ನು ನಮಗೆ ಬೋಧಿಸುತ್ತದೆ: *ಆತನು ಮಾತ್ರವೇ ನಿಜವಾದ ಮತ್ತು ಜೀವಿಸುವ ದೇವರಾಗಿದ್ದಾನೆ, ಪ್ರತಿಯೊಬ್ಬ ವ್ಯಕ್ತಿಯಿಂದ ಆತನು ಆರಾಧಿಸಲ್ಪಡಬೇಕು.* ಈ ಸತ್ಯವನ್ನು ಬಲವಾಗಿ ಬೋಧಿಸುವದನ್ನು ನೋಡದೇ ಯಾರೂ ಬೈಬಲಿನ ಯಾವುದೇ ಭಾಗವನ್ನು, ಹಳೆ ಒಡಂಬಡಿಕೆಯನ್ನು ಇಲ್ಲವೇ ಹೊಸ ಒಡಂಬಡಿಕೆಯನ್ನು ಓದಲಾರರು.

"ತಂದೆಯಾದ ದೇವರು ಯಾರಾಗಿದ್ದಾನೆ?" ಎಂಬ ಪ್ರಶ್ನೆಯನ್ನು ಇನ್ನೂ ಹೆಚ್ಚಾಗಿ ನೋಡೋಣ.

## ನಮ್ಮ ಸೃಷ್ಟಿಕರ್ತನು

ದೇವರು ಪ್ರತಿಯೊಂದನ್ನೂ ಸೃಷ್ಟಿಸಿದನು. ಆತನು ಎಲ್ಲವುಗಳನ್ನೂ ನಿರ್ಮಿಸಿದನು ಮತ್ತು ಎಲ್ಲವೂ ಆತನವೇ ಆಗಿವೆ. ಆತನು ಮಾಡದೇ ಇರುವಂಥದ್ದು ಇಲ್ಲವೇ ಮಾಡಲು ಬಿಡದೇ ಇರುವಂಥದ್ದು ಯಾವುದೂ ಅಸ್ತಿತ್ವದಲ್ಲಿರುವದಿಲ್ಲ. ಅಸ್ತಿತ್ವದಲ್ಲಿರುವ ಪ್ರತಿಯೊಂದೂ ಆತನಿಗೆ ಒಳಪಟ್ಟಿದೆ.

ಭೂಮಿಯೂ ಮಾನವ ಕುಲವೂ ಆಕಸ್ಮಿಕವಾಗಿ ಬೆಳವಣಿಗೆ ಹೊಂದಲಿಲ್ಲ; ದೇವರ ಕೃಪೆಯ ಹಸ್ತದಿಂದ ಅವು ಸೃಷ್ಟಿಸಲ್ಪಟ್ಟಿವೆ ಈ ಕಾರಣದಿಂದ ಭೂಮಿಯ ವಯಸ್ಸನ್ನು ವೈಜ್ಞಾನಿಕವಾಗಿ ಗುರುತಿಸುವದರ ಬಗ್ಗೆ ನಾವು ಚಿಂತಿಸಬಾರದು. ಜಗತ್ತಿಗೆ ಅದ್ಭುತಕರವಾದ ಪ್ರಾರಂಭವಿರುವುದು; ಹೀಗೆ ಅದು ನಿಜವಾಗಿ ಇರುವದಕ್ಕಿಂತ ಹೆಚ್ಚು ಪುರಾತನವಾದಂತೆ ತೋರುವುದು. ಒಂದು ಮಟ್ಟದಲ್ಲಿ ಪ್ರಬುದ್ಧಾವಸ್ಥೆಯಲ್ಲಿ ಭೂಲೋಕವನ್ನು ದೇವರು ಸೃಷ್ಟಿಸಿದನು. ಮನುಷ್ಯನಿಗೆ ಹಾಸ್ಯಮಾಡಲು ಆತನು ಪ್ರಯತ್ನಿಸಲಿಲ್ಲ ಆದರೆ ಮನುಷ್ಯನ ಅಸ್ತಿತ್ವಕ್ಕೆ ಒದಗಿಸಿಕೊಡುವಂತೆ ಪೂರ್ಣ ಬೆಳವಣಿಗೆ ಹೊಂದಿದ ಭೂಲೋಕವನ್ನು ಆತನು ಮಾಡಬೇಕಾಗಿತ್ತು.

ಪ್ರಥಮ ದಂಪತಿಗಳಾದ ಆದಾಮ, ಹವ್ವರನ್ನು ಆತನು ಶಿಶುಗಳಂತೆ ಅಲ್ಲ ಆದರೆ ಪ್ರೌಢರಂತೆ ಉಂಟುಮಾಡಿದನು. ಆತನು ಅವರನ್ನು ಸೃಷ್ಟಿಸಿದ ದಿನದಂದು ನಾವು ಅಲ್ಲಿದ್ದರೆ ಅವನು ಇಪ್ಪತ್ತರ ಹರೆಯದ ದಂಪತಿಗಳಂತೆ ಅವರು ನಮಗೆ ಕಾಣುತ್ತಿದ್ದರು; ಆದರೆ ಅವರಿಗೆ ಆಗಲೇ ಜೀವವು ಕೊಡಲ್ಪಟ್ಟಿತ್ತು. ಹೀಗಿದ್ದರೂ ಭೂಮಿಯು ಪ್ರಾರಂಭದಲ್ಲಿ ಪೂರ್ಣ ಬೆಳೆದ ಕಾಯಿಪಲ್ಯ, ನೀರು, ಹವೆ ಹಾಗೂ ಪೋಷಿಸಿ, ಜೀವಂತವಾಗಿರಿಸುವ ಕೊಳೆಯೊಂದಿಗೆ ದೇವರ ಸೃಷ್ಟಿಯು ಅದ್ಭುತ ಕಾರ್ಯದೊಂದಿಗೆ ರೂಪಿಸಲ್ಪಟ್ಟಿತ್ತು.

ದೇವರು ಎಲ್ಲವುಗಳನ್ನು ಸೃಷ್ಟಿಸಿದನೆಂಬ ಸತ್ಯದಿಂದ ಹರಿಯುತ್ತ ದೇವರ ಬಗೆಗಿನ ಇತರ ಸತ್ಯಗಳನ್ನು ನಾವು ಅರ್ಥ ಮಾಡಿಕೊಳ್ಳುವ ಅಗತ್ಯತೆಯಿದೆ. ಅವು ಯಾವವು?

*ಎಲ್ಲಾ ವಾಸ್ತವಿಕತೆಗಳ ಹಿಂದೆ ಇರುವಾತನಾಗಿದ್ದಾನೆ.*

ಅಸ್ತಿತ್ವದಲ್ಲಿರುವದೆಲ್ಲವೂ ಎರಡು ಗುಂಪುಗಳಾಗಿ ವಿಂಗಡಿಸಲ್ಪಡಬಹುದು: ದೇವರಾಗಿರುವಂಥದ್ದು ಮತ್ತು ದೇವರಾಗಿಲ್ಲದೇ ಇರುವಂಥದ್ದು. ದೇವರು ಪ್ರಥಮ ಹಾಗು ಅತ್ಯಂತ ಮೂಲವಾದ ವಾಸ್ತವಿಕತೆಯಾಗಿದ್ದಾನೆ. ಉಳಿದ ಪ್ರತಿಯೊಂದೂ ಆತನಿಂದ ಸೃಷ್ಟಿಸಲ್ಪಟ್ಟಿತು. ಇಲ್ಲವೇ ಆತನ ಅಧಿಕಾರದಿಂದ ಮಾಡಲು ಬಿಡಲ್ಪಟ್ಟಿತು. ಹೀಗೆ ಅದು ದೇವರಾಗಿರುವದಿಲ್ಲ.

*ಆತನು ನಿತ್ಯನು.*

> ಬೆಟ್ಟಗಳು ಉಂಟಾಗುವದಕ್ಕಿಂತ, ಭೂಮಿಯೂ ಅದರ ದೇಶಗಳೂ ನಿರ್ಮಾಣವಾಗುವದಕ್ಕಿಂತ ಮುಂಚಿನಿಂದ ಯುಗಯುಗಾಂತರಗಳಲ್ಲಿಯೂ ನೀನೇ ದೇವರು (ಕೀರ್ತನೆ 90:2).

> ನೀನಾದರೂ ಏಕರೀತಿಯಾಗಿದ್ದೀ; ನಿನ್ನ ವರುಷಗಳು ಮುಗಿದು ಹೋಗುವದಿಲ್ಲ (ಕೀರ್ತನೆ 102:27).

ದೇವರು ಪ್ರಾರಂಭ ಇಲ್ಲದವನೂ ಅಂತ್ಯವೂ ಇಲ್ಲದವನು. ಆತನು ಸಮಯಕ್ಕಿಂತ ಮೊದಲಿದ್ದವನು. ನಿತ್ಯತ್ವದಲ್ಲಿ ಸಂಧಿ ಸಮಯದಲ್ಲಿ ಸಮಯವನ್ನು ಸೃಷ್ಟಿಸಿದವನು. ಆತನು ನಿತ್ಯವಾಗಿ ಅಸ್ತಿತ್ವದಲ್ಲಿರುವ ಒಬ್ಬಾತನು. ಭೂತಕಾಲ, ವರ್ತಮಾನ ಕಾಲ ಹಾಗೂ ಭವಿಷತ್ಕಾಲಗಳ ಸಮಯದಲ್ಲಿ ಒಂದು ಕ್ಷಣವೆಂಬಂತೆ ಆತನು ಜೀವಿಸಿರುತ್ತಾನೆ. ಈಗ ಆತನು ನಿತ್ಯತ್ವದಲ್ಲಿ ಜೀವಿಸುವನು. ಆತನು ವರ್ತಮಾನ ಕಾಲವನ್ನು ನೋಡುವಂತೆ ಭೂತಕಾಲವನ್ನೂ ಭವಿಷತ್ಕಾಲವನ್ನೂ ಸ್ಪಷ್ಟವಾಗಿ ನೋಡುತ್ತಾನೆ. ಆತನು ಎಂದೆಂದಿಗೂ ಇದ್ದವನು ಮತ್ತು ಆತನು ಎಂದೆಂದಿಗೂ ಇರುವಾತನೂ ಆಗಿದ್ದಾನೆ.

*ಆತನು ಸರ್ವಶಕ್ತನು.*

> ಆಹಾ ಕರ್ತನಾದ ಯೆಹೋವನೇ! ನೀನು ಭುಜವನ್ನೆತ್ತಿ ನಿನ್ನ ಮಹಾ ಶಕ್ತಿಯಿಂದ ಭೂಮ್ಯಾಕಶಗಳನ್ನು ಸೃಷ್ಟಿಸಿದ್ದೀ; ಯಾವ ಕಾರ್ಯವೂ ನಿನಗೆ ಅಸಾಧ್ಯವಲ್ಲ (ಯೆರೆಮೀಯ 32:17).

> ಇಗೋ, ನಾನು ಯೆಹೋವನು, ನರಪ್ರಾಣಿಗೆಲ್ಲಾ ದೇವರು; ನನಗೆ ಅಸಾಧ್ಯವಾದದ್ದುಂಟೋ? (ಯೆರೆಮೀಯ 32:27).

ಆತನು ತನ್ನ ಸ್ವಭಾವಕ್ಕನುಗುಣವಾಗಿ ಏನನ್ನಾದರೂ ಮಾಡಬಲ್ಲನು. ಆದರೂ ದುಷ್ಟತನದ ಮೇಲೆ ಮೆಚ್ಚಿಕೆಯಿಂದ ನೋಡಲಾರನು ಹಾಗೂ ಸೈತಾನನಿಂದ ಶೋಧಿಸಲ್ಪಡಲಾರನು ಯಾಕಂದರೆ ಆತನು ನೀತಿವಂತನು (ಹಬಕ್ಕೂಕ 1:13). ತನ್ನ ನಂಬಿಗಸ್ತಿಕೆಯ ಕಾರಣದಿಂದ ಆತನು ತನ್ನ ಸ್ವಂತ ಸ್ವಭಾವವನ್ನು ಅಲ್ಲಗಳೆಯಲಾರನು (2 ತಿಮೊಥೆ 2:13). ಯಾಕಂದರೆ ಆತನು ಸುಳ್ಳಾಡುವವನಲ್ಲ (ತೀತ 1:2). ಹೀಗಿದ್ದರೂ ತನ್ನ ಸ್ವಭಾವಕ್ಕನುಗುಣವಾಗಿ ಆತನು ಯಾವುದನ್ನಾದರೂ ಮಾಡಬಲ್ಲನು. ಆತನಿಗೆ ಕಠಿಣವಾದದ್ದು ಯಾವುದೂ ಇರುವದಿಲ್ಲ.

*ಆತನು ಸರ್ವಜ್ಞಾನಿಯು.*

> ಯೆಹೋವನು ಇಂತೆನ್ನುತ್ತಾನೆ, ನಾನು ಸಮೀಪದಲ್ಲಿ ಮಾತ್ರ ಇರುವ ದೇವರೋ? ದೂರದಲ್ಲಿಯೂ ಇರುವವನಲ್ಲವೋ? ನನ್ನ ಕಣ್ಣಿಗೆ ಬೀಳದಂತೆ ಯಾವನಾದರೂ ಗುಪ್ತಸ್ಥಳಗಳಲ್ಲಿ ತನ್ನನ್ನು ಮರೆಮಾಡಿಕೊಂಡಾನೇ? ನಾನು ಭೂಮ್ಯಾಕಾಶಗಳಲ್ಲಿಯೂ ವ್ಯಾಪಿಸಿರುವವನಲ್ಲವೇ (ಯೆರೆಮೀಯ

23:23, 24).

> ಯೆಹೋವನ ದೃಷ್ಟಿಯು ಎಲ್ಲೆಲ್ಲಿಯೂ ಇರುವದು; ಆತನು ಕೆಟ್ಟವರನ್ನೂ ಒಳ್ಳೆಯವರನ್ನೂ ನೋಡುತ್ತಲೇ ಇರುವನು (ಜ್ಞಾನೋಕ್ತಿ 15:3).

ಆತನು ಪ್ರತಿಯೊಂದನ್ನು ಕೂಡಲೇ, ಸರಿಯಾಗಿ ಮತ್ತು ಸಂಪೂರ್ಣವಾಗಿ ತಿಳಿದುಕೊಳ್ಳುವನು. ಯಾವುದನ್ನೂ ಆತನು ಕಲಿಯಬೇಕಾಗಿಲ್ಲ. ಆತನಿಗೆ ಉಪದೇಶಕನ, ಶಿಕ್ಷಕನ, ಅಗತ್ಯತೆಯಿಲ್ಲ. ಮಾಹಿತಿಯ ಅವಶ್ಯಕತೆಯಿಲ್ಲ, ತಿಳಿಯಲ್ಪಡತಕ್ಕ ಎಲ್ಲವನ್ನೂ ಆತನು ತಿಳಿದಿರುವನು.

*ಆತನು ಸರ್ವ ವ್ಯಾಪ್ತಿಯಾಗಿರುವನು.*

> ನಾನು ನಿನ್ನ ಆತ್ಮಕ್ಕೆ ತಪ್ಪಿಸಿಕೊಳ್ಳುವಂತೆ ಎಲ್ಲಿಗೆ ಹೋಗಲಿ? ನಿನ್ನ ಕಣ್ಣಿಗೆ ಮರೆಯಾಗುವಂತೆ ಎಲ್ಲಿಗೆ ಓಡಲಿ? ಮೇಲಣ ಲೋಕಕ್ಕೆ ಏರಿ ಹೋದರೆ ಅಲ್ಲಿ ನೀನಿರುತ್ತೀ; ಪಾತಾಳಕ್ಕೆ ಹೋಗಿ ಮಲಗಿಕೊಂಡೇನಂದರೆ ಅಲ್ಲಿಯೂ ನೀನಿರುವಿ. ಅರುಣನ ರೆಕ್ಕೆಗಳನ್ನು ಕಟ್ಟಿಕೊಂಡು ಹಾರಿ ಹೋಗಿ ಸಮುದ್ರದ ಕಟ್ಟಕಡೆಯಲ್ಲಿ ವಾಸಮಾಡೇನಂದರೆ ಅಲ್ಲಿಯೂ ನಿನ್ನ ಕೈ ನನ್ನನ್ನು ನಡಿಸುವುದು; ನಿನ್ನ ಬಲಗೈ ನನ್ನನ್ನು ಹಿಡಿದಿರುವದು; ಕಾರ್ಗತ್ತಲೆಯು ನನ್ನನ್ನು ಕವಿಯುವುದು, ಹಗಲು ಹೋಗಿ ನನ್ನ ಸುತ್ತಲು ಇರುಳಾಗುವದು ಎಂದು ಹೇಳಿಕೊಂಡರೇನು? ನಿನಗೆ ಕತ್ತಲೆಯು ಕತ್ತಲೆಯಲ್ಲ; ಇರುಳು ಹಗಲಾಗಿಯೇ ಇರುತ್ತದೆ; ಕತ್ತಲು ಬೆಳಕುಗಳೆರಡೂ ನಿನಗೆ ಒಂದೇ (ಕೀರ್ತನೆ 139:7-12).

> ... ಆತನು ನಮ್ಮಲ್ಲಿ ಒಬ್ಬನಿಗೂ ದೂರವಾದವನಲ್ಲ. ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ, ಇರುತ್ತೇವೆ, ... (ಅಪೊಸ್ತಲರ ಕೃತ್ಯಗಳು 17:27, 28).

ನಾವೆಲ್ಲಿಗೆ ಹೋದರೂ, ದೇವರು ಅಲ್ಲಿರುವನು. ಆತನಿಂದ ನಾವು ಅಡಗಿಕೊಳ್ಳಲಾರೆವು. ಎಲ್ಲವನ್ನೂ ಹುಡುಕುವ ಆತನ ಕಣ್ಣಿನಿಂದ ಏನನ್ನೂ ಮುಚ್ಚಿಡಲಾರೆವು. ದೂರವಾಗಲೀ ಇಲ್ಲವೇ ಕತ್ತಲೆಯಾಗಲೀ ಯಾವುದೂ ನಮ್ಮನ್ನು ಆತನ ಸನ್ನಿಧಿಯಿಂದ ತೆಗೆದು ಹಾಕಲಾರದು.

*ಆತನು ಮಾತ್ರವೇ ನಿಜವಾದ ಹಾಗೂ ಜೀವಿಸುವ ದೇವರಾಗಿರುವನು.*

ಆತನು ಜೀವಿಸುವಾತನು (ಮತ್ತಾಯ 16:16) ಹಾಗೂ ಆತನು ನಿಜವಾದವನು (1 ಥೆಸಲೊನೀಕ 1:9). ಮಗನು ತನ್ನ ತಂದೆಯಂತೆ ಕಾಣಬಹುದಾಗಿರುವಂತೆ ಮಾನವ ಜೀವಿಗಳು ಒಂದು ರೀತಿಯಲ್ಲಿ ನಮ್ಮ

ಸೃಷ್ಟಿಕರ್ತನಾದ ದೇವರಂತಿದ್ದಾರೆ. ಮನುಷ್ಯನಂತೆಯೇ, ದೇವರು ನೋಡು ತ್ತಾನೆ, ಕೇಳುತ್ತಾನೆ, ಮಾತಾಡುತ್ತಾನೆ, ಭಾವಿಸುತ್ತಾನೆ, ಇಚ್ಛಿಸುತ್ತಾನೆ ಮತ್ತು ಕಾರ್ಯಮಾಡುತ್ತಾನೆ. ಹೀಗಿದ್ದರೂ ದೇವರನ್ನು ನೋಡಲಾಗುವದಿಲ್ಲ; ಆತನು ಒಂದೇ ಸಮಯದಲ್ಲಿ ಪ್ರತಿಯೊಂದು ಕಡೆಯಲ್ಲಿ ಇರಬಹುದಾದ ಆತ್ಮನಾಗಿದ್ದಾನೆ (ಯೋಹಾನ 4:24).

ಹಾಗಾದರೆ, ತಂದೆಯಾದ ದೇವರು ಯಾರು? ಆತನು ನಿತ್ಯನಾದ ಜೀವಿಯು ಹಾಗೂ ಪ್ರತಿಯೊಂದರ ಸೃಷ್ಟಿಕರ್ತನು. ಸ್ವಭಾವದಲ್ಲಿ ತ್ರಿತ್ವನು, ಸರ್ವಜ್ಞಾನಿ, ಸರ್ವಶಕ್ತಿ ಹಾಗೂ ಸರ್ವ ವ್ಯಾಪಿಯು.

ದೇವರು ಎಲ್ಲವುಗಳನ್ನು ಸೃಷ್ಟಿಸಿದ್ದರಿಂದ ಪ್ರತಿಯೊಂದು ಆತನಿಗೆ ಒಳಪಟ್ಟಿರುವುದು. ನಮ್ಮ ಆರಾಧನೆಗೆ ಆತನು ಅರ್ಹನಾಗಿರುವನು. ಎಲ್ಲಾ ಪ್ರಾಪಂಚಿಕ ಸಂಗತಿಗಳು ಆತನ ಸ್ವಾಸ್ಥ್ಯಗಳು. ಭೂಮಿಯ ಎಲ್ಲಾ ಜೀವಿಗಳು ಆತನವುಗಳು. ಭೂಲೋಕದ ಎಲ್ಲಾ ಜನಾಂಗಗಳು ಆತನವೇ ಆಗಿರುವವು. ನಾವು ಆತನನ್ನು ಆರಾಧಿಸುವುದೂ, ಆತನ ಸೇವೆ ಮಾಡುವುದೂ ಸರಿಯಾದ ದ್ದಾಗಿದೆ. ಯಾವುದೇ ರೀತಿಯ ಇನ್ನೊಬ್ಬ ದೇವರಿಗೆ ವಿಶೇಷ ಗೌರವವನ್ನೂ ಆರಾಧನೆಯನ್ನೂ ಕೊಟ್ಟರೆ, ನಾವು ಸುಳ್ಳನ್ನು ಆರಾಧಿಸುತ್ತೇವೆ ಮತ್ತು ಸೇವಿ ಸುತ್ತೇವೆ.

## ನಮಗೆ ಒದಗಿಸುವಾತನು

ದೇವರು ಈ ವಿಶ್ವವನ್ನು ಸೃಷ್ಟಿಸಿದ್ದು ಮಾತ್ರವಲ್ಲದೆ, ಆತನು ಇಂದು ಅದರ ಜೋಪಾನವನ್ನು ಸಹ ಮಾಡುತ್ತಾನೆ. ಅದು ಬಿದ್ದು ಹೋಗದ ಹಾಗೆ, ಮುರಿದು ಹೋಗದ ಹಾಗೆ, ಆತನು ಆಪೇಕ್ಷಿಸುವಂತೆ ಕಾರ್ಯಮಾಡುವದರಲ್ಲಿ ಸೋತು ಹೋಗದಂತೆ ಆತನು ಕಾಯುತ್ತಾನೆ (ಕೊಲೊಸ್ಸೆ 1:16, 17).

ವಿವೇಚನೆಯಿಂದಲೂ ಪ್ರಕಟನೆಯಿಂದಲೂ ಈ ಸಂಗತಿಯೂ ಸಿದ್ಧಪಡಿಸಿ ತೋರಿಸಲ್ಪಟ್ಟಿದೆ. ತಾರ್ಕಿಕವಾದ ಯೋಚನೆಯು, ದೇವರು ಈ ಭೂಲೋಕವನ್ನು ಸೃಷ್ಟಿಸಿದ್ದಾನೆ ಮತ್ತು ಅದನ್ನು ಮುಂದುವರಿಸಿಕೊಂಡು ಹೋಗುತ್ತಾನೆ ಎಂದು ನಮಗೆ ಹೇಳುತ್ತದೆ. ಸರ್ವಶಕ್ತನ ಹಸ್ತವು ಇದನ್ನು ಒಟ್ಟಾಗಿ ಹಿಡಿದಿರುವುದೆಂದು ಸ್ಪಷ್ಟ ವಾಗಿದೆ. ಮನುಷ್ಯನು ತನ್ನನ್ನು ತಾನೇ ಜೋಪಾನ ಮಾಡಿಕೊಳ್ಳಲಾರನು. ಅವನು ತಾನು ಉಸಿರಾಡಿಸುವ ಹವೆಯನ್ನು, ಕುಡಿಯುವ ನೀರನ್ನು ಇಲ್ಲವೇ ಅಗತ್ಯವಾ ಗಿರುವ ಸೂರ್ಯನ ಪ್ರಕಾಶವನ್ನು ಮಾಡಲಾರನು. ಭೂಮಿಯ ಮೇಲೆ ಜೀವಿಸಲಿಕ್ಕೆ ಅವನು ಅದರ ಮೇಲೆ ಆಶ್ರಯಿಸಿದ್ದಾನೆ.

ದೇವರ ವಾಕ್ಯದ ಪ್ರಕಟನೆಯ ಸಾಕ್ಷಿಯು ದೇವರೇ ಲೋಕವನ್ನು

ಒಂದಾಗಿ ಹಿಡಿದಿರುತ್ತಾನೆ ಎಂಬುದಾಗಿದೆ. ಭೂಮ್ಯಾಕಾಶಗಳನ್ನು ಸೃಷ್ಟಿಸುವಾಗ, ಆತನ ಜಗತ್ತು ಮುಂದುವರಿಯುವಂತೆ ಮಾಡಲಿಕ್ಕೆ ನೈಸರ್ಗಿಕ ನಿಯಮಗಳನ್ನು ಚಾಲನೆಯಲ್ಲಿಟ್ಟನು.

> ಬಳಿಕ ದೇವರು, "ಆಕಾಶಮಂಡಲದಲ್ಲಿ ಬೆಳಕುಗಳು ಉಂಟಾಗಲಿ; ಅವು ಹಗಲಿರುಳುಗಳನ್ನು ಬೇರೆ ಬೇರೆ ಮಾಡಲಿ; ಇದಲ್ಲದೆ ಅವು ಗುರುತುಗಳಾಗಿದ್ದು ಸಮಯಗಳನ್ನೂ ದಿನಸಂವತ್ಸರಗಳನ್ನೂ ತೋರಿಸಲಿ" (ಆದಿಕಾಂಡ 1:14).
>
> ಮತ್ತು ದೇವರು, "ಇಗೋ, ಸಮಸ್ತ ಭೂಮಿಯ ಮೇಲೆ ಬೀಜವುಳ್ಳ ಎಲ್ಲಾ ಪೈರುಗಳನ್ನು ಬೀಜವುಳ್ಳ ಎಲ್ಲಾ ಹಣ್ಣಿನ ಮರಗಳನ್ನೂ ನಿಮಗೆ ಆಹಾರಕ್ಕಾಗಿ ಕೊಟ್ಟಿದ್ದೇನೆ. ಇದಲ್ಲದೆ ಭೂಮಿಯ ಮೇಲೆ ತಿರುಗಾಡುವ ಮೃಗಗಳು, ಆಕಾಶದಲ್ಲಿ ಹಾರಾಡುವ ಪಕ್ಷಿಗಳು, ನೆಲದಲ್ಲಿ ಹರಿದಾಡುವ ಕ್ರಿಮಿಕೀಟಗಳು ಎಂಬ ಜೀವಿಗಳಿಗೆ ಎಲ್ಲಾ ಹುಲ್ಲು ಸೊಪ್ಪುಗಳನ್ನು ಆಹಾರಕ್ಕಾಗಿ ಕೊಟ್ಟಿದ್ದೇನೆ" ಎಂದು ಹೇಳಿದನು (ಆದಿಕಾಡ 1:29, 30).

ನೈಸರ್ಗಿಕ ನಿಯಮಗಳನ್ನು ಕೈಕೊಂಡು ಹೋಗುವದರೊಂದಿಗೆ, ಆತನು ವಿಶ್ವವನ್ನು ತನ್ನ ದೈವಿಕ ಜೋಪಾಸನೆಯೊಂದಿಗೆ ಸಂಬಂಧಿಸಿದ ಎಲ್ಲಾ ಶಕ್ತಿಗಳನ್ನು ಮೇಲಕ್ಕೆತ್ತಿ ಹಿಡಿಯುತ್ತಾನೆ.

> "ನೀನೊಬ್ಬನೇ ದೇವರು; ನೀನು ಉನ್ನತೋನ್ನತವಾದ ಆಕಾಶವನ್ನೂ ಅದರ ಸೈನ್ಯವನ್ನೂ ಭೂಮಿಯನ್ನೂ ಅದರ ಮೇಲಿರುವದನ್ನೂ ಸಮುದ್ರಗಳನ್ನೂ ಎಲ್ಲಾ ಜಲಚರಗಳನ್ನೂ ಉಂಟುಮಾಡಿ ಸಮಸ್ತ ಪ್ರಾಣಿಗಳ ಜೀವನಾಧಾರವಾಗಿರುತ್ತೀ: ಆಕಾಶ ಸೈನ್ಯದವರು ನಿನಗೆ ಅಡ್ಡ ಬೀಳುತ್ತಾರೆ" (ನೆಹೆಮೀಯ 9:6).

ವಿಶೇಷವಾಗಿ ಆತನು ಮನುಷ್ಯರನ್ನೂ ಪಶುಗಳನ್ನೂ ಕಾಪಾಡುತ್ತಿದ್ದಾನೆ: "... ಯೆಹೋವನೇ, ನೀನು ಮನುಷ್ಯರನ್ನೂ ಮೃಗಗಳನ್ನೂ ಸಂರಕ್ಷಿಸುತ್ತೀ" (ಕೀರ್ತನೆ 36:6). ಭೂಲೋಕದ ಎಲ್ಲಾ ಜೀವಿಗಳಿಗೆ ಆಹಾರ ಒದಗಿಸುತ್ತಾನೆ: "ಆತನು ಪಶುಗಳಿಗೂ ಕೂಗುತ್ತಿರುವ ಕಾಗೇ ಮರಿಗಳಿಗೂ ಬೇಕಾದ ಆಹಾರ ಕೊಡುತ್ತಾನೆ" (ಕೀರ್ತನೆ 147:9). ಆಕಾಶದ ಪಕ್ಷಿಗಳ ಮೇಲೆ ಗಮನವಿಡುತ್ತಾನೆ: "ಆಕಾಶದಲ್ಲಿ ಹಾರಾಡುವ ಹಕ್ಕಿಗಳನ್ನು ನೋಡಿರಿ; ಅವು ಬಿತ್ತುವದಿಲ್ಲ, ಕೊಯ್ಯುವದಿಲ್ಲ, ಕಣಜಗಳಲ್ಲಿ ತುಂಬಿಟ್ಟುಕೊಳ್ಳುವದಿಲ್ಲ; ಆದಾಗ್ಯೂ ಪರಲೋಕದಲ್ಲಿರುವ ನಿಮ್ಮ ತಂದೆಯು

ಅವುಗಳನ್ನು ಸಾಕಿ ಸಲಹುತ್ತಾನೆ; ಅವುಗಳಿಗಿಂತ ನೀವು ಹೆಚ್ಚಿನವರಲ್ಲವೋ?" (ಮತ್ತಾಯ 6:26); "ದುಡ್ಡಿಗೆ ಎರಡು ಗುಬ್ಬಿಗಳನ್ನು ಮಾರುವದುಂಟಲ್ಲಾ ಆದರೂ ನಿಮ್ಮ ತಂದೆಯ ಚಿತ್ತವಿಲ್ಲದೆ ಒಂದಾದರೂ ನೆಲಕ್ಕೆ ಬೀಳದು" (ಮತ್ತಾಯ 10:29). ಜಗತ್ತಿನ ಜನರ ಜನಾಂಗಗಳ ಮೇಲೆ ಆಡಳಿತ ಮಾಡುತ್ತಾನೆ: "ಜನಾಂಗ ಗಳನ್ನು ವೃದ್ಧಿಗೊಳಿಸಿ ನಾಶಪಡಿಸುವನು, ಅವುಗಳನ್ನು ವಿಸ್ತರಿಸಿ ಗಡೀಪಾರು ಮಾಡುವನು" (ಯೋಬ 12:23). ಆತನು ನೀತಿವಂತರನ್ನು ಕಾಪಾಡುತ್ತಾನೆ ಮತ್ತು ಆಶೀರ್ವದಿಸುತ್ತಾನೆ: "ಅಪರಾಧಿಗಳೆಲ್ಲರೂ ನಾಶವಾಗುವರು; ದುಷ್ಟರ ಸಂತಾನವು ತೆಗೆದು ಹಾಕಲ್ಪಡುವದು. ನೀತಿವಂತರ ರಕ್ಷಣೆ ಯೆಹೋವನಿಂದಲೇ; ಇಕ್ಕಟ್ಟಿನಲ್ಲಿ ಅವರ ಬಲವು ಆತನೇ" (ಕೀರ್ತನೆ 37:38, 39). "ನಿಮ್ಮ ತಲೇ ಕೂದಲುಗಳು ಸಹ ಎಲ್ಲವೂ ಎಣಿಕೆಯಾಗಿವೆ" (ಮತ್ತಾಯ 10:30). ತನ್ನ ಬಳಿಗೆ ಬಂದು ತನಗೆ ವಿಧೇಯರಾಗುವವರಿಗೆ ಆತನು ನಿತ್ಯ ಜೀವವನ್ನು ಒದಗಿಸುತ್ತಾನೆ: "ನನ್ನ ಕುರಿಗಳು ನನ್ನ ಸ್ವರಕ್ಕೆ ಕಿವಿಗೊಡುತ್ತವೆ; ನಾನು ಅವುಗಳನ್ನು ಬಲ್ಲೆನು; ಅವು ನನ್ನ ಹಿಂದೆ ಬರುತ್ತವೆ. ನಾನು ಅವುಗಳಿಗೆ ನಿತ್ಯ ಜೀವವನ್ನು ಕೊಡುತ್ತೇನೆ; ಅವು ಎಂದಿಗೂ ನಾಶವಾಗುವದೇ ಇಲ್ಲ; ಅವುಗಳನ್ನು ಯಾರೂ ನನ್ನ ಕೈಯೊಳಗಿಂದ ಕಸಿದುಕೊಳ್ಳಲಾರನು" (ಯೋಹಾನ 10:27, 28).

ಲೋಕದ ಅನೇಕ ಪಟ್ಟಣಗಳಲ್ಲಿ ಜನರಿಗಾಗಿ ಒಂದು ರೀತಿಯ ಸಾಗಾಣಿಕೆಯ ಪದ್ಧತಿಯಿರುತ್ತದೆ. ಈ ಪದ್ಧತಿಯಲ್ಲಿ ಉಪಯೋಗಿಸಲ್ಪಡುವ ವಾಹನಗಳನ್ನು ಚೆನ್ನಾಗಿ ಇಟ್ಟು ಕೊಳ್ಳಬೇಕಾಗುತ್ತದೆ. ಎಣ್ಣೆ ಬದಲಾಯಿಸುವುದು, ಮುರಿದ ಭಾಗಗಳನ್ನು ಸರಿಪಡಿಸುವುದು, ಸವೆದು ಹೋದ ಭಾಗಗಳನ್ನು ಬದಲಾಯಿಸುವುದು ಇವುಗಳನ್ನು ಮಾಡದಿದ್ದರೆ ವಾಹನಗಳು ದಾರಿಯ ಬದಿಯಲ್ಲಿ ಬಿಡಲ್ಪಡಬೇಕಾಗುತ್ತವೆ. ಎಲ್ಲಾ ಯಂತ್ರಗಳಿಗೂ ಜೋಪಾನ ಬೇಕಾಗುತ್ತದೆ. ಹೀಗೆ ಸರಿಪಡಿಸುವ ಅವಶ್ಯಕತೆಯಿಲ್ಲದ ಯಾವುದೇ ಯಂತ್ರವು ಭೂಲೋಕದ ಮೇಲೆ ಇರುವುದು ನನಗೆ ತಿಳಿದಿರುವದಿಲ್ಲ. ಭೂಲೋಕವು ದೈತ್ಯ ಯಂತ್ರದಂತಿದೆ. ಅದನ್ನು ಜೋಪಾನ ಮಾಡಬೇಕು, ಅದಕ್ಕೆ ಒದಗಿಸಿ ಕೊಡಲ್ಪಡಬೇಕು. ಅದು ಪರಲೋಕದ ದೇವರಿಂದ ಆಧಾರವಾಗಿ ಹಿಡಿಯಲ್ಪಟ್ಟಿದೆ ಎಂದು ಬೈಬಲು ಹೇಳುತ್ತದೆ (ಇಬ್ರಿಯ 1:3).

ನಮ್ಮನ್ನು ಕಾಯುತ್ತಾ, ನಮಗಾಗಿ ಒದಿಗಿಸುವುದಕ್ಕಾಗಿ ದೇವರಿಗೆ ನಾವು ಎಷ್ಟೋ ಕೃತಜ್ಞತೆಯುಳ್ಳವರಾಗಿರಬೇಕಲ್ಲವೇ! ಒಳ್ಳೇ ಮನುಷ್ಯನಿಗಾಗಿ ದೇವರ ಪರಿಪಾಲನೆಯಿರುವದೆಂಬದರ ಬಗ್ಗೆ ಯಾರಿಗೂ ಸಂಶಯ ವಿರಬಾರದು (ಅಪೊಸ್ತಲರ ಕೃತ್ಯಗಳು 14:17) ಯಾಕೆಂದರೆ ಆತನು ದುಷ್ಟರ ಮೇಲೆಯೂ, ಒಳ್ಳೆಯವರ ಮೇಲೆಯೂ ಸೂರ್ಯನನ್ನು ಉದಯಿಸುವಂತೆ ಮಾಡುವನು (ಮತ್ತಾಯ 5:45). ನಂಬಿಕೆಯಿಂದ ನಡೆಯುವವರಿಂದ

ಯಾವುದೇ ಒಳ್ಳೆ ಸಂಗತಿಯನ್ನು ಆತನು ಹಿಡಿದಿಟ್ಟುಕೊಳ್ಳುವದಿಲ್ಲವೆಂದು ಆತನ ಸೇವೆ ಮಾಡಿದವರೆಲ್ಲರ ಕಥೆಯು ಸಿದ್ಧಪಡಿಸಿ ತೋರಿಸುತ್ತದೆ (ಕೀರ್ತನೆ 84:11; ರೋಮಾಪುರ 8:28).

## ನಮ್ಮ ವಿಮೋಚಕನು

ದೇವರು ನಮ್ಮ ವಿಮೋಚಕನು, ನಮ್ಮ ರಕ್ಷಕನು. ಆತನು ನಮ್ಮನ್ನು ಪ್ರೀತಿಸುತ್ತಾನೆ. ನಮ್ಮನ್ನು ಪಾಪದಿಂದ ರಕ್ಷಿಸಲು ಬಯಸುತ್ತಾನೆ. ನಿತ್ಯತ್ವಕ್ಕಾಗಿ ನಮ್ಮ ನಿರೀಕ್ಷೆಯು ಆತನಲ್ಲಿ ಇರುತ್ತದೆ.

ನಮಗಾಗಿರುವ ಆತನ ಪ್ರೀತಿಯನ್ನು ವಿವರಿಸುವುದು ಕಠಿಣವಾದದ್ದಾಗಿದೆ. ನಾವು ಎಂದೂ ತಿಳಿಯಲ್ಪಡುವ ಯಾವುದೇ ಮಾನವ ಪ್ರೀತಿಗಿಂತ ಅದು ಹೆಚ್ಚು ದೊಡ್ಡದಾಗಿದೆ. ಎಲ್ಲಾ ಜನರೂ ಪಾಪ ಮಾಡಿ ಆತನಿಂದ ತಮ್ಮನ್ನು ಬೇರೆಯಾಗಿರುವದನ್ನು ಆಯ್ಕೆಮಾಡಿಕೊಂಡಿದ್ದರೂ ಆತನು ಅವರನ್ನು ರಕ್ಷಿಸಲು ಹುಡುಕುತ್ತಾನೆ. ನಮ್ಮ ರಕ್ಷಣೆಗಾಗಿ ಅಂತಿಮ ಯಜ್ಞವನ್ನು ಅರ್ಪಿಸಲು ಲೋಕದೊಳಗೆ ಆತನನ್ನು ಕಳುಹಿಸುವದರಿಂದ ಕ್ರಿಸ್ತನ ಮೂಲಕವಾಗಿ ಆತನು ನಮಗೆ ರಕ್ಷಣೆಯನ್ನು ಕೊಟ್ಟಿದ್ದಾನೆ.

ಸಂಪೂರ್ಣವಾಗಿ ನೀತಿವಂತನಾದ ದೇವರು, ಪಾಪವನ್ನು ಮನ್ನಿಸಲಾರನು, ನಿತ್ಯ ಮರಣವನ್ನು ಅನುಭವಿಸದೇ ನಾವು ನಮ್ಮ ಪಾಪಕ್ಕಾಗಿ ದಂಡವನ್ನು ತರಲಾರೆವು. ನಮ್ಮ ಪಾಪಕ್ಕಾಗಿ ಶಿಕ್ಷೆಯನ್ನು ಹೊತ್ತುಕೊಳ್ಳಲು ದೇವರು ಯೇಸುವನ್ನು ಶಿಲುಬೆಗೆ ಕಳುಹಿಸಿದನು, ರಕ್ಷಣೆಯ ಆತನ ಸಂದೇಶವನ್ನು ಸ್ವೀಕರಿಸುತ್ತ ವಿಧೇಯರಾಗುತ್ತ ಆತನ ಬಳಿಗೆ ಬರುವ ಯಾರಾದರೂ, ಯೇಸುವಿನ ಮರಣದ ಲಾಭಗಳನ್ನು ಹೊಂದಿಕೊಳ್ಳುವರು. ಹೀಗೆ ಸತ್ಯವೇದವು ಯೇಸುವನ್ನು ನಮ್ಮ ರಕ್ಷಕನು ಎಂದು ವಿವರಿಸುವಂತೆ (ತೀತ 2:13) ದೇವರನ್ನು ನಮ್ಮ ರಕ್ಷಕನೆಂದು (ತೀತ 1:3) ವಿವರಿಸುವುದು. ಲೋಕದ ಅಸ್ತಿವಾರಕ್ಕಿಂತ ಮೊದಲೇ ದೇವರು ನಮ್ಮ ವಿಮೋಚನೆಯನ್ನು ಯೋಜಿಸಿದನು (1 ಪೇತ್ರ 1:20). ಈಗ ಎಲ್ಲಾ ಜನರು ಆತನ ಸಂದೇಶ ಕೇಳುವದನ್ನು, ಮಾನಸಾಂತರಪಡುವದನ್ನು (ಅವರು ತಮ್ಮ ಮನಸ್ಸುಗಳನ್ನು, ತಮ್ಮ ಜೀವಿತಗಳನ್ನು ಬದಲಾಯಿಸುವದನ್ನು) ಹಾಗೂ ತನ್ನ ರಕ್ಷಣೆಯನ್ನು ಸ್ವೀಕರಿಸುವದನ್ನು ನೋಡಲು ಪ್ರೀತಿಯಿಂದ ಕಾಯುತ್ತಿರುವನು (2 ಪೇತ್ರ 3:9).

ಅವಮಾನಗೊಳಿಸುವ ತಂದೆಯುಳ್ಳ ಒಬ್ಬ ಬಾಲಕನನ್ನು ಚಿತ್ರಿಸಿಕೊಳ್ಳಿರಿ. ಅವನ ತಂದೆಯು ಅವನನ್ನು ಗದರಿಸುವದಕ್ಕಾಗಿ ಮಾತ್ರವೇ ಅವನೊಂದಿಗೆ ಮಾತಾಡುತ್ತಾನೆ. ಬಾಲಕನು ತಪ್ಪು ಮಾಡುವಾಗಲೆಲ್ಲಾ ಅವನ ತಂದೆ ಅವನನ್ನು

ಹೊಡೆಯುತ್ತಾನೆ. ತನ್ನ ತಂದೆಯೊಂದಿಗೆ ಈ ರೀತಿಯ ಸಂಬಂಧದಲ್ಲಿ ಕೆಲವು ವರ್ಷ ಜೀವಿಸಿದ ನಂತರ, ಅವನು ತನ್ನ ತಂದೆಯು ಒಬ್ಬ ಕಠಿಣವಾದ ನ್ಯಾಯಾಧೀಶನಂತಿರುವನೆಂದು ತಿಳಿದು ಕೊಂಡನೇ ಹೊರತು ಪ್ರೀತಿಸುವ ತಂದೆಯಂತೆ ಅಲ್ಲ. ತನ್ನ ತಂದೆಯ ಬಗ್ಗೆ ಭಯಪಡುತ್ತಾನೆ ಆದರೆ ಅವನನ್ನು ಪ್ರೀತಿಸುವದಿಲ್ಲ. ಅವನೊಂದಿಗೆ ಇರುವದರಲ್ಲಿ ಅವನಿಗೆ ಸಂತೋಷವೂ ಇರುವುದಿಲ್ಲ. "ತಂದೆ" ಎಂಬ ಪದವನ್ನು ಕೇಳುವಾಗಲೆಲ್ಲಾ, ತನ್ನ ಮುಖಕ್ಕೆ ಹೊಡೆದಂತೆ ಇಲ್ಲವೇ ಪೆಟ್ಟುಗಳನ್ನು ಕೊಟ್ಟಂತೆ ಯೋಚಿಸುವನು. ಈ ದುರ್ದೈವಿ ಬಾಲಕನು "ತಂದೆ" ಎಂಬ ಪದದಲ್ಲಿ ಈ ಪದವು ಕೊಡಬೇಕಾದ ಸುಂದರ ವಾದ ಅರ್ಥವನ್ನು ನೋಡುವುದು ಅವನಿಗೆ ಕಠಿಣವಾಗಿತ್ತು.

ಕೆಲವು ಜನರಿಗೆ "ದೇವರು" ಎಂಬ ಪದದ ಬಗ್ಗೆ ಇದೇ ರೀತಿಯ ಭಾವನೆಯಿರುತ್ತದೆ. ಅವರ ಜೀವನದಲೆಲ್ಲಾ ದೇವರು ಒಬ್ಬ ನ್ಯಾಯಾಧೀಶನಂತೆ ಇರುವನು, ಅವರು ತಪ್ಪುಮಾಡುವದನ್ನೇ ಕಾಯುತ್ತ ಅವರನ್ನು ನರಕದಲ್ಲಿ ಹಾಕಿ ಶಿಕ್ಷಿಸುವದನ್ನು ನೋಡುತ್ತಿರುವನು ಎಂಬುದಾಗಿ ಬೋಧಿಸಲ್ಪಟ್ಟಿದ್ದಾರೆ. ದೇವರನ್ನು ನಮ್ಮ ತಂದೆಯಂತೆ ನೋಡ ಬೇಕೆಂದು ಯೇಸು ಬೋಧಿಸಿದ್ದಾನೆ. ನಾವು ಪ್ರಾರ್ಥಿಸುವಾಗ ಆತನನ್ನು "ತಂದೆಯೇ" ಎಂದು ಕರೆಯಬೇಕೆಂದು ಆತನು ಹೇಳಿದ್ದಾನೆ (ಮತ್ತಾಯ 6:9). ತ್ಯಾಗದ ಪ್ರೀತಿಯಿಂದ ದೇವರು ನಮ್ಮನ್ನು ಪ್ರೀತಿ ಸುತ್ತಾನೆಂದು ಆತನು ಹೇಳಿದ್ದಾನೆ (ಯೋಹಾನ 3:16). ನಮಗಾಗಿರುವ ಆತನ ಪ್ರೀತಿಗಿಂತ ಬೇರೆ ಯಾವುದೇ ಹೆಚ್ಚು ದೊಡ್ಡದಾದ ಪ್ರೀತಿಯನ್ನು ಕಲ್ಪಿಸಿಕೊಳ್ಳ ಲಿಕ್ಕಾಗದು. ಆತನು ನಮ್ಮ ಅನ್ಯೋನ್ಯತೆಯನ್ನು ಅಪೇಕ್ಷಿಸುತ್ತಾನೆಂದು ನಾವು ಆತನಿಗೆ ವಿಧೇಯರಾಗುವಾಗ ಆತನು ನಮ್ಮೊಂದಿಗಿರುತ್ತಾನೆ (ಯೋಹಾನ 14:23). ನಾವು ಆತನಿಂದ ದೂರ ಹೋಗುವಾಗ, ಮಾನಸಾಂತರ ಪಡುವದರಿಂದ ನಾವು ಆತನ ಬಳಿಗೆ ಹಿಂದಿರುಗಿ ಬರುವಾಗ ಪ್ರೀತಿಯ ಕ್ಷಮಾಪಣೆಯಲ್ಲಿ ಆತನು ನಮ್ಮನ್ನು ಪುನಃ ಸ್ವೀಕರಿಸಿಕೊಳ್ಳುತ್ತಾನೆ (ಲೂಕ 15:19-32).

ಯಾವುದೇ ಮಾನವ ಜೀವಿಯು ನಮಗಾಗಿ ಮಾಡಲು ಶಕ್ತನಾಗಿದ್ದುದಕ್ಕಿಂತಲೂ ಹೆಚ್ಚಾಗಿರುವದನ್ನು ದೇವರು ನಮಗಾಗಿ ಮಾಡಿದ್ದಾನೆ. ಆತನ ಮಹಾ ಪ್ರೀತಿಗೆ ನಾವು ಹೇಗೆ ಉತ್ತರಕೊಡಬಹುದು? ನಾವು ಪ್ರತಿಯಾಗಿ ಆತನನ್ನು ಪ್ರೀತಿಸಬೇಕು. ಆತನ ವಾಕ್ಯಕ್ಕೆ ವಿಧೇಯರಾಗುವದರಿಂದಲೂ, ಆತನನ್ನು ಏಕೈಕ ದೇವರೆಂದು ಆರಾಧಿಸುವದರಿಂದಲೂ ನಮ್ಮ ಪ್ರೀತಿಯನ್ನು ಪ್ರದರ್ಶಿಸಬೇಕು. ಆತನ ಮುಂದೆ ಭಕ್ತಿಯಿಂದಲೂ ಗೌರವದಿಂದಲೂ ನಡೆಯ ಬೇಕು.

## ನಮ್ಮ ನ್ಯಾಯಾಧಿಪತಿ

ಆತನು ಪ್ರೀತಿಸುವ ತಂದೆಯೂ ಕೃಪಾಪೂರ್ಣನೂ ಆಗಿರುವಾಗ, ದೇವರು

ನಮಗೆ ನ್ಯಾಯ ತೀರಿಸುವವನೂ ಆಗಿರುವನು. ಸಮಯದ ಅಂತ್ಯದಲ್ಲಿ ನಾವು ಆತನಿಗೆ ಲೆಕ್ಕ ಕೊಡತಕ್ಕದ್ದು.

ನಮ್ಮನ್ನು ಸೃಷ್ಟಿಸಿದಾತನಿಗೆ ನಾವು ಪ್ರತಿಯೊಬ್ಬರೂ ಲೆಕ್ಕ ಕೊಡತಕ್ಕದ್ದೆಂದೂ ನಂಬುವುದು ಕೇವಲ ಯೋಗ್ಯವಾದದ್ದಾಗಿದೆ. ಹಾಗೂ ವಿವೇಚನೆಯು ನಿರ್ದೇಶಿಸುವಂಥದ್ದು ಸತ್ಯವೆಂದು ಬೈಬಲು ಘೋಷಿಸುತ್ತದೆ (ಪ್ರಕಟನೆ 20:12). ದೇವರು ನಮಗೆ ಹೇಗೆ ನ್ಯಾಯ ತೀರಿಸುವನು? ಆತನ ನ್ಯಾಯ ತೀರ್ವಿಕೆಯು ವ್ಯಕ್ತಿಗತವಾಗಿರುವುದು. ಪ್ರತಿಯೊಬ್ಬ ವ್ಯಕ್ತಿಯು ಆತನಿಗೆ ಲೆಕ್ಕಕೊಡುವನು (ರೋಮಾಪುರ 14:12). ಆತನ ನ್ಯಾಯ ತೀರ್ಪು ಸ್ಪಷ್ಟವಾಗಿರುವುದು. ಪ್ರತಿಯೊಬ್ಬನೂ ತಾನು ಹೇಳಿದ್ದಕ್ಕೆ (ಮತ್ತಾಯ 12:36, 37) ಮತ್ತು ಮಾಡಿದ್ದಕ್ಕೆ (2 ಕೊರಿಂಥ 5:10) ಜವಾಬ್ದಾರನಾಗಿರುವನು. ಆತನ ನ್ಯಾಯ ತೀರಿಸುವಿಕೆಯು ಸಾರ್ವತ್ರಿಕವಾದದ್ದಾಗಿರುತ್ತದೆ. ಆತನ ಮುಂದೆ ಎಲ್ಲಾ ಜನಾಂಗಗಳೂ ಕೂಡಿಬರುವವು (ಮತ್ತಾಯ 25:32).

ದೇವರು ಯೇಸು ಕ್ರಿಸ್ತನ ಮುಖಾಂತರ ನಮಗೆ ನ್ಯಾಯ ವಿಚಾರಣೆ ಮಾಡುವನು. ನೀತಿಯೊಂದಿಗೆ ಆತನ ಪ್ರಮಾಣದ ಅಳತೆಯಂತೆ (ಅಪೊಸ್ತಲರ ಕೃತ್ಯಗಳು 17:30, 31), ಆತನ ನ್ಯಾಯ ತೀರ್ಪು ಅಂತಿಮವಾದದ್ದೂ ನಿತ್ಯವಾದದ್ದೂ ಆಗಿರುವುದು (ಮತ್ತಾಯ 25:46). ಆತನಿಂದ ತೀರ್ಪುಕೊಡಲ್ಪಟ್ಟ ನಂತರ ಯಾವ ಮನವಿಯನ್ನೂ ಮಾಡಲಿಕ್ಕಾಗುವದಿಲ್ಲ.

ಎರಡು ವಾಹನಗಳು ಅಪಘಾತದಲ್ಲಿ ಅಪ್ಪಳಿಸಿದಾಗ ಪ್ರಜ್ಞೆ ಕಳೆದುಕೊಂಡ ಒಬ್ಬ ಯುವಕನ ಕಥೆಯು ಹೇಳಲ್ಪಡುತ್ತದೆ. ಅಪಘಾತವನ್ನು ಕಣ್ಣಾರೆ ನೋಡಿದ ಒಬ್ಬರು ವಾಹನಗಳಿಗೆ ಬೆಂಕಿ ಹತ್ತಿ ಸ್ಫೋಟಗೊಳ್ಳುವ ಮೊದಲು ಆ ಯುವಕನನ್ನು ಎಳೆದು ಸುರಕ್ಷಿತ ಸ್ಥಳಕ್ಕೆ ತಂದರು. ಯುವಕನನ್ನು ಹಾಗೆಯೇ ಬಿಟ್ಟಿದ್ದರೆ ಅವನು ಸುಟ್ಟು ಬೂದಿಯಾಗಿ ಹೋಗುತ್ತಿದ್ದನು.

ಆ ಯುವಕನು ಉಳಿಸಲ್ಪಟ್ಟ ನಂತರ, ತನ್ನ ಕಣ್ಣುಗಳನ್ನು ತೆಗೆದು ಮೇಲಕ್ಕೆ ನೋಡಿ ದಾಗ ತನ್ನ ಜೀವ ರಕ್ಷಿಸಿದ ವ್ಯಕ್ತಿಯ ಮುಖವನ್ನು ನೋಡಿದನು. ಅವನು ಎಂದಿಗೂ ಆ ಮುಖವನ್ನು ಮರೆಯಲಿಲ್ಲ. ಆ ಯುವಕನು ಅಪಘಾತದಿಂದ ಚೇತರಿಸಿ ಕೊಂಡನು. ವರ್ಷಗಳು ದಾಟಿ ಹೋದವು. ಅವನು ದೊಡ್ಡವನಾದಾಗ, ಕಠಿಣವಾದ ತೊಂದರೆಯಲ್ಲಿ ಬಂಧಿಸಲ್ಪಟ್ಟನು. ವಿಚಾರಣೆಗಾಗಿ ನ್ಯಾಯಾಧೀಶನ ಮುಂದೆ ತರಲ್ಪಟ್ಟಾಗ ಅವನಿಗೆ ಆಶ್ಚರ್ಯವಾಯಿತು; ಯಾಕಂದರೆ ವರ್ಷಗಳ ಹಿಂದೆ ತನ್ನನ್ನು ರಕ್ಷಿಸಿದ ಮನುಷ್ಯನೇ ಆ ನ್ಯಾಯಾಧೀಶನಾಗಿದ್ದುದನ್ನು ಗುರಿತಿಸಿದನು. ಹಿಂಜರಿಯದೇ, ಆ ಯುವಕನು, "ಮಾನ್ಯರೇ, ತಮಗೆ ನನ್ನ ಜ್ಞಾಪಕವಿದೆಯೇ? ವರ್ಷಗಳ ಹಿಂದೆ ಅಪಘಾತದಲ್ಲಿಯ ವಾಹನಗಳಿಂದ ನನ್ನನ್ನು ಎಳೆದು ನನ್ನ ಜೀವ ಕಾಪಾಡಿದವರು ನೀವು" ಎಂದು ಹೇಳಿದನು.

ನ್ಯಾಯಾಧೀಶರು ವಿಚಾರಪೂರ್ವಕವಾಗಿ ಹೀಗೆ ಹೇಳಿದರು: "ಹೌದು, ನನಗೆ ಜ್ಞಾಪಕವಿದೆ. ನಾನು ರಕ್ಷಿಸಿದ ಮನುಷ್ಯನಿಗಾಗಿ ನಾನು ಒಳ್ಳೆಯದನ್ನು ಬಯಸಿದೆ. ನೀನು ನಿನ್ನ ಜೀವಿತ ಮುಂದುವರಿಸಲಿಕ್ಕಾಗುವಂತೆ ನಾನು ನಿನ್ನನ್ನು ಉಳಿಸಲು ಶಕ್ತನಾದದ್ದಕ್ಕೆ ನನಗೆ ಸಂತೋಷವಿತ್ತು. ಹೀಗಿದ್ದರೂ ನೀನು ಈ ಸಂಗತಿಯನ್ನು ನೋಡತಕ್ಕದ್ದು; ವರ್ಷಗಳ ಹಿಂದೆ ವಾಹನದಿಂದ ನಾನು ನಿನ್ನನ್ನು ಎಳೆದಾಗ, ನಾನು ನಿನ್ನ 'ರಕ್ಷಕನಾಗಿದ್ದೆನು;' ಆದರೆ ಈಗ ನಾನು ನಿನ್ನ 'ನ್ಯಾಯಾಧೀಶನು.' "

ಬೈಬಲ್‌ನಲ್ಲಿ ದೇವರು ನಮ್ಮ ರಕ್ಷಕನೆಂತಲೂ ನ್ಯಾಯಾಧೀಶನೆಂತಲೂ ಚಿತ್ರಿಸಲ್ಪಟ್ಟಿದ್ದಾನೆ. ನಮ್ಮನ್ನು ಪಾಪದಿಂದ ವಿಮೋಚಿಸಲು ಆತನು ತನ್ನ ಕುಮಾರನನ್ನು ಕಳುಹಿಸಿದನು. ನಮ್ಮನ್ನು ರಕ್ಷಿಸಲು ಆತನು ಅತ್ಯುನ್ನತವಾದ ಯಜ್ಞವನ್ನು ಸಮರ್ಪಿಸಿದನು. ನಾವು ಕೇಳದಿದ್ದರೆ, ಆತನ ರಕ್ಷಣೆಯನ್ನು ತಿರಸ್ಕರಿಸಿದರೆ ಏನಾಗುವುದು? ಆಗ, ಆತನು ನಮ್ಮನ್ನು ದಂಡಿಸುವನು. ಯಾಕಂದರೆ ಆತನು ನಮ್ಮ ನಿತ್ಯನಾದ ನ್ಯಾಯಾಧೀಶನಾಗಿರುವನು.

ನಮಗೆ ನಮ್ಮ ಜೀವನದಲ್ಲಿ ಒಂದು ಪ್ರಾಮುಖ್ಯವಾದ ಕರ್ತವ್ಯವಿರುವುದು. ದೇವರು ಯಾರಾಗಿದ್ದಾನೆಂಬುದನ್ನು ನೋಡುವಲ್ಲಿ, ಆತನ ಚಿತ್ತಕ್ಕೆ ವಿಧೇಯತೆಯಲ್ಲಿ ನಾವು ಆತನ ಮುಂದೆ ತಲೆ ಬಾಗಬೇಕು. ನಿಜವಾದ ಮತ್ತು ಜೀವಿಸುವ ದೇವರಂತೆ ನಾವು ಆತನನ್ನು ಆರಾಧಿಸಬೇಕು. ಅಂಥ ಉತ್ತರವು ಆತನ ವಾಕ್ಯವನ್ನು ತೆಗೆದು ಅದನ್ನು ಜಾಗರೂಕತೆಯಿಂದ ಅಧ್ಯಯನ ಮಾಡುವದನ್ನು ಒಳಗೊಂಡಿದೆ. ಆತನು ನಮ್ಮನ್ನು ಪ್ರೀತಿಸುವ ರಕ್ಷಕನಾಗಿರಲು ಬಯಸುತ್ತಾನೆ. ಆದರೆ ನಮ್ಮ ನಿತ್ಯ ನ್ಯಾಯಾಧೀಶನಾಗಿ ಅಲ್ಲ.

## ಮುಕ್ತಾಯ

ದೇವರ ಬಗೆಗಿನ ಈ ಸಂಗತಿಗಳ ಬೆಳಕಿನಲ್ಲಿ ಆತನ ಬಗ್ಗೆ ಯಾವುದೇ ಅಭಿಪ್ರಾಯವಿಲ್ಲದೇ ಇರಲಾರೆವು. ಆತನ ಬಗ್ಗೆ ಒಂದು ತೀರ್ಮಾನವನ್ನು ಮಾಡಲೇ ಬೇಕಾಗುತ್ತದೆ. ಯೋಗ್ಯವಾದ ಒಂದೇ ಉತ್ತರವು ಆತನನ್ನು ನಿಜವಾದ ಹಾಗೂ ಜೀವಿಸುವ ದೇವರೆಂದು ಒಪ್ಪಿಕೊಳ್ಳುವುದೂ ನಂಬಿಕೆಯಲ್ಲಿಯೂ ವಿಧೇಯತೆಯಲ್ಲಿಯೂ ಆತನ ಸೇವೆ ಮಾಡುವುದೂ ಆಗಿದೆ.

"ಇಬ್ಬರು ರಸಾಯನ ಶಾಸ್ತ್ರಜ್ಞದ ಸ್ವೀಡನ್‌ದ ಕಾರ್ಲ ಷೀಲೀ ಹಾಗೂ ಇಂಗ್ಲಾಂಡಿನ ಜೋಸೆಫ ಪ್ರೀಸ್ಟಲೇ ಅವರು ಸುಮಾರು 1775ರಲ್ಲಿ ಪ್ರಾಣ ವಾಯುವನ್ನು ಕಂಡು ಹಿಡಿದರು" ಎಂದು ಒಬ್ಬ ಶಾಲಾ ಶಿಕ್ಷಕಿ ತನ್ನ ಕ್ಲಾಸಿನ ಮಕ್ಕಳಿಗೆ ಹೇಳಿದಳು. ಕೂಡಲೇ ಒಬ್ಬ ಚಿಕ್ಕ ಬಾಲಕಿ ತನ್ನ ಕೈಯನ್ನೆತ್ತಿ, "ಅವರು ಪ್ರಾಣ ವಾಯುವನ್ನು ಕಂಡು ಹಿಡಿಯುವದರ ಮೊದಲು ಯಾವುದನ್ನು ನಾವು

ಉಸಿರಾಡಿಸುತ್ತಿದ್ದೆವು?" ಎಂದು ಪ್ರಶ್ನಿಸಿದಳು. ಆಗ ಆ ಶಿಕ್ಷಕಿ, ಪ್ರಾಣ ವಾಯು ಯಾವಾಗಲೂ ನಮ್ಮ ವಾತಾವರಣದಲ್ಲಿತ್ತು, ಆದರೆ ಅದರ ಬಗ್ಗೆ ನಮಗೆ ತಿಳಿದಿರಲಿಲ್ಲ ಇಲ್ಲವೇ ಈ ರಸಾಯನ ಶಾಸ್ತ್ರಜ್ಞರು ಕಂಡು ಹಿಡಿಯುವವರೆಗೆ ಅದಕ್ಕೆ ಹೆಸರಿರಲಿಲ್ಲ ಎಂದು ವಿವರಿಸಿ ಹೇಳಿದರು.

ನಮ್ಮ ಜಗತ್ತು ಎರಡು ರೀತಿಯ ವಾಸ್ತವಿಕತೆಗಳಿಂದ ಮಾಡಲ್ಪಟ್ಟಿದೆ: ನಮ್ಮ ಕಣ್ಣಿನಿಂದ ನೋಡಬಹುದಾದ ಹಾಗೂ ದೈಹಿಕ ಹಸ್ತಗಳಿಂದ ಸ್ಪರ್ಶಿಸಲ್ಪಡ ಬಹುದಾದ ವಾಸ್ತವಿಕತೆಗಳು ಮತ್ತು ನಾವು ನೋಡಲಾರದ ಹಾಗೂ ಸ್ಪರ್ಶಿಸಲಾಗದ ಸತ್ಯಗಳು. ಮೊದಲಿನ ಗುಂಪಿನಲ್ಲಿಯ ವಾಸ್ತವಿಕತೆ ಗಳು ನಮಗೆ ಬಹಳ ಸ್ಪಷ್ಟವಾಗಿವೆ ಯಾಕಂದರೇ ನಿಜವಾದ ವಸ್ತುಗಳನ್ನು ಹಿಡಿದುಕೊಂಡು ಅವುಗಳೊಂದಿಗೆ ಸತತವಾಗಿ ಕೆಲಸ ಮಾಡುತ್ತಿರುತ್ತೇವೆ. ಎರಡನೆಯ ರೀತಿಯ ವಾಸ್ತವಿಕತೆಗಳು ನಮಗೆ ಅಷ್ಟು ಸ್ಪಷ್ಟವಾಗಿರುವದಿಲ್ಲ. ಅವುಗಳ ಬಗ್ಗೆ ನಮಗೆ ಕಡಿಮೆ ತಿಳುವಳಿಕೆಯಿರುತ್ತದೆ, ಅವು ಅಲ್ಲಿರುವವೆಂದು ನಾವು ತಿಳಿದಿರುವೆವು. ಆದರೆ ಕೆಲವು ಸಲ ಅವು ನಮ್ಮ ಆಲೋಚನೆಗಳ ಹಿನ್ನೆಲೆಯಲ್ಲಿರುತ್ತವೆ. ನಮ್ಮ ಗಾಳಿಯಲ್ಲಿಯ ಐದರಲ್ಲಿ ಒಂದು ಭಾಗವು ಪ್ರಾಣವಾಯುವಿನಿಂದ ಮಾಡಲ್ಪಟ್ಟಿದೆ. ಅದನ್ನು ಉಸಿರಾಡದೇ ನಾವು ಜೀವಿ ಸಲಾರೆವು ಎಂದು ನಮ್ಮ ಮನಸ್ಸುಗಳಲ್ಲಿ ತಿಳಿದಿರಬಹುದು. ಆದರೆ ಅದರ ಬಗ್ಗೆ ನಾವು ಯೋಚಿಸುವದಿಲ್ಲ. ನಾವು ಅದನ್ನು ಉಸಿರಾಡಿಸುತ್ತೇವಷ್ಟೇ. ಅದೃಶ್ಯವಾದ ವಾಸ್ತವಿಕತೆಗಳಲ್ಲಿ ಒಂದಾದ ಗಾಳಿಗಿಂತಲೂ ಹೆಚ್ಚಾಗಿ ನಾವು ಎತ್ತಿಕೊಂಡು ಅದರಿಂದ ಬರೆಯಬಹುದಾದ ಪೆನ್ಸಿಲನ್ನು ನೋಡುವ ವಾಸ್ತ ವಿಕತೆ ಬಗ್ಗೆ ಹೆಚ್ಚು ತಿಳಿದವರಾಗಿರುತ್ತೇವೆ.

ವಿಷಯವು ಇಷ್ಟೇ: ಕೆಲವು ವಾಸ್ತವಿಕತೆಗಳನ್ನು ನಾವು ನೋಡದೇ ಇರುವಂಥದ್ದು ಅವು ನಿಜವಾದವುಗಳಲ್ಲ ಎಂದು ಅರ್ಥವಾಗುವದಿಲ್ಲ. ಅವುಗಳನ್ನು ನಾವು ನೋಡಲಾಗದಿದ್ದರೂ ಇಲ್ಲವೇ ಅವುಗಳನ್ನು ಸ್ಪರ್ಷಿಸದೇ ಇದ್ದರೂ ಅವು ನಾವು ನೋಡುವ ವಸ್ತುಗಳಷ್ಟೇ ನಿಜವಾದವುಗಳಾಗಿವೆ.

ನಾವು ನೋಡಲಾಗದ ಅತೀ ದೊಡ್ಡ ವಾಸ್ತವಿಕತೆಯು ದೇವರಾಗಿದ್ದಾನೆ. ನಮ್ಮ ದೈಹಿಕ ಕೈಗಳಿಂದ ಆತನನ್ನು ಸ್ಪರ್ಷಿಸಲಾರೆವು. ಆತನನ್ನು ಪರೀಕ್ಷಾ ನಳಿಕೆಯಲ್ಲಿ ಹಾಕಿ ವಿಂಗಡಿಸಲಾರೆವು. ಇಲ್ಲವೇ ನಮ್ಮ ದೈಹಿಕ ಕಣ್ಣುಗಳಿಂದ ಆತನನ್ನು ನೋಡಲಾರೆವು. ಆದಾಗ್ಯೂ ಆತನು ಸರ್ವಶ್ರೇಷ್ಠವಾದ ವಾಸ್ತವಿಕತೆಯಾಗಿದ್ದಾನೆ. ವಾಸ್ತವಿಕತೆಯು ಕಾಣಲಿ ಇಲ್ಲವೇ ಕಾಣದಿರಲಿ ಆತನು ಪ್ರತಿಯೊಂದು ವಾಸ್ತ ವಿಕತೆಯ ತಳಹದಿಯಾಗಿದ್ದಾನೆ.

ನಿಜ ದೇವರ ಬಗ್ಗೆ ಕೆಲವು ಜನರಿಗೆ ಒಬ್ಬ ಮಿಶನರಿ ಹೇಳುತ್ತಿದ್ದನು. ಅವನು ದೇವರ ಬಲವಾದ ಶಕ್ತಿಯನ್ನು, ಆತನ ಪ್ರೀತಿಯನ್ನು ಮತ್ತು ಆತನ ಜ್ಞಾನವನ್ನು

ವಿವರಿಸಿದನು. ಒಬ್ಬ ಪ್ರಾಯದ ಮನುಷ್ಯನು ಅವನು ಹೇಳುವದನ್ನು ಆಸಕ್ತಿಯಿಂದ ಕೇಳಿಸಿಕೊಂಡನು. ಕೆಲ ನಿಮಿಷಗಳ ನಂತರ ಆ ಪ್ರಾಯಸ್ಥನು ಎದ್ದು ನಿಂತು, "ಈ ದೇವರು ಅಸ್ತಿತ್ವದಲ್ಲಿರುವನೆಂದು ನಾನು ತಿಳಿದಿದ್ದೆನು, ಆದರೆ ಇಲ್ಲಿಯವರೆಗೆ ಆತನ ಹೆಸರನ್ನು ತಿಳಿದಿರಲಿಲ್ಲ" ಎಂದು ಆಶ್ಚರ್ಯದಿಂದ ಹೇಳಿದನು.

ದೇವರು ನಮ್ಮ ಸೃಷ್ಟಿಕರ್ತನು, ಒದಗಿಸುವವನು, ವಿಮೋಚಕನು ಹಾಗೂ ನ್ಯಾಯಾಧೀಶನು. ದೇವರು ಅಸ್ತಿತ್ವದಲ್ಲಿರುತ್ತಾನೆಂಬುದನ್ನು ಅಲ್ಲಗಳೆಯುವವನು, ಇಲ್ಲವೇ ಆತನಿಗೆ ವಿಧೇಯನಾಗಿ ಆತನ ಸೇವೆ ಮಾಡದವನು ಬಹು ದೊಡ್ಡ ತಪ್ಪನ್ನು ಮಾಡುವವನಾಗಿದ್ದಾನೆ. ಆ ವ್ಯಕ್ತಿಯು ತನ್ನನ್ನು ನಿರ್ಮಿಸಿದವನನ್ನು ತಿರಸ್ಕರಿಸಿದ್ದಾನೆ. ಮಾನವನ ಅಸ್ತಿತ್ವದ ಮತ್ತು ವಿಶ್ವದ ಅಸ್ತಿತ್ವದ ಇಂದಿನ ಮಹಾ ಸತ್ಯವನ್ನು ಅಲ್ಲಗಳೆದಿದ್ದಾನೆ. ಇಂಥ ತಪ್ಪನ್ನು ಮಾಡಬೇಡಿರಿ. ದೇವರನ್ನು ನಿಜವಾದ ಹಾಗೂ ಜೀವಿಸುವ ದೇವರಂತೆ ಆರಾಧಿಸಿರಿ; ದೀನತೆಯಿಂದ, ವಿಧೇಯತೆಯಿಂದ ಆತನ ಮುಂದೆ ತಲೆಬಾಗಿಸಿರಿ.

ದೇವರು ನಿಮ್ಮನ್ನು ಪ್ರೀತಿಸುತ್ತಾನೆ ಮತ್ತು ತನ್ನ ಕುಟುಂಬದಲ್ಲಿ ಬರಲು ಆಹ್ವಾನಿಸುತ್ತಾನೆ. ಈ ಜೀವನದಲ್ಲಿ ಅನುದಿನವೂ ತನ್ನೊಂದಿಗೆ ನೀವು ನಡೆಯುವದನ್ನು ಆತನು ಬಯಸುತ್ತಾನೆ. ನಿತ್ಯತ್ವದಲ್ಲಿ ಪರಲೋಕವೆಂದು ಕರೆಯಲ್ಪಡುವ ಆ ಪಟ್ಟಣದಲ್ಲಿ ತನ್ನೊಂದಿಗೆ ನೀವು ಜೀವಿಸುವುದನ್ನು ಆತನು ಬಯಸುತ್ತಾನೆ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. "ದೇವರು" ಎಂಬ ಪದವು ಸರಿಯಾಗಿ ಒಬ್ಬ ಜೀವಿಗೆ ಮಾತ್ರವೇ ಒಳಪಟ್ಟಿದೆ ಯಾಕೆ?
2. ದೈವತ್ವದ ಭಾವನೆಯನ್ನು ಸೂಚಿಸುವ ಹಳೇ ಒಡಂಬಡಿಕೆಯ ವಾಕ್ಯ ಭಾಗಳನ್ನು ಪಟ್ಟಿ ಮಾಡಿರಿ.
3. ಯೇಸುವಿನ ಬಾಪ್ತಿಸ್ಮ, ಮಾನವನ ವಿಮೋಚನೆಯ ಕಾರ್ಯ, ಪ್ರಾರ್ಥನೆ, ಹಾಗೂ ಮಹಾ ಆಜ್ಞೆ ಬಾಪ್ತಿಸ್ಮ ಎಲ್ಲವೂ ಹೇಗೆ ದೇವರು ಒಬ್ಬನೇ ಆದಾಗ್ಯೂ ತ್ರಿತ್ವ (ದೈವತ್ವ) ಆಗಿದ್ದಾನೆಂಬ ಭಾವನೆಯನ್ನು ಬೆಂಬಲಿಸುತ್ತವೆ?
4. ದೇವರ ಬಳಿಗೆ ಬರಲು ಮನುಷ್ಯನಿಗೆ ಲಭ್ಯವಿರುವ ಒಂದೇ ಒಂದು ಮಾರ್ಗವು ಯಾವುದು?
5. ದೇವರನ್ನು ದೇವದೂತನ, ದೇವ ಭಕ್ತರ ಇಲ್ಲವೇ ಇತರ ಜನರ, ಜೀವಿಸುವವರಾಗಿರಲಿ ಇಲ್ಲವೇ ಸತ್ತವರಾಗಿರಲಿ, ಅವರ ಮುಖಾಂತರ ಸಂಧಿಸಲಾಗದೆಂದು ಯಾವ ಪರಿಶುದ್ಧ ಬರಹಗಳು ಬೋಧಿಸುತ್ತವೆ?

6. ಕರ್ತನಾದ ಯೇಸುವು "ಮನುಷ್ಯಕುಮಾರನೂ" "ದೇವರ ಕುಮಾರನೂ" ಹೇಗೆ ಆಗಿರುವನು?
7. ದೈವತ್ವದ ಸದಸ್ಯರ ಬಗ್ಗೆ ನಾವು ತಿಳಿದು ಕೊಂಡದ್ದು ಬಹಳವಾಗಿದ್ದರೂ ನಾವು ಬಹಳ ವಾದದ್ದನ್ನು ತಿಳಿದುಕೊಳ್ಳಬಹುದು. ಬೈಬಲ್‌ನಲ್ಲಿ ಬೋಧಿಸಲ್ಪಟ್ಟ ಕೆಲವು ಸಂಗತಿಗಳು ಯಾವವು?
8. ದೇವರು ಎಲ್ಲಾ ಸಂಗತಿಗಳನ್ನು ಸೃಷ್ಟಿಸಿದನು ಎಂಬ ಸತ್ಯದಿಂದ ಹಳಿದು ಬರುವ ಸತ್ಯಗಳು ಯಾವವು?
9. ದೇವರು ತನ್ನ ಜಗತ್ತಿನಲ್ಲಿ ಕಾರ್ಯಮಾಡುವುದನ್ನು ಮುಂದುವರಿಸಿರುವ ನೆಂಬುದಕ್ಕೆ ನಮಗಿರುವ ಪುರಾವೆಯಾವುದು?
10. ದೇವರು ನಮಗೆ ಹೇಗೆ ನ್ಯಾಯತೀರಿಸುವನು?

## ಪದ ಸಹಾಯಗಳು

ಅಪೊಸ್ತಲರು - ತನ್ನ ವಿಶೇಷ ಸಂದೇಶವಾಹಕರಾಗಿರಲು ಯೇಸುವಿನಿಂದ ಆಯ್ಕೆ ಮಾಡಲ್ಪಟ್ಟ ಹನ್ನೆರಡು ಜನರು (ಮತ್ತಾಯ 10:2-4). ಯೂದನ ಮರಣದ ನಂತರ ಮತ್ತೀಯನು ಅಪೊಸ್ತಲನಾಗಿ ಆಯ್ಕೆಯಾದನು (ಅಪೊಸ್ತಲರ ಕೃತ್ಯಗಳು 1:23, 26). ಅನಂತರದಲ್ಲಿ ಪೌಲನು ಅವರೊಂದಿಗೆ ಎಣಿಸಲ್ಪಟ್ಟನು (ಅಪೊಸ್ತಲರ ಕೃತ್ಯಗಳು 9:15, 16; 1 ತಿಮೊಥೆ 2:7). ತನ್ನ ಅಪೊಸ್ತಲರ ಪ್ರೇರಿತ ಬೋಧನೆಗೂ ಪ್ರಸಂಗಿಸುವಿಕೆಗೂ ವಿಧೇಯರಾಗಬೇಕೆಂದು ಯೇಸು ಬೋಧಿ ಸಿದನು (ಮತ್ತಾಯ 16:19).

ಬಾಪ್ತಿಸ್ಮ - ಗ್ರೀಕ ಪದದಿಂದ ಬಂದದ್ದು. "ನೀರಿನಲ್ಲಿ ಮುಳುಗೇಳಿಸು" ಎಂದರ್ಥ. ಪಾಪಗಳ ಕ್ಷಮಾಪಣೆಗಾಗಿ ದೇವರು ಬಾಪ್ತಿಸ್ಮವನ್ನು ಅಧಿಕೃತವಾದದ್ದನ್ನಾಗಿ ಮಾಡಿದನು (ಮತ್ತಾಯ 28:19, 20; ರೋಮಾಪುರ 6:1-4; ಅಪೊಸ್ತಲರ ಕೃತ್ಯಗಳು 2:38; 8:36 ನೋಡಿರಿ).

ಕ್ರಿಶ್ಚಿಯನ್ - ಕ್ರಿಸ್ತನ ಸುವಾರ್ತೆಗೆ ವಿಧೇಯನಾದವನು.

ಅರಿಕೆ - ಯೇಸು ಕ್ರಿಸ್ತನಲ್ಲಿ ದೇವರ ಕುಮಾರನಂತೆ - ಒಬ್ಬನ ನಂಬಿಕೆಯ ಹಾಗೂ ಆತನನ್ನು ಕರ್ತನೆಂತಲೂ ರಕ್ಷಕನೆಂತಲೂ ಸ್ವೀಕರಿಸುವ ಹೇಳಿಕೆ (ಅಪೊಸ್ತಲರ ಕೃತ್ಯಗಳು 8:37; ರೋಮಾಪುರ 10:10; 1 ತಿಮೊಥೆ 6:12 ನೋಡಿರಿ).

ಶಿಷ್ಯನು - ಕಲಿಯುವವ ಇಲ್ಲವೇ ಹಿಂಬಾಲಕ, ಅಪೊಸ್ತಲರ ಕೃತ್ಯಗಳು 11:26ರಲ್ಲಿ ಯೇಸುವಿನ ಶಿಷ್ಯರು ಮೊದಲನೆಯ ಸಲ ಕ್ರೈಸ್ತರೆಂದು ಕರೆಯಲ್ಪಟ್ಟರು.

ಸುವಾರ್ತೆಯ ಬರಹಗಳು - ಹೊಸ ಒಡಂಬಡಿಕೆ ಮೊದಲಿನ ನಾಲ್ಕು ಪುಸ್ತಕಗಳು. (ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನ), ಇವು ಯೇಸುವಿನ ಜೀವನ, ಮರಣ ಮತ್ತು ಪುನರುತ್ಥಾನವನ್ನು ಹೇಳುತ್ತವೆ.

ಮಹಾ ಆಜ್ಞೆ - ಹೊರಟು ಹೋಗಿ ಎಲ್ಲಾ ಜನರಿಗೆ ಸುವಾರ್ತೆಯನ್ನು ಸಾರಿರಿ ಎಂದು ಯೇಸು ತನ್ನ ಶಿಷ್ಯರಿಗೆ ಹೇಳಿದ ಆಜ್ಞೆ (ಮತ್ತಾಯ 28:18-20; ಮಾರ್ಕ 16:15,

16).

ಮಧ್ಯವರ್ತಿ - ಒಂದು ಸಮಸ್ಯೆಯನ್ನು ಬಿಡಿಸಲು “ಮಧ್ಯದಲ್ಲಿ” ಹೋಗುವವನು. ದೇವ ಕುಮಾರನಾದ ಯೇಸುವು ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು. ಆತನು ಪಾಪದ ಸಮಸ್ಯೆಯನ್ನು ಬಗೆಹರಿಸುವಾತನು.

ಪ್ರೊವಿಡೆನ್ಸ - ಮನುಷ್ಯನಿಗಾಗಿ ದೇವರ ಲಕ್ಷ್ಯ ಅಥವಾ ಒದಗಿಸುವಿಕೆ (“providence” ಎಂಬ ಪದವು ಈ ರೀತಿಯಲ್ಲಿ ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಲ್ಪಟ್ಟಿಲ್ಲ. ರೋಮಾಪುರ 8:28ರಲ್ಲಿಯಂತೆ ಇದು ಬೈಬಲಿನ ಬೋಧನೆಯಾಗಿದೆ).

ವಿಮೋಚಕನು - “ಹಿಂದಿರುಗಿ ಕೊಂಡುಕೊಳ್ಳುವವನು.” ತನ್ನ ಮರಣದ ಮುಖಾಂತರ ಜನರ ನಶಿಸಿ ಹೋದ ಆತ್ಮಗಳನ್ನು ಪುನಃ ಯೇಸು ಕೊಂಡುಕೊಂಡನು. ಇಲ್ಲವೇ ಅವರಿಗಾಗಿ ಈಡು ಕೊಟ್ಟನು.

ವಿಮೋಚನೆ - ದೇವರಿಂದ ದೂರವಾಗಿ ಜೀವಿಸಿದ ನಂತರ “ಪುನಃ ಕೊಂಡು ಕೊಳ್ಳಲ್ಪಡುವುದು” ಕ್ರೈಸ್ತರು ಹೆಚ್ಚಾಗಿ “ವಿಮೋಚಿಸಲ್ಪಟ್ಟವರು” ಎಂದು ಉಲ್ಲೇಖಿಸಲ್ಪಟ್ಟಿದ್ದಾರೆ.

ಮಾನಸಾಂತರ - ಒಬ್ಬನ ಯೋಚಿಸುವ ಮಾರ್ಗವನ್ನು ಬದಲಾಯಿಸುವ ಕಾರ್ಯ ಹಾಗೂ ಒಬ್ಬನ ಜೀವಿಸುವ ಮಾರ್ಗವನ್ನು ಬದಲಾಯಿಸುವ ಕಾರ್ಯ.

ಪರಿಶುದ್ಧನು - ಹೊಸ ಒಡಂಬಡಿಕೆಯ ಕ್ರೈಸ್ತ.

ರಕ್ಷಣೆ - ಪಾಪದಿಂದ ಬಿಡುಗಡೆ; ಯೇಸು ಕ್ರಿಸ್ತನ ಮುಖಾಂತರವಾಗಿ ಮಾತ್ರವೇ ರಕ್ಷಣೆಯು ಒದಗಿಸಲ್ಪಡುತ್ತದೆ.

ರಕ್ಷಕ - ಒಬ್ಬನು ಇನ್ನೊಬ್ಬನನ್ನು ಗಂಡಾಂತರದಿಂದ ಇಲ್ಲವೇ ಮರಣದಿಂದ ರಕ್ಷಿಸುವವನು. ನಮ್ಮ ರಕ್ಷಕನಾದ ಯೇಸುವು ನಮ್ಮನ್ನು ಪಾಪದಿಂದಲೂ ನಿತ್ಯ ಮರಣದಿಂದಲೂ ನಮ್ಮನ್ನು ರಕ್ಷಿಸುವನು.

---

ಟಿಪ್ಪಣಿಗಳು

[1]“Godhead” ಎಂದು ಭಾಷಾಂತರಿಸಬಹುದಾದ ಗ್ರೀಕ್ ಪದವು ಪರಿಶುದ್ಧ ಬರಹಗಳಲ್ಲಿ ಒಂದೊಂದರಲ್ಲಿ ಒಂದೊಂದೇ ಸಲ ಕಾಣುತ್ತದೆ (ಅಪೊಸ್ತಲರ ಕೃತ್ಯಗಳು 17:29; ರೋಮಾಪುರ 1:20; ಕೊಲೊಸ್ಸೆ 2:9; KJV). [2]ಆದಿಕಾಂಡ 3:22; 11:7; ಯೆಶಾಯ 6:8ರಲ್ಲಿ ಇತರ ಮೂರು ಉದಾಹರಣೆಗಳು ಕಂಡು ಬರುತ್ತವೆ.

4

# ಯೇಸು, ದೇವರ ಕುಮಾರನು

ಕ್ರಿಸ್ತನಾದ ಯೇಸುವು ದೇವರ ಕುಮಾರನಾಗಿದ್ದಾನೆ ಎಂಬ ಸತ್ಯವು ಕ್ರೈಸ್ತತ್ವದ ನೆಲೆಯಾಗಿದೆ. ಕ್ರಿಸ್ತನು ನಮ್ಮ ಧರ್ಮದ ಕೇಂದ್ರವು. ಆತನು ನಮ್ಮ ವಿಶ್ವಾಸಕ್ಕೆ ಅಸ್ತಿವಾರವು (1 ಕೊರಿಂಥ 3:11), ನಮ್ಮ ಪ್ರಸಂಗಿಸುವಿಕೆಯ ವಿಷಯವು (ಅಪೊಸ್ತಲರ ಕೃತ್ಯಗಳು 8:35; 1 ಕೊರಿಂಥ 1:23), ನಮ್ಮ ಅರಿಕೆಯ ವ್ಯಕ್ತಿ (ಮತ್ತಾಯ 10:32), ನಮ್ಮ ನಿರೀಕ್ಷೆಯ ತಳಹದಿ (1 ತಿಮೊಥೆ 1:1). ಆದುದರಿಂದ, ಆತನಲ್ಲಿ ಬಲವಾದ ವಿಶ್ವಾಸವು ಅವಶ್ಯವಾದದ್ದು (ಯೋಹಾನ 8:24). ಕ್ರಿಸ್ತನ ದೈವತ್ವದಲ್ಲಿ ನಂಬುವದಕ್ಕಾಗಿ ನಮಗೆ ಅನೇಕ ಒಳ್ಳೆಯ ಕಾರಣಗಳಿವೆ. ನಂಬಲಿಕ್ಕೆ ವಿಪುಲವಾದ ಪುರಾವೆಗಳನ್ನು ಆತನು ಕೊಡದಿರುವ ಯಾವದನ್ನಾದರೂ ನಂಬಬೇಕೆಂದು ದೇವರು ನಮ್ಮನ್ನು ಕೇಳಿಕೊಂಡಿಲ್ಲ (ಯೋಹಾನ 20:31). ಪುರಾವೆಯು ಬಲವಾದದ್ದಾಗಿದೆ, ಶತಮಾನಗಳಲ್ಲಿ ಸಾವಿರಾರು ಜನರು ನಂಬುವಂತೆ ಮಾಡಿದೆ. ಯೇಸುವು ದೇವರ ಕುಮಾರನಾಗಿದ್ದಾನೆಂದು ನಂಬಲಿಕ್ಕೆ ಕೆಲವು ಕಾರಣಗಳನ್ನು ಈ ಪಾಠವು ನಿಮ್ಮ ಮುಂದಿಡುತ್ತದೆ. ಅವುಗಳನ್ನು ಜಾಗರೂಕತೆಯಿಂದ ಪರೀಕ್ಷಿಸಿರಿ. ನಿಮಗೆ ಈಗಾಗಲೇ ಬಲವಾದ ವಿಶ್ವಾಸವಿದ್ದರೆ, "ಕರ್ತನೇ, ನನ್ನ ವಿಶ್ವಾಸವನ್ನು ವೃದ್ಧಿಗೊಳಿಸು" ಎಂದು ಶಿಷ್ಯರು ಪ್ರಾರ್ಥಿಸಿದಂತೆ ಮೌನವಾಗಿ ಪ್ರಾರ್ಥಿಸಿರಿ. ಸಂಶಯದಿಂದ ನೀವು ಭಾರವುಳ್ಳವರಾಗಿದ್ದರೆ, ದೆವ್ವಹಿಡಿದಿದ್ದ ಬಾಲಕನ ತಂದೆಯು, "ನಂಬುತ್ತೇನೆ, ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯ ಮಾಡು" ಎಂದು ಮಾರ್ಕ 9:24ಎ ರಲ್ಲಿ ಪ್ರಾರ್ಥಿಸಿದಂತೆ ಪ್ರಾರ್ಥಿಸಿರಿ.

## ಯಾಕಂದರೆ ಆತನು ಹಳೇ ಒಡಂಬಡಿಕೆಯ ಪ್ರವಾದನೆಗಳನ್ನು ನೆರವೇರಿಸುವವನು

ಯೇಸುವಿನ ಜನನಕ್ಕಿಂತ ಮೊದಲು ಸಾವಿರಾರು ವರ್ಷಗಳ ಹಿಂದೆ

ಹೇಳಲ್ಪಟ್ಟ ಕೆಲವು ಪ್ರವಾದನೆಗಳನ್ನು ಯೋಚಿಸಿರಿ. ಆತನ ಜನನವು ಪ್ರವಾದಿಸಲ್ಪಟ್ಟಿತು. ಆತನ ವಂಶಾವಳಿಯು ಅಬ್ರಹಾಮ, ಯೆಹೂದ ಮತ್ತು ದಾವೀದನನ್ನು ಒಳಗೊಂಡಿತ್ತು (ಆದಿಕಾಂಡ 12:3/ಮತ್ತಾಯ 1:2; ಆದಿಕಾಂಡ 49:10/ಮತ್ತಾಯ 1:2, 6). ಅಬ್ರಹಾಮನ ಸಂತತಿಯವರು ಅನೇಕರಿದ್ದರು: ಆದಾಗ್ಯೂ ಆ ಕುಟುಂಬವು ಪ್ರವಾದನೆಯಲ್ಲಿ ವಿಶೇಷವಾಗಿ ಹೇಳಲ್ಪಟ್ಟಿತು (ಯೆರೆಮೀಯ 23:5; ಯೆಶಾಯ 11:1/ಮತ್ತಾಯ 1:6). ಆತನು ಕನ್ನಿಕೆಯಿಂದ ಜನಿಸುವನೆಂಬುದು ಯೆಶಾಯ 7:14ರಲ್ಲಿ ಮುಂತಿಳಿಸಲ್ಪಟ್ಟಿತ್ತು. ಹಾಗೂ ಮತ್ತಾಯ 1:18-25ರಲ್ಲಿ ನೆರವೇರಿಸಲ್ಪಟ್ಟಿತು. ಆತನ ಜನನದ ಸ್ಥಳವಾಗಿ ಬೇತ್ಲೆಹೇಮ ಆಯ್ಕೆ ಮಾಡಲ್ಪಟ್ಟಿತು (ಮೀಕ 5:2). ಆತನ ಜನನಕ್ಕೆ ಸಂಬಂಧಿಸಿ ಅನೇಕ ಮಕ್ಕಳು ಕೊಲ್ಲಲ್ಪಡುವರೆಂಬುದೂ ಪ್ರವಾದಿಸಲ್ಪಟ್ಟಿತು (ಯೆರೆಮೀಯ 31:15/ಮತ್ತಾಯ 2:16-18).

ಆತನು ಐಗುಪ್ತದೊಳಗೆ ತಪ್ಪಿಸಿಕೊಂಡು ಹೋಗುವದನ್ನು (ಹೋಶೇಯ 11:1/ಮತ್ತಾಯ 2:13-15), ಗಲಿಲಾಯದಲ್ಲಿಯ ಆತನ ಜೀವಿತವನ್ನು (ಯೆಶಾಯ 9:1, 2/ಮತ್ತಾಯ 4:12-16) ಮತ್ತು ಯೆರೂಸಲೇಮಿನೊಳಗೆ ಆತನ ಜಯಶಾಲೀ ಪ್ರವೇಶವನ್ನು (ಜೆಕರ್ಯ 9:9/ಮತ್ತಾಯ 21:1-11) ಪ್ರವಾದಿಗಳು ಮುಂತಿಳಿಸಿದರು. ಆತನ ಕಾರ್ಯವೂ ಮುಂತಿಳಿಸಲ್ಪಟ್ಟಿತು. ಮುಂದೂತನು ಆತನ ಮುಂದೆ ಹೋಗುವನೆಂದು ಪ್ರವಾದಿಗಳು ಹೇಳಿದರು (ಮಲಾಕಿ 3:1; ಯೆಶಾಯ 40:3/ಮತ್ತಾಯ 3:1-3). ಸ್ವಸ್ಥಪಡಿಸುವಿಕೆಯ ಆತನ ಸೇವೆಯ ಬಗ್ಗೆ (ಯೆಶಾಯ 53:4/ಮತ್ತಾಯ 8:16, 17), ಸಾಮ್ಯಗಳಿಂದ ಆತನ ಬೋಧನೆಯ ಬಗ್ಗೆ (ಯೆಶಾಯ 6:9, 10/ಮತ್ತಾಯ 13:10-17), ಅನ್ಯರ ಮಧ್ಯದಲ್ಲಿ ಆತನ ಸೇವೆಯ ಬಗ್ಗೆ (ಯೆಶಾಯ 42:1-4/ಮತ್ತಾಯ 12:15-21) ಮತ್ತು ಅಧಿಕಾರಿಗಳಿಂದ ಆತನು ತಿರಸ್ಕರಿಸುವದರ ಬಗ್ಗೆ (ಕೀರ್ತನೆ 118:22; ಯೋಹಾನ 1:11) ಅವರು ಮುಂತಿಳಿಸಿದರು.

ಯೇಸುವಿನ ಮರಣವು ಪ್ರವಾದನೆಯಲ್ಲಿ ಬಹಳ ವಿವರಣೆಯೊಂದಿಗೆ ಚಿತ್ರಿಸಲ್ಪಟ್ಟಿದೆ. ಮೂವತ್ತು ಬೆಳ್ಳಿ ನಾಣ್ಯಗಳಿಗೆ (ಜೆಕರ್ಯ 11:12/ಮತ್ತಾಯ 26:14-16) ಆತನು ಒಬ್ಬ ಸ್ನೇಹಿತನಿಂದ ಹಿಡಿದು ಕೊಡಲ್ಪಡುವನೆಂದು ಹಳೇ ಒಡಂಬಡಿಕೆಯು ಚಿತ್ರಿಸುತ್ತದೆ (ಕೀರ್ತನೆ 41:9/ಮತ್ತಾಯ 26:47-50). ಆತನು ತನ್ನ ವೈರಿಗಳ ಮುಂದೆ ಹೇಗೆ ವರ್ತಿಸುವನು (ಯೆಶಾಯ 53:7/ಮತ್ತಾಯ 27:12, 14). ಆತನು ಹೇಗೆ ಮರಣಹೊಂದುವನು (ಕೀರ್ತನೆ 22:16/ಮತ್ತಾಯ 27:35ಎ), ಮತ್ತು ಆತನ ಬಟ್ಟೆಗಳು ಹೇಗೆ ಚೀಟು ಹಾಕುವದರಿಂದ ಹಂಚಿಕೊಳ್ಳಲ್ಪಡುವವು (ಕೀರ್ತನೆ 22:18/ ಮತ್ತಾಯ 27:35ಬಿ, ಸಿ) ಎಂದು ಪುರಾತನ ಪರಿಶುದ್ಧ ಬರಹಗಳು ಮುಂತಿಳಿಸಿದವು. ಆತನು ಸಾಯುತ್ತಿರುವಾಗಿನ ಮಾತುಗಳನ್ನು (ಕೀರ್ತನೆ 22:1/ಮತ್ತಾಯ 27:46), ಆತನ ಎಲುಬುಗಳು

ಮುರಿಯಲ್ಪಡದೇ ಇರುವದನ್ನು (ಕೀರ್ತನೆ 34:20/ಯೋಹಾನ 19:33), ಆತನ ಪಕ್ಕೆಯು ತಿವಿಯಲ್ಪಡುವದನ್ನು (ಜೆಕರ್ಯ 12:10/ಯೋಹಾನ 19:37), ಆತನ ಹೂಣಿಡುವಿಕೆಯನ್ನು (ಯೆಶಾಯ 53:9/ಮತ್ತಾಯ 27:57-60), ಆತನ ಪುನರುತ್ಥಾನವನ್ನು (ಕೀರ್ತನೆ 16:10/ಲೂಕ 24:1-9; ಅಪೊಸ್ತಲರ ಕೃತ್ಯಗಳು 2:25-32) ಮತ್ತು ಆತನ ದಿವಾರೋಹಣವನ್ನು (ಕೀರ್ತನೆ 68:18/ ಲೂಕ 24:50-53) ಮುಂತಿಳಿಸಿದರು.

ರಕ್ಷಕನು ಬರುವನೆಂದು ಹೋಲಿಕೆಯಾಗಿ ಹೇಳುವುದು ಪ್ರವಾದಿಗಳಿಗೆ ಸುಲಭವಾಗಿತ್ತು. ಹೀಗಿದ್ದರೂ ಅವರು ಮುನ್ನೂರು ಸ್ಪಷ್ಟವಾದ ವಿವರಣೆ ಗಳನ್ನು ಕೂಡಿಸಿದಾಗ ಅಲ್ಲಗಳೆಯಲಾರದಷ್ಟು ನಿಶ್ಚಿತವಾದ ಚೌಕಟ್ಟನ್ನು ರಚಿಸಿದರು.

ಈ ಪ್ರವಾದನೆಗಳ ನೆರವೇರುವಿಕೆಯ ಅರ್ಥವೇನೆಂದು ಯೋಚಿಸಿರಿ. ಸಂಪೂರ್ಣ ನಿಶ್ಚಿತತೆಯೊಂದಿಗೆ ಭವಿಷ್ಯದ ಘಟನೆಗಳನ್ನು ಮಾನವ ದೂರದೃಷ್ಟಿಯು ಮತ್ತು ಜ್ಞಾನವು ಇಪ್ಪತ್ನಾಲ್ಕು ತಾಸುಗಳ ಮೊದಲಾದರೂ ಮುನ್ನೋಡಲಾರದು. ದೇಶದಲ್ಲೆಲ್ಲಾ ಚದರಿದ ರಾಜಕೀಯ ಕಾರ್ಯಭಾರಿಗಳೂ ಕೆಲವು ಸಲ ಚುನಾವಣೆಯ ಫಲಿತಾಂಶವನ್ನು ಮುಂತಿಳಿಸಲಾರರು. ಯೇಸುವಿನ ಬಗೆಗಿನ ಈ ಪ್ರವಾದನೆಗಳು, ಇಂದಿನಿಂದ ನಲ್ವತ್ತು ವರ್ಷಗಳ ನಂತರ ಯಾರು ಅಧ್ಯಕ್ಷರಾಗಿರುವರು, ಅವರ ಜನನದ ಸ್ಥಳ, ಅವರ ವಂಶಾವಳಿ, ಅವರ ಅಭ್ಯಾಸ, ಅವರ ಆಡಳಿತೆಯ ಅವಧಿ ಮತ್ತು ಅವರ ಮರಣದ ಸ್ಥಳ ಹಾಗೂ ವಿಧಾನದ ಬಗ್ಗೆ ಒಬ್ಬನು ಮುಂತಿಳಿಸುವಂತೆ ಇರುವುದು.

ನಿಜವಾದ ಪ್ರವಾದನೆಯು ಪರಿಕ್ಷಿಸಲ್ಪಡಬಹುದು, ಯಾಕಂದರೆ ಅದು ಭವಿಷ್ಯದ ಘಟನೆಗಳನ್ನು ಪ್ರಕಟಿಸುತ್ತದೆ. ಆಕಸ್ಮಿಕವಾಗಿ ನೆರವೇರಿಸಲ್ಪಡಲಾರದ ವಿಷಯಗಳನ್ನು ಅದು ಒಳಗೊಂಡಿರುವದಿಲ್ಲ. ಒಂದು ಪ್ರವಾದನೆಯು ಅದರ ಐತಿಹಾಸಿಕ ನೆರವೇರುವಿಕೆಯ ನಂತರ ಮಾತ್ರವೇ ಸ್ಪಷ್ಟವಾಗಿ ಕಂಡುಬರುವುದು. ಲಿಖಿತ ಇಲ್ಲವೇ ಬಾಯ್ದೆರೆಯಾದ ಯಾವುದೇ ಪುರಾವೆಯು ಪ್ರವಾದನೆಯ ನೆರವೇರುವಿಕೆಯಿಂದ ಈ ವಾದವಿವಾದದ ಬಲವನ್ನು ತೆಗೆದು ಹಾಕಲಾರದು. ಒಂದು ಕಡೆಯಲ್ಲಿ ಯೇಸುವು ದೈವಿಕನಾಗಿದ್ದಾನೆಂದು ಅದು ತೋರಿಸುತ್ತದೆ ಮತ್ತು ಇನ್ನೊಂದೆಡೆಯಲ್ಲಿ ಪ್ರವಾದನೆಗಳನ್ನು ಬರೆದಿಟ್ಟವರು ದೈವ ಪ್ರೇರಿ ತರಾಗಿದ್ದರೆಂಬುದನ್ನು ಸಿದ್ಧಪಡಿಸಿ ತೋರಿಸುತ್ತದೆ.

## ಯಾಕೆಂದರೆ ಆತನ ದೈವತ್ವದ ಹೇಳಿಕೆಗಳು ಆತನ ಕೃತ್ಯಗಳೊಂದಿಗೆ ಸಾಮರಸ್ಯದಲ್ಲಿದ್ದವು

ಯೇಸುವು ತನ್ನ ಬಗ್ಗೆ ಧೈರ್ಯದ ಹೇಳಿಕೆಗಳನ್ನು ಕೊಟ್ಟನು. ತಾನು ಅಬ್ರಹಾಮನಿಗಿಂತಲೂ ಮೊದಲು ಅಸ್ತಿತ್ವದಲ್ಲಿದ್ದನೆಂದು (ಯೋಹಾನ 8:58), ಜಗತ್ತಿಗಿಂತ ಮೊದಲು ತಾನು ದೇವರೊಂದಿಗೆ ಇದ್ದನೆಂದೂ (ಯೋಹಾನ 17:5, 24), ತಾನು ಪರಲೋಕದಿಂದ ಇಳಿದು ಬಂದೆನೆಂದೂ (ಯೋಹಾನ 6:38, 62), ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ತನಗೆ ಎಲ್ಲಾ ಅಧಿಕಾರವೂ ಇರುವುದೆಂದೂ (ಮತ್ತಾಯ 28:18) ಆತನು ಹೇಳಿದನು. ಮೊದಲು ಜೀವಿಸಿದ್ದ ಒಬ್ಬ ಮನುಷ್ಯನು ಪುನಃ ಜನ್ಮ ತಾಳಿ ಬಂದವನು ಆತನಾಗಿರಲಿಲ್ಲ. ಆತನು ಮಾನವ ರೂಪದಲ್ಲಿ ಭೂಲೋಕಕ್ಕೆ ಬಂದ ದೇವರಾಗಿದ್ದನು (ಯೋಹಾನ 1:1-18). ಆತನ ದೈವತ್ವವನ್ನು ಅಲ್ಲಗಳೆಯುವ ಅನೇಕರು ಆತನನ್ನು ಒಬ್ಬ "ಒಳ್ಳೇ" ಮನುಷ್ಯನೆಂದು ಮಾತಾಡುತ್ತಾರೆ. ಹೀಗಿದ್ದರೂ ಆತನು ತಾನು ಯಾರಾಗಿದ್ದೇನೆಂದು ಹೇಳಿಕೊಳ್ಳುವನೋ ಅದಾಗಿರದಿದ್ದರೆ ಆತನು ಸುಳ್ಳುಗಾರನೂ ಮೋಸಗಾರನೂ - ನಿಶ್ಚಯವಾಗಿ "ಒಳ್ಳೆಯ" ಮನುಷ್ಯನಾಗಿರದವನೂ ಆಗಿರುವನು!

ಆತನ ಕಾರ್ಯಗಳು, ಆತನ ಹೇಳಿಕೆಗಳನ್ನು ಸತ್ಯವಾದವುಗಳೆಂದು ತೋರಿಸಿದವು. ಆತನು ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ಬೈಬಲಿನ ಚರಿತ್ರೆಗಾರರು ಆತನ ಅದ್ಭುತ ಕಾರ್ಯಗಳಿಗೆ ಸಾಕ್ಷಿಕೊಟ್ಟರು (ಮತ್ತಾಯ 11:4, 5; ಯೋಹಾನ 20:30, 31). ಪ್ರಪಂಚಿಕ ಚರಿತ್ರೆಗಾರರೂ ಸಹ ಆತನು ಅದ್ಭುತ ಕಾರ್ಯಗಳನ್ನು ಮಾಡಿದನೆಂದು ಸಾಕ್ಷಿ ಕೊಟ್ಟಿದ್ದಾರೆ.

ಆತನ ಕಾರ್ಯಗಳು ಆತನ ವಾಕ್ಯದೊಂದಿಗೆ ಒಂದಾಗಿದ್ದವು. "ನಾನು ಲೋಕಕ್ಕೆ ಬೆಳಕಾಗಿದ್ದೇನೆ" (ಯೋಹಾನ 8:12ಎ) ಎಂದು ಆತನು ಹೇಳಿದನು; ಕುರುಡನು ಬೆಳಕನ್ನು ನೋಡುವಂತೆ ಮಾಡಿದನು (ಯೋಹಾನ 9:6, 7). "ಜೀವ ಕೊಡುವ ರೊಟ್ಟಿ ನಾನೇ" (ಯೋಹಾನ 6:35ಎ) ಎಂದು ಆತನು ಹೇಳಿದನು, ಐದು ರೊಟ್ಟಿ ಎರಡು ಮೀನುಗಳಿಂದ ಐದು ಸಾವಿರ ಜನರಿಗೆ ಆಹಾರ ನೀಡಿದನು. "ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ" (ಯೋಹಾನ 11:25ಎ) ಎಂದು ಆತನು ಹೇಳಿದನು; ಲಾಜರನನ್ನು ಸತ್ತವರೊಳಗಿಂದ ಆತನು ಎಬ್ಬಿಸಿದನು (ಯೋಹಾನ 11:43, 44).

## ಯಾಕಂದರೆ ಆತನು ಪಾಪರಹಿತ ಜೀವನ ಜೀವಿಸಿದನು

ಯೇಸುವನ್ನು ತಿಳಿದಿದ್ದವರು ಆತನು ಪಾಪರಹಿತ ಜೀವಿತ ಜೀವಿಸಿದನೆಂದು ಹೇಳಿದರು:

> ಯಾಕಂದರೆ ನಮಗಾಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ (ಇಬ್ರಿಯ 4:15).

> ಆತನು ಯಾವ ಪಾಪವನ್ನೂ ಮಾಡಲಿಲ್ಲ; ಆತನ ಬಾಯಲ್ಲಿ ಯಾವ ವಂಚನೆಯೂ ಸಿಕ್ಕಲಿಲ್ಲ (1 ಪೇತ್ರ 2:22).

ಆತನ ಜೀವನವನ್ನು ಅಧ್ಯಯನ ಮಾಡಿದವರು ಆತನನ್ನು ಒಳ್ಳೆಯವನೆಂದು ಯೋಚಿಸಿದರು (ಲೂಕ 18:18). ಸತತವಾಗಿಯೂ ಆತನಲ್ಲಿ ತಪ್ಪನ್ನು ಕಂಡುಕೊಳ್ಳಲು ಹುಡಿಕಿದ ಆತನ ವೈರಿಗಳೂ ಸಹ ಆತನ ಒಳ್ಳೆಯತನವನ್ನು ತಿಳಿದಿದ್ದರು. ಆತೀ ಅಸಾಧ್ಯವಾದ ಸಂಗತಿಯನ್ನು ಆತನು ಮಾಡಿದನು - ತನ್ನನ್ನು ಅವರು ಪರೀಕ್ಷಿಸಿ ತನ್ನಲ್ಲಿ ಯಾವುದೇ ತಪ್ಪು ಇರುವುದೋ ಎಂಬುದನ್ನು ಕಂಡುಕೊಳ್ಳಬೇಕೆಂದು ಆಹ್ವಾನಿಸಿದನು (ಯೋಹಾನ 8:46ಎ).

ಆತನ ಮರಣದ ಸಮಯದಲ್ಲಿ ಆತನ ಒಳ್ಳೆಯ ತನವು ಸ್ವೀಕರಿಸಲ್ಪಟ್ಟಿತು. ಪಿಲಾತನ ಹೆಂಡತಿಯ (ಮತ್ತಾಯ 27:19), ಪಿಲಾತನ (ಮತ್ತಾಯ 27:23), ಹೆರೋದನ (ಲೂಕ 23:14), ಶಿಲುಬೆಯ ಮೇಲಿನ ಕಳ್ಳನ (ಲೂಕ 23:41), ಶತಾಧಿಪತಿಯ (ಮತ್ತಾಯ 27:54), ಹಾಗೂ ಯೂದನ (ಮತ್ತಾಯ 27:4) ಮಾತನ್ನು ಯೋಚಿಸಿರಿ.

## ಯಾಕಂದರೆ ಜಗತ್ತಿನ ಮೇಲೆ ಆತನ ಜೀವಿತದ ಸತತ ಪರಿಣಾಮವಿರುವುದು

ಅನೇಕ ಸ್ಮಾರಕಗಳು ಆತನ ಜೀವಿತವನ್ನು ಗೌರವಿಸುತ್ತವೆ; ಕರ್ತನ ದಿನ (ಪ್ರಕಟನೆ 1:10), ಕರ್ತನ ಭೋಜನ (1 ಕೊರಿಂಥ 11:20-29; ಮತ್ತಾಯ 26:26-28); ಬಾಪ್ತಿಸ್ಮ (ರೋಮಾಪುರ 6:3-5) ಹಾಗೂ ನಮ್ಮ ಕ್ಯಾಲಂಡರುಗಳ ದಿನಾಂಕ (ಕಿ.ಪೂ. ಹಾಗೂ ಕ್ರಿಸ್ತಶಕ). ಪ್ರಶ್ನೆಯಿಲ್ಲದೆ,

ಮನುಷ್ಯನ ದೊಡ್ಡಸ್ತಿಕೆಯು ಎಣಿಸಲ್ಪಡುವಂತೆ ದೊಡ್ಡಸ್ತಿಕೆಯ ಒಂದೇ ಗುರುತಿಲ್ಲದೇ, ಆತನು ಜಗತ್ತಿನ ಅತೀ ದೊಡ್ಡ ಮನುಷ್ಯನಾಗಿದ್ದಾನೆ. ಆತನಿಗೆ ದೊಡ್ಡ ಪಿತ್ರಾರ್ಜಿತವಿರಲಿಲ್ಲ, ಸಾಮಾನ್ಯ ಶಿಕ್ಷಣವಿರಲಿಲ್ಲ (ಯೋಹಾನ 7:15), ಆಸ್ತಿಯಿರಲಿಲ್ಲ, ರಾಜಕೀಯ ಇಲ್ಲವೇ ಮಿಲಿಟರಿ ಬಲವಿರಲಿಲ್ಲ, ಪಂದ್ಯಾಟದ ಶೌರ್ಯ ಇರಲಿಲ್ಲ; ಆದಾಗ್ಯೂ ಕಳೆದ ಇಪ್ಪತ್ತು ಶತಮಾನಗಳಿಂದಲೂ ಮನುಷ್ಯರ ಮೇಲೆ ಆತನಿಗಿರುವ ಪ್ರಭಾವವನ್ನು ಯಾರೂ ಪ್ರಶ್ನಿಸಲಿಕ್ಕಾಗಿಲ್ಲ. ಆತನು ಕೇವಲ ಮನುಷ್ಯನಾಗಿದ್ದರೆ, ಇಂದು ಜಗತ್ತು ಆತನಿಗಿಂತ ಹೆಚ್ಚು ದೊಡ್ಡವನನ್ನು ಉತ್ಪಾದಿಸುತ್ತಿರಲಿಲ್ಲವೇ? ಎರಡು ಸಾವಿರ ವರ್ಷಗಳ ಪ್ರಗತಿಯು ಜಗತ್ತಿಗಿದೆ. ನಮ್ಮ ಪ್ರಗತಿಪರ ಕಲಿಯುವಿಕೆಯ ಮಧ್ಯದಲ್ಲಿ ನಿಜವಾದ ನಾಯಕತ್ವಕ್ಕಾಗಿ ಜಗತ್ತು ಹಸಿವೆಯಿಂದಿದೆ. ಪ್ರತಿಯೊಬ್ಬನೂ ಯೇಸುಕ್ರಿಸ್ತನ ಕಡೆಗೆ ನೋಡ ಬಹುದು; ಆತನು ಮಾರ್ಗವಾಗಿದ್ದಾನೆ. ಆತನು ಎಲ್ಲಾ ಜನರಿಗೆ ಎಲ್ಲವೂ ಆಗಿದ್ದಾನೆ. "ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂದು ಕರೆಯಲ್ಪಡುವನು" (ಯೆಶಾಯ 9:6ಬಿ).

## ಮುಕ್ತಾಯ

ನಿಶ್ಚಯವಾಗಿಯೂ ಯೇಸುವು ದೇವರ ಕುಮಾರನಾಗಿದ್ದಾನೆ. ಆತನು ದೇವರ ಕುಮಾರನಾಗಿದ್ದಾನೆಂಬುದನ್ನು ನಂಬಲಿಕ್ಕೆ ಈ ಕಾರಣಗಳನ್ನು ಇನ್ನೂ ಹೆಚ್ಚಾಗಿ ಪರೀಕ್ಷಿಸಿರಿ. ಆತನು ಆಗಿದ್ದಾನೆ ಎಂದು ನಂಬಿರಿ. ಆತನ ಮೂಲಕ ವಾಗಿ ನಿಮ್ಮ ಜೀವಿತವನ್ನು ದೇವರಿಗೆ ಸಮರ್ಪಿಸಿರಿ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ಕ್ರೈಸ್ತತ್ವದ ನೆಲೆಯಾಗಿ ಯಾವ ಸತ್ಯವಿರುತ್ತದೆ?
2. ಯೇಸುವಿನ ಜನನ, ಜೀವನ ಮತ್ತು ಮರಣವು ಹೆಚ್ಚು ವಿವರಗಳಲ್ಲಿ ಪ್ರವಾದಿ ಸಲ್ಪಟ್ಟಿವೆ. ಕೆಲವು ಉದಾಹರಣೆಗಳನ್ನು ಕೊಡಿರಿ.
3. ಯೇಸುವಿನ ಬಗೆಗಿನ ನೆರವೇರಿದ ಪ್ರವಾದನೆಗಳು ಏನನ್ನು ಸಿದ್ಧಪಡಿಸಿ ತೋರಿ ಸುತ್ತವೆ?
4. ಯೇಸು ತನ್ನ ಬಗ್ಗೆ ಧೈರ್ಯದ ಮತ್ತು ಅದ್ಭುತಕರವಾದ ಹೇಳಿಕೆಗಳನ್ನು ಕೊಟ್ಟನು. ಅವುಗಳಲ್ಲಿ ಕೆಲವು ಯಾವವು?
5. ಯೇಸುವಿನ ಕಾರ್ಯಗಳು ಆತನ ಮಾತುಗಳೊಂದಿಗೆ ಹೇಗೆ ಸಾಮರಸ್ಯವು

ಳ್ಳವುಗಳಾಗಿವೆ.

6. ಯೇಸುವಿನ ಒಳ್ಳೆಯತನವು ಹೇಗೆ ಸ್ವೀಕರಿಸಲ್ಪಟ್ಟಿತೆಂಬುದರ ಕೆಲವು ಉದಾಹರಣೆಗಳನ್ನು ಕೊಡಿರಿ.
7. ಯೇಸುವಿನ ಜೀವಿತವು ನಮ್ಮ ಜಗತ್ತಿನ ಮೇಲೆ ಹೇಗೆ ಪರಿಣಾಮ ಮಾಡುತ್ತಿದೆ?

## ಪದ ಸಹಾಯಗಳು

ಆರೋಹಣ - ಮೇಲೆ ಹೋಗುವುದು, ಮೇಲಕ್ಕೇರಿಸಲ್ಪಡುವುದು. ಕ್ರಿಸ್ತನು ಸತ್ತವರೊಳಗಿಂದ ಪುನರುತ್ಥಾನವಾದ ನಂತರ ದೇವರೊಂದಿಗಿರಲು ಪರಲೋಕಕ್ಕೆ ಹಿಂದಿರುಗಿ ತೆಗೆದು ಕೊಳ್ಳಲ್ಪಟ್ಟ ಘಟನೆಯಾಗಿದೆ.

ದೈವತ್ವ - ದೇವರು; ದೇವರ ಸ್ವಭಾವ, ದೇವರ ಅಸ್ತಿತ್ವ.

ವಂಶಾವಳಿ - ಪೂರ್ವಿಕರ ಪಟ್ಟಿ, ಯೇಸುವಿನ ವಂಶಾವಳಿಯು (ಮತ್ತಾಯ 1:1-16) ಯೇಸು ದೇವರ ವಾಗ್ದಾನಿತನಾದಾತನ ಬಗೆಗಿನ ಪ್ರವಾದನೆಗಳ ನೆರವೇರಿಕೆಯಾಗಿದ್ದಾನೆಂದು ತೋರಿಸಿತು.

ಕರ್ತನ ದಿನ - ವಾರದ ಮೊದಲನೆಯ ದಿನವು (ಭಾನುವಾರ ಹೊಸ ಒಡಂಬಡಿಕೆಯ ಸಭೆಯಿಂದ ಆರಾಧನೆಗಾಗಿ ಪ್ರತ್ಯೇಕಿಸಿ ಇಡಲ್ಪಟ್ಟಿತ್ತು (ಅಪೊಸ್ತಲರ ಕೃತ್ಯಗಳು 20:7).

ಕರ್ತನ ಭೋಜನ - ಹುಳಿಯಿಲ್ಲದ ರೊಟ್ಟಿ ತಿನ್ನುವ ಹಾಗೂ ದ್ರಾಕ್ಷಾರಸ ಕುಡಿಯುವದನ್ನೊಳಗೊಂಡ, ಯೇಸುವಿನಿಂದ ಸ್ಥಾಪಿಸಲ್ಪಟ್ಟ ಸ್ಮಾರಕವಾಗಿದೆ (1 ಕೊರಿಂಥ 11:20, 23-26). ಹೊಸ ಒಡಂಬಡಿಕೆಯ ಸಭೆಯು ಈ ಭೋಜನವನ್ನು ವಾರದ ಪ್ರತೀ ಮೊದಲನೆಯ ದಿನ ಆಚರಿಸುತ್ತದೆ.

ಪುನರುತ್ಥಾನ - ಸತ್ತ ಮನುಷ್ಯನು ಪುನಃ ಜೀವಿಸುವದಕ್ಕೆ ಎಬ್ಬಿಸಲ್ಪಡುವುದು. (ಯೇಸುವಿನ) ಪುನರುತ್ಥಾನವು ಯೇಸುವಿಗೆ ಮರಣದ ಮೇಲೆ ಬಲವಿರುವದೆಂದೂ ಆತನನ್ನು ಹಿಂಬಾಲಿಸುವವರು ಭೂಲೋಕದ ತಮ್ಮ ಜೀವಿತದ ನಂತರ ಪರಲೋಕದಲ್ಲಿ ಆತನೊಂದಿಗೆ ಎಂದೆಂದಿಗೂ ಜೀವಿಸಲು ಶಕ್ತರಾಗುವರೆಂಬುದಕ್ಕೆ ರುಜುವಾಗಿದೆ.

5

# ಪರಿಶುದ್ಧಾತ್ಮನು ಯಾರು?

"ಪರಿಶುದ್ಧಾತ್ಮವು *ಏನಾಗಿದೆ?*" ಎಂಬುದು ಪ್ರಶ್ನೆಯಲ್ಲ. ಆದರೆ "ಪರಿಶುದ್ಧಾತ್ಮನು *ಯಾರಾಗಿದ್ದಾನೆ?*" ಎಂಬುದು ಪ್ರಶ್ನೆ. ಪರಿಶುದ್ಧಾತ್ಮನು ಒಬ್ಬ ಜೀವಿಯೂ, ವ್ಯಕ್ತಿತ್ವವುಳ್ಳ ವ್ಯಕ್ತಿಯೂ, ದೈವತ್ವದಲ್ಲಿ ಮೂರನೆಯ ಸದಸ್ಯನೂ, ಆಗಿರುವದರಿಂದ ಈ ಪ್ರಶ್ನೆ. ಆತನು ಒಂದು ಶಕ್ತಿಗಿಂತಲೂ ಇಲ್ಲವೇ ಬಲಕ್ಕಿಂತಲೂ ಹೆಚ್ಚಿನವನಾಗಿದ್ದಾನೆ; ಆತನು ಜೀವಿಸುವ ಪರಲೋಕದ ವ್ಯಕ್ತಿಯಾಗಿದ್ದಾನೆ.

## ಆತನು ಒಬ್ಬ ವ್ಯಕ್ತಿಯಂತೆ ಇದ್ದಾನೆ

ಬೈಬಲಿನಲ್ಲಿ ಲಭ್ಯವಿರುವ ಎಲ್ಲಾ ಮಾಹಿತಿಯು ಪರಿಶುದ್ಧಾತ್ಮನು ಒಬ್ಬ ದೈವಿಕ ವ್ಯಕ್ತಿಯಾಗಿದ್ದಾನೆಂಬ ಸಂಗತಿಯನ್ನು ತೋರಿಸುತ್ತದೆ. ತಂದೆ ಹಾಗೂ ಕುಮಾರನಿಗೆ ಇರುವ ವೈಯಕ್ತಿಕ ವಿಶೇಷ ಗುಣಗಳೇ ಆತನಿಗೂ ಇರುತ್ತವೆ.

### ಆತನಿಗೆ ಒಬ್ಬ ವ್ಯಕ್ತಿಯ ಗುಣಲಕ್ಷಣಗಳಿವೆ

ಪರಿಶುದ್ಧಾತ್ಮನ ಗುಣಲಕ್ಷಣಗಳು ಆತನು ಒಂದು ಶಕ್ತಿಯಾಗಿರುವದರ ಬದಲು ಜೀವಿಸುವ ವ್ಯಕ್ತಿಯಾಗಿದ್ದಾನೆ, ವೈಯಕ್ತಿಕ ವ್ಯಕ್ತಿಯಾಗಿದ್ದಾನೆ ಎಂಬುದನ್ನು ಸೂಚಿಸುತ್ತವೆ:

1. *ಆತನಲ್ಲಿ ತೀರ್ಪು ಇದೆ*: "ಪರಿಶುದ್ಧಾತ್ಮನಿಗೂ ನಮಗೂ ಒಳ್ಳೆಯದೆಂದು ತೋಚಿತು" (ಅಪೊಸ್ತಲರ ಕೃತ್ಯಗಳು 15:28ಎ).

2. *ಆತನಿಗೆ ಮನಸ್ಸಿದೆ*: "ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪರಿಶುದ್ಧಾತ್ಮನ ಮನೋಭಾವವು ಏನೆಂದು ತಿಳಿದದೆ" (ರೋಮಾಪುರ 8:27ಎ).

3. *ಆತನು ಉದ್ದೇಶಿಸುತ್ತಾನೆ*: "ಈ ವರಗಳನ್ನೆಲ್ಲಾ ಒಬ್ಬನೇ ಆತ್ಮನು ತಾನು ಉದ್ದೇಶಿಸಿದಂತೆ ಪ್ರತಿಯೊಬ್ಬನಿಗೆ ಪ್ರತ್ಯೇಕವಾಗಿ ಹಂಚಿಕೊಡುತ್ತಾನೆ"

(1 ಕೊರಿಂಥ 12:11).

4. *ಆತನಿಗೆ ಅರಿವು ಉಂಟು*: "ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವದಿಲ್ಲ" (1 ಕೊರಿಂಥ 2:11ಬಿ).

5. *ಆತನಿಗೆ ಭಾವನೆಗಳಿವೆ* (ಪ್ರೀತಿ, ದುಃಖ, ಆನಂದ): "ಸಹೋದರರೇ, ನೀವು ನನಗೋಸ್ಕರ ದೇವರ ಮುಂದೆ ಮಾಡುವ ಪ್ರಾರ್ಥನೆಗಳಲ್ಲಿ ನನ್ನೊಂದಿಗೆ ಬಲೀಯವಾಗಿ ವಿಜ್ಞಾಪಿಸಿಕೊಳ್ಳಬೇಕೆಂದು ನಮ್ಮ ಕರ್ತನಾದ ಯೇಸು ಕ್ರಿಸ್ತನ ನಿಮಿತ್ತವಾಗಿಯೂ ಪರಿಶುದ್ಧಾತ್ಮನಿಂದಾಗುವ ಪ್ರೀತಿಯ ನಿಮಿತ್ತವಾಗಿಯೂ ನಿಮ್ಮನ್ನು ಬೇಡಿಕೊಳ್ಳುತ್ತೇನೆ" (ರೋಮಾಪುರ 15:30); "ದೇವರ ಪರಿಶುದ್ಧಾತ್ಮ ನನ್ನು ದುಃಖಪಡಿಸಬೇಡಿರಿ; ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆ ಹೊಂದಿದ್ದೀರಲ್ಲಾ" (ಎಫೆಸ 4:30); "ನೀವು ಬಹು ಹಿಂಸೆಯಿಂದಲೂ ಪರಿಶುದ್ಧಾತ್ಮ ನಿಂದ ಉಂಟಾಗುವ ಆನಂದದೊಡನೆ ವಾಕ್ಯವನ್ನು ಅಂಗೀಕರಿಸಿ ನಮ್ಮನ್ನೂ ಕರ್ತನನ್ನೂ ಅನುಸರಿಸುವವರಾಗಿದ್ದೀರಿ" (1 ಥೆಸಲೊನೀಕ 1:6).

ಪರಿಶುದ್ಧಾತ್ಮನು ಈ ಗುಣಲಕ್ಷಣಗಳನ್ನು ಹೊಂದಿರುವ ಸಂಗತಿಯು ಆತನು ಒಬ್ಬ ವ್ಯಕ್ತಿಯಾಗಿದ್ದಾನೆಂದು ಪ್ರಕಟಿಸುತ್ತದೆ.

**ಆತನು ಒಬ್ಬ ವ್ಯಕ್ತಿಯ ಚಟುವಟಿಕೆಗಳನ್ನು ಮಾಡುವನು**

ಪರಿಶುದ್ಧಾತ್ಮನು ಕೇವಲ ಶಕ್ತಿಯಂತೆ ಅಲ್ಲ ಆದರೆ ಒಬ್ಬ ವ್ಯಕ್ತಿಯಂತೆ ಕಾರ್ಯ ಮಾಡುತ್ತಾನೆ. ಆತನು ಈ ಕೆಳಗಿನವುಗಳನ್ನು ಮಾಡಬಲ್ಲನು:

1. *ಆತನು ಬೋಧಿಸಬಲ್ಲನು ಮತ್ತು ಜ್ಞಾಪಿಸಬಲ್ಲನು*: "ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪರಿಶುದ್ಧಾತ್ಮನು ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದೆನ್ನೆಲ್ಲಾ ನಿಮ್ಮ ನೆನಪಿಗೆ ತರುವನು" (ಯೋಹಾನ 14:26).

2. *ಆತನು ಸಾಕ್ಷಿ ಹೇಳುವನು*: "ಆದರೆ ತಂದೆಯ ಬಳಿಯಿಂದ ನಾನು ನಿಮಗೆ ಕಳುಹಿಸಿಕೊಡುವ ಸಹಾಯಕನು, ಅಂದರೆ ತಂದೆಯ ಬಳಿಯಿಂದ ಹೊರಡುವ ಸತ್ಯದ ಆತ್ಮನು, ಬಂದಾಗ ಆತನು ನನ್ನನ್ನು ಕುರಿತು ಸಾಕ್ಷಿ ಹೇಳು ವನು" (ಯೋಹಾನ 15:26).

3. *ಆತನು ಸರ್ವ ಸತ್ಯದಲ್ಲಿ ನಡಿಸುವನು*: "ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು" (ಯೋಹಾನ 16:13ಎ).

4. *ಆತನು ಮಾತಾಡುತ್ತಾನೆ*: "ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ವುಗಳನ್ನೇ, ಮಾತನಾಡವನು" (ಯೋಹಾನ 16:13ಬಿ; ಅಪೊಸ್ತಲರ ಕೃತ್ಯಗಳು

8:29; 11:12; 1 ತಿಮೊಥಿ 4:1 ನೋಡಿರಿ).

5. *ಆತನು ಕೇಳುತ್ತಾನೆ*: "ಆತನು ... ಕೇಳಿದ ಮಾತುಗಳನ್ನೇ ಆಡುವನು" (ಯೋಹಾನ 16:13ಸಿ).

6. *ಆತನು ಬಹಿರಂಗಪಡಿಸುತ್ತಾನೆ*: "ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು" (ಯೋಹಾನ 16:13ಡಿ).

7. *ಆತನು ಪ್ರತಿಬಂಧಿಸುತ್ತಾನೆ*: "ಆಸ್ಯ ಸೀಮೆಯಲ್ಲಿ ವಾಕ್ಯವನ್ನು ಹೇಳ ಬಾರದೆಂದು ಪರಿಶುದ್ಧಾತ್ಮನು ತಡೆದದ್ದರಿಂದ ಅವರು ಫ್ರುಗ್ಯ ಗಲಾತ್ಯ ಸೀಮೆ ಯನ್ನು ಹಾದು ಹೋಗಿ ಮೂಸ್ಯಕ್ಕೆ ಎದುರಾಗಿ ಬಂದಾಗ ಬಿಥೂನ್ಯಕ್ಕೆ ಹೋಗುವ ಪ್ರಯತ್ನ ಮಾಡಿದರು" (ಅಪೊಸ್ತಲರ ಕೃತ್ಯಗಳು 16:6).

8. *ಆತನು ಜೀವ ಕೊಡುತ್ತಾನೆ*: "ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಿರುವುದಾದರೆ, ನಿಮ್ಮ ಮರ್ತ್ಯ ದೇಹಗಳಿಗೂ ಸಹ ನಿಮ್ಮಲ್ಲಿ ವಾಸಿಸುವ ಆತ್ಮನ ಮೂಲಕವೇ ಜೀವವನ್ನು ಕೊಡುವನು" (ರೋಮಾಪುರ 8:11ಬಿ).

9. ಆತನು ಪ್ರಕಟಿಸುತ್ತಾನೆ: "ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು" (1 ಕೊರಿಂಥ 2:10ಎ; ಎಫೆಸ 3:3-5 ನೋಡಿರಿ).

10. *ಆತನು ಪರಿಶೋಧಿಸುತ್ತಾನೆ*: "ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ" (1 ಕೊರಿಂಥ 2:10ಬಿ).

11. *ಆತನು ವಾಗ್ದಾನ ಮಾಡುತ್ತಾನೆ*: "ಅಬ್ರಹಾಮನಿಗೆ ಉಂಟಾದ ಆಶೀರ್ವಾದವು ಕ್ರಿಸ್ತ ಯೇಸುವಿನಲ್ಲಿ ಅನ್ಯಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನ ಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆ ..." (ಗಲಾತ್ಯ 3:14; ಅಪೊಸ್ತಲರ ಕೃತ್ಯಗಳು 2:33 ನೋಡಿರಿ).

12. *ಆತನು ಅನ್ಯೋನ್ಯತೆಯಲ್ಲಿರುತ್ತಾನೆ*: "ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ ಪರಿಶುದ್ಧಾತ್ಮನ ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡವಿರಲಿ" (2 ಕೊರಿಂಥ 13:14; ಫಿಲಿಪ್ಪಿ 2:1 ನೋಡಿರಿ).

13. *ಆತನು ನಮಗೋಸ್ಕರ ಬೇಡಿಕೊಳ್ಳುತ್ತಾನೆ*: "... ಪರಿಶುದ್ಧಾತ್ಮನು ತಾನೇ ಮಾತುಗಳಿಂದ ವ್ಯಕ್ತಪಡಿಸಲು ಸಾಧ್ಯವಾಗದ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ ... ಆ ಆತ್ಮನು ದೇವರ ಚಿತ್ತಾನುಸಾರವಾಗಿ ದೇವ ಜನರಿಗೋಸ್ಕರ ಬೇಡಿ ಕೊಳ್ಳುವನೆಂದು ಆತನು ಬಲ್ಲನು" (ರೋಮಾಪುರ 8:26, 27).

14. *ಆತನು ಸೂಚಿಸುತ್ತಾನೆ ಹಾಗೂ ಮುಂತಿಳಿಸುತ್ತಾನೆ*: “ತಮ್ಮಲ್ಲಿದ್ದ ಕ್ರಿಸ್ತನ ಆತ್ಮನು ಕ್ರಿಸ್ತನಿಗೆ ಬರಬೇಕಾದ ಬಾಧೆಗಳನ್ನೂ, ಅವುಗಳ ತರುವಾಯ ಉಂಟಾಗುವ ಪ್ರಭಾವವನ್ನೂ ಮುಂದಾಗಿ ತಿಳಿಸಿದಾಗ, ಆತನು ಯಾವ ಕಾಲವನ್ನು ಇಲ್ಲವೇ ಎಂಥಾ ಕಾಲವನ್ನು ಸೂಚಿಸುವನೆಂಬುದನ್ನು ಅವರು ಪರಿಶೋಧನೆ ಮಾಡಿದರು” (1 ಪೇತ್ರ 1:11).

15. *ಆತನು ಆಹ್ವಾನಿಸುತ್ತಾನೆ*: “ಆತ್ಮನೂ ವಧುವೂ ‘ಬಾ’ ಅನ್ನುತ್ತಾರೆ” (ಪ್ರಕಟನೆ 22:17ಎ).

16. *ಆತನು ನಡಿಸುತ್ತಾನೆ*: “ಯೇಸು ಪರಿಶುದ್ಧಾತ್ಮ ಭರಿತನಾಗಿ ಯೋರ್ದನ್ ಹೊಳೆಯಿಂದ ಹಿಂತಿರುಗಿ, ದೇವರಾತ್ಮನಿಂದ ನಲ್ವತ್ತು ದಿವಸ ಅಡವಿಯಲ್ಲಿ ನಡಿಸಲ್ಪಟ್ಟನು” (ಲೂಕ 4:1); “ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು” (ರೋಮಾಪುರ 8:14).

ಈ ಪ್ರತಿಯೊಂದು ಕಾರ್ಯದಲ್ಲಿ ಒಬ್ಬ ವ್ಯಕ್ತಿಯು ಭಾಗವಹಿಸುವನು ಆದರೆ ಕೇವಲ ಶಕ್ತಿಯು ಇದನ್ನು ಮಾಡಲಾರದು. ಹೀಗೆ ಪರಿಶುದ್ಧಾತ್ಮನು ಒಬ್ಬ ವ್ಯಕ್ತಿಯಾಗಿದ್ದಾನೆಂದು ನೋಡಲ್ಪಡಬೇಕು.

**ಆತನನ್ನು ಹೀನೈಸಬಹುದು**

ಪರಿಶುದ್ಧಾತ್ಮನನ್ನು ಗಾಯಗೊಳಿಸಿದ್ದನ್ನೂ ತಾತ್ಸರ ಮಾಡಿದ್ದನ್ನೂ ವಿವರಿಸಲು ಉಪಯೋಗಿಸಿದ ಪದಗಳು ಸಾಮಾನ್ಯವಾಗಿ ವ್ಯಕ್ತಿಯನ್ನು ತಾತ್ಸಾರ ಮಾಡಲು ಉಪಯೋಗಿಸಿದ ಮಾತುಗಳಂಥಿದ್ದವು. ಈ ರೀತಿಯಲ್ಲಿ ಆತನನ್ನು ಹೀನೈಸಬಹುದು.

1. *ಆತನಿಗೆ ದೂಷಣೆ ಮಾಡಬಹುದು*: “... ಆದರೆ ಪರಿಶುದ್ಧಾತ್ಮ ದೂಷಣೆಗೆ ಕ್ಷಮಾಪಣೆಯಿಲ್ಲ. ... ಪರಿಶುದ್ಧಾತ್ಮನಿಗೆ ವಿರೋಧವಾಗಿ ಮಾತನಾಡಿದರೆ ಅವನಿಗೆ ಇಹದಲ್ಲಾಗಲೀ ಪರದಲ್ಲಾಗಲಿ ಕ್ಷಮಿಸಲ್ಪಡುವದಿಲ್ಲ” (ಮತ್ತಾಯ 12:31, 32).

2. *ಆತನಿಗೆ ಸುಳ್ಳು ಹೇಳಬಹುದು*: “ಆಗ ಪೇತ್ರನು-ಅನನೀಯಾ, ಸೈತಾನನು ನಿನ್ನ ಹೃದಯದಲ್ಲಿ ತುಂಬಿಕೊಂಡದ್ದು ಏಕೆ? ನೀನು ಯಾಕೆ ... ಪರಿಶುದ್ಧಾತ್ಮನನ್ನು ವಂಚಿಸ ಬೇಕೆಂದಿದ್ದೀ?” ಅಂದನು (ಅಪೊಸ್ತಲರ ಕೃತ್ಯಗಳು 5:3ಎ).

3. *ಆತನನ್ನು ಎದುರಿಸಬಹುದು*: “ಚಂಡಿಗಳೇ, ಸುನ್ನತಿಯಿಲ್ಲದ ಕ್ರೂರ ಹೃದಯದರೇ, ನಿಮ್ಮ ಪಿತೃಗಳು ಹೇಗೋ ಹಾಗೆಯೇ ನೀವು ಯಾವಾಗಲೂ ಪರಿಶುದ್ಧಾತ್ಮನನ್ನು ಎದುರಿಸುವವರಾಗಿದ್ದೀರಿ” (ಅಪೊಸ್ತಲರ ಕೃತ್ಯಗಳು 7:51ಎ).

4. *ಆತನನ್ನು ದುಃಖಪಡಿಸಬಹುದು*: “ದೇವರ ಪರಿಶುದ್ಧಾತ್ಮನನ್ನು

ದುಃಖಪಡಿಸ ಬೇಡಿರಿ; ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆ ಹೊಂದಿದ್ದೀರಲ್ಲಾ" (ಎಫೆಸ 4:30).

5. *ಆತನನ್ನು ಅವಮಾನಪಡಿಸಬಹುದು ಇಲ್ಲವೇ ತಿರಸ್ಕರಿಸಬಹುದು*: "ಕೃಪಾ ವರವಾಗಿರುವ ಆತ್ಮನನ್ನು ತಿರಸ್ಕಾರ ಮಾಡಿದ್ದಾನೋ ..." (ಇಬ್ರಿಯ 10:29).

6. *ಆತನನ್ನು ನಂದಿಸಬಹುದು*: ''ಪರಿಶುದ್ಧಾತ್ಮನನ್ನು ನಂದಿಸ ಬೇಡಿರಿ'' (1 ಥೆಸಲೊನೀಕ 5:19).

ಪರಿಶುದ್ಧಾತ್ಮನನ್ನು ಹೇಗೆ ಹೀನೈಸ ಬಹುದೆಂಬುದನ್ನು ಕುರಿತಾಗಿರುವ ಹೇಳಿಕೆಗಳು ಆತನು ಒಬ್ಬ ವ್ಯಕ್ತಿಯಾಗಿರುವನೆಂಬುದನ್ನು ಸೂಚಿಸುತ್ತವೆ. ಬಲವನ್ನು ಇಲ್ಲವೇ ಶಕ್ತಿಯನ್ನು ಹೀನೈಸುವುದಕ್ಕೆ ಮೇಲಿನ ರೀತಿಯ ಸಾಮಾನ್ಯ ಪದಗಳಲ್ಲಿ ವಿವರಿಸಲ್ಪಡುವುದಿಲ್ಲ, ಸಾಂಕೇತಿಕ ಹಿನ್ನೆಲೆಯಲ್ಲಿ ಅಥವಾ ಪದ್ಯಗಳಲ್ಲಿ ಮಾತ್ರ ಉಪಯೋಗಿಸಬಹುದು.

### ಆತನಿಗೆ ಪ್ರತ್ಯೇಕವಾದ ಅಸ್ತಿತ್ವವಿದೆ

ಪರಿಶುದ್ಧಾತ್ಮನು ವ್ಯಕ್ತಿಯಾಗಿದ್ದಾನೆಂಬುದಕ್ಕೆ ಇನ್ನೊಂದು ಸೂಚನೆಯನ್ನು ತಂದೆಯೊಂದಿಗೂ, ಕುಮಾರನೊಂದಿಗೂ, ಅವರ ಸ್ವಭಾವ ಹಾಗೂ ಗುಣದೊಂದಿಗೆ ನಮೂದಿಸಿದ್ದು ಮಾತ್ರವಲ್ಲದೇ ಆತನಿಗೆ ಆತನ ಸ್ವಂತ ವಿಶಿಷ್ಟ ವಾದ ಮತ್ತು ಪ್ರತ್ಯೇಕವಾದ ಅಸ್ತಿತ್ವವಿರುವುದು.

ಯೇಸುವು ಬಾಪ್ತಿಸ್ಮ ಹೊಂದಿದಾಗ, ಆತನ ಮೇಲೆ ಇಳಿದು ಬಂದನೆಂದು ಆತನ ಬಗ್ಗೆ ಹೇಳಲ್ಪಟ್ಟಿದೆ (ಯೋಹಾನ 1:33). ಕುಮಾರನು ಬಾಪ್ತಿಸ್ಮದ ನೀರಿನಿಂದ ಮೇಲಕ್ಕೆ ಬಂದಾಗ, ಪರಿಶುದ್ಧಾತ್ಮನು ಆತನ ಮೇಲೆ ಇಳಿದು ಬಂದನು ಹಾಗೂ ತಂದೆಯು ಪರಲೋಕದಿಂದ ಮಾತಾಡಿದನು (ಮತ್ತಾಯ 3:16, 17; ಲೂಕ 3:21, 22). ತಂದೆಯು ಪರಲೋಕದಲ್ಲಿ ಉಳಿದುಕೊಂಡನು, ಕುಮಾರನು ಭೂಲೋಕಕ್ಕಿಳಿದನು ಮತ್ತು ಪರಿಶುದ್ಧಾತ್ಮನು ಯೇಸುವಿನೊಂದಿಗೆ ವಾಸಿಸಲು ಬಂದನು.

ಒಬ್ಬ ವ್ಯಕ್ತಿಯು ಯೇಸುವಿಗೆ ವಿರುದ್ಧವಾಗಿ ಕೆಟ್ಟದ್ದನ್ನು ಮಾತಾಡಬಹುದು ಹಾಗೂ ಕ್ಷಮಿಸಲ್ಪಡಬಹುದು. ಆದರೆ ಅವನು ಪರಿಶುದ್ಧಾತ್ಮನಿಗೆ ವಿರುದ್ಧ ವಾಗಿ ಮಾತಾಡಿದರೆ ಅವನು ಕ್ಷಮಿಸಲ್ಪಡಲಾರನು (ಮತ್ತಾಯ 12:32). ಯೇಸುವೂ ಪರಿಶುದ್ಧಾತ್ಮನೂ ಒಂದೇ ವ್ಯಕ್ತಿಯಾಗಿದ್ದರೆ ಒಬ್ಬನು ಹೇಗೆ ಯೇಸುವಿಗೆ ವಿರುದ್ಧವಾಗಿ ಮಾತಾಡಬಹುದು ಮತ್ತು ಪರಿಶುದ್ಧಾತ್ಮನಿಗೆ ವಿರುದ್ಧ ವಾಗಿ ಮಾತಾಡಬಾರದು? ಈ ಬೋಧನೆಯನ್ನು ಕೊಡುವಲ್ಲಿ, ಯೇಸುವು ಪ್ರತ್ಯೇಕತೆಯನ್ನು ಅರ್ಥಮಾಡಿಕೊಂಡಿರಬಹುದು.

ಇತರರು ಪರಿಶುದ್ಧಾತ್ಮ ಭರಿತರಾಗಿದ್ದಂತೆ (ಅಪೊಸ್ತಲರ ಕೃತ್ಯಗಳು 6:3, 5; 7:55; 11:24) ಯೇಸುವು ಪವಿತ್ರಾತ್ಮ ಭರಿತನಾಗಿದ್ದಾನೆಂದು ಲೂಕ 4:1 ಹೇಳುತ್ತದೆ. ಅಪೊಸ್ತಲರ ಕೃತ್ಯಗಳಲ್ಲಿಯ ಘಟನೆಗಳಲ್ಲಿ ಪರಿಶುದ್ಧಾತ್ಮನಿಂದ ತುಂಬಿಸಲ್ಪಟ್ಟ ಜನರು ಪರಿಶುದ್ಧಾತ್ಮನಂತೆ ಅದೇ ವ್ಯಕ್ತಿಯಾಗಿರಲಿಲ್ಲ ಎಂದು ಸ್ಪಷ್ಟವಾಗುತ್ತದೆ. ಯೇಸು ಮತ್ತು ಪವಿತ್ರಾತ್ಮನು ಸ್ಪಷ್ಟವಾಗಿ ಭಿನ್ನವಾದ ಜೀವಿಗಳಾಗಿದ್ದಾರೆಂಬುದನ್ನು ಗುರುತಿಸಬೇಕು.

ಪರಿಶುದ್ಧಾತ್ಮನು ಇನ್ನೂ ಕೊಡಲ್ಪಟ್ಟಿರುವದಿಲ್ಲ (ಯೋಹಾನ 7:39), ಯಾಕೆಂದರೆ ಯೇಸು ಇನ್ನೂ ಮಹಿಮೆಹೊಂದಿಲ್ಲ ಎಂದು ಯೋಹಾನನು ಬರೆದನು. ಯೇಸುವು ಭೂಲೋಕದಲ್ಲಿ ತನ್ನ ಶಿಷ್ಯರೊಂದಿಗೆ ಆಗಲೇ ಇದ್ದಾಗ ಇದು ಹೇಳಲ್ಪಟ್ಟಿತು. ಪರಿಶುದ್ಧಾತ್ಮನು ಇನ್ನೂ ಕೊಡಲ್ಪಡದೆ ಇದ್ದುದರಿಂದ ಪರಿಶುದ್ಧಾತ್ಮನು ಯೇಸುವಿಗಿಂತ ಬೇರೊಬ್ಬನಾಗಿರಬೇಕು.

ಯೋಹಾನ 14:26ರಲ್ಲಿ "ಬೇರೊಬ್ಬ ಸಹಾಯಕನನ್ನು" "ಕಳುಹಿಸುವೆನೆಂದು ಯೇಸು ಅಪೊಸ್ತಲರಿಗೆ ಹೇಳಿದನು (ಯೋಹಾನ 14:16ರ ಪ್ರಕಾರ ಈತನು ಪರಿಶುದ್ಧಾತ್ಮನಾಗಿದ್ದನು). ಆತನು ತಾನೇ ಸಹಾಯಕನಾಗಿದ್ದರೆ, "ಇನ್ನೊಬ್ಬ" ಸಹಾಯಕನನ್ನು ಆತನು ಹೇಗೆ ಕಳುಹಿಸಿ ಕೊಡುವನು? ಪರಿಶುದ್ಧಾತ್ಮನು, ಯೇಸುವು ಒಬ್ಬನೇ ಆಗಿದ್ದರೆ ಪರಿಶುದ್ಧಾತ್ಮನು "ಇನ್ನೊಬ್ಬ" ಸಹಾಯಕನಾಗುವುದು ಹೇಗೆ?

ತಾನು ಹೋಗದಿದ್ದರೆ ಪರಿಶುದ್ಧಾತ್ಮವು ಬರುವದಿಲ್ಲವೆಂದು ಯೇಸು ಹೇಳಿದನು (ಯೋಹಾನ 16:7). ಪರಿಶುದ್ಧಾತ್ಮನು ತನ್ನಷ್ಟಕ್ಕೆ ತಾನೇ ಮಾತಾಡುವದಿಲ್ಲ ಆದರೆ ಯೇಸುವಿನಿಂದ ಕೇಳಿದ್ದನ್ನು ಮಾತಾಡುತ್ತಾನೆ ಎಂದು ಆತನು ಹೇಳಿದನು (ಯೋಹಾನ 16:13). ಯೇಸುವಿನ ಬಗ್ಗೆ ಮತ್ತು ಪರಿಶುದ್ಧಾತ್ಮನ ಬಗ್ಗೆ ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಟ್ಟ ಮಾಹಿತಿಯೂ ಅವರು ಇಬ್ಬರು ಸ್ವತಂತ್ರವಾದ, ಭಿನ್ನವಾದ ಪರಲೋಕದ ವ್ಯಕ್ತಿಗಳು ಎಂಬುದನ್ನು ಸೂಚಿಸುತ್ತದೆ.

## ಆತನು ದೈವವಾಗಿದ್ದಾನೆ

ಪರಿಶುದ್ಧಾತ್ಮನು ತಂದೆಯೊಂದಿಗೆ, ಹಾಗೂ ಕುಮಾರನೊಂದಿಗೆ ಅವರಿಗೆ ಸರಿಸಮಾನನಾಗಿ, ಅದೇ ಅಂತಸ್ತು ಉಳ್ಳವನಾಗಿ ಹೇಳಲ್ಪಟ್ಟಿದ್ದಾನೆ. ಜನರು ತಂದೆ, ಕುಮಾರ ಹಾಗೂ ಪರಿಶುದ್ಧಾತ್ಮನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಲ್ಪಡಬೇಕು (ಮತ್ತಾಯ 28:19). 2 ಕೊರಿಂಥ 13:14ರಲ್ಲಿ ಒಂದೇ ಅಂತಸ್ತು ಉಳ್ಳವರಂತೆ ಪೌಲನು ಈ ಮೂವರನ್ನು ಒಂದಾಗಿ ನಮೂದಿಸಿದ್ದಾನೆ; "ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ ಪರಿಶುದ್ಧಾತ್ಮನ

ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡವಿರಲಿ." ಆತ್ಮನು, ದೇವರು ("ತಂದೆಯು"; 1 ಕೊರಿಂಥ 8:6) ಮತ್ತು ಕರ್ತನು ("ಯೇಸುವು"; 1 ಕೊರಿಂಥ 8:6) ಆತ್ಮಿಕ ವರಗಳನ್ನು ಕೊಡುವವರಾಗಿದ್ದಾರೆ (1 ಕೊರಿಂಥ 12:4-6). ಇವು ಪರಿಶುದ್ಧಾತ್ಮನ ಚಿತ್ತಕ್ಕನುಸಾರವಾಗಿ ಕೊಡಲ್ಪಡುತ್ತವೆಂದು ಹೇಳಲ್ಪಟ್ಟಿವೆ (1 ಕೊರಿಂಥ 12:11).[1]

ತಂದೆ, ಕುಮಾರ, ಪರಿಶುದ್ಧಾತ್ಮ ಭಿನ್ನವಾದವರೂ, ಒಂದೇ ಸ್ವಭಾವದ ಪರಲೋಕ ಜೀವಿಗಳೂ ಆಗಿರುವರೆಂಬುದನ್ನು ಹೊಸ ಒಡಂಬಡಿಕೆಯಲ್ಲಿ ಪುರಾವೆಯು ಸ್ಪಷ್ಟವಾಗಿಯೂ ಬಲವಾಗಿಯೂ ತೋರಿಸುತ್ತದೆ. ಅವರು ತಮ್ಮ ಸಂಬಂಧಗಳಲ್ಲಿ ಹಾಗೂ ಮಾನವ ಜನಾಂಗಕ್ಕೆ ತಮ್ಮ ಸೇವೆಯಲ್ಲಿ ಒಂದಾಗಿ ಕೂಡಿಸಲ್ಪಟ್ಟಿದ್ದಾರೆ.

ದೇವರಿಂದ ಮಾತ್ರವೇ ಹೊಂದಿಕೊಂಡಿರುವ ಗುಣಲಕ್ಷಣಗಳು ಪರಿಶುದ್ಧಾತ್ಮನಿಗೂ ಅನ್ವಯಿಸಲ್ಪಟ್ಟಿವೆ. ಆತನು ತಂದೆಯೊಂದಿಗೂ, ಕುಮಾರನೊಂದಿಗೂ ಹಂಚಿಕೊಳ್ಳುವ ಐದು ಲಕ್ಷಣಗಳನ್ನು ಗಮನಿಸೋಣ:

1. *ಆತನು ನಿತ್ಯನು*: ನಿತ್ಯವಾದ ಗುಣಸ್ವಭಾವಕ್ಕೆ ಸಂಬಂಧಿಸಿದ ಬೈಬಲಿನ ಹೇಳಿಕೆಗಳು: (1) ಪರಿಶುದ್ಧಾತ್ಮನಿಗೆ ಸಂಬಂಧಿಸಿ - "... ನಿತ್ಯಾತ್ಮನಿಂದ ತನ್ನನ್ನು ತಾನೇ ನಿರ್ದೋಷಿಯನ್ನಾಗಿ ದೇವರಿಗೆ ಸಮರ್ಪಿಸಿಕೊಂಡ ಕ್ರಿಸ್ತನ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು ನಿರ್ಜೀವ ಕ್ರಿಯೆಗಳಿಂದ ಬಿಡಿಸಿ ನಾವು ಜೀವವುಳ್ಳ ದೇವರನ್ನು ಆರಾಧಿಸುವವರಾಗುವಂತೆ ನಮ್ಮ ಮನಸ್ಸನ್ನು ಶುದ್ಧೀಕರಿಸುವದಲ್ಲವೇ" (ಇಬ್ರಿಯ 9:14); (2) ತಂದೆಯೊಂದಿಗೆ ಸಂಬಂಧಿಸಿ - "ಪೂರ್ವದಿಂದಲೂ ನಿನ್ನ ಸಿಂಹಾಸನವು ಸ್ಥಿರವಾಗಿದೆ: ಅನಾದಿಯಿಂದ ನೀನು ಇದ್ದೀ" (ಕೀರ್ತನೆ 93:2); ಹಾಗೂ (3) ಯೇಸುವಿಗೆ ಸಂಬಂಧಿಸಿ "ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈ ಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು" (ಇಬ್ರಿಯ 13:8); "ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ನಿತ್ಯ ರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸುವನು" (2 ಪೇತ್ರ 1:11).

2. *ಆತನು ಸರ್ವ ಜ್ಞಾನಿಯಾಗಿದ್ದಾನೆ*: ಈ ಜ್ಞಾನವು ಬೈಬಲಿನ ವಾಕ್ಯದಲ್ಲಿ ಹೇಳಲ್ಪಟ್ಟಿದೆ: (1) ಪರಿಶುದ್ಧಾತ್ಮನನ್ನು ಕುರಿತು "ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ" (1 ಕೊರಿಂಥ 2:10); (2) ತಂದೆಯನ್ನು ಕುರಿತು - "ನಾವು ಯಾವಾತನಿಗೆ ಲೆಕ್ಕ ಒಪ್ಪಿಸ ಬೇಕಾಗಿದೆಯೋ ಆತನ ದೃಷ್ಟಿಗೆ ಸಮಸ್ತವೂ ಮುಚ್ಚುಮರೆಯಿಲ್ಲದ್ದಾಗಿಯೂ ಬೈಲಾದದ್ದಾಗಿಯೂ ಆಗಿದೆ. ಆತನ ಸನ್ನಿಧಿಯಲ್ಲಿ ಅಗೋಚರವಾಗಿರುವ ಸೃಷ್ಟಿಯು ಒಂದೂ ಇಲ್ಲ" (ಇಬ್ರಿಯ 4:13);

(3) ಯೇಸುವನ್ನು ಕುರಿತು - "ಆದರೆ ಯೇಸು ಎಲ್ಲರನ್ನೂ ಬಲ್ಲವನಾದ್ದರಿಂದ ಅವರಿಗೆ ವಶವಾಗಲಿಲ್ಲ. ಆತನು ಪ್ರತಿ ಮನುಷ್ಯನ ಆಂತರ್ಯವನ್ನು ತಿಳಿದವನಾದ ಕಾರಣ ಯಾವನೂ ಯಾವ ಮನುಷ್ಯನ ವಿಷಯದಲ್ಲಿಯೂ ಆತನಿಗೆ ಸಾಕ್ಷಿ ಕೊಡಬೇಕಾದ ಅವಶ್ಯವಿರಲಿಲ್ಲ" (ಯೋಹಾನ 2:24, 25).

3. *ಆತನು ಸರ್ವಶಕ್ತನು*: ಪ್ರತಿಯೊಂದರ ಮೇಲೆ ಈ ಶಕ್ತಿಯು ಇರುವದನ್ನು ಬೈಬಲಿನ ಅನೇಕ ವಾಕ್ಯಗಳು ನಮೂದಿಸುತ್ತವೆ: (1) ಪರಿಶುದ್ಧಾತ್ಮನಿಗೆ ಸಂಬಂಧಿಸಿ: "ನಿನ್ನ ಮೇಲೆ ಪರಿಶುದ್ಧಾತ್ಮನು ಬರುವುದು; ಮಹೋನ್ನತನ ಶಕ್ತಿಯು ನಿನ್ನನು ಆವರಿಸುವುದು" (ಲೂಕ 1:35ಬಿ). "ತರುವಾಯ ಯೇಸು ಪರಿಶುದ್ಧಾತ್ಮನ ಶಕ್ತಿಯಿಂದ ಕೂಡಿದವನಾಗಿ ತಿರಿಗಿ ಗಲಿಲಾಯಕ್ಕೆ ಹೋದನು" (ಲೂಕ 4:14ಎ), "ಆದರೆ ಪರಿಶುದ್ಧಾತ್ಮ ನಿಮ್ಮ ಮೇಲೆ ಬಂದಾಗ ನೀವು ಶಕ್ತಿಯನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 1:8ಎ); (2) ದೇವರಿಗೆ ಸಂಬಂಧಿಸಿ - "ದೇವರಿಂದ ಬರುವ ಯಾವ ಮಾತಾದರೂ ನಿಷ್ಫಲವಾಗುವದಿಲ್ಲ" (ಲೂಕ 1:37); ಹಾಗೂ (3) ಯೇಸುವಿಗೆ ಸಂಬಂಧಿಸಿ - "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ ..." (ಮತ್ತಾಯ 28:18).

4. *ಆತನು ಸರ್ವ ವ್ಯಾಪಿಯಾಗಿದ್ದಾನೆ*: ಎಲ್ಲಾ ಕಡೆಯಲ್ಲಿಯೂ ಇರುವದಕ್ಕೆ ಶಕ್ತಿಯಿದೆ. (1) ಪರಿಶುದ್ಧಾತ್ಮನಿಗೆ - "ನಾನು ನಿನ್ನ ಆತ್ಮದಿಂದ ತಪ್ಪಿಸಿಕೊಂಡು ಎಲ್ಲಿಗೆ ಹೋಗಲಿ?" (ಕೀರ್ತನೆ 139:7ಎ); (2) ತಂದೆಗೆ - ದೇವರು ನಿಜವಾಗಿ ಭೂಲೋಕದಲ್ಲಿ ವಾಸಿಸುವನೋ? "ಆಕಾಶವೂ ಉನ್ನತೋನ್ನತವಾದ ಆಕಾಶವೂ ನಿನ್ನ ವಾಸಕ್ಕೆ ಸಾಲವು" (1 ಅರಸುಗಳು 8:27ಎ); "ನನ್ನ ಕಣ್ಣಿಗೆ ಬೀಳದಂತೆ ಯಾವನಾದರೂ ಗುಪ್ತ ಸ್ಥಳಗಳಲ್ಲಿ ತನ್ನನ್ನು ಮರೆ ಮಾಡಿಕೊಂಡಾನೇ? ನಾನು ಭೂಮ್ಯಾಕಾಶಗಳಲ್ಲಿಯೂ ವ್ಯಾಪಿಸಿರುವವನಲ್ಲವೋ?" (ಯೆರೆಮೀಯ 23:24); ಹಾಗೂ (3) ಯೇಸುವಿಗೆ - "ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಸದಾಕಾಲ ನಿಮ್ಮ ಸಂಗಡ ಇರುತ್ತೇನೆ" (ಮತ್ತಾಯ 28:20ಬಿ).

5. *ಆತನಿಗೆ ಸೃಷ್ಟಿಸುವ ಶಕ್ತಿಯಿದೆ*: ಬೈಬಲಿನ ಈ ವಾಕ್ಯಗಳು ದೈವತ್ವದ ಪ್ರತಿಯೊಬ್ಬ ಸದಸ್ಯನನ್ನು ಸೃಷ್ಟಿಕರ್ತನಂತೆ ಚಿತ್ರಿಸುತ್ತದೆ: (1) ಪರಿಶುದ್ಧಾತ್ಮನು - "... ದೇವರಾತ್ಮವು ಜಲ ಸಮೂಹಗಳ ಮೇಲೆ ಚಲಿಸುತ್ತಿತ್ತು" (ಆದಿಕಾಂಡ 1:2); (2) ತಂದೆ - "ಆತನು ತನ್ನ ಶಕ್ತಿಯಿಂದ ಭೂಮಿಯನ್ನು ನಿರ್ಮಿಸಿ ತನ್ನ ಜ್ಞಾನದಿಂದ ಆಕಾಶಮಂಡಲವನ್ನು ಹರಡಿದ್ದಾನೆ" (ಯೆರೆಮೀಯ 51:15); ಹಾಗೂ (3) ಕುಮಾರನು - "ಭೂಪರಲೋಕಗಳಲ್ಲಿರುವ ದೃಶ್ಯಾದೃಶ್ಯವಾದವುಗಳೆಲ್ಲವೂ ಸಿಂಹಾಸನಗಳಾಗಲಿ ಪ್ರಭುತ್ವಗಳಾಗಲಿ ದೊರೆತನಗಳಾಗಲಿ ಅಧಿಕಾರಗಳಾಗಲಿ ಆತನಲ್ಲಿ ಸೃಷ್ಟಿಸಲ್ಪಟ್ಟವು. ಸರ್ವವು ಆತನ ಮುಖಾಂತರವಾಗಿಯೂ ಆತನಿಗೋಸ್ಕರ ವಾಗಿಯೂ ಸೃಷ್ಟಿಸಲ್ಪಟ್ಟಿತು" (ಕೊಲೊಸ್ಸೆ 1:16).

## ಮುಕ್ತಾಯ

ದೇವರಿಗೆ ಮಾತ್ರವೇ ಅನ್ವಯಿಸುವ ಮಾತುಗಳಲ್ಲಿ ಪರಿಶುದ್ಧಾತ್ಮನು ವಿವರಿಸಲ್ಪಟ್ಟಿದ್ದಾನೆ. ಈ ಮಾತುಗಳಿಂದ ಪರಿಶುದ್ಧಾತ್ಮನು ತಂದೆಯೊಂದಿಗೂ ಕುಮಾರನೊಂದಿಗೂ ದೈವತ್ವವನ್ನು ಉಳ್ಳವರಾಗಿ ತಂದೆಯೊಂದಿಗೂ ಕುಮಾರನೊಂದಿಗೂ ಒಂದಾಗಿರುವನು. ಆದರೆ ಭಿನ್ನವಾದ ವ್ಯಕ್ತಿತ್ವವುಳ್ಳವನಾಗಿರುವನೆಂದೂ ನಾವು ತೀರ್ಮಾನಿಸಬಹುದು. ಆತನು ಬೈಬಲಿನ ಮಹತ್ವದ ಹಾಗೂ ಕೇಂದ್ರ ವ್ಯಕ್ತಿಯಾಗಿದ್ದಾನೆ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. "ಪರಿಶುದ್ಧಾತ್ಮನು ಏನಾಗಿದೆ?" ಎಂಬುದಕ್ಕಿಂತ "ಪರಿಶುದ್ಧಾತ್ಮನು ಯಾರು?" ಎಂಬುದು ಯಾಕೆ ಪ್ರಶ್ನೆಯಾಗಿರಬೇಕೆಂಬುದನ್ನು ವಿವರಿಸಿರಿ.
2. ಪರಿಶುದ್ಧಾತ್ಮನು ಜೀವಿಸುವ "ವ್ಯಕ್ತಿ" ಯಾಗಿದ್ದಾನೆಂದು ಸೂಚಿಸುವ ಐದು ಲಕ್ಷಣಗಳು ಯಾವವು?
3. ಪರಿಶುದ್ಧಾತ್ಮನನ್ನು ತಪ್ಪಾಗಿ ನಡಿಸಿಕೊಳ್ಳ ಬಹುದೆಂಬ ನಂಬಿಕೆಯು ಆತನು ವ್ಯಕ್ತಿಯಾಗಿದ್ದಾನೆಂದು ಹೇಗೆ ಸೂಚಿಸುತ್ತದೆ?
4. ಪರಿಶುದ್ಧಾತ್ಮನು ತಂದೆಯೊಂದಿಗೂ ಕುಮಾರನೊಂದಿಗೂ ಹಂಚಿಕೊಳ್ಳುವ ಗುಣಲಕ್ಷಣಗಳು ಯಾವವು?

## ಪದ ಸಹಾಯಗಳು

ಗುಣಲಕ್ಷಣಗಳು - ಲಕ್ಷಣಗಳು ಇಲ್ಲವೇ ವಿಶೇಷ ಗುಣಲಕ್ಷಣಗಳು "ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿಗೆ ಮೊದಲುಗೊಂಡು ಆತನು ಮಾಡಿದ ಸೃಷ್ಟಿಸಿದವುಗಳ ಮೂಲಕ ಸ್ಪಷ್ಟವಾಗಿ ಕಂಡು ಬರುತ್ತವೆ - ಹೀಗಿರುವದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ" ಎಂದು ರೋಮಾಪುರ 1:20 ಹೇಳುತ್ತದೆ.

ಅದ್ಭುತಕರವಾದ ವರಗಳು - ದೇವರಿಂದ ಕೊಡಲ್ಪಡುವ ವಿಶೇಷ ಸಾಮರ್ಥ್ಯಗಳು - ಬಾಷೆಗಳನ್ನಾಡುವುದು, ಗುಣಪಡಿಸುವುದು, ಹಾಗೂ ಪ್ರವಾದಿಸುವ ವರಗಳು - ಹೊಸ ಒಡಂಬಡಿಕೆಯ ಬರಹವು ಪೂರ್ತಿಗೊಳ್ಳುವ ಮೊದಲು ಆದಿ ಸಭೆಗೆ ಕೊಡಲ್ಪಟ್ಟವು. ಇನ್ನು ಮುಂದೆ ಈ ವರಗಳ ಅಗತ್ಯತೆಯಿಲ್ಲ. ಹಾಗೂ ಅವು ಲಭ್ಯವಿರುವದಿಲ್ಲ (ಎಫೆಸ 4:5; ಮತ್ತಾಯ 28:18-20 ನೋಡಿರಿ).

## ಕ್ರೈಸ್ತರಲ್ಲಿ ಇಂದು ಪರಿಶುದ್ಧಾತ್ಮನ ಕಾರ್ಯ

1. ಪಾಪದ ಮತ್ತು ಮರಣದ ನಿಯಮದಿಂದ ನಮ್ಮನ್ನು ಬಿಡುಗಡೆ ಮಾಡುತ್ತಾನೆ (ರೋಮಾಪುರ 8:2-8).
2. ಆತನು ನಮ್ಮ ಪುನರುತ್ಥಾನವನ್ನು ತರುವನು (ರೋಮಾಪುರ 8:11).
3. ನಮ್ಮ ಪ್ರಾರ್ಥನೆಗಳಿಗೆ ಆತನು ಸಹಾಯ ಮಾಡುವನು (ರೋಮಾಪುರ 8:26; ಎಫೆಸ 6:18).
4. ನಮ್ಮ ಪರವಾಗಿ ಆತನು ಬೇಡಿಕೊಳ್ಳುತ್ತಾನೆ (ರೋಮಾಪುರ 8:26, 27).
5. ಆತನು ನಮ್ಮನ್ನು ನಡಿಸುವನು (ರೋಮಾಪುರ 8:14).
6. ವಿಮೋಚನೆಯ ದಿನದ ಒಪ್ಪಂದಕ್ಕಾಗಿ ಮುದ್ರೆ ಹಾಕುವನು (2 ಕೊರಿಂಥ 1:22; ಎಫೆಸ 1:13, 14; 4:30).
7. ಆತನಿಗೆ ನಮ್ಮೊಂದಿಗೆ ಅನ್ಯೋನ್ಯತೆಯಿರುವುದು (2 ಕೊರಿಂಥ 13:14).
8. ತಂದೆಯ ಬಳಿಗೆ ಆತನು ಮಾರ್ಗ ಮಾಡುವನು (ಎಫೆಸ 2:18).
9. ಆಂತರ್ಯದ ವ್ಯಕ್ತಿಯನ್ನು ಆತನು ಬಲಪಡಿಸುವನು (ಎಫೆಸ 3:16).
10. ಆತನು ಐಕ್ಯತೆಯನ್ನು ತರುವನು (ಎಫೆಸ 4:3).
11. ಆತನು ನಮ್ಮನ್ನು ಶುದ್ಧೀಕರಿಸುವನು (2 ಥೆಸಲೊನೀಕ 2:13).

---

ಟಿಪ್ಪಣಿ

[1]ಅದ್ಭುತಕರವಾದ ವರಗಳು ನಿಂತುಹೋಗಿವೆ. 1 ಕೆರಿಂಥ 13:8-13ರ ಸ್ಪಷ್ಟವಾದ ಹೇಳಿಕೆಯ ನಿಮಿತ್ತ ಇದರ ಬಗ್ಗೆ ನಮಗೆ ಭರವಸೆಯಿದೆ. 1 ಕೊರಿಂಥದ ಮೂರು ಅಧ್ಯಾಯಗಳಲ್ಲಿ ಅದ್ಭುತಕರವಾದ ವರಗಳ ಬಗ್ಗೆ ಪೌಲನ ಚರ್ಚೆಯನ್ನು ಕಂಡುಕೊಳ್ಳುತ್ತೇವೆ (12-14). ಈ ಚರ್ಚೆಯ ಮಧ್ಯದಲ್ಲಿ ಯಾವುದೇ ಅದ್ಭುತವಾದ ವರಕ್ಕಿಂತ ಪ್ರೀತಿಯು ಹೆಚ್ಚು ಮಹತ್ವದ್ದಾಗಿದೆಯೆಂದು ಹೇಳಿದ್ದಾನೆ (13:1-3). ಆಗ ಅವನು ಪ್ರೀತಿಯನ್ನು ವಿವರಿಸಿದ್ದಾನೆ (13:4-7). ಅಧ್ಯಾಯದ ಅಂತ್ಯಭಾಗದಲ್ಲಿ (13:8-13) ಪ್ರೀತಿಯು ಹೆಚ್ಚು ದೊಡ್ಡದಾದ ವರವಾಗಿ, ಆತ್ಮಿಕ ವರಗಳಿಗಿಂತ ಹೆಚ್ಚು ದೊಡ್ಡದಾಗಿರುವುದೆಂದು ಹೇಳಿದ್ದಾನೆ. "ಪ್ರವಾದನೆಗಳಾದರೂ ಇಲ್ಲವಾಗುವವು; ವಾಣಿಗಳೇ ನಿಂತು ಹೋಗುವವು: ವಿದ್ಯೆಯೋ ಇಲ್ಲದಂತಾಗುವುದು" ಎಂದು ಪೌಲನು ಹೇಳಿದನು. ಈ ವರಗಳು, "ಅಪೂರ್ಣವಾಗಿ ತಿಳಿದು ಕೊಳ್ಳುತ್ತೇವೆ; ಅಪೂರ್ಣವಾಗಿ ಪ್ರವಾದಿಸುತ್ತೇವೆ. ಆದರೆ ಸಂಪೂರ್ಣವಾದದ್ದು ಬಂದಾಗ ಅಪೂರ್ಣವಾದದ್ದು ಇಲ್ಲದಂತಾಗುವುದು" (9, 10 ವಚನಗಳು) ಎಂದು ಪೌಲನು ತಿಳಿಯಲು ಕಾರಣವಾದವು. "ಸಂಪೂರ್ಣವಾದದ್ದು ಬರುವಾಗ" ಈ ಅಪೂರ್ಣವಾದ ವರಗಳು ನಿಂತು ಹೋಗುವವು.

"ಪರಿಪೂರ್ಣವಾದದ್ದು" ಅಂದರೆ "ಸಂಪೂರ್ಣವಾದದ್ದು" ಎಂದರ್ಥವಾಗಿ "ಭಾಗವಾಗಿರುವಂಥದ್ದರ" ವಿರುದ್ಧವಾಗಿ ನಿಲ್ಲುತ್ತದೆ. "ಅಪೂರ್ಣವಾದದ್ದು" ದೇವರ ವಾಕ್ಯವು ಬಾಯ್ದೆರೆಯಾಗಿ ಪ್ರಕಟಿಸಿದ ಅದ್ಭುತಕರವಾದ ಜ್ಞಾನ ಮತ್ತು ಪ್ರವಾದನೆ ಆಗಿದೆ.

ಹೀಗಿರುವಾಗ ಪೂರ್ತಿಯಾದದ್ದು ಇಲ್ಲವೇ "ಪರಿಪೂರ್ಣವಾದದ್ದು" ಹೊಸ

ಒಡಂಬಡಿಕೆಯ ಲಿಖಿತ ದಾಖಲೆಯಲ್ಲಿ ಮನುಷ್ಯನಿಗೆ ಕೊಡಲ್ಪಟ್ಟ ಪೂರ್ವ ಪ್ರಕಟಣೆಯಾಗಿದೆ ಎಂದು ಅರ್ಥಮಾಡಿಕೊಳ್ಳುವುದು ಹೆಚ್ಚು ಸ್ವಾಭಾವಿಕವಾದದ್ದಾಗಿದೆ. ದೇವರ ಚಿತ್ತದ ಈ ಸಂಪೂರ್ಣ ಪ್ರಕಟನೆಯು, "ದೇವ ಜನರಿಗೆ ಶಾಶ್ವತವಾಗಿರುವಂತೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯು" (ಯೂದ 3) ಮೊದಲನೆಯ ಶತಮಾನದ ಅಂತ್ಯದ ಸುಮಾರಿಗೆ ಸಾಮಾನ್ಯರ ವಶಕ್ಕೆ ಬಂದಿತ್ತು. "ಪರಿಪೂರ್ಣವಾದದ್ದು" ಬಂದಾಗ "ಅಪೂರ್ಣವಾದದ್ದು" ತೆಗೆದು ಹಾಕಲ್ಪಟ್ಟಿತು. ಹೊಸ ಒಡಂಬಡಿಕೆಯು ದೇವರ ಪರಿಪೂರ್ಣ ಚಿತ್ತವನ್ನು ದಾಖಲೆ ಮಾಡುವದರಿಂದ (2 ತಿಮೊಥೆ 3:16, 17; 2 ಪೇತ್ರ 1:3) ಅದ್ಭುತಕರವಾದ ವರಗಳು ಇನ್ನೂ ಹೆಚ್ಚಿನ ಪ್ರಕಟನೆಗಳನ್ನು ಒದಗಿಸಲು ಅವಶ್ಯವಾಗಿರುವದಿಲ್ಲ.

# ದೇವರು ಮನುಷ್ಯನಾದನು

ಹೊಸ ಒಡಂಬಡಿಕೆಯ ಮೊದಲಿನ ನಾಲ್ಕು ಪುಸ್ತಕಗಳು (ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನ) ಅತೀ ಆಶ್ಚರ್ಯಕರವಾದ ಕಥೆಯನ್ನು ಹೇಳುತ್ತವೆ. ದೇವರು ಹೇಗೆ ಮನುಷ್ಯನಾದನು ಎಂಬುದನ್ನು ಅವು ಪ್ರಕಟಿಸುತ್ತವೆ. ಯೇಸುಕ್ರಿಸ್ತನು, ದೇವರ ಕುಮಾರನು ಮನುಷ್ಯನಂತೆ ಈ ಲೋಕವನ್ನು ಪ್ರವೇಶಿಸಿದನು, ನಮ್ಮ ಪಾಪಗಳಿಗಾಗಿ ಮರಣ ಹೊಂದಿದನು, ಮತ್ತು ಸ್ವೀಕರಿಸಿಕೊಳ್ಳುವವರಿಗಾಗಿ - ರಕ್ಷಣೆಯನ್ನೂ ಪಾಪಗಳ ಕ್ಷಮಾಪಣೆಯನ್ನೂ, ನಿತ್ಯ ಜೀವವನ್ನೂ ತಂದನು ಎಂದು ಅವು ಹೇಳುತ್ತವೆ.

ಹೊಸ ಒಡಂಬಡಿಕೆಯು ರಕ್ಷಣೆಯ ಅಧ್ಯಯನವಾಗಿರುವದರಿಂದ, ಅದರ ಆಂತರ್ಯವು ನಮ್ಮನ್ನು ರಕ್ಷಿಸುವದಕ್ಕಾಗಿ ದೈವಿಕ ದೇವರ ಕುಮಾರನು ನಮ್ಮಲ್ಲಿ ಒಬ್ಬನಾದನು ಎಂಬುದಾಗಿರುವದರಿಂದ, ಅದು ಬಹಳವಾಗಿ ಇತಿಹಾಸದ ಪುಸ್ತಕವಾಗಿರುವದಿಲ್ಲ. ಆದದರಿಂದ ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನನ ಸುವಾರ್ತೆಗಳು ಕರ್ತನ ಜೀವನದ ಕೇವಲ ಅಧ್ಯಯನಗಳಾಗಿರುವದಿಲ್ಲ. ಅವು ಹೆಚ್ಚಾಗಿ ಮಿಶನರಿ ಸಂದೇಶಗಳಂತಿವೆ. ಅವು "ಆಯ್ದುಕೊಂಡ ಇತಿಹಾಸವನ್ನು" ನಮಗೆ ಕೊಡುತ್ತವೆ: ಮನುಷ್ಯನಿಗೆ ರಕ್ಷಣೆಯನ್ನು ತರುವದಕ್ಕೆ ಸಂಬಂಧಿಸಿದ ಪ್ರಮುಖ ಘಟನೆಗಳನ್ನು ನಮಗೆ ಹೇಳುತ್ತವೆ. "ಇದಲ್ಲದೆ ಯೇಸು ಮಾಡಿದ್ದು ಇನ್ನೂ ಬಹಳವಿದೆ; ಅದನ್ನೆಲ್ಲಾ ಒಂದೊಂದಾಗಿ ಬರೆಯುವದಾದರೆ ಬರೆಯ ಬೇಕಾದ ಪುಸ್ತಕಗಳನ್ನು ಲೋಕವೇ ಹಿಡಿಸದೇ ಹೋದೀತೆಂದು ನಾನು ನೆನಸುತ್ತೇನೆ" ಎಂದು ಯೋಹಾನ 21:25 ಹೇಳುತ್ತದೆ.

ಯೇಸುವು ನಮಗೆ ರಕ್ಷಣೆಯನ್ನು ಒದಗಿಸುವದನ್ನು ಕುರಿತು ಹೊಸ ಒಡಂಬಡಿಕೆಯಲ್ಲಿ ನಮಗೆ ಹೇಳಲ್ಪಟ್ಟ ಕೆಲವು ಪ್ರಮುಖ ಘಟನೆಗಳು ಯಾವವು? ಯೇಸು ಕ್ರಿಸ್ತನನ್ನು ಕುರಿತು ಸತ್ಯವು ಯಾವುದು?

## ಯೇಸುವು ದೇವರಾಗಿದ್ದನು/ದೇವರಾಗಿರುವನು

ಯೇಸುವಿನ ಬಗ್ಗೆ ನಾವು ಸ್ವೀಕರಿಸತಕ್ಕ ಪ್ರಥಮ ಸತ್ಯವು ಆತನು ದೇವರಾಗಿದ್ದನು ಹಾಗೂ ದೇವರಾಗಿರುವನು ಎಂಬುದು.

ಆತನ ಜನನವು ಆತನ ಪ್ರಾರಂಭವೋ? ಇಲ್ಲ. ಬೇತ್ಲೆಹೇಮಿನಲ್ಲಿ ನಮ್ಮ ಕರ್ತನ ಜನನವು ಆತನ ಅಸ್ತಿತ್ವದ ಪ್ರಾರಂಭವಾಗಿರುವದಿಲ್ಲ. ಆತನ ಜನನವು ಕೇವಲ ಆತನು ಪ್ರಾಕೃತಿಕ ದೇಹ ತೆಗೆದುಕೊಂಡು ಮಾನವನು ಆದದ್ದು ಆಗಿದೆ.

"ದೇವರು" ಎಂಬುದು ಒಂದು ರೀತಿಯಲ್ಲಿ ಕುಟುಂಬದ ಹೆಸರಿನಂತಿದೆ. ನಿಮ್ಮ ಕುಟುಂಬದ ಹೆಸರು ನಿಮ್ಮ ಕುಟುಂಬದ ಇತರ ಸದಸ್ಯರೊಂದಿಗೆ ನಿಮ್ಮನ್ನು ಗುರುತಿಸುವದಕ್ಕಾಗಿದೆ. ಕುಟುಂಬದ ವೈಯಕ್ತಿಕ ಸದಸ್ಯರನ್ನು ಕುಟುಂಬದ ಒಂದು ಘಟಕದಲ್ಲಿ ಕೂಡಿಸುವ ಸಂಕೋಲೆಯಾಗಿದೆ. ಅದೇ ರೀತಿಯಲ್ಲಿ "ದೇವರು" ಎಂಬುದು ಕುಟುಂಬದ ಹೆಸರಾಗಿದೆ. ಪರಿಶುದ್ಧ ಬರಹಗಳಲ್ಲಿ ತಂದೆಯಾದ ದೇವರು, ಕುಮಾರನಾದ ದೇವರು, ಪರಿಶುದ್ಧಾತ್ಮನಾದ ದೇವರು ಎಂಬುದನ್ನು ನೋಡುತ್ತೇವೆ. ಈ ದೈವತ್ವದ ಎರಡನೆಯ ಸದಸ್ಯನು, ಯೇಸುವು, ನಮಗಾಗಿ ಮನುಷ್ಯನಾದನು.

ಯೇಸುವು ನಿತ್ಯನಾದ ದೇವರಾಗಿದ್ದಾನೆ ಎಂದು ಸ್ಪಷ್ಟವಾಗಿ ಘೋಷಿಸುವ ಒಂದು ವಾಕ್ಯವು ಯೋಹಾನ 1:1-5.[1] ಯೇಸುವು ದೇವರಾಗಿದ್ದಾನೆ ಹಾಗೂ ಯಾವಾಗಲೂ ದೇವರಾಗಿರುವನು ಎಂದು ಯೋಹಾನನು ಹೇಳಿದನು.

> ಆದಿಯಲ್ಲಿ ವಾಕ್ಯವಿತ್ತು;[2] ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು. ಆ ವಾಕ್ಯವೆಂಬವನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು. ಆತನ ಮೂಲಕವಾಗಿ ಸಮಸ್ತವು ಉಂಟಾಯಿತು; ಉಂಟಾದದ್ದರಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ. ಆತನಲ್ಲಿ ಜೀವವಿತ್ತು, ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು. ಆ ಬೆಳಕು ಕತ್ತಲಲ್ಲಿ ಪ್ರಕಾಶಿಸುತ್ತದೆ; ಕತ್ತಲು ಅದನ್ನು ಮುಸುಕಲಿಲ್ಲ.

ಈ ವಾಕ್ಯದಿಂದ ಹೊರಬರುವ ನಾಲ್ಕು ದೊಡ್ಡ ಸತ್ಯಗಳ ಬಗ್ಗೆ ನಾವು ಯೋಚಿಸುವ ಅಗತ್ಯತೆಯಿದೆ:

(1) ಯೇಸುವು ಸೃಷ್ಟಿಯಲ್ಲ ಎಂದು ನಾವು ನೋಡುವೆವು. ಮೊದಲಿನ ಅಸ್ತಿತ್ವವಿಲ್ಲದೆ ಯೇಸುವು ಮನುಷ್ಯನಾಗುವದು ಹೇಗೆ? ಬೇರೆ ಯಾವುದೇ ವ್ಯಕ್ತಿಯನ್ನು ಕುರಿತು ಜನನ ಮತ್ತು ಪ್ರಾರಂಭದ ಮಧ್ಯದಲ್ಲಿ ಭಿನ್ನತೆಯನ್ನು ನೋಡಲಾರವು ಅಥವಾ ಅವನನ್ನು ಗರ್ಭದಲ್ಲಿ ಧರಿಸಿದಾಗ ಅವನ ಜೀವನದ ಪ್ರಾರಂಭವಾಗಲಿಲ್ಲ ಎಂದು ಹೇಳಲಾರೆವು, ಆದರೆ ಯೇಸುವನ್ನು ಕುರಿತು ನಾವು

ಇದನ್ನು ಹೇಳಬಹುದು. ಆತನು ತನ್ನ ಜನನದಲ್ಲಿ ಅಥವಾ ಆತನು ಸತ್ತವರೊಳಗಿಂದ ಎದ್ದು ಬಂದಾಗ ಆತನು ದೇವರ ಕುಮಾರನಾಗಲಿಲ್ಲ. ಆತನು ದೇವರಾಗಿದ್ದಾನೆ, ಆತ್ಯುನ್ನತನು ಹಾಗೂ ಆರಂಭವಿಲ್ಲದವನು. ಆತನು ಯಾವಾಗಲೂ ಇದ್ದವನು ಮತ್ತು ಯಾವಾಗಲೂ ಇರುವಾತನು.

ಜಗತ್ತು ಅಸ್ತಿತ್ವದಲ್ಲಿ ಬರುವದಕ್ಕಿಂತ ಮೊದಲು ತಂದೆಯೊಂದಿಗೆ ತನಗೆ ಮಹಿಮೆಯು ಇತ್ತೆಂದು ಆತನು ಹೇಳಿದ್ದಾನೆ (ಯೋಹಾನ 17:5). "... ನನ್ನನ್ನು ತಂದೆಯ ಬಳಿಯಿಂದ ಹೊರಟುಬಂದವನೆಂದು ... ತಂದೆಯ ಬಳಿಯಿಂದ ಹೊರಟು ಲೋಕಕ್ಕೆ ಬಂದಿದ್ದೇನೆ ..." (ಯೋಹಾನ 16:27, 28) ಎಂದು ಆತನು ಹೇಳಿದ್ದಾನೆ. "... ಲೋಕವು ಹುಟ್ಟುವದಕ್ಕಿಂತ ಮುಂಚೆಯೇ ನೀನು ನನ್ನನ್ನು ಪ್ರೀತಿಸಿದ್ದೀ ..." (ಯೋಹಾನ 17:24ಬಿ) ಎಂದೂ ಆತನು ಹೇಳಿದನು. ಇತರ ಪ್ರತಿಯೊಂದು ವ್ಯಕ್ತಿಯೂ ದೈಹಿಕ ಜನನದ ಮುಖಾಂತರ ಜೀವನವನ್ನು ಪ್ರವೇಶಿಸಿದ್ದಾನೆ. ಆದರೆ ಯೇಸುವು ದಿನಗಳ ಪ್ರಾರಂಭವನ್ನಾಗಲೀ ಇಲ್ಲವೇ ಜೀವದ ಅಂತ್ಯವನ್ನಾಗಲೀ ತಿಳಿದಿರುವದಿಲ್ಲ (ಇಬ್ರಿಯ 7:3). ಆತನು ಸಂಪೂರ್ಣವಾಗಿ ನಿತ್ಯನೂ ಸಂಪೂರ್ಣವಾಗಿ ದೇವರೂ ಆಗಿದ್ದಾನೆ.

ಆತನು ಜನನ ಹೊಂದುವದನ್ನು ಮತ್ತು ಜೀವನದ ಅನುಭವದಲ್ಲಿ ಪ್ರವೇಶಿಸುವದನ್ನು ಆಯ್ದುಕೊಂಡನು. ಆತನು ತನ್ನ ಭೂಲೋಕದ ಜೀವನದಲ್ಲಿ ತನ್ನ ದೈವತ್ವವನ್ನು ಬಿಟ್ಟುಬಿಡಲಿಲ್ಲ. ಆದರೆ ದೇವರಂತೆ ಇರುವ ತನ್ನ ಗುಣಲಕ್ಷಣಗಳ ಉಪಯೋಗವನ್ನು ಸ್ವ ಇಷ್ಟದಿಂದ ಬದಿಗಿಟ್ಟನು. ಯಾವುದೇ ಸಮಯದಲ್ಲಿ, ತನ್ನ ಯಾವುದೇ ದೈವಿಕ ಶಕ್ತಿಗಳನ್ನು ಉಪಯೋಗಿಸಬಹುದಿತ್ತು ಅಥವಾ ತನಗಿದ್ದ ದೈವಿಕ ಆಯ್ಕೆಗಳನ್ನು ಉಪಯೋಗಿಸಬಹುದಿತ್ತು (ಫಿಲಿಪ್ಪಿ 2:6).

(2) ಯೇಸುವಿನ ಮುಖಾಂತರವಾಗಿ ದೇವರು ಜಗತ್ತನ್ನು ಸೃಷ್ಟಿಸಿದನೆಂದು ನಾವು ನೋಡುತ್ತೇವೆ. ಆತನು ವಿಶ್ವದ ನಿಜವಾದ ಕರ್ತನಾಗಿರುವನು. "ನಮಗಾದರೂ ಒಬ್ಬನೇ ದೇವರಾಗಿದ್ದಾನೆ, ಆತನು ತಂದೆಯೆಂಬಾತನೇ; ಆತನು ಸಮಸ್ತಕ್ಕೂ ಮೂಲಕಾರಣನು; ನಾವು ಆತನಿಗಾಗಿ ಉಂಟಾದೆವು. ಮತ್ತು ನಮಗೆ ಒಬ್ಬನೇ ಕರ್ತ; ಆತನು ಯೇಸು ಕ್ರಿಸ್ತನೇ; ಆತನ ಮುಖಾಂತರ ಸಮಸ್ತವೂ ಉಂಟಾಯಿತು, ನಾವು ಆತನ ಮುಖಾಂತರ ಉಂಟಾದೆವು" ಎಂದು 1 ಕೊರಿಂಥ 8:6 ಹೇಳುತ್ತದೆ. "ಭೂಪರಲೋಕಗಳಲ್ಲಿರುವ ದೃಶ್ಯಾದೃಶ್ಯವಾದವುಗಳೆಲ್ಲವೂ ಸಿಂಹಾಸನಗಳಾಗಲಿ, ಪ್ರಭುತ್ವಗಳಾಗಲಿ, ದೊರೆತನಗಳಾಗಲಿ, ಅಧಿಕಾರಗಳಾಗಲಿ ಆತನಲ್ಲಿ ಸೃಷ್ಟಿಸಲ್ಪಟ್ಟವು. ಸರ್ವವೂ ಆತನ ಮುಖಾಂತರವಾಗಿಯೂ ಆತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟಿತು" ಎಂದು ಕೊಲೊಸ್ಸೆ 1:16 ಹೇಳುತ್ತದೆ.

(3) ಜೀವಿಸುವವರಿಗೆ ಯೇಸುವು ಜೀವಕೊಡುತ್ತಾನೆಂಬುದೂ ಆತನು

ಸತ್ತವರನ್ನು ಪುನರುಜ್ಜೀವನ ಗೊಳಿಸುವನೆಂದೂ ನೋಡುತ್ತೇವೆ (ಯೋಹಾನ 11:25 ನೋಡಿರಿ). ಆತನು ಜೀವದ ಕರ್ತೃವೂ ಆಗಿದ್ದಾನೆ.

(4) ಆತನು ಜೀವದ ಮತ್ತು ಮರಣದ ಕರ್ತನೆಂದು ನಾವು ತೀರ್ಮಾನಿಸತಕ್ಕದ್ದು. ಆತನು ಎಲ್ಲವನ್ನು ಮಾಡಿದನು. ಜೀವಕೊಡುತ್ತ ಮತ್ತು ಮರಣದ ಮೇಲೆ ಆಳಿಕೆ ಮಾಡುತ್ತ ಎಲ್ಲವುಗಳ ಜೋಪಾನ ಮಾಡುವನು.

ಕರ್ತನ ಭೂಲೋಕದ ಜೀವನದ ಬಗ್ಗೆ ನಾವು ಪ್ರತಿಯೊಂದನ್ನೂ ಅರ್ಥಮಾಡಿ ಕೊಳ್ಳಬಹುದೋ? ನಿಶ್ಚಯವಾಗಿಯೂ, ನಾವು ಹಾಗೆ ಮಾಡಲಾರೆವು. ಮನುಷ್ಯನು ದೇವರನ್ನು ಸಂಪೂರ್ಣವಾಗಿ ಹೇಗೆ ಅರ್ಥಮಾಡಿಕೊಳ್ಳಬಹುದು? ನಂಬುವದಕ್ಕಾಗಿ ಒಬ್ಬನು ಸತ್ಯವನ್ನು ಅರ್ಥಮಾಡಿ ಕೊಳ್ಳಬೇಕಾಗಿಲ್ಲ. ದೇವರು ಭೂಲೋಕವನ್ನು ಹೇಗೆ ಸೃಷ್ಟಿಸಿದನೆಂಬುದನ್ನು ನಾನು ಅರ್ಥಮಾಡಿಕೊಳ್ಳಲಾರೆನು. ಆದರೆ ಆತನು ಸೃಷ್ಟಿಸಿದ್ದಾನೆಂದು ನಾನು ನಂಬುತ್ತೇನೆ. ಯೇಸುವು ಸತ್ತವರೊಳಗಿಂದ ಹೇಗೆ ಎದ್ದು ಬಂದನು ಎಂಬುದನ್ನು ನಾನು ಅರ್ಥಮಾಡಿಕೊಳ್ಳಲಾರೆನು, ಆದರೆ ಆತನು ಎದ್ದು ಬಂದನು ಎಂದು ನಾನು ನಂಬುತ್ತೇನೆ. ಅದೇ ರೀತಿಯಲ್ಲಿ, ದೇವರು, ಯೇಸುಕ್ರಿಸ್ತನು ಮನುಷ್ಯನಾದನೆಂದು ನಾನು ಅರ್ಥಮಾಡಿಕೊಳ್ಳಲಾರೆನು, ಆದರೆ ಆತನು ಹಾಗೆ ಮಾಡಿದನೆಂದು ನಾನು ನಂಬುತ್ತೇನೆ.

## ಯೇಸು, ದೇವರ ಕುಮಾರನು, ಮನುಷ್ಯನಾದನು

ಯೇಸುವಿನ ಬಗ್ಗೆ ನಾವು ಯೋಚಿಸಬೇಕಾದ ಮುಂದಿನ ಸತ್ಯವು ಆತನು ಪೂರ್ಣವಾಗಿ ಮನುಷ್ಯನಾದದ್ದು. ಈ ಸತ್ಯವು ನಮ್ಮ ಮನಸ್ಸಿನೊಳಗೆ ಪ್ರವೇಶಿಸುವಂತೆ ಬಿಡೋಣ: ಯೇಸು, ದೇವರ ಕುಮಾರನು, ದೇಹಧಾರಿಯಾದನು. ಯೇಸುವು ದೇವರ ಕುಮಾರನಾಗಿದ್ದನು, ಆಗಿರುವನು ಮತ್ತು ಯಾವಾಗಲೂ ಆಗಿರುವನು; ಆದರೆ ಆತನು ಜನನದಲ್ಲಿ ಮನುಷ್ಯ ಕುಮಾರನಾದನು.

ಭೂಲೋಕಕ್ಕೆ ಬರಲು ಯೇಸು ಪರಲೋಕವನ್ನು ಹೇಗೆ ಬಿಟ್ಟನೆಂಬುದನ್ನು ಪೌಲನು ವಿವರಿಸುತ್ತಾನೆ (ಫಿಲಿಪ್ಪಿ 2:5-8). ನಮ್ಮಲ್ಲಿ ಒಬ್ಬನಾಗಲು ಯೇಸುವು ಪರಲೋಕದಿಂದ ಇಳಿದು ಹೇಗೆ ಬಂದನೆಂಬುದನ್ನು ಗಮನಿಸೋಣ.

ಮೊದಲನೆಯದು, ಆತನು ಪರಲೋಕವನ್ನು ಬಿಟ್ಟನು. ತನ್ನ ತಂದೆಯ ಸನ್ನಿಧಾನದ ಪ್ರೀತಿಯ ಐಶ್ವರ್ಯವನ್ನು ಬಿಟ್ಟನು. ಯಾವ ತಿರಸ್ಕಾರವೂ ಇಲ್ಲದ ಸ್ಥಳವನ್ನು - ಮತ್ಸರ, ಹೊಟ್ಟೇಕಿಚ್ಚು ಹಾಗೂ ಸಂಶಯವಿಲ್ಲದ ಸ್ಥಳವನ್ನು ಬಿಟ್ಟು ಹೊರಟು ಬಂದನು. ಪರಲೋಕದ ಸುಂದರವಾದ ಸಾಮರಸ್ಯವನ್ನು - ವಿರೋಧ, ಹೋರಾಟ ಅಥವಾ ವಾದವಿವಾದಗಳು ಇಲ್ಲದ ಸ್ಥಳವನ್ನು, ತಪ್ಪಭಿಪ್ರಾಯಗಳಿಲ್ಲದ, ಇಲ್ಲವೇ ಗಲಿಬಿಲಿಯಿಲ್ಲದ ಸ್ಥಳವನ್ನು ಬಿಟ್ಟು ಬಂದನು,

ಪರಲೋಕದ ವಿಪುಲವಾದ ಮೂಲಗಳನ್ನು ಬಿಟ್ಟು ಬಂದನು. ನಿಧಿಗಳ ಕೊರತೆಯಿಲ್ಲದ, ಬಡತನವಿಲ್ಲದ, ಯಾರಿಗೂ ಹಸಿವೆ ಬಾಯಾರಿಕೆಗಳಿಲ್ಲದ ಸ್ಥಳವನ್ನು ಬಿಟ್ಟುಬರುವದನ್ನು ಆತನು ಆಯ್ಕೆ ಮಾಡಿಕೊಂಡನು.

ಎರಡನೆಯದು, ಆತನು ಮನುಷ್ಯನಾದನು. ಆತನ ಜನನವು ಆತನ ಮೂಲದ ಗುರುತಾಗಿರುವದಿಲ್ಲ. ಆದರೆ ಸಮಯದ ರಂಗದ ಮೇಲೆ ಮಾನವನಿಗೆ ಆತನು ಕಾಣಿಸಿಕೊಳ್ಳುವುದಾಗಿದೆ. ಯೇಸುವು ನಿತ್ಯತ್ವದ ಮತ್ತು ಸಮಯದ ಸಂದರ್ಶನದ ಸ್ಥಳವಾಗಿದ್ದನು. ದೈವತ್ವದ ಹಾಗೂ ಮಾನವತ್ವದ ಪರಿಪೂರ್ಣ ಸಮ್ಮಿಲನವಾಗಿದ್ದನು. ಪರಲೋಕದ ಮತ್ತು ಭೂಲೋಕದ ಕೇಂದ್ರವಾಗಿದ್ದನು. ಜನಿಸುವದಕ್ಕಷ್ಟೇ ಅಲ್ಲ, ಆದರೆ ತಾನು ಮರಣ ಹೊಂದಲಿಕ್ಕಾಗುವಂತೆಯೂ ಪೂರ್ಣ ಮಾನವನಾಗಲು ಒಪ್ಪಿಕೊಂಡನು. ದೇವರಂತೆ, ಆತನು ಮನುಷ್ಯನಾದನು. ಆತನು ದೇವರ ಕುಮಾರನಾಗಿದ್ದನು, ಆದರೆ ಆತನು ಮನುಷ್ಯ ಕುಮಾರನಾದನು.[3]

ಇದು ಕ್ರೈಸ್ತತ್ವದ ಮಹಾ ಸತ್ಯವಾಗಿದೆ. ನೀವು ಈ ಸತ್ಯವನ್ನು ನಂಬಿದರೆ, ಕ್ರೈಸ್ತತ್ವದೊಳಗೆ ಪ್ರತಿಯೊಂದು ಸತ್ಯವನ್ನು ನೀವು ನಂಬುವಿರಿ. ಹೌದು, ಕ್ರೈಸ್ತತ್ವದ ನಂಬಲಾಗದ ಬಲವಾದ ಸತ್ಯವು ನಜರೇತಿನ ಯೇಸು ಮನುಷ್ಯನಾಗಿ ಮಾಡಲ್ಪಟ್ಟ ದೇವರು - ದೈವತ್ವವನ್ನು ಕಳೆದುಕೊಳ್ಳದೇ ಆತನು ಮಾನವತೆಯನ್ನು ತೆಗೆದು ಕೊಂಡದ್ದಾಗಿದೆ. ಹೀಗೆ ಆತನು ಮಾನವನಾಗಿದ್ದಂತೆ ಸತ್ಯವಾಗಿಯೂ, ಸಂಪೂರ್ಣ ವಾಗಿಯೂ ದೇವರಾಗಿದ್ದನು ಎಂಬುದು. ಕ್ರೈಸ್ತತ್ವದ ಈ ಭಾಗವನ್ನು ನಂಬುವವನಿಗೆ ಅದರ ಉಳಿದ ಭಾಗವನ್ನು ನಂಬುವದರಲ್ಲಿ ತೊಂದರೆಯಿರುವದಿಲ್ಲ.

"ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು" (ಯೋಹಾನ 1:14ಎ) ಎಂದು ಯೋಹಾನನು ಬರೆದಿದ್ದಾನೆ. ಇನ್ನೊಂದು ಮಾತಿನಲ್ಲಿ, ದೇವರು ಮನುಷ್ಯನಾದನು; ದೈವಿಕ ಕುಮಾರನು ಯೆಹೂದ್ಯನಾದನು; ಸರ್ವಶಕ್ತನು ಸಹಾಯ ಹೀನನಾದನು; ಎಲ್ಲಾ ಶಿಶುಗಳಂತೆಯೇ ಜನಿಸಿ ಭೂಲೋಕದೊಳಗೆ ಕಾಣಿಸಿಕೊಂಡನು: ಆತನಿಗೆ ಊಟ ಮಾಡಿಸಬೇಕಾಗಿತ್ತು, ಬಟ್ಟೆ ಬದಲಾಯಿಸ ಬೇಕಾಗಿತ್ತು; ಇತರ ಮಕ್ಕಳಂತೆ ಮಾತಾಡಲು ಆತನಿಗೆ ಕಲಿಸಬೇಕಾಗಿತ್ತು. ಇದು ಕಲ್ಪನೆಯಾಗಲೀ, ಮೋಸವಾಗಲೀ ಆಗಿರಲಿಲ್ಲ. ದೇವರ ಕುಮಾರನ ಬಾಲ್ಯವು ನಿಜವಾದದ್ದಾಗಿತ್ತು. ಅದರ ಬಗ್ಗೆ ನೀವು ಹೆಚ್ಚು ಹೆಚ್ಚು ಯೋಚಿಸಿದಂತೆ ಅದು ನಿಮಗೆ ಹೆಚ್ಚು ಹೆಚ್ಚು ಆಶ್ಚರ್ಯಕರವಾದದ್ದಾಗಿ ಕಾಣುವುದು. ಮಾನವನಾಗಿ ಬಂದದ್ದರ ಮೇಲೆ ಜನರ ಅವಿಶ್ವಾಸದಿಂದ - ಅದರಲ್ಲಿ ಸಾಕಷ್ಟು ನಂಬಿಕೆಯಿಲ್ಲದ್ದರಿಂದ - ಸುವಾರ್ತೆಗಳಲ್ಲಿಯ ಇತರ ಸತ್ಯಗಳ ಮೇಲೆ ಅವರಿಗೆ ತೊಂದರೆಗಳಿದ್ದವು. ಮಾನವನಾಗಿ ಬಂದದ್ದರ ನಿಜತ್ವವು ಒಮ್ಮೆ ಅರ್ಥಮಾಡಿಕೊಳ್ಳಲ್ಪಟ್ಟರೆ, ಉಳಿದ ತೊಂದರೆಗಳು ದಾಟಿಹೋಗುವವು.[4]

ಮೂರನೆಯದು, ಆತನು ಜನರ ಸೇವಕನಾದನು. ಆತನು ಅರಸನಂತೆ ಒಂದು ಅರಮನೆಯಲ್ಲಿ ವಾಸಿಸಲಿಲ್ಲ, ಆತನು ಬಡವರಲ್ಲಿ ಸೇವಕನಂತೆ ಇದ್ದನು. ಆತನು ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ ಆದರೆ ಸೇವೆ ಮಾಡುವದಕ್ಕೆ ಬಂದನು. ದೇವರು ಯಾವ ರೀತಿಯಲ್ಲಿದ್ದಾನೆ ಮತ್ತು ನಿಜವಾದ ಮಾನವತ್ವವು ಹೇಗಿರುವುದೆಂದು ತೋರಿಸಲು ಆತನು ಬಂದನು (ಮಾರ್ಕ 10:45).

ನಾಲ್ಕನೆಯದು, ಆತನು ಮರಣಕ್ಕೆ ಒಪ್ಪಿಸಿಕೊಟ್ಟನು. ಮರಣಕ್ಕೆ ಒಪ್ಪಿಸಿಕೊಳ್ಳದೆ ಆತನು ಸಂಪೂರ್ಣವಾದ ಮಾನವನಾಗಿರುತ್ತಿರಲಿಲ್ಲ. ಆತನು ಮನುಷ್ಯರೊಂದಿಗೆ ಸಂಪೂರ್ಣವಾಗಿ ಒಂದಾಗಿ ಮಾಡಿಕೊಂಡು ಶಿಲುಬೆಯ ಮೇಲಿನ ಮರಣದಂಥ ಅತೀ ಕೆಟ್ಟದ್ದಾದ ಮರಣಕ್ಕೆ ಆತನು ಒಪ್ಪಿಸಿಕೊಂಡನು. ನಾನು ನನ್ನ ನಿದ್ರೆಯಲ್ಲಿ ಸಾಯಲು ಬಯಸುತ್ತೇನೆ. ನಿಮ್ಮ ವಿಷಯವೇನು? ಈ ಅರ್ಥದಲ್ಲಿ ನಾವು ಯೇಸುವಿನಂತಿರುವದಿಲ್ಲ, ಆತನು ಹಿಂಸೆಯ, ನೋವು ತುಂಬಿದ ಮರಣಕ್ಕೆ ಸಂತೋಷದಿಂದ, ಸ್ವೇಚ್ಛೆಯಿಂದ, ಮತ್ತು ಬಲಾತ್ಕಾರವಿಲ್ಲದೇ ಸಮರ್ಪಿಸಿಕೊಂಡನು.

## ದೇವ-ಮನುಷ್ಯನಾಗಿ ಆತನು ನಮ್ಮ ಮಧ್ಯದಲ್ಲಿ ವಾಸ ಮಾಡಿದನು

ಯೇಸುವನ್ನು ಕುರಿತು ನಾವು ಯೋಚಿಸಬೇಕಾದ ಇನ್ನೊಂದು ಸತ್ಯವು ದೇವರು-ಮನುಷ್ಯನು ಆಗಿ ಆತನು ನಮ್ಮ ಮಧ್ಯದಲ್ಲಿ ವಾಸಿಸಿದ್ದು.

ದೇವರು-ಮನುಷ್ಯನು ಆಗಿರುವಾತನ ಭೂಲೋಕದ ಜೀವಿತವನ್ನು ಬಹಳ ಅಸಾಮಾನ್ಯವಾದದ್ದೆಂದು ನಾವು ನಿರೀಕ್ಷಿಸುತ್ತೇವೆ. ದೇವರು-ಮನುಷ್ಯನು ಇತರ ಎಲ್ಲಾ ಜನರಿಗಿಂತ-ಭಿನ್ನವಾಗಿರುವನು. ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನರು ಆತನ ಭೂಲೋಕದ ಜೀವಿತವನ್ನು ಎಂದಾದರೂ ಜೀವಿಸಿದ ಇತರ ಯಾವುದೇ ಮಾನವನಿಗಿಂತ ಹೆಚ್ಚು ಶ್ರೇಷ್ಠವಾದದ್ದನ್ನಾಗಿ ಹೇಳುವುದರ ಬಗ್ಗೆ ನಾವು ಆಶ್ಚರ್ಯಪಡಬಾರದು.

ದೇವರು ಮನುಷ್ಯನಾದರೆ, ವಿಶೇಷವಾದ ಜನನದ ಅಗತ್ಯತೆಯಿರುವುದು. ಆತನಿಗೆ ಅಂಥ ಜನನವಿತ್ತು: ಮತ್ತಾಯ ಮತ್ತು ಲೂಕನ ಸುವಾರ್ತೆಗಳು ಆತನು ಮರಿಯಳೆಂಬ ಕನ್ನಿಕೆಯಿಂದ ಜನಿಸಿದ್ದನ್ನು ಹೇಳುತ್ತವೆ. ಆತನಿಗೆ ಭೂಲೋಕದ ತಾಯಿ ಇದ್ದಳು ಆದರೆ ಭೂಲೋಕದ ತಂದೆಯಿರಲಿಲ್ಲ; ಯಾಕಂದರೆ ಪರಿಶುದ್ಧಾತ್ಮನಿಂದ ಮರಿಯಳು ಗರ್ಭಧರಿಸಿದ್ದಳು (ಮತ್ತಾಯ 1:20).

ಮರ್ತ್ಯ-ಮಾನವನಿಂದ ಬಾರದೇ ಇದ್ದ ದೈವಿಕ ಬೋಧನೆಗಳಿಂದ ಗುರುತಿಸಲ್ಪಟ್ಟ ಆತನ ಜೀವಿತವು ಪರಿಪೂರ್ಣವಾದದ್ದಾಗಿ ಇರುವದನ್ನು ನಾವು

ನಿರೀಕ್ಷಿಸುತ್ತೇವೆ. ಆತನು ಮಾತಾಡಿದಂತೆ ಯಾರೂ ಮಾತಾಡಿಲ್ಲವೆಂದು ನಾವು ಕೇಳುವದರಲ್ಲಿ ಆಶ್ಚರ್ಯವಿಲ್ಲ (ಯೋಹಾನ 7:46). ಆತನನ್ನು ಸಂದರ್ಶಿಸಿದ್ದ ಮತ್ತು ಆತನು ಬೋಧಿಸಿದ್ದನ್ನು ಕೇಳಿದ ಜನರು ಆತನ ಜೀವನ ಮತ್ತು ಸಂದೇಶ ಗಳಿಗೆ ಆಶ್ಚರ್ಯಪಟ್ಟರು.

ದೇಹಧಾರಿಯಾಗಿದ್ದ ದೇವರು ಆತನಾಗಿದ್ದರೆ ಆತನು ಅದ್ಭುತಕಾರ್ಯಗಳನ್ನೂ ಸೂಚಕ ಕಾರ್ಯಗಳನ್ನೂ ಮಾಡುವದರಿಂದ ಮಾನವ ಸಾಮರ್ಥ್ಯವನ್ನು ದಾಟಿ ಆತನು ತನ್ನ ಶಕ್ತಿಯನ್ನು ಪ್ರದರ್ಶಿಸಿದ್ದು ನಮಗೆ ಯಾಕೆ ಆಶ್ಚರ್ಯವನ್ನುಂಟು ಮಾಡಬೇಕು? ನಿಸರ್ಗದ ನಿಯಮಗಳನ್ನು ದಾಟಿ, ಮಿಗಿಲಾದವುಗಳೆಂದು ಆತನು ವೈರಿಗಳೂ ತಿಳಿದುಕೊಂಡು ಸ್ಪಷ್ಟವಾದ, ಅದ್ಭುತ ಕಾರ್ಯಗಳನ್ನು ಆತನು ಮಾಡಿದನೆಂದು ನಮಗೆ ಹೇಳಲ್ಪಟ್ಟಿದೆ. ಆತನು ಸತ್ತವರನ್ನು ಎಬ್ಬಿಸಿದನು (ಯೋಹಾನ 11:43, 44), ಕುರುಡನನ್ನು ಗುಣಪಡಿಸಿದನು (ಮಾರ್ಕ 8), ರೊಟ್ಟಿಯನ್ನೂ ಮೀನುಗಳನ್ನೂ ಹೆಚ್ಚಾಗುವಂತೆ ಮಾಡಿದನು (ಯೋಹಾನ 6), ಆತನಿಗೆ ಅಂಥ ಶಕ್ತಿಯಿರುವುದು ನಮಗೆ ವಿಚಿತ್ರವಾಗಿ ಕಂಡು ಬರಬಾರದು. ಎಲ್ಲದಕ್ಕಿಂತ ಹೆಚ್ಚಾಗಿ ಆತನು ಸಮಸ್ತವನ್ನು ಸೃಷ್ಟಿಸಿದನು ಮತ್ತು ಎಲ್ಲವುಗಳನ್ನೂ ಕಾಪಾಡುವನು.

ಜಗತ್ತಿನ ಚರಿತ್ರೆಯಲ್ಲಿ ಆತನ ಮರಣವು ಒಂದು ರೀತಿಯದ್ದಾಗಿರ ಬೇಕೆಂದು ನಾವು ನಿರೀಕ್ಷಿಸುವದಿಲ್ಲವೋ? ದೇವರು ಒಂದು ಶಿಲುಬೆಯ ಮೇಲೆ ಮರಣ ಹೊಂದುವುದು ಎಲ್ಲಾ ಸಮಯಗಳಲ್ಲಿ ಅತೀ ಆಶ್ಚರ್ಯಕರವಾದ ಘಟನೆಯಾಗಿರಬೇಕಾಗಿತ್ತು. ಅದು ಹ್ಯಾಗಿತ್ತೆಂದು ಸುವಾರ್ತೆಗಳು ತೋರಿ ಸುತ್ತವೆ. ಯೇಸುವಿನ ಮರಣದ ಸಮಯದಲ್ಲಿ ಆಕಾಶವು ಕತ್ತಲೆಗೊಂಡಿತು, ಭೂಕಂಪವಾಯಿತು, ದೇವಾಲಯದ ತೆರೆ ಹರಿದು ಹೋಯಿತು, ಸಮಾಧಿಗಳು ತೆರೆಯಲ್ಪಟ್ಟವು, ಅನೇಕ ದೇವಭಕ್ತರು ತಮ್ಮ ಸಮಾಧಿಗಳಿಂದ ಎದ್ದು ಬಂದು ಯೇಸುವಿನ ಪುನರುತ್ಥಾನದ ನಂತರ ಯೆರೂಸಲೇಮಿನಲ್ಲಿ ಕಂಡುಕೊಂಡರು (ಮತ್ತಾಯ 27:50-53). ದೇವರು ಮನುಷ್ಯನು ಮರಣ ಹೊಂದಿದಾಗ, ಒಂದು ವಿಶೇಷ ಘಟನೆ ನಡೆಯಿತು - ಈ ಘಟನೆಯು ಜಗತ್ತಿನ ಅಸ್ತಿವಾರದಿಂದಲೇ ಯೋಜಿಸಲ್ಪಟ್ಟದ್ದಾಗಿತ್ತು.

ದೇವರು-ಮನುಷ್ಯನು ಆದಾತನಿಗೆ ಮರಣದ ಮೇಲೆ ಬಲವಿರುವದನ್ನು ನಾವು ನಿರೀಕ್ಷಿಸುತ್ತೇವಲ್ಲವೇ? ಹೌದು, ಆತನು ಸತ್ತವರೊಳಗಿಂದ ಎದ್ದು ಬಂದನು. ಆತನ ಜೀವನದ ಬಗ್ಗೆ ನಮಗೆ ಹೇಳಲ್ಪಟ್ಟ ಅತೀ ಸ್ಪಷ್ಟವಾದ ಸತ್ಯಗಳಲ್ಲಿ ಈ ಸತ್ಯವು ಒಂದಾಗಿದೆ. ಎಲ್ಲಾ ನಾಲ್ಕು ಸುವಾರ್ತೆಗಳು ಆತನ ಪುನರುತ್ಥಾನವನ್ನು ವಿವರವಾಗಿ ವಿವರಿಸುತ್ತವೆ. ಆತನು ತನ್ನನ್ನೆ ನಮಗಾಗಿ ಸಮರ್ಪಿಸಿದನು. ಆದರೆ ಆತನು ನಿಜವಾಗಿಯೂ ದೈವಿಕನಾಗಿರುವನೆಂಬುದನ್ನು ನಾವು ತಿಳಿದುಕೊಳ್ಳುವಂತೆ

ಆತನು ಸತ್ತವರೊಳಗಿಂದ ಎದ್ದು ಬಂದನು.

## ಮುಕ್ತಾಯ

ಹಾಗಾದರೆ, ಇಲ್ಲಿ, ನಾವೆಂದೂ ಮರೆಯಬಾರದ ಮೂರು ಸತ್ಯಗಳು ಯೇಸುವಿನ ಬಗ್ಗೆ ಇರುತ್ತವೆ: ಆತನು ದೇವರಾಗಿದ್ದನು ಮತ್ತು ದೇವರಾಗಿರುವನು. ಆತನು ಮನುಷ್ಯನಾದನು ಮತ್ತು ನಮ್ಮ ಮಧ್ಯದಲ್ಲಿ ದೇವರು-ಮನುಷ್ಯನಾಗಿ ಜೀವಿಸಿದನು.

ಯೇಸುವಿನ ಬಗೆಗಿನ ಈ ಮೂರು ಸತ್ಯಗಳು ಎರಡು ವಿಧದಲ್ಲಿ ನಮ್ಮನ್ನು ಪ್ರೋತ್ಸಾಹಿಸಬಹುದು. ಮೊದಲನೆಯದು, ನಮ್ಮ ರಕ್ಷಕನು ಸಹಾಯವಿಲ್ಲದ ಮನುಷ್ಯನಾಗಿರುವದಿಲ್ಲ, ಆದರೆ ದೇವರಾಗಿರುವನು - ಸರ್ವಶಕ್ತನೂ, ನಿತ್ಯನೂ, ಸೃಷ್ಟಿಸುವಾತನೂ, ಸಂರಕ್ಷಿಸುವವನೂ ಆಗಿರುವ ದೇವರು ಆಗಿರುವನೆಂಬುದನ್ನು ನಮ್ಮ ಜ್ಞಾಪಕಕಕ್ಕೆ ತರುತ್ತದೆ.

ಎರಡನೆಯದು, ಯೇಸುವಿನ ಪೂರ್ವ - ಅಸ್ತಿತ್ವದಲ್ಲಿ ಎಲ್ಲಾ ಮಾನವ ಜನಾಂಗಕ್ಕಾಗಿ ಆತನಿಗಿರುವ ಪ್ರೀತಿಯ ಸತ್ಯವನ್ನು ನಾವು ನೋಡುತ್ತೇವೆ. ಭೂಲೋಕಕ್ಕೆ ಆತನು ಬರುವಂಥದ್ದು ಮತ್ತು ನಮ್ಮ ಪಾಪಗಳಿಗಾಗಿ ಆತನು ಸಾಯುವಂಥದ್ದು ರಕ್ಷಣೆಗಾಗಿ ನಮ್ಮ ಕೇವಲ ನಿರೀಕ್ಷೆಯನ್ನು ಒದಗಿಸುತ್ತದೆ. ನಮ್ಮ ರಕ್ಷಣೆಗಾಗಿ ಆತನು ತನ್ನನ್ನೇ ಕೊಟ್ಟನು. ಆದರೆ ಭೂಲೋಕದ ಮೇಲಿನ ಜನರು ಆ ಸಂದೇಶವನ್ನು ಸ್ವೀಕರಿಸಿ ರಕ್ಷಿಸಲ್ಪಡುವರೋ? ಚಿಕ್ಕ ಪ್ರತ್ಯುತ್ತರಕ್ಕಾಗಿ ಮಾತ್ರವೇ ಯೇಸುವು ಪ್ರತಿಯೊಂದನ್ನು ಬಿಟ್ಟುಕೊಟ್ಟನೋ? ನಮಗಗಾಗಿ ಯೇಸು ಆ ಗಂಡಾಂತರವನ್ನು ತೆಗೆದು ಕೊಳ್ಳಲು ಸಿದ್ಧನಾಗಿದ್ದನು. ಆತನು ನಮ್ಮ ರಕ್ಷಕನಾದನು. ಬೇರೆ ಯಾರೂ ನಮ್ಮನ್ನು ರಕ್ಷಿಸಲಾರರು. ಆತನು ಬಾರದೇ ಇದ್ದರೆ, ನಮಗೆ ಯಾವುದೇ ನಿರೀಕ್ಷೆಯಿರುತ್ತಿರಲಿಲ್ಲ.

ಒಂದು ಇರುವೆಯಾಗುವುದನ್ನು ನೀವು ಕಲ್ಪಿಸಬಹುದೋ? ಮಾನವ ಜೀವಿಯಾಗಿರುವ ನಿಮ್ಮ ಅನೇಕ ವಿಷಯಗಳನ್ನು ಅಂದರೆ ಮಾನವ ದೇಹವನ್ನು, ನಿಮ್ಮ ಬಲವನ್ನು, ನಿಮ್ಮ ಪ್ರತಿಭೆಗಳನ್ನು ಬಿಟ್ಟುಬಿಡಬೇಕಾಗುವುದು. ಇರುವೆಯ ಮಿತಿಯೊಳಗೆ ನೀವಿರಬೇಕಾಗುವುದು. ಯೇಸುವು ಇರುವೆಯಾಗಲಿಲ್ಲ, ಆದರೆ ಪರಲೋಕದಲ್ಲಿಯ ಉನ್ನತ ಸ್ಥಿತಿಯನ್ನು ಬಿಟ್ಟು ಭೂಲೋಕಕ್ಕೆ ಇಳಿದು ಪಲೇಸ್ತೀನದಲ್ಲಿ ಮನುಷ್ಯನಾದದ್ದು ಮನುಷ್ಯನು ಇರುವೆಯಾಗುವದಕ್ಕಿಂತಲೂ ಎಷ್ಟೋ ದೊಡ್ಡ ದೀನತೆಯಾಗಿದೆ. ಹೌದು, ನಾವು ದೇವರ ಮಕ್ಕಳಾಗುವಂತೆ ಯೇಸುವು ಮನುಷ್ಯನಾದನು.[5]

ನಮಗಾಗಿ ಯೇಸುವು ಮಾಡಿದ್ದಕ್ಕಾಗಿ ನಾವು ಆನಂದಿಸೋಣ?

ಹಾಗೂ ನಾವೀಗಲೇ ಆತನಿಗೆ ವಿಧೇಯರಾಗಿ ಆತನನ್ನು ಹಿಂಬಾಲಿಸುಲು ತೀರ್ಮಾನಿಸಿಕೊಳ್ಳೋಣ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ಹೊಸ ಒಡಂಬಡಿಕೆಯ ಮೊದಲಿನ ನಾಲ್ಕು ಪುಸ್ತಕಗಳು ಏನನ್ನು ಪ್ರಕಟಿಸುತ್ತವೆ?
2. ಯೇಸುವಿನ ಜನನವು ಆತನ ಪ್ರಾರಂಭವೋ?
3. ಯೋಹಾನ 1:1-5ರಿಂದ ಬರುವ ನಾಲ್ಕು ಮಹಾ ಸತ್ಯಗಳನ್ನು ಪಟ್ಟಿ ಮಾಡಿರಿ.
4. ಯೇಸುವೂ ನಮ್ಮಲ್ಲಿ ಒಬ್ಬನಂತಾಗಲು ತೆಗೆದುಕೊಂಡ ನಾಲ್ಕು ಅವರೋಹಣ ಕ್ರಮದ ಹೆಜ್ಜೆಗಳು ಯಾವುವಾಗಿದ್ದವು?
5. ನೀವು ಅದನ್ನು ನಂಬಿದರೆ ಇತರ ಪ್ರತಿಯೊಂದು ಸತ್ಯವನ್ನು ನಂಬುವಿರಿ ಎಂಬ ಯಾವ ಸತ್ಯವು ಕ್ರೈಸ್ತತ್ವಕ್ಕೆ ಅಷ್ಟು ಕೇಂದ್ರವಾಗಿದೆ?
6. ಯೇಸುವಿನ ಜನನವು ಹೇಗೆ ವಿಶೇಷ ಜನನವಾಗಿತ್ತು?
7. ಯೇಸುವಿನ ಬಗ್ಗೆ ಎಂದೂ ಮರೆಯಲ್ಪಡಬಾರದ ಮೂರು ಸತ್ಯಗಳು ಯಾವವು?
8. ಯೇಸು ಮಾನವನಾಗಿ ಬರುವಂಥದ್ದು ಮನುಷ್ಯನು ಇರುವೆಯಾಗುವದಕ್ಕಿಂತ ಬಹಳ ದೊಡ್ಡದಾದ ಕೆಳಗಿನ ಹೆಜ್ಜೆ ಹೇಗಾಗಿರುವುದು?

## ಪದ ಸಹಾಯಗಳು

ಮನುಷ್ಯಾವತಾರ - ಮಾನವ ದೇಹದೊಂದಿಗೆ ದೇವರ ಕುಮಾರನು ಪ್ರತ್ಯಕ್ಷವಾಗಿದ್ದು. ಮಾನವ ಪುರುಷನಂತೆ ಜೀವಿಸಲು ಲೋಕಕ್ಕೆ ಯೇಸುವಿನ ಬರೋಣ.

ಅಂತರ್ವಾಸ - ಪರಿಶುದ್ಧಾತ್ಮನು ವಾಸಿಸುವಂತೆ, ಒಳಗೆ ಜೀವಿಸುವುದು, ಇಲ್ಲವೇ ಕ್ರೈಸ್ತನೊಳಗೆ ಪರಿಶುದ್ಧಾತ್ಮನು ಜೀವಿಸುವುದು (1 ಕೊರಿಂಥ 6:19, 20).

ಪೂರ್ವಸ್ಥಿತಿ - ಜಗತ್ತು ಸೃಷ್ಟಿಸಲ್ಪಡುವದಕ್ಕಿಂತ ಮೊದಲು ಜೀವದಿಂದಿರುವುದು. ಈ ಸ್ವಭಾವವು ದೈವತ್ವಕ್ಕೆಮಾತ್ರ (ತಂದೆಯಾದ ದೇವರು, ಕುಮಾರನಾದ ದೇವರು ಮತ್ತು ಪರಿಶುದ್ಧಾತ್ಮನಾದ ದೇವರು) ಒಳಪಟ್ಟಿರುತ್ತದೆ. ಯೇಸುವು ಮಾನವನಾಗುವದಕ್ಕಿಂತಲೂ ಮೊದಲು ಅಸ್ತಿತ್ವದಲ್ಲಿದ್ದನು. ಆತನು ಹಿಂದೆ ಯಾವಾಗಲೂ ಇದ್ದ, ಈಗಲೂ ಇರುವ, ಮುಂದೆಯೂ ಇರುವ ನಿತ್ಯವಾದ ಜೀವಿ ಯಾಗಿದ್ದಾನೆ (ಯೋಹಾನ 1:1-11 ನೋಡಿರಿ).

ಟಿಪ್ಪಣಿಗಳು

[1]ಯೋಹಾನನು ಸುವಾರ್ತೆಯನ್ನು ಇತಿಹಾಸಕ್ಕಿಂತ ಮೊದಲಿನಿಂದ ಪ್ರಾರಂಭಿಸುತ್ತಾನೆ. ನಿತ್ಯದಲ್ಲಿರುವ ದೇವರೊಂದಿಗೆ ಪ್ರಾರಂಭಿಸುತ್ತಾನೆ. [2]"ಅಲೆಕ್ಸಾಂಡ್ರಿಯದ ಫೈಲೋ ಎಂಬವನಿಗೆ ಲೋಗೋಸ ಎಂಬುದರ ಬಗ್ಗೆ ಹೇಳಲು ಬಹಳ ಇದೆ." ಅದು ಅವನ ಪದ್ಧತಿಯಲ್ಲಿ ದೇವರಿಗೂ ಮನುಷ್ಯನಿಗೂ ಮಧ್ಯದಲ್ಲಿ ಮಧ್ಯಸ್ಥಿಕೆಯ ತತ್ವವಾಗಿದೆ. ಆದರೆ ಲೋಗೋಸ ದೇಹಧಾರಿಯಾಗುವ ಸಾಧ್ಯತೆಯನ್ನು "ಅಲ್ಲಗಳೆದನು. ಯೋಹಾನನು ಲೋಗೋಸ ದೇಹಧಾರಿಯಾದನೆಂದು ಹೇಳುವಾಗ, ಫೈಲೋನಿಗಿಂತ-ಭಿನ್ನವಾದ ರೀತಿಯ ಲೋಗೋಸ ಬಗ್ಗೆ ಮಾತಾಡುತ್ತಾನೆ: ತನ್ನ ಎಲ್ಲಾ ದೊಡ್ಡ ಕಲಿಯುವಿಕೆಗಾಗಿ, ಫೈಲೋನು ಜನರನ್ನು ಕೃತಿಯೊಳಗೆ ನಡಿಸುವ ಮತ್ತು ಜನರಿಗೆ ದೇವರ ಮಕ್ಕಳಾಗುವ ಬಲವನ್ನು ಕೊಡುವ, ಜನರ ಮಧ್ಯದಲ್ಲಿ ವಾಸಿಸುವ ಶಕ್ತಿಯುಳ್ಳ ಲೋಗೋಸನನ್ನು ಕೊಡಲಾರದವನಾಗಿದ್ದನು. ಇದು ಸಮಕಾಲಿನ ಗ್ರೀಕ ಜಗತ್ತಿನಲ್ಲಿ ಹೊಸ ವಿಷಯವಾಗಿತ್ತು" (Donald Guthrie, *A Shorter Life of Christ* [Grand Rapids, Mich.: Zondervan, 1970], 73). [3]"ಒಬ್ಬ ಮನುಷ್ಯನೊಳಗೆ ವಾಸಿಸುವ ದೇವರಲ್ಲ. ಅಂಥವರು ಅನೇಕರಿದ್ದರು. ಮನುಷ್ಯನು ದೈವತ್ವಕ್ಕೇರಿಸಲ್ಪಟ್ಟದ್ದಲ್ಲ. ಅನ್ಯ ಜನಾಂಗದವರ ದಂತಕಥೆಗಳ ವಿಚಾರ ಪದ್ಧತಿಯನ್ನು ಬಿಟ್ಟರೆ ಅಂಥವರು ಬೇರೆ ಇರಲಿಲ್ಲ; ಆದರೆ ದೇವರು ಮತ್ತು ಮನುಷ್ಯನ ಒಂದು ವ್ಯಕ್ತಿಯಲ್ಲಿ ಜೊತೆಗೂಡಿದ ಎರಡು ಸ್ವಭಾವಗಳನ್ನು ಶಾಶ್ವತವಾದ ಒಗಟು ಮತ್ತು ರಹಸ್ಯವು ವಿವರಣೆಯ ಸಾಧ್ಯತೆಯನ್ನು ದಿಗಿಲುಗೊಳಿಸುತ್ತದೆ" (G. Campbell Morgan, *The Crises of the Christ* [Old Tappan, N.J.: Fleming H. Revell Co., 1936], 79). [4]J. I. Packer, *Knowing God* (Downers Grove, Ill.: InterVarsity Press, 1973), 46. [5]"ಪ್ರತಿಯೊಂದನ್ನು ತಿಳಿದಿರುವ ಹಾಗೂ ಇಡೀ ವಿಶ್ವವನ್ನು ಸೃಷ್ಟಿಸಿದ ನಿತ್ಯ ಜೀವಿಯು ಮನುಷ್ಯನಾದದ್ದು ಅಷ್ಟೇ ಅಲ್ಲ ಆದರೇ (ಅದರ ಮೊದಲು) ಶಿಶುವಾದನು, ಹಾಗೂ ಅದಕ್ಕಿಂತ ಮೊದಲು ಒಬ್ಬ ಸ್ತ್ರೀಯ ದೇಹದಲ್ಲಿ (ಭ್ರೂಣ) ಆದನು. ಇದರ ಒಳನೋಟ ತಿಳಿಯಬೇಕಾದರೆ. ನೀವು ಏಡಿಯಾಗಲೀ ಇಲ್ಲವೇ ಹುಳವಾಗಿಯಾಗಲೀ ಆಗಿರಿ" (C. S. Lewis, *Mere Christianity,* rev. ed. [New York: Macmillan Publishing Co., 1952], 155).

7

# ನಾವು ಯೇಸುವನ್ನು ಹೇಗೆ ದೃಷ್ಟಿಸಬೇಕು?

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಬಹಳ ಸಲ ಸಂಶೋಧನೆ ಮಾಡಲು ಒಪ್ಪಿಸಲ್ಪಡುವುದು. ಸಂಶೋಧನೆ ಮಾಡುವದರಲ್ಲಿ ಅವರು ಯಾವಾಗಲೂ ಸಂತೋಷ ಪಡುವದಿಲ್ಲ. ಸಂಶೋಧನೆಯ ಕಡೆಗೆ ಅವರ ಮನೋಭಾವನೆಗೆ ಎರಡು ಕಾರಣಗಳಿವೆ. ಮೊದಲನೆಯದು, ಸಂಶೋಧನೆಯು ಕಠಿಣವಾದ ಕೆಲಸ, "ನಾನು ಓದುವದರಲ್ಲಿ ಸಂತೋಷ ಪಡುವದಿಲ್ಲ. ಆದರೆ ಓದಿದ್ದಕ್ಕಾಗಿ ಸಂತೋಷ ಪಡುತ್ತೇನೆ" ಎಂದು ಒಬ್ಬನು ಹೇಳಿದನು. ಅನೇಕ ವಿದ್ಯಾರ್ಥಿಗಳು ಸಂಶೋಧನೆ ಮಾಡುವದರಲ್ಲಿ ಸಂತೋಷಪಡುವದಿಲ್ಲ, ಆದರೆ ಸಂಶೋಧನೆ ಮಾಡಿದ ಮೇಲೆ ಸಂತೋಷ ಪಡುತ್ತಾರೆ. ಎರಡನೆಯದು, ಬಹಳ ವಾದ ಸಂಶೋಧನೆಯು ತೆರೆದ - ಅಂತ್ಯವುಳ್ಳದ್ದು. ನಾವು ತಿಳಿದುಕೊಂಡದ್ದನ್ನು, ನಾವು ತಿಳಿಯದೇ ಇರುವಂಥದ್ದನ್ನು ಸಂಶೋಧನೆಯು ವಿಂಗಡಿಸುತ್ತದೆ. ಹಾಗೂ ಕೆಲವು ಸಲ ನಾವು ತಿಳಿದಿರುವಂಥದ್ದಕ್ಕಿಂತಲೂ ತಿಳಿಯದೇ ಇರುವಂಥದ್ದು ಹೆಚ್ಚು ಸ್ಪಷ್ಟವಾಗಿರುತ್ತದೆ. "ನಾನು ಈ ಸಂಶೋಧನೆಯ ಯೋಜನೆಯನ್ನು ಪ್ರಾರಂಭಿಸುವ ಮೊದಲು ಈ ವಿಷಯದ ಬಗ್ಗೆ ನಾನು ಏನನ್ನೂ ತಿಳಿದುಕೊಂಡಿರಲಿಲ್ಲ. ಈಗ ನಾನು ಈ ಯೋಜನೆಯನ್ನು ಪೂರ್ತಿಗೊಳಿಸಿದ್ದೇನೆ. ಈ ವಿಷಯದ ಬಗ್ಗೆ ಯಾರೂ ಏನನ್ನಾದರೂ ತಿಳಿದುಕೊಂಡಿಲ್ಲವೆಂದು ನಾನು ಬಲ್ಲೆನೆ" ಎಂದು ಒಬ್ಬ ವಿದ್ಯಾರ್ಥಿಯು ಹೇಳುವದರಿಂದ ತನ್ನ ಯೋಜನೆಯನ್ನು ಮುಕ್ತಾಯ ಗೊಳಿಸಬಹುದು. ಇಂಥ ಮುಕ್ತಾಯವು ಬಹಳ ನಿರಾಶಾದಾಯಕವಾದದ್ದಾಗಿರುವುದು.

ಕೆಲವು ಪ್ರಮುಖ ವಿಷಯಗಳ ಬಗ್ಗೆ ಸತ್ಯವನ್ನು ತಿಳಿಯುವದಕ್ಕೆ ನಾವೆಲ್ಲರೂ ಬಯಸುವೆವು. ತೆರೆದ - ಅಂತ್ಯಗಳೊಂದಿಗೆ ಇರುವಂಥದದ್ದರಿಂದ, ಅದರ ಬಗೆಗಿನ ಪೂರ್ತಿಗೊಳ್ಳದ ಚರ್ಚೆಯಿಂದ ನಮಗೆ ತೃಪ್ತಿಯಾಗುವದಿಲ್ಲ. ಇದು ವಿಶೇಷವಾಗಿ ಯೇಸು ಕ್ರಿಸ್ತನ ವಿಷಯದ ಬಗ್ಗೆ ಸತ್ಯವಾಗಿರುವುದು. ಆತನ ಬಗ್ಗೆ ಯಾರೋ ಒಬ್ಬನ ಅಭಿಪ್ರಾಯವನ್ನು ಅಥವಾ ಆತನ ಬಗೆಗಿರುವ ಅಸ್ಪಷ್ಟವಾದ ತತ್ವಗಳ ಚರ್ಚೆಯ ಬಗ್ಗೆ ನಾವು ಕೇಳಲು ಬಯಸುವದಿಲ್ಲ; ಅದರ ಬಗ್ಗೆ ನಮ್ಮ ಆಳವಾದ ಪ್ರಶ್ನೆಗಳು

ಸ್ಪಷ್ಟವಾದವುಗಳೂ ನಿರ್ದಿಷ್ಟವಾದವುಗಳೂ ಆಗಿವೆ: ಯೇಸುವು ಯಾರು? ಆತನು ನಿಜವಾಗಿಯೂ ದೇವರ ಕುಮಾರನೋ? ಜೀವ ಮತ್ತು ರಕ್ಷಣೆಯ ಬಗ್ಗೆ ಆತನು ಏನು ಹೇಳುವನು?

ಈ ಜಗತ್ತಿನಲ್ಲಿ ಬೈಬಲು ಮಾತ್ರವೇ ನಿಜವಾದ, ಖಚಿತವಾದ ಪುಸ್ತಕವಾಗಿದೆ. ಆತನ ಬೋಧನೆಯ ಬಗ್ಗೆ ನಾವು ನಿಶ್ಚಿತತೆ ಯುಳ್ಳವರಾಗಿರುವಂತೆ ದೇವರು ಅದನ್ನು ನಮಗೆ ಕೊಟ್ಟನು (2 ಪೇತ್ರ 1:3). ಯೇಸುವಿನ ಅನಿಶ್ಚಿತತೆಯೊಂದಿಗೆ ನಮ್ಮ ಜೀವನವು ಹೋಗಬೇಕೆಂದು ದೇವರು ಬಯಸುವದಿಲ್ಲ. ಯೇಸುವು ಯಾರಾಗಿರುವನು ಮತ್ತು ಆತನು ಏನು ಮಾಡಲು ಬಂದನು ಎಂಬುದನ್ನು ನಾವು ತಿಳಿಯಬೇಕೆಂದು ಆತನು ಬಯಸುತ್ತಾನೆ. ಆ ಸತ್ಯದ ಮೇಲೆ ವಿಶ್ವಾಸದ ಮತ್ತು ಭರವಸೆಯ ಜೀವಿತವನ್ನು ನಾವು ಕಟ್ಟಲಿಕ್ಕಾಗುವಂತೆ ತನ್ನ ಬಗ್ಗೆ ಸಂಪೂರ್ಣ ಸತ್ಯವಿರಬೇಕೆಂದು ಆತನು ಬಯಸುತ್ತಾನೆ.

ನಮಗಿರುವ ಯೇಸುವಿನ ಕೇವಲ ಅಧಿಕೃತವಾಗಿರುವ ಚಿತ್ರವನ್ನು ಬೈಬಲು ನಮಗೆ ಕೊಡುತ್ತದೆ. ಆತನು ಯಾರಾಗಿರುವನೆಂಬುದನ್ನು ಎರಡು ವಿಧ ಗಳಲ್ಲಿ ಅದು ನಮಗೆ ಹೇಳುತ್ತದೆ: ಮೊದಲನೆಯದು, ಪರಿಶುದ್ಧ ಬರಹಗಳಲ್ಲಿ ಆತನು ಏನೆಂದು "ಕರೆಯಲ್ಪಟ್ಟಿದ್ದಾನೆ" ಎಂಬುದನ್ನು ಗಮನಿಸುವದರಿಂದ ಆತನು ಯಾರಾಗಿರುವನೆಂಬುದನ್ನು ನೋಡುತ್ತೇವೆ. ಎರಡನೆಯದು, ಆತನಿಗೆ ಹೊರಿಸಿದ "ಗುಣಲಕ್ಷಣಗಳನ್ನು" ಗಮನಿಸುವದರಿಂದ ಆತನು ಯಾರಾಗಿರುವನೆಂಬುದನ್ನು ನೋಡುತ್ತೇವೆ.

ಬೈಬಲಿನಲ್ಲಿ ಆತನು ಏನೆಂದು ಕರೆಯಲ್ಪಟ್ಟಿದ್ದಾನೆಂಬುದನ್ನು ಜಾಗರೂಕತೆಯಿಂದ ಗಮನಿಸೋಣ. ನಾವು ನಂಬುವವನಿಂದ ಒಬ್ಬ ಮನುಷ್ಯನು ಒಬ್ಬ ಪ್ರಸಂಗಿಯಂತೆ ಮತ್ತು ಬೋಧಕನಂತೆ ನಮಗೆ ಪರಿಚಯ ಮಾಡಿಕೊಡಲ್ಪಟ್ಟರೆ, ಆ ಮನುಷ್ಯನು ಯಾರೆಂದು ಹಾಗೂ ಎಂಥ ಮನುಷ್ಯನಾಗಿರುವನೆಂದು ಅವನ ಮೂಲಕವಾಗಿ ನಾವು ತಿಳಿದುಕೊಳ್ಳುವೆವು. "ಪ್ರಸಂಗಿ" ಮತ್ತು "ಬೋಧಕ" ಎಂಬ ಪದಗಳು ಅವನ ಸ್ಪಷ್ಟ ಚಿತ್ರವನ್ನು ನಮಗೆ ಕೊಡುತ್ತವೆ.

ಯೇಸುವಿನ ಗುರುತಿನ ಬಗ್ಗೆ ಪರಿಶುದ್ಧ ಬರಹಗಳು ನಮ್ಮಲ್ಲಿ ಸಂಶಯವನ್ನು ಬಿಡುವದಿಲ್ಲ. ನಾವು ತಪ್ಪಾಗಿ ಅರ್ಥಮಾಡಿಕೊಳ್ಳದ ಮಾತುಗಳಲ್ಲಿ ಆತನು ಸ್ಪಷ್ಟವಾಗಿ ವಿವರಿಸಲ್ಪಟ್ಟಿದ್ದಾನೆ. ಪರಿಶುದ್ಧ ಬರಹಗಳಲ್ಲಿ ಯೇಸುವು ಏನೆಂದು ಕರೆಯಲ್ಪಟ್ಟಿದ್ದಾನೆ ಎಂಬುದನ್ನು ಜಾಗರೂಕತೆಯಿಂದ ಅಧ್ಯಯನ ಮಾಡಿದರೆ, ಆತನು ಯಾರಾಗಿರುವನೆಂದು ತಿಳಿದುಕೊಳ್ಳುವೆವು.

## ಆತನು ನಮ್ಮ ರಕ್ಷಕನು

ಮೊದಲನೆಯದು, ಪರಿಶುದ್ಧ ಬರಹಗಳು ಯೇಸುವನ್ನು "ರಕ್ಷಕ" ಎಂದು ಕರೆಯುತ್ತವೆ. "ರಕ್ಷಕ" ಎಂಬ ಪದವು ಅತೀಯಾದ ಗಂಡಾಂತರದಿಂದ ಇತರರನ್ನು ಉಳಿಸುವದಕ್ಕೆ ಸಂಬಂಧಿಸಿದೆ.

ಮತ್ತಾಯದಲ್ಲಿ ಜನನದ ವಿಷಯ ದಾಖಲೆಯಾಗಿದ್ದುದರಲ್ಲಿ ಯೇಸುವಿಗೆ ಭೂಲೋಕದ ತಂದೆಯಾಗಿದ್ದ ಯೋಸೇಫನಿಗೆ ಕನಸಿನಲ್ಲಿ ಕಾಣಿಸಿಕೊಂಡದ್ದು ಹೇಳಲ್ಪಟ್ಟಿದೆ. ದೇವದೂತನು ಹೀಗೆ ಹೇಳಿದನು,

> ... ಯೋಸೇಫನೇ, ದಾವೀದನ ವಂಶದವನೇ, ನಿನ್ನ ಹೆಂಡತಿಯಾದ ಮರಿಯಳನ್ನು ಸೇರಿಸಿಕೊಳ್ಳುವದಕ್ಕೆ ಅಂಜಬೇಡ. ಆಕೆಯ ಗರ್ಭವು ಪರಿಶುದ್ಧಾತ್ಮನಿಂದಲೇ ಆದದ್ದು. ಆಕೆಯು ಒಬ್ಬ ಮಗನನ್ನು ಹಡೆಯುವಳು; ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು; ಯಾಕಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿಕಾಯುವನು (ಮತ್ತಾಯ 1:20, 21).

ನೀವೇ ನೋಡುವಂತೆ, ಯೇಸುವು ಕೇವಲ ಯಾವುದೋ ರೀತಿಯ ರಕ್ಷಕನಾಗಿರಲಿಲ್ಲ; ಆತನು ಅದ್ವಿತೀಯ ರಕ್ಷಕನಾಗಿದ್ದನು. ಉರಿಯುತ್ತಿರುವ ಒಂದು ಕಟ್ಟಡದಿಂದ ಒಬ್ಬನು ಒಂದು ಮಗುವನ್ನು ರಕ್ಷಿಸಿದರೆ, ಅವನನ್ನು ನಾವು ರಕ್ಷಕನು ಎಂದು ಕರೆಯುತ್ತೇವೆ. ಹಸಿವೆಯಿಂದ ಬಳಲುತ್ತಿರುವ ಜನರಿಗೆ ಒಬ್ಬನು ಆಹಾರ ವಿತರಣೆ ಮಾಡಿದರೆ, ಜನರ ರಕ್ಷಕನೆಂದು ಅವನು ಕರೆಯಲ್ಪಡುತ್ತಾನೆ. ಪರಿಶುದ್ಧ ಬರಹಗಳ ಪ್ರಕಾರವಾಗಿ ಯೇಸುವು ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸುವನು. ಆತನು ನಮ್ಮ ಆತ್ಮಿಕ ರಕ್ಷಕನಾಗಿರುವನು.

ಪ್ರತಿಯೊಬ್ಬ ಜವಾಬ್ದಾರಿಯುಳ್ಳ ವ್ಯಕ್ತಿಯು ಪಾಪದ ಅಪರಾಧವನ್ನು ಮೊದಲನೆಯ ತೊಂದರೆಯನ್ನಾಗಿ ಎದುರಿಸತಕ್ಕದ್ದು. ನಮ್ಮ ಕುತ್ತಿಗೆಯ ಸುತ್ತ ಟೇಪ ರೆಕಾರ್ಡರುಗಳನ್ನು ಕಟ್ಟಿಕೊಂಡು ನಲ್ವತ್ತೆಂಟು ತಾಸುಗಳಲ್ಲಿ ನಮ್ಮ ಬಾಯಿಂದ ಬರುವ ಪ್ರತಿಯೊಂದು ಮಾತನ್ನು ರೆಕಾರ್ಡ ಮಾಡಿದರೆ, ನಾವು ಪಾಪಿಗಳಾ ಗಿರುವೆವೆಂದು ಸುಲಭವಾಗಿ ಕಂಡುಕೊಳ್ಳುವೆವು ಎಂದು ಒಬ್ಬನು ಹೇಳಿದ್ದಾನೆ. ನಾವು ಕುಳಿತು ಕೊಂಡು ಪ್ರತಿಯೊಂದು ಪದವನ್ನು ಕೇಳಿ, ಪ್ರತಿಯೊಂದು ಹೇಳಿ ಕೆಯ ಹಿಂದಿರುವ ಪದವನ್ನು ಆಲಿಸಿದರೆ ಮತ್ತು ನಾವು ಮಾತಾಡಿದ ಸ್ವರದ ಮೇಲೆ ಯೋಚಿಸಿದರೆ ನಾವು ಹೇಳ ಬೇಕಾದದ್ದನ್ನು ಯಾವಾಗಲೂ ಹೇಳುವದಿಲ್ಲವೆಂಬ ನಿರ್ಧಾರಕ್ಕೆ ನಿಶ್ಚಯವಾಗಿ ಬರುವೆವು. ಹಾಗೆಯೇ ನಮ್ಮ ಜೀವನದ ನಲ್ವತ್ತೆಂಟು ತಾಸುಗಳ ಫಿಲ್ಮನ್ನು ವೀಡಿಯೋ ಕ್ಯಾಮರಾವನ್ನು ಉಪಯೋಗಿಸಿ ತೆಗೆಯಬಹುದು.

ನಮ್ಮ ಪ್ರತಿಯೊಂದು ಕೃತಿಯನ್ನು, ಕಾರ್ಯವನ್ನು ಪುನರಾವಲೋಕನ ಮಾಡುವಾಗ ನಾವು ಪಾಪಿಗಳಾಗಿದ್ದೇವೆಂದು ಸುಲಭವಾಗಿ ನೋಡುವೆವು. ನಾವು ಮಾಡ ಬೇಕಾದದ್ದನ್ನು ಮಾಡದೆ ಹಾಗೂ ಮಾಡಬಾರದ್ದನ್ನು ಮಾಡುವಂಥ ಸತ್ಯವನ್ನು ಎದುರಿಸುವೆವು. ನಾವು ಪಾಪಿಗಳಾಗಿರುವೆವೆಂಬುದನ್ನು ಹೇಳಲು ನಮಗೆ ಸತ್ಯವೇದದ ಅವಶ್ಯಕತೆಯೂ ಇರುವದಿಲ್ಲ. ನಮ್ಮ ಮಾತುಗಳ ಮತ್ತು ಕಾರ್ಯಗಳ ಕಡೆಗೆ ಸಮೀಪದಿಂದ ನೋಡುವಾಗ ನಾವು ಪಾಪಿಗಳಾಗಿದ್ದೇವೆಂಬುದನ್ನು ತಿಳಿದು ಕೊಳ್ಳುವೆವು. ಹೀಗಿದ್ದರೂ ಬೈಬಲು ಸ್ಪಷ್ಟವಾದ ಭಾಷೆಯಲ್ಲಿ ನಮ್ಮ ಬಗ್ಗೆ ಸತ್ಯವನ್ನು ಘೋಷಿಸುತ್ತದೆ, "... 'ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ' " (ರೋಮಾಪುರ 3:10) ಎಂದು ಪೌಲನು ಕ್ರೈಸ್ತರಿಗೆ ಜ್ಞಾಪಿಸಿದ್ದಾನೆ.

ನಮ್ಮ ಪಾಪದ ಬಗ್ಗೆ ಏನು ಮಾಡಲ್ಪಡಬೇಕು? ನಮ್ಮನ್ನು ನಾವೇ ಕ್ಷಮಿಸಿಕೊಳ್ಳಲಾರೆವು. ನಮ್ಮ ಪಾಪವು ಇತರರ ವಿರುದ್ಧವಾಗಿ ಮಾತ್ರವೇ ಅಲ್ಲ, ಆದರೆ ಇದು ದೇವರಿಗೆ ವಿರುದ್ಧವಾಗಿಯೂ ಸಹ ಇರುವುದು. ನಮ್ಮ ಅತೀ ಅವಸರದ ನಮ್ಮ ಅಗತ್ಯತೆಯೊಂದಿಗೆ ನಮಗೆ ಯಾರು ಸಹಾಯ ಮಾಡುವರು? ಮನೋ ವಿಜ್ಞಾನವು ನಮ್ಮನ್ನು ಕ್ಷಮಿಸಲಾರದು. ಸಕಾರಾತ್ಮಕ ಯೋಜನೆಯು ಸಹಾಯ ಮಾಡಲಾರದು. ನಾವು ಪಾಪಿಗಳು ಎಂದು ನಟಿಸುವುದೂ ನಮ್ಮನ್ನು ರಕ್ಷಿಸಲಾರದು. ಏನು ಮಾಡಲ್ಪಡಬೇಕು? ನಮ್ಮ ನಿರಾಶಾದಾಯಕ ಪರಿಸ್ಥಿತಿಗೆ ಯೇಸುವು ನಮ್ಮ ಉತ್ತರವಾಗಿದ್ದಾನೆ. ಯೇಸುವಿನ ಹೆಸರು ಪರಲೋಕದಲ್ಲಿ ತೀರ್ಮಾನಿಸಲ್ಪಟ್ಟಿದೆ ಎಂದು ಯೋಸೇಫನಿಗೆ ಹೇಳಲ್ಪಟ್ಟಿತು, ಯಾಕಂದರೆ ಆತನು ಭೂಲೋಕದಲ್ಲಿ ಪೂರೈಸಬೇಕಾದ ಕಾರ್ಯಕ್ಕಾಗಿ. ಆತನು ಜನಿಸಿದಾಗ, ಪಲೆಸ್ತೀನದಲ್ಲಿಯ ಒಂದು ಗುಡ್ಡದ ಮೇಲೆ ದೇವದೂತರು ಕುರುಬರಿಗೆ ಹೀಗೆ ಹೇಳಿದರು, "ಈ ಹೊತ್ತು ನಿಮಗೋಸ್ಕರ ದಾವೀದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ, ಆತನು ಕರ್ತನಾಗಿರುವ ಕ್ರಿಸ್ತನೇ" (ಲೂಕ 2:11). ಯೇಸುವು ಈ ಭೂಲೋಕಕ್ಕೆ ಬಂದ ಪ್ರಮುಖ ಉದ್ದೇಶವು ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸುವುದಾಗಿತ್ತು (1 ಕೊರಿಂಥ 15:3).

ನೆಪೋಲಿಯನ್ನನ ಸೈನ್ಯದಲ್ಲಿ ಒಬ್ಬ ಸೈನಿಕನ ಬಗ್ಗೆ ಮನಮುಟ್ಟುವ ಕಥೆಯೊಂದು ಹೇಳಲ್ಪಡುತ್ತದೆ. ಅವನು ಒಬ್ಬ ಶೂರ, ನಂಬಿಗಸ್ತ ಸೈನಿಕನಾಗಿದ್ದನು. ಯುದ್ಧಗಳ ಮಧ್ಯದಲ್ಲಿ, ಅವನು ತನ್ನ ಡೇರೆಯಲ್ಲಿ ಇದ್ದುಕೊಂಡು ತನ್ನ ಕರ್ತವ್ಯಗಳ ಹಾಗೂ ಕುಟುಂಬದ ಜವಾಬ್ದಾರಿಕೆಗಳ ಬಗ್ಗೆ ಪುನರಾವಲೋಕನೆ ಮಾಡುತ್ತಿದ್ದನು. ತನಗಿದ್ದ ಸಾಲದ ಬಗ್ಗೆ ಒಂದು ಕಾಗದದ ಮೇಲೆ ಪಟ್ಟಿ ಮಾಡಿದನು. ತನ್ನ ಕುಟುಂಬದ ಜೋಪಾಸನೆಗಾಗಿ ಎಷ್ಟು ಹಣದ ಅವಶ್ಯಕತೆಯಿದೆಯೆಂದು ಬರೆದಿದ್ದನು. ತನ್ನ ಸಾಲ ತೀರಿಸಲಿಕ್ಕೆ ಮತ್ತು ತನ್ನ ಕುಟುಂಬದ ಖರ್ಚಿಗಾಗಿ ಅಗತ್ಯವಿರುವ ಹಣವು ತನ್ನಲ್ಲಿ ಇರುವದಿಲ್ಲವೆಂದು ತಿಳಿದುಕೊಂಡಾಗ ಅವನಲ್ಲಿ

ನಿರಾಶೆಯ ಗಾಳಿಬೀಸಿತು. ಆಳವಾದ ನಿರಾಶೆಯಿಂದ ತುಂಬಿದವನಾಗಿ ತಾನು ಕೊಡಬೇಕಾಗಿದ್ದ ಸಾಲದ ಪಟ್ಟಿಯ ಕೆಳಗೆ "ಈ ಎಲ್ಲಾ ಸಾಲಗಳನ್ನು ತೀರಿಸುವವರು ಯಾರಿದ್ದಾರೆ?" ಎಂದು ಬರೆದನು, ಸೋತು ಹೋದ ಭಾವನೆಯೊಂದಿಗೆ ತನ್ನ ತೋಳಿನ ಮೇಲೆ ತನ್ನ ತಲೆಯನಿಟ್ಟು ನಿದ್ರೆ ಹೋದನು. ಸೈನಿಕನಿಗೆ ತಿಳಿಯದಂತೆ, ನೆಪೋಲಿಯನ್ ತನ್ನ ಸೈನಿಕರ ಕ್ಯಾಂಪಿನಲ್ಲಿ ಅಲೆದಾಡಿ ಅವರ ಪರಿಸ್ಥಿತಿಯನ್ನು ಪರೀಕ್ಷಿಸಿ ಅವರ ಬಲವನ್ನು ಲೆಕ್ಕ ಹಾಕಲು ಪ್ರಯತ್ನಿಸುತ್ತಿದ್ದನು. ಈ ಯುವ ಸೈನಿಕನ ಡೇರೆಯನ್ನು ದಾಟಿಹೋಗುವಾಗ, ಪರೀಕ್ಷಿಸುವದಕ್ಕಾಗಿ ಕರೆದನು. ಆದರೆ ಡೇರೆಯೊಳಗಿಂದ ಯಾವ ಉತ್ತರ ಬರಲಿಲ್ಲ. ಅವನು ಒಳಗೆ ಹೋಗಿ ನೋಡಿದನು. ನಿದ್ರಿಸುತ್ತಿದ್ದ ಸೈನಿಕನನ್ನು, ಕಾಗದ ಅಡಿಯಲ್ಲಿ ಬರೆದ ಕರುಣಾ ಜನಕ ಪ್ರಶ್ನೆಯನ್ನು ನೋಡಿದನು. ನೆಪೋಲಿಯನ್ ಕೆಳಕ್ಕೆ ಬಾಗಿ. ತನ್ನ ಪೆನ್ನನ್ನು ತೆಗೆದು ಕೊಂಡು ಪ್ರಶ್ನೆಯ ಕೆಳಗೆ "ನಾನು ಇದ್ದೇನೆ" ಎಂದು ಬರೆದು "ನೆಪೋಲಿ ಯನ್" ಎಂದು ಸಹಿ ಹಾಕಿದನು.

ನಮ್ಮ ಪಾಪದ ಸಾಲದ ಕಡೆಗೆ ಹಾಗೂ ರಕ್ಷಣೆಗಾಗಿ ನಮ್ಮ ಅಗತ್ಯತೆಯ ಕಡೆಗೆ ನೋಡುವಾಗ, "ಈ ಎಲ್ಲಾ ಸಾಲಗಳನ್ನು ತೀರಿಸುವವರು ಯಾರು ಇದ್ದಾರೆ?" ಎಂದು ನಾವೂ ಸಹ ಕೂಗುವೆವು. ನೆಪೋಲಿಯನ್ನನಿಗಿಂತಲೂ ಎಷ್ಟೋ ಹೆಚ್ಚು ದೊಡ್ಡವನಾದಾತನು "ನಾನಿದ್ದೇನೆ" ಎಂದು ಉತ್ತರ ಕೊಟ್ಟಿದ್ದಾನೆ. ಯೇಸುವು ಇಡೀ ಲೋಕದ ರಕ್ಷಕನು, ಶಿಲುಬೆಯ ಮೇಲೆ ತನ್ನ ಮರಣದ ಮುಖಾಂತರವಾಗಿ ಸಂಪೂರ್ಣ ರಕ್ಷಣೆಯ ಕೊಡುಗೆಯನ್ನು ನಮಗೆ ತಂದಿದ್ದಾನೆ.

ಯೇಸುವು ನಮಗೆ ಒಬ್ಬನೇ ಒಬ್ಬ ರಕ್ಷಕನಾಗಿದ್ದಾನೆ ಎಂದು ಬೈಬಲ್ ಸ್ಪಷ್ಟಪಡಿಸುತ್ತದೆ. "ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ" (ಅಪೊಸ್ತಲರ ಕೃತ್ಯಗಳು 4:12) ಎಂದು ಪೇತ್ರನು ಹೇಳಿದ್ದಾನೆ. ದೇವರ ಮುಂದೆ ಸ್ವೀಕಾರ ಯೋಗ್ಯವಾಗುವ ರೀತಿಯಲ್ಲಿ ನೀವು ನಿಲ್ಲುವಂತೆ ನಿಮ್ಮ ಪಾಪಗಳಿಂದ ನೀವು ರಕ್ಷಿಸಲ್ಪಡಲು ಬಯಸಿದರೆ, ನೀವು ಕ್ರಿಸ್ತನ ಬಳಿಗೆ ಬರತಕ್ಕದ್ದು (ಯೋಹಾನ 14:6; ಮಾರ್ಕ 16:16). ಬೈಬಲ್ ಅನುಗುಣವಾಗಿ, ಆತನು ನಮ್ಮ ರಕ್ಷಕನು.

## ಕ್ರಿಸ್ತನಂತೆ

ಎರಡನೆಯದಾಗಿ, ಯೇಸು "ಕ್ರಿಸ್ತ" ಎಂದು ಕರೆಯಲ್ಪಟ್ಟಿದ್ದಾನೆ. ಅದರ ಅರ್ಥ, "ಅಭಿಷಿಕ್ತನು" ಗ್ರೀಕ ಭಾಷೆಯಲ್ಲಿ "ಕ್ರಿಸ್ತ" ಎಂಬುದು ಹಿಬ್ರಿಯ ಭಾಷೆಯಲ್ಲಿ "ಮೆಸ್ಸೀಯ" ಎಂದಾಗಿದೆ. ಹೊಸ ಒಡಂಬಡಿಕೆಯು ಯೇಸುವನ್ನು ವಾಗ್ದಾನ

ವಾದಾತನು, ದೇವರಿಂದ ಆಯ್ದುಕೊಂಡಾತನು ಎಂದು ಗುರುತಿಸುತ್ತದೆ.

ದೇವರ ವಿಶೇಷ ಸೇವಕನು ಬರಲಿದ್ದಾನೆಂದು ಪ್ರವಾದಿಗಳು ಮುಂತಿಳಿಸಿದರು:

> ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು; ಆಡಳಿತವು ಅವನ ಬಾಹುವಿನ ಮೇಲಿರುವದು; ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯವಾದ ತಂದೆ, ಸಮಾಧಾನದ ಪ್ರಭು ಎಂಬುವು ಅವನ ಹೆಸರು. ಅವನ ಮುಖಾಂತರ ದಾವೀದನ ಸಿಂಹಾಸನದ ಆಡಳಿತವು ಅಭಿವೃದ್ಧಿ ಯಾಗುವದು. ದಾವೀದನ ರಾಜ್ಯದಲ್ಲಿ ನಿತ್ಯ ಸಮಾಧಾನವಿರುವುದು, ಆ ರಾಜ್ಯವು ಇಂದಿನಿಂದ ಯಾವಾಗಲೂ ನೀತಿ ನ್ಯಾಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವದು. ಸೇನಾಧಿಪತಿಯಾದ ಯೆಹೋವನ ಆಗ್ರಹವು ಇದನ್ನು ನೆರವೇರಿಸುವುದು (ಯೆಶಾಯ 9:6, 7).

"ಎಫ್ರಾತದ ಬೇತ್ಲೆಹೇಮೇ, ನೀನು ಯೆಹೂದದ ಗ್ರಾಮಗಳಲ್ಲಿ ಚಿಕ್ಕದ್ದಾಗಿದ್ದರೂ ಇಸ್ರಾಯೇಲನ್ನು ಆಳತಕ್ಕವನು ನಿನ್ನೊಳಗಿಂದ ನನಗಾಗಿ ಹೊರಡುವನು; ಆತನ ಹೊರಡೋಣದ ಮೂಲವು ಪುರಾತನವೂ ಅನಾದಿಯೂ ಆದದ್ದು" (ಮೀಕ 5:2) ಎಂದು ಮೀಕನು ಪ್ರವಾದಿಸಿದನು. ಪ್ರವಾದಿಯು ಮುಂತಿಳಿಸಿದಾತನು ಯೇಸುವೇ ಎಂದು ಹೊಸ ಒಡಂಬಡಿಕೆಯು ಸಿದ್ಧಪಡಿಸಿ ತೋರಿಸುತ್ತದೆ.

ತನ್ನ ಇಹಲೋಕದ ಸೇವೆಯ ಅಂತ್ಯದಲ್ಲಿ ಯೇಸುವು ತನ್ನ ಶಿಷ್ಯರೊಂದಿಗೆ ಫಿಲಿಪ್ಪನ ಕೈಸರಿಯಕ್ಕೆ ನಡೆದು ಹೋಗುತ್ತಿದ್ದನು. ಅವರು ನಡೆಯುತ್ತಿದ್ದಂತೆ ಯೇಸು ತನ್ನ ಶಿಷ್ಯರಿಗೆ, "ಜನರು ಮನುಷ್ಯ ಕುಮಾರನಾದ ನನ್ನನ್ನು ಯಾರು ಅನ್ನುತ್ತಾರೆ?" ಎಂದು ಪ್ರಶ್ನಿಸಿದನು. ಅದಕ್ಕೆ ಶಿಷ್ಯರು, "ನಿನ್ನನ್ನು ಕೆಲವರು ಸ್ನಾನಿಕನಾದ ಯೋಹಾನನು ಅನ್ನುತ್ತಾರೆ, ಕೆಲವರು ಎಲೀಯನು ಅನ್ನುತ್ತಾರೆ, ಬೇರೆ ಕೆಲವರು ಯೆರೆಮೀಯನು, ಇಲ್ಲವೇ ಪ್ರವಾದಿಗಳಲ್ಲಿ ಒಬ್ಬನು ಅನ್ನುತ್ತಾರೆ" ಎಂದು ಹೇಳಿದನು (ಮತ್ತಾಯ 16:13, 14). ಅವರ ಉತ್ತರದ ನಂತರ ಯೇಸುವು, "ಆದರೆ ನೀವು ನನ್ನನ್ನು ಯಾರನ್ನುತ್ತೀರಿ?" ಎಂದು ಕೇಳಿದನು. ಪೇತ್ರನು ಆತನಿಗೆ ಉತ್ತರ ಕೊಟ್ಟನು. "ನೀನು ಬರಬೇಕಾಗಿರುವ ಕ್ರಿಸ್ತನು, ಸಜೀವನಾದ ದೇವರ ಕುಮಾರನು" (ಮತ್ತಾಯ 16:15, 16) ಎಂದು ಹೇಳಿದನು. ಪೇತ್ರನ ಉತ್ತರವನ್ನು ಯೇಸು ಮೆಚ್ಚಿಕೊಂಡನು. ಮತ್ತು "ಯೋನನ ಮಗನಾದ ಸೀಮೋನನೇ, ನೀನು ಧನ್ಯನು; ಈ ಗುಟ್ಟು ನಿನಗೆ ತಿಳಿಸಿದವನು ನರಮನುಷ್ಯನಲ್ಲ, ಪರಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು" (ಮತ್ತಾಯ 16:17) ಎಂದು ಯೇಸು ಹೇಳಿದನು. "ಪೇತ್ರನೇ, ನೀನು ಮನುಷ್ಯರು ಹೇಳಿದ್ದರ ಮೇಲೆ ಅವಲಂಭಿಸಿ ನೀನು

ಈ ತೀರ್ಮಾನಕ್ಕೆ ಬರಲಿಲ್ಲ. ಪರಲೋಕದಲ್ಲಿಯ ದೇವರಿಂದ ಈ ಉತ್ತರವನ್ನು ಸ್ವೀಕರಿಸಿದ್ದೀ" ಎಂದು ಯೇಸು ಹೇಳಿದನೆಂದು ಬೇರೆ ಮಾತುಗಳಲ್ಲಿ ಹೇಳಬಹುದು. ಇದು ದೈವಿಕ ಪ್ರಕಟಣೆಯಾಗಿತ್ತು, ಆದರೆ ಮಾನವರ ಅನುಮಾನವಾಗಿರಲಿಲ್ಲ.

ಹೊಸ ಒಡಂಬಡಿಕೆಯು ಯೇಸುವನ್ನು ಸಂಬಂಧಿಸಿ ಹೇಗೆ ಹೇಳುತ್ತದೆಂಬುದನ್ನು ಆಲೋಚಿಸಿರಿ. ಅದು ಆತನನ್ನು "ಕ್ರಿಸ್ತ" ಎಂದು ಕರೆಯುವಂತೆ, ಅದು ಆತನನ್ನು ಒಬ್ಬಾತನು, ದೇವರಿಂದ ವಿಶೇಷವಾಗಿ ಆಯ್ಕೆಮಾಡಲ್ಪಟ್ಟಾತನು ಎಂದು ಗುರುತಿಸುತ್ತದೆ. ಆತನು ಒಬ್ಬಾತನ ಮುಂದೂತನಲ್ಲ, ಆತನೇ ಒಬ್ಬಾತನಾಗಿದ್ದಾನೆ. ಆಯ್ಕೆಯಾದಾತನ ಬರೋಣದ ಬಗ್ಗೆ ಆತನು ಮುಂತಿಳಿಸಲಿಲ್ಲ, ಆಯ್ಕೆಯಾದಾತನನ್ನು ಕುರಿತ ಎಲ್ಲಾ ಪ್ರವಾದನೆಗಳನ್ನು ನೆರವೇರಿಸಿದಾತನು ಆತನಾಗಿದ್ದಾನೆ, ಆಯ್ಕೆಯಾದಾತನೊಂದಿಗೆ ಕೇವಲ ಸಂಬಂಧಿಸಿದವನು ಆತನಾಗಿರಲಿಲ್ಲ. ಆದರೆ ಆತನು ಆಯ್ಕೆಯಾದಾತನೇ ಆಗಿದ್ದನು.

## ದೇವರ ಕುಮಾರನಂತೆ

ಮೂರನೆಯದು, ಯೇಸುವು ಹೊಸ ಒಡಂಬಡಿಕೆಯಲ್ಲಿ ದೇವರ ಕುಮಾರನಂತೆ, ದೈವತ್ವದ ಎರಡನೆಯ ಸದಸ್ಯನಂತೆ ಗುರುತಿಸಲ್ಪಟ್ಟಿದ್ದಾನೆ.

ಯೇಸುವಿನ ಭೂಲೋಕದ ಸೇವೆಗಾಗಿ ಮಾರ್ಗ ಸಿದ್ಧಮಾಡಲು ಸ್ನಾನಿಕನಾದ ಯೋಹಾನನು ದೇವರಿಂದ ಆಯ್ಕೆ ಮಾಡಲ್ಪಟ್ಟನು. ಅವನು ಮಾನಸಾಂತರವನ್ನು ಪ್ರಸಂಗಿಸುವದರಿಂದಲೂ ಪಾಪಗಳ ಕ್ಷಮಾಪಣೆಗಾಗಿ ಮಾನಸಾಂತರದ ಬಾಪ್ತಿಸ್ಮವನ್ನು ಕೊಡುವದರಿಂದಲೂ ಈ ಕಾರ್ಯವನ್ನು ಮಾಡಿದನು (ಮಾರ್ಕ 1:4). ತನ್ನ ಪ್ರಸಂಗಕ್ಕೆ ಪ್ರತಿಕ್ರಿಯೆ ತೋರಿಸಿದವರಿಗೆ ಬರಲಿಕ್ಕಿದ್ದ ಮೆಸ್ಸೀಯನ ಕಡೆಗೆ ತೋರಿಸಿದನು. ತಮ್ಮ ಮಾನಸಾಂತರ ಮತ್ತು ಬಾಪ್ತಿಸ್ಮದಲ್ಲಿ ಜನರು ಮೆಸ್ಸೀಯನು ಬಂದಾಗ ಆತನನ್ನು ಸ್ವೀಕರಿಸುವ ಪ್ರತಿಜ್ಞೆ ಮಾಡುತ್ತಿದ್ದರು (ಅಪೊಸ್ತಲರ ಕೃತ್ಯಗಳು 19:4). ಯೋಹಾನನು, ದೇವರು ತನಗೆ ಕೊಟ್ಟ ಸೇವೆಯನ್ನು ನೆರವೇರಿ ಸುತ್ತಿದ್ದಂತೆ ಎಲ್ಲಾ ಯೂದಾಯದಿಂದಲೂ ಯೊರ್ದನಿನ ಸುತ್ತಲಿನ ಎಲ್ಲಾ ಸ್ಥಳಗಳಿಂದಲೂ ಜನರು ಆತನ ಬಳಿಗೆ ಬಂದು ಅವನಿಂದ ಬಾಪ್ತಿಸ್ಮ ಹೊಂದಿದರು (ಮತ್ತಾಯ 3:5). ಒಂದು ದಿನ ಯೋಹಾನನು ಹೊಳೆಯಲ್ಲಿ ಜನರಿಗೆ ಬಾಪ್ತಿಸ್ಮ ಕೊಡುತಿದ್ದಾಗ, ಯೇಸು ಯೋರ್ದನ್ ತೀರಗಳಲ್ಲಿ ಕಾಣಿಸಿಕೊಂಡನು, ಆ ಸಮಯದಲ್ಲಿ ಯೇಸು ಮೆಸ್ಸೀಯನಾಗಿದ್ದಾನೆಂಬುದನ್ನು ಯೋಹಾನನು ಸ್ಪಷ್ಟವಾಗಿ ತಿಳಿದಿರಲಿಲ್ಲ (ಯೋಹಾನ 1:29-31). ಆದರೆ ಯೇಸುವು ತನಗಿಂತ ಉತ್ತಮವಾದ ಮನುಷ್ಯನೆಂದು ತಿಳಿದಿದ್ದನು. ಹೀಗಿದ್ದಾಗ, "ನಾನು ನಿನ್ನಿಂದ

ಬಾಪ್ತಿಸ್ಮ ಮಾಡಿಸಿ ಕೊಳ್ಳುವವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವದೇನು?" ಎಂದು ಹೇಳಿದನು. ಅದಕ್ಕೆ ಯೇಸು, "ಸಧ್ಯಕ್ಕೆ ಒಪ್ಪಿಕೋ. ಹೀಗೆ ನಾವು ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ" (ಮತ್ತಾಯ 3:15) ಎಂದು ಹೇಳಿದನು. ಯೋಹಾನನು ದೇವರ ಕಾರ್ಯ ಮಾಡುತ್ತಿದ್ದನು. ಅವನು ದೇವರಿಂದ ಕಳುಹಿಸಲ್ಪಟ್ಟ ಮನುಷ್ಯನಾಗಿದ್ದನು. ಭೂಲೋಕದಲ್ಲಿದ್ದಾಗ ಯೇಸುವು ದೇವರ ಚಿತ್ತಕ್ಕೆ ಸಂಪೂರ್ಣವಾಗಿ ಸಮರ್ಪಿತನಾಗಿರಲು ಬಯಸಿದನು. ಹೀಗೆ ಆತನು ವಿಧೇಯತೆಯಿಂದ ಯೋಹಾನನಿಂದ ಬಾಪ್ತಿಸ್ಮ ಹೊಂದಿದನು - ಕ್ಷಮಿಸಲ್ಪಡ ಬೇಕಾದ ಅವಶ್ಯಕತೆಯುಳ್ಳ ಪಾಪಗಳು ಆತನಲ್ಲಿ ಇದ್ದವು ಎಂಬುದಾಗಿ ಅಲ್ಲ, ಆತನಿಗೆ ಮಾನಸಾಂತರದ ಅವಶ್ಯಕತೆಯಿತ್ತೆಂಬುದಕ್ಕಾಗಿಯೂ ಅಲ್ಲ, ಮೆಸ್ಸೀಯನು ಬಂದಾಗ ಆತನನ್ನು ಸ್ವೀಕರಿಸುವ ಅಗತ್ಯತೆ ಆತನಿಗಿತ್ತು ಎಂಬುದಕ್ಕಾಗಿಯೂ ಅಲ್ಲ. ಆತನೇ ಮೆಸ್ಸೀಯನಾಗಿದ್ದನು. ಆದರೆ ದೇವರ ಚಿತ್ತವನ್ನು ನೆರವೇರಿ ಸಲು, ಎಲ್ಲಾ ನೀತಿ ಯನ್ನು ನೆರವೇರಿಸಲು ಆತನು ಯೋಹಾನನ ಬಾಪ್ತಿಸ್ಮಕ್ಕೆ ಒಪ್ಪಿಸಿಕೊಂಡನು.

ಯೋಹಾನನು ಯೇಸುವನ್ನು ಮುಳುಗೇಳಿಸಿದನಂತರ ನೀರಿನಿಂದ ಹೊರಗೆ ಬಂದಾಗ, ದೇವರ ಆತ್ಮನು ಪರಲೋಕದಿಂದ ಆತನ ಮೇಲೆ ಇಳಿದು ಬಂದನು. ಈ ಅದ್ಭುತಕರವಾದ ಸಂಗತಿಯನ್ನು ಯೋಹಾನನು ನೋಡಿದಾಗ, ಯೇಸುವು ಮೆಸ್ಸೀಯನಾಗಿದ್ದಾನೆಂದು ಅವನು ತಿಳಿದುಕೊಂಡನು (ಯೋಹಾನ 1:32-34). ಆಗ ಪರಲೋಕದಿಂದ ಒಂದು ಧ್ವನಿಯು, "ನನ್ನ ಪ್ರಿಯ ಕುಮಾರನು, ಈತನನ್ನು ನಾನು ಮೆಚ್ಚಿದ್ದೇನೆ" ಎಂದು ಹೇಳಿತು (ಮತ್ತಾಯ 3:17). ಹೊಸ ಒಡಂಬಡಿಕೆಯ ಈ ವಚನಗಳಲ್ಲಿ ಒಂದುಗೂಡಿಸಿದ್ದು ಯೇಸುವು ತನ್ನ ಕುಮಾರನೆಂದು ದೇವರ ಸಾಕ್ಷಿಯಾಗಿದೆ.

ಅಪೊಸ್ತಲ ಯೋಹಾನನು ಯೇಸುವು ದೇವರ ಕುಮಾರನಾಗಿದ್ದಾನೆಂದು ಮೂರು ಸಾಕ್ಷಿಗಳು ನಮಗೆ ಕೊಡಲ್ಪಟ್ಟಿವೆಯೆಂದು ಹೇಳಿದನು. "ಆತ್ಮ, ನೀರು, ರಕ್ತ ಎಂಬ ಮೂರು ಸಾಕ್ಷಿಗಳುಂಟು: ಈ ಮೂರು ಒಂದೇ ಅಭಿಪ್ರಾಯವಾಗಿ ಸಾಕ್ಷಿ ಹೇಳುತ್ತವೆ" (1 ಯೋಹಾನ 5:7, 8) ಎಂದು ಅವನು ಹೇಳಿದನು. ಯೇಸುವಿನ ಬಾಪ್ತಿಸ್ಮದ ನಂತರ ಪರಿಶುದ್ಧಾತ್ಮನು ಆತನ ಮೇಲೆ ಇಳಿದು ಬಂದು ಯೇಸುವು ದೇವರ ಕುಮಾರನಾಗಿರುವನೆಂಬುದಕ್ಕೆ ಸಾಕ್ಷಿ ಕೊಟ್ಟನು. ಪರಿಶುದ್ಧಾತ್ಮನು ಸುವಾರ್ತೆಗಳಲ್ಲಿ, ಬೇರೆ ಸಮಯಗಳಲ್ಲಿಯೂ ಸಹ ಈ ಸಾಕ್ಷಿಯನ್ನು ಕೊಟ್ಟನು. ಯೇಸುವು ತನ್ನ ಕುಮಾರನಾಗಿದ್ದನು ಎಂದು ತಂದೆಯು ಪರಲೋಕದಿಂದ ಹೇಳುವಾಗ "ನೀರು" ಯೇಸುವಿನ ಬಾಪ್ತಿಸ್ಮಕ್ಕೆ ಸಂಬಂಧಿಸಿದೆ. ಯೋಹಾನನು ಸೂಚಿಸಿದ "ರಕ್ತ"ವು ಯೇಸುವಿನ ಮರಣವನ್ನು ಪ್ರತಿನಿಧೀಕರಿಸುತ್ತದೆ. ಶಿಲುಬೆಯ ಸುತ್ತಲೂ ಇದ್ದ ಅದ್ಭುತಕರವಾದ ಘಟನೆಗಳು ಯೇಸುವಿನ ದೈವತ್ವಕ್ಕೆ ಸಾಕ್ಷಿ

ಕೊಡುತ್ತವೆ. "ನಾವು ಮನುಷ್ಯರ ಸಾಕ್ಷಿಯನ್ನು ತೆಗೆದು ಕೊಳ್ಳುತ್ತೇವಲ್ಲಾ; ದೇವರ ಸಾಕ್ಷಿಯು ಅದಕ್ಕಿಂತ ವಿಶೇಷವಾಗಿದೆ. ದೇವರು ಕೊಟ್ಟ ಸಾಕ್ಷಿ ಏನಂದರೆ ಆತನು ತನ್ನ ಮಗನ ವಿಷಯದಲ್ಲಿ ಹೇಳಿದ್ದೇ" (1 ಯೋಹಾನ 5:9) ಎಂದು ಯೋಹಾನನು ಹೇಳಿದನು. ಮೂವರು ಪ್ರಾಮಾಣಿಕ ಜನರು ಒಂದಾಗಿ ಒಂದು ಸತ್ಯದ ಬಗ್ಗೆ ಸಾಕ್ಷಿಕೊಟ್ಟರೆ ನಾವು ಅವರ ಸಾಕ್ಷಿಯನ್ನು ಸ್ವೀಕರಿಸುತ್ತೇವೆ. ದೇಶದ ಯಾವುದೇ ಕಾನೂನು ನ್ಯಾಯಾಲಯವೂ ಸ್ವೀಕರಿಸುತ್ತದೆ. ದೇವರ ಸಾಕ್ಷಿಗಿಂತ ಹೆಚ್ಚಿನ ಯಾವುದನ್ನು ನಿರೀಕ್ಷಿಸೋಣ! ಆತನು ತನ್ನ ಮಗನನ್ನು ಕುರಿತು ಸಾಕ್ಷಿಕೊಟ್ಟಿದ್ದಾನೆ - ಅದು ಆತ್ಮನ ಸಾಕ್ಷಿಯಾಗಿದೆ (ಯೇಸುವಿನ ಬಾಪ್ತಿಸ್ಮದ ಸಮಯದಲ್ಲಿ ಪಾರಿವಾಳದ ರೂಪದಲ್ಲಿ). ಅದು ನೀರಿನ ಸಾಕ್ಷಿಯಾಗಿದೆ (ಯೇಸುವಿನ ಬಾಪ್ತಿಸ್ಮದಲ್ಲಿ ತಂದೆಯ ಧ್ವನಿಯು ಕೇಳಿಸಲ್ಪಟ್ಟಾಗ) ಹಾಗೂ ಅದು ರಕ್ತದ ಸಾಕ್ಷಿಯಾಗಿದೆ (ಯೇಸುವಿನ ಮರಣದ ಸಮಯದಲ್ಲಿ ಅದ್ಭುತಗಳು ಸಂಭವಿಸಿದಾಗ).

ಯೇಸುವು ಯಾರು? ಉತ್ತರದ ಬಗ್ಗೆ ಪರಿಶುದ್ಧ ಬರಹಗಳು ಯಾವ ಸಂಶಯವನ್ನೂ ಉಳಿಸಿರುವದಿಲ್ಲ. ಹೊಸ ಒಡಂಬಡಿಕೆಯು ಯೇಸುವು ದೇವರ ಕುಮಾರನಾಗಿದ್ದಾನೆ. ಯೇಸುವನ್ನು ಅಲಕ್ಷಿಸಬಾರದು ಎಂದು ಸ್ಪಷ್ಟವಾಗಿ ಬೋಧಿಸುತ್ತದೆ.

## ಕರ್ತನಂತೆ

ನಾಲ್ಕನೆಯದು, ಹೊಸ ಒಡಂಬಡಿಕೆಯು ಯೇಸುವನ್ನು "ಕರ್ತನು" ಎಂದು ಕರೆಯುತ್ತದೆ. ಆತನು ನಮ್ಮ ಪರಮ ಶ್ರೇಷ್ಠ ಅಧಿಪತಿಯು, ಆತನಿಗೆ ದೇವರಿಂದ ಎಲ್ಲಾ ಅಧಿಕಾರಗಳು ಕೊಡಲ್ಪಟ್ಟಿವೆ.

ಯೇಸುವು ಸತ್ತವರೊಳಗಿಂದ ಪುನರುತ್ಥಾನ ಹೊಂದಿದನಂತರ, ಆತನು ತನ್ನ ಶಿಷ್ಯರಿಗೆ ಕಾಣಿಸಿಕೊಂಡನು. ತಾನು ನಿಜವಾಗಿಯೂ ಸತ್ತವರೊಳಗಿಂದ ಎದ್ದು ಬಂದಿದ್ದೇನೆಂದು ಪ್ರದರ್ಶಿಸಿದನು. ಯೇಸುವು ತನ್ನ ಶಿಷ್ಯರಿಗೆ ಹೀಗೆ ಹೇಳಿದನು,

> ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟು ಹೋಗಿ, ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ, ಅವರಿಗೆ ತಂದೆಯ, ಕುಮಾರನ, ಪರಿಶುದ್ಧಾತ್ಮನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕೈಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಸದಾಕಾಲ ನಿಮ್ಮ ಸಂಗಡ ಇರುತ್ತೇನೆ (ಮತ್ತಾಯ 28:18-20).

ಯೇಸು ತಂದೆಯ ಬಳಿಗೆ ಏರಿಹೋದನಂತರ ಹತ್ತು ದಿನಗಳ ಮೇಲೆ, ಪರಿಶುದ್ಧಾತ್ಮನು ಅಪೊಸ್ತಲರ ಮೇಲೆ ಸುರಿಸಲ್ಪಟ್ಟನು. ಆ ದಿನದಂದು ಅಂದರೆ ಪಂಚಾಶತ್ತಮ ದಿನದಂದು, ಅಲ್ಲಿ ಕೂಡಿ ಬಂದಿದ್ದ ದೊಡ್ಡ ಜನಸಮೂಹಕ್ಕೆ ಪೇತ್ರನು ಮಾತಾಡಿದನು. ಯೇಸುವು ಕ್ರಿಸ್ತನೆಂದು ರುಜುವಾತುಪಡಿಸುವ ಪುರಾವೆಯನ್ನು ಅವನು ಕೊಟ್ಟನು. ಅವನು ತನ್ನ ಪ್ರಸಂಗದ ಅಂತ್ಯಕ್ಕೆ ಬಂದಾಗ, ದೇವರು ಯೇಸುವನ್ನು "ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ" (ಅಪೊಸ್ತಲರ ಕೃತ್ಯಗಳು 2:36) ಮಾಡಿದ್ದಾನೆಂದು ತಿಳಿಯ ಬೇಕೆಂದು ಹೇಳಿದನು. ಯೇಸುವು ಮನುಷ್ಯನಾಗಲು ಮತ್ತು ಮರಣದ ಮಟ್ಟಿಗೆ ವಿಧೇಯನಾದದ್ದನ್ನು ವಿವರಿಸಿ ಪೌಲನು ಹೀಗೆ ಬರೆದಿದ್ದಾನೆ,

> ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದದರಿಂದ ಪರಲೋಕ, ಭೂಲೋಕ, ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು (ಫಿಲಿಪ್ಪಿ 2:9-11).

"ಆತನು [ದೇವರು] ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು, ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಅತನ ದೇಹವಾಗಿದೆ; ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ" (ಎಫೆಸ 1:22, 23) ಎಂದು ಯೇಸುವಿನ ಬಗ್ಗೆ ಪೌಲನು ಬರೆದನು.

ಹೊಸ ಒಡಂಬಡಿಕೆಯ ಪ್ರಕಾರವಾಗಿ ಯೇಸುವಿನ ಒಡೆತನದ ಅರ್ಥ ಏನಾಗುತ್ತದೆ? ವ್ಯವಹಾರಿಕ ಮಾತುಗಳಲ್ಲಿ ನಾವು ಆತನಿಗೆ ಒಪ್ಪಿಸಿಕೊಡುವಂಥದ್ದು ಎಂದು ಅರ್ಥವಾಗುತ್ತದೆ. "ನೀವು ನನ್ನನ್ನು 'ಕರ್ತನೇ, ಕರ್ತನೇ' ಅಂತ ಕರೆದು ನಾನು ಹೇಳುವದನ್ನು ನಡಿಸದೆ ಇರುವುದೇಕೆ?" (ಲೂಕ 6:46) ಎಂದು ಯೇಸು ಹೇಳಿದನು. "ನನ್ನನ್ನು ಕರ್ತನೇ, ಕರ್ತನೇ ಅನ್ನುವವರೆಲ್ಲರು ಪರಲೋಕ ರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯಕ್ಕೆ ಸೇರುವನು" (ಮತ್ತಾಯ 7:21) ಎಂದೂ ಹೇಳಿದನು. ಕ್ರಿಸ್ತನ ಬೋಧನೆಗೆ ನಿಮ್ಮನ್ನು ಒಪ್ಪಿಸಿಕೊಡಲು ನೀವು ಸಿದ್ಧರಿರುವಿರೋ? ಎರಡನೆಯದು, ನಮ್ಮ ಜೀವಿತಗಳಲ್ಲಿ ಕ್ರಿಸ್ತನಿಗೆ ಪ್ರಾಧಾನ್ಯತೆ ಕೊಡತಕ್ಕದ್ದೆಂದು ಅದರ ಅರ್ಥವಾಗುತ್ತದೆ. ನಾವು ಆತನಿಗೆ ನಮ್ಮ ನಿಷ್ಠೆಯನ್ನು ನಮ್ಮ ಪ್ರೀತಿಯನ್ನು ಕೊಡತಕ್ಕದ್ದು, ಪರಲೋಕದಿಂದ ಗೌರವಿಸಲ್ಪಟ್ಟ

ಕರ್ತನು ಆತನಾಗಿದ್ದಾನೆ. ನಮ್ಮ ಹೃದಯಗಳಲ್ಲಿ ಆತನೊಬ್ಬನೇ ಕರ್ತನಾಗಿ ಸಿಂಹಾಸನರೂಢನಾಗಿರತಕ್ಕದ್ದು.

"ಪ್ರತಿಯೊಂದು ಹೃದಯದಲ್ಲಿ ಒಂದು ಶಿಲುಬೆಯು ಹಾಗೂ ಒಂದು ಸಿಂಹಾಸನವು ಇರುವುದು. ನಾನು ಸಿಂಹಾಸನದ ಮೇಲೆ ನನ್ನನ್ನು ಇಟ್ಟುಕೊಂಡರೆ, ಕ್ರಿಸ್ತನನ್ನು ಶಿಲುಬೆಯ ಮೇಲೆ ಹಾಕುವೆನು. ನಾನು ಕ್ರಿಸ್ತನನ್ನು ಸಿಂಹಾಸನದ ಮೇಲೆ ಇಟ್ಟರೆ, ನನ್ನನ್ನು ನಾನು ಶಿಲುಬೆಯ ಮೇಲೆ ಹಾಕಿಕೊಳ್ಳತಕ್ಕದ್ದು" ಎಂದು ಒಬ್ಬನು ಹೇಳಿದ್ದಾನೆ. ಯಾರೊಬ್ಬನಿಗೂ ಇಬ್ಬರು ಯಜಮಾನರು ಇರಲಾರರು. ನೀವು ಕ್ರಿಸ್ತನ ಒಡೆತನಕ್ಕೆ "ಹೌದು" ಎಂದು ಹೇಳಿದರೆ, ನೀವು ನಿಮ್ಮ ಸ್ವಂತ ಇಚ್ಛೆ ಮತ್ತು ಬಯಕೆಗಳಿಗೆ 'ಇಲ್ಲ' ಎಂಬ ಉತ್ತರ ಕೊಡತಕ್ಕದ್ದು. ನೀವು ಒಬ್ಬನನ್ನು ಪ್ರೀತಿಸುವಿರಿ ಹಾಗೂ ಇನ್ನೊಬ್ಬನನ್ನು ದ್ವೇಷಿಸುವಿರಿ (ಮತ್ತಾಯ 6:24).

ಯೇಸುವು ಕರ್ತನೆಂದು ಹೊಸ ಒಡಂಬಡಿಕೆ ಹೇಳುತ್ತದೆ. ದೇವರು ಪ್ರತಿಯೊಂದನ್ನು ಆತನ ಪಾದಗಳ ಕೆಳಗೆ ಹಾಕಿದ್ದಾನೆ. ಆತನು ಅರಸರ ಅರಸನೂ ಕರ್ತರ ಕರ್ತನೂ ಆಗಿದ್ದಾನೆ.

## ಮುಕ್ತಾಯ

ಹಾಗಾದರೆ, ಯೇಸುವು ಯಾರು? ಜಗತ್ತಿನಲ್ಲಿ ಕೇವಲ ಸಂಪೂರ್ಣವಾಗಿ ಖಚಿತವಾಗಿರುವ ಪುಸ್ತಕವು ಆತನು ನಮ್ಮ ರಕ್ಷಕನು, ಕ್ರಿಸ್ತನು, ದೇವರಿಂದ ಆಯ್ಕೆಯಾದಾತನು, ದೇವರ ಕುಮಾರನು ಮತ್ತು ನಮ್ಮ ಕರ್ತನು ಆಗಿದ್ದಾನೆಂದು ಹೇಳುತ್ತದೆ. ಇದು ಆತನ ಬಗೆಗಿರುವ ಸತ್ಯವಾಗಿದೆ. ಆತನು ಯಾರಾಗಿರುವನೆಂಬುದನ್ನು ನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ನೀವು ಬೇರೆ ಇತರ ಸಂಶೋಧನೆಗಾಗಿ ಕಾಯಬೇಕಾಗಿರುವದಿಲ್ಲ. ಬೈಬಲು ಆತನ ಬಗ್ಗೆ ಪರಿಪೂರ್ಣ ಸತ್ಯವನ್ನು ಹೇಳುತ್ತದೆ.

ಯೇಸುವು ಈ ಲೋಕದೊಳಗೆ ಬಂದದ್ದು ಕ್ಯಾಲಂಡರು ಕ್ರಿ.ಪೂ. ಮತ್ತು ಕ್ರಿ.ಶ. ಎಂದು ವಿಭಾಗಿಸಿದೆ. ಮಾನವ ಜನಾಂಗವನ್ನು, ರಕ್ಷಿಸಲ್ಪಟ್ಟವರನ್ನು ತಪ್ಪಿ ಹೋದವರಿಂದ ವಿಂಗಡಿಸುವದೆಂದು ಮತ್ತಾಯ 25:31-46 ಹೇಳುತ್ತದೆ. ಯೇಸು ತನ್ನ ಮುಂದೆ ನ್ಯಾಯತೀರ್ವಿಕೆಗಾಗಿ ನಿಂತಿರುವನೆಂದು ಪಿಲಾತನು ಯೋಚಿಸಿದನು. ಆದರೆ ಸತ್ಯದಲ್ಲಿ ಪಿಲಾತನು ಯೇಸುವಿನ ಮುಂದೆ ನಿಂತುಕೊಂಡಿದ್ದನು. ಲೋಕದ ಅಂತಿಮ ದಿನದಂದು, ಯೇಸುವಿನ ಸಿಂಹಾಸನದ ಬಲಗಡೆಯಲ್ಲಿ ರಕ್ಷಿಸಲ್ಪಟ್ಟವರು ನಿಂತು ಕೊಳ್ಳುವರು. ತಪ್ಪಿ ಹೋದವರು ಆತನ ಸಿಂಹಾಸನದ ಎಡಗಡೆಯಲ್ಲಿ ನಿಂತುಕೊಳ್ಳುವರು. ನಿಮ್ಮ ಪ್ರತಿಕ್ರಿಯೆಯು ನೀವು ಆತನ ಬಲಗಡೆಯಲ್ಲಿ ನಿಲ್ಲುವಿರೋ, ಎಡಗಡೆಯಲ್ಲಿ ನಿಲ್ಲುವಿರೋ ಎಂಬುದು

ಭಿನ್ನತೆ ಮಾಡುವುದು. ಆತನ ರಕ್ಷಣೆಯ ಮುಖಾಂತರ ನೀವು ಆತನ ಬಲಗಡೆಯಲ್ಲಿ ನಿಲ್ಲಬಹುದು. "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ: ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ" (ಯೋಹಾನ 14:6) ಎಂದು ಆತನು ಹೇಳಿದ್ದಾನೆ. ನೀವು ಯೇಸುವಿನ ಮುಖಾಂತರ ದೇವರ ಬಳಿಗೆ ಬರುವಿರಿ ಇಲ್ಲವೇ ನಿತ್ಯದಂಡನೆಯನ್ನು ಅನುಭವಿಸುವಿರಿ. ನಿಮಗೆ ಜೀವವಿರಬೇಕೆಂದು ಆತನು ಬಂದನು (ಯೋಹಾನ 10:10). ಆತನಿಲ್ಲದಿದ್ದರೆ ನಾವು ನಿತ್ಯ ಮರಣದಲ್ಲಿ ನೆಲೆಗೊಂಡಿರುವೆವು.

ರಕ್ಷಣೆಗಾಗಿ ತನ್ನ ಬಳಿಗೆ ಬರಬೇಕೆಂದು ಯೇಸು ನಮ್ಮನ್ನು ಆಹ್ವಾನಿಸುತ್ತಾನೆ. ಇತರ ಧಾರ್ಮಿಕ ನಾಯಕರು ತಮ್ಮ ಪದ್ಧತಿಗಳಿಗೆ ಇಲ್ಲವೇ ತಮ್ಮ ಬೋಧನೆಗಳಿಗೆ ಬರಬೇಕೆಂದು ಕರೆಯುತ್ತಾರೆ. ಯೇಸುವು, ದೇವರ ಕುಮಾರನು ಮಾತ್ರವೇ. ತನ್ನ ಬಳಿಗೆ ಬರಲು ನಮ್ಮನ್ನು ಆಮಂತ್ರಿಸುತ್ತಾನೆ: "ಎಲೈ, ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುವೆನು" (ಮತ್ತಾಯ 11:28) ಎಂದು ಹೇಳಿದ್ದಾನೆ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. "ರಕ್ಷಕ" ಎಂಬ ಪದವು ಯಾವುದನ್ನು ಕುರಿತು ಹೇಳುತ್ತದೆ?
2. ಯೇಸುವು ಹೇಗೆ ಅದ್ವಿತೀಯ ರಕ್ಷಕನಾಗಿರುವನು?
3. "ಕ್ರಿಸ್ತ" ಎಂಬುದರ ಅರ್ಥವೇನು?
4. ಯೇಸುವು ದೇವರ ಕುಮಾರನಾಗಿದ್ದಾನೆಂದು ನಾವು ಹೇಗೆ ತಿಳಿದು ಕೊಳ್ಳುವೆವು?
5. 1 ಯೋಹಾನ 5:7, 8ರಲ್ಲಿ ಆತ್ಮ, ನೀರು ಮತ್ತು ರಕ್ತ ಯಾವುದನ್ನು ಕುರಿತು ಹೇಳುತ್ತದೆ?
6. ಅಪೊಸ್ತಲರ ಕೃತ್ಯಗಳು 2ರಲ್ಲಿ ಪೇತ್ರನು ತನ್ನ ಕೇಳುಗರು ಏನನ್ನು ತಿಳಿದುಕೊಳ್ಳ ಬೇಕೆಂದು ಕೇಳಿದನು?
7. ವ್ಯವಹಾರಿಕ ಮಾತುಗಳಲ್ಲಿ ಯೇಸುವಿನ ಒಡೆತನದ ಅರ್ಥ ನಮಗೇನಾಗುತ್ತದೆ?

## ಪದ ಸಹಾಯಗಳು

ದಾವೀದ ನಗರ - ಬೇತ್ಲೆಹೇಮ.

ಶಿಲುಬೆಯ ಮೇಲೆ ನೇತು ಹಾಕುವದರಿಂದ ಮರಣ - ಮರಣ ದಂಡನೆಯ ರೋಮನ್ನರ ವಿಧಾನ; ಯೇಸುವು ನಿರಪರಾಧಿಯಾಗಿದ್ದರೂ ನಮ್ಮ ಪಾಪಗಳ ನಿಮಿತ್ತವಾಗಿ ಶಿಲುಬೆಗೆ ಹಾಕಲ್ಪಟ್ಟನು.

ಅರಸರ ಅರಸನು ಹಾಗೂ ಕರ್ತರ ಕರ್ತನು - ಯೇಸುವಿನ ಹಾಗೂ ಆತನ ದೊಡ್ಡಸ್ತಿಕೆಗೆ ಸಂಬಂಧಿಸಿ ಹೇಳಿದ್ದು. ಆತನು ಇತರ ಎಲ್ಲರಿಗಿಂತಲೂ ಮೇಲಿನವನಾಗಿದ್ದಾನೆ.

ಪಂಚಾಶತ್ತಮ (ಪಂಚಾಶತ್ತಮ ದಿನ) - ಯೆಹೂದ್ಯರ ವಾರಗಳ ಹಬ್ಬ. ಸುಗ್ಗಿ ಹಬ್ಬವೆಂದೂ ಕರೆಯಲ್ಪಟ್ಟಿದೆ: ಸಭೆಯು ಪ್ರಾರಂಭವಾದ ದಿನ (ಅಪೊಸ್ತಲರ ಕೃತ್ಯಗಳು 2).

ಒಳಪಡುವಿಕೆ - ದೇವರಿಗೂ ಆತನ ವಾಕ್ಯಕ್ಕೂ ವಿಧೇಯತೆ.

8

# ಯೇಸುವು ಭೂಲೋಕಕ್ಕೆ ಯಾಕೆ ಬಂದನು?

ನೀವು ನಿಮ್ಮ ಪಟ್ಟಣದ ಬೀದಿಯಲ್ಲಿ ನಡೆದು ಹೋಗುತ್ತಿರುವಾಗ ಒಬ್ಬ ಸುದ್ದಿವರದಿಗಾರನು ನಿಮ್ಮ ಪಕ್ಕದಲ್ಲಿ ಬಂದು "ಜಗತ್ತಿನ ಆರಂಭದಿಂದ ಸಂಭವಿಸಿದ ಅತ್ಯಂತ ದೊಡ್ಡದಾದ ಒಂದೇ ಒಂದು ಘಟನೆಯು ಯಾವುದೆಂದು ನೀವು ನಂಬುತ್ತೀರಿ?" ಎಂದು ಪ್ರಶ್ನೆ ಮಾಡಿದರೆ ನೀವೇನು ಹೇಳುವಿರಿ? ನೀವು ಅವನಿಗೆ ಹೇಗೆ ಉತ್ತರ ಕೊಡುವಿರಿ? ಮಾನವ ಚರಿತ್ರೆಯಲ್ಲಿ ಇತರ ಎಲ್ಲಾ ಘಟನೆಗಳಿಗಿಂತ ದೊಡ್ಡದಾದ ಘಟನೆ ಯಾವುದು? ನಮ್ಮ ರಕ್ಷಕನಾಗಿರಲು ಲೋಕದೊಳಗೆ ಕರ್ತನಾದ ಯೇಸುವಿನ ಬರೋಣದೊಂದಿಗೆ ಸಂಬಂಧಿಸಿ ನನ್ನ ಉತ್ತರವಿರುವುದು.

ಜಗತ್ತಿನ ಚರಿತ್ರೆಯಲ್ಲಿ ಬಹಳವಾಗಿ ಪರಿಣಾಮ ಮಾಡಿದ ಘಟನೆಯು ಜೀವನವಾಗಿದೆ - ದೇವರ ಕುಮಾರನಾದ ಯೇಸುವು - ದೇಹಧಾರಿಯಾಗಿ, ಮನುಷ್ಯನಾಗಿ ಬಂದದ್ದು ಆಗಿರುವುದು. ದೇವರ ರೂಪದಲ್ಲಿ ಯೇಸುವು ಅಸ್ತಿತ್ವದಲ್ಲಿದ್ದರೂ ಯೇಸುವು ದೇವರೊಂದಿಗಿನ ಈ ಸರಿಸಮಾನತೆಗೆ ಅಂಟಿಕೊಂಡಿರ ಬೇಕೆಂದು ಯೋಚಿಸಲಿಲ್ಲ. ಆತನು "ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು" (ಫಿಲಿಪ್ಪಿ 2:7). ಯೋಹಾನನ ಪ್ರಕಾರವಾಗಿ, "ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು; ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು" (ಯೋಹಾನ 1:14).

ಕ್ರಿಸ್ತನು *ತಾನು ದೇವರಲ್ಲವೋ* ಎನ್ನುವಷ್ಟು *ಮಾನವನಾಗಿದ್ದನು.* ಮತ್ತು *ಮಾನವನಲ್ಲವೋ ಎನ್ನುವಷ್ಟು ದೇವರಾಗಿದ್ದನು* ಎಂದು ನಾವು ಹೇಳಬಹುದು. ಅಷ್ಟು ಸಂಪೂರ್ಣವಾಗಿ ಯೇಸುವು ಎಲ್ಲಾ ಮಾನವರಂತೆ ಜನಿಸಿ ಮಾನವ ಜನಾಂಗದೊಂದಿಗೆ ತನ್ನನ್ನು ಗುರುತಿಸಿ ಕೊಂಡನು (ಲೂಕ 2:6). ಎಲ್ಲಾ ಮಾನವರಂತೆ ಬೆಳೆದನು (ಲೂಕ 2:40). ಎಲ್ಲಾ ಮಾನವರಂತೆಯೇ ಎಲ್ಲಾ

ಶ್ರಮೆಗಳಿಗೆ ಒಳಗಾದನು (ಇಬ್ರಿಯ 5:8, 9), ರೋಗ, ಕೊಳೆಯುವಿಕೆ ಹಾಗೂ ಮರಣದಿಂದ ಪರಿಣಾಮಗೊಳ್ಳುವ - ಮಾನವರು ಶಿಲುಬೆಯ ಮೇಲೆ ಕೊಲ್ಲಬಹುದಾದ ದೇಹದಲ್ಲಿ ಆತನು ಜೀವಿಸಿದನು (ಫಿಲಿಪ್ಪಿ 2:8, 9). ಆತನು ಪರಿಪೂರ್ಣವಾಗಿ ಮಾನವನಾಗಿದ್ದನು. ಹೀಗೆ ಆತನು ಮನುಷ್ಯಕುಮಾರನಾಗಿದ್ದನು; ಆದಾಗ್ಯೂ ಆತನು ಪರಿಪೂರ್ಣವಾಗಿ ದೈವಿಕನಾಗಿದ್ದನು, ಹೀಗೆ ಆತನು ದೇವರ ಕುಮಾರನಾಗಿದ್ದನು (ಇಬ್ರಿಯ 2:14, 17, 18). ಆತನು ಒಂದೇ ವ್ಯಕ್ತಿತ್ವದಲ್ಲಿ ಮಾನವತೆಯೂ ದೈವತ್ವವೂ ಪರಿಪೂರ್ಣವಾಗಿ ಕೂಡಿಸಲ್ಪಟ್ಟವನಾಗಿದ್ದನು. ಆತನು ತನ್ನ ದೈವತ್ವವನ್ನು ಬಲಿಕೊಡದೇ ಮಾನವನಾದನು; ಆತನು ನಮ್ಮ ಹಾಗೆ ಆದರೂ ಆತನು ದೈವಿಕನಾಗಿಯೇ ಇದ್ದನು.

ಯೇಸುವು ಭೂಲೋಕಕ್ಕೆ ಬರುವದರ ರೀತಿಯು ಗಂಭೀರವಾದ ಪ್ರಶ್ನೆಗಳನ್ನು ಎಬ್ಬಿಸುತ್ತದೆ: ಯೇಸುವು ತಾನು ಮಾಡಿದ ರೀತಿಯಲ್ಲಿ ಭೂಲೋಕಕ್ಕೆ ಯಾಕೆ ಬಂದನು? ಮಾನವ ಜನಾಂಗದೊಳಗೆ ಪ್ರವೇಶಿಸಿ ನಮ್ಮ ಮಧ್ಯದಲ್ಲಿ ವಾಸ ಮಾಡಿ, ಹಾಗೂ ಶಿಲುಬೆಯ ಮೇಲೆ ಮರಣ ಹೊಂದುವ ಉದ್ದೇಶವೇನಿತ್ತು? ದೈವಿಕನಾದ ದೇವರ ಕುಮಾರನು ಸಂಪೂರ್ಣವಾಗಿ ಮಾನವನಾಗುವ ಮಟ್ಟಕ್ಕೆ ಯಾಕೆ ತನ್ನನ್ನು ತಗ್ಗಿಸಿಕೊಂಡನು? ಈ ಪ್ರಶ್ನೆಗಳಿಗೆ ಉತ್ತರಗಳು ಒಂದೇ ವಾಕ್ಯ ದಲ್ಲಿ ಸಾರಾಂಶವಾಗಿ ಹೇಳಲ್ಪಡಬಹುದು: "*ಆತನು ತನ್ನ ಸೇವೆ, ಮರಣ ಮತ್ತು ಪುನರುತ್ಥಾನದಿಂದ - ಆತನು ತನ್ನ ಸಭೆ ಎಂದು ಕರೆಯುವ ತನ್ನ ನಾಮಕ್ಕಾಗಿರುವ ಜನರನ್ನು - ಕರೆಯಲು ಆತನು ಬಂದನು*" (ಮಾರ್ಕ 10:45; ಲೂಕ 19:10).

ಈ ಭೂಲೋಕಕ್ಕೆ ಆತನ ಸಂದರ್ಶನದ ಪರಿಣಾಮವು ಸಭೆ ಎಂದು ಬೇರೆ ಮಾತುಗಳಲ್ಲಿ ಹೇಳಬಹುದು. ಯೇಸು ಒಂದು ಪುಸ್ತಕ ಬರೆಯಲಿಲ್ಲ, ಒಂದು ಕಾಲೇಜನ್ನು ಸ್ಥಾಪಿಸಲಿಲ್ಲ ಇಲ್ಲವೇ ಒಂದು ದೈಹಿಕ ಕುಟುಂಬವನ್ನು ಸ್ಥಾಪಿಸಲಿಲ್ಲ. ಆತನು ಭೂಲೋಕದ ಸೇವೆಯು ಉತ್ಪಾದಿಸಿದ ಒಂದೇ ವಾಸ್ತವಿಕತೆಯು ಸಭೆಯಾಗಿದೆ. ಯೇಸುವು ತಾನು ಕಟ್ಟುವೆನೆಂದು ಹೇಳಿದ ಕೇವಲ ದೇಹವು ಆತ್ಮಿಕ ದೇಹವಾಗಿತ್ತು. ಅದನ್ನು ಆತನು "ನನ್ನ ಸಭೆ" ಎಂದು ಕರೆದನು (ಮತ್ತಾಯ 16:18). ಯೇಸುವು ತನ್ನ ಸೇವೆಯ ಸಮಯದಲ್ಲಿ ಹಾಕಿದ ಕೇವಲ ಅಸ್ತಿವಾರವು ಸಭೆಗಾಗಿದ್ದ ಅಸ್ತಿವಾರವಾಗಿತ್ತು. ಆದುದರಿಂದ ಕ್ರಿಸ್ತನು ಭೂಲೋಕಕ್ಕೆ ಆಗಮಿಸಿದ್ದರ *ಏಕೈಕ ಸೃಷ್ಟಿಯು* ಸಭೆ ಎಂದು ಹೇಳಬಹುದು.

## ಸುವಾರ್ತೆಗಳಿಂದ ದೃಢೀಕರಿಸಲ್ಪಟ್ಟಿದೆ

ಈ ಸತ್ಯವು ಸುವಾರ್ತೆಗಳ ವಿವರಣೆಗಳಿಂದ ದೃಢೀಕರಿಸಲ್ಪಟ್ಟಿದೆ. ಸುವಾರ್ತೆ ಗಳಲ್ಲಿ ಪ್ರತಿಯೊಂದೂ ಯೇಸುವು ತನ್ನ ಮರಣ ಮತ್ತು ಪುನರುತ್ಥಾನದ ನಂತರ

ಮೊದಲನೆಯ ಪಂಚಾಶತ್ತಮ ದಿನದಂದು ಸ್ಥಾಪಿಸುವ ಪರಲೋಕ ರಾಜ್ಯದ, ಅಂದರೆ ಸಭೆಯ ಕಡೆಗೆ ತೋರಿಸುತ್ತದೆ ಹಾಗೂ ಅದಕ್ಕೆ ನಡಿಸುತ್ತದೆ.

ಸುವಾರ್ತೆಗಳಲ್ಲಿ ಕ್ರಿಸ್ತನ ಜೀವನವನ್ನು ಒಬ್ಬನು ಅಧ್ಯಯನ ಮಾಡುವಂತೆ ಆತನ ಸೇವೆಯನ್ನು ಕುರಿತು ಉದ್ಭವಿಸುವ ಮೂರು ವಿಷಯಗಳಿಂದ ಆಶ್ಚರ್ಯಗೊಳ್ಳುತ್ತಾರೆ: (1) ಆತನು ನೆರವೇರಿಸಲು ಹೊರಟ ಸೇವೆ, (2) ಇನ್ನೂ ಹೆಚ್ಚಿನದಕ್ಕಾಗಿ ಆತನ ಕಾರ್ಯ ಸಿದ್ಧಗೊಳಿಸಿದ ಮಾರ್ಗ, ಹಾಗೂ (3) ಆತನ ಕಾರ್ಯವು ಮುಂದುವರಿಯುವ ಮಾರ್ಗ.

*ಮೊದಲನೆಯದು, ಯೇಸುವು ತನ್ನ ವೈಯಕ್ತಿಕ ಸೇವೆಯ ಸಮಯದಲ್ಲಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಲು ಹೊರಟು ಹೋಗಲಿಲ್ಲ ಎಂಬುದನ್ನು ಸುವಾರ್ತೆಗಳು ಸೂಚಿಸುತ್ತವೆ.* ತನ್ನ ಅಪೊಸ್ತಲರನ್ನು ಆಯ್ಕೆ ಮಾಡಿಕೊಂಡ ತರುವಾಯ ಆತನು ಪ್ರಸಂಗಿಸುವದಕ್ಕೆ ಅವರಿಗೆ ವಿಶೇಷವಾದ ವಿಶ್ವವ್ಯಾಪ್ತಿ ನಿಯೋಗವನ್ನು ಕೊಡಲಿಲ್ಲ; "ಅನ್ಯಜನಗಳ ಕಡೆಗೆ ಹೋಗಬೇಡಿರಿ, ಸಮಾರ್ಯರ ಊರೊಳಗೆ ಕಾಲಿಡಬೇಡಿರಿ; ಇವರನ್ನು ಬಿಟ್ಟು ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರ ಬಳಿಗೆ ಹೋಗಿರಿ" (ಮತ್ತಾಯ 10:5ಬಿ, 6) ಎಂದು ಹೇಳುವದರಿಂದ ಅವರ ಅತ್ಯಾಸಕ್ತಿಯನ್ನು ಶಾಂತಗೊಳಿಸಿದನು. ನಮಗೆ ಆಶ್ಚರ್ಯವಾಗುವಂತೆ, ತನ್ನ ಸೇವೆಯಲ್ಲಿ ಯೇಸುವು ತನ್ನನ್ನು ಪಾಲೆಸ್ತೀನಿಗೆ ಮಿತಿಗೊಳಿಸಿ ಕೊಂಡಿದ್ದನು. ರೋಮನ್ ಜಗತ್ತಿನ ಹೊರಗಿನ ದೇಶಗಳಿಗೆ ಆತನು ಎಂದೂ ಹೋಗಲಿಲ್ಲ. ಜಗತ್ತಿನ ಬಹಳ ಚಿಕ್ಕ ಕ್ಷೇತ್ರದಲ್ಲಿ ಆತನ ಪ್ರಸಂಗ ಹಾಗೂ ಬೋಧನೆಯಿಂದ ಆತನ ನಿಯೋಗವು ಪೂರೈಸಲ್ಪಟ್ಟಿತು. ಯೇಸುವು ತನ್ನ ವೈಯಕ್ತಿಕ ಸೇವೆಯಲ್ಲಿ ಜಗತ್ತಿಗೆ ಸುವಾರ್ತೆಯನ್ನು ಸಾರುವದನ್ನು ಕೈಕೊಂಡಿದ್ದರೆ ಆತನು ಸಂಪೂರ್ಣವಾಗಿ ಭಿನ್ನವಾದ ರೀತಿಯಲ್ಲಿ ಹೆಚ್ಚು ವಿಶಾಲ ವಾದ ಮಟ್ಟದ ವಿಧಿವಿಧಾನಗಳನ್ನು ಉಪಯೋಗಿಸಬಹುದಿತ್ತು.

*ಎರಡನೆಯದು, ಯೇಸುವಿನ ಜೀವನ, ಕಾರ್ಯಗಳು ಹಾಗೂ ಮರಣವು ಬರಲಿಕ್ಕಿದ್ದಂಥದ್ದಕ್ಕಾಗಿ ಸಿದ್ಧತೆ ಮಾಡುವಂಥದ್ದದ್ದಾಗಿತ್ತೆಂದು ಸುವಾರ್ತೆಗಳು ಸೂಚಿಸುತ್ತವೆ.* "ದೇವರ ಕಡೆಗೆ ತಿರುಗಿಕೊಳ್ಳಿರಿ, ಪರಲೋಕ ರಾಜ್ಯವು ಸಮೀಪಿಸಿತು" (ಮತ್ತಾಯ 4:17ಬಿ) ಎಂದು ಯೇಸು ಪ್ರಸಂಗಿಸಿದನು, "ನಿನ್ನ ರಾಜ್ಯವು ಬರಲಿ" (ಮತ್ತಾಯ 6:10ಎ) ಎಂದು ಪ್ರಾರ್ಥಿಸಲು ಯೇಸು ತನ್ನ ಶಿಷ್ಯರಿಗೆ ಕಲಿಸಿದನು. ಜನ ಸಮೂಹವು ಆತನ ಅದ್ಭುತಗಳಿಂದ ಅತೀಯಾಗಿ ಉದ್ವೇಗಗೊಂಡು ಅದಕ್ಕೆ ಪ್ರತಿಯಾಗಿ ಆತನನ್ನು ಈ ಲೋಕದ ಅರಸನನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದುದನ್ನು ತಡೆಯುವಲ್ಲಿ ಯೇಸುವು ಜಾಗರೂಕನಾಗಿದ್ದನು. ಜನಸಮೂಹವು ತನ್ನ ಕಾರ್ಯಕ್ರಮ ಪಟ್ಟಿಯನ್ನು ನಿರ್ದೇಶಿಸಲು ಬಿಡಲಿಲ್ಲ. ಅದ್ಭುತ ಕಾರ್ಯಮಾಡಿದಾಗ, ಯೇಸುವು ಅದ್ಭುತ ಕಾರ್ಯ ಹೊಂದಿದವರಿಗೆ,

"ಯಾರಿಗೂ ಹೇಳಬೇಡಿರಿ" ಎಂದು ಕೆಲವು ಸಲ ಹೇಳಿದನು (ಮತ್ತಾಯ 8:4)[1] ಆತನು ಹನ್ನೆರಡು ಜನ ಅಪೊಸ್ತಲರನ್ನು ಆಯ್ದುಕೊಂಡನು. ವೈಯಕ್ತಿಕವಾಗಿ ಅವರಿಗೆ ತರಬೇತಿ ಕೊಟ್ಟನು. ಆದರೆ ಆತನು ಬಿಟ್ಟು ಹೊರಟು ಹೋದ ನಂತರ ಅವರು ಮಾಡಬೇಕಾಗಿದ್ದ ಕಾರ್ಯಕ್ಕಾಗಿ ಆತನು ಅವರಿಗೆ ತರಬೇತಿ ಕೊಡುತ್ತಿದ್ದನೆಂಬುದು ಸ್ಪಷ್ಟವಾಗಿವೆ (ಯೋಹಾನ 14:19).

*ಮೂರನೆಯದು, ಸುವಾರ್ತೆಗಳು ಯೇಸುವಿನ ಸೇವೆಯನ್ನು ಅದರ ಬಗ್ಗೆ ಅದು ಪರಿಪೂರ್ಣಗೊಳ್ಳದ ಅರ್ಥದಲ್ಲಿ ಚಿತ್ರಿಸುತ್ತದೆ.* ತಾನು ಮಾಡಬೇಕೆಂದು ತಂದೆಯು ತನ್ನನ್ನು ಕಳುಹಿಸಿದ್ದನ್ನು ಯೇಸುವು ಮಾಡಿದನು. ಭೂಲೋಕದಲ್ಲಿಯ ತನ್ನ ಜೀವನದ ಅಂತ್ಯದಲ್ಲಿ ತನ್ನ ದಿವಾರೋಹಣದ ನಂತರ ಬರುವ ಇತರ ಬೇರೆ ಘಟನೆಗಳನ್ನು ಪ್ರಕಟಣೆಗಳನ್ನೂ ನಿರೀಕ್ಷಿಸುವದಕ್ಕೆ ತನ್ನ ಅಪೊಸ್ತಲರನ್ನು ಸಿದ್ಧ ಪಡಿಸಿದನು. "ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿ ಕೊಡುವ ಪರಿಶುದ್ಧಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು" (ಯೋಹಾನ 14:26) ಎಂದು ಯೇಸು ಅಪೊಸ್ತಲರಿಗೆ ಹೇಳಿದನು. "ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು" (ಯೋಹಾನ 16:13) ಎಂದೂ ಆತನು ಅವರಿಗೆ ಹೇಳಿದನು. ಪುನರುತ್ಥಾನದ ನಂತರ ಹಾಗೂ ದಿವಾರೋಹಣದ ಮೊದಲು, ತನ್ನ ಅಪೊಸ್ತಲರು ಮೇಲಿಣಿಂದ ಬಲವನ್ನು ಹೊಂದುವ ತನಕ ಯೆರೂಸಲೇಮಿನಲ್ಲಿ ಕಾದು ಕೊಂಡಿರಬೇಕೆಂದು ಯೇಸು ತನ್ನ ಅಪೊಸ್ತಲರಿಗೆ ಆಜ್ಞಾಪಿಸಿದನು. ಬಲವನ್ನು ಹೊಂದಿದ ನಂತರ ಅವರು ಯೆರೂಸಲೇಮಿನಿಂದ ಪ್ರಾರಂಭಿಸಿ ಮಾನಸಾಂತರವನ್ನೂ, ಪಾಪಗಳ ಪರಿಹಾರವನ್ನೂ, ಎಲ್ಲಾ ಜನಾಂಗಗಳಿಗೆ ಪ್ರಸಂಗಿಸಬೇಕಾಗಿತ್ತು (ಲೂಕ 24:46-49).

ತನ್ನ ಮರಣದ ಮೊದಲಿನ ಮತ್ತು ನಂತರದ ನಮ್ಮ ಕರ್ತನ ಸೇವೆಯ ಈ ವಿಶಿಷ್ಠ ಗುಣಲಕ್ಷಣಗಳು ಭೂಲೋಕದಲ್ಲಿಯ ಆತನ ಸೇವೆಯು ತನ್ನ ರಾಜ್ಯವನ್ನು ಅಂದರೆ ಸಭೆಯನ್ನು ಕಟ್ಟುವದಕ್ಕಾಗಿ ಅವಶ್ಯವಾದ ಸಂಗತಿಗಳನ್ನು ಒಟ್ಟಾಗಿ ತರುವದಾಗಿತ್ತೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಮತ್ತಾಯ 16:18ರಲ್ಲಿ ಯೇಸುವು ತನ್ನ ಶಿಷ್ಯರಿಗೆ ತನ್ನ ಭೂಲೋಕದ ಸೇವೆಯ ಭಾರವನ್ನು ಪ್ರಕಟಿಸಿ ಹೇಳಿದನು, "ಮತ್ತು ನಾನೂ ನಿನಗೆ ಒಂದು ಮಾತನ್ನು ಹೇಳುತ್ತೇನೆ. ಅದೇನಂದರೆ - ನೀನು ಪೇತ್ರನು. ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳ ಲೋಕದ ಬಲವು ಅದನ್ನು ಸೋಲಿಸಲಾರದು." *ಹೀಗೆ ಯೇಸುವು ಸುವಾರ್ತೆಯನ್ನು ಸಾರುವದಕ್ಕೆ ಬರಲಿಲ್ಲ; ಪ್ರಸಂಗಿಸಲು ಸುವಾರ್ತೆಯು ಇರಬೇಕೆಂದು*

*ಆತನು ಬಂದನು.*

ಗುಟ್ಜೊನ್ ಬೋರ್ಗಲುಮ್ ಎಂಬ ಪ್ರಸಿದ್ಧ ಶಿಲ್ಪಿಯೂ ದಕ್ಷಿಣ ಡಕೋಟಾದಲ್ಲಿ ಮೌಂಟ ರಶ್ಮೋರನ್ನು ಕೆತ್ತಿದವನು, ವಾಷಿಂಗ್ಟನ್ ಡಿ. ಸಿ. ಯಲ್ಲಿ ಕಪಿಟೋಲಕ್ಕಾಗಿ ಅಬ್ರಹಾಮ ಲಿಂಕನ್ ಅವರ ಶಿಲ್ಪ ಮಾಡಿದನು. ಅವನು ತನ್ನ ಸ್ಟುಡಿಯೋದಲ್ಲಿ ಅಮೃತ ಶಾಲೆಯ ಬಂಡೆಯೊಳಗೆ ಕೆತ್ತಿದನು. ಅವನ ಸ್ಟುಡಿಯೋವನ್ನು ಸ್ವಚ್ಛಮಾಡಲು ಪ್ರತೀ ದಿನ ಬೆಳಗ್ಗೆ ಬರುತ್ತಿದ್ದ ಸ್ತ್ರೀಯು ಜೀವಕಳೆಯುಳ್ಳ ಆ ಶಿಲ್ಪವನ್ನು ಮೊದಲನೆಯ ಸಲ ನೋಡಿದಾಗ ಆಕೆ ಕ್ಷಣ ಹೊತ್ತು ಆಶ್ಚರ್ಯ ಭರಿತಳಾಗಿ ನಿಂತುಕೊಂಡು "ಈ ಕಲ್ಲು ಬಂಡೆಯಲ್ಲಿ ಲಿಂಕನ್ನನು ಬಂಧಿಯಾಗಿ ಇಡಲ್ಪಟ್ಟಿದ್ದನೆಂದು ಅವನು ಹೇಗೆ ತಿಳಿದಿದ್ದನು?" ಎಂದು ಕೇಳಿದಳೆಂದು ಹೇಳಲ್ಪಡುತ್ತದೆ. ಆಕೆಯ ಪ್ರಶ್ನೆಗೆ ಉತ್ತರವು ಇತರರು ನೋಡಲಾಗದ್ದನ್ನು ಬೋರ್ಗಲುಮ್ ನೋಡ ಬಲ್ಲವನಾಗಿದ್ದನು ಎಂಬುದಾಗಿದೆ. ಅವನಿಗೆ ಕಲಾಕಾರನ ದೃಷ್ಟಿಯಿತ್ತು ಶಿಲ್ಪಿಯ ಗ್ರಹಿಕೆಯಿತ್ತು. ಆವನ ಚತುರ ಹಸ್ತಗಳು ಮತ್ತು ದಾರ್ಶನಿಕ ಮನಸ್ಸು ಅದನ್ನು ಹೊರತರುವ ಮೊದಲು ಶಾಲೆಯಲ್ಲಿ ಅವನು ಮುಖವನ್ನು ಕಾಣಲು ಶಕ್ತನಾಗಿದ್ದನು.

ಸುವಾರ್ತೆಗಳ ಸಹಾಯದೊಂದಿಗೆ ಯೇಸುವು ತನ್ನ ಭೂಲೋಕದ ಸೇವೆಯ ಸಮಯದಲ್ಲಿ ನೋಡಿದ್ದನ್ನು ನಾವು ನೋಡಬಹುದು. ಆತನ ಸೇವೆಯಲ್ಲಿ ಅಡಗಿಸಿಡಲ್ಪಟ್ಟದ್ದು ಬರಲಿಕ್ಕಿದ್ದ ರಾಜ್ಯದ ದರ್ಶನ ಹಾಗೂ ಅದಕ್ಕಾಗಿ ಸಿದ್ಧತೆಯಾಗಿತ್ತು, ಆತನು ಅದರ ಬಗ್ಗೆ ಪ್ರಸಂಗಿಸಿದನು. ಅದಕ್ಕಾಗಿ ಸಿದ್ಧತೆ ಮಾಡಿದನು, ಅದನ್ನು ತನ್ನ ರಕ್ತದಿಂದ ಕೊಂಡುಕೊಂಡನು.

## ಅಪೊಸ್ತಲರ ಕೃತ್ಯಗಳಿಂದ ದೃಢಪಡಿಸಲ್ಪಟ್ಟಿತು

ಯೇಸುವಿನ ಸೇವೆ, ಮರಣ, ಹಾಗೂ ಪುನರುತ್ಥಾನದ ಹಿಂದೆ ಸಭೆಯನ್ನು ಸೃಷ್ಟಿಸುವ, ದೇವರ ರಾಜ್ಯವನ್ನು ತರುವ ನಿಯಂತ್ರಿತ ಉದ್ದೇಶವಿತ್ತೆಂಬುದನ್ನು ಹೊಸ ಒಡಂಬಡಿಕೆಯ ಅಪೊಸ್ತಲರ ಕೃತ್ಯಗಳ ಗ್ರಂಥವು ದೃಢಪಡಿಸುತ್ತದೆ. ಸುವಾರ್ತೆಗಳು ಯಥಾರ್ಥವಾಗಿ ಸತ್ಯವನ್ನು ತಿಳಿಸುತ್ತವೆ. ಅಪೊಸ್ತಲರ ಕೃತ್ಯಗಳ ಗ್ರಂಥವು ಸಜೀವ ಉದಾಹರಣೆಗಳೊಂದಿಗೆ ಪ್ರಕಟಿಸುವಿಕೆಯನ್ನು ದೃಢಪಡಿಸುತ್ತವೆ.

ನಮ್ಮ ಕರ್ತನ ದಿವಾರೋಹಣವಾದ ಹತ್ತು ದಿನಗಳ ನಂತರ, ಪಂಚಾಶತ್ತಮ ದಿನದಂದು ಅದ್ಭುತಕರವಾದ ರೀತಿಯಲ್ಲಿ ಪರಿಶುದ್ಧಾತ್ಮನು ಅಪೊಸ್ತಲರಿಗೆ ಕೊಡಲ್ಪಟ್ಟನು (ಅಪೊಸ್ತಲರ ಕೃತ್ಯಗಳು 2:1-4); ಯೇಸುವಿನ ಮರಣ, ಹೂಣಿಡುವಿಕೆ, ಮತ್ತು ಪುನರುತ್ಥಾನದ ಸುವಾರ್ತೆಯು ಮೊದಲನೆಯ ಸಲ

ಪ್ರಸಂಗಿಸಲ್ಪಟ್ಟಿತು; ವಿಶ್ವಾಸದಿಂದ ಈ ಸುವಾರ್ತೆಗೆ ಉತ್ತರ ಕೊಡಲು ಹಾಗೂ ತಮ್ಮ ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಹೊಂದಲು ಜನರು ಆಹ್ವಾನಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 2:38; ಲೂಕ 24:46, 47); ಮತ್ತು ಪ್ರಸಂಗಿಸಲ್ಪಟ್ಟ ವಾಕ್ಯವನ್ನು ಸ್ವೀಕರಿಸುವದರಿಂದಲೂ ಬಾಪ್ತಿಸ್ಮ ಹೊಂದುವದರಿಂದಲೂ ಮೂರು ಸಾವಿರ ಜನರು ಆ ಆಮಂತ್ರಣವನ್ನು ಸ್ವೀಕರಿಸಿದರು (ಅಪೊಸ್ತಲರ ಕೃತ್ಯಗಳು 2:41). ಆದುದರಿಂದ ರಾತ್ರಿಯು ದಿನವನ್ನು ಹಿಂಬಾಲಿಸುವಂತೆ ಯೇಸುವಿನ ಸೇವೆಯನ್ನು ಅನುಸರಿಸಿ ನಮ್ಮ ಕರ್ತನ ಸಭೆಯು ಜನಿಸಿತು.

ಅಪೊಸ್ತಲರ ಕೃತ್ಯಗಳ ಗ್ರಂಥದ ಉಳಿದ ಕಥೆಯು ಪವಿತ್ರ ಪ್ರೀತಿಯ ಜ್ವಾಲೆಯಂತೆ ಸಭೆಯು ಯೆರೂಸಲೇಮಿನಿಂದ ಯೂದಾಯಕ್ಕೂ ಸಮಾರ್ಯಕ್ಕೂ ಅದನ್ನು ದಾಟಿ ರೋಮ್ ಸಾಮ್ರಾಜ್ಯದ ಇತರ ಭಾಗಗಳಿಗೂ ಚಲಿಸಿದ ಕಥೆಯಾಗಿರುತ್ತದೆ. ಅಪೊಸ್ತಲರ ಕೃತ್ಯಗಳಲ್ಲಿ ಪ್ರೇರೇಪಿತ ಪ್ರಸಂಗವು ಮಾಡಲ್ಪಟ್ಟಾಗ, ಕೇಳುಗರು ಪ್ರಸಂಗಿಸಲ್ಪಟ್ಟ ವಾಕ್ಯಕ್ಕೆ ವಿಧೇಯರಾಗುವದರಿಂದ ಸಭೆಯೊಳಗೆ ಬರುವದರಿಂದ ಉತ್ತರಕೊಟ್ಟರು. ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಸುವಾರ್ತಾ ಪ್ರಸಾರಣೆಗಾಗಿ ಪ್ರಸಂಗ ಪ್ರಯಾಣವು ಕೈಕೊಳ್ಳಲ್ಪಡುವಾಗಲೆಲ್ಲಾ, ಜಗತ್ತಿನ ಹೊಸ ಕ್ಷೇತ್ರಗಳಲ್ಲಿ ಸಭೆಗಳು ಉದಯವಾದವು. ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿಯ ಪೌಲನ ಮೂರು ಮಿಶನರಿ ಪ್ರಯಾಣಗಳು ಯೆರೂಸಲೇಮಿನಿಂದ ಇಲ್ಲೂರಿಕದ ವರೆಗೆ ಜಗತ್ತಿನಲೆಲ್ಲಾ ಸಭೆಗಳು ನೆಡಲ್ಪಟ್ಟವು (ರೋಮಾಪುರ 15:19). ಸಭೆಯು ಕ್ರಿಸ್ತನ ಭೂಲೋಕದ ಆಗಮನದ ಪರಿಣಾಮವಾಗಿದೆ ಎಂದು ಆಶ್ಚರ್ಯಕರವಾದ ತೀರ್ಮಾನಕ್ಕೆ ಹೊಸದಾಗಿ ಗಮನಿಸದೇ ಯಾರೂ ಅಪೊಸ್ತಲರ ಕೃತ್ಯಗಳ ಗ್ರಂಥವನ್ನು ಓದಲಾರರು.

"ಯೇಸುವು ಲೋಕಕ್ಕೆ ಸುವಾರ್ತೆಯನ್ನು ಸಾರುವ ಕಾರ್ಯದಲ್ಲಿ ಉಪಯೋಗಿಸಿದ ಅದೇ ವಿಧಾನಗಳನ್ನು ನಾವು ಉಪಯೋಗಿಸತಕ್ಕದ್ದು. ನಮ್ಮ ಸುತ್ತಲೂ ಹನ್ನೆರಡು ಜನರನ್ನು ಒಂದು ಗೂಡಿಸೋಣ. ಹಾಗೂ ಭವಿಷ್ಯದ ಕಾರ್ಯಕ್ಕಾಗಿ ಅವರನ್ನು ತರಬೇತಿಗೊಳಿಸೋಣ. ಆತನು ಉಪಯೋಗಿಸಿದ ವಿಧಾನಗಳಲ್ಲಿ ಜಗತ್ತಿಗೆ ಹೇಗೆ ಸುವಾರ್ತೆ ಸಾರಬೇಕೆಂಬುದನ್ನು ಯೇಸುವು ತೋರಿಸಿದ್ದಾನೆ" ಎಂದು ಒಂದು ಸಲ ಒಬ್ಬ ಪ್ರಸಂಗಿ ಹೇಳಿದನು. ಯೇಸುವು ತಾನು ಮಾಡಿದ ಪ್ರತಿಯೊಂದರಲ್ಲಿಯೂ ಪರಿಪೂರ್ಣನಾಗಿದ್ದನು. ಹೀಗಿರುವಾಗ, ಆತನ ಸೇವೆಯ ಪರಿಪೂರ್ಣವಾದ ಅಧ್ಯಯನವು ಆತನ ಸೇವೆಯ ಸಮಯದಲ್ಲಿ ಆತನ ನಿಯೋಗವು ಜಗತ್ತಿಗೆ ಸುವಾರ್ತೆಯನ್ನು ಸಾರುವದಾಗಿರಲಿಲ್ಲ ಎಂಬುದನ್ನು ಪ್ರಕಟಿಸುವದಾಗಿತ್ತು. ಅದು ಸಭೆಗಾಗಿ ಅಸ್ತಿವಾರ ಹಾಕುವದಾಗಿತ್ತು. ಜಗತ್ತಿಗೆ ಸುವಾರ್ತೆ ಸಾರುವದಕ್ಕಾಗಿ ನೀಲನಕ್ಷೆಯ ತುಂಡುಗಳನ್ನು ಒಂದಾಗಿ ಕೂಡಿಸುವದಾಗಿತ್ತು. ತನ್ನ ಕಾರ್ಯಕ್ಕಾಗಿ ತನ್ನ ವಿಧಾನದಲ್ಲಿ ಆತನು ತನ್ನ

ಅದ್ವಿತೀಯ ನಿಯೋಗವನ್ನು ಪೂರೈಸುವದಕ್ಕಾಗಿ ಯೋಗ್ಯವಾದ ವಿಧಾನಗಳನ್ನೂ ಸಾಧನಗಳನ್ನೂ ಉಪಯೋಗಿಸಿದನು. ಈ ನಿಯೋಗವು ಆತನು ತನ್ನ ಅನುಯಾಯಿಗಳಿಗೆ ಆತನು ಕೊಟ್ಟ ವಿಶ್ವವ್ಯಾಪಿ ಸಾರ್ವತ್ರಿಕ ನಿಯೋಗಕ್ಕಿಂತ ಭಿನ್ನವಾಗಿತ್ತು.

ಅಪೊಸ್ತಲರು ಮತ್ತು ಪ್ರೇರೇಪಿತ ಇತರ ಜನರು ನಮ್ಮ ಕರ್ತನು ಉಪಯೋಗಿಸಿದ ವಿಧಾನಗಳನ್ನೇ ಉಪಯೋಗಿಸಿದ್ದನ್ನು ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ನೋಡುವದಿಲ್ಲ. ತರಬೇತಿಗೊಳಿಸಲು ಹನ್ನೆರಡು ಜನರನ್ನು ಹಾಗೂ ಇತರರನ್ನು ಕೂಡಿಸಿಕೊಂಡು ಬೋಧಿಸುವ ಆತನ ವಿಧಾನವನ್ನು ಅನುಕರಣೆ ಮಾಡಲು ಅವರು ಪ್ರಾರಂಭಿಸಲಿಲ್ಲ. ಅದರ ಬದಲು ತಮ್ಮ ಪ್ರಸಂಗ ಮತ್ತು ಬೋಧನೆಯಿಂದ ಅಪೊಸ್ತಲರು ಮತ್ತು ಇತರ ಪ್ರೇರೇಪಿತ ಜನರು ಸಭೆಯೊಳಗೆ ಜನರನ್ನು ತಂದರು. ಈ ಹೊಸ ಕ್ರೈಸ್ತರು ಆಗ ಪೋಷಿಸಲ್ಪಟ್ಟರು, ತರಬೇತಿಗೊಳಿಸಲ್ಪಟ್ಟರು, ಪ್ರೋತ್ಸಾಹಿಸಲ್ಪಟ್ಟರು ಹಾಗೂ *ಸಭೆಯ ಅಂಗವಾಗಿ* ಸಭೆಯಿಂದ ಸೇವೆಗಾಗಿಯೂ ಸುವಾರ್ತೆ ಸಾರುವದಕ್ಕಾಗಿಯೂ ಬೋಧಿಸಲ್ಪಟ್ಟರು. ಯೇಸುವಿನ ಭೂಲೋಕದ ಸೇವೆಯ ಪರಿಣಾಮದಂತೆ ಸಭೆಯ ಜೀವಿತವನ್ನು ಅಪೊಸ್ತಲರ ಕೃತ್ಯಗಳ ಗ್ರಂಥವು ನಮಗೆ ತೋರಿಸುತ್ತದೆ. ಹೊಸ ಒಡಂಬಡಿಕೆಯ 48 ಶತ ಭಾಗವು ಕ್ರಿಸ್ತನ ಜೀವಿತದ ಬಗ್ಗೆ ತುಂಬಿದೆ, ಉಳಿದ 52ರ ಭಾಗವು ಕ್ರಿಸ್ತನ ಜೀವನ, ಮರಣ ಹಾಗೂ ಪುನರುತ್ಥಾನವು ಉತ್ಪಾದಿಸಿದ್ದನ್ನು - ಸಭೆಯನ್ನು ರಚಿಸಿದ್ದಾಗಿದೆ.

## ಪತ್ರಿಕೆಗಳಿಂದ ಪುನಃ ದೃಢೀಕರಿಸಲ್ಪಟ್ಟಿದೆ

ಸಭೆಯು ಕ್ರಿಸ್ತನ ಭೂಲೋಕದ ಜೀವನ ಮತ್ತು ಮರಣದ ನೈಸರ್ಗಿಕ ಫಲವಾಗಿದೆಯೆಂಬ ಸತ್ಯದ ಅನ್ವಯವನ್ನು ಹೊಸ ಒಡಂಬಡಿಕೆಯ ಪತ್ರಿಕೆಗಳು ಒತ್ತಿ ಹೇಳುತ್ತವೆ. ಸುವಾರ್ತೆಗಳು ಈ ಸತ್ಯವನ್ನು ಒಪ್ಪಿಕೊಳ್ಳುತ್ತವೆ. ಅಪೊಸ್ತಲರ ಕೃತ್ಯವು ಅದನ್ನು ವಿಶದವಾಗಿ ವರ್ಣಿಸುತ್ತದೆ. ಪತ್ರಿಕೆಗಳು ಅದನ್ನು ಅನ್ವಯಿಸುತ್ತವೆ. ಕ್ರಿಸ್ತನ ಆತ್ಮಿಕ ದೇಹವಾಗಿರುವದರಿಂದ ಆತನ ಜೀವನಕ್ಕೆ ಹೇಗೆ ಪ್ರತಿಕ್ರಿಯೆ ತೋರಿಸಬೇಕೆಂಬುದನ್ನು ಪತ್ರಿಕೆಗಳು ವಿವರಿಸುತ್ತವೆ.

ವಿಶ್ವಾಸ ಮತ್ತು ವಿಧೇಯತೆಯ ಮುಖಾಂತರ ಕ್ರಿಸ್ತನ ಬಳಿಗೆ ಬರಲು ಆಯ್ಕೆಯಾದ ಜನರಿಗೆ ಪತ್ರಿಕೆಗಳು ಬರೆಯಲ್ಪಟ್ಟವು. ಕ್ರಿಸ್ತನ ಜೀವನ, ಮರಣ ಹಾಗೂ ಪುನರುತ್ಥಾನದ ಪರಿಣಾಮವು ಹೊಸದಾಗಿ ಪ್ರಕಟಿಸಲ್ಪಡುತ್ತಿರುವ ಸಂಬಂಧದಲ್ಲಿ ಅವರು ಜೀವಿಸಿದರು. ಪ್ರೇರೇಪಿತ ಜನರ ಸಂದೇಶದ ಕೊಡುಗೆಯ ಕ್ರಿಸ್ತನು ಕರ್ತನಂತೆ ಗೌರವಿಸಲ್ಪಟ್ಟದ್ದು ಹಾಗೂ ನಮ್ಮ ಮಧ್ಯದಲ್ಲಿ ಆತನ ಮಾನವ ಜೀವಿತವು ನಾವು ಆತನ ಸಭೇಯಾಗಿರುವದರಿಂದ ಯೋಗ್ಯವಾಗಿ

ಸ್ವೀಕರಿಸಲ್ಪಟ್ಟಿದ್ದು ಆಗಿರುವುದು.

ಪ್ರತಿಯೊಂದು ಪತ್ರಿಕೆಯಲ್ಲಿ ಕ್ರಿಸ್ತನ ಅನುಯಾಯಿಗಳು ಕ್ರಿಸ್ತನ ಆತ್ಮಿಕ ದೇಹವಾಗಿ ಜೀವಿಸಲು ಮತ್ತು ಸೇವೆ ಮಾಡಲು ಒತ್ತಾಯಿಸಲ್ಪಟ್ಟಿದ್ದಾರೆ. ಪತ್ರಿಕೆಗಳು ಒಟ್ಟಾಗಿ ಕೂಡಿಸಲ್ಪಡುವಾಗ, ನಿಜವಾಗಿಯೂ ಎಲ್ಲಾ ಪರಿಸ್ಥಿತಿಗಳಲ್ಲಿಯೂ ಭಿನ್ನವಾದ ಸ್ಥಳಗಳಲ್ಲಿಯೂ ಕ್ರಿಸ್ತನ ಸಭೆಯಾಗಿ ಇರುವುದು ಮತ್ತು ಜೀವಿ ಸುವುದು ಹೇಗೆ ಎಂಬುದರ ಮೇಲೆ "ಮಾರ್ಗದರ್ಶನ ಕೈಪಿಡಿಯನ್ನು" ಒದಗಿಸುತ್ತದೆ. ಕ್ರಿಸ್ತನ ಭೂಲೋಕದ ಸೇವೆಯನ್ನು ನಮ್ಮ ಜೀವಿತಗಳಿಗೆ ಹೇಗೆ ಅನ್ವಯಿಸಬೇಕೆಂಬುದನ್ನು ಅವು ನಮಗೆ ಬೋಧಿಸುತ್ತವೆ.

*ವಿಧೇಯ ವಿಶ್ವಾಸದ ಮುಖಾಂತರವಾಗಿ ಆತನ ದೇಹವನ್ನು ಪ್ರವೇಶಿ ಸುವದರಿಂದ ಕರ್ತನಂತೆ ಯೇಸುವನ್ನು ನಾವು ಸ್ವೀಕರಿಸಿಕೊಳ್ಳಬೇಕು.* ಈ ವಿಶ್ವಾಸದ ಪ್ರತಿಕ್ರಿಯೆಯ ಅಂತಿಮ ಕಾರ್ಯವನ್ನು ಕ್ರಿಸ್ತನನ್ನು ಧರಿಸಿಕೊಳ್ಳುವದಕ್ಕೆ ಇಲ್ಲವೇ ಕ್ರಿಸ್ತನಿಂದ ಧರಿಸಲ್ಪಡಲಿಕ್ಕೆ ಪೌಲನು ಹೋಲಿಸಿದ್ದಾನೆ (ಗಲಾತ್ಯ 3:27). ಪತ್ರಿಕೆಗಳ ಪ್ರಕಾರವಾಗಿ ಮೊದಲು ನಂಬಿಕೆ, ಮಾನಸಾಂತರ ಹಾಗೂ ದೇವರ ಕುಮಾರನಂತೆ ಯೇಸುವಿನ ಬಗ್ಗೆ ಅರಿಕೆಯನಂತರ ಬರುವ ರಕ್ಷಣೆಗಾಗಿರುವ ಬಾಪ್ತಿಸ್ಮದ ಮುಖಾಂತರ ಆತನ ದೇಹವನ್ನು ಪ್ರವೇಶಿಸುವವರೆಗೆ ಯೇಸುವಿಗೆ ಯಾರೂ ತನ್ನನ್ನು ಒಪ್ಪಿಸಿಕೊಂಡಿರುವದಿಲ್ಲ.

*ಆತನ ಆತ್ಮಿಕ ದೇಹದಲ್ಲಿ, ಸಭೆಯಲ್ಲಿ ದೇವರ ಕುಟುಂಬದಂತೆ ಒಂದಾಗಿ ಜೀವಿಸುವದರಿಂದ ಹಾಗೂ ಆರಾಧಿಸುವದರಿಂದ ನಾವು ಯೇಸುವಿನ ಜೀವನ, ಮರಣ ಮತ್ತು ಪುನರುತ್ಥಾನವನ್ನು ಗೌರವಿಸುತ್ತೇವೆ.* ಪೌಲನು ಹೀಗೆ ಹೇಳಿದ್ದಾನೆ,

> ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು, ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದ ವಿಲ್ಲ (ಗಲಾತ್ಯ 3:28).

> ಯಾಕಂದರೆ ನಮಗೆ ಒಂದೇ ದೇಹದಲ್ಲಿ ಬಹಳ ಅಂಗಗಳಿರಲಾಗಿ ಆ ಎಲ್ಲಾ ಅಂಗಗಳಿಗೆ ಹೇಗೆ ಒಂದೇ ಕೆಲಸ ಇರುವದಿಲ್ಲವೋ ಹಾಗೆಯೇ ನಾವೆಲ್ಲರು ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ (ರೋಮಾಪುರ 12:4, 5).

> ... ದೇಹದಲ್ಲಿ ಭೇದವೇನೂ ಇರದೆ ಅಂಗಗಳು ಒಂದಕ್ಕೊಂದರ ಹಿತವನ್ನು ಚಿಂತಿಸುವ ಹಾಗೆ ದೇವರು ಕೊರತೆಯುಳ್ಳದ್ದಕ್ಕೆ ಹೆಚ್ಚಾದ ಮಾನವನ್ನು ಕೊಟ್ಟು ದೇಹವನ್ನು ಹದವಾಗಿ ಕೂಡಿಸಿದ್ದಾನೆ.
>
> ನೀವು ಕ್ರಿಸ್ತನ ದೇಹವು, ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾ ಗಿದ್ದೀರಿ (1 ಕೊರಿಂಥ 12:25-27).

> ವಾರದ ಮೊದಲನೆಯ ದಿವಸದಲ್ಲಿ ನಾವು ರೊಟ್ಟಿ ಮುರಿಯುವ ನಿಯಮಕ್ಕಾಗಿ ಕೂಡಿಬಂದಾಗ ಮರುದಿನ ಹೊರಡಬೇಕೆಂದಿದ್ದ ಪೌಲನು ಅವರಿಗೆ ಪ್ರಸಂಗಿಸುತ್ತಾ ಸರಿಹೊತ್ತಿನ ವರೆಗೂ ಉಪನ್ಯಾಸವನ್ನು ನಡಿಸಿದನು (ಅಪೊಸ್ತಲರ ಕೃತ್ಯಗಳು 20:7).

ದೇವರ ಕುಟುಂಬದಂತೆ, ಕ್ರಿಸ್ತನ ಸಭೆಯಂತೆ ಜೀವಿಸುವದನ್ನು ಆರಾಧಿಸುವದನ್ನು ಮಾಡದೇ ಹೋಗುವಾಗ, ಕ್ರಿಸ್ತನು ಸಾಧಿಸಲಿಕ್ಕೆ ಬಂದದ್ದನ್ನು ನಾವು ತೆಗೆದು ಹಾಕುತ್ತೇವೆ. ಆತನು ಸ್ಥಾಪಿಸಲು ಮರಣ ಹೊಂದಿದ್ದಕ್ಕೆ ಹಾನಿ ಮಾಡುತ್ತೇವೆ.

*ಆತನ ದೇಹವಾಗಿರಲು, ಆತನ ಸಭೆಯಾಗಿರಲು ಯೇಸುವು ನಮ್ಮನ್ನು ಕರೆದಿದ್ದಾನೆ. ಆತನ ಜನರನ್ನೂ ಕ್ರಿಸ್ತನ ಸಭೆ ಆಗಿರುವರು* ಎಂಬುದನ್ನು ಬಿಟ್ಟು ಬೇರೆ ಯಾವುದೇ ಸಭೆ ಅಥವಾ ದೇಹವಾಗಿರುವಂತೆ ಪತ್ರಿಕೆಗಳು ಎಂದೂ ವಿವರಿಸಿರುವದಿಲ್ಲ. ಪತ್ರಿಕೆಗಳ ಪ್ರಕಾರವಾಗಿ ನಾವು ಯೇಸುವನ್ನು ಹಿಂಬಾಲಿಸುವದರಲ್ಲಿ ಒಂದೇ ಮಾರ್ಗವನ್ನು, ಆತನನ್ನು ಸೇವಿಸಲು ಒಂದೇ ಮಾರ್ಗವನ್ನು, ಹಾಗೂ ಆತನ ರಕ್ತವನ್ನು ಮತ್ತು ಆತನು ಒದಗಿಸುವ ರಕ್ಷಣೆಯನ್ನು ಸ್ವೀಕರಿಸಲು ಒಂದೇ ಮಾರ್ಗವನ್ನು ಸೃಷ್ಟಿಸಿದ್ದಾನೆ. ಈ ಲೋಕದಲ್ಲಿ ಆತನ ಆತ್ಮಿಕ ದೇಹವಾಗಿ ನಂಬಿಕೆಯಿಂದ ಜೀವಿಸುವುದು ಆ ಮಾರ್ಗವಾಗಿದೆ.

ಮನೆಯ ಮೂಲೆಯಲ್ಲಿ ಒಬ್ಬ ಚಿಕ್ಕ ಬಾಲಕಿ ಒಂದು ಬೈಬಲನ್ನು ಕಂಡು ಕೊಂಡಳು. ಆಕೆ ಅದನ್ನು ಮೇಲಕ್ಕೆತ್ತಿ ಹಿಡಿದು, “ಅಮ್ಮಾ, ಇದು ಯಾವ ಪುಸ್ತಕ ವಾಗಿದೆ?” ಎಂದು ತನ್ನ ತಾಯಿಯನ್ನು ಕೇಳಿದಳು. “ಅದು ದೇವರ ಪುಸ್ತಕ, ಬೈಬಲ್” ಎಂದು ಆಕೆಯ ತಾಯಿ ಹೇಳಿದಳು. ಆಗ ಚಿಕ್ಕ ಬಾಲಕಿ ಚುಚ್ಚುವ ನೋಟ ದಿಂದ, “ನಾನು ಅದನ್ನು ಎಂದೂ ಉಪಯೋಗಿಸದೇ ಇರುವದರಿಂದ, ಆತನಿಗೆ ಅದನ್ನು ನಾವು ಯಾಕೆ ಹಿಂದಿರುಗಿ ಕಳುಹಿಸಬಾರದು?” ಎಂದು ಹೇಳಿದಳು.

ಇದರ ಸತ್ಯವು ನಾವು ಅದನ್ನು ಓದ ಬಹುದು *ಆದರೆ ನಿಜವಾಗಿಯೂ ಅದನ್ನು ಉಪಯೋಗಿಸದೇ ಇರಬಹುದು.* ಪ್ರತಿಯೊಂದು ಸಂಭಾಷಣೆಯಲ್ಲಿ ನಾವು ಬೈಬಲ್‌ನಿಂದ ಉಲ್ಲೇಖಿಸಬಹುದು, ಪ್ರತಿದಿನವೂ ಅದನ್ನು ಓದಬಹುದು, ಆದಾಗ್ಯೂ ಅದನ್ನು *ಅನ್ವಯಿಸಿಕೊಳ್ಳದೇ ಇರಬಹುದು.* ಬೈಬಲು ನಿಜವಾದ ಅನ್ವಯವು, ಕ್ರಿಸ್ತನ ನಿಜವಾದ ಸಭೆಯಾಗಿರುವ ವ್ಯವಹಾರಿಕ ವಿಧಾನದಲ್ಲಿ ಅದನ್ನು ಅನುಸರಿಸುವ ಅಗತ್ಯತೆಯಾಗಿರುವುದು. ನಾವೇನಾಗಿರಬೇಕೆಂದು ಬೈಬಲು ನಮಗೆ ಬೋಧಿಸುವಂತೆ ನಾವು ಆಗುವಾಗ ಮಾತ್ರವೇ ನಾವು ಅದರ ಸರಿಯಾದ ಮತ್ತು ಯೋಗ್ಯವಾದ ಉಪಯೋಗವನ್ನು ಮಾಡುವೆವು.

# ಮುಕ್ತಾಯ

ಆದುದರಿಂದ, ಇಡೀ ಹೊಸ ಒಡಂಬಡಿಕೆಯು, ಸಭೆಯು ಕ್ರಿಸ್ತನ ಆತ್ಮಿಕ ದೇಹವು ಮಾನವನಾಗುವದರಲ್ಲಿ ಕ್ರಿಸ್ತನ ನಿಯೋಗದ ಸೃಷ್ಟಿಯಾಗಿದೆ ಎಂದು ಬೋಧಿಸುವದರಲ್ಲಿ ಒಂದಾಗುತ್ತದೆ. ಅದನ್ನು ವಾಗ್ದಾನ ಮಾಡುವದರಿಂದ ಸುವಾರ್ತೆಗಳು ಅದನ್ನು ಒಪ್ಪಿಕೊಳ್ಳುತ್ತವೆ. ಅದನ್ನು ಚಿತ್ರಿಸುವದರಿಂದ ಅಪೊಸ್ತಲರ ಕೃತ್ಯಗಳ ಗ್ರಂಥವು ದೃಢಪಡಿಸುತ್ತದೆ. ಅದನ್ನು ಜೀವಿತಕ್ಕೆ ವ್ಯವಹಾರಿಕವಾಗಿ ಅನ್ವಯಿಸುವದರಿಂದ ಪತ್ರಿಕೆಗಳು ಪುನಃ ದೃಢಪಡಿಸುತ್ತವೆ.

ನಮ್ಮ ರಕ್ಷಣೆಗಾಗಿ ಜೀವಿಸಿ, ಮರಣಹೊಂದಿ, ಸತ್ತವರೊಳಗಿಂದ ಎದ್ದು ಬಂದಾತನಿಗೆ ಉತ್ತರ ಕೊಡುವದಕ್ಕೆ ನಮಗಾಗಿ ಒಂದೇ ಮಾರ್ಗವು ಆತನ ಸಭೆಯೊಳಗೆ ಪ್ರವೇಶಿಸಿ ಅದರ ನಂಬಿಗಸ್ತ ಸದಸ್ಯನಾಗಿ ಜೀವಿಸುವುದು ಆಗಿರುವದರಿಂದ, ಬರುವ ಪ್ರಶ್ನೆಯು "ನೀನು ಆತನ ದೇಹದಲ್ಲಿ ಇರುವಿಯೋ?" ಎಂಬುದು. ಜೀವದ ಅಂತ್ಯಕ್ಕೆ ಬಂದು, ಜೀವನದ ನಿಜವಾದ ಉದ್ದೇಶವನ್ನು ಸಂಪೂರ್ಣವಾಗಿ ತಪ್ಪಿಸಿಕೊಂಡಿರುವಿರಿ ಎಂಬುದನ್ನು ಕಂಡುಕೊಳ್ಳುವಾಗ ಎಂಥಾ ತಪ್ಪಾಗಿರುತ್ತದಲ್ಲವೇ! ದೇವರ ಕುಮಾರನು ಈ ಲೋಕಕ್ಕೆ ಯಾವ ಉದ್ದೇಶದಿಂದ ಬಂದನು ಎಂಬುದನ್ನು ಕಳೆದುಕೊಳ್ಳುವುದು ಇನ್ನೂ ಹೆಚ್ಚು ದಃಖಕರವಾದದ್ದಾಗಿರುವದು. ಹೊಸ ಒಡಂಬಡಿಕೆಯ ರಕ್ಷಣೆಯ ದೇವರು ದೈವಿಕ ಸಂದೇಶವನ್ನು ಕೊಡುವುದು ಸತ್ಯವಾಗಿದ್ದಂತೆ, ಕ್ರಿಸ್ತನು ಮಾನವ ರೂಪದಲ್ಲಿ ಈ ಭೂಲೋಕಕ್ಕೆ ಬಂದದ್ದು ಸತ್ಯವಾಗಿದ್ದಂತೆ, ಆತನ ದೇಹದಲ್ಲಿ ಪ್ರವೇಶಿಸದೇ ಇರುವವನು ಜೀವನದ ಪ್ರಯಾಣದ ಅಂತ್ಯದಲ್ಲಿ ಕ್ರಿಸ್ತನು ಈ ಭೂಲೋಕಕ್ಕೆ ಯಾಕೆ ಬಂದನು ಎಂಬುದರ ಕಾರಣವನ್ನು ತಪ್ಪಿಸಿಕೊಂಡದ್ದನ್ನು ಕಲಿತು ಕೊಳ್ಳುವನು. *ಈ ತೀರ್ಮಾನವು ಇಡೀ ಹೊಸ ಒಡಂಬಡಿಕೆಯ ಮೂಲ ಬೋಧನೆಯಾಗಿದೆ.*

ಕ್ರಿಸ್ತನು ತನ್ನ ಭೂಲೋಕದ ಅಲ್ಪಾವಧಿಯ ಜೀವನದ ಅಂತಕ್ಕೆ ಬಂದಾಗ, "ತಂದೆಯೇ, ನೀನು ಮಾಡಬೇಕೆಂದು ಹೇಳಿದ್ದನ್ನು ಮಾಡಿದ್ದೇನೆ. ನನಗಾಗಿದ್ದ ನಿನ್ನ ನಿಯೋಗವನ್ನು ನೆರವೇರಿಸಿದ್ದೇನೆ" ಎಂದು ಹೇಳಲು ಶಕ್ತನಾದನು, ದೇವರ ಉದ್ದೇಶಗಳನ್ನು ನೆರವೇರಿಸುತ್ತ ಆತನ ಚಿತ್ತದ ವೃತ್ತದೊಳಗೆ ಈ ಲೋಕದಲ್ಲಿ ಜೀವಿಸುವುದು, ಒಂದು ಅರಮನೆಯಲ್ಲಿ ಸ್ವಾರ್ಥ ಸಾಧನೆಗಳ ರಾಜ್ಯದ ಮೇಲೆ ಆಳುವದಕ್ಕಿಂತ ಹೆಚ್ಚು ಉತ್ತಮವಾದದ್ದಾಗಿದೆ. "ದೇವರೇ ಈ ಭೂಮಿಯ ಮೇಲೆ ನೀನು ನನಗಾಗಿ ಕೊಟ್ಟ ವರ್ಷಗಳಲ್ಲಿ ಜೀವಿಸಿದ್ದೇನೆ. ನಾನು ಮಾಡಬೇಕೆಂದು ಬಯಸಿದ್ದನ್ನು ಮಾತ್ರ ನಾನು ಮಾಡಿದ್ದೇನೆ. ನನಗಾಗಿ ನಾನು ಆಯ್ದುಕೊಂಡ ನಿಯೋಗವನ್ನು ಹಿಂಬಾಲಿಸಿದ್ದೇನೆ" ಎಂದು ಎಷ್ಟೋ ಜನರು ಜೀವಾಂತ್ಯದಲ್ಲಿ ಹೇಳಲು ಶಕ್ತರಾಗಬಹುದು.

ಜೀವಿತದ ಅಂತ್ಯಕ್ಕೆ ಬರುವಾಗ, ನಾವು ಹೀಗೆ ಹೇಳುವಂತಾಗಿರಲಿ, "ಕರ್ತನೇ, ನಾನು ಏನಾಗಿರಬೇಕೆಂಬುದನ್ನೂ, ಏನು ಮಾಡಬೇಕೆಂಬುದನ್ನೂ ಪರಿಶುದ್ಧ ಬರಹಗಳಿಂದ ಕಂಡು ಕೊಂಡಿದ್ದೇನೆ. ನನ್ನ ಆ ಕಾರ್ಯಕ್ಕೆ ನನ್ನನ್ನು ಪ್ರತಿಷ್ಠಿಸಿಕೊಂಡಿದ್ದೇನೆ. ಭೂಲೋಕದಲ್ಲಿ ನಿನ್ನನ್ನು ಮಹಿಮೆಪಡಿಸಲು ಯಥಾರ್ಥವಾಗಿ ಪ್ರಯತ್ನಿಸಿದ್ದೇನೆ, ನೀನು ನನಗೆ ಕೊಟ್ಟ ಯೋಜನೆಯಂತೆ ಜೀವಿಸಲು ಹುಡುಕುತ್ತೇನೆ, ಕ್ರಿಸ್ತನ ಸಭೆಯಂತೆ ನಾನು ಜೀವಿಸಿದ್ದೇನೆ."

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ಜಗತ್ತಿನ ಚರಿತ್ರೆಯಲ್ಲಿ ಎಂದಾದರೂ ಸಂಭವಿಸಿದ ಅತೀ ದೊಡ್ಡ ಘಟನೆ ಯಾವುದು? ನಿಮ್ಮ ಉತ್ತರಕ್ಕೆ ಕಾರಣ ಕೊಡಿರಿ.
2. ಯೇಸುವು ಸಂಪೂರ್ಣವಾಗಿ ಮನುಷ್ಯನಾಗಿದ್ದನೋ, ಇಲ್ಲವೇ ಕೇವಲ ಭಾಗಶಃ ಮನುಷ್ಯನಾಗಿದ್ದನೋ?
3. ಯೇಸುವು ಸಂಪೂರ್ಣವಾಗಿ ದೈವಿಕನಾಗಿದ್ದನೋ, ಇಲ್ಲವೇ ಭಾಗಶಃವಾಗಿ ಮಾತ್ರ ದೇವರಾಗಿದ್ದನೋ?
4. ಯೇಸುವು ಭೂಲೋಕಕ್ಕೆ ಯಾಕೆ ಬಂದನು? ಯಾವ ಒಂದು ಉದ್ದೇಶವನ್ನು ನೆರವೇರಿಸಲು ಆತನು ಬಂದನು?
5. ಬರಲಿಕ್ಕಿದ್ದ ಯಾವುದೋ ಒಂದಕ್ಕಾಗಿ ಯೇಸುವಿನ ಸೇವೆಯು ಹೀಗೆ ಸಿದ್ಧವಾಗುತ್ತಿತ್ತೆಂಬುದನ್ನು ತೋರಿಸಿರಿ.
6. ಹೊಸ ಒಡಂಬಡಿಕೆಯಲ್ಲಿ ಪತ್ರಿಕೆಗಳ ಕಾರ್ಯ ಯಾವುದು?
7. ಯೇಸುವಿನ ಸಭೆಯಾಗಿರದೇ ಯೇಸುವಿನ ಜೀವನಕ್ಕೆ ನಾವು ಯೋಗ್ಯವಾಗಿ ಉತ್ತರ ಕೊಡಬಹುದೋ?
8. ಆತನ ಸಭೆಯಂತೆ ಜೀವಿಸದೇ ಈ ಜಗತ್ತಿನಲ್ಲಿ ನಮಗಾಗಿ ಇರುವ ಯೇಸುವಿನ ನಿಯೋಗವನ್ನು ನಾವು ಪೂರೈಸಬಹುದೋ?

## ಪದ ಸಹಾಯಗಳು

ಸಭೆಗೆ ಸೇರಿಸಲ್ಪಟ್ಟರು - ದೇವರ ವಿಧೇಯ ಜನರ ಭಾಗವಾಗಿ ಮಾಡಲ್ಪಟ್ಟರು. ಮಹಾ ಆಜ್ಞೆಯಲ್ಲಿ ಯೇಸುವಿನಿಂದ ಕೊಡಲ್ಪಟ್ಟ ಸೂಚನೆಗಳಿಗೆ ವಿಧೇಯರಾಗುವವರೆಲ್ಲರೂ ರಕ್ಷಿಸಲ್ಪಟ್ಟವರೊಂದಿಗೆ ದೇವರಿಂದ ಸೇರಿಸಲ್ಪಟ್ಟರು.

ಕ್ರಿಸ್ತನ ಸಭೆ - ಒಂದು ಕಟ್ಟಡವಲ್ಲ, ಆದರೆ ಸುವಾರ್ತೆಗೆ ವಿಧೇಯರಾಗಿ ಸಭೆಗೆ ಸೇರಿಸಲ್ಪಟ್ಟವರ ಗುಂಪು (ಅಪೊಸ್ತಲರ ಕೃತ್ಯಗಳು 2:41, 47ರಲ್ಲಿ ಇದ್ದಂತೆ).

ಪತ್ರಿಕೆಗಳು - ಒಂದು ಪತ್ರ. ಹೊಸ ಒಡಂಬಡಿಕೆಯ ಅನೇಕ ಪುಸ್ತಕಗಳು (ರೋಮಾಪುರ

ದವರಿಗೆ ಬರೆದ ಪತ್ರಿಕೆಯಿಂದ ಪ್ರಕಟನೆಯ ಗ್ರಂಥದ ವರೆಗಿನ) ಪತ್ರಿಕೆಗಳಂತೆ ಕ್ರೈಸ್ತವರಿಗೆ ಬರೆಯಲ್ಪಟ್ಟಿವೆ.

ಸುವಾರ್ತಾ ಸೇವೆ - ಸುವಾರ್ತೆಯನ್ನು ಹಂಚಿಕೊಳ್ಳುವ ರೂಢಿ. ಉದಾಹರಣೆಯಾಗಿ ತಿಮೊಥೆಯನು 2 ತಿಮೊಥೆ 4:5ರಲ್ಲಿ ಸುವಾರ್ತಿಕನ ಕೆಲಸ ಮಾಡು ಎಂದು ಹೇಳಲ್ಪಟ್ಟಿದ್ದಾನೆ.

ಅನ್ಯನು - ಯೆಹೂದಿ ವ್ಯಕ್ತಿ ಅಲ್ಲದವನು.

ಯೆಹೂದಿ - ಯೆಹೂದ್ಯರ ಇಲ್ಲವೇ ಇಸ್ರಾಯೇಲ್ಯರ ಜನಾಂಗದವನು; ಯಾಕೋಬನ ಮುಖಾಂತರ ಅಬ್ರಹಾಮನ ವಂಶದವನು.

ದೇವರ ರಾಜ್ಯ - ಜನರ ಹೃದಯಗಳಲ್ಲಿ ಹಾಗೂ ಜೀವನದಲ್ಲಿ ಯೇಸುವಿನ ಆಳ್ವಿಕೆ ಹಾಗೂ ಆಡಳಿತ.

ನೀತಿ - ಅಪರಾಧವಿಲ್ಲದ ಇಲ್ಲವೇ ಪಾಪವಿಲ್ಲದ ಸ್ವಭಾವ. ಮನುಷ್ಯನಿಗೆ ಇದು ತನ್ನಷ್ಟಕ್ಕೆ ಅಸಾಧ್ಯವಾದದ್ದಾಗಿರುವದರಿಂದ "ನೀತಿವಂತ" ನಾಗಿರುವದೆಂದರೆ ದೇವರಿಂದ ಕ್ಷಮಾಪಣೆ ಹೊಂದುವುದು ಮತ್ತು ದೇವರಿಂದ ನೀತಿನಿರ್ಣಯ ಹೊಂದುವುದು ಹಾಗೂ ಎಲ್ಲಾ ಪಾಪಗಳಿಂದ ಶುದ್ಧೀಕರಿಸಲ್ಪಡುವುದು ಎಂದರ್ಥವಾಗುತ್ತದೆ. ದೇವರ ವಾಕ್ಯಕ್ಕೆ ಅನುಗುಣವಾಗಿ ಅನುದಿನವೂ ಜೀವಿಸುವದರ ಮುಖಾಂತರ ದೇವರೊಂದಿಗೆ ಕ್ರೈಸ್ತನು ಈ ಸರಿಯಾದ ಸಂಬಂಧವನ್ನು ಪ್ರದರ್ಶಿಸುತ್ತಾನೆ.

---

ಟಿಪ್ಪಣಿ

[1]ಈ ವಚನಗಳನ್ನು ಸಹ ನೋಡಿರಿ: ಮತ್ತಾಯ 9:30; 12:16; 17:9; ಮಾರ್ಕ 1:44; 3:12; 5:43; 7:36; 8:30; 9:9; ಲೂಕ 4:41; 8:56; 9:21. J. W. McGarvey ಅವರು "ಯಾರಿಗೂ ಹೇಳಬೇಡಿ" ಎಂಬ ಆಜ್ಞೆಯನ್ನು ಕುರಿತು ಬರೆದಿದ್ದಾರೆ. "ಮಿಲಿಟರಿ ಅಧಿಕಾರಿಗಳು ಮಧ್ಯೆ ಪ್ರವೇಶಿಸುವಂತೆ ಪ್ರೇರೇಪಿಸಲು ಜನರ ಮಧ್ಯದಲ್ಲಿ ಅನಾವಶ್ಯಕವಾದ ಕುತೂಹಲಕ್ಕೆ ವಿರುದ್ಧವಾಗಿ ಕಾಪಾಡುವ ಅಗತ್ಯತೆಯಿಂದ ಇದು ಬರೆಯಲ್ಪಟ್ಟಿದೆ. ಅಂಥ ಪರಿಸ್ಥಿತಿ ಉಂಟಾಗಿದ್ದರೆ ಯೇಸುವಿನ ಬೋಧನೆಗೆ ಸಂಬಂಧಿಸಿ ಜನರು ಸಮಾಧಾನವಾಗಿ ವಿಚಾರಿಸುವಲ್ಲಿ ಅಸಮರ್ಥರನ್ನಾಗಿ ಮಾಡುತ್ತಿತ್ತು (ಮಾರ್ಕ 1:45 ಸಹ ನೋಡಿರಿ). ಕೆಲವು ಸಲ, ಸಂದರ್ಭಕ್ಕೆ ಅಗತ್ಯವಿದ್ದಾಗ ಆತನು ತನ್ನ ವಿಧಾನಗಳನ್ನು ವ್ಯತ್ಯಾಸ ಮಾಡಿದನು. ಹಾಗೂ ಜನರಿಗೆ ತಾನು ಅವರಿಗೆ ಮಾಡಿದ್ದನ್ನು ಹೇಳಬೇಕೆಂದು ಆಜ್ಞಾಪಿಸಿದನು (J. W. McGarvey, *The New Testament Commentary; Matthew and Mark* [N.p., 1875; reprint, Delight, Ark.: Gospel Light Publishing Co., n.d.], 75).

# 9

# ಶಿಲುಬೆ ಮತ್ತು ಸಭೆ

ಕ್ರಿಸ್ತನು ನಮ್ಮ ಪಾಪಗಳಿಗಾಗಿ ಕ್ರಯ ಕೊಟ್ಟನೆಂದು ಹೊಸ ಒಡಂಬಡಿಕೆಯ ತತ್ವದೊಂದಿಗೆ ಪರಿಚಿತಯುಳ್ಳವರು, "ಕ್ರಿಸ್ತನಿಲ್ಲದ ಶಿಲುಬೆಯಂತೆ, ಶಿಲುಬೆಯಿಲ್ಲದ ಕ್ರಿಸ್ತನು ಪಾಪಿಗಳನ್ನು ರಕ್ಷಿಸಲು ಬಲವಿಲ್ಲದವನಾಗಿರುವನೆಂಬುದನ್ನು" ಒಪ್ಪಿಕೊಳ್ಳುತ್ತಾರೆ. ಹೇಗಿದ್ದರೂ, ಸುವಾರ್ತೆಯ ಶುಭ ವಾರ್ತೆಯು ಕ್ರಿಸ್ತನು, ದೇವರಿಂದ ಅಭಿಷಿಕ್ತನು, ನಮ್ಮ ಪಾಪಗಳಿಗಾಗಿ ಶಿಲುಬೆಯ ಮೇಲೆ ತನ್ನ ದೈಹಿಕ ಜೀವ ಕೊಟ್ಟನು ಎಂಬುದಾಗಿದೆ (1 ಕೊರಿಂಥ 15:3).

ಬೈಬಲಿನ ಕಥೆಯ ಆಂತರ್ಯವು ಮನುಷ್ಯನಿಗಾಗಿ ದೇವರ ಕುಮಾರನಿಂದ ಶಿಲುಬೆಯ ಮೇಲೆ ಮಾಡಲ್ಪಟ್ಟ ಯಜ್ಞವಾಗಿದೆ. ಹಳೇ ಒಡಂಬಡಿಕೆಯ ಪುಟಗಳು ಅದರ ಪ್ರವಾದನೆಗಳೊಂದಿಗೆ, ಮತ್ತು ಹೊಸ ಒಡಂಬಡಿಕೆಯ ಪುಟಗಳು, ಅದರ ಐತಿಹಾಸಿಕ ವಾಸ್ತವಿಕತೆಯೊಂದಿಗೆ ಕ್ರಿಸ್ತನ ರಕ್ತದಿಂದ ತೊಟ್ಟಿಕ್ಕುತ್ತವೆ. ಯೇಸುವಿನ ಜೀವನದ ಕೊನೆಯ ಮೂರು ದಿನಗಳ ಕಥೆಯು ಸುವಾರ್ತೆಗಳಲ್ಲಿ ಐದರಲ್ಲಿ ಒಂದು ಭಾಗವನ್ನು ತೆಗೆದಕೊಳ್ಳುತ್ತದೆಂದು ಹೆನ್ರಿ ಸಿ. ಥಿಯೆಸ್ಸೆನ್ ಲೆಕ್ಕ ಹಾಕಿದ್ದಾರೆ. ಯೇಸುವಿನ ಮೂರುವರೆ ವರ್ಷಗಳ ಬಹಿರಂಗ ಸೇವೆಯನ್ನು ಆತನ ಮರಣದ ಹೆಚ್ಚು ವಿವರಣೆಯ ರೀತಿಯಲ್ಲಿ ಬರೆದಿದ್ದರೆ, ಸುವಾರ್ತೆಗಳು 8,400 ಪುಟಗಳನ್ನೊಳಗೊಂಡ ಒಂದು ಪುಸ್ತಕವಾಗುತ್ತಿದ್ದವು.[1] ಹೊಸ ಒಡಂಬಡಿಕೆಯಲ್ಲಿಯ ಪ್ರತಿ 53 ವಚನಗಳಲ್ಲಿ ಒಂದು ವಚನವು ಕ್ರಿಸ್ತನ ಮರಣಕ್ಕೆ ಸ್ಪಷ್ಟ ಉಲ್ಲೇಖ ಮಾಡುತ್ತದೆ ಎಂದು ಆರ್. ಎ. ಟೊರ್ರಿ ಅಂದಾಜು ಮಾಡಿದ್ದಾರೆ.[2] ಪಾಪಕ್ಕಾಗಿ ದೈವಿಕ ಯಜ್ಞವು ಸಮರ್ಪಿಸಲ್ಪಡುವುದು ಮತ್ತು ಆ ಯಜ್ಞವು ಸತ್ತವರೊಳಗಿಂದ ಪುನರುತ್ಥಾನವು ಕೇಂದ್ರವಾಗಿರುವ ಧರ್ಮವು ಜಗತ್ತಿನಲ್ಲಿ ಕ್ರೈಸ್ತತ್ವವು ಒಂದೇ ಆಗಿದೆ.

ಪಾಪದ ಹಾಗೂ ಪಾಪಿಗಳ, ಅಪರಾಧದ ಹಾಗೂ ದೈವ ಭಕ್ತಿಯಿಲ್ಲದ, ವಿಭಾಗವಾಗಿರುವ ಹಾಗೂ ಶ್ರಮೆತಾಳುತ್ತಿರುವ ಜಗತ್ತಿನಲ್ಲಿ ಶಿಲುಬೆಯು *ರಕ್ಷಣೆಯ ದೇವರ ಶಕ್ತಿಯಾಗಿದೆ;* ಜಗತ್ತಿನ ಅಂತಿಮ ಸಮಸ್ಯೆಗೆ ಅದು ದೈವಿಕ ಉತ್ತರ

ವಾಗಿದೆ. ಆತನು ನಮ್ಮ ಪಾಪಗಳನ್ನು ನಿವಾರಣೆ ಮಾಡುವ ಯಜ್ಞ ವಾಗಿದ್ದಾನೆ. ಅಂದರೆ ನಾವು ಮಾಡಿದ ತಪ್ಪುಗಳಿಗಾಗಿ ಕ್ರಯಕೊಟ್ಟು ನಮಗಾಗಿ ವಿಷಯ ಗಳನ್ನು ಸರಿಪಡಿಸುವ ಒಬ್ಬಾತನಾಗಿದ್ದಾನೆ. "ಶಿಲುಬೆಯ ವಿಷಯವಾದ ಮಾತು ನಾಶನದ ಮಾರ್ಗದಲ್ಲಿರುವವರಿಗೆ ಹುಚ್ಚು ಮಾತಾಗಿದೆ, ರಕ್ಷಣೆಯ ಮಾರ್ಗದಲ್ಲಿರುವ ನಮಗಾದರೋ ದೇವರ ಶಕ್ತಿಯಾಗಿದೆ" (1 ಕೊರಿಂಥ 1:18); "ಆತನು ನಮ್ಮ ಪಾಪಗಳನ್ನು ನಿವಾರಣೆ ಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ, ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣೆ ಮಾಡುತ್ತಾನೆ" (1 ಯೋಹಾನ 2:2) ಎಂದು ಬರೆಯಲ್ಪಟ್ಟಿದೆ.

ನಮ್ಮ ಆತ್ಮಿಕ ವೈಷಮ್ಯ ನಡುವೆ, ದೇವರಿಂದ ಅಗಲಿ ಹೋದದ್ದರ, ಹಾಗೂ *ದೇವರೊಂದಿಗೆ ಅನ್ಯೋನ್ಯತೆಯಿಲ್ಲದ ಪರಿಸ್ಥಿತಿಯಲ್ಲಿ ಶಿಲುಬೆಯು ಸಮಾಧಾನದ ಮತ್ತು ಸಂಧಾನದ ದೇವರ ಸಾಧನವಾಗಿದೆ,* "ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನು ಉಂಟುಮಾಡಿ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಆತನ ಮೂಲಕ ತನಗೆ ಸಂಧಾನಮಾಡಿಕೊಳ್ಳಬೇಕೆಂತಲೂ ನಿಷ್ಕರ್ಷೆ ಮಾಡಿದನು" (ಕೊಲೊಸ್ಸೆ 1:20). "ನಿಮ್ಮನ್ನೂ ನಮ್ಮನ್ನೂ ಒಂದು ಮಾಡಿದವನಾದ ಆತನೇ ನಮಗೆ ಸಮಾಧಾನ ಕರ್ತೃವಾಗಿದ್ದಾನೆ ಹಾಗೂ ನಮ್ಮನ್ನು ಅಗಲಿಸಿದ ಅಡ್ಡ ಗೋಡೆಯನ್ನು ಕೆಡವಿ ಹಾಕಿದನು. ... ಶಿಲುಬೆಯ ಮೂಲಕ ಉಭಯರನ್ನೂ ಒಂದೇ ದೇಹದಲ್ಲಿ ದೇವರೊಂದಿಗೆ ಸಮಾಧಾನಪಡಿಸಿದ್ದಾನೆ" ಎಂದು ಎಫೆಸ 2:14-16 ಹೇಳುತ್ತದೆ.

ಆತ್ಮಿಕ ಹಸಿವೆ ಹಾಗೂ ಬಡತನ ಹೆಚ್ಚಾಗುವಲ್ಲಿ ದೇವರು *ಸಂಪೂರ್ಣ ವಿಮೋಚನೆಯನ್ನು ಒದಗಿಸುತ್ತಾನೆ.* ನೀತಿಯ ಐಶ್ವರ್ಯಗಳು ಶಿಲುಬೆಯ ಅಡಿಯಲ್ಲಿ ಉಚಿತವಾಗಿ ಕೊಡಲ್ಪಟ್ಟಿವೆ. "ನಾವಾದರೋ ಶಿಲುಬೆಗೆ ಹಾಕಲ್ಪಟ್ಟವನಾದ ಕ್ರಿಸ್ತನನ್ನು ಪ್ರಚುರಪಡಿಸುತ್ತೇವೆ" (1 ಕೊರಿಂಥ 1:23) ಎಂದು ಪೌಲನು ಹೇಳಿದನು. ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನು "ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿಯೂ ಶುದ್ಧೀಕರಣವೂ ವಿಮೋಚನೆಯೂ ಆಗಿದ್ದಾನೆ" (1 ಕೊರಿಂಥ 1:30) ಎಂದೂ ಅವನು ಹೇಳಿದ್ದಾನೆ.

ಪ್ರಶ್ನೆಯಿಲ್ಲದೆ, ಪರಿಶುದ್ಧಾತ್ಮನು ಕ್ರಿಸ್ತನ ಶಿಲುಬೆಯ ಮೇಲೆ ಕೇಂದ್ರವಾಗಿ ಪ್ರಕಾಶಿಸುತ್ತಾನೆ ಎಂಬುದು ಬೈಬಲಿನ ಮುಖ್ಯ ಸಂದೇಶವಾಗಿದೆ.

ಶಿಲುಬೆಯು ವಿಮೋಚನೆಯನ್ನು ಕುರಿತ ಎಲ್ಲಾ ಇತರ ಸತ್ಯಗಳೊಂದಿಗೆ ಒಂದಾಗಿ ಮಿಶ್ರವಾಗಿರುವದರಿಂದ, ಉಕ್ಕುವ ಒರತೆಯಿಂದ ನೀರು ಹರಿದು ಬರುವಂತೆಯೂ, ಸೂರ್ಯನಿಂದ ಗುಣಪಡಿಸುವ ಕಿರಣಗಳು ಬರುವಂತೆಯೂ ಸಭೆಯು ಶಿಲುಬೆಯಿಂದ ಬರುವದೆಂದು ನಿರೀಕ್ಷಿಸ ಬಹುದು. ಹೊಸ ಒಡಂಬಡಿಕೆಯನ್ನು ಜಾಗರೂಕತೆಯಿಂದ ಓದುವುದು ಹೀಗಿರುವದೆಂಬುದನ್ನು ದೃಢಪಡಿಸುತ್ತದೆ.

ಕ್ರಿಸ್ತನು ಹಾಗೂ ಆತನ ಸಭೆಯು ಇಲ್ಲದೇ ಕ್ರೈಸ್ತತ್ವವಿರಲಾರದು; ತಾರ್ಕಿಕ ವಾಗಿ ಯೋಚಿಸುವುದು ತಲೆಯಿಲ್ಲದೇ ಜೀವಿಸುವ ದೇಹವಿರಲಾರದೆಂಬುದನ್ನು ಹೇಳುತ್ತದೆ. ಹೊಸ ಒಡಂಬಡಿಕೆಯ ಅತ್ಯಾಶ್ಚರ್ಯಕರವಾದ ಲಕ್ಷಣವು ಅದರ ಸಂದೇಶವಾಗಿದೆ; ಆ ಸಂದೇಶವು ಶಿಲುಬೆಯು ಮತ್ತು ಸಭೆಯು ನಿಕಟವಾಗಿ ಒಂದಾಗಿ ಜೋಡಿಸಲ್ಪಟ್ಟಿವೆ, ತಪ್ಪಿ ಹೋದ ಮಾನವರಿಗಾಗಿ ದೇವರ ಕೃಪೆಯ ವರವಾಗಿ ಒಂದು ಯೋಜನೆಯಲ್ಲಿ ಒಂದು ಗೂಡಿಸಲ್ಪಟ್ಟಿದೆ ಎಂಬುದು. ಭೂಲೋಕದ ಎಲ್ಲಾ ಜನಾಂಗಗಳೊಳಗಿಂದ, ಒಂದು ಹೊಸ ಕುಟುಂಬವನ್ನು ಶಿಲುಬೆಯಿಂದ - ಕ್ರಿಸ್ತನಲ್ಲಿ ಒಂದು ದೇಹ ವನ್ನು - ತನ್ನ ಆಯ್ದುಕೊಂಡ ಜನಾಂಗ ವಾಗಿರಲು ದೇವರು ಕರೆಯುತ್ತಾನೆ.

ಈ ಆಲೋಚನೆಯನ್ನು ಇನ್ನೂ ಮುಂದುವರಿಸೋಣ: ಸಭೆಯು ಹೇಗೆ ಶಿಲುಬೆಯೊಂದಿಗೆ ಸಂಬಂಧಿಸಿದೆ? ಶಿಲುಬೆಗೂ ಸಭೆಗೂ ಒಂದಕ್ಕೊಂದು ಯಾವ ಸಂಬಂಧವಿದೆ? ಸಭೆಗಾಗಿ ಶಿಲುಬೆಯು ಏನು ಮಾಡುತ್ತದೆ?

## ಅದರಿಂದ ಸೃಷ್ಟಿಸಲ್ಪಟ್ಟಿದೆ

ಮೊದಲನೆಯದು, ಶಿಲುಬೆಯು ಸಭೆಯನ್ನು ಸೃಷ್ಟಿಸುತ್ತದೆ. ಪಾಪಿಗಳ ವಿಮೋಚನೆಯ ಮುಖಾಂತರ ಸಭೆಯು ಉದಯವಾಗುತ್ತದೆ. ಶಿಲುಬೆಯು ಇರದಿದ್ದರೆ ಸಭೆಯು ಇರುವದಿಲ್ಲ.

ಒಬ್ಬ ವ್ಯಕ್ತಿಯು ವಿಧೇಯತೆಯುಳ್ಳ ನಂಬಿಕೆಯಲ್ಲಿ ಕ್ರಿಸ್ತನಿಗೆ, ಕ್ರಿಸ್ತನು ತನ್ನ ರಕ್ಷಕನೆಂದು ಮತ್ತು ದೇವರ ಕುಮಾರನೆಂದು ಉತ್ತರ ಕೊಡುವಾಗ, ಅವನು ಕ್ರಿಸ್ತನ ರಕ್ತದಲ್ಲಿ ತನ್ನ ಪಾಪಗಳಿಂದ ತೊಳೆಯಲ್ಪಡುವನು (ಅಪೊಸ್ತಲರ ಕೃತ್ಯಗಳು 22:16). ಆ ತೊಳೆಯುವಿಕೆಯ ಮುಖಾಂತರವಾಗಿ ಅವನು ವಿಮೋಚಿತರ ಸಮಾಜಕ್ಕೆ, ರಕ್ಷಿಸಲ್ಪಟ್ಟವರ ಸಮಾಜಕ್ಕೆ ಸೇರಿಸಲ್ಪಡುವನು. ಇದನ್ನು ಹೊಸ ಒಡಂಬಡಿಕೆಯು "ಸಭೆ" ಎಂದು ಕರೆಯುವುದು. ಈ ಕಾರಣದಿಂದ ತನ್ನ ರಕ್ತದಿಂದ ಯೇಸುವು ಸಭೆಯನ್ನು ಕೊಂಡುಕೊಂಡದ್ದರ ಬಗ್ಗೆ ಪೌಲನು ಮಾತಾಡುತ್ತಾನೆ. "ತನ್ನ ಸ್ವರಕ್ತದಿಂದ ಸಂಪಾದಿಸಿಕೊಂಡ ದೇವರ ಸಭೆಯನ್ನು ಪರಿಪಾಲಿಸುವದಕ್ಕಾಗಿ ಪರಿಶುದ್ಧಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ" (ಅಪೊಸ್ತಲರ ಕೃತ್ಯಗಳು 20:28). ಸ್ಪಷ್ಟವಾಗಿ, ಕ್ರಿಸ್ತನು ಸಭೆಗಾಗಿ ಶಿಲುಬೆಯ ಮೇಲೆ ಮರಣ ಹೊಂದಿದನು. "ಕ್ರಿಸ್ತನು ಸಭೆಯನ್ನು ಪ್ರೀತಿಸಿದನು ... ತನ್ನನ್ನು ಒಪ್ಪಿಸಿಕೊಟ್ಟನು" (ಎಫೆಸ 5:25ಬಿ) ಎಂದು ಪೌಲನು ಹೇಳಿದನು. ಯೇಸುವಿನ ಮರಣದ ಉದ್ದೇಶವು ಕ್ರಿಸ್ತನೊಂದಿಗೆ ಜಗತ್ತಿನಲ್ಲಿ ಜೀವಿಸುವ ಮತ್ತು ಆತನ

ಆತ್ಮಿಕ ಕಾರ್ಯಕ್ಕೆ ತಮ್ಮನ್ನು ಒಪ್ಪಿಸಿಕೊಡುವ “ಕರೆಯಲ್ಪಟ್ಟ” ಜನಾಂಗವನ್ನು ಒದಗಿಸುವದಾಗಿತ್ತು. ಯೇಸುವು “ನಮ್ಮನ್ನು ಸಕಲ ಅಧರ್ಮದಿಂದ ವಿಮೋಚಿಸುವದಕ್ಕೂ ಸತ್ಕ್ರಿಯೆಗಳಲ್ಲಿ ಆಸಕ್ತರಾದ ಸ್ವಕೀಯ ಜನರನ್ನು ತನಗಾಗಿ ಪರಿಶುದ್ಧ ಮಾಡುವದಕ್ಕೂ ನಮಗೋಸ್ಕರ ತನ್ನನ್ನು ಒಪ್ಪಿಸಿ ಕೊಟ್ಟನು” (ತೀತ 2:14) ಎಂದು ಪೌಲನು ತೀತನಿಗೆ ಹೇಳಿದನು.

ದಕ್ಷಿಣ ಆರ್ಕಾನ್ಸಿಸ್‌ದಲ್ಲಿ ಒಂದು ಸುವಾರ್ತಾ ಕೂಟದನಂತರ ಅಸಾಮಾನ್ಯವಾದ, ಮನಕಲಿಗಿಸುವ ಕಥೆಯೊಂದಿಗೆ ಒಬ್ಬ ಮಹಿಳೆ ಪ್ರಸಂಗಿಯ ಬಳಿಗೆ ಬಂದಳು. ಆಕೆ ನಾಲ್ಕು ವರ್ಷ ಪ್ರಾಯದವಳಾಗಿದ್ದಾಗ, ಟೆಕ್ಸಾಸಿನ ಡಲ್ಲಾಸದಲ್ಲಿ ವಾಸಿಸುತ್ತಿದ್ದಾಗ ಸಂಭವಿಸಿದ್ದರ ಬಗ್ಗೆ ಆಕೆ ಹೇಳಿದಳು. ಆ ಸಮಯದಲ್ಲಿ ಆಕೆಯ ಕುಟುಂಬವು ಬಹಳ ವಾಹನ ಸಂಚಾರವಿದ್ದ ಹೆದ್ದಾರಿಯ ಪಕ್ಕದಲ್ಲಿ ವಾಸವಾಗಿತ್ತು. ಹೊರಗೆ ಮನೆಯ ಮುಂದಿನ ಅಂಗಳದಲ್ಲಿ ಆಟವಾಡಲು ಮಕ್ಕಳಿಗೆ ಸ್ವಲ್ಪ ಸ್ಥಳವಿತ್ತು. ಒಂದು ದಿನ ಸಾಯಂಕಾಲ ಮನೆಯ ಮುಂದೆ ಆಕೆ ಹಾಗೂ ನೆರೆ ಹೊರೆಯ ಮಕ್ಕಳು ಅಂಗಳದಲ್ಲಿ ಚಂಡಿನಾಟ ಆಡುತ್ತಿದ್ದರು. ಆಕೆಯ ಕೈಯಿಂದ ಚಂಡು ಪುಟಿದು ಹೆದ್ದಾರಿಯಲ್ಲಿ ಉರುಳುತ್ತ ಹೋಯಿತು. ಅದನ್ನು ಹಿಡಿಯಲು ಆಕೆ ಓಡುತ್ತ ಹೋದಳು. ಅದನ್ನು ಎತ್ತಿಕೊಳ್ಳಲು ಬಗ್ಗಿದಾಗ ಹೆದ್ದಾರಿಯಲ್ಲಿ ಬರುತ್ತಿದ್ದ ದೊಡ್ಡ ಟ್ರಕ್ಕನ್ನು ನೋಡಿ ಭಯದಿಂದ ನಡುಗುವವಳಾದಳು. ಒಂಭತ್ತು ವರ್ಷ ವಯಸ್ಸಿನ ಆಕೆಯ ಅಣ್ಣ ಆಕೆ ಹೆದ್ದಾರಿಯಲ್ಲಿ ಓಡುತ್ತಿದ್ದನ್ನು ನೋಡಿದನು. ಬರುತ್ತಿದ್ದ ಟ್ರಕ್ಕನ್ನು ನೋಡಿದನು. ಮಿಂಚಿನ ವೇಗದಲ್ಲಿ ಆಕೆಯನ್ನು ಹಿಂಬಾಲಿಸಿ ಹಿಂದಿರುಗಿ ತರಲು ಓಡಿದನು. ಟ್ರಕ್ಕಿನ ಮುಂದೆ ಹೋಗಿ, ಆಕೆಯನ್ನು ದಾರಿಯಿಂದಾಚೆ ದೂಡಿದನು. ತನ್ನ ಎಳೆಯ ಜೀವವನ್ನು ಬಲಿಕೊಟ್ಟು ಆಕೆಯನ್ನು ಮರಣದಿಂದ ಕಾಪಾಡಿದನು. ತನ್ನ ಚಿಕ್ಕ ತಂಗಿಯನ್ನು ರಕ್ಷಿಸಲು ಆ ಬಾಲಕನಿಗೆ ಆ ಕ್ಷಣವು ಸಾಕಷ್ಟಾಯಿತು. ಆದರೆ ತನ್ನನ್ನು ರಕ್ಷಿಸಿಕೊಳ್ಳಲು ಸಾಕಷ್ಟು ಸಮಯವಿರಲಿಲ್ಲ. ಟ್ರಕ್ ಅವನನ್ನು ಜಜ್ಜಿತು. ತಕ್ಷಣವೇ ಅವನು ಸತ್ತು ಹೋದನು.

ಆ ಮಹಿಳೆ ಆ ದುಃಖಕರವಾದ ಘಟನೆಯ ಬಗ್ಗೆ ಹೆಚ್ಚು ವಿವರಗಳ ಜ್ಞಾಪಕವಿಲ್ಲ ಎಂದು ಹೇಳಿದಳು. ಆದರೆ ಬೀದಿಯಲ್ಲಿಂದ ಆಕೆಯ ಸಹೋದರನ ಜೀವವಿಲ್ಲದ ದೇಹವು ಎತ್ತಿಕೊಂಡು ತಂದು, ಅಂಬುಲನ್ಸ ವಾಹನವು ತೆಗೆದುಕೊಂಡು ಹೋಗುವವರೆಗೆ ತಮ್ಮ ಮನೆಯ ಪೋರ್ಚಿನಲ್ಲಿ ಇಡಲ್ಪಟ್ಟಿದ್ದರ ಜ್ಞಾಪಕವಿದೆಯೆಂದು ಹೇಳಿದಳು. ಆಳವಾದ ಅರ್ಥದಲ್ಲಿ ಮೆಚ್ಚಿಕೆಯ ವಿಶೇಷವಾದ ಮಾತುಗಳಲ್ಲಿ ಆಕೆ, “ನನ್ನ ಸಹೋದರ ನನಗಾಗಿ ಸತ್ತನು” ಎಂದು ಹೇಳಿದಳು. ಆಕೆ ಒಬ್ಬ ನಂಬಿಗಸ್ತಳಾದ ಕ್ರೈಸ್ತಳು. ಆಕೆಯ ಜೀವನಕ್ಕಾಗಿ ಇಂದು ಸಭೆಯಲ್ಲಿ ಆಕೆಯ ಸೇವೆಗಾಗಿ ಅವಕಾಶಗಳು ಅನೇಕ ವರ್ಷಗಳ ಹಿಂದೆ ಆಕೆಯ ಸಹೋದರನ ತ್ಯಾಗದಿಂದ ಸೃಷ್ಟಿಸಲ್ಪಟ್ಟಿದ್ದವು.

ಅದೇ ರೀತಿಯಲ್ಲಿ, ಆದರೆ ಎಷ್ಟೋ ಹೆಚ್ಚಾದ ಆಳವಾದ ರೀತಿಯಲ್ಲಿ ಸಭೆಯು ಯೇಸುವಿನ ಯಜ್ಞದ ಜೀವ ಪಡೆದುಕೊಂಡಿದೆ. ಆತನ ಮರಣವು ನಮಗಾಗಿ ಜೀವವನ್ನು ಪ್ರವೇಶಿಸುವ ಅವಕಾಶವಷ್ಟೇ ಆಗಿರುವದಿಲ್ಲ ಆದರೆ ಮುಂದುವರಿಯುವ ಜೀವದ ಮೂಲವಾಗಿದೆ. ಆತನ ಮರಣವು ನಮ್ಮನ್ನು ವಿಮೋಚಿಸುವ ಯಜ್ಞ ವಾಗಿದೆ. ನಮ್ಮ ಹಿಂದಿನ ಪಾಪಗಳಿಗಾಗಿ ಕ್ಷಮಾಪಣೆಯ ಸಾಧನವಾಗಿದೆ. ಯೇಸುವು ಈ ಲೋಕದೊಳಗೆ ಬಂದನು. ದೇವ - ಮಾನವನಂತೆ ನಮ್ಮ ಮಧ್ಯದಲ್ಲಿ ನಡೆದಾಡಿದನು. ತನ್ನ ಮರಣದಿಂದ "ದೇವರ ಸ್ವಂತ ಸ್ವಾಸ್ಥ್ಯವಾಗಿ ಒಂದು ಜನಾಂಗವನ್ನು ತನಗಾಗಿ ಕೊಂಡುಕೊಂಡನು" (1 ಪೇತ್ರ 2:9). ಸಭೆಯು ಕಲ್ಲು ಮಣ್ಣಿನಿಂದ ಮಾಡಿದ್ದಲ್ಲ; ಅದು ರಕ್ತದಿಂದ ಕೊಳ್ಳಲ್ಪಟ್ಟ ಜನಾಂಗವಾಗಿದೆ.

ಕ್ರಿಸ್ತನ ಯಜ್ಞಕ್ಕೆ ನಾವು ಮೂರು ವಿಧಗಳಲ್ಲಿ ಉತ್ತರ ಕೊಡುತ್ತೇವೆ: ಮೊದಲನೆಯದು, ಕ್ರಿಸ್ತನು ಮಾಡಿದ್ದನ್ನು *ಮೆಚ್ಚಿಕೊಂಡು* ನಾವು ಶಿಲುಬೆಯನ್ನು ಅಪ್ಪಿಕೊಳ್ಳುತ್ತೇವೆ. ಕೃತಜ್ಞತೆಯಿಂದ ವಿಮೋಚನೆ ಹೊಂದಿದವರು ಕ್ರಿಸ್ತನ ಕೃಪಾವರಕ್ಕಾಗಿ ಆನಂದಿಸುತ್ತಾರೆ. ಕ್ರಿಸ್ತನು ಪರಲೋಕದ ಮಹಿಮೆಯೊಂದಿಗೆ ಐಶ್ವರ್ಯವಂತನಾಗಿದ್ದನು; ಆದಾಗ್ಯೂ ನಮ್ಮ ನಿಮಿತ್ತವಾಗಿ ಆತನು ಪರಲೋಕವನ್ನು ಬಿಟ್ಟು, ಆತನು ಬಡತನದ ಮುಖಾಂತರವಾಗಿ - ನಾವು ಆತ್ಮಿಕವಾಗಿ ಐಶ್ವರ್ಯವುಳ್ಳ ವರಾಗುವಂತೆ ಆತನು ಬಡವನಾದನು (2 ಕೊರಿಂಥ 8:9). ಎರಡನೆಯದು, ಆತನ ಮರಣದ ಲಾಭಗಳನ್ನು *ಸ್ವೀಕರಿಸುವಾಗ* ನಾವು ಪ್ರತಿಕ್ರಿಯೆ ತೋರಿಸತಕ್ಕದ್ದು. ನಿಜ ವಾದ ಮೆಚ್ಚಿಕೆಯು ಯೋಗ್ಯವಾದ ಸ್ವೀಕಾರಕ್ಕೆ ನಡಿಸುವುದು. ನಂಬಿಕೆಯಿಂದಲೂ ಕ್ರಿಸ್ತನಿಗೆ ವಿಧೇಯತೆಯಿಂದಲೂ ನಮ್ಮ ಜೀವನಗಳಲ್ಲಿ ಆತನ ಮರಣದ ಲಾಭ ಗಳನ್ನು ತೆಗೆದುಕೊಳ್ಳುವೆವು (ರೋಮಾಪುರ 6:1-4). ಎಲ್ಲರಿಗೋಸ್ಕರವಾಗಿ ಆತನು ಮರಣ ಹೊಂದಿದನು (ಇಬ್ರಿಯ 2:9). ಆದರೆ ಆತನಿಗೆ ವಿಧೇಯರಾಗುವವರು ಮಾತ್ರವೇ ಆತನ ಮರಣದ ಲಾಭಗಳನ್ನು ಸ್ವೀಕರಿಸುವರು (ಇಬ್ರಿಯ 5:8, 9). ಮೂರನೆಯದು, ವಿಪುಲವಾದ ಸೇವೆಯೊಂದಿಗೆ ನಾವು ಆತನ ಯಜ್ಞಕ್ಕೆ ಪ್ರತ್ಯುತ್ತರ ಕೊಡಬೇಕು (1 ಕೊರಿಂಥ 15:58). ನಮ್ಮ ನಾಲಿಗೆಯಿಂದ ಕಾಲ್ಬೆರಳಿನವರೆಗೆ - ದೇಹ, ಪ್ರಾಣ ಹಾಗೂ ಆತ್ಮ ಎಲ್ಲವೂ ಕ್ರಿಸ್ತನಿಗೆ ಒಳಪಟ್ಟಿದೆ (1 ಕೊರಿಂಥ 6:19, 20). ಅದರಂತೆ ಈ ಲೋಕದಲ್ಲಿ ನಮ್ಮ ಕಾರ್ಯವು ಆತನು ರೂಪಿಸುವ, ನಿರ್ದೇಶಿಸುವ ಮತ್ತು ಸಂತೋಷಿಸುವ ಸೇವೆ ಮಾಡುವದಾಗಿದೆ.

## ಅದರಿಂದ ಶುದ್ಧೀಕರಿಸಲ್ಪಟ್ಟಿದೆ

ಎರಡನೆಯದು, ಶಿಲುಬೆಯು ಸತತವಾಗಿ ಸಭೆಯನ್ನು ಶುದ್ಧೀಕರಿಸುತ್ತದೆ. ಅದರ ಶುದ್ಧೀಕರಿಸುವ ಶಕ್ತಿಯು ಅನುದಿನವೂ ದೇವರ ಜನರಿಗೆ ಮತ್ತು ಅವರ

ಮುಖಾಂತರ ಹರಿಯುತ್ತದೆ. ನಮ್ಮ ಮುಖಾಂತರವಾಗಿ ನಮ್ಮ ದೇಹಗಳ ರಕ್ತವು ಹರಿದಾಡುವಂತೆ ನಮ್ಮನ್ನು ಕಾಪಾಡುತ್ತ ಹಾಗೂ ನಮ್ಮನ್ನು ಶುದ್ಧೀಕರಿಸುವಂತೆ ಯೇಸುವಿನ ಅಮೂಲ್ಯ ರಕ್ತವು ಜೀವ ಕಾಪಾಡುವ ಬಲದೊಂದಿಗೆ ಆತನ ಜನರ ಮುಖಾಂತರ ಕಾರ್ಯಮಾಡುತ್ತದೆ.

ನಾವು *ರಕ್ಷಿಸಲ್ಪಡುವ* ಅಗತ್ಯತೆಯಿರುವದಷ್ಟೇ ಅಲ್ಲ, ಆದರೆ ನಾವು ರಕ್ಷಿಸಲ್ಪಟ್ಟವರಾಗಿಯೇ ಇಡಲ್ಪಡುವ ಅಗತ್ಯತೆ ಇದೆ. ಪ್ರತಿಯೊಂದು ಸಲ, ಪಾಪಿಯು ಕ್ರಿಸ್ತನ ಸುವಾರ್ತೆಗೆ ತನ್ನ ವಿಧೇಯತೆಯ ಮೂಲಕ ಆತನ ರಕ್ತದಲ್ಲಿ ತೊಳೆಯಲ್ಪಡುವಾಗ ಮತ್ತು ದೈವಿಕ ಕೃಪೆಯಿಂದ ಕ್ರಿಸ್ತನಲ್ಲಿ ಇಡಲ್ಪಡುವಾಗ ಸಭೆಯು ವೃದ್ಧಿಯಾಗುತ್ತದೆ. ಕ್ರೈಸ್ತನು ಅನುದಿನವೂ ಬೆಳಕಿನಲ್ಲಿ ನಡೆಯುವಾಗ ಸತತವಾಗಿ ರಕ್ತದಿಂದ ಶುದ್ಧೀಕರಿಸಲ್ಪಡುತ್ತಾನೆ. "ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ. ಮತ್ತು ಆತನ ಕುಮಾರನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ" (1 ಯೋಹಾನ 1:7) ಎಂದು ಯೋಹಾನನು ಬರೆದನು. "ಶುದ್ಧಿಮಾಡುತ್ತದೆ" ಎಂಬುದನ್ನು ಗ್ರೀಕ ಭಾಷೆಯಲ್ಲಿ ಯೋಹಾನನು ವರ್ತಮಾನಕಾಲದಲ್ಲಿ ಇಟ್ಟಿರುತ್ತಾನೆ. ಇದು ಸ್ಥಿರವಾದ, ನಿರಂತರವಾದ ಈಗಿನ ತೊಳೆಯುವಿಕೆಯನ್ನು ಸೂಚಿಸುತ್ತದೆ.

ಒಬ್ಬ ಕ್ರೈಸ್ತನು ಕಡಿಮೆ ಪಾಪಮಾಡಿ ಪ್ರತೀದಿನ ಕ್ರಿಸ್ತನಲ್ಲಿ ಬೆಳೆದರೂ ಪರಿಪೂರ್ಣ ವ್ಯಕ್ತಿಯಾಗುವದಿಲ್ಲ. *ಅವನು ತಪ್ಪಿಲ್ಲದವನಲ್ಲ. ಅವನು ದೂಷಣೆಯಿಲ್ಲದವನಾಗಿರ ಬೇಕು.* ಪಾಪಿಯ ಜೀವನದಲ್ಲಿ ಪಾಪವಿರುವಂಥದ್ದಕ್ಕೆ ಕ್ರಿಸ್ತನ ರಕ್ತದ ಮುಖಾಂತರವಾಗಿ ರಕ್ಷಿಸಲ್ಪಡುವದರ ಅಗತ್ಯತೆಯನ್ನು ತೋರಿಸುತ್ತದೆ. ಭಕ್ತನ ಜೀವನದಲ್ಲಿಯ ಪಾಪವು, ಅವನು ಇಲ್ಲವೇ ಅವಳು ಕ್ರಿಸ್ತನ ರಕ್ತದಿಂದ ರಕ್ಷಿಸಲ್ಪಡಬೇಕಾಗಿದೆಯೆಂಬುದನ್ನು ತೋರಿಸುತ್ತದೆ. ಈ ಲೋಕದಲ್ಲಿ ನಾವು ಕ್ಷಮಾಪಣೆಯ ಅಗತ್ಯತೆಯಿಲ್ಲದವರಾಗಿ ಬೆಳೆಯುತ್ತಾ ಹೋಗುವದಿಲ್ಲ.

ಒಂದು ಮಗು ಬೈಸಿಕಲ್ ಮೇಲೆ ಹೋಗುವದನ್ನು, ಕಲಿಯುವದನ್ನು ಗಮನಿಸುವುದು ಆಸಕ್ತಿಯುಳ್ಳದ್ದಾಗಿದೆ. ಈ ಹೊಸ ಕಾರ್ಯವನ್ನು ಕಲಿಯುವದರಲ್ಲಿ ಅವನು ಎರಡು ಪ್ರಾಥಮಿಕ ಸಮಸ್ಯೆಗಳನ್ನು ಎದುರಿಸುವನು: ಬೈಸಿಕಲ್ಲನ್ನು ಎತ್ತಿ ನಿಲ್ಲಿಸುವುದು ಹಾಗೂ ಮುಂದೆ ಓಡಿಸಿಕೊಂಡು ಹೋಗುವವುದು. ಬೈಸಿಕಲ್ ಸವಾರಿ ಮಾಡುವದನ್ನು ಕಲಿತು ಕೊಳ್ಳುವದರಲ್ಲಿಯಂತೆಯೇ ರಕ್ಷಣೆಯು ಸಹ ಎರಡು ಹೆಜ್ಜೆಗಳನ್ನು ಒಳಗೊಂಡಿರುವದನ್ನು ದೃಷ್ಟಿಸಬೇಕು: ಪಾಪಿಯು ದೇವರೊಂದಿಗೆ *ಸರಿಪಡಿಸಿಕೊಳ್ಳತಕ್ಕದ್ದು* ಮತ್ತು ದೇವರೊಂದಿಗೆ *ಸರಿಯಾಗಿ ಉಳಿದು* ಕೊಳ್ಳತಕ್ಕದ್ದು. ಸರಿಪಡಿಸಿಕೊಳ್ಳುವುದು ಅಗತ್ಯವಾಗಿದೆ. ಆದರೆ ಅದು ಪ್ರಾರಂಭಮಾತ್ರವೇ ಆಗಿದೆ. ಮೊದಲನೆಯ ಸಲ ಅವನನ್ನು ಪಾಪಿಯಾಗಿ ಮಾಡಿದ ಸಮಸ್ಯೆಯೇ - ಅವನ

ಜೀವನದಲ್ಲಿಯ ಪಾಪ ಕಲೆಯು - ಅವನು ಸತತವಾಗಿ ಶುದ್ಧೀಕರಿಸಲ್ಪಡದಿದ್ದರೆ ಅವನು ಕ್ರೈಸ್ತನಾದ ಮೇಲೆಯೂ ಅವನನ್ನು ಖಂಡಿಸಬಹುದು (ಅಪೊಸ್ತಲರ ಕೃತ್ಯಗಳು 8:22). ಅವನು ಕ್ರೈಸ್ತನಾಗುವ ಮೊದಲು ಪಾಪಗಳಿಂದ ರಕ್ಷಿಸಲ್ಪಡುವ ಅಗತ್ಯತೆಯಿದ್ದರೆ, ಅವನು ಕ್ರೈಸ್ತನಾದ ನಂತರವೂ ಅವನು ಮಾಡುವ ಯಾವುದೇ ಪಾಪದಿಂದ ರಕ್ಷಿಸಲ್ಪಡುವ ಅಗತ್ಯತೆಯಿರುವದಿಲ್ಲವೋ?

ಕ್ರೈಸ್ತನು "ಬೆಳಕಿನಲ್ಲಿ ನಡೆಯುವವರೆಗೆ" ರಕ್ಷಿಸಲ್ಪಟ್ಟವನಾಗಿಯೇ ಉಳಿಯುವನು. ಅಪೊಸ್ತಲನಾದ ಯೋಹಾನನ ಪ್ರಕಾರವಾಗಿ ಬೆಳಕಿನಲ್ಲಿ ನಡೆಯುವವರು ಎರಡು ಆತ್ಮಿಕ ಗುಣಲಕ್ಷಣಗಳನ್ನು ಒಳಗೊಂಡಿರುತ್ತಾರೆ. *ರಕ್ಷಣೆಗಾಗಿ ಯೇಸುವನ್ನು ನಂಬುವದರೊಂದಿಗೆ* ಅದು ಪ್ರಾರಂಭವಾಗುವುದು: "ಆತನು ನಮ್ಮ ಪಾಪಗಳನ್ನು ನಿವಾರಣೆ ಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ, ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣೆ ಮಾಡುತ್ತಾನೆ" (1 ಯೋಹಾನ 2:2). ಸ್ಪಷ್ಟವಾಗಿ, ನಾವು ರಕ್ಷಣೆಯನ್ನು ನಾವೇ ಗಳಿಸಿಕೊಳ್ಳಲಾರೆವು (ಎಫೆಸ 2:8, 9). ನಂಬಿಕೆಯಲ್ಲಿಯೂ ವಿಧೇಯತೆಯಲ್ಲಿಯೂ ಆತನಿಗೆ ನಾವು ಉತ್ತರಕೊಟ್ಟರೆ ನಮ್ಮನ್ನು ರಕ್ಷಿಸುವೆನೆಂದು ಯೇಸು ಹೇಳಿದ್ದಾನೆ. ಆತನು ಏನು ಮಾಡುವೆನೆಂದು ಹೇಳಿದ್ದಾನೋ ನಾವು ಅದನ್ನು ನಂಬತಕ್ಕದ್ದು. ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವೆ (2 ಕೊರಿಂಥ 5:7).

ಬೆಳಕಿನಲ್ಲಿ ನಡೆಯುವದಕ್ಕೆ *ಯಥಾರ್ಥತೆಯಿಂದ ಆತನ ಚಿತ್ತವನ್ನು ಮಾಡುವುದು ಅಗತ್ಯವಾಗಿರುತ್ತದೆ.* "ದೇವರ ಮೇಲಣ ಪ್ರೀತಿ ಏನಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವುದೇ" (1 ಯೋಹಾನ 5:3); "ಆತನನ್ನು ಬಲ್ಲೆನೆಂದು ಹೇಳಿ ಆತನ ಆಜ್ಞೆಗಳನ್ನು ಕೈಕೊಳ್ಳದೆ ನಡೆಯುವವನು ಸುಳ್ಳುಗಾರನಾಗಿದ್ದಾನೆ; ಸತ್ಯವೆಂಬುದು ಅವನಲ್ಲಿ ಇಲ್ಲ. ಯಾವನಾದರೂ ಆತನ ವಾಕ್ಯವನ್ನು ಕೈಕೊಂಡು ನಡೆದರೆ ಅವನಲ್ಲಿ ನಿಜವಾಗಿ ದೇವರ, ಪ್ರೀತಿಯು ಪರಿಪೂರ್ಣವಾಗಿದೆ" (1 ಯೋಹಾನ 2:4, 5ಎ). ಬೆಳಕಿನಲ್ಲಿ ನಡೆಯುವುದು ಅಂದರೆ ನಮ್ಮ ಪಾಪಭರಿತತೆಯನ್ನು ಒಪ್ಪಿಕೊಳ್ಳುವುದು (1 ಯೋಹಾನ 1:8, 10), ದೇವರ ಮುಂದೆ ನಮ್ಮ ಪಾಪಗಳನ್ನು ಒಪ್ಪಿಕೊಳ್ಳುವುದು (1 ಯೋಹಾನ 1:9) ಮತ್ತು ನಮ್ಮ ಶಕ್ತಿಯೊಂದಿಗೆ ಸಾಮರಸ್ಯದಲ್ಲಿ ನಮ್ಮ ಪಾಪಗಳನ್ನು ತಿದ್ದಿ ಕೊಳ್ಳುವುದು ಆಗಿದೆ (1 ಯೋಹಾನ 2:29). ಇದರ ಅರ್ಥ ಆತನು ನಡೆದಂತೆ ನಡೆಯುವುದು (1 ಯೋಹಾನ 2:6) ಮತ್ತು ಯಥಾರ್ಥವಾಗಿ ದೇವರಿಂದ ಪ್ರೇರಿತವಾದ ಪ್ರಕಟನೆಯನ್ನು, ಪರಿಶುದ್ಧ ಬರಹಗಳನ್ನು ಯಥಾರ್ಥವಾಗಿ ಅನುಸರಿಸುವುದು ಎಂದಾಗುತ್ತದೆ (2 ತಿಮೊಥೆ 3:16).

## ಅದರಿಂದ ಒತ್ತಾಯಿಸಲ್ಪಡುತ್ತದೆ

ಮೂರನೆಯದು, ಶಿಲುಬೆಯು ಸಭೆಗೆ ಒತ್ತಾಯ ಮಾಡುತ್ತದೆ ಮತ್ತು ಚಟುವಟಿಕೆಯುಳ್ಳದ್ದನ್ನಾಗಿ ಮಾಡುತ್ತದೆ. ಸಭೆಯ ಹೃದಯದೊಳಗೆ ನಾವು ಏನಾಗಿರಬೇಕೆಂದು ಕ್ರಿಸ್ತನು ಬಯಸುತ್ತಾನೇ ಅಂಥ ವ್ಯಕ್ತಿಯಾಗಿರಲು ಮತ್ತು ನಾವು ಮಾಡಬೇಕೆಂದು ಕ್ರಿಸ್ತನು ಬಯಸುವ ಕೆಲಸವನ್ನು ಮಾಡಲು ಅದು ಆತ್ಮಿಕ ಪ್ರೇರಣೆಯನ್ನು ಹುಟ್ಟಿಸುತ್ತದೆ.

ಕ್ರೈಸ್ತನಿಗೆ ಸತತವಾದ ಶುದ್ಧೀಕರಣವೂ ಹಾಗೆಯೇ ವೈಯಕ್ತಿಕ ಶಕ್ತಿಯೂ ಅಗತ್ಯವಾಗಿದೆ. ಕ್ರೈಸ್ತತ್ವವು ಅನೇಕ ಉನ್ನತವಾದ ಪ್ರೇರಣೆಗಳನ್ನು ಒದಗಿಸುತ್ತದೆ. ದೇವರ ಕೃಪೆಯು ಅತ್ಯುನ್ನತವಾದದ್ದು ಬಹಳವಾಗಿ ಸ್ಥಿರವಾದದ್ದೂ ಆಗಿರುವುದು. ಶಿಲುಬೆಯು ಕ್ರೈಸ್ತನ ಜೀವಿತಗಳನ್ನು ನಿಯಂತ್ರಿಸುವುದು. "ಆದರೆ ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳು ವೆನು" (ಯೋಹಾನ 12:32) ಎಂದು ಯೇಸು ಹೇಳಿದನು. "ಕ್ರಿಸ್ತನ ಪ್ರೀತಿಯು ನಮಗೆ ಒತ್ತಾಯ ಮಾಡುತ್ತದೆ; ಎಲ್ಲರಿಗೋಸ್ಕರ ಒಬ್ಬನು ಸತ್ತದ್ದರಿಂದ ಎಲ್ಲರೂ ಸತ್ತಂತಾಯಿತೆಂದು ನಿಶ್ಚಯಿಸಿಕೊಂಡೆವು. ಜೀವಿಸುವವರು ಇನ್ನು ಮೇಲೆ ತಮಗಾಗಿ ಜೀವಿಸದೆ ತಮಗೋಸ್ಕರ ಸತ್ತು, ಎದ್ದು ಬಂದಾತನಿಗಾಗಿ, ಜೀವಿಸ ಬೇಕೆಂತಲೇ ಆತನು ಎಲ್ಲರಿಗೋಸ್ಕರ ಸತ್ತನು" (2 ಕೊರಿಂಥ 5:14, 15) ಎಂದು ಪೌಲನು ಬರೆದನು.

ದೇವರಿಗಾಗಿಯೂ ಒಬ್ಬರೊಬ್ಬರಿಗಾಗಿಯೂ ಮಹಾ ಪ್ರೀತಿಯೊಂದಿಗೆ ಶಿಲುಬೆಯು ಕ್ರೈಸ್ತರನ್ನು ತುಂಬಿಸುವುದು. "ದೇವರು ಮೊದಲು ನಮ್ಮನ್ನು ಪ್ರೀತಿ ಸಿದರಿಂದ ನಾವು ಪ್ರೀತಿಸುತ್ತೇವೆ" (1 ಯೋಹಾನ 4:19) ಎಂದು ಯೋಹಾನನು ಬರೆದಿದ್ದಾನೆ. ಆತನ ಜನರಿಗಾಗಿರುವ ಆತನ ಪ್ರೀತಿಯ ಮೇಲೆ ಅನುದಿನವೂ ಕ್ರೈಸ್ತರು ಧ್ಯಾನಮಾಡುವಾಗ, ಅವರು ಆತನನ್ನು ಆಳವಾಗಿ ಪ್ರೀತಿಸಲು ಎಳೆ ಯಲ್ಪಡುವರು. "ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟಿದ್ದರಲ್ಲಿಯೇ ಪ್ರೀತಿ ಇಂಥದೆಂದು ನಮಗೆ ತಿಳಿದುಬಂದಿದೆ. ನಾವು ಸಹ ಸಹೋದರರಿ ಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ" (1 ಯೋಹಾನ 3:16) ಎಂದು ಯೋಹಾನನು ಹೇಳಿದ್ದಾನೆ. ಯೇಸುವಿನ ಜೀವನದ ಯಾವುದೇ ಪುನರಾವಲೋಕನವು ಆತನ ಪ್ರೀತಿಯ ಸ್ಥಿರತೆಯ, ಆಳವಾದ, ನೂತನವಾದ ಚಿತ್ರವನ್ನು ಉತ್ಪಾದಿಸುತ್ತದೆ. ಈ ರೂಪಗಳ ಬಗ್ಗೆ ಯೋಚಿಸುವುದು ಕ್ರೈಸ್ತರಿಗೆ ಯೇಸುವಿಗಾಗಿರುವ ಹಾಗೂ ಒಬ್ಬರಿಗೋಸ್ಕರವಾಗಿ ಒಬ್ಬರಿಗೆ ಇರುವ ಅದೇ ಪ್ರೀತಿ ಯನ್ನು ಕೊಡುತ್ತದೆ: "ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೇ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳ

ವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ" (2 ಕೊರಿಂಥ 3:18).

ಶಿಲುಬೆಯು ಪಾಪದ ಕಡೆಗೆ ತಿರಸ್ಕಾರವನ್ನೂ ನಿರ್ಲಕ್ಷವನ್ನೂ ಕ್ರೈಸ್ತರಲ್ಲಿ ಹುಟ್ಟಿಸುತ್ತದೆ. ಪಾಪದ ದುಷ್ಟತ್ವ ಮತ್ತು ನಾಶನಕ್ಕೆ ಎರಡು ಬಲವಾದ ಸಾಕ್ಷಿಗಳು ಕಲ್ವಾರಿಯ ಶಿಲುಬೆ ಹಾಗೂ ನಿತ್ಯನಾಶನದ ತಳವಿಲ್ಲದ ತಗ್ಗು ಆಗಿರುತ್ತವೆ. ಶಿಲುಬೆಗಾಗಿ ಕಾರಣವನ್ನು ಮತ್ತು ನರಕದ ಅವಶ್ಯಕತೆಯನ್ನು ಅರ್ಥಮಾಡಿಕೊಳ್ಳುವ ಯಾರೂ ಪಾಪಮಾಡುವದಕ್ಕೆ ಯಾವುದೇ ಯೋಗ್ಯತೆಯಿದೆಯೆಂದು ವಾದಿಸುವದಿಲ್ಲ. ಯೆರೂಸಲೇಮಿನ ಹೊರಗೆ ಶಿಲುಬೆಯ ಮೇಲೆ ದೇವರ ಕುಮಾರನ ನೋವಿನಿಂದ ತುಂಬಿದ ಮರಣವು ತನ್ನ ವಿಮೋಚನೆಯನ್ನು ತಂದಿತೆಂಬುದನ್ನು ದೇವರ ಮಗುವು ಮರೆಯಾಲಾರನು. ಸರ್ವಶಕ್ತನಾದ ದೇವರು ತನ್ನ ಕುಮಾರನ ಯಜ್ಞದಿಂದ ಮಾತ್ರವೇ ಪಾಪಕ್ಕಾಗಿ ಪರಿಹಾರವನ್ನು (ಕ್ರಯವನ್ನು) ಒದಗಿಸಬಲ್ಲನು. ಈ ಬೆಲೆಯುಳ್ಳ ಘಟನೆಯು ಅರುಹು ಉಳ್ಳ ಪ್ರತಿಯೊಬ್ಬ ವ್ಯಕ್ತಿಯ ಪಾಪವನ್ನು ತಿರಸ್ಕರಿಸಿ, ತ್ಯಜಿಸಿಬಿಡುವಂತೆ ಒತ್ತಾಯ ಮಾಡುವುದು.

ಕ್ರಿಸ್ತನ ನಿಯೋಗಕ್ಕೆ ತಮ್ಮನ್ನು ಸಂಪೂರ್ಣವಾಗಿ ಕೊಡುವಂತೆ ಶಿಲುಬೆಯು ಕ್ರೈಸ್ತರನ್ನು *ಒತ್ತಾಯ* ಮಾಡುತ್ತದೆ. ದೇವರ ಸೇವೆ ಮಾಡುವದಕ್ಕೆ, ಇತರ ಜನರಿಗೆ ಸಹಾಯ ಮಾಡುವದಕ್ಕೆ ಅದು ಕಾರಣವನ್ನೂ, ಬಲವನ್ನೂ ಒದಗಿಸುತ್ತದೆ. "ಗ್ರೀಕರಿಗೂ, ಇತರ ಜನಗಳಿಗೂ, ಜ್ಞಾನಿಗಳಿಗೂ ಮೂಢರಿಗೂ ತೀರಿಸಬೇಕಾದ ಒಂದು ಋಣ ನನ್ನ ಮೇಲೆ ಇದೆ" (ರೋಮಾಪುರ 1:14) ಎಂದು ಪೌಲನು ಬರೆದನು. "ಆದರೆ ನಾನು ಎಂಥವನಾಗಿದ್ದೇನೋ ದೇವರ ಕೃಪೆಯಿಂದಲೇ ಅಂಥವನಾಗಿದ್ದೇನೆ. ನನಗುಂಟಾದ ಆತನ ಕೃಪೆಯು ನಿಷ್ಫಲವಾಗಿಲ್ಲ; ನಾನು ಅವರೆಲ್ಲರಿಗಿಂತಲೂ ಹೆಚ್ಚಾಗಿ ಪ್ರಯಾಸ ಪಟ್ಟೆನು. ಆದರೆ ಪ್ರಯಾಸ ಪಟ್ಟವನು ನಾನಲ್ಲ; ನನ್ನೊಂದಿಗಿರುವ ದೇವರ ಕೃಪೆಯೇ" (1 ಕೊರಿಂಥ 15:10) ಎಂದೂ ಅವನು ಹೇಳಿದ್ದಾನೆ. ಶಿಲುಬೆಯ ಮೇಲೆ ತನಗಾಗಿ ದೇವರು ಏನು ಮಾಡಿದನೆಂಬುದನ್ನು ಅರ್ಥಮಾಡಿಕೊಳ್ಳುವ ಹಾಗೂ ಮೆಚ್ಚಿಕೊಳ್ಳುವ ವ್ಯಕ್ತಿಗಿಂತ ಹೆಚ್ಚಾಗಿ ಬೇರೆ ಯಾವುದೇ ಕ್ರೈಸ್ತನು ಕ್ರಿಸ್ತನ ಕಾರ್ಯ ಮಾಡಲು ಪೂರ್ತಿಯಾಗಿ ಪ್ರೇರೇಪಿಸಲ್ಪಡುವದಿಲ್ಲ.

ಕ್ರಿಸ್ತನ ಸಭೆಯು ತನ್ನ ಕರ್ತನ ಆಜ್ಞೆಗಳನ್ನು ಜಾಗರೂಕತೆಯಿಂದ ಕೈಕೊಳ್ಳುತ್ತದೆ. ಅದು ಆತನ ಅಪೇಕ್ಷೆಗಳನ್ನು ಮಾಡುತ್ತದೆ. ಹಾಗೂ ಆತನ ಯೋಜನೆಗಳನ್ನು ನೆರವೇರಿಸುತ್ತದೆ. ಆದರೆ ಪ್ರೀತಿಯ ಒತ್ತಾಯ ಪೂರ್ವಕ ಒತ್ತಡದ ಹಾಗೂ ಆತನ ಕೃಪೆಯ ಆಂತರಿಕ ಪ್ರೇರಣೆಯ ಕಾರಣದಿಂದ ವಿಧೇಯ ಜೀವಿತವನ್ನು ಭಾರವಾದದ್ದನ್ನಾಗಿ ಕಂಡು ಕೊಳ್ಳುವದಿಲ್ಲ. "ದೇವರ ಮೇಲಣ ಪ್ರೀತಿ ಏನಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವುದೇ. ಆತನ ಆಜ್ಞೆಗಳು ಭಾರವಾದವುಗಳಲ್ಲ" (1 ಯೋಹಾನ 5:3).

ಆತನು ನಿನಗಾಗಿ ಮಾಡಿದ ಯಜ್ಞವನ್ನು ಅನುದಿನವೂ ಜ್ಞಾಪಿಸುತ್ತ, ಕ್ರಿಸ್ತನು ನಿನಗಾಗಿ ಮಾಡಿದ್ದನ್ನು ಮನಸ್ಸಿನಲ್ಲಿಟ್ಟುಕೋ. ರಕ್ಷಣೆಯ ಆತನ ವರದ ಬಗ್ಗೆ ಜಾಗರೂಕತೆಯಿಂದ ಮಾಡಿದ ಈ ಯೋಚನೆಯು ದಿನದಿನವೂ, ಆತನ ಸ್ವಭಾವಕ್ಕೆ ನಿನ್ನನ್ನು ಬದಲಾಯಿಸಬಹುದು. ಕೃಪೆಯ ಆತನ ರಾಜ್ಯದಲ್ಲಿ ಪ್ರೀತಿಯ ಸೇವೆ ಮಾಡಲು ನಿನ್ನನ್ನು ನಡಿಸುವುದು.

## ಮುಕ್ತಾಯ

ದೇವರ ನಕ್ಷೆಯಿಂದ ಸಭೆ ಮತ್ತು ಶಿಲುಬೆಯು ಒಟ್ಟಾಗಿ ಕಟ್ಟಲ್ಪಟ್ಟಿವೆ. ಸಭೆಯು ಶಿಲುಬೆಯಿಂದ ಸೃಷ್ಟಿಸಲ್ಪಟ್ಟಿದೆ. ಶುದ್ಧೀಕರಿಸಲ್ಪಟ್ಟಿದೆ ಹಾಗೂ ಒತ್ತಾಯಿಸಲ್ಪಟ್ಟಿದೆ.

ಯೇಸು ಶಿಲುಬೆಯ ಮೇಲೆ ಶ್ರಮೆ ಪಡುತ್ತಿದ್ದಾಗ ಕೆಳಗಿದ್ದ ಕ್ರಮವಿಲ್ಲದ ಜನಸಮೂಹವು ಅಪಹಾಸ್ಯಕರವಾದ ಎರಡು ಪ್ರಶ್ನೆಗಳನ್ನು ಆತನ ಕಡೆಗೆ ಹೇಳಿತು. "ಆತನು ತನ್ನನ್ನು ಯಾಕೆ ರಕ್ಷಿಸಿಕೊಳ್ಳಬಾರದು?" ಹಾಗೂ "ದೇವರು ಯಾಕೆ ಆತನನ್ನು ರಕ್ಷಿಸಬಾರದು?" (ಮತ್ತಾಯ 27:39-43 ನೋಡಿರಿ). ದೇವರ ನಿಯೋಗದ ಅಸ್ತಿವಾರಕ್ಕೆ ತಾವು ಹೊಡೆಯುತ್ತಿರುವೆವೆಂದು ಜನ ಸಮೂಹ ತಿಳಿದುಕೊಳ್ಳಲಿಲ್ಲ. ಯೇಸು ತನ್ನನ್ನು ರಕ್ಷಿಸಿಕೊಂಡರೆ ಇಲ್ಲವೇ ದೇವರು ಆತನನ್ನು ಶಿಲುಬೆಯ ಮರಣದಿಂದ ಬಿಡುಗಡೆಮಾಡಿದ್ದರೆ ಸಭೆಗೆ ಜೀವಿಸಲು ಅಸಾಧ್ಯವಾಗುತ್ತಿತ್ತು. ಯಾಕಂದರೆ ಸಭೆಯು ಶಿಲುಬೆಯಿಂದ ತಮ್ಮ ಪಾಪಗಳ ಕ್ಷಮಾಪಣೆ ಹೊಂದಿದ, ಅನುದಿನವೂ ತೊಳೆಯಲ್ಪಟ್ಟ ಶುದ್ಧೀಕರಿಸಲ್ಪಟ್ಟ ಜನರಿಂದ ರಚಿಸಲ್ಪಟ್ಟಿದೆ. ಶಿಲುಬೆಯಿಲ್ಲದೆ ಸಭೆಯು ತನ್ನ ಮುಂದರಿದ ಜೀವನದಲ್ಲಿ ಆಂತರಿಕ ಒತ್ತಾಸೆಯಿಲ್ಲದೇ ಇರುವುದು. ಸಭೆಯು ಶಿಲುಬೆಯಿಂದ ದೇವರ ಜನಾಂಗವಾಗಿರಲು ಹಾಗೂ ದೇವರ ಮಾರ್ಗದಲ್ಲಿ ದೇವರ ಕಾರ್ಯಮಾಡಲು ಒತ್ತಾಯಿಸಲ್ಪಟ್ಟಿರುವುದು.

ನೀವು ಕ್ರಿಸ್ತನ ಸಭೆಯಿಂದ ಹೊರಗೆ ಇದ್ದರೆ, ಅದನ್ನು ಸೇರಲಿಕ್ಕೆ ತ್ವರೆಪಡಿರಿ. ಯಾಕಂದರೆ ಸಭೆಯನ್ನು ಪ್ರವೇಶಿಸುವದರಲ್ಲಿ ನೀವು ಶಿಲುಬೆಯ ಎಲ್ಲಾ ಲಾಭ ಗಳನ್ನು ಹೊಂದಿಕೊಳ್ಳುವಿರಿ. ಸಭೆಯು ಕ್ರಿಸ್ತನ ರಕ್ತದಿಂದ ವಿಮೋಚಿಸಲ್ಪಟ್ಟ ಮತ್ತು ದೇವರ ಮಕ್ಕಳಂತೆ ಜೀವಿಸುವ ಜನರ ಸಭೆಯಾಗಿರುತ್ತದೆ.

ಈ ಲೋಕದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ದೇವರ ಉನ್ನತವಾದ ವರಗಳಿಂದ ಸುತ್ತುವರಿಯಲ್ಪಟ್ಟಿದ್ದಾನೆ. ಉಸಿರಾಡಿಸಲು ಹವೆಯನ್ನು, ಕುಡಿಯಲಿಕ್ಕೆ ನೀರನ್ನು, ವಾಸಿಸಲಿಕ್ಕೆ ಭೂಮಿಯನ್ನು ಆನಂದಿಸಲು ಕುಟುಂಬದ ಸಂಬಂಧಗಳನ್ನು ಹಾಗೂ ಇನ್ನೂ ಎಣಿಸಲಾಗದಷ್ಟು ಇತರ ಲಾಭಗಳನ್ನು ಆತನು ಒದಗಿಸುತ್ತಾನೆ. ದೇವರ ಎಲ್ಲಾ ದಯೆಗಳನ್ನು ಹೇಳಲಿಕ್ಕೆ ಯಾರಿಗೂ ಸಾಧ್ಯವಿಲ್ಲ. ಸಂಶಯವಿಲ್ಲದೇ, ಆತನ

ಕೃಪೆಯ ಉನ್ನತವಾದ ಪ್ರಕಟನೆಯು ಕ್ರಿಸ್ತನ ಮುಖಾಂತರ ಆತನು ಕೊಡುವ ರಕ್ಷಣೆಯಾಗಿದೆ. ಅದು ದೇವರಿಗೆ ಅತೀ ದೊಡ್ಡ ಬೆಲೆಯನ್ನು ಒಳಗೊಂಡಿರುತ್ತದೆ, ಅದನ್ನು ಸ್ವೀಕರಿಸುವ ಪಾಪಿಗಳಿಗೆ ಅತೀ ದೊಡ್ಡ ಲಾಭವನ್ನು ಕೊಡುತ್ತದೆ.

ದೇವರು ತಮಗೆ ಕೊಟ್ಟ ಪ್ರಾಪಂಚಿಕ ಆಶೀರ್ವಾದಗಳಲ್ಲಿ ಆತನ ಕೃಪಾಭರಿತ ಹಸ್ತವನ್ನು ಅನೇಕರು ನೋಡಿದ್ದಾರೆ. ಆದರೆ ಅವರು ಆತನಿಂದ ರಕ್ಷಣೆಯನ್ನು ಹೊಂದಿರುವದಿಲ್ಲ. ಇದು ನಿಮ್ಮ ವಿಷಯದಲ್ಲಿ ಸತ್ಯವಾಗಿರುವುದೋ? ಕ್ರಿಸ್ತನಲ್ಲಿ ನಂಬಿಕೆಯಿಡುವದರ ಮೂಲಕ (ರೋಮಾಪುರ 10:10) ಪಾಪದ ಮಾನಸಾಂತರ (ಅಪೊಸ್ತಲರ ಕೃತ್ಯಗಳು 11:18) ದೇವರ ಮಗನೆಂದು ಕ್ರಿಸ್ತನ ಬಗ್ಗೆ ಅರಿಕೆ (ರೋಮಾಪುರ 10:10) ಹಾಗೂ ಕ್ರಿಸ್ತನಲ್ಲಿ ಬಾಪ್ತಿಸ್ಮ (ಗಲಾತ್ಯ 3:27), ಇವುಗಳ ಮುಖಾಂತರ ನೀವು ಕ್ರಿಸ್ತನ ದೇಹವನ್ನು ಪ್ರವೇಶಿಸಬಹುದು (1 ಕೊರಿಂಥ 12:13). ಅದು ಕೃಪೆಯ ಸ್ಥಳ, ಹಾಗೂ ಆತನ ನಿತ್ಯಜೀವ ಪಡೆದುಕೊಳ್ಳಬಹುದು. "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿ ಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ?" (ರೋಮಾಪುರ 6:3); "ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ, ಆತನು ರಹಸ್ಯವಾದ ತನ್ನ ಸಂಕಲ್ಪವನ್ನು ನಮಗೆ ತಿಳಿಯಪಡಿಸುವದರ ಮೂಲಕ ವಿಶೇಷವಾದ ಜ್ಞಾನವನ್ನೂ, ಬುದ್ಧಿಯನ್ನೂ, ಕೊಟ್ಟು ಆ ಕೃಪೆಯನ್ನು ಇನ್ನೂ ಹೆಚ್ಚಾಗಿ ನಮಗೆ ತೋರಿಸಿದ್ದಾನೆ" (ಎಫೆಸ 1:7, 8ಎ) ಎಂದು ಪೌಲನು ಹೇಳಿದ್ದಾನೆ.

ಯೇಸುವು, ತನ್ನ ಶಿಲುಬೆಯ ಮುಖಾಂತರ, ತನ್ನ ದೇಹವನ್ನು, ಸಭೆಯನ್ನು ಸೃಷ್ಟಿಸುವ ಕ್ಷಮಾಪಣೆಗೂ, ಜೀವನಕ್ಕೂ, ಆಹ್ವಾನಿಸುವನು. ಆತನ ಆಹ್ವಾನವನ್ನು ನೀವು ಸ್ವೀಕರಿಸುವಿರೋ?

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ಬೈಬಲ್ ಕಥೆಯ ಕೇಂದ್ರವು ಯಾವುದು?
2. ಬೇರೆ ಯಾವುದೇ ಧರ್ಮಕ್ಕಿರದಂಥ ಯಾವುದು ಕ್ರೈಸ್ತ ಧರ್ಮದ ಕೇಂದ್ರದಲ್ಲಿದೆ?
3. ಸಭೆಯಿಲ್ಲದ ಕ್ರೈಸ್ತತ್ವವು ಇರಲಾರದು ಯಾಕೆ ಎಂಬುದನ್ನು ವಿವರಿಸಿರಿ.
4. ಶಿಲುಬೆಯು ಸಭೆಗಾಗಿ ಯಾವ ಮೂರು ಸಂಗತಿಗಳನ್ನು ಮಾಡುತ್ತದೆ?
5. ಅನೇಕರು ದೈಹಿಕ ಆಶೀರ್ವಾದಗಳಲ್ಲಿ ದೇವರ ಕೃಪಾಪೂರ್ಣ ಹಸ್ತವನ್ನು ನೋಡಿದ್ದಾರೆ. ಆದರೆ ರಕ್ಷಣೆಯ ಆತನ ವರವನ್ನು ಸ್ವೀಕರಿಸಿರುವದಿಲ್ಲ. ಕ್ರಿಸ್ತನ

ದೇಹವನ್ನು ನೀವು ಹೇಗೆ ಪ್ರವೇಶಿಸಬಹುದು?

6. ಯೇಸುವು ತನ್ನ ಶಿಲುಬೆಯ ಮುಖಾಂತರವಾಗಿ ಯಾವ ಎರಡು ಆಶೀರ್ವಾದ ಗಳನ್ನು ಹೊಂದಲು ನಿಮ್ಮನ್ನು ಆಹ್ವಾನಿಸಿದ್ದಾನೆ?
7. ಆತನ ಬಳಿಗೆ ಬರುವವರು ಕ್ಷಮಾಪಣೆಯನ್ನು ಜೀವವನ್ನು ಹೊಂದಿಕೊಳ್ಳು ವಾಗ ಯೇಸುವಿನ ದೇಹವು ಸೃಷ್ಟಿಸಲ್ಪಡುತ್ತದೆ. ಈ ದೇಹವು ಏನೆಂದು ಕರೆಯಲ್ಪಟ್ಟಿದೆ?

## ಪದ ಸಹಾಯಗಳು

ಸಭೆಯ ಶಿರಸ್ಸು - ಯೇಸು ಕ್ರಿಸ್ತನು (ಎಫೆಸ 1:22, 23).

ಸಂಪಾದಿಸಿಕೊಂಡನು - ಕೊಂಡು ಕೊಂಡನು. ಕ್ರೈಸ್ತರು "ಕ್ರಿಸ್ತನ ರಕ್ತದಿಂದ ಕೊಂಡು ಕೊಳ್ಳಲ್ಪಟ್ಟರು" ಎಂದು ಹೇಳುವಾಗ, ಇದು ನಮ್ಮ ಪಾಪಗಳಿಗಾಗಿ ಯೇಸು ಶಿಲುಬೆಯ ಮೇಲೆ ಮರಣ ಪಟ್ಟದ್ದಕ್ಕೆ ಸಂಬಂಧಿಸಿದೆ.

ಸಂಧಾನ - ಒಂದಾಗಿ ಹಿಂದಿರುಗಿ ತರುವುದು. ಮುರಿದ ಸಂಬಂಧವನ್ನು ಸರಿಪಡಿಸುವುದು; ಯೇಸು ಕ್ರಿಸ್ತನ ಮುಖಾಂತರ ನಾವು ದೇವರೊಂದಿಗೆ ಸಂಧಾನ ಮಾಡಲ್ಪಟ್ಟಿದ್ದೇವೆ.

ಶುದ್ಧೀಕರಣ - ದೇವರ ವಿಶೇಷ ಉದ್ದೇಶಕ್ಕಾಗಿ "ಪ್ರತ್ಯೇಕವಾಗಿಡಲ್ಪಡುವುದು."

ಮಾರ್ಪಡಿಸಲ್ಪಡುವುದು - ಬದಲಾಯಿಸಲ್ಪಡುವುದು. ಯೇಸುವಿನ ಸ್ವರೂಪದಲ್ಲಿ ಹೊಸ ಸ್ವಭಾವವನ್ನು ತೆಗೆದು ಕೊಳ್ಳುವದಕ್ಕಾಗಿ ಕ್ರೈಸ್ತನು ಬರಬಹುದು. "ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದು, ಮೆಚ್ಚಿಕೆಯಾದದ್ದೂ, ದೋಷವಿಲ್ಲದ್ದೂ ಯಾವ ಯಾವವೆಂದು ವಿವೇಚಿಸಿ ತಿಳಿದುಕೊಳ್ಳುವಿರಿ" (ರೋಮಾಪುರ 12:2).

---

ಟಿಪ್ಪಣಿ

[1]Henry C. Thiessen, *Lectures in Systematic Theology* (Grand Rapids, Mich.: Wm. B. Eerdmans Publishing Co., 1949), 313. [2]R. A. Torrey, *What the Bible Teaches* (New York: Fleming H. Revell Co., 1898), 144.

10

# "ಸಭೆಯು" ಏನು ಆಗಿರುತ್ತದೆ?

ಬೇರೆ ದೇಶದ ಮತ್ತು ಸಂಸ್ಕೃತಿಯ ಒಬ್ಬ ಮನುಷ್ಯನು ಧೀರ್ಘಕಾಲದ ಸಂದರ್ಶನಕ್ಕಾಗಿ ಯುಎಸ್ಎಗೆ ಪ್ರಯಾಣ ಮಾಡಲು ಬಯಸಿದನು. ಇಂಗ್ಲೀಷ್ ಭಾಷೆ ಕಲಿಯಲು ಬಹಳ ದಿನದಿಂದ ನಿರೀಕ್ಷಿಸುತ್ತಿದ್ದ ಅಮೇರಿಕಾಕ್ಕೆ ಪ್ರಯಾಣ ಮಾಡಿದನು. ಅಲ್ಲಿಗೆ ತಲುಪಿದ ನಂತರ, ಅವನ ಇಂಗ್ಲಿಷ್ ಜ್ಞಾನವು ಪರೀಕ್ಷಿಸಲ್ಪಟ್ಟಿತು. ಹಲವಾರು ವಸ್ತುಗಳನ್ನು ಕೊಳ್ಳುವದಕ್ಕಾಗಿ ಅವನು ಒಂದು ಚಿಕ್ಕ ಕಿರಾಣಿ ಅಂಗಡಿಗೆ ಹೋದನು. ಹಣ ಸ್ವೀಕರಿಸುವಲ್ಲಿ ಅವನು ಎಷ್ಟು ಹಣ ಕೊಡಬೇಕಾಗಿದೆ ಎಂದು ಅವನಿಗೆ ಹೇಳಲ್ಪಟ್ಟಿತು. ಅವನು ಹಣ ತೆಗೆದು ಸರಿಯಾದ ಮೊತ್ತವನ್ನು ಎಣಿಸಿ ಗುಮಾಸ್ತನಿಗೆ ಕೊಟ್ಟನು. ತನ್ನ ದಿನಸುಗಳನ್ನು ಚೀಲದಲ್ಲಿ ಹಾಕಿಕೊಂಡು ಹೊರಡಲು ಸಿದ್ಧನಾದನು. ಅವನು ಬಾಗಿಲು ದಾಟಿ ಹೊರಗೆ ಹೋಗುತ್ತಿದ್ದಂತೆ, ಗುಮಾಸ್ತನು, "Come back!" ಎಂದು ನಮ್ರತೆಯಿಂದ ಹೇಳಿದನು. ಸಂದರ್ಶಕನು ನಿಂತುಕೊಂಡು ಹಿಂದಿರುಗಿ ಗುಮಾಸ್ತನ ಬಳಿಗೆ ಬಂದನು. "ನಿಮಗೆ ಸಹಾಯ ಮಾಡಬೇಕೋ?" ಎಂದು ಗುಮಾಸ್ತನು ಕೇಳಿದನು. ಗಲಿಬಿಲಿಗೊಂಡ ಆ ಮನುಷ್ಯನು, "ಹಿಂದಿರುಗಿ ಬರಬೇಕು ಎಂದು ನೀವು ನನಗೆ ಹೇಳಿದಿರಿ!" ಎಂದನು.

"ನಿಮ್ಮ ವ್ಯಾಪಾರಕ್ಕಾಗಿ ತುಂಬಾ ಉಪಕಾರ; ನಿಮಗೆ ಪುನಃ ಸಹಾಯಮಾಡಲು ಬೇಗನೇ ನಮಗೆ ಅವಕಾಶಕೊಡಿರಿ" ಎಂಬರ್ಥ ಬರುವ ರೀತಿಯಲ್ಲಿ ಅವನು ಹೇಳಿದ್ದನು. ಅದನ್ನು ಈ ಮನುಷ್ಯನು ಅಕ್ಷರಶಃವಾಗಿ ಅರ್ಥಮಾಡಿದನು. ಗುಮಾಸ್ತನ ಉದ್ದೇಶಿತ ಅರ್ಥವನ್ನು ತಪ್ಪಾಗಿ ತಿಳಿದು ಕೊಂಡದ್ದು ಸಂಭಾಷಣೆಯಲ್ಲಿ ತಪ್ಪಾಗಿ ಹೋಯಿತು.

ನಮ್ಮೆಲ್ಲರಿಗೂ ಅವನಿಗಾದ ರೀತಿಯ ಅನುಭವ ಇರುವುದು. ನಮಗೆ ಹೇಳಿದ ಮಾತುಗಳನ್ನು ತಿಳಿದಿರುತ್ತೇವೆ. ಆದರೆ ಮಾತನಾಡುತ್ತಿರುವವರಿಂದ ಅವು ಹೇಗೆ ಉಪಯೋಗಿಸಲ್ಪಟ್ಟಿವೆಯೆಂದು ತಿಳಿದು ಕೊಂಡಿರುವದಿಲ್ಲ - ಪದಗಳನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ. ಆದರೆ ಹೇಳಲ್ಪಟ್ಟದ್ದರ ಅರ್ಥವನ್ನು ಸಂಪೂರ್ಣವಾಗಿ

ತಪ್ಪಿಸಿಕೊಳ್ಳುತ್ತೇವೆ.

ಹೇಗಾದರೂ ನೀವು ಅದರ ಕಡೆಗೆ ನೋಡಿದರೂ, ಸಂಭಾಷಿಸುವುದು ಕಠಿಣ ವಾದದ್ದಾಗಿರುತ್ತದೆ. ಸಂಭಾಷಣೆಯು ಸಾಧ್ಯವಾಗ ಬೇಕಾದರೆ ಮಾತಾಡುವವನಿಗೂ ಕೇಳುವವನಿಗೂ ಬಹಳಷ್ಟು ಬೇಕಾಗುತ್ತದೆ.

ಈ ಸಂಭಾಷಣೆಯ ವಿಧಾನವನ್ನು ಬೈಬಲಿನ ಅಧ್ಯಯನಕ್ಕೆ ಅನ್ವಯಿಸೋಣ. ಬೈಬಲಿಗೂ ಹಾಗೂ ನಮ್ಮ ಮಧ್ಯದಲ್ಲಿ ಲಾಭಕರವಾದ ಸಂಭಾಷಣೆಯ ವಿಧಾನಕ್ಕಾಗಿ ಉಪಯೋಗಿಸಿದ ಪದಗಳನ್ನು ಕೇಳಿಸಿಕೊಳ್ಳು ವದಷ್ಟೇ ಅಲ್ಲ, ಆದರೆ ಪ್ರೇರೇಪಿತ ಬರಹಗಾರರು ತಾವು ಉಪಯೋಗಿಸಲು ಆಯ್ದುಕೊಂಡ ಪದಗಳ ಅರ್ಥ ಯಾವುದಿತ್ತೆಂಬುದನ್ನು ಹುಡುಕಬೇಕು. ಅಂದರೆ ಒಂದು ಪದ ಇಲ್ಲವೇ ವಾಕ್ಯವು ಕಂಡು ಬರುವದರ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕೆಂದು ಅರ್ಥವಾಗುತ್ತದೆ. ದೇವರೊಂದಿಗೆ ಪ್ರಾಮಾಣಿಕತೆಯಿಂದ ಇರುವಂಥದ್ದು ದೇವರು ತನ್ನ ಸಂದೇಶಕ್ಕಾಗಿ ಉದ್ದೇಶಿಸಿದ ಅರ್ಥಕ್ಕಾಗಿ ಜಾಗರೂಕತೆಯ ಹುಡುಕುವಿಕೆಯನ್ನು ಕೇಳುತ್ತದೆ.

"ಸಭೆ" (ಚರ್ಚ್) ಎಂಬ ಪದವು ನಮ್ಮಲ್ಲಿ ಹೆಚ್ಚಾದವರಿಗೆ ಪರಿಚಯ ವಾದದ್ದಾಗಿದೆ. ದೇವರು ಈ ಪದದ ಬಗ್ಗೆ ಪರಿಶುದ್ಧ ಬರಹಗಳಲ್ಲಿ ಬಹಳವಾಗಿ ಮಾತಾಡುತ್ತಾನೆ. ಈ ಪದದ ಬಗ್ಗೆ ದೇವರಿಗೂ ನಮಗೂ ಮಧ್ಯದಲ್ಲಿ ಸಂಪರ್ಕವಾ ಗುವದಕ್ಕಾಗಿ ನಾವು ಬೈಬಲಿನ ಜಗತ್ತಿನೊಳಗೆ ಹೋಗಲು, ಪದದ ಅರ್ಥಗಳನ್ನು, ಉದಾಹರಣೆಗಳನ್ನು ಮತ್ತು ಯೇಸುವಿನಿಂದಲೂ, ಅಪೊಸ್ತಲರಿಂದಲೂ, ದೇವರ ಆತ್ಮನ ಮುಖಾಂತರ ಬೈಬಲನ್ನು ಬರೆದ ಇತರ ಪ್ರೇರೇಪಿತ ಜನರಿಂದಲೂ ಉಪಯೋಗಿಸಿದ ಯೋಚನಾ ರೂಪಗಳನ್ನು ನೋಡಲು ಸಿದ್ಧರಾಗಿರಬೇಕು.

"ಸಭೆಯು" ಏನಾಗಿದೆ? ವಿವಿಧ ಹಿನ್ನೆಲೆಗಳಲ್ಲಿ ಹೊಸ ಒಡಂಬಡಿಕೆಯ ಇಪ್ಪತ್ತೇಳು ಪುಸ್ತಕಗಳಲ್ಲಿಯ ಹದಿನೇಳು ಪುಸ್ತಕಗಳಲ್ಲಿ[1] ಈ ಪದವು 114 ಸಲ[2] ಉಪಯೋಗಿಸಿದ್ದರಲ್ಲಿ ನಮಗೆ ಏನು ಹೇಳಲ್ಪಟ್ಟಿದೆ? ಯೇಸುವು ಸಭೆಯನ್ನು ಸ್ಥಾಪಿಸುವಾಗ, ಆತನು ಏನನ್ನು ಕಟ್ಟಿರುವನು?

## ಆತ್ಮಿಕ ದೇಹ

ಸಭೆಯು ಆತ್ಮಿಕ ದೇಹ, ಕ್ರಿಸ್ತನ ಆತ್ಮಿಕ ದೇಹವೇ ಆಗಿದೆಯೆಂದು ಮೊದಲು ನಾವು ತಿಳಿದುಕೊಳ್ಳಬೇಕು.

"ಚರ್ಚ್" ಎಂಬ ಪದದೊಂದಿಗೆ ಸಾಮಾನ್ಯವಾಗಿ ನಮ್ಮ ಮನಸ್ಸುಗಳಲ್ಲಿ ಬರುವ ಚಿತ್ರವು ಆರಾಧನೆಯು ನಡಿಸಲ್ಪಡುವ ಪ್ರಾಕೃತ ಕಟ್ಟಡವಾಗಿರುತ್ತದೆ. ಈ ಅರ್ಥವನ್ನು ಹೇಳುವದಕ್ಕಾಗಿ ಈ ಪದವು ಹೊಸ ಒಡಂಬಡಿಕೆಯಲ್ಲಿ ಎಂದೂ

ಉಪಯೋಗಿಸಲ್ಪಟ್ಟಿರುವದಿಲ್ಲ.

ಪರಿಶುದ್ಧ ಬರಹಗಳಲ್ಲಿ "ಸಭೆ" ಎಂಬ ಪದವು ಕ್ರಿಸ್ತನ ಸುವಾರ್ತೆಗೆ ಒಪ್ಪಿಸಿಕೊಡಲ್ಪಟ್ಟವರ ಹಾಗೂ ಒಂದಾಗಿ ಕೂಡಿಬಂದವರ, ಸ್ಥಳಿಕ ಹಾಗೂ ಸಾರ್ವತ್ರಿಕ ಅರ್ಥಗಳಲ್ಲಿ ಕ್ರಿಸ್ತನ ರಕ್ತದಿಂದ ವಿಮೋಚಿಸಲ್ಪಟ್ಟವರ ಸಮೂಹವನ್ನು ಸೂಚಿಸುತ್ತದೆ.

ಮೊದಲನೆಯದು, ಅವರು ಕೂಡಿ ಬರುವುದು ಇಲ್ಲವೇ ದೇವರನ್ನು ಆರಾಧಿಸಲಿಕ್ಕೆ ಕೂಡಿಬರುವಂಥ ವಿಮೋಚಿತರ ಸಮೂಹವು "ಸಭೆ" ಎಂದು ಕರೆಯಲ್ಪಟ್ಟಿದೆ. ಕೊರಿಂಥದಲ್ಲಿಯ ಸಭೆಯನ್ನು ಅವರಲ್ಲಿಯ ಐಕ್ಯತೆಯ ಕೊರತೆಗಾಗಿ ಪೌಲನು ಅವರನ್ನು ಗದರಿಸುವಾಗ, ಅವನು "ಸಭೆ" ಎಂಬ ಪದವನ್ನು ಕ್ರೈಸ್ತರ ಕೂಟಕ್ಕಾಗಿ ಉಪಯೋಗಿಸಿದನು. "... ನೀವು ಸಭೆಯಾಗಿ ಕೂಡಿಬರುವಾಗ ನಿಮ್ಮಲ್ಲಿ ಭೇದಗಳು ಉಂಟಾಗುತ್ತದೆಂದು ಕೇಳುತ್ತೇನೆ" (1 ಕೊರಿಂಥ 11:18) ಎಂದು ಅವನು ಹೇಳಿದನು.

ಅನಂತರ "ಸಭೆ" ಎಂಬ ಪದವು ನಿಶ್ಚಿತವಾದ ಸ್ಥಳದಲ್ಲಿಯ ವಿಮೋಚಿತರ ಗುಂಪಿಗಾಗಿ ಉಪಯೋಗಿಸಲ್ಪಟ್ಟಿದೆ. ಕೊರಿಂಥದಲ್ಲಿಯ ವಿಮೋಚಿತರ ಗುಂಪು, "ಕೊರಿಂಥದಲ್ಲಿನ ದೇವರ ಸಭೆ" ಎಂದು (1 ಕೊರಿಂಥ 1:2ಎ) ಕರೆಯಲ್ಪಟ್ಟಿದೆ.

ಇನ್ನೂ ಮುಂದೆ ಹೋಗಿ, "ಸಭೆ" ಎಂಬ ಪದವು ಜಗತ್ತಿನಲ್ಲೆಲ್ಲಾ ಇರುವ ವಿಮೋಚಿತರ ಇಡೀ ಗುಂಪಿಗಾಗಿ ಉಪಯೋಗಿಸಲ್ಪಟ್ಟಿದೆ. "ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. ಕ್ರಿಸ್ತನೋ ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ" (ಎಫೆಸ 5:23) ಎಂದು ಹೇಳಿದಾಗ, ಪೌಲನು ಸಭೆಯನ್ನು ಜಾಗತಿಕ ಅರ್ಥದಲ್ಲಿ ಸಂಬಂಧಿಸಿ ಹೇಳಿದ್ದಾನೆ.

"ಸಭೆ" ಎಂಬ ಪದವನ್ನು ಹೊಸ ಒಡಂಬಡಿಕೆಯು ಉಪಯೋಗಿಸಿದ್ದನ್ನು ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿಯ ವಿಶಿಷ್ಟವಾದ ಘಟನೆಗೆ ಅನ್ವಯಿಸೋಣ. ಪಂಚಾಶತ್ತಮ ಹಬ್ಬದ ದಿನದಂದು ಯೆರೂಸಲೇಮಿನಲ್ಲಿದ್ದ ಅನೇಕ ಸ್ಥಳೀಯ ನಿವಾಸಿಗಳೂ, ಸಂದರ್ಶಕರೂ (ಅಪೊಸ್ತಲರ ಕೃತ್ಯಗಳು 2:1-4) ಪರಿಶುದ್ಧಾತ್ಮನ ಸುರಿಸುವಿಕೆಯ ಬಾಹ್ಯ ಸಂಕೇತಗಳನ್ನು ಕೇಳಿಸಿಕೊಂಡರು, ಏನಾಗುತ್ತಿದೆ ಯೆಂಬುದನ್ನು ನೋಡಲು ಅಪೊಸ್ತಲರ ಸುತ್ತಲೂ ಕೂಡಿ ಬಂದರು. ಜನಸಮೂಹಕ್ಕೆ ಪೇತ್ರನು ಪ್ರಸಂಗಿಸಿದಾಗ ಯೇಸುವು ಕರ್ತನೂ, ಕ್ರಿಸ್ತನೂ ಆಗಿದ್ದಾನೆಂದು ನಂಬುವಂತೆ ಮಾಡಿದನು (ಅಪೊಸ್ತಲರ ಕೃತ್ಯಗಳು 2:36). ಪ್ರಾಣದ ನೋವಿನಲ್ಲಿ ಅನೇಕರು "ನಾವೇನು ಮಾಡೋಣ?" (ಅಪೊಸ್ತಲರ ಕೃತ್ಯಗಳು 2:37ಬಿ) ಎಂದು ಕೂಗಿದರು. ಅವರ ಕೂಗನ್ನು ವಿಶ್ವಾಸವು ನಿರ್ದೇಶಿಸಿದ್ದರಿಂದ ಪೇತ್ರನು ಅವರಿಗೆ ನಂಬಬೇಕೆಂದು ಹೇಳುವ ಅವಶ್ಯಕತೆಯಿರಲಿಲ್ಲ. ಆದರೆ ಅವರು ಮಾಡದೇ ಇದ್ದುದನ್ನು - ತಮ್ಮ ಪಾಪದ ಕ್ಷಮಾಪಣೆಗಾಗಿ ಮಾನಸಾಂತರ ಪಟ್ಟು ಬಾಪ್ತಿಸ್ಮ

ಹೊಂದುವದನ್ನು ಹೇಳುವ ಅಗತ್ಯತೆ ಅವನಿಗಿತ್ತು (ಅಪೊಸ್ತಲರ ಕೃತ್ಯಗಳು 2:38). ಮೂರು ಸಾವಿರ ಜನರು ಸಂತೋಷದಿಂದ ರಕ್ಷಣೆಯ ಮಾರ್ಗವನ್ನು ಸ್ವೀಕರಿಸಿದರು, ಮಾನಸಾಂತರ ಪಟ್ಟರು ಮತ್ತು ತಮ್ಮ ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಹೊಂದಿದರು (ಅಪೊಸ್ತಲರ ಕೃತ್ಯಗಳು 2:38, 41).

ಆ ದಿನ ಏನು ಸಂಭವಿಸಿತು ಎಂಬುದನ್ನು, ಲೂಕನು ಹೇಗೆ ವಿವರಿಸಿದನೆಂಬುದನ್ನು ಗಮನಿಸಿರಿ. ಮಾರ್ಪಾಟು ಹೊಂದಿದವರು ಮೊದಲು ಏನಾಗಿದ್ದರೆಂಬುದನ್ನು ವಿವರಿಸಿದನು (ಅಪೊಸ್ತಲರ ಕೃತ್ಯಗಳು 2:41). ಕರ್ತನ ವಾಕ್ಯಕ್ಕೆವಿಧೇಯರಾದವರು, ಕರ್ತನ ಸಭೆಯೊಳಗೆ ಇರುವವರಾಗಿ ಮಾಡಲ್ಪಟ್ಟರು, ಅವರು ಗುಂಪಿನ, ಅನ್ಯೋನ್ಯತೆಯ ಭಾಗವಾದರು. ಎರಡನೆಯದಾಗಿ, ಅವರ ಹೊಸ ರೀತಿಯ, ನಡತೆಯ ಮಾತುಗಳಲ್ಲಿ ಲೂಕನು ವಿವರಿಸಿದನು. ದೇವರ ಕಡೆಗಿರುವ ಅವರ ನಡತೆಯಲ್ಲಿ ಅವರಿಗೆ ನೂತನ ಜೀವವಿತ್ತು (ಅಪೊಸ್ತಲರ ಕೃತ್ಯಗಳು 2:42). ವಿಮೋಚಿಸಲ್ಪಟ್ಟ ಈ ಜನರ ಗುಂಪು ದೇವರನ್ನು ಆರಾಧಿಸಿತು ಮತ್ತು ಅಪೊಸ್ತಲರಿಂದ ದೈವಿಕ ಮಾರ್ಗದರ್ಶನವನ್ನು ಪಡೆದುಕೊಂಡಿತು. ಒಬ್ಬರ ಕಡೆಗೆ ಒಬ್ಬರಿಗಿದ್ದ ಅವರ ನಡತೆಯಲ್ಲಿ ಹೊಸಜೀವ ಇತ್ತು, (ಅಪೊಸ್ತಲರ ಕೃತ್ಯಗಳು 2:44, 45). ಹೊತ್ತು ಕೊಳ್ಳುವದರಿಂದ, ಹಂಚಿಕೊಳ್ಳುವದರಿಂದ ಹಾಗೂ ಜೋಪಾಸನೆ ಮಾಡುವದರಿಂದ ಒಬ್ಬರನ್ನೊಬ್ಬರು ನೋಡಿಕೊಂಡರು - ಒಬ್ಬರೊಬ್ಬರ ಭಾರವನ್ನು ಹೊತ್ತುಕೊಂಡರು, ಕೊರತೆಯುಳ್ಳವರೊಂದಿಗೆ ಹಂಚಿಕೊಂಡರು, ಒಬ್ಬರಿಗೊಬ್ಬರು ಜೋಪಾಸನೆ ಮಾಡಿಕೊಂಡರು. ವಿಶ್ವಾಸಿಗಳ ಈ ಗುಂಪು ಅನಂತರದಲ್ಲಿ ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ “ಸಭೆ” ಎಂದು ಹೇಳಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 5:11).

ಯೆರೂಸಲೇಮಿನಲ್ಲಿಯ ಈ ವಿಮೋಚನೆ ಹೊಂದಿದವರು ದೇವರನ್ನು ಆರಾಧಿಸಲು ಒಂದಾಗಿ ಕೂಡಿ ಬರುವಾಗ ಅವರು “ಸಭೆ”ಯಾಗಿದ್ದರು (ಒಂದಾಗಿ ಕೂಡಿ ಬರುವ ಅರ್ಥದಲ್ಲಿ). ಯೆರೂಸಲೇಮಿನಲ್ಲಿಯ ವಿಮೋಚನೆ ಹೊಂದಿದವರೆಲ್ಲರೂ “ಯೆರೂಸಲೇಮಿನಲ್ಲಿಯ ಸಭೆ” ಎಂದು ಕರೆಯಲ್ಪಡ ಬಹುದು. (ಆ ಸ್ಥಳಿಕ ಅರ್ಥದಲ್ಲಿ) ಆ ಸಭೆಯು ಬೆಳವಣಿಗೆಯೊಂದಿ ಪ್ರಸಾರಣೆಯಾದಾಗ, ಜಗತ್ತಿನಲ್ಲಿಯ ವಿಮೋಚನೆ ಹೊಂದಿದ ಜನರೆಲ್ಲರೂ ಆ ಸಮಯದಲ್ಲಿ “ಯೇಸುವು ಪುನಃ ಬರುವಾಗ ಆತನು ತನ್ನ ಸಭೆಯನ್ನು ಸ್ವೀಕರಿಸಲಿರುವನು (ವಿಶ್ವದ ಅರ್ಥದಲ್ಲಿ) ಹಾಗೂ ಅದನ್ನು ಪರಲೋಕಕ್ಕೆ ತೆಗೆದು ಕೊಂಡು ಹೋಗುವನು ಎಂದು ಹೇಳುವದರಿಂದ ಸೂಚಿಸಲ್ಪಟ್ಟಿತು.”

## ಸಜೀವ ರಚನೆಯಾಗಿದೆ

ಎರಡನೆಯದು, ಸಭೆಯನ್ನು ಒಂದು ರಚನೆಯಂತೆ - ಸಜೀವವಾದದ್ದಾಗಿ ನಾವು ನೋಡುವ ಅಗತ್ಯತೆಯಿದೆ.

"ಸಭೆ" ಯೆಂದು ಕರೆಯಲ್ಪಡುವ ರಕ್ಷಿಸಲ್ಪಟ್ಟ ಜನರ ಗುಂಪನ್ನು ಒಂದು ಸಂಸ್ಥೆಯಂತೆ, ಒಂದು ರೀತಿಯ ಮಾನವ ಸಂಘಟನೆಯಂತೆ ಕೆಲವರು ಯೋಚಿಸುತ್ತಾರೆ. ಅದು ಒಬ್ಬರು ಕೂಡಿಸುವಂಥ ಇಲ್ಲವೇ ಅದಕ್ಕೆ ತನ್ನನ್ನು ವಾಗ್ದಾನವಾಗಿ ಕೊಡುವಂಥ ಹಾಗೂ ಇದಕ್ಕಿಂತ ಹೆಚ್ಚಾದದ್ದಲ್ಲವೆಂದು ದೃಷ್ಟಿಸುತ್ತಾರೆ.

ವಿಮೋಚಿತ ಜನರ ಒಂದು ದೇಹದಂತೆ, ಸಭೆಯು ಜೀವಿಸುವ ರಚನೆಯಾಗಿದೆ; ಆದರೆ ಮಾನವ ಸಂಸ್ಥೆಯಾಗಿರುವದಿಲ್ಲ. ಕ್ರಿಸ್ತನು ಸ್ಥಾಪಿಸಿದ ಸಭೆಯು ದೇವರ ಜೀವನದೊಂದಿಗೂ ಆಶೀರ್ವಾದಗಳೊಂದಿಗೂ ಜೀವಿಸುವಂಥದ್ದೂ; ಚಟುವಟಿಕೆಯುಳ್ಳದ್ದೂ ಆಗಿದೆ. ಮನುಷ್ಯನ ಜ್ಞಾನದಿಂದ, ರಚನೆಯಿಂದ ಹಾಗೂ ಚಟುವಟಿಕೆಗಳಿಂದ ಸಂಪೂರ್ಣವಾಗಿ ಬಲಪಡಿಸಲು ಮಾನವ ನಿರ್ಮಿತ ಗುಂಪಾ ಗಿರುವದಿಲ್ಲ.

ಪೌಲನು ಕೊರಿಂಥದಲ್ಲಿಯ ಸಭೆಯನ್ನು ಆಲಯ, ಪರಿಶುದ್ಧಸ್ಥಳ ಇಲ್ಲವೇ ದೇವರ ವಾಸಸ್ಥಾನ ಎಂದು ವಿವರಿಸಿದನು. "ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ?" ಎಂದು 1 ಕೊರಿಂಥ 3:16ರಲ್ಲಿ ಹೇಳಿದ್ದಾನೆ.[3] ಅನಂತರದಲ್ಲಿ 1 ಕೊರಿಂಥ 6:19, 20ರಲ್ಲಿ ಪೌಲನು ವೈಯಕ್ತಿಕ ಕ್ರೈಸ್ತರನ್ನು ದೇವರ ಆಲಯದಂತೆ ಚಿತ್ರಿಸಿ, ಜಾರತ್ವವು ಒಬ್ಬ ವ್ಯಕ್ತಿಯ ದೇಹಕ್ಕೆ ವಿರುದ್ಧವಾಗಿ ಮಾಡುವ ಪಾಪವಾಗಿದೆಯೆಂದು ಖಂಡಿಸಿದ್ದಾನೆ. 1 ಕೊರಿಂಥ 3:16 ಸಭೆಗೆ ಸಂಬಂಧಿಸಿದೆ, ಆದರೆ ವೈಯಕ್ತಿಕ ಕ್ರೈಸ್ತನಿಗೆ ಅಲ್ಲ.[4] ದೇವರು ತನ್ನ ಜನರ ಮಧ್ಯದಲ್ಲಿ ವಾಸಿಸುವನೆಂದು ಪೌಲನು ದೃಢಪಡಿಸುತ್ತಿದ್ದಾನೆ. ಆತನು ವೈಯಕ್ತಿಕವಾಗಿ ತನ್ನ ಜನರಲ್ಲಿ ವಾಸಿಸುತ್ತಾನೆ (1 ಕೊರಿಂಥ 6:19, 20) ಹಾಗೂ ಒಟ್ಟಾಗಿ ಜೀವಿಸುತ್ತಾನೆ (1 ಕೊರಿಂಥ 3:16). ಹಳೇ ಒಡಂಬಡಿಕೆಯ ಸಮಯದಲ್ಲಿ ದೇವರ ವಾಸಸ್ಥಾನವು ಅರಣ್ಯದಲ್ಲಿ ಗುಡಾರದಲ್ಲಿ ಇತ್ತು. ಹಾಗೂ ಅನಂತರದಲ್ಲಿ ಯೆರೂಸಲೇಮಿನಲ್ಲಿಯ ದೇವಾಲಯದಲ್ಲಿ ಇತ್ತು; ಆದರೆ ಕ್ರೈಸ್ತ ಯುಗದಲ್ಲಿ ಪೌಲನ ಪ್ರಕಾರವಾಗಿ, ದೇವರು ತನ್ನ ಸಭೆಯಲ್ಲಿ, ತನ್ನ ಜನರಲ್ಲಿ ವಾಸಿಸುತ್ತಾನೆ.

ಸಭೆಯನ್ನು ಸಜೀವ ಕಟ್ಟಡಕ್ಕೆ ಹೋಲಿಸಬಹುದು. ಎಫೆಸದ ಕ್ರೈಸ್ತರು ಏನಾಗಿರುವರೆಂಬುದನ್ನು ಉದಾಹರಿಸುವಾಗ, ಅವರು ಕ್ರೈಸ್ತರನ್ನೊಳಗೊಂಡ ಒಂದು ಕಟ್ಟಡವಾಗಿ ಮಾಡಲ್ಪಟ್ಟಿರುವರು ಮತ್ತು ಬೆಳವಣಿಗೆಯು ನಿರಂತರವಾದ ಹಂತದಲ್ಲಿರುವುದು ಎಂದು ಹೇಳಿದನು. "ಅತನಲ್ಲಿ ಕಟ್ಟಡದ ಎಲ್ಲಾ ಭಾಗಗಳು ಒಂದಕ್ಕೊಂದು ಹೊಂದಿಕೆಯಾಗಿ ಕಟ್ಟಡವು ವೃದ್ಧಿಯಾಗುತ್ತಾ ಕರ್ತನಲ್ಲಿ ಪರಿಶುದ್ಧ

ದೇವಾಲಯವಾಗುತ್ತದೆ. ಆತನಲ್ಲಿ ನೀವು ಸಹ ಪರಿಶುದ್ಧಾತ್ಮನ ಮೂಲಕವಾಗಿ ದೇವರಿಗೆ ನಿವಾಸಸ್ಥಾನವಾಗುವದಕ್ಕಾಗಿ ನಮ್ಮ ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ" (ಎಫೆಸ 2:21, 22) ಎಂದು ಪೌಲನು ಹೇಳಿದನು. ಅವನು ವಿವರಿಸಿದ ಕಟ್ಟಡವು ಅಪೊಸ್ತಲರ ಹಾಗೂ ಪ್ರವಾದಿಗಳ ಅಸ್ತಿವಾರದ ಮೇಲೆ ಕ್ರಿಸ್ತನು ಮುಖ್ಯವಾದ ಮೂಲೆಗಲ್ಲಾಗಿರುವದರೊಂದಿಗೆ ನಿಂತಿರುವುದು. ಕಟ್ಟಡದ ರಚನೆಯು ಕ್ರೈಸ್ತರಿಂದ ಮಾಡಲ್ಪಟ್ಟಿರುವುದು. ಕಟ್ಟಡಕ್ಕೆ ಮುಚ್ಚಳವಾಗಲೀ, ಮಾಳಿಗೆಯಾಗಲೀ ಇರುವದಿಲ್ಲ: ಜನರು ಸುವಾರ್ತೆಗೆ ವಿಧೇಯರಾಗುತ್ತ ಅದಕ್ಕೆ ಕೂಡಿಸಲ್ಪಡುವಂತೆ ಅದು ನಿರಂತರವಾಗಿ ಮೇಲುಕ್ಕೇರುತ್ತಾ ಹೋಗುವುದು.

ಸಭೆಯು ಒಂದು ಸಂಸ್ಥೆಯಾಗಿರುವದಿಲ್ಲ, ದೇವರ ಆತ್ಮನು ವಾಸಿಸುತ್ತಿರುವ ಸಜೀವ ಶರೀರ ರಚನೆಯಾಗಿದೆ. ಅದು ದೇವರ ಜೀವದೊಂದಿಗೆ ಸಜೀವವಾಗಿರುವ ಸಜೀವ ರಚನೆಯಾಗಿದೆ. ಅದು ದೇವರ ಜೀವದೊಂದಿಗೆ ಸಜೀವವಾಗಿರುವ ಮತ್ತು ದೇವರ ಆತ್ಮನಿಗಾಗಿ ವಾಸಸ್ಥಳವಾಗಿರುವ ಕ್ರೈಸ್ತರ ಸಭೆಯಾಗಿದೆ. ಸಭೆಯು ಭೂಲೋಕದಲ್ಲಿ ದೇವರ ನಿವಾಸ ಸ್ಥಳವಾಗಿದೆಯೆಂದು ನೀವು ಹೇಳಬಹುದು.

## ನಿಕಟ ಸಂಬಂಧ

ಮೂರನೆಯದು, ಸಭೆಯನ್ನು ಕ್ರಿಸ್ತನೊಂದಿಗೆ ನಿಕಟ ಸಂಬಂಧದಂತೆ ಯೋಚಿಸಬೇಕು.

ಭೂಲೋಕದ ದೃಷ್ಟಿಕೋನದಿಂದ, ಸಭೆಯೊಳಗಿನ ಸದಸ್ಯತ್ವವನ್ನು ಕುರಿತು ಜನರ ಗುಂಪಿನೊಂದಿಗೆ, ಸಭೆಯನ್ನು ಮಾಡುವ ಜನರೊಂದಿಗೆ ವಿಶೇಷವಾದ ಸಂಬಂಧದಲ್ಲಿ ಪ್ರವೇಶಿಸುವ ಮಾತುಗಳಲ್ಲಿ ಯೋಚಿಸುವುದು ಸುಲಭವಾಗಿದೆ. ಸಭೆಯ ಈ ದೃಷ್ಟಿಕೋನವು ಮಹತ್ವದ ಸತ್ಯವನ್ನು ತಪ್ಪಿಸಿಕೊಳ್ಳುತ್ತದೆ. ಸಭೆಯು ಬಲವಾದ, ನಿಕಟವಾದ, ಮುಂದುವರಿಯುವ ಸಂಬಂಧವನ್ನು ಒಳಗೊಂಡಿರುತ್ತದೆ: ಆ ಸಂಬಂಧವು *ಯೇಸುವಿ*ನೊಂದಿಗೆ ನಿಜವಾದ ಸಂಬಂಧದ ಮೇಲೆ ಕೇಂದ್ರೀಕರಿಸಲ್ಪಟ್ಟಿರುತ್ತದೆ.

ಯೇಸುವಿನೊಂದಿಗೆ ಸಭೆಗೆ ಸರಿಯಾಗಿ ಇರುವ ಸಂಬಂಧವು ದೇಹ/ಶಿರಸ್ಸಿನ ಸಂಬಂಧದಂತೆ ವಿವರಿಸಲ್ಪಟ್ಟಿದೆ. ಕ್ರೈಸ್ತರು ದೇಹವಾಗಿದ್ದರೆ ಯೇಸುವು ಶಿರಸ್ಸು ಆಗಿದ್ದಾನೆ. ದೇವರು ಸಭೆಯನ್ನು ಕ್ರಿಸ್ತನ ಆತ್ಮಿಕ ದೇಹವಾಗಿ, ಭೂಲೋಕದಲ್ಲಿ ಇಂದು ಅದೃಶ್ಯವಾದ ಕ್ರಿಸ್ತನ ದೃಶ್ಯವಾದ ಭಾಗವಾಗಿ ಮಾಡಿದ್ದಾನೆ. ಕರ್ತನು ಭೂಲೋಕದಲ್ಲಿಯ ವಿಮೋಚನೆಯ ತನ್ನ ಕಾರ್ಯವನ್ನು ಪೂರೈಸಲು ಪ್ರಕೃತ ದೇಹದ ಅಗತ್ಯತೆಯುಳ್ಳವನಾಗಿದ್ದನು. ಈಗ ಆತನಿಗೆ ಪ್ರತಿಯೊಬ್ಬರಿಗೂ ಎಲ್ಲಾ ಕಡೆಗಳಲ್ಲಿಯೂ ಆತನ ವಿಮೋಚನಾ ಕಾರ್ಯವು ಲಭ್ಯವಿರುವಂತೆ

ಮಾಡುವ ಆತ್ಮಿಕ ದೇಹದ ಅಗತ್ಯತೆಯಿರುವುದು. ಆದುದರಿಂದ ಪಂಚಾಶತ್ತಮ ದಿನದಂದು, ಯೇಸು ಸತ್ತವರೊಳಗಿಂದ ಪುನರುತ್ಥಾನ ಹೊಂದಿದ ನಂತರದ ಐವತ್ತು ದಿನಗಳಾದ ಮೇಲೆ ಪರಿಶುದ್ಧಾತ್ಮನು ಕ್ರಿಸ್ತನ ಆತ್ಮಿಕ ದೇಹವನ್ನು ಅಂದರೆ ಸಭೆಯನ್ನು ರೂಪಿಸಲು ಇಳಿದು ಬಂದನು. ಆ ದಿನದಿಂದ ಇಲ್ಲಿಯವರೆಗೆ ಪ್ರತಿಯೊಬ್ಬ ವಿಮೋಚಿತ ವ್ಯಕ್ತಿಯು ಆತನ ವಿಮೋಚನಾ ಕಾರ್ಯದ ಸಮಯದಲ್ಲಿ, ದೇಹದಲ್ಲಿ ದೇವರ ಅತ್ಯುನ್ನತವಾದ ಕೃಪೆಯಿಂದ ಇಡಲ್ಪಟ್ಟಿರುವನು.

ಹೀಗೆ ಹೊಸ ಒಡಂಬಡಿಕೆಯಲ್ಲಿ ಸಭೆಯು ಪ್ರೇರೇಪಣೆ ಹೊಂದಿದ ಬರಹಗಾರರಿಂದ ಸಾಮಾನ್ಯವಾಗಿ ಕ್ರಿಸ್ತನ "ದೇಹ" ಎಂದು ಕರೆಯಲ್ಪಟ್ಟಿದೆ (ಎಫೆಸ 1:21-23; 5:23). ಕ್ರಿಸ್ತನ ಸುವಾರ್ತೆಗೆ ವಿಧೇಯರಾಗುವವರು ಭೂಲೋಕ ದಲ್ಲಿ ಕ್ರಿಸ್ತನ ಆತ್ಮಿಕ ದೇಹವಾಗುವರು ಹಾಗೂ ಅದರೊಂದಿಗೆ ಅಕ್ಷರಶಃವಾಗಿ ಕಾರ್ಯಮಾಡುವರು. ಶಿರಸ್ಸಾದ ಕ್ರಿಸ್ತನಿಂದ ನಡಿಸಲ್ಪಡುವರು. ಆದುದರಿಂದ ಒಬ್ಬನು ಬಾಪ್ತಿಸ್ಮ ಹೊಂದುವಾಗ, ಅವನು "ಕ್ರಿಸ್ತನಲ್ಲಿ" (ರೋಮಾಪುರ 6:3; ಗಲಾತ್ಯ 3:27) ಇಲ್ಲವೇ "ಒಂದೇ ದೇಹದೊಳಗೆ" (1 ಕೊರಿಂಥ 12:13) ಬಾಪ್ತಿಸ್ಮ ಹೊಂದುವವರೆಂದು ಹೊಸ ಒಡಂಬಡಿಕೆಯು ಸ್ಪಷ್ಟವಾಗಿ ಹೇಳುತ್ತದೆ.

ಸಭೆಗೆ ಯೇಸುವಿನೊಂದಿಗೆ ನಿಕಟವಾದ ಸಂಬಂಧವಿದೆ. ಅದರೊಳಗೆ ಭೂಲೋಕದಲ್ಲಿ ಒಬ್ಬ ವ್ಯಕ್ತಿಯು ಪ್ರವೇಶಿಸಬಹುದು. ಸಭೆಯು ಕ್ರಿಸ್ತನ ಪರಿ ಪೂರ್ಣತೆಯಾಗಿದೆ. ಯಾಕಂದರೆ ಆತನ ದೇಹವು ಎಲ್ಲದರಲ್ಲಿ ಎಲ್ಲವನ್ನೂ ನೆರ ವೇರಿಸುವಾತನ ಪರಿಪೂರ್ಣತೆಯಲ್ಲಿ ಇರುತ್ತದೆ (ಎಫೆಸ 1:23). ಕ್ರಿಸ್ತನು ಸಭೆಯ ಪರಿಪೂರ್ಣತೆಯಾಗಿರುತ್ತಾನೆ (ಕೊಲೊಸ್ಸೆ 2:10). ಆತನ ದೇಹವಾದ ಸಭೆಯು ತಲೆಯಾದ ಕ್ರಿಸ್ತನಿಲ್ಲದೇ ಸಂಪೂರ್ಣವಾದದ್ದಾಗಿರುವದಿಲ್ಲ (ಎಫೆಸ 1:22). ಅದೇ ರೀತಿಯಲ್ಲಿ ಶಿರಸ್ಸಾದ ಕ್ರಿಸ್ತನು ತನ್ನ ದೇಹವಾದ ಸಭೆಯಿಲ್ಲದೇ ಸಂಪೂರ್ಣವಾ ಗಿರಲಾರನು (ಕೊಲೊಸ್ಸೆ 1:18). ಸಭೆಯ ಶಿರಸ್ಸಾಗಿರುವಂಥದ್ದೆಲ್ಲವೂ ಸಭೆಗೆ ಒಳಪಟ್ಟಿರುತ್ತದೆ ಹಾಗೂ ಸಭೆಯಾಗಿರುವಂಥದ್ದೆಲ್ಲವೂ ಅದರ ಶಿರಸ್ಸಾದ ಕ್ರಿಸ್ತನಿಗೆ ಒಳಪಟ್ಟಿರುತ್ತದೆ. ಆದುದರಿಂದ ಆತನ ಸಭೆಯಾಗಿ ಕ್ರೈಸ್ತನು ಅನುದಿನವೂ ಯೇಸುವಿನೊಂದಿಗೆ ಸತತವಾದ ಸಹಭಾಗಿತ್ವವನ್ನು ಅನುಭವಿಸುತ್ತಾನೆ. ಕ್ರಿಸ್ತನಲ್ಲಿರುವವರು ಕ್ರೈಸ್ತತ್ವದ ಕೇವಲ ಅಧ್ಯಾಪಕರಾಗಿರುದಿಲ್ಲ; ಅವರು ಕ್ರಿಸ್ತನನ್ನು ಹೊಂದಿಕೊಂಡವರಾಗಿರುತ್ತಾರೆ. ಆತನ ದೇಹದಲ್ಲಿರುವವರಿಗಾಗಿ ಕ್ರಿಸ್ತನ ಪರಿಪೂರ್ಣವಾದ ಬುಗ್ಗೆಯು ತೆರೆದಿರುತ್ತದೆ.

ಎಫೆಸ 5ರಲ್ಲಿ ಪೌಲನು ಸಭೆಯ ಬಗ್ಗೆ ಚರ್ಚಿಸಿದಾಗ, ಕ್ರಿಸ್ತನೊಂದಿಗಿನ ಅದರ ಸಂಬಂಧವನ್ನು ಗಂಡ/ಹೆಂಡತಿಯರ ಸಂಬಂಧದ ರೂಪಕವನ್ನು ಉಪಯೋ ಗಿಸುವವರಿಂದ ಹೋಲಿಸಿದ್ದಾನೆ. ಕ್ರಿಸ್ತನು ಗಂಡನಿಗೆ, ಸಭೆಯು ಹೆಂಡತಿಗೆ ಉದಾಹರಣೆಯಾಗಿದ್ದಾರೆ. ಮೊದಲು ಅವನು ಈ ಸಂಬಂಧವನ್ನು ತಾತ್ವಿಕವಾಗಿ

ಹೇಳಿದ್ದಾನೆ. ಗಂಡನು ಹೆಂಡತಿಗೆ ಶಿರಸ್ಸಾಗಿರುವಂತೆ ಕ್ರಿಸ್ತನು ಸಭೆಗೆ ಶಿರಸ್ಸಾಗಿದ್ದಾನೆ (ಎಫೆಸ 5:23). ಎರಡನೆಯದಾಗಿ, ಅವನು ಈ ಸಂಬಂಧವನ್ನು *ರೂಢಿಯಲ್ಲಿ ಇಲ್ಲವೇ ಕಾರ್ಯದಲ್ಲಿ* ಅನ್ವಯಿಸಿ ಮಾತಾಡಿದ್ದಾನೆ. ಹೆಂಡತಿಯು ತನ್ನ ಗಂಡನಿಗೆ ಅಧೀನಳಾಗಿರುವಂತೆ, ಸಭೆಯು ಕ್ರಿಸ್ತನಿಗೆ ಅಧೀನವಾಗಿರಬೇಕು. ಅದು ಯೇಸುವನ್ನು ತನ್ನ ಶಿರಸ್ಸಿನಂತೆ, ನಾಯಕನಂತೆ ಹಾಗೂ ಮಾರ್ಗದರ್ಶಿಯಂತೆ ನೋಡಬೇಕು (ಎಫೆಸ 5:24). ಅಂತಿಮವಾಗಿ ಪೌಲನು ಈ ಉದ್ದೇಶದಲ್ಲಿಯ ಸಂಬಂಧವನ್ನು ಚರ್ಚಿಸಿದನು. ಗಂಡನು ತನ್ನ ಹೆಂಡತಿಯನ್ನು ಪ್ರೀತಿಸುವಂತೆ, ಕ್ರಿಸ್ತನು ಸಭೆಯನ್ನು ಪ್ರೀತಿಸುತ್ತಾನೆ ಮತ್ತು ತನ್ನಲ್ಲಿಯ ವಿಶ್ವಾಸಿಗಳ ಈ ದೇಹವನ್ನು ನಿತ್ಯತ್ವದಲ್ಲಿ ತನ್ನೊಂದಿಗೆ ಜೀವಿಸಲು ಸಿದ್ಧಪಡಿಸುತ್ತಿರುವನು (ಎಫೆಸ 5:25-27).

ಹೊಸ ಒಡಂಬಡಿಕೆಯ ಸಭೆಯು ತನ್ನ ಹೃದಯದಲ್ಲಿ ಕ್ರಿಸ್ತನೊಂದಿಗಿನ ಸಂಬಂಧದಲ್ಲಿದೆ. ಪ್ರಾರಂಭವಾಗಿ ಅದು ಜನರೊಂದಿಗಿನ ಸಂಬಂಧವಾಗಿರುವದಿಲ್ಲ. ಆದರೆ ಅದು ಒಬ್ಬನೇ ತಂದೆಯು ಮಕ್ಕಳು ಒಬ್ಬರಿಗೊಬ್ಬರು ಸಂಬಂಧಿಸಿದಂತೆ ಅದು ಕೂಡಲೇ ಇತರ ಕ್ರೈಸ್ತರೊಂದಿಗಿನ, ಸಭೆಯ ಇತರ ಸದಸ್ಯರೊಂದಿಗಿನ ಸಂಬಂಧದಲ್ಲಿ ಪರಿಣಾಮಗೊಳ್ಳುತ್ತದೆ. ಕ್ರಿಸ್ತನ ದೇಹದ ಸದಸ್ಯರು ಒಬ್ಬರೊಬ್ಬರ ಸದಸ್ಯರಾಗಿರುವರು. ಆದರೆ ಮೊದಲು ಹಾಗೂ ಬಹಳವಾಗಿ ಸಭೆಯು ಕ್ರಿಸ್ತನ ದೇಹವಾಗಿದೆ. ಕ್ರಿಸ್ತನ ಸಭೆಯ ಸದಸ್ಯರಾಗಿರುವದಕ್ಕೆ ನಾವು ಕ್ರಿಸ್ತನೊಂದಿಗೆ ಸಂಬಂಧದಲ್ಲಿ ಪ್ರವೇಶಿಸತಕ್ಕದ್ದು. ದೇಹವು ಶಿರಸ್ಸಿನೊಂದಿಗೆ ಒಳಪಟ್ಟಿರುವಂತೆ ನಾವು ಆತನ ಭಾಗಗಳಾಗಿರುವುದು ನಿಕಟವಾದ ಮತ್ತು ವಿಶೇಷವಾದ ಸಂಬಂಧವಾಗಿರುತ್ತದೆ.

## ಮುಕ್ತಾಯ

ಅನೇಕರು "ಸಭೆ" ಎಂಬ ಪದದ ಯೋಗ್ಯವಾದ ಅರ್ಥದ ಬಗ್ಗೆ ಗಲಿಬಿಲಿಗೊಂಡಿದ್ದಾರೆ. ಅಂತಹಾ ಗಲಿಬಿಲಿಯು ಅಸ್ತಿತ್ವದಲ್ಲಿರಬೇಕಾಗಿಲ್ಲ. ಯಾಕಂದರೆ ಬೈಬಲು ಅದರ ಅರ್ಥದ ಮೇಲೆ ಸ್ಪಷ್ಟವಾಗಿದೆ.

"ಸಭೆಯು" ಏನಾಗಿದೆ? ಅದು ಕ್ರಿಸ್ತನ ಸುವಾರ್ತೆಗೆ ವಿಧೇಯರಾದ, ಆತನ ಜನಾಂಗವಾದ ಮತ್ತು ಕೊಡಲ್ಪಟ್ಟ ಸಮಾಜದ ಬಗ್ಗೆ ಆತನ ಜನರಾಗಿ ಆರಾಧಿಸುವ ಹಾಗೂ ಕಾರ್ಯಮಾಡುವದರಿಂದ ಮಾಡಲ್ಪಟ್ಟ ಆತ್ಮಿಕ ದೇಹವಾಗಿದೆ. ಅವರು ಆತನ ಹೆಸರನ್ನು ಧರಿಸಿದವರು ಹಾಗೂ ಭೂಲೋಕದ ಮೇಲೆ ಆತನ ಆತ್ಮಿಕ ದೇಹವಾಗಿರುವರು. ಎಲ್ಲಾ ವಿಷಯಗಳಲ್ಲಿ ಅವರು ಕ್ರಿಸ್ತನನ್ನು ಗೌರವಿಸುವರು. ಈ ಆತ್ಮಿಕ ದೇಹವು ಜೀವಿಸುವ ರಚನೆಯಾಗಿದ್ದು ಅದರಲ್ಲಿ ದೇವರ ಆತ್ಮನು

ವಾಸಿಸುತ್ತಾನೆ. ಸಭೆಯ ಭಾಗವಾಗಿರುವುದು ಅಂದರೆ ಮಾನವ ಸಂಸ್ಥೆಯಲ್ಲಿ ಭಾಗಿಗಳಾಗುವುದು ಇಲ್ಲವೇ ಒಂದು ಗುಂಪಿನಲ್ಲಿ ಸದಸ್ಯತ್ವ ಹೊಂದಿರುವದಷ್ಟೇ ಆಗಿರುವದಿಲ್ಲ. ಅದರ ಅರ್ಥ ಕ್ರಿಸ್ತನೊಂದಿಗೆ ನಿಕಟವಾದ, ಮುಂದುವರಿಯುತ್ತಿರುವ ಸಂಬಂಧವಿರುವುದೆಂಬ ಅರ್ಥವಾಗುತ್ತದೆ.

ಸಭೆಯು, ಕ್ರಿಸ್ತನ ದೇಹವು, ವಿಶ್ವಾಸದಿಂದ ಪ್ರವೇಶಿಸಲ್ಪಡುತ್ತದೆ. ಈ ವಿಶ್ವಾಸದ ಉತ್ತರವು ಮಾನಸಾಂತರವನ್ನು (ಅಪೊಸ್ತಲರ ಕೃತ್ಯಗಳು 17:30, 31), ಯೇಸು ದೇವರ ಕುಮಾರನಾಗಿರುವನೆಂಬ ಅರಿಕೆಯನ್ನು (ರೋಮಾಪುರ 10:10) ಹಾಗೂ ಕ್ರಿಸ್ತನಲ್ಲಿ ಬಾಪ್ತಿಸ್ಮವನ್ನು (ರೋಮಾಪುರ 6:3; ಗಲಾತ್ಯ 3:27) ಒಳಗೊಂಡಿರುತ್ತದೆ. ಬಾಪ್ತಿಸ್ಮಾದಲ್ಲಿ ಒಬ್ಬನ ಪಾಪಗಳು ತೊಳೆಯಲ್ಪಟ್ಟಿವೆ, ಅವನ ನೂತನ ಜನನ ಸಂಪೂರ್ಣವಾಗುತ್ತದೆ. ಅವನು ಕ್ರಿಸ್ತನ ದೇಹದ ಭಾಗವಾಗುತ್ತಾನೆ (ಅಪೊಸ್ತಲರ ಕೃತ್ಯಗಳು 2:38, 41, 47; 22:16; 1 ಕೊರಿಂಥ 12:13).

ಹೊಸ ಒಡಂಬಡಿಕೆಯ ಸಭೆಯು ಒಂದು ಸಭಾ ಪಂಗಡವಾಗಿರುವದಿಲ್ಲ. ಸಭಾ ಪಂಗಡಗಳು ಮಾನವ ನಿರ್ಮಿತವಾದವುಗಳು; ಹೊಸ ಒಡಂಬಡಿಕೆಯಲ್ಲಿನ ಸಭೆಯು ಕರ್ತನಿಂದ ರೂಪಿಸಲ್ಪಟ್ಟಿದೆ, ಸೃಷ್ಟಿಸಲ್ಪಟ್ಟಿದೆ, ಜನರಿಂದ ತುಂಬಿಸಲ್ಪಟ್ಟಿದೆ ಹಾಗೂ ಕರ್ತನಿಂದ ಮುಂದುವರಿಸಲ್ಪಟ್ಟಿದೆ. ಸಭಾಪಂಗಡಗಳು ಭೂಲೋಕ ದಿಂದ, ಮನುಷ್ಯನಿಂದ ಬರುತ್ತವೆ; ಹೊಸ ಒಡಂಬಡಿಕೆಯ ಸಭೆಯು ಪರಲೋಕ ದಿಂದ ದೇವರಿಂದ ಬರುತ್ತದೆ. ಸಭೆಯು ಕ್ರಿಸ್ತನಿಗೆ ಒಳಪಟ್ಟಿರುತ್ತದೆ - ಅದು ಆತನ ಹೆಸರನ್ನು ಧರಿಸಿರುತ್ತದೆ, ಅದು ಆತನ ಆರಾಧನೆಗಾಗಿ ಒಂದಾಗಿ ಕೂಡಿ ಬರುತ್ತದೆ, ಲೋಕದಲ್ಲಿ ಆತನ ಕಾರ್ಯಮಾಡುತ್ತದೆ, ಆತನ ಆತ್ಮನು ಅದರಲ್ಲಿ ವಾಸಿಸುತ್ತಾನೆ (13ನೇ ಅಧ್ಯಾಯದಲ್ಲಿಯ "ಹೊಸ ಒಡಂಬಡಿಕೆಯ ಸಭೆ" ಎಂಬ ಚಾರ್ಟನ್ನು ನೋಡಿರಿ).

ರಕ್ಷಣೆಯು ತನ್ನ ಶರತ್ತುಗಳ ಮೇಲೆ ತನ್ನ ಸಭೆಯೊಳಗೆ ಪ್ರವೇಶಿಸಲು (ಪ್ರಕಟನೆ 22:17) ಹಾಗೂ ಆತನ ಸಭೆಯಾಗಿ ಈ ಲೋಕದಲ್ಲಿ ಜೀವಿಸಲು ಎಲ್ಲಾ ಜನರಿಗೆ ಕ್ರಿಸ್ತನಿಂದ ಆಹ್ವಾನವು ಕೊಡಲ್ಪಟ್ಟಿದೆ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ಪರಿಶುದ್ಧ ಬರಹಗಳಲ್ಲಿ "ಸಭೆ" ಎಂಬಂಥ ಪದಗಳನ್ನು ಪರಿಶುದ್ಧಾತ್ಮನು ಹೇಗೆ ಉಪಯೋಗಿಸುತ್ತಾನೆ ಎಂಬುದನ್ನು ತಿಳಿಯಲಿಕ್ಕೆ ಹೇಗೆ ಅವಶ್ಯವಾಗಿದೆ?
2. ಹೊಸ ಒಡಂಬಡಿಕೆಯಲ್ಲಿ "ಸಭೆ" ಎಂಬ ಪದವು ಉಪಯೋಗಿಸಲ್ಪಟ್ಟ ವಿವಿಧ ರೂಪಗಳನ್ನು ಚರ್ಚಿಸಿರಿ.

3. ಸಭೆಯು ದೇವರ ಆಲಯವಾಗಿದೆ. ಇದು ಕ್ರೈಸ್ತನ ಜೀವನದಲ್ಲಿ ಇದರ ಅರ್ಥವೇನು? ಸಭೆಗಾಗಿರುವ ಈ ಹೆಸರು ಅದರ ಸದಸ್ಯರು ಹೇಗೆ ಜೀವಿಸ ಬೇಕು, ಕಾರ್ಯಮಾಡಬೇಕು ಹಾಗೂ ಆರಾಧಿಸಬೇಕು ಎಂಬುದನ್ನು ಸೂಚಿಸುತ್ತದೆಯೋ?
4. ಯಾವ ಅರ್ಥದಲ್ಲಿ ಸಭೆಯು "ಜೀವಿಸುವ" ಕಟ್ಟಡವಾಗಿದೆ?
5. ಯಾವ ವಿಧಗಳಲ್ಲಿ ಗಂಡ/ಹೆಂಡತಿಯ ಸಂಬಂಧವು ಯೇಸುವಿನೊಂದಿಗೆ ಸಭೆಯ ಸಂಬಂಧವನ್ನು ಉದಾಹರಿಸುತ್ತದೆ?
6. ಒಬ್ಬನು ಕ್ರಿಸ್ತನ ಸಭೆಯನ್ನು ಹೇಗೆ ಪ್ರವೇಶಿಸುವನೆಂಬುದನ್ನು ಸ್ಪಷ್ಟವಾಗಿ ವಿವರಿಸಿರಿ.
7. ಯಾವ ಅರ್ಥದಲ್ಲಿ ಸಭೆಯು ಕ್ರಿಸ್ತನಿಗೆ ಅದ್ವಿತೀಯವಾಗಿ ಒಳಪಟ್ಟಿರುತ್ತದೆ?

## ಪದ ಸಹಾಯಗಳು

ಡಿನಾಮಿನೇಷನ್ - ಬೈಬಲ್‌ನಲ್ಲಿ ಕಂಡು ಬರದ ವಿಶಿಷ್ಟವಾದ ಹೆಸರಿನೊಂದಿಗೆ ವಿಶಿಷ್ಟವಾದ ನಂಬಿಕೆಗಳೊಂದಿಗೆ ಇರುವ ಹಾಗೂ ಒಂದು ರೀತಿಯ ಮಂಡಳಿಯಿಂದ ನಡಿಸಲ್ಪಡುತ್ತಿರುವ ಧಾರ್ಮಿಕ ಸಭೆಗಳ ಗುಂಪು, *ಹೊಸ ಒಡಂಬಡಿಕೆಯಲ್ಲಿ ಯಾವುದೇ ಸಭಾಪಂಗಡಗಳು (ಡಿನಾಮಿನೇಷನ್ಸ್) ಕಂಡು ಬಾರದ್ದರಿಂದ ಇದು ಬೈಬಲಿನ ಪದವಾಗಿರುವದಿಲ್ಲ.*

ಅನ್ಯೋನ್ಯತೆ - ಆಸಕ್ತಿಗಳನ್ನು, ಆದರ್ಶಗಳನ್ನು, ಅನುಭವಗಳನ್ನು ಹಂಚಿಕೊಳ್ಳುವುದು, ಒಬ್ಬರು ಇನ್ನೊಬ್ಬರಿಗಾಗಿ ಕ್ರೆಸ್ತರ ಹೃದಯಗಳನ್ನು ತುಂಬಿಕೊಳ್ಳುವ ಪ್ರೀತಿ.

ಹಾದರ - ಲೈಂಗಿಕ ಪಾಪ; ಮದುವೆಯಾಗದೇ ಲೈಂಗಿಕ ಸಂಪರ್ಕ.

---

ಟಿಪ್ಪಣಿಗಳು

[1]Ibid. "ಸಭೆ" ಎಂಬ ಪದವು ಮಾರ್ಕ, ಲೂಕ, ಯೋಹಾನ, 2 ತಿಮೊಥಿ, ತೀತ, 1 ಮತ್ತು 2 ಪೇತ್ರ, 1 ಮತ್ತು 2 ಯೋಹಾನ ಇಲ್ಲವೇ ಯೂದ - ಇವುಗಳಲ್ಲಿ ಉಪಯೋಗಿ ಸಲ್ಪಟ್ಟಿರುವದಿಲ್ಲ. [3]"ದೇವಾಲಯ" ಎಂಬುದಕ್ಕೆ ಗ್ರೀಕ ಭಾಷೆಯಲ್ಲಿ ಎರಡು ಪದಗಳಿವೆ: *naos* ಹಾಗೂ *hieron* ಈ ವಾಕ್ಯಗಳಲ್ಲಿ ದೇವಾಲಯ ಎಂಬದಕ್ಕೆ ಪೌಲನು ಉಪಯೋಗಿ ಸಿದ್ದು *naos* ಆದರೆ *hieron* ಅಲ್ಲ. *Naos* ಎಂಬುದು ನಿಜವಾದ ದೇವಾಲಯವನ್ನು, ಪವಿತ್ರ ಸ್ಥಳವನ್ನು ಸೂಚಿಸುತ್ತದೆ, ಆದರೆ *hieron* ಎಂಬ ಪದ ಸೂಚಿಸುವಂತೆ ದೇವಾ ಲಯದ ಕಟ್ಟಡ ಸಂಕೀರ್ಣವನ್ನಲ್ಲ. ಕ್ರಿಸ್ತನ ದೇಹವು ದೇವರು ವಾಸಿಸುವ ಸ್ಥಳವಾ ಗಿದೆಯೆಂದು ಪೌಲನು ದೃಢಪಡಿಸುತ್ತಿದ್ದನು. [4]ಈ ವಾಕ್ಯದಲ್ಲಿ "ನೀವು" ಎಂಬುದು ದ್ವಿತೀಯ ಪುರುಷ ಬಹುವಚನದಲ್ಲಿ ಗ್ರೀಕ ಪಠ್ಯದಲ್ಲಿ ಇದೆ. 1 ಕೊರಿಂಥ 6:19, 20ರಲ್ಲಿಯಂತೆ ಒಬ್ಬ ವೈಯಕ್ತಿಕ ವ್ಯಕ್ತಿಗೆ ಅಲ್ಲ ಆದರೆ ಇಲ್ಲಿ ಜನರ ಒಂದು ಗುಂಪಿಗೆ ಇದು

**ಸಂಬಂಧಿಸಿದೆ.** [2]Ethelbert W. Bullinger, *A Critical Lexicon and Concordance to the English and Greek New Testament* (Grand Rapids, Mich.: Zondervan, 1975), 153.

11

# "ದಿ ಗ್ರೇಟೆಸ್ಟ್ ಸ್ಟೋರಿ ಎವರ್ ಟೋಲ್ಡ್"ನ ಅನಂತರ

1965ರಲ್ಲಿ ಚಲನ ಚಿತ್ರದ ಸಂಸ್ಥೆಯು *ದಿ ಗ್ರೇಟೆಸ್ಟ್ ಸ್ಟೋರಿ ಎವರ್ ಟೋಲ್ಡ್* ಎಂಬ ಹೆಸರಿನಿಂದ ಕ್ರಿಸ್ತನ ಜೀವನದ ಮೇಲೆ ಒಂದು ಚಲನ ಚಿತ್ರವನ್ನು ಬಿಡುಗಡೆ ಮಾಡಿತು. ಕ್ರಿಸ್ತನ ಜನನದೊಂದಿಗೆ ಪ್ರಾರಂಭಿಸಿ ಚಲನ ಚಿತ್ರವು ಆತನ ಭೂಲೋಕದ ಸೇವೆ, ಆತನು ತಿರಸ್ಕರಿಸಲ್ಪಟ್ಟದ್ದು, ಶಿಲುಬೆಗೆ ಹಾಕಲ್ಪಟ್ಟದ್ದು, ಹೂಣಿಡಲ್ಪಟ್ಟದ್ದು ಮತ್ತು ಆತನ ಪುನರುತ್ಥಾನವನ್ನು ತೋರಿಸುತ್ತದೆ. ಚಲನ ಚಿತ್ರವು ಬೈಬಲಿನ ಪ್ರೇರಿತ ದಾಖಲೆಗೆ ನಂಬಿಗಸ್ತಿಕೆಯಿಂದ ಇರದಿದ್ದರೂ ಯೇಸುವನ್ನು ಚಿತ್ರೀಕರಿಸುವಲ್ಲಿ, ಕ್ರಿಸ್ತನ ನಿಜವಾದ ಜೀವನವು ಎಂದಾದರೂ ಹೇಳಲ್ಪಟ್ಟ ಕಥೆಗಳಲ್ಲಿ ಅತೀ ದೊಡ್ಡದಾದದ್ದು ಎಂಬುದನ್ನು ಆ ಚಿತ್ರದ ಹೆಸರು ಜ್ಞಾಪಿಸುತ್ತದೆ.

ಯೇಸುವಿನ ಜನನ, ಜೀವನ, ಮರಣ ಹಾಗೂ ಪುನರುತ್ಥಾನವು ಹೇಳಲ್ಪಟ್ಟ ಕಥೆಗಳಲ್ಲಿ ಅತೀ ದೊಡ್ಡದಾಗಿದ್ದರೆ, ಎಂದಾದರೂ ಹೇಳಲ್ಪಟ್ಟ ದೊಡ್ಡ ಕಥೆಯನಂತರ ಯಾವುದು ಇರುವುದು? ಹೊಸ ಒಡಂಬಡಿಕೆಯಲ್ಲಿ ಅಪೊಸ್ತಲರ ಕೃತ್ಯಗಳ ಪುಸ್ತಕವನ್ನು ಒಬ್ಬನು ಓದುವಾಗ ಉತ್ತರವು ಸ್ಪಷ್ಟವಾಗುತ್ತದೆ. ಎಂದಾದರೂ ಹೇಳಲ್ಪಟ್ಟ ಅತೀ ದೊಡ್ಡ ಎರಡನೆಯ ಕಥೆಯು ನಮ್ಮ ಕರ್ತನ ಸಭೆಯನ್ನು ಸ್ಥಾಪಿಸಿದ್ದಾಗಿದೆ.

ದೇವರ ರಾಜ್ಯವನ್ನು, ಸಭೆಯನ್ನು ತರುವದರ ಕಥೆಯು, ಉನ್ನತ ಸಾಹಸ, ಕುತೂಹಲದಿಂದ ತುಂಬಿಕೊಂಡಿರುವದನ್ನು ಒಬ್ಬನು ನಿರೀಕ್ಷಿಸಬಹುದು. ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಒಂದು ಅಧ್ಯಾಯವು - ಅಧ್ಯಾಯ 2 - ವಿಷಯವನ್ನು ಹೇಳುತ್ತದೆ.

ಅಪೊಸ್ತಲರ ಕೃತ್ಯಗಳಲ್ಲಿಯ ಈ ಅಧ್ಯಾಯವನ್ನು ಅದು ಒಂದು ಸಂಪೂರ್ಣ ಪುಸ್ತಕವಾಗಿರುವುದೋ ಇಲ್ಲವೇ ಪೂರ್ಣ ಕಥೆಯಾಗಿರುವುದೋ ಎಂಬಂತೆ ಪುನರಾವಲೋಕನ ಮಾಡೋಣ. ಈ ಕಥೆಯನ್ನು ಅದರ ಒತ್ತಾಯಿಸುವ ಮತ್ತು ಪ್ರೇರೇಪಿಸುವ ಭಾಗಗಳಲ್ಲಿ ವಿಭಾಗಿಸಲು ಇದು ಬಿಡುವುದು. *ದಿ ಗ್ರೇಟೆಸ್ಟ್ ಸ್ಟೋರಿ ಎವರ್ ಟೋಲ್ಡ್ ನಂತರದ* ಪುಸ್ತಕದಲ್ಲಿಯ ಪ್ರತಿಯೊಂದು ಅಧ್ಯಾಯವು

ಸಭೆಯ ಸ್ಥಾಪನೆಯ ಕಥೆಯ ಕುತೂಹಲ ಭರಿತ ಹಂತವನ್ನು ಕೊಡುವುದು.

## ಅಧ್ಯಾಯ ಒಂದು:
## "ದೈವಿಕ ಸುರಿಸುವಿಕೆ"

ಪುಸ್ತಕವನ್ನು ನಾವು ಪ್ರಾರಂಭಿಸುವಂತೆ ನಾವು ಮೊದಲನೆಯ ಅಧ್ಯಾಯವನ್ನು ತೆಗೆಯುತ್ತೇವೆ. ಅದರ ಶೀರ್ಷಿಕೆಯು "ದೈವಿಕ ಸುರಿಸುವಿಕೆ" ಎಂದಿದೆ.

ಅಪೊಸ್ತಲರ ಕೃತ್ಯಗಳ ಗ್ರಂಥದ ಲೇಖಕನಾದ ಲೂಕನು, "ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರು ಏಕಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು" (2:1) ಎಂದು ಹೇಳಿದ್ದಾನೆ. ಆದುದರಿಂದ ಕಥೆಯ ಹಿನ್ನೆಲೆಯು, ಪಂಚಾಶತ್ತಮ ದಿನದಂದು ಐತಿಹಾಸಿಕ ಪಟ್ಟಣವಾದ ಯೆರೂಸಲೇಮ. ಯೆಶಾಯನು (ಯೆಶಾಯ 2:2-4) ಹಾಗೂ ಮೀಕನು (ಮೀಕ 4:1-3) ಪ್ರವಾದಿಕ ವಾಗಿ "ಅಂತ್ಯ ದಿನಗಳು" ಎಂದು ಕರೆಯುವ ಯುಗದ ಪ್ರಾರಂಭದಲ್ಲಿ ಕರ್ತನ ಧರ್ಮಶಾಸ್ತ್ರವು ಹೊರಡುವ ಸ್ಥಳವು ಯೆರೂಸಲೇಮ ಎಂದು ಗುರುತಿಸಿದ್ದಾರೆ. ಪಂಚಾಶತ್ತಮ ದಿನವು ಹಳೇ ಒಡಂಬಡಿಕೆಯ ಹಬ್ಬದ ದಿನವಾಗಿದ್ದು ಧಾನ್ಯದ ಸುಗ್ಗೀ ಹಬ್ಬ ಆಚರಿಸಲ್ಪಟ್ಟಿತು (ವಿಮೋಚನಕಾಂಡ 23:16). ರೋಮ್ ಸಾಮ್ರಾಜ್ಯದ ಎಲ್ಲಾ ಕಡೆಗಳಿಂದ ಯೆಹೂದಿ ಪುರುಷರು ತಮ್ಮ ಕುಟುಂಬಗಳೊಂದಿಗೆ ಈ ಮಹತ್ವದ ಹಳೇ ಒಡಂಬಡಿಕೆಯ ಹಬ್ಬವನ್ನು ಆಚರಿಸಲು ಯೆರೂಸಲೇಮಿಗೆ ಬಂದಿದ್ದರು. ಪಂಚಾಶತ್ತಮ ದಿನದ ಹಬ್ಬವು ಬಂದಿರುವಾಗ ಅಸಾಮಾನ್ಯವಾದದ್ದು ಸಂಭವಿಸಿತು:

> ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತ್ತು. ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು. ಆಗ ಅವರೆಲ್ಲರು ಪರಿಶುದ್ಧಾತ್ಮ ಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು (ಅಪೊಸ್ತಲರ ಕೃತ್ಯಗಳು 2:2-4).

ಪರಿಶುದ್ಧಾತ್ಮನ ಸುರಿಸುವಿಕೆಯನ್ನು ಸ್ವೀಕರಿಸಿದವರು ಅಪೊಸ್ತಲರಾಗಿದ್ದರು. ಅಪೊಸ್ತಲರ ಕೃತ್ಯಗಳು 2 ಹಾಗೂ ಅಪೊಸ್ತಲರ ಕೃತ್ಯಗಳು 2ರ ವರೆಗೆ ನಡಿಸಿದ ಹಿನ್ನೆಲೆಯು ಇದನ್ನು ಸ್ಪಷ್ಟಪಡಿಸುತ್ತದೆ. ಮೊದಲನೆಯದು, ಅಪೊಸ್ತಲರ ಕೃತ್ಯಗಳು 2:1ರಲ್ಲಿ "ಅವರು" ಎಂಬುದು ಅಪೊಸ್ತಲರ ಕೃತ್ಯಗಳು 1:26ರಲ್ಲಿ ಹೇಳಿದ ಅವರು

"ಹನ್ನೊಂದು ಜನ ಅಪೊಸ್ತಲರು" ಎಂದರ್ಥವಾಗುತ್ತದೆ. ಕಥೆಯು ಹೇಳಲ್ಪಟ್ಟಂತೆ ಗಮನದ ಕೇಂದ್ರವು ಅಪೊಸ್ತಲರಾಗಿದ್ದಾರೆ. ಎರಡನೆಯದು, ಪರಿಶುದ್ಧಾತ್ಮನ ಬರುವಿಕೆಯ ವಿವರಣೆಯು (ಅಪೊಸ್ತಲರ ಕೃತ್ಯಗಳು 2:1-21) ಪರಿಶುದ್ಧಾತ್ಮನ ಬಾಪ್ತಿಸ್ಮವನ್ನು ಅಪೊಸ್ತಲರನ್ನು ಬಿಟ್ಟು ಬೇರೆ ಯಾರಾದರೂ ಹೊಂದಿರುವದನ್ನು ನಮೂದಿಸುವದಿಲ್ಲ. ಆತ್ಮನ ಮುಖಾಂತರವಾಗಿ ಅಪೊಸ್ತಲರು ವಿವಿಧ ಭಾಷಗಳ ನ್ನಾಡಿದ್ದಕ್ಕೆ ಸಾಕ್ಷಿಗಳಾದ ಜನ ಸಮೂಹವು ಮಾತನಾಡುತ್ತಿದ್ದವರು ಅಪೊಸ್ತಲರು ಮಾತ್ರವೇ ಎಂದು ಗುರುತಿಸಿದರು ಹಾಗೂ ಒಪ್ಪಿಕೊಂಡರು (ಅಪೊಸ್ತಲರ ಕೃತ್ಯಗಳು 2:7).

ಪರಿಶುದ್ಧಾತ್ಮನ ಈ ಸುರಿಸುವಿಕೆಗಿಂತ ಮೂರು ವರ್ಷಗಳ ಮೊದಲು ಅಪೊಸ್ತಲರಿಗೆ ಒಂದು ದಿನ ಕ್ರಿಸ್ತನು ಹೇಗೆ ಪರಿಶುದ್ಧಾತ್ಮನಿಂದ ಬಾಪ್ತಿಸ್ಮ ಮಾಡಿಸುವನು ಎಂಬುದರ ಬಗ್ಗೆ ವಿವಿಧ ಸಂದರ್ಭಗಳಲ್ಲಿ ವಾಗ್ದಾನಗಳು ಮಾಡಲ್ಪಟ್ಟವು. ಕ್ರಿಸ್ತನ ಸೇವೆಯ ಪ್ರಾರಂಭದಲ್ಲಿ ಸ್ನಾನಿಕನಾದ ಯೋಹಾನನು, "ನಾನಂತೂ ನಿಮ್ಮ ಮನಸ್ಸು ತಿರುಗಿ ಕೊಳ್ಳಬೇಕೆಂಬುದಕ್ಕೆ ನಿಮಗೆ ನೀರಿನಲ್ಲಿ ಬಾಪ್ತಿಸ್ಮ ಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು; ಆತನ ಕೆರಗಳನ್ನು ಹೊರಲಿಕ್ಕೂ ನಾನು ಯೋಗ್ಯನಲ್ಲ; ಆತನು ಪರಿಶುದ್ಧಾತ್ಮನಲ್ಲಿಯೂ, ಬೆಂಕಿಯಲ್ಲಿಯೂ ನಿಮಗೆ ಬಾಪ್ತಿಸ್ಮ ಮಾಡಿಸುವನು" (ಮತ್ತಾಯ 3:11) ಎಂದು ಹೇಳಿದ್ದನು. ಕ್ರಿಸ್ತನು ತನ್ನ ದಿವಾರೋಹಣಕ್ಕಿಂತ ಸ್ವಲ್ಪ ಸಮಯದ ಮೊದಲು, "ಯೋಹಾನನಂತೂ ನೀರಿನಲ್ಲಿ ಬಾಪ್ತಿಸ್ಮ ಮಾಡಿಸಿದನು, ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪರಿಶುದ್ಧಾತ್ಮದಲ್ಲಿ ಬಾಪ್ತಿಸ್ಮವಾಗುವುದು" (ಅಪೊಸ್ತಲರ ಕೃತ್ಯಗಳು 1:5) ಎಂದು ಹೇಳಿದನು. ಯೇಸುವು ಬಿಟ್ಟು ಹೋಗುವಾಗ ತನ್ನ ದಿವಾರೋಹಣದ ಸಮಯದಲ್ಲಿ ತನ್ನ ಶಿಷ್ಯರಿಗೆ ಹೇಳಿದ ಮಾತುಗಳು ಅವರು ತಂದೆಯ ವಾಗ್ದಾನವನ್ನು ಸ್ವೀಕರಿಸುವವರೆಗೆ ಹಾಗೂ ಮೇಲಣಿಂದ ಬಲವನ್ನು ಹೊಂದಿಕೊಳ್ಳುವವರಿಗೆ ಯೆರೂಸಲೇಮಿನಲ್ಲಿ ಇರಬೇಕೆಂದು ನಿರ್ದೇಶಿಸಿದನು (ಲೂಕ 24:46-49; ಅಪೊಸ್ತಲರ ಕೃತ್ಯಗಳು 1:4). ಈಗ ಪಂಚಾಶತ್ತಮ ದಿನದ ಪ್ರಾತಃಕಾಲದಲ್ಲಿ ಬಂದ ಪರಿಶುದ್ಧಾತ್ಮನ ದೈವಿಕ ಸುರಿಸುವಿಕೆಯು ಅಪೊಸ್ತಲರ ಮೇಲೆ ಪರಿಶುದ್ಧಾತ್ಮನು ಬರುವದನ್ನು ಕುರಿತು ನಮ್ಮ ಕರ್ತನ ಎಲ್ಲಾ ವಾಗ್ದಾನಗಳು ನೆರವೇರಿದವು.

ಪರಲೋಕದಿಂದ ಪರಿಶುದ್ಧಾತ್ಮನು ಸುರಿಸಲ್ಪಟ್ಟಾಗ, ಯಾವುದೋ ಒಂದನ್ನು ಕೇಳಿಸಿಕೊಂಡರು: "ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೇ ಆಕಾಶದೊಳಗಿಂದ ಒಂದು ಶಬ್ದ ಉಂಟಾಗಿ ..." (ಅಪೊಸ್ತಲರ ಕೃತ್ಯಗಳು 2:2). ಯಾವುದೋ ಒಂದನ್ನು ನೋಡಿದರು: "ಅದಲ್ಲದೇ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ

ಮೇಲೆ ಒಂದೊಂದಾಗಿ ಕೂತುಕೊಂಡವು" (ಅಪೊಸ್ತಲರ ಕೃತ್ಯಗಳು 2:3). ಯಾವುದೋ ಒಂದನ್ನು ಅವರು ಅನುಭವಿಸಿದರು: ಅಪೊಸ್ತಲರು ಪರಿಶುದ್ಧಾತ್ಮ ಭರಿತರಾಗಿ ಆತ್ಮನು ಅವರಿಗೆ ನುಡಿಯುವ ಶಕ್ತಿಯನ್ನು ಕೊಟ್ಟ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವದನ್ನು ಜನರು ನೋಡಿದರು. ಬಿರುಗಾಳಿಯಂತಿದ್ದ ಶಬ್ದವನ್ನು ಕೇಳಿದ ಹಾಗೂ ಏನು ನಡೆಯುತ್ತಿದೆ ಎಂಬುದನ್ನು ನೋಡಲಿಕ್ಕೆ ಕೂಡಿಬಂದ ಜನರು ಮಾನವ ಭಾಷೆಯನ್ನು ಅಪೊಸ್ತಲರು ಮಾತಾಡಿದರೆಂಬುದರಲ್ಲಿ ಸಂಶಯಪಡಲಿಲ್ಲ, ಅಪೊಸ್ತಲರಿಂದ ನಾವು ಕೇಳಿಸಿಕೊಂಡದ್ದರ ಬಗ್ಗೆ ಮಾತಾಡುತ್ತಿದ್ದಾಗ ಜನರು *dialektos* (ಭಾಷಾಂತರ: "ಭಾಷೆ" [language]; ಅಪೊಸ್ತಲರ ಕೃತ್ಯಗಳು 2:6, 8) ಹಾಗೂ *glossais* (ಭಾಷಾಂತರ: "ಭಾಷೆಗಳಲ್ಲಿ" [tongues]; ಅಪೊಸ್ತಲರ ಕೃತ್ಯಗಳು 2:11) ಎಂಬ ಗ್ರೀಕ ಪದಗಳನ್ನು ಉಪಯೋಗಿಸಿದರು.

ಮೂರು ದೈವಿಕ ಉದ್ದೇಶಗಳ ಕಾರಣದಿಂದ ಅಪೊಸ್ತಲರು ಪರಿಶುದ್ಧಾತ್ಮನೊಂದಿಗೆ ಬಾಪ್ತಿಸ್ಮ ಹೊಂದಿದರು. ಮೊದಲನೆಯದು, ಪ್ರೇರೇಪಣೆಯ ಉದ್ದೇಶಕ್ಕಾಗಿ ಅವರು ಬಾಪ್ತಿಸ್ಮ ಹೊಂದಿದರು. ಜಗತ್ತಿಗೆ ಅವರು ದೇವರ ಪ್ರಕಟಣೆಯನ್ನು ಕೊಡಲಿಕ್ಕಾಗುವಂತೆ ಪರಿಶುದ್ಧಾತ್ಮನು ಅವರನ್ನು ಪ್ರೇರೇಪಿಸುವನು. "ಆದರೆ ಆ ಸಹಾಯಕನು, ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪರಿಶುದ್ಧಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು" (ಯೋಹಾನ 14:26) ಎಂದು ಕ್ರಿಸ್ತನು ಅಪೊಸ್ತಲರಿಗೆ ವಾಗ್ದಾನ ಮಾಡಿದನು. ಈಗ ಪರಿಶುದ್ಧಾತ್ಮನ ಆಗಮನದ ಮುಖಾಂತರವಾಗಿ ಕ್ರಿಸ್ತನು ತನ್ನ ಅಪೊಸ್ತಲರಿಗೆ ಮಾಡಿದ ಪ್ರೇರೇಪಣೆಯ ವಾಗ್ದಾನವು ನೆರವೇರುವುದು.

ಎರಡನೆಯದು, ಅವರು ಪ್ರಸಂಗಿಸುವ ಸಂದೇಶವು ದೇವರಿಂದ ಬಂದದ್ದೆಂದು ದೃಢಪಡಿಸುವ ಉದ್ದೇಶಕ್ಕಾಗಿ ಎಂಬುದನ್ನು ಸ್ಥಿರಪಡಿಸಲು ಅವರು ಪರಿಶುದ್ಧಾತ್ಮನಿಂದ ಬಾಪ್ತಿಸ್ಮ ಹೊಂದಿದರು. ಅವರು ಪ್ರಸಂಗಿಸುವ ಸಂದೇಶವನ್ನು ದೃಢಪಡಿಸಲು ಇಲ್ಲವೇ ಸಿದ್ಧಪಡಿಸಿ ತೋರಿಸಲು ಅದ್ಭುತ ಕಾರ್ಯಗಳನ್ನೂ, ಸೂಚಕ ಕಾರ್ಯಗಳನ್ನೂ, ಮಹತ್ಕಾರ್ಯಗಳನ್ನು ಮಾಡಲು ಪರಿಶುದ್ಧಾತ್ಮನಿಂದ ಅವರು ಬಲಪಡಿಸಲ್ಪಟ್ಟರು. "ಇದಲ್ಲದೆ ನಂಬುವದರಿಂದ ಈ ಸೂಚಕ ಕಾರ್ಯಗಳು ಉಂಟಾಗುವವು; ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು; ಹೊಸ ಭಾಷೆಗಳಿಂದ ಮಾತಾಡುವರು; ಹಾವುಗಳನ್ನು ಎತ್ತುವರು, ವಿಷಪದಾರ್ಥವನ್ನೇನಾದರೂ ಕುಡಿದರೂ ಅವರಿಗೆ ಯಾವ ಕೇಡೂ ಆಗುವದಿಲ್ಲ, ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವುದು" (ಮಾರ್ಕ 16:17, 18) ಎಂದು ಕ್ರಿಸ್ತನು ವಾಗ್ದಾನ ಮಾಡಿದನು. ಈ ವಾಗ್ದನವು ಅಪೊಸ್ತಲರು ತಾವು ದೇವರಿಂದ ಕಳುಹಿಸಲ್ಪಟ್ಟವರೆಂದು ದೃಢಪಡಿಸಲು ಅದ್ಭುತಕಾರ್ಯ

ಗಳನ್ನು ಮಾಡಿದಂತೆ ಪರಿಶುದ್ಧಾತ್ಮನ ಮುಖಾಂತರವಾಗಿ ನೆರವೇರಿಸಲ್ಪಟ್ಟಿರುವುದು. ಅದರ ನೆರವೇರುವಿಕೆಯ ಒಂದು ಉದಾಹರಣೆಯು ಅಪೊಸ್ತಲರ ಕೃತ್ಯಗಳು 14:3ರಲ್ಲಿ ಕಂಡುಬರುತ್ತದೆ: "ಬಹುಕಾಲ ಅಲ್ಲಿದ್ದು ಕರ್ತನು ಅವರ ಕೈಯಿಂದ ಸೂಚಕ ಕಾರ್ಯಗಳೂ ಅದ್ಭುತ ಕಾರ್ಯಗಳೂ ಆಗುವಂತೆ ದಯಪಾಲಿಸಿ ತನ್ನ ಕೃಪಾವಾಕ್ಯಕ್ಕೆ ಸಾಕ್ಷಿಕೊಟ್ಟದ್ದರಿಂದ ಆತನ ಮೇಲೆ ಭರವಸವಿಟ್ಟು ಧೈರ್ಯದಿಂದ ಮಾತಾಡುತ್ತಿದ್ದರು."

ಮೂರನೆಯದು, ಅಪೊಸ್ತಲರು ತಮ್ಮ ಕೈಗಳನ್ನು ಬೇರೆ ಕ್ರೈಸ್ತರ ಮೇಲೆ ಇಡುವದಕ್ಕೂ ಅವರಿಗೆ ಅದ್ಭುತವಾದ ವರಗಳನ್ನು ಕೊಡುವದಕ್ಕೂ ಅಧಿಕಾರವಿರುವದಕ್ಕಾಗಿ ಪರಿಶುದ್ಧಾತ್ಮನಿಂದ ಬಾಪ್ತಿಸ್ಮ ಹೊಂದಿದರು. ಈ ಅಧಿಕಾರವನ್ನು ಕೊಡುವದರ ಒಂದು ಉದಾಹರಣೆಯು ಅಪೊಸ್ತಲರ ಕೃತ್ಯ ಗಳು 8:14-24ರಲ್ಲಿದೆ: ಪೇತ್ರ, ಯೋಹಾನರೆಂಬ ಇಬ್ಬರು ಅಪೊಸ್ತಲರು ಫಿಲಿಪ್ಪನ ಪ್ರಸಂಗದ ಮೂಲಕವಾಗಿ ಕ್ರಿಸ್ತನ ಬಳಿಗೆ ಬಂದ ಹೊಸದಾಗಿ ಮಾರ್ಪಟ್ಟವರ ಬಳಿಗೆ ಪ್ರಾರ್ಥಿಸಲು, ಅವರ ಮೇಲೆ ಕೈಗಳನ್ನಿಡಲು ಹಾಗೂ ಪರಿಶುದ್ಧಾತ್ಮನ ಅದ್ಭುತವಾದ ವರಗಳನ್ನು ಕೊಡಲು ಯೆರೂಸಲೇಮಿನಿಂದ ಸಮಾರಿಯಕ್ಕೆ ಕಳುಹಿಸಲ್ಪಟ್ಟರು.

"ಗ್ರೇಟೆಸ್ಟ್ ಸ್ಟೋರಿ ಎವರ ಟೋಲ್ಡ್" ನಂತರ ಎಂಬುದರ ಪ್ರಾರಂಭವು ನಿಮಗೆ ಹಾಗೂ ನನಗೆ ಯಾವ ಅರ್ಥಕೊಡುತ್ತದೆ? ಹೊಸ ಒಡಂಬಡಿಕೆಯಲ್ಲಿ ಕಂಡು ಬರುವ ಪ್ರಕಟಣೆಯು ಪ್ರೇರೇಪಿತ ಜನರಿಂದ ನಮಗೆ ಕೊಡಲ್ಪಟ್ಟಿತು ಎಂದರ್ಥವಾಗುತ್ತದೆ. ಪರಿಶುದ್ಧಾತ್ಮನ ಬಾಪ್ತಿಸ್ಮದ ಮುಖಾಂತರ ದೇವರು ತನ್ನ ಅಪೊಸ್ತಲರನ್ನು ಬಲಪಡಿಸಿದನು; ಹಾಗೂ ಅಪೊಸ್ತಲರು, ಇದಕ್ಕೆ ಪ್ರತಿಯಾಗಿ ತಮ್ಮ ಹಸ್ತಗಳನ್ನಿಡುವದರಿಂದ ಪರಿಶುದ್ಧಾತ್ಮನ ಅದ್ಭುತವಾದ ವರಗಳನ್ನು ಇತರ ಕ್ರೈಸ್ತರಿಗೆ ಕೊಟ್ಟರು. ಹೀಗೆ ಹೊಸ ಒಡಂಬಡಿಕೆಯ ಎಲ್ಲಾ ಬರಹಗಾರರು ಪ್ರೇರಿತ, ಆತ್ಮನಿಂದ ನಡಿಸಲ್ಪಟ್ಟ ಜನರಾಗಿದ್ದರು. ಹೊಸ ಒಡಂಬಡಿಕೆಯು ಜನರಿಗೆ ದೇವರ ಪ್ರಕಟಣೆಯಾಗಿದೆ ಎಂದು ನಾವು ದೃಢವಾಗಿ ನಂಬಬಹುದು.

## ಅಧ್ಯಾಯ ಎರಡು:

## "ಅಧಿಕ ಬಲವುಳ್ಳ ಪ್ರಸಂಗ"

*ದಿ ಗ್ರೇಟೆಸ್ಟ್ ಸ್ಟೋರಿ ಎವರ್ ಟೋಲ್ಡ್‌ದ ನಂತರದ* ಎರಡನೆಯ ಅಧ್ಯಾಯದ ಶೀರ್ಷಿಕೆಯು "ಅಧಿಕ ಬಲವುಳ್ಳ ಪ್ರಸಂಗ" ಎಂದಿದೆ. ಸಭೆಯು ಸ್ಥಾಪಿಸಲ್ಪಟ್ಟ ದಿನವು ಪ್ರಸಂಗಿಸಿದ ದಿನವಾಗಿತ್ತು. ಮೊದಲನೆಯದಾಗಿ, ಎಲ್ಲಾ ಅಪೊಸ್ತಲರು ಭಿನ್ನವಾದ ರಾಷ್ಟ್ರೀಯ ಗುಂಪುಗಳಿಗೆ ಅವರ ಭಾಷೆಗಳಲ್ಲಿ ಇಲ್ಲವೇ ಸ್ಥಳೀಯ ಭಾಷಗಳಲ್ಲಿ "ದೇವರ ಬಲವಾದ ಕಾರ್ಯಗಳನ್ನು" ಘೋಷಿಸುತ್ತ ಮಾತಾಡಿದರು

(ಅಪೊಸ್ತಲರ ಕೃತ್ಯಗಳು 2:11). ಆಗ ಪೇತ್ರನು ಹನ್ನೊಂದು ಮಂದಿ ಅಪೊಸ್ತಲರ ಸಹಿತ ಎದ್ದು ನಿಂತುಕೊಂಡು ವಿವರವಾದ ಪ್ರಸಂಗವನ್ನು ಪ್ರಸಂಗಿಸಿದನು. ಯೇಸುವು ಕರ್ತನೂ, ಕ್ರಿಸ್ತನೂ ಆಗಿದ್ದಾನೆಂದು ಘೋಷಿಸಿದನು. ಬಹುಶಃ ಗ್ರೀಕ ಭಾಷೆಯಲ್ಲಿ ಪ್ರಸಂಗಿಸಿದನು. ಆ ದಿನದಲ್ಲಿ ಅದು ವಿಶ್ವದ ಭಾಷೆಯಂತೆ ಇತ್ತು (ಅಪೊಸ್ತಲರ ಕೃತ್ಯಗಳು 2:14).

ಬಿರುಗಾಳಿ ಬೀಸುತ್ತದೋ ಎಂಬಂತಿದ್ದ ಶಬ್ದವನ್ನು ಕೇಳಿ ಒಂದಾಗಿ ಕೂಡಿ ಬಂದಿದ್ದ ಜನರು ಯೆಹೂದ್ಯರಾಗಿದ್ದರು. ಸುವಾರ್ತೆಯ ಈ ಮೊದಲ ಪ್ರಸಂಗಕ್ಕಾಗಿ ಅಸಾಮಾನ್ಯವಾದ ಸಂಭವನೀಯವಾದ ಕೇಳುಗರಿದ್ದರು. ಅವರಲ್ಲಿ ಬುದ್ಧಿವಂತಿಕೆಯಿತ್ತು, ಅವರು ದೇವರಲ್ಲಿ ನಂಬುವವರಾಗಿದ್ದರು. ಹಳೇ ಒಡಂಬಡಿಕೆಯ ಪರಿಶುದ್ಧ ಬರಹವನ್ನು ಚೆನ್ನಾಗಿ ತಿಳಿದು ಕೊಂಡಿದ್ದರು. ಸುವಾರ್ತೆಯ ಸಂದೇಶವನ್ನು ಸ್ವೀಕರಿಸಲು ಅವರಿಗೆ ಮಾನಸಿಕ ಸಿದ್ಧತೆಯಿತ್ತು. ಅನೇಕ ದೇಶಗಳಿಗೆ ಕ್ರಿಸ್ತನನ್ನು ತೆಗೆದು ಕೊಂಡು ಹೋಗಲಿಕ್ಕೆ ಅವರಿಗೆ ಅವಕಾಶವಿತ್ತು. ರೋಮ್ ಸಾಮ್ರಾಜ್ಯದ ಎಲ್ಲಾ ಭಾಗಗಳಿಂದ ಅವರು ಬಂದಿದ್ದರು. ಸುವಾರ್ತೆ ಯನ್ನು ಸ್ವೀಕರಿಸುವ ಈ ಜನರಿಂದ ಮತ್ತು ಅವರೊಂದಿಗೆ ತಮ್ಮ ಸ್ವದೇಶಕ್ಕೆ ಅನಂತರ ಹಿಂದಿರುಗುವದರಿಂದ ಕೂಡಲೇ ಕ್ರೈಸ್ತತ್ವವನ್ನು ಪ್ರಚುರಪಡಿಸುವ ಅವಕಾಶವಿತ್ತು.

ಪ್ರೇರಣೆಯ ಮುಖಾಂತರ ಪೇತ್ರನು ಪ್ರಸಂಗಿಸಿದ ಪ್ರಸಂಗದ ಸಾರಾಂಶವನ್ನು ಲೂಕನು ನಮಗೆ ಒದಗಿಸಿಕೊಟ್ಟಿದ್ದಾನೆ (ಅಪೊಸ್ತಲರ ಕೃತ್ಯಗಳು 2:14-36). ಅವನು ಕೊಟ್ಟ ಪೇತ್ರನ ಪ್ರಸಂಗದ ಮುಖ್ಯ ವಿಷಯವನ್ನು ಎರಡು ಇಲ್ಲವೇ ಮೂರು ಭಿನ್ನ ವಾದ ಮಾರ್ಗಗಳಲ್ಲಿ ಸಾರಾಂಶವಾಗಿ ಹೇಳಬಹುದು; ಆದರೆ ಆದರ್ಶವಾದ ಭಾಷಣದ ಸಾಮಾನ್ಯ ವಿಷಯಗಳಿಗೆ ತಕ್ಕಂತೆ, ಅದರ ಪೀಠಿಕೆ, ವಿಷಯ ಮತ್ತು ಮುಕ್ತಾಯ ನೋಡಿ ಅದನ್ನು ಸಾರಾಂಶವಾಗಿ ಹೇಳೋಣ.

ತನ್ನ ಕೇಳುಗರಿದ್ದಲ್ಲಿ ಪ್ರಾರಂಭಿಸುವುದರಿಂದ ಪೇತ್ರನು ತನ್ನ ಪ್ರಸಂಗ ಆರಂಭಿಸಿದನು. ಜನರಲ್ಲಿ ಕೆಲವರು ಅಪಹಾಸ್ಯಮಾಡಿ, "ಅವರು ಕುಡಿದು ಮತ್ತರಾಗಿದ್ದಾರೆ" (ಅಪೊಸ್ತಲರ ಕೃತ್ಯಗಳು 2:13) ಎಂದು ಹೇಳಿದರು. ಸುವಾರ್ತೆಯ ಬೋಧಕರು ಒಳ್ಳೇ ಪ್ರತಿಷ್ಠೆಯ ಹೊರತಾಗಿ ಬೇರೆ ಯಾವುದು ಇಲ್ಲದೇ ಹೊಂದಿಕೊಂಡು ಹೋಗಬಹುದು. ನಂಬಲರ್ಹವಾದ ಗುಣವಿಲ್ಲದ ಮತ್ತು ನಂಬಲರ್ಹ ಗೌರವವಿಲ್ಲದ ಯಾವುದೇ ಬೋಧಕನು ಮಾತನಾಡಲು ತನ್ನ ಬಾಯಿಯನ್ನು ತೆರೆಯುವ ಮೊದಲು ಸೋತು ಹೋಗುತ್ತಾನೆ. ಸುವಾರ್ತೆ ಯನ್ನು ತನ್ನ ಪ್ರಕಟಿಸುವಿಕೆಯಲ್ಲಿ ಎಷ್ಟು ಬಲವುಳ್ಳವನಾಗಿದ್ದರೂ ಅವನು ನಂಬಲ್ಪಡುವದಿಲ್ಲ ಮತ್ತು ಗೌರವಿಸಲ್ಪಡುವದಿಲ್ಲ.

ಆಗ ಅಪೊಸ್ತಲರಿಗೆ ವಿರುದ್ಧವಾಗಿ ಮಾಡಲ್ಪಟ್ಟ ದೂರುಗಳಿಗೆ ಉತ್ತರವಾಗಿ

ಪೇತ್ರನು ಈ ಪ್ರಸಂಗವನ್ನು ಪ್ರಾರಂಭಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಘಟನೆಯ ಬಗ್ಗೆ ಅವರಿಗಿದ್ದ ತಪ್ಪು ಅಭಿಪ್ರಾಯಗಳಿಗೆ ಎರಡು ಸತ್ಯಗಳೊಂದಿಗೆ ಉತ್ತರ ಕೊಟ್ಟನು: ಮೊದಲನೆಯದು, ಅದು ಏನೂ ಅಲ್ಲವೆಂದು ಹೇಳಿದನು. ಅವರ ಸಾಮಾನ್ಯ ತಿಳುವಳಿಕೆಗೆ ಮನವಿ ಮಾಡಿದನು. "ನೀವು ಭಾವಿಸಿದಂತೆ ಇವರು ಅಮಲೇರಿದವರಲ್ಲ; ಈಗ ಬೆಳಿಗ್ಗೆ ಒಂಭತ್ತು ಘಂಟೆಯಾಗಿದೆಯಷ್ಟೇ" (ಅಪೊಸ್ತಲರ ಕೃತ್ಯಗಳು 2:15) ಎಂದು ಹೇಳಿದನು. ವಿವರಣೆಯು ಕುಡುಕತನವಾಗಿರಲಿಲ್ಲ. ಯಾಕಂದರೆ ಯಾವುದೇ ಸಾಮಾನ್ಯ ಯೆಹೂದ್ಯನು ಪಂಚಾಶತ್ತಮದ ದಿನದಂದು, ಪ್ರಾತಃಕಾಲದಲ್ಲಿ ಕುಡಿದು ಮತ್ತನಾಗುವದಿಲ್ಲ. ನಾವು ಕುಡಿದು ಮತ್ತರಾಗಿರುವದಿಲ್ಲವೆಂಬುದನ್ನು ಸಾಮಾನ್ಯ ತಿಳುವಳಿಕೆಯು ನಿಮಗೆ ಹೇಳುತ್ತದೆ ಎಂಬಂತೆ ಪೇತ್ರನು ಹೇಳಿದನು. ಎರಡನೆಯದು, ಅದೇನಾಗಿದೆಯೆಂದು ಪೇತ್ರನು ವಿವರಿಸಿದನು: "ಆದರೆ ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ" ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 2:16). ಅವನು ಪರಿಶುದ್ಧ ಬರಹವನ್ನು ಉಪಯೋಗಿಸಿದನು. ಅನಂತರ ಅವನು ಯೋವೇಲ 2:28-32ನ್ನು ಉಲ್ಲೇಖಿಸಿದನು (ಅಪೊಸ್ತಲರ ಕೃತ್ಯಗಳು 2:17-21). ಹೀಗೆ ಪಂಚಾಶತ್ತಮ ದಿನದಂದು ಪರಿಶುದ್ಧಾತ್ಮನ ಸುರಿಸುವಿಕೆಯು "ಕೊನೆಯ ದಿನಗಳು" ಎಂದು ಕರೆಯಲ್ಪಟ್ಟ ಯುಗದ ಪ್ರಾರಂಭವನ್ನು ಕುರಿತು ಯೋವೇಲನ ಪ್ರವಾದನೆಯ ನೆರವೇರುವಿಕೆಯು ಭಾಗಶಃವಾಗಿಯಾದರೂ ಆಗಿದೆಯೆಂಬುದಕ್ಕೆ ಸಂಶಯವಿಲ್ಲ. ಅದರ ಬಗ್ಗೆ ನಮಗೆ ಪೇತ್ರನ ಮಾತು ಇದೆ. "ಇದು ಯೋವೇಲ ಪ್ರವಾದಿಯ ಮುಖಾಂತರ ಹೇಳಿದ್ದಾಗಿರುವುದು" ಎಂಬುದು ಈ ಪ್ರಶ್ನೆಗೆ ಸಂಪೂರ್ಣವಾದ ಮತ್ತು ಅಂತಿಮವಾದ ಉತ್ತರವೆಂದು ತಿಳಿಯಲ್ಪಡತಕ್ಕದ್ದು.

ಆತ್ಮನ ಈ ಸುರಿಸುವಿಕೆಯು "ಅಂತಿಮ ದಿನಗಳ" ಯುಗವನ್ನು ಪ್ರಾರಂಭಿಸಿತು. ಪರಿಶುದ್ಧಾತ್ಮನ ಸುರಿಸುವಿಕೆಯಿಂದ ಅಪೊಸ್ತಲರು ಬಲಪಡಿಸಲ್ಪಟ್ಟಂತೆ ಸಭೆಯ ಅದ್ಭುತಕರವಾದ ಯುಗದ ಆರಂಭವು ಪ್ರಾರಂಭಿಸಲ್ಪಟ್ಟಿತು. ಅನಂತರದಲ್ಲಿ ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಅಪೊಸ್ತಲರು ಇತರ ಕ್ರೈಸ್ತರ ಮೇಲೆ ತಮ್ಮ ಕೈಗಳನ್ನಿಟ್ಟರು ಹಾಗೂ ಗಂಡು ಮಕ್ಕಳೂ ಹೆಣ್ಣುಮಕ್ಕಳೂ ಪ್ರವಾದಿಸಿದರು, ಯುವಕರು ದರ್ಶನಗಳನ್ನು ನೋಡಿದರು, ಹಿರಿಯರು ಕನಸುಗಳನ್ನು ಕಂಡರು ಮತ್ತು ದಾಸದಾಸಿಯರಾದ ಪುರುಷರೂ ಸ್ತ್ರೀಯರೂ ಪ್ರವಾದನೆ ಹೇಳಿದರು (ಅಪೊಸ್ತಲರ ಕೃತ್ಯಗಳು 6:6; 8:4-8, 14-24; 21:8, 9). ಅಪೊಸ್ತಲರ ಮೇಲೆ ಈ ಸುರಿಸುವಿಕೆಯು ಕ್ರೈಸ್ತತ್ವದ ಪ್ರಾರಂಭದ ದಿನಗಳಲ್ಲಿಯ ಅದ್ಭುತಕರವಾದ ಪ್ರವಾಹಕ್ಕೆ ಬುಗ್ಗೆಯಾಗಿತ್ತು. ಅಪೊಸ್ತಲರ ಹಸ್ತಗಳನ್ನು ಇಡುವುದರಿಂದ ಕೊಡಲ್ಪಟ್ಟ ಪರಿಶುದ್ಧಾತ್ಮನ ಅದ್ಭುತಕರವಾದ ವರಗಳನ್ನು ಹೊಸ ಒಡಂಬಡಿಕೆಯ

ಅಖಿತ ರೂಪವು ಕಂಡು ಕೊಳ್ಳುವವರೆಗೆ ಆಗ ತಾನೇ ಸ್ಥಾಪಿಸಿದ ಸಭೆಯನ್ನು ಮಾರ್ಗದರ್ಶಕ್ಕಾಗಿ ದೇವರು ಉಪಯೋಗಿಸಿದನು. ಹೊಸ ಒಡಂಬಡಿಕೆಯ ಅಖಿತ ರೂಪವು ಪೂರ್ತಿಯಾಗುವದರೊಂದಿಗೆ, ಅಪೊಸ್ತಲರ ಮರಣದೊಂದಿಗೆ, ಅಪೊಸ್ತಲರ ಹಸ್ತಗಳನ್ನು ಇಡಲ್ಪಟ್ಟವರ ಮರಣದೊಂದಿಗೆ ಸಭೆಯ ಅದ್ಭುತಕರ ವಾದ ಪ್ರಾರಂಭವು ಅಂತ್ಯಗೊಂಡಿತು. ಅಖಿತ ವಾಕ್ಯದ ಮುಖಾಂತರ ಸಭೆಗಳನ್ನು ನಡಿಸುವ ಆತ್ಮನ ಯುಗವು ಪ್ರಾರಂಭಿಸಲ್ಪಟ್ಟಿತು.

ಹೀಗೆ ಪೇತ್ರನ ಪೀಠಿಕೆಯು, ಘಟನೆಯು ಏನಾಗಿರುವದಿಲ್ಲ ಮತ್ತು ಏನಾಗಿರುವುದು ಎಂಬುದನ್ನು ತೋರಿಸಿತು. ಅವನು ಅವರ ಸಾಮಾನ್ಯ ತಿಳುವಳಿಕೆಗೆ ಮನವಿ ಮಾಡಿದನು ಮತ್ತು ಪರಿಶುದ್ಧ ಬರಹಕ್ಕೆ ಮನವಿ ಮಾಡಿದನು. ಅವನು ತನ್ನ ಕೇಳುಗರನ್ನು ಅವರಿದ್ದಲ್ಲಿಂದ ಯೇಸುವು ಮೆಸ್ಸೀಯನಾಗಿದ್ದಾನೆಂಬುದರ ಪ್ರಕಟನೆಯನ್ನು ಯೋಚಿಸಲು ಸಿದ್ಧರಾಗುವದಕ್ಕೆ ನಡಿಸಿದನು.

ಪೇತ್ರನು ಪ್ರಸಂಗದ ಮಧ್ಯಭಾಗವು ಯೇಸುವು ಕ್ರಿಸ್ತನಾಗಿದ್ದಾನೆಂದು ನಂಬುವದಕ್ಕಾಗಿ ಪುರಾವೆಯ ವಿವಿಧ ವಿಧಾನಗಳ ಪ್ರಕಟನೆಯನ್ನೊಳಗೊಂಡಿತ್ತು. ನೀವು ಸಾವಿರಾರು ಜನರ ಕೂಟದ ಮುಂದೆ ನಿಂತುಕೊಳ್ಳಲು ಕೇಳಲ್ಪಟ್ಟರೆ ಮತ್ತು ಯೇಸುವು ಕ್ರಿಸ್ತನಾಗಿದ್ದಾನೆಂದು ನಂಬುವದಕ್ಕೆ ಪುರಾವೆಯ ಯಾದಿ ಮಾಡಿರೆಂದು ಕೇಳಲ್ಪಟ್ಟರೆ, ಯಾವ ಪುರಾವೆಯನ್ನು ನೀವು ಪಟ್ಟಿ ಮಾಡುವಿರಿ? ಆತನು ಕೊಟ್ಟ ಪುರಾವೆಯನ್ನು ನೋಡೋಣ. ಅದರೊಂದಿಗೆ ನಮ್ಮ ಪಟ್ಟಿಯನ್ನು ಪರಿಕ್ಷಿಸೋಣ.

ಪುನಃ ಪುನಃ ಹೇಳಿದ್ದನ್ನು ತೆಗೆದು ಹಾಕಿದಾಗ, ಪೇತ್ರನು ಪುರಾವೆಯ ಐದು ವಿಚಾರಗಳನ್ನು ಪಟ್ಟಿಮಾಡಿ, ವಿವರಿಸಿದನು. ಮೊದಲನೆಯದು, *ಕ್ರಿಸ್ತನ ಅದ್ಭುತಕಾರ್ಯಗಳ ಪುರಾವೆಯ ಕಡೆಗೆ* ತೋರಿಸಿದನು. "... ನಜರೇತಿನ ಯೇಸು ಇದ್ದನಲ್ಲಾ, ದೇವರು, ನಿಮಗೂ ತಿಳಿದಿರುವಂತೆ, ಆತನ ಕೈಯಿಂದ ಮಹತ್ತುಗಳನ್ನೂ ಅದ್ಭುತಗಳನ್ನೂ, ಸೂಚಕಕಾರ್ಯಗಳನ್ನೂ ನಿಮ್ಮಲ್ಲಿ ನಡಿಸಿ ಆತನನ್ನು ತನಗೆ ಮೆಚ್ಚಿಕೆಯಾದವನೆಂದು ನಿಮಗೆ ತೋರಿಸಿಕೊಟ್ಟನು" (ಅಪೊಸ್ತಲರ ಕೃತ್ಯಗಳು 2:22) ಎಂದು ಅವನು ಹೇಳಿದನು. ಕ್ರಿಸ್ತನು ದೇವರಿಂದ ಬಂದಿದ್ದಾನೆಂದು ನಿಕೊದೇಮನಿಗೆ ಮನವರಿಕೆ ಮಾಡಿಕೊಟ್ಟ ಅದ್ಭುತಗಳ ಸಾಕ್ಷಿ ಅದಾಗಿತ್ತು. ಕ್ರಿಸ್ತನೊಂದಿಗೆ ರಾತ್ರಿಯ ಸಮಯದಲ್ಲಿ ನಿಕೊದೇಮನು ತನ್ನ ಸಂದರ್ಶನದಲ್ಲಿ, "ಗುರುವೇ ನೀನು ದೇವರ ಕಡೆಯಿಂದ ಬಂದ ಬೋಧಕನೆಂದು ಬಲ್ಲೆವು ನೀನು ಮಾಡುವಂಥ ಈ ಸೂಚಕ ಕಾರ್ಯಗಳನ್ನು ದೇವರ ಸಹಾಯವಿಲ್ಲದೆ ಮಾಡುವುದು ಯಾರಿಂದಲೂ ಆಗದು" ಎಂದು ಹೇಳಿದನು (ಯೋಹಾನ 3:2). ಸಂಪೂರ್ಣವಾಗಿ ವಿಶ್ವಾಸಾರ್ಹವಾದ ಮಹಿಮೆಯ ಮೂಲವು, ತಿರಸ್ಕರಿಸಲಾಗದ, ನಂಬಲರ್ಹದ ದಾಖಲೆಯು ಯೇಸುವು ನಿಜ ವಾದ ಅದ್ಭುತಗಳನ್ನು ಮಾಡಿದನೆಂಬುದನ್ನು ನಮಗೆ ಹೇಳಿದರೆ, ಆ ಸಾಕ್ಷಿಯಿಂದ

ಕ್ರಿಸ್ತನ ಅದ್ಭುತಗಳಿಗೆ ಪ್ರತಿಕ್ರಿಯೆ ಮಾಡಲು ನಿಕೊದೇಮನ ರೀತಿಯಲ್ಲಿ ಕ್ರಿಸ್ತನು ದೇವರಿಂದ ಬಂದನು ಎಂಬುದನ್ನು ನಂಬಲು ಒತ್ತಾಯಿಸಲ್ಪಡುವೆವು. ದೇವರ ವಾಕ್ಯವು, ಬೈಬಲು ಭೂಲೋಕದಲ್ಲಿ ಬಹಳವಾಗಿ ನಂಬಲ್ಪಡುವ ಮಾಹಿತಿ ಯುಳ್ಳ ಮೂಲವಾಗಿದೆ; ಕ್ರಿಸ್ತನು ನಿಜವಾದ ಅದ್ಭುತಗಳನ್ನು ಮಾಡಿದನೆಂದು ಸಾಕ್ಷಿಕೊಡುತ್ತದೆ. ಪುರಾವೆಯು ಒಂದೇ ತೀರ್ಮಾನದ ಕಡೆಗೆ ತೋರಿಸುವುದು - ಆತನು ದೇವರಿಂದ "ಮನ್ನಣೆ" ಹೊಂದಿದಾತನು, ಆತನು ಮಾಡಿದ ಅದ್ಭುತಗಳು ಆತನು ದೇವರ ಕುಮಾರನೆಂದು ದೃಢಪಡಿಸಿದವು. ಪೇತ್ರನು ತನ್ನ ಕೇಳುಗರಿಗೆ ಕ್ರಿಸ್ತನ ಅದ್ಭುತಗಳ ಬಗ್ಗೆ ಜ್ಞಾಪಿಸಿದನು. ಆ ಪುರಾವೆ ನೀಡುವ ತಾರ್ಕಿಕ ನಿರ್ಣಯವನ್ನು ಸ್ವೀಕರಿಸಲು ಕರೆದನು.

ಎರಡನೆಯದಾಗಿ, ಪೇತ್ರನು ತನ್ನ ಕೇಳುಗರ ಎದುರಿನಲ್ಲಿ *ಪುನರುತ್ಥಾನದ ಪುರಾವೆಯನ್ನಿಟ್ಟನು,*

> ಆ ಯೇಸು, ದೇವರ ಮುಂದಾಗಿ ನಿರ್ಣಯಿಸಿದ ಸಂಕಲ್ಪಕ್ಕೂ ಭವಿಷದ್‌ಜ್ಞಾನಕ್ಕೂ ಅನುಸಾರವಾಗಿ ಒಪ್ಪಿಸಲ್ಪಟ್ಟಿರಲು, ನೀವು ದುಷ್ಟರ ಕೈಯಿಂದ ಆತನನ್ನು ಶಿಲುಬೆಗೆ ಹಾಕಿಸಿ ಕೊಂದಿರಿ. ಆತನನ್ನು ದೇವರು ಮರಣವೇದನೆಗಳಿಂದ ಬಿಡಿಸಿ ಎಬ್ಬಿಸಿದನು; ಯಾಕಂದರೆ ಮರಣವು ಆತನನ್ನು ಹಿಡಿದು ಕೊಂಡಿರುವುದು ಅಸಾಧ್ಯವಾಗಿತ್ತು (ಅಪೊಸ್ತಲರ ಕೃತ್ಯಗಳು 2:23, 24) ಎಂದು ಹೇಳಿದನು.

ಪುನರುತ್ಥಾನವು ಅಪೊಸ್ತಲರ ಎಲ್ಲಾ ಪ್ರಸಂಗಗಳ ಮಹತ್ವದ ಭಾಗವಾಗಿತ್ತು. ಅದು ಯೆಹೂದ್ಯರು ಉತ್ತರಿಸಲಾಗದ ವಾದವಾಗಿತ್ತು. ಕ್ರಿಸ್ತನ ಪುನರುತ್ಥಾನವು ಧೈರ್ಯಶಾಲಿ ಮನುಷ್ಯರೊಳಗಿಂದ ಹೇಡಿಗಳನ್ನು ಮಾಡಿತು ಹಾಗೂ ಹೇಡಿಗಳೊಳಗಿಂದ ಧೈರ್ಯಶಾಲಿಗಳನ್ನಾಗಿ ಮಾಡಿತು. "ಅವನನ್ನು ಶಿಲುಬೆಗೆ ಹಾಕಿಸು" (ಮತ್ತಾಯ 27:22) ಎಂದು ಪಿಲಾತನ ಮುಂದೆ ಧೈರ್ಯದಿಂದ ಕೂಗಿದ ಯೆಹೂದ್ಯರು, ಖಾಲಿಯಾದ ಸಮಾಧಿಯ ಸತ್ಯದ ಎದುರಿನಲ್ಲಿ ಭಯದಿಂದ ಹಿಂಜರಿದರು. ಕ್ರಿಸ್ತನ ವಿಚಾರಣೆಯ ಸಮಯದಲ್ಲಿ ಭಯದಿಂದ "ಆ ಮನುಷ್ಯನನ್ನು ನಾನರಿಯೆನು" (ಮತ್ತಾಯ 26:72) ಎಂದು ಹೇಳಿದ ಪೇತ್ರನು ಖಾಲಿಯಾದ ಸಮಾಧಿಯ ಸ್ವಲ್ಪ ದೂರದಲ್ಲಿಯೇ ಮಹಾ ಜನಸಮೂಹದ ಮುಂದೆ ಧೈರ್ಯದಿಂದ ಆತನ ಪುನರುತ್ಥಾನದ ಬಗ್ಗೆ ಪ್ರಸಂಗಿಸುತ್ತಿದ್ದನು.

ಯೇಸು ಕ್ರಿಸ್ತನು ದೇವರ ಕುಮಾರನಾಗಿದ್ದಾನೆಂಬುದಕ್ಕೆ ಪುನರುತ್ಥಾನವು ನಿರ್ಣಾಯಕ ರುಜುವಾತನ್ನು ಒದಗಿಸುತ್ತದೆ. ಯೇಸುವು ಸತ್ತವರೊಳಗಿಂದ ಪುನರುತ್ಥಾನವಾಗಿರುವದನ್ನು ಅಲ್ಲಗಳೆಯುವುದು ಯಾರಾದರೂ ಕ್ರಿಸ್ತನ ದೈವತ್ವವನ್ನು ಅಲ್ಲಗಳೆಯುವದಕ್ಕೆ ಒಳ್ಳೆ ಮಾರ್ಗವಾಗಿದೆ. ಪುನರುತ್ಥಾನವು

ಕ್ರೈಸ್ತತ್ವವನ್ನು ಅವರದೇ ಆದ ಕ್ರಮದಲ್ಲಿಡುತ್ತದೆ. ತನ್ನ ಸ್ಥಾಪಕರು ಸತ್ತವರೊಳಗಿಂದ ಎದ್ದು ಬಂದ ಧಾರ್ಮಿಕ ಜಗತ್ತಿನಲ್ಲಿ ಕ್ರೈಸ್ತತ್ವವು ಒಂದೇ ಧರ್ಮವಾಗಿದೆ. ಆತನ ಹೇಳಿಕೆಗಳನ್ನು ಅದು ದೃಢಪಡಿಸುತ್ತದೆ. ಆತನ ವಾಗ್ದಾನಗಳ ಅಧಿಕೃತತೆಯನ್ನು ತೋರಿಸುತ್ತದೆ. ಆತನ ಧೈರ್ಯಕ್ಕೆ ಕ್ರಮ ಬದ್ಧತೆಯನ್ನು ಕೊಡುತ್ತದೆ.

ಮೂರನೆಯದಾಗಿ, *ಪ್ರವಾದನೆಯ ಪುರಾವೆಯಿಂದ* ಪೇತ್ರನು ವಾದ ಮಾಡಿದನು. ಕೀರ್ತನೆ 16:8-11ನ್ನು ಉಲ್ಲೇಖಿಸಿದನು. ಅದು ಕ್ರಿಸ್ತನ ಪುನರುತ್ಥಾನವನ್ನು ಮುಂತಿಳಿಸಿತ್ತು:

> ಕರ್ತನು ಯಾವಾಗಲೂ ನನ್ನೆದುರಿನಲ್ಲಿರುವದನ್ನು ನೋಡುತ್ತಿದ್ದೆನು. ನಾನು ಕದಲದಂತೆ ಆತನು ನನ್ನ ಬಲಗಡೆಯಲ್ಲಿಯೇ ಇದ್ದಾನೆ. ಆದ ಕಾರಣ ನನ್ನ ಹೃದಯವು ಹರ್ಷಿಸಿತು; ನನ್ನ ನಾಲಿಗೆಯು ಉಲ್ಲಾಸ ಧ್ವನಿಯನ್ನು ಮಾಡಿತು. ನನ್ನ ಶರೀರವೂ ನಿರೀಕ್ಷೆಯಿಂದ ನೆಲೆಯಾಗಿರುವದು; ಯಾಕಂದರೆ ನೀನು ನನ್ನ ಆತ್ಮವನ್ನು ಪಾತಾಳದಲ್ಲಿ ಬಿಡುವದಿಲ್ಲ; ನಿನ್ನ ಪರಿಶುದ್ಧನಿಗೆ ಕೊಳೆಯುವ ಅವಸ್ಥೆಯನ್ನು ನೋಡಗೊಡಿಸುವದಿಲ್ಲ. ಜೀವ ಮಾರ್ಗಗಳನ್ನು ನನಗೆ ತಿಳಿಯಪಡಿಸಿದ್ದೀ; ನಿನ್ನ ದರ್ಶನವನ್ನು ಅನುಗ್ರಹಿಸಿ ನನ್ನನ್ನು ಆನಂದಭರಿತನಾಗ ಮಾಡುವಿ (ಅಪೊಸ್ತಲರ ಕೃತ್ಯಗಳು 2:25ಬಿ-28).

ತನ್ನ ಪ್ರವಾದನೆಯಲ್ಲಿ, ದಾವೀದನು ಪ್ರಥಮ ಪುರುಷದಲ್ಲಿ ಮಾತಾಡಿದನು. ಮೇಲ್ನೋಟಕ್ಕೆ, ಅವನು ತನ್ನ ಬಗ್ಗೆ ಮಾತಾಡುತ್ತಿರುವಂತೆ ಇದು ತೋರಬಹುದು. ಎರಡು ಸಂಗತಿಗಳನ್ನು ತೋರಿಸುವದರಿಂದ ದಾವೀದನು ತನ್ನ ಬಗ್ಗೆ ಮಾತಾಡುತ್ತಿದ್ದನೆಂಬುದನ್ನು ಪೇತ್ರನು ತೋರಿಸಿದನು. ಮೊದಲನೆಯದು, ಅವನು ದಾವೀದನ ಮರಣಕ್ಕೆ ಸಂಬಂಧಿಸಿ ಹೇಳಿದನು. ಈ ಪ್ರವಾದನೆ ಹೇಳಿದ ದಾವೀದನು ಸತ್ತು ಹೋದನು, ಹೂಣಲ್ಪಟ್ಟನು ಮತ್ತು ಅವನು ಇನ್ನೂ ತನ್ನ ಸಮಾಧಿಯಲ್ಲಿರುವನು. ತನ್ನ ಪುರಾವೆಯಾಗಿ ಅವನು ದಾವೀದನ ಸಮಾಧಿಯ ಕಡೆಗೆ ತೋರಿಸಿದನು. ಅದು ಇನ್ನೂ ಎಲ್ಲರೂ ನೋಡುವಂತೆ ಯೆರೂಸಲೇಮಿನಲ್ಲಿರುವುದು (ಅಪೊಸ್ತಲರ ಕೃತ್ಯಗಳು 2:29). ಎರಡನೆಯದು, ದಾವೀದನಿಗೆ ಮಾಡಿದ ದೇವರ ವಾಗ್ದಾನವನ್ನು ಜ್ಞಾಪಕಕ್ಕೆ ತಂದನು (ಅಪೊಸ್ತಲರ ಕೃತ್ಯಗಳು 2:30). ದಾವೀದನ ವಂಶದ ಒಬ್ಬನು ಅನಂತರದಲ್ಲಿ ಅವನ ಸಿಂಹಾಸನವನ್ನೇರುವನೆಂದು ದೇವರು ದಾವೀದನಿಗೆ ವಾಗ್ದಾನ ಮಾಡಿದ್ದನು (2 ಸಮೂವೇಲ 7:12). ಈ ವಾಗ್ದಾನವು ಕ್ರಿಸ್ತನಲ್ಲಿ ನೆರವೇರಿತೆಂದು ಪೇತ್ರನು ಹೇಳಿದನು. ಯಾಕಂದರೆ ದೇವರು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದನು (ಅಪೊಸ್ತಲರ ಕೃತ್ಯಗಳು 2:31). ಆತ್ಮಿಕ ಸಿಂಹಾಸನದ ಮೇಲೆ ತನ್ನ ಬಲಗಡೆಯಲ್ಲಿ ಆತನನ್ನು

ಕುಳ್ಳಿರಿಸಿದನು. ದಾವೀದನ ವಂಶಜನರ ಮುಖಾಂತರ ಯೇಸುವು ಜಗತ್ತಿಗೆ ಬಂದನು. ಈಗ ಯೇಸುವು ಪರಲೋಕದಲ್ಲಿ ದೇವರ ಬಲಗಡೆಯಲ್ಲಿ ಆತ್ಮಿಕ ಸಿಂಹಾಸನದ ಮೇಲೆ ಆಸೀನನಾಗಿರುವನು. ಆತನ ಭೂಲೋಕದ ರಾಜ್ಯವಾದ ಸಭೆಯ ಮೇಲೆ ಅರಸನಾಗಿ ಆಳುತ್ತಿರುವನು.

ಅದೇ ರೀತಿಯಲ್ಲಿ ಪೇತ್ರನು ತನ್ನ ಪ್ರಸಂಗದಲ್ಲಿ ಕೀರ್ತನೆ 110:1ರಲ್ಲಿಯ ಪ್ರವಾದನೆಯಿಂದ ವಾದಮಾಡಿದನು (ಅಪೊಸ್ತಲರ ಕೃತ್ಯಗಳು 2:34, 35). ಪ್ರವಾದನೆಗೆ ಸಂಬಂಧಿಸಿ ಅವನು ಹೇಳಿದನು (ಕೀರ್ತನೆ 16:8-11; 110; 1) ದೇವರಿಂದ ಕಳುಹಿಸಲ್ಪಟ್ಟ ಒಬ್ಬಾತನು ಸತ್ತವರೊಳಗಿಂದ ಎಬ್ಬಿಸಲ್ಪಡುವದನ್ನು ಮತ್ತು ದೇವರ ಬಲಗಡೆಗೆ ಏರಿಸಲ್ಪಡುವುದನ್ನು ರುಜುವಾತು ಪಡಿಸಿತು. ಯೇಸುವು ತನ್ನ ಪುನರುತ್ಥಾನದಲ್ಲಿ ಹಾಗೂ ಮಹಿಮಾಸ್ಥಿತಿಗೆ ಏರಿಸಲ್ಪಡುವದರಲ್ಲಿ ಈ ಹಳೇ ಒಡಂಬಡಿಕೆಯ ಪ್ರವಾದನೆಗಳು ನೆರವೇರಿಸಲ್ಪಟ್ಟವು.

ನಾಲ್ಕನೆಯದಾಗಿ, ಪೇತ್ರನು *ಸಾಕ್ಷಿಗಳ ಪುರಾವೆಯನ್ನು* ಉಪಯೋಗಿಸಿದನು. "ಈ ಯೇಸುವನ್ನೇ ದೇವರು ಎಬ್ಬಿಸಿದನು; ಇದಕ್ಕೆ ನಾವೆಲ್ಲರು ಸಾಕ್ಷಿಗಳು" (ಅಪೊಸ್ತಲರ ಕೃತ್ಯಗಳು 2:32) ಎಂದು ಅವನು ಹೇಳಿದನು. ಪೇತ್ರನು ಸಂಬಂಧಿಸಿ ಹೇಳಿದ ಪ್ರವಾದನೆಯು ಪುನರುತ್ಥಾನವನ್ನು ಮುಂತಿಳಿಸಿತು ಎಂದು ಯೆಹೂದ್ಯರು ಸ್ವೀಕರಿಸಿಕೊಳ್ಳ ಬೇಕಾಗಿತ್ತು. ಕ್ರಿಸ್ತನು ಸತ್ತವರೊಳಗಿಂದ ಎದ್ದಿದ್ದಾನೆ, ಪ್ರವಾದನೆಯ ಭಾಗವನ್ನು ನೆರವೇರಿಸಿದ್ದಾನೆಂಬುದನ್ನು ದೃಢಪಡಿಸಲು ಪೇತ್ರನು ನೋಡಿದನು. ಯೇಸುವು ಸತ್ತವರೊಳಗಿಂದ ಎದ್ದು ಬಂದದ್ದಕ್ಕೆ ಪ್ರತ್ಯಕ್ಷ ದರ್ಶನಗಳ ಸಾಕ್ಷಿಯನ್ನು ಎದುರಿಸಬೇಕೆಂದು ಅವನು ತನ್ನ ಶ್ರೋತೃಗಳನ್ನು ಒತ್ತಾಯಿಸಿದನು. ಒಂದು ಸಾಕ್ಷಿಯು ಉನ್ನತಮಟ್ಟದ ಪುರಾವೆಯಾಗುತ್ತದೆ. ಯಾವುದೇ ಅಧಿಕೃತ ನ್ಯಾಯಾಲಯವು ಒಬ್ಬನ ಸಾಕ್ಷಿಯಲ್ಲಿ ಪುರಾವೆಗಳಿಗೆ ವ್ಯತಿರಿಕ್ತವಾದ ವುಗಳಿಲ್ಲದಿರುವಾದ ಸಾಕ್ಷಿಯ ಪುರಾವೆಯನ್ನು ಸ್ವೀಕರಿಸುವುದು. ದೇವರು ತನ್ನ ವಾಕ್ಯದಲ್ಲಿ ತನ್ನ ಕುಮಾರನ ಪುನರುತ್ಥಾನವನ್ನು ದೃಢೀಕರಿಸಿದ್ದು ಅಷ್ಟೇ ಅಲ್ಲ, ಆದರೆ ಆತನು ತನ್ನ ವಾಕ್ಯದಲ್ಲಿ ಯೇಸುವು ಸತ್ತವರೊಳಗಿಂದ ಪುನರುತ್ಥಾನ ಹೊಂದಿದನಂತರ ಆತನನ್ನು ನೋಡಿದ, ಆತನನ್ನು ಸ್ಪರ್ಶಿಸಿದ, ಆತನೊಂದಿಗೆ ಊಟಮಾಡಿದ ಮತ್ತು ಆತನನ್ನು ಅಭ್ಯಸಿಸಿದ ಸಾಕ್ಷಿಗಳನ್ನು ಇಟ್ಟಿರುವನು. ಅಂಥ ಸಾಕ್ಷಿಯನ್ನು ಯಾರು ತಿರಸ್ಕರಿಸುವರು?

ಐದನೆಯದು, *ಪೇತ್ರನು ಪರಿಶುದ್ಧಾತ್ಮನ ಇಳಿದು ಬರುವಿಕೆಯ ಪುರಾವೆಯನ್ನು ತೋರಿಸಿದನು.* "ಆತನು ದೇವರ ಬಲಗಡೆಗೆ ಉನ್ನತಸ್ಥಾನಕ್ಕೆ ಏರಿಸಲ್ಪಟ್ಟು ವಾಗ್ದಾನವಾಗಿದ್ದ ಪರಿಶುದ್ಧಾತ್ಮನನ್ನು ತಂದೆಯಿಂದ ಹೊಂದಿ ನೀವು ನೋಡಿ ಕೇಳುವದನ್ನು ಸುರಿಸಿದ್ದಾನೆ" (ಅಪೊಸ್ತಲರ ಕೃತ್ಯಗಳು 2:33) ಎಂದು ಅವನು ಹೇಳಿದನು. ಕ್ರಿಸ್ತನು ಪರಲೋಕಕ್ಕೆ ಹಿಂದಿರುಗಿ ಹೋಗುವದಕ್ಕಿಂತ

ಸ್ವಲ್ಪ ಮೊದಲು ಅಪೊಸ್ತಲರಿಗೆ ತಂದೆಯ ವಾಗ್ದಾನವನ್ನು ಕಳುಹಿಸುವೆನೆಂದು ವಾಗ್ದಾನ ಮಾಡಿದನು (ಲೂಕ 24:46-49). ಪರಿಶುದ್ಧಾತ್ಮನ ಸುರಿಸುವಿಕೆಯ ಪರಿಣಾಮವನ್ನು ಜನಸಮೂಹವು ನೋಡಿತ್ತು ಮತ್ತು ಕೇಳಿತ್ತು. ಹೀಗೆ ಅವರು ಯೇಸುವು ತಂದೆಯ ಬಲಗಡೆಗೆ ಏರಿ ಹೋಗಿದ್ದಾನೆ; ತಂದೆಯಿಂದ ಪರಿಶುದ್ಧಾತ್ಮನ ವಾಗ್ದಾನವನ್ನು ಸ್ವೀಕರಿಸಿದ್ದಾನೆ ಹಾಗೂ ಅಪೊಸ್ತಲರ ಮೇಲೆ ಪರಿಶುದ್ಧಾತ್ಮನನ್ನು ಕಳುಹಿಸಿದ್ದಾನೆ ಎಂಬುದು ಅದ್ಭುತಕರವಾದ ದೃಢತೆಯಿತ್ತು.

ಪುರಾವೆಯ ಈ ಐದು ವಿಧಾನಗಳು ನಿರಾಕರಿಸಲಾಗದ ತೀರ್ಮಾನಗಳನ್ನು ಸ್ಥಾಪಿಸುತ್ತವೆ. "ಆದದರಿಂದ" ಎಂಬ ಪದದೊಂದಿಗೆ ಪೇತ್ರನು ಅವರ ಗಮನವನ್ನು ಈ ತೀರ್ಮಾನಕ್ಕೆ ಕೇಂದ್ರೀಕರಿಸಿದನು. "ಹೊಸ ಒಡಂಬಡಿಕೆಯಲ್ಲಿ ನೀವು 'ಆದದರಿಂದ' ಎಂಬ ಪದವನ್ನು ನೀವು ನೋಡುವಾಗಲೆಲ್ಲಾ, ನೀವು ಓದುವುದನ್ನು ನಿಲ್ಲಿಸಿ, ಅದು ಅಲ್ಲಿ ಯಾಕೆ ಇದೆ ಎಂಬುದನ್ನು ನೋಡಿರಿ. ಯಾಕಂದರೆ ಅದು ಅಲ್ಲಿ ಒಂದು ಕಾರಣಕ್ಕಾಗಿ ಇರುತ್ತದೆ" ಎಂದು ಒಬ್ಬರು ಹೇಳಿದ್ದಾರೆ. "ಆದದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬದು ಇಸ್ರಾಯೇಲ್ ಮನೆತನದವರಿಗೆಲ್ಲಾ ನಿಶ್ಚಯವಾಗಿ ತಿಳಿದಿರಲಿ" (ಅಪೊಸ್ತಲರ ಕೃತ್ಯಗಳು 2:36) ಎಂದು ಪೇತ್ರನು ಹೇಳಿದನು. ಆತನ ಅದ್ಭುತಗಳು, ಸತ್ತವರೊಳಗಿಂದ ಆತನ ಪುನರುತ್ಥಾನವು, ಆತನು ಪ್ರವಾದನೆಗಳನ್ನು ನೆರವೇರಿಸಿದ್ದು, ಸಾಕ್ಷಿ ಹೇಳಿದವರ ಸಾಕ್ಷಿಗಳು ಮತ್ತು ಪರಿಶುದ್ಧಾತ್ಮನ ಇಳಿದು ಬರುವಿಕೆಯು ಯೇಸುವು ದೇವರಿಂದ ವಾಗ್ದಾನ ಮಾಡಿದಾತನೂ ಕ್ರಿಸ್ತನೂ, ಕರ್ತನೂ, ಆಗಿದ್ದಾನೆ ಎಂಬುದನ್ನು ರುಜುವಾತು ಪಡಿಸುತ್ತವೆ.

*ದಿ ಗ್ರೇಟೆಸ್ಟ್ ಸ್ಟೋರಿ ಎವರ ಟೋಲ್ಡ್ ನಂತರ* ಎಂಬುದರ ಈ ಅಧ್ಯಾಯದ ಅರ್ಥ ನಮಗೇನಾಗುತ್ತದೆ? ಕ್ರಿಸ್ತನು ಕ್ರೈಸ್ತತ್ವದ ಕೇಂದ್ರವೆಂದು ಅದು ನಮಗೆ ದೃಢಪಡಿಸುವದಿಲ್ಲವೋ? ಯೇಸುವು ಕ್ರಿಸ್ತನಾಗಿದ್ದಾನೆಂದು ಒಬ್ಬನು ರುಜುವಾತು ಪಡಿಸುವಾಗ ಅವನು ಕ್ರೈಸ್ತತ್ವದ ಪ್ರಾಮಾಣ್ಯತೆಯನ್ನು ರುಜುವಾತು ಪಡಿಸುತ್ತಾನೆ. ಕ್ರಿಸ್ತನು ದೇವರ ಕುಮಾರನಾಗಿದ್ದಾನೆ, ನಮ್ಮ ಪಾಪಗಳಿಗಾಗಿ ಮರಣ ಹೊಂದಿದನು ಹಾಗೂ ಸತ್ತವರೊಳಗಿಂದ ಎದ್ದು ಬಂದನು ಎಂಬುದನ್ನು ಪೇತ್ರನು ಸಿದ್ಧಪಡಿಸಿ ತೋರಿಸಿರದಿದ್ದರೆ, ಕ್ರೈಸ್ತತ್ವವು ತನ್ನ ಜನನದ ದಿನದಂದೆ ಸತ್ತು ಹೋಗಬಹುದಿತ್ತು!

## ಮೂರನೆಯ ಅಧ್ಯಾಯ:

## "ಆಳವಾದ ಅನುಭವದ ಕೂಗು"

*ದಿ ಗ್ರೇಟೆಸ್ಟ್ ಸ್ಟೋರಿ ಎವರ ಟೋಲ್ಡ್ ನಂತರದ* ಮೂರನೆಯ ಅಧ್ಯಾಯದ

ಶೀರ್ಷಿಕೆಯು "ಆಳವಾದ ಅನುಭವದ ಕೂಗು" ಎಂದಿದೆ. ಪೌಲನ ಶ್ರೋತೃಗ ಳಲ್ಲಿಯ ಅನೇಕರು ಅವನ ಪ್ರಸಂಗದಿಂದ ಬಹಳ ಆಳವಾಗಿ ಚಲಿಸಲ್ಪಟ್ಟರು. ಮನಸ್ಸಾಕ್ಷಿಯಿಂದ ಜಜ್ಜಲ್ಪಟ್ಟವರಾಗಿ, ಅವರು ಪೇತ್ರನಿಗೂ ಉಳಿದ ಅಪೊಸ್ತಲರಿಗೂ ಕೂಗಿಕೊಂಡರು.

"ಇದನ್ನು ಕೇಳಿ ಅವರು ಹೃದಯದಲ್ಲಿ ತಿವಿಯಲ್ಪಟ್ಟವರಾಗಿ ಪೇತ್ರನನ್ನೂ ಉಳಿದ ಅಪೊಸ್ತಲರನ್ನೂ, 'ಸಹೋದರರೇ, ನಾವೇನು ಮಾಡಬೇಕು ಎಂದು ಕೇಳಿದರು' " (ಅಪೊಸ್ತಲರ ಕೃತ್ಯಗಳು 2:37) ಎಂದು ಲೂಕನು ಬರೆದಿದ್ದಾನೆ. "ಅವರು ಹೃದಯದಲ್ಲಿ ಅಲಗು ನೆಟ್ಟಂತಾಗಿ" ಎಂದೂ ಕಿಂಗ ಜೇಮ್ಸ ಅವೃತ್ತಿಯಲ್ಲಿ ಹೇಳಲ್ಪಟ್ಟಿದೆ. ಹೃದಯದಲ್ಲಿ "ಅಲಗು ನೆಡುವಂಥದ್ದು" ಒಬ್ಬನ ಬೆರಳಿಗೆ ಸೂಜಿ ಚುಚ್ಚುವಂಥ ಇಲ್ಲವೇ ಒಬ್ಬನ ಬೆರಳಿಗೆ ಮುಳ್ಳು ಚುಚ್ಚುವಂಥ ರೀತಿಯದ್ದಾಗಿರುವದಿಲ್ಲ. ಒಂದು ರೀತಿಯಲ್ಲಿ ಹೃದಯವು ಮುರಿಯಲ್ಪಡುವಂಥ ಇಲ್ಲವೇ ಹೃದಯದ ಮುಖಾಂತರವಾಗಿ ಬಾಣವು ತೂರಿ ಹೋಗುವ ರೀತಿಯಲ್ಲಿ ವಿವರಿಸಲ್ಪಟ್ಟಿದ್ದಾಗಿದೆ. ಇದೇ ಮಾತು ಅಪೊಸ್ತಲರ ಕೃತ್ಯಗಳು 7:54ರಲ್ಲಿ ಭಿನ್ನ ವಾದ ಸಂದರ್ಭದಲ್ಲಿ ಉಪಯೋಗಿಸಲ್ಪಟ್ಟಿದೆ: "ಈ ಮಾತುಗಳನ್ನು ಕೇಳಿ ಅವರು ರೌದ್ರ ಮನಸ್ಸುಳ್ಳವರಾಗಿ ಅವನ ಮೇಲೆ ಹಲ್ಲು ಕಡಿದರು" ಈ ಘಟನೆಯಲ್ಲಿ ಯೆಹೂದ್ಯರು ಸ್ತೆಫನನ ಪ್ರಸಂಗಕ್ಕೆ ಕೋಪದಿಂದ ಪ್ರತಿಕ್ರಿಯಿಸಿದರು. ಅವರ ಹೃದಯಗಳು ಕೋಪದಿಂದ ತುಂಬಿಕೊಂಡವು; ದ್ವೇಷದಿಂದ ಅವರು ಚುಚ್ಚಲ್ಪಟ್ಟರು. ಹೇಗಿದ್ದರೂ ಪೇತ್ರನ ಪ್ರಸಂಗಕ್ಕೆ ಉತ್ತರ ಕೊಟ್ಟ ಯೆಹೂದ್ಯರು ನಂಬಿಕೆಯಿಂದ ಪ್ರಭಾವಿತರಾದರು; ಅಪರಾಧದಿಂದ ಅವರು ವ್ಯಾಕುಲ ಗೊಂಡರು.

ಬಹುಶಃ, ಕೇಳಿದ ಆ ಜನರು ನಿಜವಾಗಿಯೂ ಪೇತ್ರನ ಪ್ರಸಂಗವನ್ನು ಮಧ್ಯದಲ್ಲಿ ತಡೆದಿರಬಹುದು. ಮಧ್ಯದಲ್ಲಿ ತಡೆಯುವಂಥವುಗಳು ಯಾವಾಗಲೂ ಅಪೇಕ್ಷಿಸು ವಂಥವುಗಳಾಗಿರುವದಿಲ್ಲ. ಆದರೆ ಇದು ಆಶೀರ್ವಾದಕರವಾದ ತಡೆಯಾಗಿತ್ತು. ಒಬ್ಬ ಪ್ರಸಂಗಿಯು ಪ್ರಸಂಗಿಸುತ್ತಿದ್ದಾಗ, ಅವನ ಪ್ರಸಂಗದ ಮಧ್ಯದಲ್ಲಿ "ಈಗ ನಾನು ಬಾಪ್ತಿಸ್ಮ ಹೊಂದ ಬಹುದೋ?" ಎಂದು ಪ್ರಶ್ನೆಯೊಂದಿಗೆ ತಡೆದನು. ಪ್ರಸಂಗಿಯು ಪ್ರಸಂಗಿಸುವದನ್ನು ನಿಲ್ಲಿಸಿ, ಆ ಮನುಷ್ಯನ ಕಡೆಗೆ ನೇರವಾಗಿ ನೋಡಿ, "ನನ್ನ ಪ್ರಸಂಗವು ಕಾದುಕೊಂಡಿರಬಹುದು, ನೀನು ಬಾಪ್ತಿಸ್ಮ ಹೊಂದಲು ಅಪೇಕ್ಷಿಸಿದರೆ, ನಾನು ಈ ಪ್ರಸಂಗವನ್ನು ನಿಲ್ಲಿಸುತ್ತೇನೆ. ನಿನಗೆ ಕ್ರಿಸ್ತನಲ್ಲಿ ಬಾಪ್ತಿಸ್ಮ ಕೊಡುತ್ತೇನೆ. ಆ ಮೇಲೆ ನಾವು ಹಿಂದಿರುಗಿ ಬಂದು ನನ್ನ ಪ್ರಸಂಗವನ್ನು ಮುಕ್ತಾಯಗೊಳಿಸುತ್ತೇನೆ" ಎಂದು ಹೇಳಿದನು. ಈ ರೀತಿಯ ಮಧ್ಯದಲ್ಲಿ ತಡೆಯುವಿಕೆಯು ಅಕ್ರಮವಾ ಗಿರುವದಿಲ್ಲ ಆದರೆ ಪ್ರೇರೇಪಣೆಯಾಗಿರುತ್ತದೆ.

ಅವರ ಪ್ರಶ್ನೆಯು ಕೂತೂಹಲ ಭರಿತವಾಗಿತ್ತು. "ನಾವೇನು ಮಾಡಬೇಕು?"

ಎಂದು ಅವರು ಉತ್ಸಾಹವಿಲ್ಲದೇ ಪ್ರಶ್ನಿಸಲಿಲ್ಲ. "ಲೋಕದಲ್ಲಿ ನಾವೇನು ಮಾಡಬೇಕು? ನಾವು ತೊಂದರೆಯಲ್ಲಿದ್ದೇವೆ. ನಮಗೇನಾದರೂ ನಿರೀಕ್ಷೆಯಿದೆಯೋ?" ಎಂದು ಕೇಳುವ ರೀತಿಯಲ್ಲಿ ಅವರ ಪ್ರಶ್ನೆಯಿತ್ತು. ಪೂರ್ಣ ಗಂಭೀರತೆಯೊಂದಿಗೆ ಅವರ ಪ್ರಶ್ನೆಯು ಕೇಳಲ್ಪಟ್ಟಿತು.

"ಸಹೋದರರೇ, ನಾವೇನು ಮಾಡಬೇಕು?" ಎಂಬ ಅವರ ಪ್ರಶ್ನೆಯನ್ನು ಗಮನವಿಟ್ಟು ನೋಡಿರಿ. ಅವರು ತಮ್ಮ ಜೊತೆ ಯೆಹೂದ್ಯರೊಂದಿಗೆ ಮಾತಾಡುತ್ತಿದ್ದರು, "ಸಹೋದರರೇ" ಎಂಬ ಪದ ಉಪಯೋಗಿಸಿದರು. ಅದರಲ್ಲಿ ರಾಷ್ಟ್ರೀಯ ಅರ್ಥವಿತ್ತೇ ಹೊರತು ಧಾರ್ಮಿಕ ಸಂಬಂಧವಿರಲಿಲ್ಲ. ತಾವು ದೇವರ ಎದುರಿನಲ್ಲಿ ಭಯಂಕರವಾದ ಸ್ಥಿತಿಯಲ್ಲಿದ್ದೇವೆಂಬ ತಿಳಿವು ಉಳ್ಳವರಾಗಿದ್ದರು. ಲೋಕದೊಳಗೆ ದೇವರಿಂದ ಕಳುಹಿಸಲ್ಪಟ್ಟ ರಕ್ಷಕನನ್ನು, ಮೆಸ್ಸೀಯನನ್ನು ಶಿಲುಬೆಗೆ ಹಾಕಿಸಿದ್ದರಲ್ಲಿ ಅವರು ಭಾಗವಹಿಸಿದ್ದರು. ದೊಡ್ಡ ಅಕ್ಷರಗಳಲ್ಲಿಯಂತೆ ಪೇತ್ರನ ಪ್ರಸಂಗವು ಅವನ ಶ್ರೋತೃಗಳ ಪಾಪವನ್ನು ಅವರ ಮುಂದಿಟ್ಟನು (ಅಪೊಸ್ತಲರ ಕೃತ್ಯಗಳು 2:23).

ನೀವು ನಿಮ್ಮ ಜೀವನದಲ್ಲಿ ಅನೇಕ ಮಹತ್ವದ ಪ್ರಶ್ನೆಗಳನ್ನು ಕೇಳಬೇಕು ಮತ್ತು ಅವುಗಳಿಗೆ ಉತ್ತರ ಕೊಡಬೇಕು. ಆದರೆ "ನಾನು ರಕ್ಷಿಸಲ್ಪಡಬೇಕಾದರೆ ಏನು ಮಾಡಬೇಕು?" ಎಂಬ ಒಡಂಬಡಿಕೆಗೆ ಅನುಗುಣವಾದ ಪ್ರಶ್ನೆಯನ್ನು ಕೇಳಿ ಅದಕ್ಕೆ ಉತ್ತರ ಕೊಟ್ಟಿರುವಿರೋ? ಪಂಚಾಶತ್ತಮದ ದಿನದಂದು ಹಾಜರಿದ್ದ ಇತರರು ಪೇತ್ರನ ಪ್ರಸಂಗವನ್ನು ಕೇಳಿದ್ದಿರಬಹುದು ಮತ್ತು ಪಂಚಾಶತ್ತಮ ದಿನದ ಅದ್ಭುತಗಳನ್ನು ನೋಡಿದ್ದಿರಬಹುದು. ಆದರೆ ತಮ್ಮ ಅಪರಾಧವನ್ನು ಎದುರಿಸದೇ, ಈ ಪ್ರಶ್ನೆ ಕೇಳದೇ ಹಿಂದಿರುಗಿ ಹೊರಟು ಹೋದರು. ವ್ಯಕ್ತಿಯ ಜೀವನದಲ್ಲಿ ಪಾಪವು ಒಂದು ದುರ್ಘಟನೆಯಾಗಿದೆ. ಕ್ರಿಸ್ತನು ಈ ಲೋಕದೊಳಗೆ ಬಂದು ಅದಕ್ಕಾಗಿ ಪರಿಹಾರ ಒದಗಿಸುವಷ್ಟು (ಕ್ರಯ ಕೊಡುವದಕ್ಕೆ), ಶಿಲುಬೆಯ ಮೇಲೆ ಸಮರ್ಪಿಸುವಷ್ಟು ಅದು ದೊಡ್ಡದಾಗಿತ್ತು. ಅದಕ್ಕಿಂತಲೂ ಹೆಚ್ಚು ದೊಡ್ಡದಾದ ದುರ್ಘಟನೆಯಿದೆ. ಒಬ್ಬನು ತನ್ನ ಅಪರಾಧಕ್ಕೆ ದೇವರ ಪರಿಹಾರವನ್ನು ಹುಡುಕುವದನ್ನು ಮತ್ತು ತನ್ನ ಅಪರಾಧಕ್ಕಾಗಿ ದೇವರ ಮುಂದೆ ನಿಲ್ಲಲು ತಿರಸ್ಕರಿಸಿದವನು ಎಲ್ಲಕ್ಕಿಂತಲೂ ದೊಡ್ಡದಾದ ದುರಂತವನ್ನು ಅನುಭವಿಸುವನು.

## ಅಧ್ಯಾಯ ನಾಲ್ಕು:
## "ಪ್ರೇರಿತ ಉತ್ತರ"

*ದಿ ಗ್ರೇಟೆಸ್ಟ್ ಸ್ಟೋರಿ ಎವರ ಟೋಲ್ಡ್ ನಂತರದ* ಪುಸ್ತಕದಲ್ಲಿ ನಾಲ್ಕನೆಯ

ಅಧ್ಯಾಯದ ಶೀರ್ಷಿಕೆ, "ಪ್ರೇರೇಪಿತ ಉತ್ತರ" ಎಂದಿದೆ, ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟು ಪೇತ್ರನು ಅಪರಾಧದ ತಿಳಿವು ಹೊಂದಿದ ಜನಸಮೂಹದ ಪ್ರಶ್ನೆಗೆ ಸರಳವಾದ ಉತ್ತರ ಕೊಟ್ಟನು. "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ, ಆಗ ನೀವು ಪರಿಶುದ್ಧಾತ್ಮವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 2:38).

ತನ್ನ ದಿವಾರೋಹಣಕ್ಕಿಂತ ಸ್ವಲ್ಪ ಮೊದಲು, ನಮ್ಮ ಕರ್ತನು ಮಹಾ ಆಜ್ಞೆ ಎಂದು ಕರೆಯಲ್ಪಡುವ ಆಜ್ಞೆ ಕೊಟ್ಟನು. ಈ ನಿಯೋಗದ ಮೂರು ಪೂರ್ಣ ಹೇಳಿಕೆಗಳು ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಟ್ಟಿವೆ: ಮತ್ತಾಯ 28:18-20; ಮಾರ್ಕ 16:15, 16; ಹಾಗೂ ಲೂಕ 24:46, 47. ಪ್ರತಿಯೊಂದು ಹೇಳಿಕೆಗೂ ಭಿನ್ನವಾದ ಒತ್ತುಕೊಡಲ್ಪಟ್ಟಿದೆ. ಮಾರ್ಕ 16:15, 16 ನಂಬಿಕೆಯ ಶರತ್ತನ್ನು ಒತ್ತಿಹೇಳುತ್ತದೆ. ಲೂಕ 24:46, 47 ಮಾನಸಾಂತರವನ್ನೂ ಪಾಪಗಳ ಪರಿಹಾರವನ್ನೂ ಒತ್ತಿ ಹೇಳುತ್ತದೆ. ಮತ್ತಾಯ 28:18-20, ಬಾಪ್ತಿಸ್ಮವನ್ನು ಹೆಚ್ಚಾಗಿ ಒತ್ತಿಹೇಳುತ್ತದೆ. ಈ ಮೂರು ಹೇಳಿಕೆಗಳು ದೇವರ ಕೃಪೆಯ ಮುಖಾಂತರ ರಕ್ಷಣೆ ಅಥವಾ ಪಾಪಗಳ ಪರಿಹಾರವು ನಂಬಿಕೆ, ಮಾನಸಾಂತರ ಮತ್ತು ಬಾಪ್ತಿಸ್ಮದ ಮೂರು ಶರತ್ತುಗಳ ಮೇಲೆ ಕೊಡಲ್ಪಡುತ್ತವೆಂಬುದನ್ನು ತೋರಿಸುತ್ತವೆ. ಮಹಾ ಆಜ್ಞೆಯ ಈ ವಿವರಣೆಗಳ ಪದಗಳು ಈ ತಿಳುವಳಿಕೆಗೆ ನಡಿಸುವವೆಂಬುದರಲ್ಲಿ ಸಂಶಯವಿಲ್ಲ.

ಮಹಾ ಆಜ್ಞೆಯಲ್ಲಿ ಹೇಳಲ್ಪಟ್ಟ ಈ ಮೂರು ಶರತ್ತುಗಳು ಅವರ ಪ್ರಶ್ನೆಗಳಿಗೆ ಪೇತ್ರನ ಉತ್ತರದಲ್ಲಿ ಕಂಡು ಬರುತ್ತವೆ. ಪೇತ್ರನ ಪ್ರಸಂಗದಿಂದ ಅವರ ಹೃದಯದಲ್ಲಿ ಕ್ರಿಸ್ತನಲ್ಲಿಯ ವಿಶ್ವಾಸವು ಹುಟ್ಟಿಸಲ್ಪಟ್ಟಿತು. ಈ ವಿಶ್ವಾಸವು ನಿರ್ದೇಶನಕ್ಕಾಗಿ ಕೇಳುವಂತೆ ಅವರನ್ನು ಪ್ರೇರೇಪಿಸಿತು. ಆದದರಿಂದ ಯೆಹೂದ್ಯರ ಪ್ರಶ್ನೆಗೆ ಪೇತ್ರನ ಉತ್ತರವು ಮಹಾ ಆಜ್ಞೆಯಲ್ಲಿ ಹೇಳಿದ ಇತರ ಎರಡು ಶರತ್ತುಗಳನ್ನು ವಿಶೇಷವಾಗಿ ಮಾನಸಾಂತರವನ್ನೂ ಬಾಪ್ತಿಸ್ಮವನ್ನೂ ಹೇಳುತ್ತದೆ. "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ನಾಮದಲ್ಲಿ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ ..." (ಅಪೊಸ್ತಲರ ಕೃತ್ಯಗಳು 2:38) ಎಂದು ಅವನು ಹೇಳಿದನು. ಪೇತ್ರನು ತನ್ನ ಉತ್ತರದಲ್ಲಿ ಕ್ಷಮಾಪಣೆಯನ್ನು, ಪಾಪಕ್ಷಮಾಪಣೆಯನ್ನು ಎಲ್ಲಿ ಇಟ್ಟನೆಂಬುದನ್ನು ಗಮನಿಸಿರಿ. ರಕ್ಷಣೆಯನ್ನು ಅಥವಾ ಪಾಪಗಳ ಕ್ಷಮಾಪಣೆಯನ್ನು ಬಾಪ್ತಿಸ್ಮಕ್ಕಿಂತ ಮೊದಲು ಅಲ್ಲ ಆದರೆ ಅದರ ನಂತರ ವಾಗ್ದಾನ ಮಾಡಿದನು. ಪೇತ್ರನು ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟನು. ಅವನು ಕೊಟ್ಟ ಉತ್ತರವು ಪರಿಶುದ್ಧಾತ್ಮನ ಉತ್ತರವಾಗಿತ್ತು, ಆದರೆ ಅವನ ಉತ್ತರವಾಗಿರಲಿಲ್ಲ.

ಕೇಳಿಕೊಂಡವರಿಗೆ ಕೊಟ್ಟ ಉತ್ತರವು ತಪ್ಪಾಗಿ ಅರ್ಥಮಾಡಿಕೊಳ್ಳ ಲಾಗದಷ್ಟು ಸ್ಪಷ್ಟವಾಗಿತ್ತು. ಈ ಉತ್ತರದ ಒತ್ತಡವನ್ನೂ, ಪರಿಣಾಮವನ್ನೂ ತಳ್ಳಿಬಿಡಲು ಕೆಲವು ಧಾರ್ಮಿಕ ಭೋಧಕರು ಅಪೊಸ್ತಲರ ಕೃತ್ಯಗಳು 2:38ರಲ್ಲಿಯ "for" ಎಂಬುದು ಗ್ರೀಕ ಪದದಿಂದ ಭಾಷಾಂತರ ಮಾಡಿದ್ದಕ್ಕೆ "in order to" ಎಂದು ಅರ್ಥವಾಗುವದಿಲ್ಲ ಎಂದು ಹೇಳಿದ್ದಾರೆ. ಆದರೆ "because of" ಎಂದಾಗುತ್ತದೆ. *Eis* ಎಂಬ ಗ್ರೀಕ ಪದವು "for" ಇಲ್ಲವೇ "in order to" ಎಂದು ನಂಬಲರ್ಹವಾಗಿ ಭಾಷಾಂತರಿಸಲ್ಪಟ್ಟಿರುವ ಬೈಬಲಿನ ಅನೇಕ ಭಾಷಾಂತರ ಗಳನ್ನು ಹೋಲಿ ಸುವದರಿಂದ ಕಂಡು ಬರುತ್ತದೆ, ಅವುಗಳನ್ನು ಒಂದರ ಮೇಲೆ ಒಂದನ್ನು ಇಡಿರಿ - ಅವೆಲ್ಲವೂ *eis* ಎಂಬ ಗ್ರೀಕ ಪದಕ್ಕೆ "for," "in order to" ಇಲ್ಲವೇ ಸಮನಾದ ಮಾತುಗಳ ಅರ್ಥ ಕೊಡುತ್ತದೆ. ಈ ಪದಕ್ಕೆ "because of" ಎಂದರ್ಥ ಕೊಡುವದಿಲ್ಲ. ಪೇತ್ರನ ಉತ್ತರವು ಬಾಪ್ತಿಸ್ಮದ ನಂತರ ಪಾಪಗಳ ಕ್ಷಮಾಪಣೆಯನ್ನು ಸ್ಪಷ್ಟವಾಗಿ ಇಡುತ್ತದೆ. ಈ ಪ್ರಶ್ನೆಗೆ ದೇವರ ಉತ್ತರವು ನಿಂತು ಕೊಳ್ಳಲಿ, ಹಾಗೂ ಯಾರೂ ಅದನ್ನು ವಿವರಿಸಲು ಪ್ರಯತ್ನಿಸದೆಯಿರಲಿ.

ಹೊಸ ಒಡಂಬಡಿಕೆಯಲ್ಲಿ ಪ್ರತಿಯೊಂದು ವಚನದಲ್ಲಿ ಎರಡನೆಯ ಸಲ ಹೇಳಿದ್ದು ಇದೆ ಎಂದು ಯಾರೋ ಒಬ್ಬರು ಹೇಳಿದ್ದಾರೆ. ಇದು ಯಾವಾಗಲೂ ಸತ್ಯವಾಗಿರುವದಿಲ್ಲ. ಆದರೆ ಅದಕ್ಕೆ ಕೆಲವೊಂದು ಸತ್ಯವಿರುತ್ತದೆ. ಹೊಸ ಒಡಂಬಡಿಕೆಯ ಕೆಲವು ವಚನಗಳಲ್ಲಿ ಎರಡನೆಯ ಸಲ ಹೇಳಿದ್ದು ಇರುತ್ತದೆ. ಅವುಗಳನ್ನು ನಾವು ನೋಡುವಾಗ ಒಂದೇ ಸತ್ಯವನ್ನು ಬೇರೆ ರೀತಿಯಲ್ಲಿ ಹೇಳಿ ದ್ದನ್ನು ಕಂಡುಕೊಳ್ಳುತ್ತೇವೆ. ಅಪೊಸ್ತಲರ ಕೃತ್ಯಗಳು 2:38ರಲ್ಲಿ ಎರಡು ಸಲ ಹೇಳಿದ್ದು ಯಾವುದು? ಅದು ಅಪೊಸ್ತಲರ ಕೃತ್ಯಗಳು 22:16 ಆಗಿದೆ. "ಕರ್ತನೇ, ನಾನೇನು ಮಾಡಬೇಕು?" ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತ ಸೌಲನು ದಮಸ್ಕಕ್ಕೆ ಬಂದಿದ್ದನು (ಅಪೊಸ್ತಲರ ಕೃತ್ಯಗಳು 22:10ಎ). ಅವನು ವಿಶ್ವಾಸಿಯಾಗಿದ್ದನು, ಯಾಕಂದರೆ ಅವನು ಕರ್ತನನ್ನು ನೋಡಿದ್ದನು, ಆತನೊಂದಿಗೆ ಮಾತಾಡಿದ್ದನು, ಆತನಿಂದ ತಪ್ಪಿಗಸ್ತನೆಂದು ನಿರ್ಣಯಿಸಲ್ಪಟ್ಟಿದ್ದನು. ಸೌಲನ ಮಾನಸಾಂತರವು, ಅವನು ಕರ್ತನಿಂದ ಕೇಳಿದ ಪ್ರಶ್ನೆಯಿಂದ ತೋರಿಸಲ್ಪಟ್ಟಿತ್ತು. ಅವನು ಕರ್ತನನ್ನು ಒಪ್ಪಿಕೊಂಡಿದ್ದನು; ಇದು ಅವನ ಪ್ರಶ್ನೆಯಲ್ಲಿ ಸ್ಪಷ್ಟವಾಗಿತ್ತು. ಆದರೆ ಅವನು ಏನು ಮಾಡಬೇಕೆಂಬುದನ್ನು ಹೇಳಲ್ಪಡುವದಕ್ಕಾಗಿ ಅವನು ದಮಸ್ಕಕ್ಕೆ ಹೋಗ ಬೇಕಾಗಿತ್ತು. ಈ ಪ್ರಶ್ನೆಗೆ ಉತ್ತರವಾಗಿ ಅವನು ದಮಸ್ಕದಲ್ಲಿ ಪ್ರಾರ್ಥನೆಯಲ್ಲಿ ಪಶ್ಚಾತ್ತಾಪದಲ್ಲಿ ಮೂರುದಿನ ಕಾದುಕೊಂಡಿರ ಬೇಕಾಗಿತ್ತು. ಉತ್ತರದೊಂದಿಗೆ ಅನನೀಯನು ಅವನ ಬಳಿಗೆ ಕಳುಹಿಸಲ್ಪಟ್ಟಿದ್ದನು. ಅನನೀಯನು ಅವನಿಗೆ ಏನು ಹೇಳಿದನು? ಅನನೀಯನು ಅವನಿಗೆ ಕೊಟ್ಟ ಉತ್ತರವನ್ನು ಅಪೊಸ್ತಲರ ಕೃತ್ಯಗಳು 2:38ನ್ನು ಎರಡನೆಯ ಬಾರಿ ಹೇಳಿದ್ದು ಎಂದು ನೀವು ಹೇಳ

ಬಹುದು. “ಈಗ ನೀನೇಕೆ ಸಾವಕಾಶಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ಬಾಪ್ತಿಸ್ಮ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು” (ಅಪೊಸ್ತಲರ ಕೃತ್ಯಗಳು 22:16). ಬಾಪ್ತಿಸ್ಮವು ಪಾಪಗಳ ಕ್ಷಮಾಪಣೆಗಾಗಿ ಇರುವದೆಂಬುದರ ಬಗ್ಗೆ ಯಾವುದೇ ಸಂಶಯವಿದ್ದರೆ, ನಿಶ್ಚಯವಾಗಿಯೂ ಅಪೊಸ್ತಲರ ಕೃತ್ಯಗಳು 22:16 ಈ ಪ್ರಶ್ನೆಯನ್ನು ಎಂದೆಂದಿಗೂ ವಿರಾಮದಲ್ಲಿಡುತ್ತದೆ.

ಸ್ವತಂತ್ರ ಧಾರ್ಮಿಕ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿದ್ದ ಒಬ್ಬ ಯುವಕನು ತನ್ನ ಬೈಬಲಿನ ಅಧ್ಯಾಪಕನು ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮವನ್ನು ನಂಬುವದಿಲ್ಲ ಮತ್ತು ಈ ತತ್ವವನ್ನು ಬೋಧಿಸುತ್ತಿದ್ದಾನೆ ಎಂದು ಹೇಳಿದನು. “ಅದರ ಬಗ್ಗೆ ನೀನು ಏನು ಮಾಡಿದ್ದೀ?” ಯಾರೋ ಅವನನ್ನು ಪ್ರಶ್ನಿಸಿದರು. “ಅದರ ಬಗ್ಗೆ ನಾನೇನು ಮಾಡ ಬೇಕೆಂದು ನನ್ನ ತಾಯಿಯನ್ನು ಕೇಳಿದೆನು. ನಾನು ಕ್ಲಾಸಿನ ನಂತರ ಅವನ ಬಳಿಗೆ ಹೋಗಿ ಅವನಿಗೆ ಅಪೊಸ್ತಲರ 2:38ನ್ನು ವಿವರಿಸಬೇಕೆಂದು ಕೇಳು ಎಂದು ಆಕೆ ಹೇಳಿದಳು. ನಾನು ಹಾಗೆ ಮಾಡಿದೆನು. ನನ್ನ ಬೈಬಲಿನಲ್ಲಿ ಅಪೊಸ್ತಲರ ಕೃತ್ಯಗಳು 2:38ನ್ನು ತೆರೆದು ಕ್ಲಾಸಿನ ನಂತರ ಅವನ ಬಳಿಗೆ ಹೋದೆನು. ಅದನ್ನು ವಿವರಿಸಬೇಕೆಂದು ಗೌರವದಿಂದ ಅವನನ್ನು ಕೇಳಿದೆನು. ಅಪೊಸ್ತಲರ ಕೃತ್ಯಗಳು 2:38, ಪಾಪಗಳ ಪರಿಹಾರದ ‘ಕಾರಣದಿಂದ’ ಮತ್ತು ಪಾಪಗಳ ‘ಪರಿಹಾರ’ಕ್ಕಾಗಿ ಅಲ್ಲ ಎಂದು ನಿಜವಾಗಿ ಅರ್ಥವಾಗುತ್ತದೆ ಎಂದು ಅವನು ಹೇಳಿದನು. ನಾನು ಮನೆಗೆ ಹೋಗಿ ಅವನು ಹೇಳಿದ್ದನ್ನು ನನ್ನ ತಾಯಿಗೆ ಹೇಳಿದೆನು. ಆಕೆ ನನಗೆ, ನಾನು ಹಿಂದಿರುಗಿ ಅವನ ಬಳಿಗೆ ಹೋಗಿ ಅಪೊಸ್ತಲರ ಕೃತ್ಯಗಳು 22:16ನ್ನು ವಿವರಿಸಬೇಕೆಂದು ಕೇಳಲು ಹೇಳಿದಳು. ನಾನು ಹಾಗೆ ಮಾಡಿದೆನು, ಕ್ಲಾಸಿನ ನಂತರ ನನ್ನ ಬೈಬಲಿನಲ್ಲಿ ಅಪೊಸ್ತಲರ ಕೃತ್ಯಗಳು 22:16ನ್ನು ತೆಗೆದು ಅವನ ಬಳಿಗೆ ಹೋಗಿ ಈ ವಚನವನ್ನು ವಿವರಿಸಬೇಕೆಂದು ಗೌರವದಿಂದ ಕೇಳಿದೆನು. ಪ್ರೊಫೆಸರನು ಏನು ಹೇಳಿದರೋ ಗೊತ್ತೇ? ತಾನು ಆ ವಚನವನ್ನು ವಿವರಿಸಲು ಪ್ರಯತ್ನಿಸಲಿಲ್ಲ ಆದರೆ ತಾನು ಅದನ್ನು ದಾಟಿ ಮುಂದಿನ ವಚನಕ್ಕೆ ಹೋದನೆಂದು ಆತನು ಹೇಳಿದನು.” ಅಪೊಸ್ತಲರ ಕೃತ್ಯಗಳು 22:16ನ್ನು ವಿವರಿಸಿಬಿಟ್ಟುಬಿಡಲಿಕ್ಕಾಗದು. ಅದನ್ನು ಸ್ವೀಕರಿಸ ಬೇಕು ಇಲ್ಲವೇ ತಿರಸ್ಕರಿಸ ಬೇಕು.

ಪೇತ್ರನು ತಾನು ಈ ಪ್ರಶ್ನೆಗೆ ಕೊಟ್ಟ ಉತ್ತರವು ಕ್ರೈಸ್ತ ಯುಗಕ್ಕೆ ಮಾನವ ಚರಿತ್ರೆಯ ಅಂತಿಮ ಯುಗಕ್ಕೆ ದೇವರ ಉತ್ತರವಾಗಿದೆಯೆಂದು ತೋರಿಸಿದನು. “ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ” (ಅಪೊಸ್ತಲರ ಕೃತ್ಯಗಳು 2:39) ಎಂದು ಹೇಳಿದನು. “ನಿಮಗೂ ನಿಮ್ಮ ಮಕ್ಕಳಿಗೂ” ಎಂಬುದು ಸುವಾರ್ತೆಗೆ ಉತ್ತರ ಕೊಡುವ ಯೆಹೂದ್ಯರಿಗೆ ಸಂಬಂಧಿಸಿದ ಮಾತಾಗಿರಬೇಕು.

ಮತ್ತು "ದೂರವಾಗಿರುವವರೆಲ್ಲರಿಗೂ" ಎಂಬುದು ಸಮಯದಲ್ಲಿ ಸುವಾರ್ತೆಯನ್ನು ಕೇಳುವ, ಸ್ವೀಕರಿಸುವ, ಅದಕ್ಕೆ ವಿಧೇಯರಾಗುವ ಅನ್ಯಜನರನ್ನು ಒಳಗೊಂಡಿದೆ. ಇಲ್ಲವೇ ಅವರಿಗೆ ಸಂಬಂಧಿಸಿದೆ. "ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ" ಎಂಬುದು ಭವಿಷ್ಯದಲ್ಲಿ ಸುವಾರ್ತೆಯನ್ನು ಸ್ವೀಕರಿಸಿ ಕ್ರಿಸ್ತನ ಬಳಿಗೆ ಬರುವ ಎಲ್ಲಾ ಯೆಹೂದ್ಯರನ್ನೂ ಅನ್ಯರನ್ನೂ ಒಳಗೊಂಡಿರುತ್ತದೆ. "ದೂರವಾಗಿರುವವರೆಲ್ಲರಿಗೆ" ಎಂಬುದರಲ್ಲಿ ಅನ್ಯರು ಒಳಗೊಂಡಿರದಿದ್ದರೆ, ಅವರು ನಿಶ್ಚಯವಾಗಿಯೂ ಪೇತ್ರನ "ಎಲ್ಲರಿಗೂ" ಎಂಬ ಮಾತಿನಲ್ಲಿ ಹೆಚ್ಚು ನಿಶ್ಚಯವಾಗಿ ಒಳಗೊಂಡಿರುತ್ತಾರೆ. ಪೇತ್ರನು ಪಂಚಾಶತ್ತಮ ದಿನಕ್ಕಾಗಿ ಮಾತ್ರವಲ್ಲದೆ ಕ್ರೈಸ್ತ ಯುಗದ ಭವಿಷ್ಯದ ಎಲ್ಲಾ ದಿನಗಳಿಗಾಗಿ ದೇವರ ಯೋಜನೆಯನ್ನು ಪ್ರಕಟಿಸಿದನು. "ನಾನು ರಕ್ಷಿಸಲ್ಪಡಬೇಕಾದರೆ ಏನು ಮಾಡಬೇಕು?" ಎಂಬ ಪ್ರಶ್ನೆಗೆ ಅವನು ದೇವರ ಉತ್ತರವನ್ನು ಕೊಟ್ಟನು.

## ಅಧ್ಯಾಯ ಐದು:
## "ಆಶ್ಚರ್ಯಕರವಾದ ಪ್ರತಿಕ್ರಿಯೆ"

*ದಿ ಗ್ರೇಟೆಸ್ಟ್ ಸ್ಟೋರಿ ಎವರ ಟೋಲ್ಡ್ ನಂತರ* ಪುಸ್ತಕದಲ್ಲಿ ಐದನೆಯ ಅಧ್ಯಾಯದ ತಲೆಬರಹವು "ಆಶ್ಚರ್ಯಕರವಾದ ಪ್ರತಿಕ್ರಿಯೆ" ಎಂದಿದೆ. ರಕ್ಷಣೆಯ ಸುವಾರ್ತಾ ಸಂದೇಶದ ಮೊದಲ ಪ್ರಸಂಗದ ಅಶ್ಚರ್ಯಕರವಾದ ಸ್ವೀಕಾರದ ಬಗ್ಗೆ ಲೂಕನು ಹೇಳಿದನು. "ಅವನ ಮಾತಿಗೆ ಒಪ್ಪಿಕೊಂಡವರು ಬಾಪ್ತಿಸ್ಮ ಮಾಡಿಸಿ ಕೊಂಡರು. ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು" (ಅಪೊಸ್ತಲರ ಕೃತ್ಯಗಳು 2:41) ಎಂದು ಅವನು ಹೇಳಿದ್ದಾನೆ.

ಆ ಪ್ರಾತಃಕಾಲ ಪೇತ್ರನು ಹಾಗೂ ಇತರ ಅಪೊಸ್ತಲರು ಎಷ್ಟು ಸಮಯ ಪ್ರಸಂಗಿಸಿದರು ಎಂಬುದು ನಮಗೆ ಹೇಳಲ್ಪಟ್ಟಿರುವದಿಲ್ಲ. "ಬೇರೆ ಅನೇಕವಾದ ಮಾತುಗಳಿಂದ ಅವನು ಖಂಡಿತವಾಗಿ ಸಾಕ್ಷಿ ನುಡಿದು, 'ವಕ್ರಬುದ್ಧಿಯುಳ್ಳ ಈ ಸಂತತಿಯವರಿಂದ ತಪ್ಪಿಸಿಕೊಳ್ಳಿರಿ' ಎಂದು ಎಚ್ಚರಿಸಿದನು" (ಅಪೊಸ್ತಲರ ಕೃತ್ಯಗಳು 2:40) ಎಂದು ಲೂಕನು ಬರೆದಿದ್ದಾನೆ. ಪೇತ್ರನು ಅವರನ್ನು ಪುರಾವೆ ಮತ್ತು ವಾದದಿಂದ ದೃಢಪಡಿಸಿದ್ದಲ್ಲದೇ ಸಾಕ್ಷಿಯಿಂದಲೂ, ಉಪದೇಶದಿಂದಲೂ ಒತ್ತಾಯ ಪಡಿಸಿದನು.

ಆಲಿಸುತ್ತಿದ್ದ ಶ್ರೋತೃಗಳು ಪೇತ್ರನ ಸಂದೇಶವನ್ನು ಸ್ವೀಕರಿಸಿದರು ಮತ್ತು ಅದರ ಮೇಲೆ ಕಾರ್ಯ ಮಾಡಿದರು. "ಅವನ ಮಾತಿಗೆ ಒಪ್ಪಿಕೊಂಡವರು ಬಾಪ್ತಿಸ್ಮ ಮಾಡಿಸಿಕೊಂಡರು. ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು" (ಅಪೊಸ್ತಲರ ಕೃತ್ಯಗಳು 2:41) ಎಂದು ಲೂಕನು

ಪುನಃ ಹೇಳಿದ್ದಾನೆ. ಈ ಜನರು ವಾಕ್ಯವನ್ನು ಕೇಳಿದವರಷ್ಟೇ ಆಗಿರದೇ ಅದನ್ನು ಮಾಡುವವರೂ ಆದರು (ಯಾಕೋಬ 1:25). ಅವರು ಅದನ್ನು ಕೇವಲ ಕೇಳಿದ್ದು ಅಷ್ಟೇ ಅಲ್ಲ ಅದರಂತೆ ಜೀವಿಸಲು ತೀರ್ಮಾನಿಸಿಕೊಂಡರು. ಪ್ರಸಂಗಿಗಳೊಂದಿಗೆ ಅನೇಕರು ಪ್ರಸಂಗಗಳನ್ನು ಕೇಳುವಷ್ಟನ್ನೇ ಮಾಡುವುದು ಎಷ್ಟೋ ದುಃಖಕರವಾದದ್ದು. ಪೇತ್ರನ ಪ್ರಸಂಗವನ್ನು ಕೇಳಿದ್ದ ಮಹಾ ಜನಸಮೂಹದಲ್ಲಿ ಕೆಲವರಾದರೂ ಈ ಸಂದೇಶದಿಂದ ಅರುಹು ಹೊಂದಿದ್ದ ಅಷ್ಟೇ ಅಲ್ಲ ಆದರೆ ಆ ಸಂದೇಶಕ್ಕೆ ತಮ್ಮ ಮನಸ್ಸುಗಳನ್ನೂ ಜೀವಿತಗಳನ್ನೂ ಒಪ್ಪಿಸಿದರು; ಕ್ರಿಸ್ತನ ಕಡೆಗೆ ಮಾರ್ಪಾಟು ಹೊಂದಿದರು.

ಮೂರು ಸಾವಿರ ಜನರು ಸಂತೋಷದಿಂದ ವಾಕ್ಯವನ್ನು ಸ್ವೀಕರಿಸಿದರು ಮತ್ತು ಬಾಪ್ತಿಸ್ಮ ಹೊಂದಿದರು. ಮಾರ್ಪಾಟು ಹೊಂದುವದಕ್ಕಿಂತ ಮೊದಲು ಒಬ್ಬನು ರಕ್ಷಣೆಯ ವಾಕ್ಯವನ್ನು ಸಂತೋಷದಿಂದ ಸ್ವೀಕರಿಸಿಕೊಳ್ಳ ಬೇಕು. ಕ್ರಿಸ್ತನ ಕಡೆಗೆ ಹೆಚ್ಚಾದ ಜನರು ಮಾರ್ಪಾಟು ಹೊಂದದೇ ಇರುವದಕ್ಕೆ ಮುಖ್ಯ ಕಾರಣಗಳಲ್ಲಿ ಒಂದು, ಜನರು ತಮ್ಮ ಹೃದಯಗಳಲ್ಲಿ ವಾಕ್ಯವನ್ನು ಸಂತೋಷದಿಂದ ಸ್ವೀಕರಿಸದೇ ಇರುವುದಾಗಿದೆ, ವಾಕ್ಯವು ಸಂತೋಷದಿಂದ ಸ್ವೀಕರಿಸಲ್ಪಟ್ಟರೆ ಅದು ಯಾವಾಗಲೂ ತನ್ನ ಕಾರ್ಯವನ್ನು ಮಾಡುವುದು.

## ಅಧ್ಯಾಯ ಆರು:

## "ವಾಗ್ದಾತ್ತ ದೇಹ"

ಈ ಪುಸ್ತಕದಲ್ಲಿಯ ಆರನೆಯ ಅಧ್ಯಾಯದ ಶೀರ್ಷಿಕೆಯು "ವಾಗ್ದಾತ್ತ ದೇಹ" ಎಂಬುದಾಗಿದೆ. ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದಿದ ಮೂರು ಸಾವಿರ ಜನರು ಸಭೆಯಂತೆ ಲೂಕನಿಂದ ಚಿತ್ರಿಸಲ್ಪಟ್ಟಿದ್ದಾರೆ.

ದೇವರ ಅದ್ವಿತೀಯವಾದ ರಾಜ್ಯವು ಬರಲಿಕ್ಕಿದೆಯೆಂದು ಪ್ರವಾದಿಯು ಮುಂತಿಳಿಸಿದನು (ದಾನಿಯೇಲ 2:44). ಸ್ನಾನಿಕನಾದ ಯೋಹಾನನು ಬರಲಿಕ್ಕಿದ್ದ ಮೆಸ್ಸೀಯನಿಗಾಗಿ ಮಾರ್ಗ ಸಿದ್ಧಪಡಿಸುತ್ತಿರುವಂತೆ ಪರಲೋಕ ರಾಜ್ಯವು ಸಮೀಪವಾಯಿತು ಎಂದು ಘೋಷಿಸಿದನು (ಮತ್ತಾಯ 3:1, 2). ತನ್ನ ಸೇವೆಯಲ್ಲಿ ಕ್ರಿಸ್ತನು ತಾನೇ ದೇವರಿಂದ ಕಳುಹಿಸಲ್ಪಟ್ಟ ಮೆಸ್ಸೀಯನು ಪರಲೋಕ ರಾಜ್ಯವು ಸಮೀಪಿಸಿದ್ದರಿಂದ ಮಾನಸಾಂತರಕ್ಕಾಗಿ ಕರೆದನು (ಮತ್ತಾಯ 4:17). ಸತ್ತವರೊಳಗಿಂದ ಪುನರುತ್ಥಾನವಾದ ನಂತರ ಆತನು ತನ್ನ ದಿವಾ ರೋಹಣಕ್ಕಿಂತ ಮೊದಲು, ನಲ್ವತ್ತು ದಿನಗಳಲ್ಲಿ ಕ್ರಿಸ್ತನು ಅಪೊಸ್ತಲರೊಂದಿಗೂ ಇತರ ಶಿಷ್ಯರೊಂದಿಗೂ ಬರಲಿಕ್ಕಿದ್ದ ರಾಜ್ಯದ ಬಗ್ಗೆ ಮಾತಾಡಿದನು (ಅಪೊಸ್ತಲರ ಕೃತ್ಯಗಳು 1:3). ತನ್ನ ಅಪೊಸ್ತಲರಿಗೆ ಹೇಳಿದ ತನ್ನ ಅಂತಿಮ ಮಾತುಗಳ

ಬಗ್ಗೆ ಕ್ರಿಸ್ತನು ಅವರಿಗೆ ತಂದೆಯ ವಾಗ್ದಾನಕ್ಕಾಗಿ ಕಾದುಕೊಂಡಿರ ಬೇಕೆಂದು ಹೇಳಿದನು (ಅಪೊಸ್ತಲರ ಕೃತ್ಯಗಳು 1:4). ತನ್ನ ದಿವಾರೋಹಣವಾದ ಮೇಲೆ ಹತ್ತು ದಿನಗಳ ನಂತರ ಭಾನುವಾರ ಪ್ರಾತಃಕಾಲದಲ್ಲಿ ಬಹಳ ದಿನಗಳಿಂದ ಕಾದುಕೊಂಡಿದ್ದ ಸಮಯ ಬಂದಿತು. ಪರಿಶುದ್ಧಾತ್ಮನು ಸುರಿಸುವಿಕೆಯೊಂದಿಗೆ (ಅಪೊಸ್ತಲರ ಕೃತ್ಯಗಳು 2:1-4) ಕ್ರಿಸ್ತನ ಪುನರುತ್ಥಾನದ ನಂತರ ಸುವಾರ್ತೆಯ ಪ್ರಥಮ ಪ್ರಸಂಗವು (ಅಪೊಸ್ತಲರ ಕೃತ್ಯಗಳು 2:14-36) ಹಾಗೂ ಸುವಾರ್ತೆಗೆ ಮೂರು ಸಾವಿರ ಜನರ ಉತ್ತರವು ಸಭೆಯು ಜನಿಸಿದ್ದಾಗಿತ್ತು. ಅವರು ಸುವಾರ್ತೆಗೆ ವಿಧೇಯರಾದಂತೆ ಕ್ರಿಸ್ತನ ರಕ್ತದಿಂದ ತೊಳೆಯಲ್ಪಟ್ಟವರು ಕ್ರಿಸ್ತನ ಸಭೆಯಾಗಿ ಮಾಡಲ್ಪಟ್ಟರು. ಆ ದಿನದಿಂದ ಇಲ್ಲಿಯವರೆಗೆ ಒಬ್ಬನು ಸುವಾರ್ತೆಯನ್ನು - ಕೇಳಿ ಸಂತೋಷದಿಂದ ಅದಕ್ಕೆ ವಿಧೇಯನಾಗಿ ತನ್ನ ವಿಶ್ವಾಸ, ಮಾನಸಾಂತರ ಹಾಗೂ ಯೇಸು ದೇವರ ಕುಮಾರನೆಂದು ಅರಿಕೆಯ ಮೇಲೆ ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದುವದರಿಂದ ಅವನು ಅವರೊಂದಿಗೆ ಕೂಡಿಸಲ್ಪಡುವನು (ಅಪೊಸ್ತಲರ ಕೃತ್ಯಗಳು 2:47) - ಈ ಮೊದಲಿನವರು, ಪಂಚಾಶತ್ತಮ ದಿನದ ಪ್ರಾರಂಭದಲ್ಲಿ ಕ್ರಿಸ್ತನ ಬಳಿಗೆ ಬಂದ ಮೂರು ಸಾವಿರ ಜನರಾಗಿದ್ದರು.

ಅಪೊಸ್ತಲರ ಕೃತ್ಯಗಳಲ್ಲಿ ಪಂಚಾಶತ್ತಮ ದಿನದಿಂದ ಮುಂದೆ, ಸಭೆಯು ಇಂದಿನ ಮತ್ತು ಸಜೀವವಾದ ವಾಸ್ತವಿಕತೆಯೆಂದು ಹೇಳಲ್ಪಟ್ಟಿದೆ. ಸಭೆಯು ಇನ್ನು ಮುಂದೆ ಒಂದು ವಾಗ್ದಾನವಾಗಿ ಯಾಗಲಿ ಪ್ರವಾದನೆಯಾಗಿ ಆಗಲಿ ಇರಲಿಲ್ಲ. ಅಪೊಸ್ತಲರ ಕೃತ್ಯಗಳು ಅಧ್ಯಾಯ 2ರ ಅಂತ್ಯದಲ್ಲಿ "ಕರ್ತನು ರಕ್ಷಣೆ ಹೊಂದುವವರನ್ನು ದಿನಾಲು ಅವರೊಂದಿಗೆ ಸೇರಿಸುತ್ತಿದ್ದನು" (ಅಪೊಸ್ತಲರ ಕೃತ್ಯಗಳು 2:47) ಎಂದು ಹೇಳಿದ್ದಾನೆ. ಅಪೊಸ್ತಲರ ಕತ್ಯಗಳಲ್ಲಿ ದಾಖಲೆಯಾದ ಪೇತ್ರನ ಎರಡನೆಯ ಪ್ರಸಂಗದ ಅಂತ್ಯದಲ್ಲಿ "ಆದರೆ ವಾಕ್ಯವನ್ನು ಕೇಳಿದವರಲ್ಲಿ ಅನೇಕರು ನಂಬಿದರು, ಗಂಡಸರ ಸಂಖ್ಯೆ ಸುಮಾರು ಐದು ಸಾವಿರ ತನಕ ಬೆಳೆಯಿತು" (ಅಪೊಸ್ತಲರ ಕೃತ್ಯಗಳು 4:4) ಎಂದು ಲೂಕನು ಬರೆದಿದ್ದಾನೆ. ಅನನೀಯ ಮತ್ತು ಸಫೈರರ ಮರಣದ ನಂತರ (ಅಪೊಸ್ತಲರ ಕೃತ್ಯಗಳು 5:1-10), "ಮತ್ತು ಸರ್ವ ಸಭೆಗೂ ಈ ಸಂಗತಿಗಳನ್ನು ಕೇಳಿದವರೆಲ್ಲರಿಗೂ ಮಹಾ ಭಯ ಹಿಡಿಯಿತು" (ಅಪೊಸ್ತಲರ ಕೃತ್ಯಗಳು 5:11) ಎಂದು ಲೂಕನು ಬರೆದಿದ್ದಾನೆ. ಸ್ತೆಫನನ್ನು ಕಲ್ಲೆಸೆದು ಕೊಂದನಂತರ ಬೆಳೆದ ಹಿಂಸೆಯ ಸಮಯದಲ್ಲಿ (ಅಪೊಸ್ತಲರ ಕೃತ್ಯಗಳು 6:8-7:60), "ಆ ದಿವಸದಲ್ಲಿ ಯೆರೂಸಲೇಮಿನಲ್ಲಿದ್ದ ಸಭೆಗೆ ದೊಡ್ಡ ಹಿಂಸೆ ಉಂಟಾಯಿತು. ಅಪೊಸ್ತಲರು ಹೊರತಾಗಿ ಎಲ್ಲರು ಯೂದಾಯ ಸಮಾರ್ಯ ಸೀಮೆಗಳಲ್ಲಿ ಚದರಿಹೋದರು" (ಅಪೊಸ್ತಲರ ಕೃತ್ಯಗಳು 8:1) ಎಂದು ಲೂಕನು ಬರೆದಿದ್ದಾನೆ. ಆದುದರಿಂದ ಲೂಕನ ಪ್ರಕಾರವಾಗಿ ಸಭೆಯು ದೇವರ ಅದ್ವಿತೀಯವಾದ ರಾಜ್ಯವು ಬಂದಿರುತ್ತದೆ.

ಒಂದು ದಿನ ಪ್ರಸಿದ್ಧ ಸುವಾರ್ತಾ ಪ್ರಸಂಗಿಯಾದ ಮಾರ್ಷಲ್ ಕೀಬಲ್ ಎಂಬವರ ಬಳಿಗೆ ಒಬ್ಬನು ಬಂದು ಅವರ ಹೃದಯದ ಕಡೆಗೆ ತೋರಿಸಿ, "ಸಹೋದರ ಕೀಬಲ್‌ರೇ ನಾನು ಅದನ್ನು ಸ್ಪರ್ಶಿಸಿ, ತಿಳಿಯುತ್ತೇನೆ. ಇಲ್ಲಿಯೇ ನೋಡುತ್ತೇನೆ" ಎಂದು ಹೇಳಿದನೆಂದು ಹೇಳಲ್ಪಟ್ಟಿದೆ. ಸಹೋದರ ಕೀಬಲ್ ಅವರು ಸ್ಥಳದಲ್ಲಿಯೇ ಉತ್ತರ ಕೊಡುವ ಆಶ್ಚರ್ಯಕರವಾದ ಶಕ್ತಿಯುಳ್ಳ ವರಾಗಿದ್ದರು. ತನ್ನ ಸತ್ಯವೇದದ ಕಡೆಗೆ ತೋರಿಸುತ್ತ ಅವರು ಈ ವ್ಯಕ್ತಿಗೆ ಉತ್ತರ ಕೊಟ್ಟರು. "ಆಗಲಿ, ನಾನು ಅದನ್ನು ಓದುತ್ತೇನೆ. ಅದನ್ನು ಇಲ್ಲಿಯೇ ಓದಲು ಬಯಸುತ್ತೇನೆ" ಎಂದರು. ಹೌದು, ಭಾವನೆಗಳು ಮಹತ್ವವುಳ್ಳವು ಗಳು. ಆದರೆ ಅವು ನಮ್ಮನ್ನು ನಡಿಸುವಂತೆ ಬಿಡಿತಕ್ಕದ್ದಲ್ಲ. ಕೇವಲ ಬೈಬಲು, ದೇವರ ವಾಕ್ಯ ಮಾತ್ರವೇ ನಮ್ಮನ್ನು ನಡಿಸಬೇಕು. ಆತನ ವಾಕ್ಯವನ್ನು ನಾವು ಯಥಾರ್ಥವಾಗಿ ಸ್ವೀಕರಿಸಿ ವಿಧೇಯರಾಗುವದರ ಮೇಲೆ ನಮ್ಮ ಭಾವನೆಗಳು ಅವಲಂಬಿಸಿರು ವಾಗ, ಹೊಸ ಒಡಂಬಡಿಕೆಯಲ್ಲಿ ಹೇಳಿರುವ ಯಥಾರ್ಥವಾದ ಆನಂದವು ನಮಗಿರುವುದು.

## ಮುಕ್ತಾಯ

*ದಿ ಗ್ರೇಟೆಸ್ಟ್ ಸ್ಟೋರಿ ಎವರ ಟೋಲ್ಡ್ ನಂತರ* ಎಂಬ ಪುಸ್ತಕವನ್ನು ನಾವು ಮುಕ್ತಾಯ ಗೊಳಿಸುತ್ತೇವೆ. ನಾವು ಓದಿದ್ದನ್ನು ಕುರಿತು ಯೋಚಿಸಲು ಪ್ರಾರಂಭಿಸುತ್ತೇವೆ. ನಮ್ಮ ವರ್ತಮಾನ ಪತ್ರಿಕೆಗಳಲ್ಲಿ ಇಲ್ಲವೇ ದೂರದರ್ಶನದಲ್ಲಿ ಸ್ಥಳೀಯ ಮತ್ತು ರಾಷ್ಟ್ರೀಯ ವಾರ್ತೆಗಳಿಗಿಂತ ಹೆಚ್ಚು ಮಹತ್ವವುಳ್ಳದ್ದನ್ನು ನಾವು ಯೋಚಿಸಿದ್ದೇವೆಂದು ತಿಳಿದುಕೊಳ್ಳಬೇಕು. ಹಿಂದಿನದನ್ನು ಮುಚ್ಚಿದ್ದ ಪರದೆ ಗಳನ್ನು ಹಿಂದೆಗೆಯಲು ಮತ್ತು ಪ್ರೇರೇಪಿತ ಅಪೊಸ್ತಲರ ಕೃತ್ಯಗಳ ಪುಸ್ತಕದ ಮುಖಾಂತರ ಜಗತ್ತಿನಲ್ಲಿ ಯೇಸುವಿನ ಜೀವನ, ಮರಣ ಮತ್ತು ಪುನರುತ್ಥಾನದ ನಂತರದ ಐತಿಹಾಸಿಕವಾದ ಹಾಗೂ ಬಹಳ ಪರಿಣಾಮ ಕಾರಿಯಾಗಿರುವ ಘಟನೆಯನ್ನು ನೋಡಲಿಕ್ಕೆ ನಾವು ಅಕ್ಷರಶಃವಾಗಿ ಶಕ್ತರಾಗಿದ್ದೇವೆ. ಅದ್ವಿತೀಯ ವಾದ, ಬಹಳ ಸಮಯದಿಂದ ಕಾದುಕೊಂಡಿದ್ದ ದೇವರ ರಾಜ್ಯವನ್ನು, ಸಭೆಯ ನಿಜವಾದ ಪ್ರಾರಂಭವನ್ನು ನಾವು ನೋಡಿದ್ದೇವೆ. ಅದರ ಪ್ರಾರಂಭದಿಂದ, ಮಾನವ ಚರಿತ್ರೆಯ ಯುಗವು, ಕ್ರೈಸ್ತ ಯುಗವು ಇಲ್ಲವೇ "ಅಂತಿಮ ದಿನಗಳ" ಯುಗವು ಬೆಳೆಯುತ್ತಿರುವದನ್ನು ಗಮನಿಸಿದ್ದೇವೆ.

ನಾವು ಓದಿದ *ಈ ಪುಸ್ತಕವನ್ನು ಇನ್ನೊಂದು ಮಹತ್ವದ ಪುಸ್ತಕವು ಹಿಂಬಾಲಿಸುತ್ತದೆ. ದಿ ಗ್ರೇಟೆಸ್ಟ್ ಸ್ಟೋರಿ ಎವರ ಟೋಲ್ಡ್ ಮೂರನೆಯ ಭಾಗ* ಎಂದು ನಾವು ಕರೆಯುತ್ತೇವೆ. ಕ್ರಿಸ್ತನ ಕಡೆಗೆ ನಿಮ್ಮ ಮಾರ್ಪಾಟಿನ ಕಥೆ, ನೀವು

ಯೇಸು ಕಟ್ಟಿದ ಸಭೆಯ ಭಾಗವಾಗುವದರ ಕಥೆಯಾಗಿದೆ. ನಮ್ಮಲ್ಲಿ ಪ್ರತಿಯೊಬ್ಬರ ಕಥೆಯೂ ಭಿನ್ನವಾದದ್ದಾಗಿರುವುದು. ನಮ್ಮಲ್ಲಿ ಅನೇಕರಿಗೆ ಕಥೆಯು ಬರೆಯಲು ಸುಲಭವಾಗಿರುವುದು. ಆದರೆ ನಮ್ಮಲ್ಲಿಯ ಇತರರಿಗೆ ಆ ಕಥೆಯು ಸಂಭವಿಸದೇ ಇರುವುದರಿಂದ ಅವರು ಬರೆಯಲಾರರು. ನಿಮ್ಮ ಬಗೆಗೆ ಏನು? ಕಥೆಯು ಸಂಭವಿಸಿದೆಯೇ? ಹೊಸ ಒಡಂಬಡಿಕೆಯ ಕ್ರೈಸ್ತರಾಗಿರುವಿರೋ?

ನೀವು ಹೊಸ ಒಡಂಬಡಿಕೆಯ ಕ್ರೈಸ್ತರಾಗಿರದಿದ್ದರೆ, ಹೇಗೆ ಆಗಬೇಕೆಂಬುದನ್ನು ನೀವು ತಿಳಿದಿರುವಿರಿ. ಸುವಾರ್ತೆಯ ವಾಕ್ಯವನ್ನು ಸಂತೋಷದಿಂದ ಸ್ವೀಕರಿಸುವದರಿಂದ ಮತ್ತು ಅದಕ್ಕೆ ವಿಧೇಯರಾಗುವದರಿಂದ ದೇವರ ರಾಜ್ಯದೊಳಗೆ ನೀವು ಹುಟ್ಟಬಹುದು. ಅದು ನಾವು ಅಪೊಸ್ತಲರ ಕೃತ್ಯಗಳು 2ರಲ್ಲಿ ನೋಡಿದ ಪರಲೋಕ ರಾಜ್ಯವಾಗಿದೆ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ಯಾವ ಅರ್ಥದಲ್ಲಿ ಸಬೆಯ ಸ್ಥಾಪನೆಯು ದಿ ಗ್ರೇಟೆಸ್ಟ ಸ್ಟೋರಿ ಎವರ ಟೋಲ್ಡ್‌ದ ನಂತದ್ದಾಗಿದೆಯೆಂದು ಹೇಳಬಹುದು?
2. ಪಂಚಾಶತ್ತಮ ಹಬ್ಬದ ದಿನದಂದು ಪರಿಶುದ್ಧಾತ್ಮನ ಬಾಪ್ತಿಸ್ಮವನ್ನು ಹೊಂದಿದವರು ಅಪೊಸ್ತಲರು ಮಾತ್ರವೇ ಎಂಬುದಕ್ಕೆ ನೀವು ಯಾವ ಪುರಾವೆ ಕೊಡಬಲ್ಲಿರಿ?
3. ಅಪೊಸ್ತಲರು ಪರಿಶುದ್ಧಾತ್ಮನೊಂದಿಗೆ ಬಾಪ್ತಿಸ್ಮ ಹೊಂದಿದಕ್ಕೆ ದೈವಿಕ ಕಾರಣಗಳನ್ನು ಚರ್ಚಿಸಿರಿ.
4. ಪರಿಶುದ್ಧಾತ್ಮನಲ್ಲಿಯ ಅಪೊಸ್ತಲರ ಬಾಪ್ತಿಸ್ಮವು ಇಂದು ನಮಗೆ ಯಾವ ಅರ್ಥ ಕೊಡುತ್ತದೆ?
5. ಪೇತ್ರನು ತನ್ನ ಪ್ರಸಂಗದಲ್ಲಿ ಹೇಳಿದ ಕ್ರಿಸ್ತನ ದೈವತ್ವಕ್ಕಾಗಿರುವ ಪುರಾವೆಗಳನ್ನು ಚರ್ಚಿಸಿರಿ.
6. ವಿಮೋಚನೆಯ ದೇವರ ಯೋಜನೆಗೆ ಕ್ರಿಸ್ತನ ಪುನರುತ್ಥಾನವು ಎಷ್ಟು ಅತ್ಯವಶ್ಯವಾಗಿದೆ? ಕ್ರಿಸ್ತನು ಸತ್ತವರೊಳಗಿಂದ ಎದ್ದು ಬರದಿದ್ದರೆ, ಆತನು ದೇವರ ದೈವಿಕ ಕುಮಾರನಾಗಿದ್ದುದನ್ನು ಯಾವುದೇ ಅರ್ಥದಲ್ಲಿ ನಾವು ಯೋಚಿಸಬಹುದೋ?
7. ಪಾಪ ಮಾಡುವದಕ್ಕಿಂತಲೂ ಹೆಚ್ಚು ದೊಡ್ಡದಾದ ದುಃಖಾಂತ್ಯವನ್ನು ನೀವು ಯೋಚಿಸ ಬಹುದೋ?
8. ಮಹಾ ಆಜ್ಞೆಯ ಮೂರು ದಾಖಲೆಗಳು ರಕ್ಷಣೆಯ ಶರತ್ತುಗಳ ಮೇಲೆ ಭಿನ್ನವಾಗಿ ಒತ್ತಿ ಹೇಳಿದವುಗಳನ್ನು ವಿವರಿಸಿರಿ (ಮತ್ತಾಯ 28:18-20; ಮಾರ್ಕ 16:15, 16; ಲೂಕ 24:46, 47).

9. ಅಪೊಸ್ತಲರ ಕೃತ್ಯಗಳು 22:16 ಹೇಗೆ ಅಪೊಸ್ತಲರ ಕೃತ್ಯಗಳು 2:38ಕ್ಕೆ ಬೆಂಬಲ ಕೊಡುತ್ತದೆಂಬುದನ್ನು ಚರ್ಚಿಸಿರಿ.

## ಪದ ಸಹಾಯಗಳು

ಮಾರ್ಪಡುವಿಕೆ - ಒಬ್ಬನು ಹೃದಯವನ್ನು ಬದಲಾಯಿಸುವ ಕಾರ್ಯ ಹಾಗೂ ಕ್ರೈಸ್ತನಾಗುವುದು.

ಅದ್ಭುತಗಳ ಯುಗ - ಅಪೊಸ್ತಲರು ಮತ್ತು ಇತರರು ತಮ್ಮ ಕೈಗಳನ್ನಿಡುವಾಗ ಅದ್ಭುತಗಳಾಗುತ್ತಿದ್ದ ಕಾಲದ ಅವಧಿ. ಇದು ಸಭೆಯ ಪ್ರಾರಂಭದಲ್ಲಿ ಇತ್ತು. ದೇವರು ಇನ್ನೂ ಪ್ರಾರ್ಥನೆಗಳಿಗೆ ಉತ್ತರ ಕೊಡುತ್ತಿರುವಾಗಲೂ ಕೊನೆಯ ಅಪೊಸ್ತಲನ ಮರಣದೊಂದಿಗೆ ಅದ್ಭುತಗಳ ಯುಗವು ಮುಕ್ತಾಯವಾಯಿತು (ಎಫೆಸ 4:11-13; 1 ಕೊರಿಂಥ 13:8-10).

ನಿಕೊದೇಮ - ರಾತ್ರಿಯ ಸಮಯದಲ್ಲಿ ಯೇಸುವಿನ ಬಳಿಗೆ ಬಂದ ಬೋಧಕ. ದೇವರ ರಾಜ್ಯವನ್ನು ಪ್ರವೇಶಿಸುವುದು ಹೇಗೆ ಎಂಬುದನ್ನು ಯೇಸು ಅವನಿಗೆ ಬೋಧಿಸಿದನು (ಯೋಹಾನ 3).

ಪ್ರಕಟನೆ - ಪರಿಶುದ್ಧಾತ್ಮನಿಂದ ಪ್ರಕಟಿಸಲ್ಪಟ್ಟ ಇಲ್ಲವೇ ತಿಳಿಸಲ್ಪಟ್ಟ ಸತ್ಯಗಳು, ಮನುಷ್ಯನಿಗೆ ದೇವರ ಪ್ರಕಟಣೆಯು ಬೈಬಲು ಆಗಿದೆ.

## 12

# ಹೊಸ ಒಡಂಬಡಿಕೆಯ ಸಭೆ

ಈ ಜಗತ್ತಿನಲ್ಲಿ ಜೀವಿಸುವದರ ಅಗತ್ಯತೆಯು, ತೀರ್ಮಾನಗಳನ್ನು ಮಾಡುವಂತೆ ನಡಿಸುತ್ತದೆ. ನಮ್ಮ ಹೆಚ್ಚಾದ ತೀರ್ಮಾನಗಳು ಚಿಕ್ಕವಾದವುಗಳೂ, ಕ್ಷಣಿಕವಾದವುಗಳೂ ಆಗಿರುತ್ತವೆ. ಇತರ ತೀರ್ಮಾನಗಳು ವಿಮರ್ಶಾತ್ಮಕವಾಗಿ ಮುಖ್ಯತ್ವವುಳ್ಳದವುಗಳಾಗಿದ್ದು, ಈ ಜೀವನದಲ್ಲಿ ದೇವರ ಮುಂದೆ ನಾವು ಜೀವಿ ಸುವದಕ್ಕೋಸ್ಕರ ಹಾಗೂ ನಿತ್ಯತ್ವದ ದೆಸೆಗೆ ತೀರ್ಮಾನಿಸುವಂಥದ್ದರ ಮೇಲೆ ಪರಿಣಾಮ ಮಾಡುತ್ತದೆ. ಜೀವಿತದ ಹಾಗೂ ನಿತ್ಯತ್ವದ ಮೇಲೆ ಪ್ರಭಾವ ಬೀರುವ ಈ ತೀರ್ಮಾನಗಳು ಮಾಡಲ್ಪಡುವ ಮೊದಲು ಗಂಭೀರವಾದ ಯೋಜನೆಯನ್ನೂ ಪ್ರಾರ್ಥನಾ ಪೂರ್ವಕವಾದ ಪರಿಶೋಧನೆಯನ್ನು ಮಾಡುವ ಅಗತ್ಯತೆಯಿದೆ. ಹೊಸ ಒಡಂಬಡಿಕೆಯ ಸಭೆಯನ್ನು ಪ್ರವೇಶಿಸಲು ತೀರ್ಮಾ ನಿಸುವದಕ್ಕಿಂತ ಹೆಚ್ಚು ಪರಿಣಾಮಕಾರಿಯಾದ ತೀರ್ಮಾನವು ಬೇರೆ ಯಾವುದೂ ಇರುವದಿಲ್ಲ, ಈ ಪ್ರಶ್ನೆಯ ಬಗ್ಗೆ ನಾವು ಮಾಡುವ ತೀರ್ಮಾನವು ದೇವರಿಗಾಗಿರುವ ನಮ್ಮ ಅನುದಿನದ ಜೀವನದ ಮೇಲೆ, ನಮ್ಮ ಆತ್ಮಿಕ ಸ್ವರೂಪದ ಮೇಲೆ, ನಮ್ಮ ಆರಾಧನೆಯ ಮೇಲೆ ಹಾಗೂ ನಮ್ಮ ಆತ್ಮಿಕ ಸೇವೆಯ ಮೇಲೆ ಪ್ರಭಾವ ಬೀರುವುದು. ಹಾಗಾದರೆ, ಈ ನಮ್ಮ ಪ್ರಶ್ನೆಯು ಬೈಬಲಿನ ಸ್ಪಷ್ಟ ಬೋಧನೆಗಳಿಗನುಗುಣವಾಗಿ ಮತ್ತು ನಮ್ಮ ದುರಭಿಪ್ರಾಯವಿಲ್ಲದ ಅತ್ಯುತ್ತಮವಾದ ತಿಳುವಳಿಕೆಗೆ ಅನುಗುಣವಾಗಿ ಉತ್ತರಿಸಲ್ಪಡುವವರೆಗೆ ಆಲೋಚನಾ ಪೂರ್ವಕವಾಗಿ ವಿಚಾರಿಸಲ್ಪಡತಕ್ಕದ್ದು.

ನಮ್ಮ ಸಮರ್ಪಣೆಗಾಗಿಯೂ ನಿಷ್ಠೆಗಾಗಿಯೂ ಬೇಡಿಕೊಳ್ಳುವ ಭಿನ್ನವಾದ ಸಭೆಗಳೊಂದಿಗೆ ನಮ್ಮ ಜಗತ್ತು ತುಂಬಿಕೊಂಡಿರುತ್ತದೆ. ಒಂದು ತೀರ್ಮಾನವು ಮಾಡಲ್ಪಡಬೇಕು. ಹೊಸ ಒಡಂಬಡಿಕೆಯ ಸಭೆಯು ಯಾವುದು? ನಾವು ಹೇಗೆ ತೀರ್ಮಾನಿಸಬಹುದು?

ಪುರಾವೆಯ ಬಗ್ಗೆ ಜಾಗರೂಕತೆಯಿಂದ ಯೋಚಿಸಲು ಮತ್ತು ಸರಿಯಾದ ಆಯ್ಕೆ ಮಾಡಲು ದೇವರಿಗೆ ಮೆಚ್ಚುವಂಥ ಆಯ್ಕೆಮಾಡಲು ನಮಗೆ ಸಹಾಯ ಮಾಡುವಂತೆ ಸಾಮಾನ್ಯ ತಿಳುವಳಿಕೆಯ ಮಾರ್ಗದರ್ಶನವನ್ನು ಸ್ಪಷ್ಟವಾಗಿ

ಅನುಸರಿಸತಕ್ಕದ್ದು. ಪ್ರಾಮಾಣಿಕತೆಯಿಂದ ಈ ಮಾರ್ಗದರ್ಶನಗಳನ್ನು ನಾವು ಅನುಸರಿಸಿದರೆ ಇಂದಿನ ಜಗತ್ತಿನಲ್ಲಿಯ ಹೊಸ ಒಡಂಬಡಿಕೆಯ ಸಭೆಯನ್ನು ನಾವು ಗುರಿತಿಸಬಹುದು.

ಈ ಮಾರ್ಗದರ್ಶನಗಳು ಯಾವುವು?

## ಪ್ರಥಮ ಶತಮಾನದಲ್ಲಿ ಸಭೆಯು ಹೇಗೆ ಗುರುತಿಸಲ್ಪಟ್ಟಿತು?

ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಟ್ಟ ಸಭೆಯ ಪ್ರಥಮ ದೃಷ್ಟಿಕೋನವು ಅಪೊಸ್ತಲರ ಕೃತ್ಯಗಳ ಗ್ರಂಥದ 2ನೇ ಅಧ್ಯಾಯದ ಅನಂತರದ ಭಾಗದಲ್ಲಿ ಕಂಡುಬರುತ್ತದೆ. ಯೇಸುವಿನಿಂದ ಹಾಗೂ ಆತನ ಅಪೊಸ್ತಲರಿಂದ ಸಭೆಯನ್ನು ಕುರಿತ ಪ್ರವಾದನೆಗಳು ತಮ್ಮ ದಾಖಲೆಯ ಮೂಲಕ ಸಭೆಯ ವರ್ಣ ಚಿತ್ರಕ್ಕಾಗಿ ಸುವಾರ್ತೆಗಳು ನಮ್ಮಲ್ಲಿ ನಿರೀಕ್ಷೆಯನ್ನೂ ಪೂರ್ವಭಾವನೆಯನ್ನೂ ಹುಟ್ಟಿಸಿದವು (ಮತ್ತಾಯ 16:18; ಮಾರ್ಕ 9:1; ಅಪೊಸ್ತಲರ ಕೃತ್ಯಗಳು 1:4-8). ಅಪೊಸ್ತಲರ ಕೃತ್ಯಗಳು 2ರಲ್ಲಿ ಸಭೆಯು ಸ್ಥಾಪಿಸಲ್ಪಟ್ಟಂತೆ ಸಭೆಯ ಸಜೀವ ವರ್ಣ ಚಿತ್ರವು ಪರಿಶುದ್ಧಾತ್ಮನಿಂದ ನಮ್ಮ ಮುಂದೆ ಇಡಲ್ಪಟ್ಟಿದೆ.

ಸಭೆಯ ಈ ವರ್ಣ ಚಿತ್ರವು ಅದರ ಪ್ರಮುಖ ಗುಣಲಕ್ಷಣಗಳನ್ನು ನೋಡಲು ನಮಗೆ ಸಹಾಯ ಮಾಡುತ್ತದೆ. ನಿಜ ಜೀವನದಲ್ಲಿ, ಯೇಸು ಸ್ಥಾಪಿಸಿದ ಸಭೆಯು ಹೇಗೆ ಕಾಣುತ್ತದೆ ಎಂದು ಆಶ್ಚರ್ಯಪಡುವದಕ್ಕೆ ನಾವು ಬಿಡಲ್ಪಟ್ಟಿಲ್ಲ.

ಅಪೊಸ್ತಲರ ಕೃತ್ಯಗಳು 2ರಲ್ಲಿ ಲೂಕನಿಂದ ಕೊಡಲ್ಪಟ್ಟ ವರ್ಣ ಚಿತ್ರದಲ್ಲಿ ಸಭೆಯ ಪ್ರಮುಖ ಲಕ್ಷಣಗಳನ್ನು ಗಮನವಿಟ್ಟು ನೋಡಿರಿ:

> ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ, ಸಹೋದರರ ಅನ್ಯೋನ್ಯತೆಯಲ್ಲಿಯೂ, ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು.
>
> ಎಲ್ಲರಿಗೂ ಭಯ ಉಂಟಾಯಿತು. ಇದಲ್ಲದೆ ಅನೇಕ ಅದ್ಭುತ ಕಾರ್ಯಗಳೂ ಸೂಚಕ ಕಾರ್ಯಗಳೂ ಅಪೊಸ್ತಲರ ಕೈಯಿಂದ ನಡೆದವು. ನಂಬಿದವರೆಲ್ಲರು ಒಗ್ಗಟ್ಟಾಗಿದ್ದು ತಮ್ಮದೆಲ್ಲವನ್ನೂ ಹುದುವಾಗಿ ಅನುಭೋಗಿಸುತ್ತಾ ತಮ್ಮತಮ್ಮ ಚರಸ್ಥಿರ ಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ್ದ ಹಾಗೆ ಹಂಚಿಕೊಡುತ್ತಾ ಇದ್ದರು. ಅವರು ದಿನಾಲು ಏಕ ಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತಾ ಮನೆಮನೆಗಳಲ್ಲಿ ರೊಟ್ಟಿಮುರಿದು ಉಲ್ಲಾಸದಿಂದಲೂ ಸರಳ ಹೃದಯದಿಂದಲೂ ಊಟಮಾಡುತ್ತಾ ಇದ್ದರು; ದೇವರನ್ನು

ಕೊಂಡಾಡುವ ವರಾಗಿಯೂ ಜನರೆಲ್ಲರ ದಯವನ್ನು ಹೊಂದುವವರಾಗಿಯೂ ಇದ್ದರು. ಕರ್ತನು ರಕ್ಷಣೆ ಹೊಂದಿದವರನ್ನು ದಿನಾಲು ಅವರೊಂದಿಗೆ ಸೇರಿ ಸುತ್ತಿದ್ದನು (ಅಪೊಸ್ತಲರ ಕೃತ್ಯಗಳು 2:42-47).

ಈ ವರ್ಣ ಚಿತ್ರದಲ್ಲಿ ಸಭೆಯ ಯಾವ ಗುಣಲಕ್ಷಣಗಳನ್ನು ನಾವು ನೋಡುತ್ತೇವೆ?

**ಸಮರ್ಪಣೆಯಲ್ಲಿ ಬಲವಾಗಿದ್ದರು**

ಅಪೊಸ್ತಲರ ತತ್ವಕ್ಕೆ ಇಲ್ಲವೇ ಬೋಧನೆಗೆ ಸ್ಥಿರವಾದ ಸಮರ್ಪಣೆಯು ಮೊದಲನೆಯ ಲಕ್ಷಣವಾಗಿತ್ತು, "ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ, ಸಹೋದರರ ಅನ್ಯೋನ್ಯತೆಯಲ್ಲಿಯೂ, ರೊಟ್ಟಿ ಮುರಿಯುವದರಲ್ಲಿಯೂ, ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು" (ಅಪೊಸ್ತಲರ ಕೃತ್ಯಗಳು 2:42) ಎಂದು ಲೂಕನು ಹೇಳಿದ್ದಾನೆ.

ಅಪೊಸ್ತಲರ ಬೋಧನೆಗೆ ಸಭೆಯ ಈ ಸಮರ್ಪಣೆಯು ನಂಬಿಕಸ್ತಿಕೆಯಿಂದ ಅವರ ಬೋಧನೆಯನ್ನು ಅನುಸರಿಸುವದರಲ್ಲಿ, ಆರಾಧನೆಯಲ್ಲಿ, ಸೇವೆಯಲ್ಲಿ ಹಾಗೂ ಕೊಡುವಿಕೆಯಲ್ಲಿ, ಕರ್ತನ ಭೋಜನವನ್ನು ಅವರು ಆಚರಿಸುವದರಲ್ಲಿ ಇಲ್ಲವೇ "ರೊಟ್ಟಿ ಮುರಿಯುವದರಲ್ಲಿ";[1] ಮತ್ತು ಪ್ರಾರ್ಥನೆಯಲ್ಲಿ, ಅವರ ಅನ್ಯೋನ್ಯತೆಯಲ್ಲಿ ಪ್ರಕಟವಾಗುತ್ತಿತ್ತು. ಕ್ರಿಸ್ತನು ಅವರ ಶಿರಸ್ಸಾಗಿದ್ದನು. ಅಪೊಸ್ತಲರ ಮೂಲಕ ಅವರಿಗೆ ಕೊಡಲ್ಪಟ್ಟ ಆತನ ವಾಕ್ಯವನ್ನು ಗೌರವಿಸುವಂತೆ ಆತನ ಸಭೆಯಲ್ಲಿ ಆತನ ನಾಯಕತ್ವವನ್ನು ಅವರು ಗುರುತಿಸಿಕೊಂಡಿದ್ದರು.

ಕ್ರೈಸ್ತ ಜಗತ್ತಿನಲ್ಲಿಯ ವಿಭಾಗಗಳು ಕ್ರಿಸ್ತನನ್ನು ಆತನ ಸಭೆಯಂತೆ ಅನುಸರಿಸುವ ಸರಳತೆಯನ್ನು ಗಲಿಬಿಲಿ ಮಾಡುವದಕ್ಕೆ ಬಿಡತಕ್ಕದ್ದಲ್ಲ. ಸಭೆಯು ಮಾನವ ನಿರ್ಮಿತ ಗುಂಪಾಗಿರುವದಿಲ್ಲ. ಅದು ಪರಿಶುದ್ಧಾತ್ಮನ ಸಂದೇಶಕ್ಕೆ ಸಮರ್ಪಿಸಿಕೊಂಡ ಜನರ ಗುಂಪಾಗಿದೆ ಮತ್ತು ಹೀಗೆ, ಸುವಾರ್ತೆಗೆ ತಮ್ಮ ವಿಧೇಯತೆಯಿಂದ, ಪರಿಶುದ್ಧಾತ್ಮನಿಂದ ಕ್ರಿಸ್ತನ ಸಭೆಯೊಳಗೆ ಒಂದಾಗಿ ಕೂಡಿಸಲ್ಪಟ್ಟಿದ್ದಾರೆ. ಅವರು ಕ್ರಿಸ್ತನಿಗೆ ಮಾತ್ರವೇ ಒಳಪಟ್ಟವರಾಗಿದ್ದಾರೆ. ಅವರು ಮಾನವ ನಾಯಕತ್ವದ ಕಡೆಗೆ ನೋಡುವದಿಲ್ಲ, ಆದರೆ ದೇಹಕ್ಕೆ ಶಿರಸ್ಸಾದ ಕ್ರಿಸ್ತನಿಂದ ಆತನ ಪ್ರಕಟಿತ ವಾಕ್ಯದ ಮುಖಾಂತರ ನಡಿಸಲ್ಪಡುತ್ತಾರೆ. ಕ್ರಿಸ್ತನಿಗೆ ನಂಬಿಗಸ್ತಿಕೆಯನ್ನು ಆತನ ಪ್ರೇರೇಪಿತ ವಾಕ್ಯದಲ್ಲಿ ನೆಲೆಗೊಳಿಸುವ ಮಾತುಗಳಲ್ಲಿ ದೃಷ್ಟಿಸುತ್ತಾರೆ. ಬೈಬಲು ಕ್ರೈಸ್ತರ ಆರಾಧನೆಯನ್ನು, ಅವರ ಕಾರ್ಯಗಳನ್ನು ಜಗತ್ತಿನಲ್ಲಿ ಕ್ರಿಸ್ತನ ಹಸ್ತಗಳಂತೆ, ಹಾಗೂ ಕ್ರಿಸ್ತನಿಗಾಗಿ ಅವರ ದೈನಂದಿನ ಜೀವಿತವನ್ನು ನಡಿಸಲು ಮಾರ್ಗ ದರ್ಶನ ಮಾಡುತ್ತದೆ.

ಸಭೆಯ ಪರಿಶುದ್ಧಾತ್ಮನ ವರ್ಣ ಚಿತ್ರವನ್ನು ನೋಡುವಂತೆ ನಾವು ಬಲವಾದ ಸಮರ್ಪಣೆಯ ಲಕ್ಷಣವನ್ನು ನೋಡುತ್ತೇವೆ.

**ಸ್ವಾರ್ಥರಹಿತ ಅನುಕಂಪ**

ಸಭೆಯ ಈ ದೈವಿಕ ಚಿತ್ರದಲ್ಲಿ ನಾವು ತಪ್ಪಿಸಿಕೊಳ್ಳದ ಇನ್ನೊಂದು ಗುಣಲಕ್ಷಣವು ಒಬ್ಬರಿಗೋಸ್ಕರವಾಗಿ ಒಬ್ಬರಿಗಿದ್ದ ಸ್ವಾರ್ಥರಹಿತ ಅನುಕಂಪ. ಸತ್ಯಕ್ಕೆ ಅವರ ಈ ಯಥಾರ್ಥವಾದ ವಿಧೇಯತೆಯು ಅವರಲ್ಲಿ ಒಬ್ಬರಿಗೋಸ್ಕರವಾಗಿ ಒಬ್ಬರಿಗೆ ಅನುಕಂಪದ ಪ್ರೀತಿಯನ್ನು ಹುಟ್ಟಿಸಿತು. "ತಮ್ಮ ತಮ್ಮ ಚರಸ್ಥಿರ ಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ್ದ ಹಾಗೆ ಹಂಚಿಕೊಡುತ್ತಾ ಇದ್ದರು" (ಅಪೊಸ್ತಲರ ಕೃತ್ಯಗಳು 2:45) ಎಂದು ಲೂಕನು ಹೇಳಿದ್ದಾನೆ.

ಪಂಚಾಶತ್ತಮ ದಿನವನ್ನು ಆಚರಿಸಲು ಯೆಹೂದ್ಯರು ರೋಮ್ ಸಾಮ್ರಾಜ್ಯದ ಎಲ್ಲಾ ಕಡೆಗಳಿಂದ ಬಂದಿದ್ದರು. ಈ ಪಂಚಾಶತ್ತಮವು ಒಂದು ಸಾಮಾನ್ಯವಾದದ್ದಾಗ ಬಹುದೆಂದು ಅವರು ಯೋಚಿಸಿದ್ದರು; ಆದರೆ ಅವರಿಗೆ ಸಂಪೂರ್ಣ ಆಶ್ಚರ್ಯವಾಗುವಂತೆ ಅದು ಹಾಗಾಗಲಿಲ್ಲ. ಪ್ರವಾದಿಗಳು ಮುನ್ನೋಡಿದ ಐತಿಹಾಸಿಕ ದಿನವಾಗಿತ್ತು. ಪೇತ್ರನ ಸಂದೇಶವನ್ನು ಕೇಳಿದ ನಂತರ, ಅನೇಕ ಯೆಹೂದ್ಯರು ಕ್ರೈಸ್ತರಾಗಲು ತೀರ್ಮಾನಿಸಿಕೊಂಡರು (ಅಪೊಸ್ತಲರ ಕೃತ್ಯಗಳು 2:41). ಕ್ರಿಸ್ತನಿಗೆ ಅವರ ವಿಧೇಯತೆಯು ಅವರಿಗೆ ಆಮೂಲಾಗ್ರ ಬದಲಾವಣೆಯಾಗಿತ್ತು, ಒಂದು ಸಂಗತಿ, ಅವರು ಯೆರೂಸಲೇಮಿನಲ್ಲಿ ಉಳಿದು ಕೊಂಡು, ಈಗ ಅವರು ಭಾಗವಾಗಿದ್ದ ಸಭೆಯ ಬಗ್ಗೆ ಅಪೊಸ್ತಲರಿಂದ ಹೆಚ್ಚಾಗಿ ಬೋಧನೆ ಹೊಂದಬೇಕಾಗಿತ್ತು. ಅವರಲ್ಲಿ ಕೆಲವರಿಗೆ ಯೆರೂಸಲೇಮಿನಲ್ಲಿರ ಬೇಕಾದ ತಕ್ಷಣದ ನಿರ್ಧಾರವು ಕಠಿಣವಾದದ್ದಾಗಿತ್ತು. ಯಾಕಂದರೆ ಅಂಥ ಇರುವಿಕೆಗಾಗಿ ಅವರು ಮುಂದಾಗಿ ಯೋಜನೆಗಳನ್ನು ಮಾಡಿಕೊಂಡಿರಲಿಲ್ಲ. ಅವರಿಗೆ ವಸತಿಯ ಹಾಗೂ ಊಟದ ಅವಶ್ಯಕತೆಯಿತ್ತು ಎಂಬುದರಲ್ಲಿ ಸಂಶಯವಿಲ್ಲ. ಇಂಥ ಬಿಕ್ಕಟ್ಟಿನ ಪರಸ್ಥಿತಿಯನ್ನು ಎದುರಿಸದ ಕ್ರೈಸ್ತರು ದೂರದ ಪ್ರದೇಶಗಳಿಂದ ಬಂದ ಕೊರತೆಯಲ್ಲಿದ್ದ ಈ ಸಹೋದರ ಸಹೋದರಿಯರಿಗೆ ಹೇಗೆ ಪ್ರತಿಸ್ಪಂಧಿಸಿದರು? ಅವರ ಪ್ರತಿಕ್ರಿಯೆಯು ಖಚಿತವಾಗಿ ಸಮಾನವಾಗಿರುವ ಅನುಕಂಪ ಹಾಗೂ ಪ್ರೀತಿಯ ಚಿತ್ರವಾಗಿತ್ತು. ಈ ಸಹೋದರರಿಗೆ ಜೋಪಾಸನೆ ಮಾಡಲು ಕೆಲವರು ತಮ್ಮ ಮನೆಗಳನ್ನು ಭೂಮಿಯನ್ನು ಮಾರಿದರು. ಅವರ ಕೃತ್ಯಗಳು ಕ್ರಿಸ್ತನು ಯಾವಾಗಲೂ ತನ್ನ ಸಭೆಯ ಭಾಗವಾಗಿರಬೇಕೆಂದು ಉದ್ದೇಶಿಸಿದ ಅನುಕಂಪದ ಲಕ್ಷಣದ ಉದಾಹರಣೆಗಳಾಗಿದ್ದವು.

ಅವರ ಹಂಚಿಕೊಳ್ಳುವಿಕೆಯನ್ನು ವಿವರಿಸಲಾಗದಷ್ಟು ಸುಂದರವಾ

ದದನ್ನಾಗಿ ಮಾಡಿದ ಸತ್ಯವು, ದಾನಗಳು ಸಂಪೂರ್ಣವಾಗಿ ಸ್ವಯಂ ಪ್ರೇರಣೆಯಿಂದ ಕೂಡಿದವುಗಳಾಗಿದ್ದದ್ದು. ಅವರ ಕೊಡುಗೆಯು ಅಪೊಸ್ತಲರಿಂದ ಒತ್ತಾಯ ಮಾಡಲ್ಪಟ್ಟಿದ್ದಲ್ಲ. ಇಲ್ಲವೇ ಅಧಿಕಾರದಿಂದ ಕೇಳಿದ್ದಾಗಿರಲಿಲ್ಲ (ಅಪೊಸ್ತಲರ ಕೃತ್ಯಗಳು 5:4). ಮೃದುವಾದ ಕರುಣೆಯ ಹಾಗೂ ಕ್ರಿಸ್ತನಂಥ ಪ್ರೀತಿಯ ಹೃದಯಗಳಿಂದ ಅದು ಉಕ್ಕಿ ಬಂದಿತ್ತು. ಕ್ರಿಸ್ತನು ಅವರಲ್ಲಿ ನೂತನ ಸ್ವಭಾವವನ್ನೂ ಸ್ವಾರ್ಥರಹಿತ ಸಹಾನುಭೂತಿಯನ್ನೂ ಹುಟ್ಟಿಸಿದ್ದನು.

ಅವರ ಹಂಚಿಕೊಳ್ಳುವಿಕೆಯು ಎಲ್ಲರೂ ಸರಿಸಮಾನರಾಗಿರ ಬೇಕು ಇಲ್ಲವೇ ಒಂದೇ ಮೊತ್ತದ ಸಲಕರಣೆಗಳನ್ನು ಹೊಂದಿರಬೇಕು ಎಂಬ ಉದ್ದೇಶವುಳ್ಳದ್ದಾಗಿರಲಿಲ್ಲ, ಅದು ಸಮುದಾಯ ಜೀವಿಸುವಿಕೆಯಾಗಿರಲಿಲ್ಲ; ಅದು ಜೋಪಾಸನೆ ಮಾಡುವ ಪ್ರೀತಿಯಾಗಿತ್ತು. ಅವಶ್ಯಕತೆಯಲ್ಲಿರುವವರಿಗೆ ಅವರು ಕೊಟ್ಟರು. ಅವಶ್ಯಕತೆಗಳನ್ನು ತೃಪ್ತಿ ಪಡಿಸಿದರು ಆದರೆ ಆಶೆಗಳನ್ನಲ್ಲ. *ಪ್ರತಿಯೊಂದು ತುರ್ತು ಪರಿಸ್ಥಿತಿಯು ಅವಸರವನ್ನು ಕೇಳುವುದೆಂದು* ಅವರು ತಿಳಿದಿದ್ದರು. ಜನರಲ್ಲಿ ಕೊರತೆಗಳು ಬೆಳೆಯುವಾಗ, ಇತರರು ಅವುಗಳನ್ನು ನೀಗಿಸಲು ಪ್ರೀತಿಯಲ್ಲಿ ಕಾರ್ಯಮಾಡಿದರು - ಅದು ತ್ಯಾಗದ ಕೊಡುಗೆಯನ್ನು ಒಳಗೊಂಡಿತ್ತು!

ಅನಂತರದಲ್ಲಿ ಲೂಕನು ಸಭೆಯ ಬಗ್ಗೆ, "ಅವರಲ್ಲಿ ಕೊರತೆ - ಪಡುವವನು ಒಬ್ಬನೂ ಇರಲಿಲ್ಲ, ಯಾಕಂದರೆ ಹೊಲಮನೆಗಳಿದ್ದವರು ಅವುಗಳನ್ನು ಮಾರಿ ಬಂದ ಕ್ರಯವನ್ನು ತಂದು ಅಪೊಸ್ತಲರ ಪಾದಗಳ ಬಳಿಯಲ್ಲಿ ಇಡುತ್ತಿದ್ದರು; ಅದನ್ನು ಪ್ರತಿಯೊಬ್ಬನಿಗೆ ಅವನವನ ಅವಶ್ಯದಂತೆ ಹಂಚಿಕೊಡುತ್ತಿದ್ದರು" (ಅಪೊಸ್ತಲರ ಕೃತ್ಯಗಳು 4:34, 35) ಎಂದು ಹೇಳಿದ್ದಾನೆ. "... ಇದಲ್ಲದೆ ಒಬ್ಬನಾದರೂ ತನಗಿದ್ದ ಆಸ್ತಿಯಲ್ಲಿ ಯಾವದೊಂದನ್ನೂ ಸ್ವಂತವಾದದ್ದೆಂದು ಹೇಳಲಿಲ್ಲ, ಎಲ್ಲವೂ ಅವರಿಗೆ ಹುದುವಾಗಿ ಇತ್ತು" (ಅಪೊಸ್ತಲರ ಕೃತ್ಯಗಳು 4:32ಬಿ) ಎಂದೂ ಹೇಳಿದ್ದಾನೆ.

ಅನುಕಂಪವು ಕ್ರಿಸ್ತನ ಸಭೆಯ ಮೂಲ ಲಕ್ಷಣವಾಗಿದೆ. ಆತನ ವಾಕ್ಯಕ್ಕೆ ನಂಬಿಕೆಯುಳ್ಳ ವಿಧೇಯತೆಯು ಇರದಿದ್ದಲ್ಲಿ ಆತನ ಸಭೆಯು ಅಸ್ತಿತ್ವದಲ್ಲಿ ಇರಲಾರದು: ಇಲ್ಲವೇ ಅನುಕಂಪವು ಕ್ರಿಸ್ತನ ಹೃದಯದ ಪ್ರಕಟನೆಯಾಗಿ ತುಂಬಿರದಿದ್ದರೆ ಸಭೆಯು ಅಸ್ತಿತ್ವದಲ್ಲಿರಲಾರದು. ನಿಜವಾದ ಕ್ರೈಸ್ತರಲ್ಲಿ ಅವರ ಹೃದಯಗಳಲ್ಲಿ ದೇವರ ಪ್ರೀತಿಯು ವಾಸಿಸುವದರಿಂದ ಸೃಷ್ಟಿಸಲ್ಪಟ್ಟ ಕ್ರಿಯಾತ್ಮಕ ಸಹೋದರ ಪ್ರೀತಿಯು ಇರುತ್ತದೆ. "ಈ ಲೋಕದ ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ ಕರುಣಿಸದೆ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವದುಂಟೇ?" (1 ಯೋಹಾನ 3:17) ಎಂದು ಯೋಹಾನನು ಬರೆದಿದ್ದಾನೆ.

ಪರಿಶುದ್ಧಾತ್ಮನ ಸಭೆಯ ಪ್ರಥಮ ವರ್ಣ ಚಿತ್ರದಲ್ಲಿ, ಸ್ವಾರ್ಥರಹಿತ

ಅನುಕಂಪವು ಸ್ಪಷ್ಟವಾದ ಮಹತ್ವದ ಲಕ್ಷಣವಾಗಿದೆ.

**ಕ್ರಿಸ್ತನಲ್ಲಿ ಒಂದಾಗಿರುವುದು**

ಈ ವರ್ಣ ಚಿತ್ರದಲ್ಲಿ ಕಂಡು ಬರುವ ಕ್ರಿಸ್ತನ ಸಭೆಯ ಮೂರನೆಯ ಗುಣಲಕ್ಷಣ ಅದರ ಐಕ್ಯತೆ. ಈ ಜನರು ಸುವಾರ್ತೆಗೆ ಹಾಗೂ ಅಪೊಸ್ತಲರ ಬೋಧನೆಗೆ ವಿಧೇಯತೆಯ ಮುಖಾಂತರವಾಗಿ ಪರಿಶುದ್ಧಾತ್ಮನು ಕ್ರಿಸ್ತನ ಸಭೆಯ ಸದಸ್ಯರಿಗೆ ಮನಸ್ಸಿನ ಐಕ್ಯತೆಯನ್ನು ಕೊಟ್ಟಿದ್ದನು. "ನಂಬಿದವರೆಲ್ಲರು ಒಗ್ಗಟ್ಟಾಗಿದ್ದು ತಮ್ಮದೆಲ್ಲವನ್ನು ಹುದುವಾಗಿ ಅನುಭೋಗಿಸುತ್ತ ಇದ್ದರು" (ಅಪೊಸ್ತಲರ ಕೃತ್ಯಗಳು 2:44) ಎಂದು ಲೂಕನು ಹೇಳಿದ್ದಾನೆ. "ಅವರು ದಿನಾಲು ಏಕಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತ ಮನೆಮನೆಗಳಲ್ಲಿ ರೊಟ್ಟಿ ಮುರಿದು ಉಲ್ಲಾಸದಿಂದಲೂ ಸರಲ ಹೃದಯದಿಂದಲೂ ಊಟ ಮಾಡುತ್ತ ಇದ್ದರು" (ಅಪೊಸ್ತಲರ ಕೃತ್ಯಗಳು 2:46) ಎಂದೂ ಮುಂದೆ ಹೇಳಿದ್ದಾನೆ.

ಯೇಸುವು ಕಟ್ಟಿದ ಸಭೆಯಲ್ಲಿ ಅಸ್ತಿತ್ವದಲ್ಲಿರುವ ಈ ಸುಂದರವಾದ ಐಕ್ಯತೆಯನ್ನು ನಾವು ನೋಡುವಾಗ, ಸಭೆಯ ಈ ಮೊದಲನೆಯ ವರ್ಣ ಚಿತ್ರದ ಮಹತ್ವವನ್ನು ನಮ್ಮಷ್ಟಕ್ಕೆ ನಾವೇ ಜ್ಞಾಪಿಸಿಕೊಳ್ಳೋಣ. ಈ ವರ್ಣ ಚಿತ್ರವು ಕ್ರಿಸ್ತನ ಭೂಲೋಕದ ಜೀವನ ಮತ್ತು ಮರಣದ ಪರಿಣಾಮವನ್ನು ನಮಗೆ ಕೊಡುತ್ತದೆ. ಯಾವ ರೀತಿಯ ಸಭೆಯನ್ನು ಕಟ್ಟಲು ಇಲ್ಲವೇ ಸೃಷ್ಟಿಸಲು ಕ್ರಿಸ್ತನು ಬಂದನು? ಒಬ್ಬರಿಗೆ ಇನ್ನೊಬ್ಬರೊಂದಿಗೆ ಅನ್ಯೋನ್ಯತೆಯಿಲ್ಲದ, ಭಿನ್ನವಾದ ಹೆಸರುಗಳನ್ನು ಧರಿಸಿಕೊಂಡ ಅನೇಕ ಗುಂಪುಗಳಾಗಿರುವ ದೊಡ್ಡ ಸಂಘಟನೆಯನ್ನೋ? ಅಥವಾ ಆತನು ಶಿರಸ್ಸಿನಂತೆ ಆಳುವ ಐಕ್ಯತೆಯುಳ್ಳ ಸಭೆಯನ್ನು ಆತನು ಸೃಷ್ಟಿಸಿದನೋ? ಅಪೊಸ್ತಲರ ಕೃತ್ಯಗಳು 2ರಲ್ಲಿ ತನ್ನ ಸಭೆಯು ಹೇಗಿರ ಬೇಕೆಂದು ಕ್ರಿಸ್ತನು ಬಯಸುವ ಮತ್ತು ಅದು ಜಗತ್ತಿನಲ್ಲಿ ಹೇಗೆ ಜೀವಿಸ ಬೇಕೆಂದು ಆತನು ಬಯಸುವ ಸ್ಪಷ್ಟವಾದ ಸ್ವರೂಪವನ್ನು ನೋಡುತ್ತೇವೆ. ಇದು ಹೊಸ ಒಡಂಬಡಿಕೆಯಲ್ಲಿ ಸ್ಪಷ್ಟವಾಗಿದೆ. ಈ ವರ್ಣ ಚಿತ್ರವು ಮನಸ್ಸಿನ ಮತ್ತು ಜೀವನದ ಐಕ್ಯತೆಯು ಆ ಸಭೆಯ ಗುಣಲಕ್ಷಣವಾಗಿತ್ತೆಂದು ಸ್ಪಷ್ಟವಾಗಿ ಪ್ರಕಟಿಸುತ್ತದೆ. ಕ್ರಿಸ್ತನು ತನ್ನ ಸಭೆಗಾಗಿ ಅಪೇಕ್ಷಿಸುವಂಥದ್ದು ಇದಾಗಿರಬೇಕು. ಧಾರ್ಮಿಕ ಜಗತ್ತಿನಲ್ಲೆಲ್ಲಾ ಇರುವ ವಿಭಾಗಗಳು ಮನುಷ್ಯನು ತನ್ನ ಲೋಕದ ಜ್ಞಾನದಲ್ಲಿ, ಕ್ರಿಸ್ತನ ಸಭೆಯನ್ನು ಬಿಟ್ಟಿದ್ದಾನೆ ಮತ್ತು ತನ್ನ ಸ್ವಂತ ಸಭೆಗಳನ್ನು ಮಾಡಿಕೊಂಡಿದ್ದಾನೆ ಎಂಬುದಕ್ಕೆ ನಿಜವಾದ ಗುರುತಾಗಿದೆ.

ಕರ್ತನ ಸಭೆಯ ಐಕ್ಯತೆಯು ಮದುವೆಯಲ್ಲಿ ಉದಾಹರಿಸಲ್ಪಡಬಹುದು. ಒಬ್ಬ ಪುರುಷ ಹಾಗೂ ಒಬ್ಬ ಸ್ತ್ರೀಯು ಮದುವೆಯಲ್ಲಿ ಒಂದಾಗುತ್ತಾರೆ (ಎಫೆಸ 5:31). ಮದುವೆಯ ಶಿಷ್ಟಾಚಾರದ ನಂತರ ಅವರು ಒಂದು ಹೊಸ

ಕುಟುಂಬದವರಾಗುತ್ತಾರೆ. ಈಗ ಅವರು ಒಬ್ಬರಿಗೊಬ್ಬರು ಒಳಪಟ್ಟಿರುತ್ತಾರೆ. ಹೊಸ ಸ್ವಭಾವವನ್ನು ತೆಗೆದು ಕೊಳ್ಳುತ್ತಾರೆ. ಸ್ವಾರ್ಥದ ಧ್ಯೇಯಗಳೂ ವೈಯಕ್ತಿಕ ಚಟುವಟಿಕೆಗಳೂ ಇಲ್ಲವಾಗಿ ಹೋಗುತ್ತವೆ. ಈ ಕುಟುಂಬಗಳ ಒಳ್ಳೆಯದಕ್ಕಾಗಿ ಹೊಸ ಧ್ಯೇಯಗಳೂ ಗುರಿಗಳೂ ಜೀವನಕ್ಕೆ ಬರುತ್ತವೆ. ಒಂದೇ ದೇಹ, ಒಂದೇ ಪ್ರಾಣವಾಗಿ ಪಾಲನೆ, ಪ್ರೀತಿ ಹಾಗೂ ತಮ್ಮ ಕುಟುಂಬದ ಭವಿಷ್ಯಕ್ಕಾಗಿ ಅವರು ಐಕ್ಯತೆಯಲ್ಲಿ ವಾಸಿಸುತ್ತಾರೆ. ಅವರಿಗೆ ಈ ಐಕ್ಯತೆ ಹೇಗೆ ಕೊಡಲ್ಪಟ್ಟಿತು? ಮದುವೆಯಲ್ಲಿ ಪ್ರವೇಶಿಸಲು ಮತ್ತು ಮದುವೆಯ ಕಾನೂನನ್ನು ನೆರವೇರಿಸಲು ಪರಸ್ಪರ ಒಪ್ಪಿಕೊಂಡದ್ದರಿಂದ ಅದು ಕೊಡಲ್ಪಟ್ಟಿದೆ. ಅವರು ಈ ಐಕ್ಯತೆಯನ್ನು ಹೇಗೆ ಕಾಯ್ದುಕೊಂಡು ಹೋಗುವರು? ಒಬ್ಬರನ್ನೊಬ್ಬರು ಪ್ರೀತಿಸುವದರಿಂದ, ಒಬ್ಬರಿಗಾಗಿ ಒಬ್ಬರು ಜೋಪಾಸನೆ ಮಾಡುವದರಿಂದ, ಒಬ್ಬರನ್ನೊಬ್ಬರು ಕ್ಷಮಿಸುವದರಿಂದ, ತಮ್ಮ ವಿವಾಹದ ಪ್ರಮಾಣ ವಚನಗಳನ್ನು ಗೌರವಿಸುವದರಿಂದ ಮದುವೆಯ ಆಶೀರ್ವಾದಗಳ ಪರಿಸ್ಥಿತಿಯನ್ನು ಗೌರವಿಸುವದರಿಂದ ಅವರು ಕಾಪಾಡಿಕೊಳ್ಳುತ್ತಾರೆ.

ಇದು ಸಭೆಯ ವಿಷಯದಲ್ಲಿಯೂ ಸತ್ಯವಾಗಿರುವದಲ್ಲವೋ? ಸಭೆಯ ಐಕ್ಯತೆಯಲ್ಲಿ ನಾವು ಹೇಗೆ ಪ್ರವೇಶಿಸಬಹುದು? ವೈಯಕ್ತಿಕ ಒಪ್ಪಿಗೆಯಿಂದ, ಕ್ರಿಸ್ತನ ಸುವಾರ್ತೆಗೆ ನಮ್ಮ ಜೀವಿತವನ್ನು ಸಮರ್ಪಿಸಲು ತೀರ್ಮಾನಿಸುವದರಿಂದ ಮತ್ತು ಆತನ ದೇಹದೊಳಗೆ, ಸಭೆಯೊಳಗೆ ಪ್ರವೇಶಿಸುವದರಿಂದ, ಆ ದೇಹವನ್ನು ನಾವು ಪ್ರವೇಶಿಸುವಾಗ, ಪರಿಶುದ್ಧಾತ್ಮನಿಂದ ಕ್ರಿಸ್ತನೊಂದಿಗೆ ಹಾಗೂ ಅದರ ಪ್ರತಿಯೊಬ್ಬ ಸದಸ್ಯರೊಂದಿಗೆ ನಾವು ಐಕ್ಯತೆಯಲ್ಲಿ ಬರುತ್ತೇವೆ. ಒಂದೇ ಹೃದಯದಿಂದಲೂ ಆತ್ಮದಿಂದಲೂ ಪ್ರೀತಿಸಲು, ಸೇವೆ ಮಾಡಲು ಮತ್ತು ಆತನ ದೇಹವಾಗಿ ಜೀವಿ ಸಲು ಪ್ರಾರಂಭಿಸುತ್ತೇವೆ? ಈ ಐಕ್ಯತೆಯನ್ನು ನಾವು ಹೇಗೆ ಕಾಪಾಡಿಕೊಂಡು ಹೋಗುತ್ತೇವೆ? ಪರಸ್ಪರ ಪ್ರೀತಿಸುವದರಿಂದಲೂ, ಕ್ಷಮಿಸುವದರಿಂದಲೂ ಮತ್ತು ಆರಾಧಿಸಿ, ಸೇವೆ ಹಾಗೂ ಅನುದಿನದ ಜೀವಿತದಲ್ಲಿ ಕ್ರಿಸ್ತನ ವಾಕ್ಯವನ್ನು ಗೌರವಿಸುವದರಿಂದಲೂ ಅದನ್ನು ಗಟ್ಟಿಯಾಗಿ ಇಟ್ಟುಕೊಳ್ಳುತ್ತದೆ.

ಕ್ರಿಸ್ತನ ಸಭೆಯ ಅಲ್ಲಗಳೆಯಲಾಗದ ಗುಣಲಕ್ಷಣವು ಐಕ್ಯತೆಯಾಗಿದೆ. ಕ್ರಿಸ್ತನ ನಿಜವಾದ ಸಭೆಯು ವಿಭಜನೆಗಳು ಉಳಿದು ಕೊಂಡಿರುವಲ್ಲಿ ಅಸ್ತಿತ್ವದಲ್ಲಿರಲಾರದು. ಕ್ರಿಸ್ತನ ದೇಹದೊಳಗೆ ನಾವು ಪ್ರವೇಶಿಸುವಾಗ ಪರಿಶುದ್ಧಾತ್ಮನಿಂದ ಈ ಐಕ್ಯತೆಯು ನಮಗೆ ಕೊಡಲ್ಪಟ್ಟಿದೆ. ಹಾಗೂ ಆತನ ದೇಹವಾಗಿ ನಾವು ಜೀವಿಸುವಾಗ ನಾವು ಅದನ್ನು ಕಾಪಾಡಿಕೊಂಡು ಹೋಗುತ್ತೇವೆ. ಇಲ್ಲವೇ ಅದಕ್ಕೆ ಕೆಡುಕನ್ನುಂಟು ಮಾಡುತ್ತೇವೆ. ಕ್ರಿಸ್ತನ ದೇಹದಲ್ಲಿಯ ವಿಭಜನೆಯು ಪ್ರತಿಯೊಬ್ಬ ಕ್ರೈಸ್ತನಿಗೆ ವಿಚಾರಿಸಲ್ಪಡದ್ದಾಗ ಬೇಕು. ಪರಿಶುದ್ಧ ಬರಹದ ಪ್ರಕಾರ ಈ ಲೋಕದಲ್ಲಿ ನಾವು ಐಕ್ಯತೆಯಲ್ಲಿ ಕಂಡುಕೊಳ್ಳುವ ಒಂದು ಸ್ಥಳ ಕ್ರಿಸ್ತನ ದೇಹದಲ್ಲಿರುತ್ತದೆ.

## ಇಂದು ಸಭೆಯು ಹೇಗೆ ಗುರುತಿಸಲ್ಪಡಬೇಕು?

**ಅದರ ಪ್ರಾರಂಭವನ್ನು ಯೋಚಿಸಿರಿ**

ಹೊಸ ಒಡಂಬಡಿಕೆಯ ಸಭೆಯನ್ನು ಗುರುತಿಸುವ ಗುರುತುಗಳಲ್ಲಿ ಒಂದು ಅದರ ಪ್ರಾರಂಭದ ಸಮಯವು ಆಗಿದೆ, ಹೊಸ ಒಡಂಬಡಿಕೆಯ ಸಭೆಯಿಂದ ಭಿನ್ನವಾದ ಸಮಯದಲ್ಲಿ ಪ್ರಾರಂಭವಾದ ಯಾವುದೇ ಸಭೆಯು ಹೊಸ ಒಡಂಬಡಿಕೆಯ ಸಭೆಯಾಗಿರದೇ ಇರುವಂಥದ್ದು ಸ್ಪಷ್ಟವಾಗಿದೆ.

ತನ್ನ ವೈಯಕ್ತಿಕ ಸೇವೆಯ ನಾಲ್ವರಲ್ಲಿ ಮೂರು ಭಾಗದ ಮುಖಾಂತರವಾಗಿ ಯೇಸುವು ''ನಾನು ನನ್ನ ಸಭೆಯನ್ನು ಕಟ್ಟುವೆನು'' (ಮತ್ತಾಯ 16:18) ಎಂದು ವಾಗ್ದಾನ ಮಾಡಿದನು. ಆತನು ತನ್ನ ಪುನರುತ್ಥಾನದ ನಂತರ ಪ್ರಥಮ ಪಂಚಾಶತ್ತಮ ಹಬ್ಬದ ದಿನದಂದು ತನ್ನ ವಾಗ್ದಾನವನ್ನು ನೆರವೇರಿಸಿದನು (ಅಪೊಸ್ತಲರ ಕೃತ್ಯಗಳು 2:41-47). ಈ ಪಂಚಾಶತ್ತಮ ದಿನದಿಂದ ಮುಂದೆ ಸಭೆಯು ಹೊಸ ಒಡಂಬಡಿಕೆಯ ಉಳಿದ ಭಾಗದಲ್ಲೆಲ್ಲಾ ಅಸ್ತಿತ್ವದಲ್ಲಿದೆಯೆಂಬಂತೆ, ಮಾತಾಡಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 5:11; 7:38; 8:1, 3).

“ನನ್ನ ಸಭೆಯು ಹಳೇ ಒಡಂಬಡಿಕೆಯಲ್ಲಿ ಪ್ರಾರಂಭವಾಯಿತು” ಎಂದು ಒಬ್ಬನು ಹೇಳುತ್ತಾನೆಂದು ಭಾವಿಸೋಣ. ಅವನ ಸಭೆಯು ಬಹಳ ಮುಂಚಿನದಾಗಿದೆ. ಹಳೇ ಒಡಂಬಡಿಕೆಯು ರಾಜ್ಯವು ಬರುವದನ್ನು ಮುಂತಿಳಿಸುತ್ತದೆ. ಆದರೆ ಅದರ ಸ್ಥಾಪನೆಯ ಬಗ್ಗೆ ದಾಖಲೆ ಮಾಡುವದಿಲ್ಲ. “ನನ್ನ ಸಭೆಯು ಕ್ರಿ. ಶ. ಮೂರನೆಯ ಶತಮಾನದಲ್ಲಿ ಪ್ರಾರಂಭವಾಯಿತು” ಎಂದು ಒಬ್ಬನು ಹೇಳುವದನ್ನು ಕಲ್ಪಿಸಿರಿ. ಅವನ ಸಭೆಯು ಬಹಳ ತಡವಾದದ್ದು. ಇದು ಹೊಸ ಒಡಂಬಡಿಕೆಯ ಸಭೆಯಾಗಿರಲಾರದು. ಮುಂದೆ ಒಂದು ದಿನ ಸಭೆಯ ಸ್ಥಾಪನೆಯಾಗುವದನ್ನು ಮುನ್ನೋಡುತ್ತ ಹೊಸ ಒಡಂಬಡಿಕೆಯು ಮುಕ್ತಾಯಗೊಳ್ಳುವದಿಲ್ಲ. ಜಗತ್ತಿನಲ್ಲೆಲ್ಲಾ ಸಭೆಯು ಬಲವಾಗಿ ಹಬ್ಬುತ್ತಿರುವದರಿಂದ ನಡುಗಿತ್ತಿದ್ದ ರೋಮ್ ಸಾಮ್ರಾಜ್ಯದೊಂದಿಗೆ ಅದು ಮುಕ್ತಾಯಗೊಳ್ಳುತ್ತದೆ.

ಸಾಮಾನ್ಯವಾಗಿ, ಪ್ರೋಟೆಸ್ಟಂಟ ಸಭೆಗಳು ಹದಿನಾರನೆಯ ಶತಮಾನದಲ್ಲಿ, ಪುನಃ ಸ್ಥಾಪನೆಯ ಸಮಯದಲ್ಲಿ ಇಲ್ಲವೇ ಅದರ ನಂತರ ಅಸ್ತಿತ್ವಕ್ಕೆ ಬಂದವು. ಯಾವುದೇ ರೀತಿಯ ಸಭಾಪಂಗಡಗಳು ಹೊಸ ಒಡಂಬಡಿಕೆಯಲ್ಲಿ ಕಂಡು ಬರುವದಿಲ್ಲ. ಹೊಸ ಒಡಂಬಡಿಕೆಯ ಸಭೆಯು ಸ್ಥಾಪಿಸಲ್ಪಟ್ಟಿತು. ಶತಮಾನಗಳ ನಂತರ ಹೊಸ ಒಡಂಬಡಿಕೆಯ ಕ್ರಮದಿಂದ ದೂರ ಹೋಗುವುದು ಸಂಭವಿಸಿದಂತೆ ಸಭಾ ಪಂಗಡಗಳು (denominations) ರೂಪಿಸಲ್ಪಟ್ಟವು. ಹೊಸ ಒಡಂಬಡಿಕೆಯ ವರ್ಣ ಚಿತ್ರವು ಜನರು ಯಾವುದೇ ಸಭಾಪಂಗಡಗಳು ಅಸ್ತಿತ್ವಕ್ಕೆ ಬರುವ ಬಹಳ ಹಿಂದೆಯೇ ಜನರು ಕ್ರೈಸ್ತರಾಗುವುದು, ಜೀವಿಸುವುದು

ಹಾಗೂ ಕ್ರಿಸ್ತನ ದೇಹದಂತೆ ಆರಾಧಿಸುವುದು ಆಗಿದೆ.

ವಿಶಿಷ್ಟವಾದ ಸಭೆಯ ಬಗ್ಗೆ ನೀವು ಯೋಚಿಸುವಾಗ, "ಯಾವಾಗ ಅದರ ನಿಜವಾದ ಆರಂಭವಾಗಿದೆ?" ಎಂದು ಪ್ರಶ್ನಿಸಿರಿ, ನಮ್ಮ ಕರ್ತನ ಪುನರುತ್ಥಾನದ ನಂತರ ಮೊದಲ ಪಂಚಾಶತ್ತಮ ದಿನದ ಹಬ್ಬದ ನಂತರದ ಯಾವುದೇ ಇತರ ಸಮಯಕ್ಕೆ ಹಿಂದೆ ಹೋದರೆ ಅದು ಹೊಸ ಒಡಂಬಡಿಕೆಯ ಸಭೆಯಾಗಿರಲಾರದು.

**ಅದರ ಗುರಿಯನ್ನು ಯೋಚಿಸಿರಿ**

ಹೊಸ ಒಡಂಬಡಿಕೆಯ ಇನ್ನೊಂದು ಗುರುತಿಸುವ ಲಕ್ಷಣವು ಅದರ ಉದ್ದೇಶ ಇಲ್ಲವೇ ಗುರಿ. ಹೊಸ ಒಡಂಬಡಿಕೆಯ ಸಭೆಯಾಗಿರುವದನ್ನು ಬಿಟ್ಟು ಈ ಲೋಕ ದಲ್ಲಿ ಹೊಸ ಒಡಂಬಡಿಕೆಯ ಸಭೆಗೆ ಬೇರೆ ಯಾವುದೇ ಗುರಿಯಿರುವದಿಲ್ಲ. ಅದಕ್ಕೆ ಸರಿಹೊಂದುವ, ಸಮಾನ್ಯ ಲಕ್ಷಣವುಳ್ಳ ಇಲ್ಲವೇ ಅದರಂತೆ ಆಗುವದನ್ನು ಹುಡುಕುವದಿಲ್ಲ. ಅದು ಅದೇ ಆಗಿರಲು ಉದ್ದೇಶಿಸುತ್ತದೆ.

"ಹೊಸ ಒಡಂಬಡಿಕೆಯ ಸಭೆಯು ಯಾವುದು?" ಎಂಬ ಪ್ರಶ್ನೆಯನ್ನು ನಾವು ಯೋಚಿಸುವಾಗ ಒಂದು ನಿಶ್ಚಿತವಾದ ಸಭೆಯ ಬಗ್ಗೆ "ಈ ಲೋಕದಲ್ಲಿ ಅದರ ಗುರಿ ಇಲ್ಲವೇ ಉದ್ದೇಶವು ಏನು?" ಎಂದು ನೀವು ಪ್ರಶ್ನಿಸಬಹುದು. ಹೊಸ ಒಡಂಬಡಿಕೆಯ ಸಭೆಯು ಲೋಕದಲ್ಲಿ ಕ್ರಿಸ್ತನ ದೇಹವಾಗಿತ್ತು. "ಹಾಗೆಯೇ ನಾವೆಲ್ಲರೂ ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ" (ರೋಮಾಪುರ 12:5) ಎಂದು ಪೌಲನು ಹೇಳಿದ್ದಾನೆ. ತನ್ನ ಸಮಾಜದಲ್ಲಿ ಕ್ರಿಸ್ತನ ದೇಹವಾಗಿರಲು ಪ್ರಯತ್ನಿಸದ ಯಾವುದೇ ಸಭೆಯು ಹೊಸ ಒಡಂಬಡಿಕೆಯ ಸಭೆಯಾಗಿರಲಾರದು.

ಒಂದು ಒಳಪಂಗಡವಾಗಿರಲು ಕ್ರಿಸ್ತನು ತನ್ನ ಶಿಷ್ಯರನ್ನು ಕರೆಯಲಿಲ್ಲ. ಜಗತ್ತಿನಲ್ಲಿ ಆತನ ದೇಹವಾಗಿರಲು ತನ್ನ ಶಿಷ್ಯರನ್ನು ಆತನು ಕರೆದನು. ಈ ದೇಹವು ಆತನ ಹೆಸರನ್ನು ಧರಿಸಿಕೊಳ್ಳಬೇಕು. ಆತನ ಹೆಸರಿನಲ್ಲಿ ಒಂದಾಗಿ ಆರಾಧಿಸಬೇಕು ಮತ್ತು ಆತನ ಮಹಿಮೆಗೋಸ್ಕರವಾಗಿ ಲೋಕದಲ್ಲಿ ಆತನ ಕೆಲಸವನ್ನು ಮಾಡಬೇಕು.

**ಅದರ ಆಚರಣೆಗಳನ್ನು ಯೋಚಿಸಿರಿ**

ಹೊಸ ಒಡಂಬಡಿಕೆಯ ಸಭೆಯನ್ನು ಗುರುತಿಸುವ ಇನ್ನೊಂದು ಗುರುತು ಅದರ ಆಚರಣೆಗಳು. ಸಭೆಯು ಹೊಸ ಒಡಂಬಡಿಕೆಯ ಸಭೆಯಾಗಿದೆ ಎಂದು ಹೇಳುವುದು ಒಂದು ಸಂಗತಿ ಆದರೆ ಆ ಸಭೆಯು ತನ್ನ ಆಚರಣೆಗಳೊಂದಿಗೆ ತನ್ನನ್ನು ಗುರುತಿಸಿ ಕೊಂಡಿರುವದನ್ನು ಪ್ರದರ್ಶಿಸುವುದು ಇನ್ನೊಂದು

ಸಂಗತಿಯು, ಯಾರಾದರೂ ತಾನು ಹೊಸ ಒಡಂಬಡಿಕೆಯ ಸಭೆಯಾಗಿದ್ದೇನೆಂದು ಹೇಳಿಕೊಳ್ಳಬಹುದು. ಆದರೆ ಆ ಹೇಳಿಕೆಯ ರುಜುವಾತು ಯಾವಾಗಲೂ ಆಚರಣೆಯಲ್ಲಿರಬೇಕು.

ಹೊಸ ಒಡಂಬಡಿಕೆಯ ಸಭೆಯ ಆಚರಣೆಗಳು ಹೊಸ ಒಡಂಬಡಿಕೆಯಲ್ಲಿ ಸುಲಭವಾಗಿ ಕಂಡುಬರುತ್ತವೆ. ಹೊಸ ಒಡಂಬಡಿಕೆಯ ಸಭೆಯು ಆರಾಧನೆಗಾಗಿ ಪ್ರತೀ ವಾರದ ಮೊದಲನೆಯ ದಿನದಂದು ಕೂಡಿಬಂದು; ಕರ್ತನ ಮರಣದ ಜ್ಞಾಪಕಾರ್ಥವಾಗಿ ರೊಟ್ಟಿ ಮುರಿಯುತ್ತಾರೆ (ಅಪೊಸ್ತಲರ ಕೃತ್ಯಗಳು 20:7; 1 ಕೊರಿಂಥ 11:20; ಇಬ್ರಿಯ 10:25). ಕ್ರೈಸ್ತರು ಒಟ್ಟಾಗಿ ಹಾಡುತ್ತಿದ್ದರು, ತಮ್ಮ ಹೃದಯಗಳಲ್ಲಿ ಸ್ತೋತ್ರವರ್ಪಿಸುತ್ತಿದ್ದರು ಹಾಗೂ ಒಬ್ಬರೊಬ್ಬರ ಭಕ್ತಿ ವೃದ್ಧಿ ಮಾಡುತ್ತಿದ್ದರು. ತಮ್ಮ ಆರಾಧನೆಯಲ್ಲಿ ವಾದ್ಯಗಳೊಂದಿಗಿನ ಸಂಗೀತ ಉಪಯೋಗಿಸುತ್ತಿದ್ದರೆಂದು ಹೊಸ ಒಡಂಬಡಿಕೆ ಯಾವುದೇ ಸೂಚನೆ ಕೊಡುವದಿಲ್ಲ, ಇಲ್ಲವೇ ಹಾಗೆ ಮಾಡಲು ಅದು ಆಜ್ಞಾಪಿಸಲಿಲ್ಲ (ಎಫೆಸ 5:19; ಕೊಲೊಸ್ಸೆ 3:16) ದೇವರ ಕಾರ್ಯವನ್ನು ಮುಂದುವರಿಸಲು ಮತ್ತು ಬಡವರಿಗೆ ಸಹಾಯ ಮಾಡಲು ಪ್ರತೀ ವಾರದ ಮೊದಲನೆಯ ದಿನದಂದು ತಮ್ಮ ಭೌತದ್ರವ್ಯದ ಸಮೃದ್ಧಿಯಿಂದ ಕೊಡುತ್ತಿದ್ದರು (1 ಕೋರಿಂಥ 16:1, 2). ಅವರು ಒಂದಾಗಿ ಪ್ರಾರ್ಥಿಸಿದರು ಮತ್ತು ಪ್ರೇರಿತ ಜನರಿಂದ ಪ್ರಕಟಿಸಲ್ಪಟ್ಟ ದೇವರ ಚಿತ್ತವನ್ನು ಯೋಚಿಸಿದರು (ಅಪೊಸ್ತಲರ ಕೃತ್ಯಗಳು 2:42). (ಪುಟ 258ರಿಂದ 262ವರಗೆ ನೋಡಿ.) ಆರಾಧನೆಯಲ್ಲಿ ಮೂರ್ತಿಗಳನ್ನು ಪೂಜಿಸುವ, ಕ್ಯಾಂಡಲ್ಸ ಇಲ್ಲವೇ ಧೂಪವನ್ನು ಉಪಯೋಗಿಸುವ ಆಚರಣೆಗಳು ಹೊಸ ಒಡಂಬಡಿಕೆಯ ಸಭೆಯ ಭಾಗಗಳಾಗಿರಲಿಲ್ಲ. ಹಾಗೆ ಮಾಡಲು ಅಧಿಕಾರವಿರಲಿಲ್ಲ. ಯೇಸು ಒಬ್ಬನೇ ಸಭೆಯ ಶಿರಸ್ಸು ಯೆಂದು ಆತನ ಕಡೆಗೆ ನೋಡುತ್ತಾ ಹೊಸ ಒಡಂಬಡಿಕೆಯ ಪ್ರತಿಯೊಂದು ಸಭೆಯು ಮೇಲ್ವಿಚಾರಕರಿಂದ ಇಲ್ಲವೇ ಹಿರಿಯರಿಂದ ನಡಿಸಲ್ಪಡುತ್ತದೆ (1 ತಿಮೊಥೆ 3:1-7). ಡೀಕನರು (1 ತಿಮೊಥೆ 3:8-11) ಮತ್ತು ಸುವಾರ್ತಿಕರು (2 ತಿಮೊಥೆ 4:1, 2) ಹಿರಿಯರ ಮೇಲ್ವಿಚಾರಣೆಯಲ್ಲಿ ಸೇವೆ ಮಾಡಿದರು.

ಹೊಸ ಒಡಂಬಡಿಕೆಯ ಸಭೆಯನ್ನು ಗುರುತಿಸಲು ಹೊಸ ಒಡಂಬಡಿಕೆಯ ಸಭೆಯ ವಿಶಿಷ್ಟವಾದ ಆಚರಣೆಗಳ ಪಟ್ಟಿಮಾಡಿ, ಈ ಪಟ್ಟಿಯನ್ನು ನಮ್ಮ ಸುತ್ತಲೂ ನೋಡುವ ಸಭೆಗಳೊಂದಿಗೆ ಹೋಲಿಸತಕ್ಕದ್ದು. ನಿಜವಾದ ಹೊಂದಾಣಿಕೆಯನ್ನು ಕಂಡುಕೊಳ್ಳುವಾಗ, ಹೊಸ ಒಡಂಬಡಿಕೆಯ ವಿಧಾನವನ್ನು ಅನುಸರಿಸುವ ಸಭೆಯನ್ನು ಕಂಡುಕೊಳ್ಳುವಾಗ, ಹೊಸ ಒಡಂಬಡಿಕೆಯ ಸಭೆಯನ್ನು, ಕರ್ತನ ಸಭೆಯನ್ನು ಕಂಡುಕೊಳ್ಳತ್ತೇವೆ.

**ಅದರ ನಾಮಾಂಕಿತವನ್ನು ಯೋಚಿಸಿರಿ**

ಹೊಸ ಒಡಂಬಡಿಕೆಯ ಸಭೆಯನ್ನು ಗುರುತಿಸುವ ಇನ್ನೊಂದು ಗುರುತು ಅದರ ನಾಮಾಂಕಿತಗಳು. ಬೈಬಲಿನಲ್ಲಿ ಹೊಸ ಒಡಂಬಡಿಕೆಯ ಸಭೆಗೆ ಉಪಯೋಗಿಸಿದ ವಿವರಣಾತ್ಮಕ ಮಾತುಗಳು ಅದನ್ನು ಸಭಾಪಂಗಡಗಳಿಂದ (denominations) ಭಿನ್ನವಾಗಿಡುತ್ತದೆ.

ಹೊಸ ಒಡಂಬಡಿಕೆಯಲ್ಲಿ ಹೊಸ ಒಡಂಬಡಿಕೆಯ ಸಭೆಯು, "ಕ್ರಿಸ್ತನ ದೇಹ"ದಂತೆ (ಎಫೆಸ 4:12), "ದೇವರ ಸಭೆ"ಯಂತೆ (1 ಕೊರಿಂಥ 1:2), "ಕ್ರಿಸ್ತನ ಸಭೆ" ಯಂತೆ (ರೋಮಾಪುರ 16:16), "ಚೊಚ್ಚಲು ಮಕ್ಕಳ ಸಭೆ" ಯಂತೆ (ಇಬ್ರಿಯ 12:23), "ಪರಲೋಕ ರಾಜ್ಯದಂತೆ" (ಮತ್ತಾಯ 16:19), ಹಾಗೂ ಸರಳವಾಗಿ "ಸಭೆ"ಯಂತೆ (ಎಫೆಸ 1:22) ಉಲ್ಲೇಖಿಸಲ್ಪಟ್ಟಿದೆ. ಇವು ಹೆಸರುಗಳಿಗಿಂತ ಹೆಚ್ಚಾಗಿ ವರ್ಣನೆಗಳಾಗಿವೆ.

ಹೊಸ ಒಡಂಬಡಿಕೆಯಲ್ಲಿ ಕಂಡು ಬಾರದೆ ಇರುವ ಮಾತಿನಿಂದ ಇಲ್ಲವೇ ಹೆಸರಿನಿಂದ ತಿಳಿಯಲ್ಪಡುವ ಸಭೆಯ ಬಗ್ಗೆ ನೀವು ಯೋಚಿಸುವುದಾದರೆ ಏನಾಗುತ್ತದೆ? ಇದು ಸ್ವೀಕಾರ ಯೋಗ್ಯವಾದದ್ದಲ್ಲವೆಂದು ನಾವು ನಿಶ್ಚಿತವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಮೊದಲನೆಯದು, ಈ ಸಭೆಯು ಹೊಸ ಒಡಂಬಡಿಕೆಯ ಸಭೆಯಾಗಿದ್ದರೆ ಹೊಸ ಒಡಂಬಡಿಕೆಗೆ ಪರಿಚಯವಿಲ್ಲದ ಹೆಸರನ್ನು ತನಗಾಗಿ ಯಾಕೆ ಉಪಯಗಿಸಿಕೊಳ್ಳಬೇಕು? ಎರಡನೆಯದು, ಈ ಸಭೆಯು ಹೊಸ ಒಡಂಬಡಿಕೆಯ ಸಭೆಯಾಗಿದ್ದರೆ, ಅದು ಹೊಸ ಒಡಂಬಡಿಕೆಯ ಸಭೆ ಎಂದು ಎಲ್ಲರಿಗೂ ತೋರಿಸುವಂತೆ ಸಭೆಗಾಗಿ ಹೊಸ ಒಡಂಬಡಿಕೆಯ ಮಾತನ್ನು ಯಾಕೆ ಉಪಯೋಗಿಸಲಾರದು? ಮೂರನೆಯದಾಗಿ, ಹೊಸ ಒಡಂಬಡಿಕೆಗೆ ಪರಿಚಯವಿಲ್ಲದ ಹೆಸರುಗಳನ್ನು ಅದರ ಬಗ್ಗೆ ಯೋಚಿಸದೇ. ಉಪಯೋಗಿಸುವುದು ಹೊಸ ಒಡಂಬಡಿಕೆಯ ಸಭೆಗೆ ಸಾಧ್ಯತೆಯಿದೆ. ನಿಶ್ಚಿಯವಾಗಿಯೂ ಇದನ್ನು ಅವರ ಗಮನಕ್ಕೆ ತರುವಾಗ, ಹೊಸ ಒಡಂಬಡಿಕೆಯ ಸಭೆಯನ್ನು ಬಿಟ್ಟು ಬೇರಾವುದೋ ಆಗಿರುವದೆಂದು ಯಾರೂ ತಪ್ಪಾಗಿ ತಿಳಿಯದಂತೆ ಹೊಸ ಒಡಂಬಡಿಕೆಯ ಹೆಸರುಗಳಿಗೆ ಅವರು ಸಂತೋಷದಿಂದ ಬದಲಾಯಿಸುವರು.

ಒಂದು ಸಭೆಯು ಹೊಸ ಒಡಂಬಡಿಕೆಯ ಸಭೆಯಾಗಿರಲು ಬಯಸಿದರೆ ಹೊಸ ಒಡಂಬಿಕೆಯ ಸಭೆಯ ವೈಶಿಷ್ಟಗಳನ್ನು ಬೆಳಿಸಿಕೊಳ್ಳುವುದು ಮತ್ತು ಹೊಸ ಒಡಂಬಡಿಕೆಯ ಸಭೆಯೆಂದು ಪ್ರತಿಯೊಬ್ಬರೂ ತಿಳಿಯಬೇಕೆಂದು ಬಯಸಿದರೆ ಹೊಸ ಒಡಂಬಡಿಕೆಯ ಸಭೆಗಾಗಿ ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಟ್ಟ ಹೆಸರುಗಳನ್ನು ಮಾತ್ರವೇ ಅನ್ವಯಿಸಿಕೊಳ್ಳತಕ್ಕದ್ದು.

# ಮುಕ್ತಾಯ

ಹೊಸ ಒಡಂಬಡಿಕೆಯ ಸಭೆಯ ಪರಿಶುದ್ಧಾತ್ಮನ ವರ್ಣ ಚಿತ್ರವು ಎಲ್ಲಾ ಸಮಯಗಳಿಗಾಗಿ ಇತರ ಧಾರ್ಮಿಕ ಸಂಘಟನೆಗಳಿಗೆ ಭಿನ್ನವಾಗಿರುವ ಮೂರು ಸ್ಪಷ್ಟವಾದ ಗುಣಲಕ್ಷಣಗಳನ್ನು ಪ್ರಕಟಿಸುವುದು. ಮೊದಲನೆಯದು, ಆತನ ಸಭೆಯು ಆತನ ವಾಕ್ಯಕ್ಕೆ ವಿಧೇಯವಾಗಿರುವುದು ಹಾಗೂ ಆತನ ಪ್ರೇರಿತ ವಾಕ್ಯದಲ್ಲಿ ದೃಢವಾಗಿ ಇರುವ ಜನರ ಗುಂಪಾಗಿದೆ. ಎರಡನೆಯದು, ಆತನ ಸಭೆಯು ಪ್ರತಿಯೊಬ್ಬ ಸದಸ್ಯರಿಗಾಗಿ ಅನುಕಂಪದಿಂದಲೂ ಪ್ರಾಪಂಚಿಕ ಚಿಂತನೆ ನಿಧಿಗಳಿಗಿಂತ ಹೆಚ್ಚು ಕೊರತೆಯುಳ್ಳ ಸದಸ್ಯರನ್ನು ವಿಚಾರಿಸುವ ಪ್ರೀತಿಯುಳ್ಳ ಜೋಪಾಸನೆಯಿಂದ ಮಹತ್ವವುಳ್ಳ ಸಭೆಯು ತುಂಬಿರುತ್ತದೆ. ಮೂರನೆಯದು, ಸುವಾರ್ತೆಯ ಮುಖಾಂತರ ಕ್ರಿಸ್ತನ ಸಭೆಯನ್ನು ಪ್ರವೇಶಿಸುವ ಪ್ರತಿಯೊಬ್ಬ ವ್ಯಕ್ತಿಯು ಕ್ರಿಸ್ತನೊಂದಿಗೂ ಇತರ ಎಲ್ಲಾ ಸದಸ್ಯರೊಂದಿಗೂ ಪರಿಶುದ್ಧಾತ್ಮನಿಂದ ಒಂದಾಗಿ ಮಾಡಲ್ಪಡುತ್ತಾರೆ. ಪ್ರೀತಿಯಿಂದಲೂ ಕ್ರಿಸ್ತನ ವಾಕ್ಯಕ್ಕೆ ಅನುದಿನದ ವಿಧೇಯತೆಯಿಂದಲೂ ಆ ಐಕ್ಯತೆಯನ್ನು ಕಾಪಾಡಿಕೊಂಡು ಹೋಗುತ್ತಾರೆ. ಒಂದೇ ಹೃದಯ ಮತ್ತು ಜೀವದೊಂದಿಗೆ ಒಂದೇ ಕುಟುಂಬದಂತೆ ಸಭೆಯು ಚಿತ್ರೀಕರಿಸಲ್ಪಟ್ಟಿದೆ.

ಹಾಗಾದರೆ ನಾವು ಇಂದು ಕ್ರಿಸ್ತನ ಸಭೆಯಾಗಿರುವುದು ಹೇಗೆ? ಎರಡು ಪದಗಳು ವಿಧಾನವನ್ನು ಸೂಚಿಸುತ್ತವೆ: "ಡುಪ್ಲಿಕೇಟ್" ಹಾಗೂ "ಡೆಡಿಕೇಟ್" ("ನಕಲು ಪ್ರತಿ" ಹಾಗೂ "ಸಮರ್ಪಿಸು"). ಈ ಪಾಠದಲ್ಲಿ ಕಂಡುಬರುವ ಕ್ರಿಸ್ತನ ಅನುಯಾಯಿ ಆಗುವ ಮಾರ್ಗವನ್ನು ನಕಲು ಪ್ರತಿಮಾಡಿಕೊಳ್ಳೋಣ. ಈ ಜನರು ಪೇತ್ರನಿಂದ ಪ್ರಸಂಗಿಸಲ್ಪಡುವಾಗ ಕ್ರಿಸ್ತನ ವಾಕ್ಯವನ್ನು ಕೇಳಿದರು ಹಾಗೂ "ನಾವೇನು ಮಾಡತಕ್ಕದ್ದು?" ಎಂದು ಕೇಳಿದರು. "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿ ಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ; ..." (ಅಪೊಸ್ತಲರ ಕೃತ್ಯಗಳು 2:38) ಎಂದು ಪೇತ್ರನು ಅವರಿಗೆ ಹೇಳಿದನು. ವಾಕ್ಯದಿಂದ ಅವರಲ್ಲಿ ನೆಡಲ್ಪಟ್ಟ ವಿಶ್ವಾಸದ ಮುಖಾಂತರವಾಗಿ ಅವರು ಮಾನಸಾಂತರ ಪಟ್ಟರು; ತಮ್ಮ ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಮಾಡಿಸಿಕೊಂಡರು. ಕರ್ತನು ತನ್ನ ಸಭೆಗೆ ಅವರನ್ನು ಸೇರಿಸಿದನು. ಇದು ಜನರನ್ನು ತನ್ನವರನ್ನಾಗಿ ಮಾಡಿಕೊಳ್ಳುವ ಕ್ರಿಸ್ತನ ವಿಧಾನವಾಗಿದೆ. ಯಾವನಾದರೂ ಇಂದು ಈ ಮಾರ್ಗವನ್ನು ಅನುಸರಿಸಿದರೆ, ಅವರಿಗೆ ಮಾಡಿದ್ದನ್ನು ಕ್ರಿಸ್ತನು ಅವನಿಗೂ ಮಾಡುವನು. ಅವರನ್ನು ಆತನು ಪ್ರೀತಿಸಿದಂತೆ ನಮ್ಮಲ್ಲಿ ಪ್ರತಿಯೊಬ್ಬರನ್ನೂ ಆತನು ಪ್ರೀತಿಸುವನು; ಅವರಿಗಾಗಿ ಆತನು ಮರಣ ಹೊಂದಿದಂತೆಯೇ ಆತನು ನಮಗಾಗಿಯೂ ಸಹ ಮರಣ ಹೊಂದಿದನು.

ಕ್ರಿಸ್ತನ ವಾಕ್ಯಕ್ಕೆ ವಿಧೇಯರಾಗೋಣ ಮತ್ತು ಆತನ ಸಭೆಯಂತೆ ಜೀವಿಸಲಿಕ್ಕೆ ನಮ್ಮನ್ನು ಸಮರ್ಪಿಸಿಕೊಳ್ಳೋಣ ಅಪೊಸ್ತಲರ ಕೃತ್ಯಗಳು 2ರಲ್ಲಿ ವರ್ಣಿಸಿದಂತೆ, ಕ್ರಿಸ್ತನ ವಾಕ್ಯವನ್ನು ಹಿಡಿದು ಕೊಳ್ಳುವದರಿಂದ, ಕ್ರಿಸ್ತನ ಹೃದಯದೊಂದಿಗೆ ಜೀವಿಸುವದರಿಂದ ಮತ್ತು ಕ್ರಿಸ್ತನಲ್ಲಿ ತನ್ನ ಸಭೆಗೆ ಕೊಟ್ಟ ಪರಿಶುದ್ಧಾತ್ಮನ ಐಕ್ಯತೆಯನ್ನು ಕಾಪಾಡುವದರಿಂದ ಇದು ಮಾಡಲ್ಪಡಬೇಕು.

ಕ್ರಿಸ್ತನ ಸಭೆಯು ಹೇಗೆ ಕಾಣುತ್ತದೆಯೆಂದು ಈಗ ನೀವು ತಿಳಿದಿರುವದರಿಂದ, ಕ್ರಿಸ್ತನ ಸಭೆಯಾಗಲು ನಾವು ತೀರ್ಮಾನ ಮಾಡೋಣ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. "ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ... ನಿರತರಾಗಿದ್ದರು" (ಅಪೊಸ್ತಲರ ಕೃತ್ಯಗಳು 2:42) ಎಂಬ ಮಾತುಗಳ ಅರ್ಥವನ್ನು ಚರ್ಚಿಸಿರಿ. ಇಂದು ಈ ಮಾತುಗಳ ಅರ್ಥ ನಮಗೇನು ಆಗುತ್ತದೆ?
2. ಯೆರೂಸಲೇಮಿನ ಸಭೆಗಿದ್ದ ಐಕ್ಯತೆಯ ವಿಧಾನವನ್ನು ವಿವರಿಸಿರಿ.
3. ಕ್ರಿಸ್ತನ ಸಭೆಯು ಇಂದು ಹೇಗೆ ಕಾಣಬೇಕು?
4. ಹೊಸ ಒಡಂಬಡಿಕೆಯ ಸಭೆಯು ಯಾವುದಾಗಿದೆಯೆಂದು ತೀರ್ಮಾನಿಸುವುದು ದೀರ್ಘ ಪರಿಣಾಮದ ತೀರ್ಮಾನವಾಗಿರುವದು ಹೇಗೆ?
5. ಹೊಸ ಒಡಂಬಡಿಕೆಯ ಸಭೆಯು ಅಪೊಸ್ತಲರ ಕೃತ್ಯಗಳು 2ರಲ್ಲಿ ಪಂಚಾಶತ್ತಮ ದಿನದಂದು ಪ್ರಾರಂಭವಾಯಿತೆಂದು ತೋರಿಸುವ ಬೈಬಲ್ ವಚನಗಳ ಪಟ್ಟಿ ಮಾಡಿರಿ.
6. ಸಭಾಪಂಗಡಗಳು (denominations) ಯಾವಾಗ ಉದಯವಾದವು?
7. ಕ್ರಿಸ್ತನ ದೇಹವನ್ನು ರಚಿಸುವವರು ಯಾರು - ವೈಯಕ್ತಿಕ ಕ್ರೈಸ್ತರೋ ಇಲ್ಲವೇ ಸಭಾಪಂಗಡಗಳಾಗಿರುವ (denominational) ಸಭೆಗಳೋ? (1 ಕೊರಿಂಥ 12:24 ನೋಡಿರಿ).
8. ಹೊಸ ಒಡಂಬಡಿಕೆಯಲ್ಲಿಯ ಸಭೆಯು ಅಂಕಿತ ನಾಮ ಹೊಂದಿಕೊಂಡ ರೀತಿಯಲ್ಲಿ ಸಭೆಯು ಯಾಕೆ ತನ್ನ ಅಂಕಿತ ನಾಮವನ್ನು ಹೊಂದಿಕೊಳ್ಳಬೇಕು?
9. ಇಂದಿನ ಸಭೆಗಳು ಹೊಸ ಒಡಂಬಡಿಕೆಯ ಸಭೆಯ ಆಚರಣೆಗಳನ್ನು ಅನುಸರಿಸ ಬೇಕೋ?

## ಪದ ಸಹಾಯಗಳು

ಆತನಲ್ಲಿ ನೆಲೆಗೊಳ್ಳುವುದು - ಪ್ರೀತಿಸುವುದು, ಅಧ್ಯಯನ ಮಾಡುವುದು ಹಾಗೂ ಯೇಸುವಿನ ಬೋಧನೆಗಳಿಗೆ ವಿಧೇಯರಾಗುವುದು (ಯೋಹಾನ 8:30-32).

ರೊಟ್ಟಿ ಮುರಿಯುವುದು - ಕರ್ತನ ಭೋಜನ ಸ್ವೀಕರಿಸುವುದು (ಅಪೊಸ್ತಲರ ಕೃತ್ಯಗಳು 2:42; 20:7 ನೋಡಿರಿ).

ಪರಿಚಾರಕರು - ಸಭೆಯಲ್ಲಿ ಸೇವೆಮಾಡಲು ಆರಿಸಿಕೊಂಡ ಅರ್ಹತೆಯುಳ್ಳ ಪುರುಷರು (1 ತಿಮೊಥೆ 3:8-13). ಅವರು ಹಿರಿಯರ ಕೈಕೆಳಗೆ ಸೇವೆ ಮಾಡುವರು (ಫಿಲಿಪ್ಪಿ 1:1; ಅಪೊಸ್ತಲರ ಕೃತ್ಯಗಳು 20:28).

ಹಿರಿಯರು - ಪ್ರೌಢಾವಸ್ಥೆಗೇರಿದ ಕ್ರೈಸ್ತ ಪುರುಷರು ಸ್ಥಳಿಕ ಸಭೆಗಳ ಮೇಲೆ ಮೇಲ್ವಿಚಾರಣೆ ಮಾಡಲು ಆಯ್ಕೆ ಮಾಡಲ್ಪಟ್ಟರು (1 ತಿಮೊಥೆ 3:1-7).

ವಾದ್ಯ ಸಂಗೀತ - ಗಾಳಿ, ತಂತಿ, ಹಿತ್ತಾಳೆಗಳಂಥವುಗಳಿಂದ ಮನುಷ್ಯರು ಮಾಡಿದ ಉಪಕರಣದೊಂದಿಗೆ, ಈ ಬೋರ್ಡ್‌ಗಳೊಂದಿಗೆ ಇಲ್ಲವೇ ಡ್ರಮ್ಸಗಳೊಂದಿಗೆ ಹಾಡುಗಳು ಹಾಡಲ್ಪಡುತ್ತವೆ. ಅಂಥ ವಾದ್ಯ ಸಂಗೀತವು ಸಭೆಯ ಆರಾಧನೆಗೆ ಸಂಬಂಧಿಸಿ ಹೊಸ ಒಡಂಬಡಿಕೆಯಲ್ಲಿ ಹೇಳಲ್ಪಟ್ಟಿಲ್ಲ. ಹಾಡುವಿಕೆಯು ನಮ್ಮ ಬಹಿರಂಗ ಆರಾಧನೆಯ ಭಾಗವಾಗಿರಬೇಕೆಂದು ದೇವರು ಬಯಸುತ್ತಾನೆ (ಇಬ್ರಿಯ 2:12ಬಿ; ಎಫೆಸ 5:19; ಕೊಲೊಸ್ಸೆ 3:16). ವ್ಯಕ್ತಿಗತ ಧ್ಯಾನಗಳಲ್ಲಿ ಹಾಡುವಿಕೆಯು ಯಾಕೋಬ 5:13ರಲ್ಲಿ ಪ್ರೋತ್ಸಾಹಿಸಲ್ಪಟ್ಟಿದೆ.

ಪ್ರೊಟೆಸ್ಟಂಟ್ - ಪ್ರೊಟೆಸ್ಟಂಟ್ ರಿಫೊರ್ಮೇಶನ್‌ದ ತತ್ವಗಳ ಮೇಲೆ ಅವಲಂಬಿಸಿದ ವಿಶ್ವಾಸ ಮತ್ತು ಆಚರಣೆಗಳಿರುವ ಮಾನವ ನಿರ್ಮಿತ ಧಾರ್ಮಿಕ ಗುಂಪುಗಳಿಗೆ ಈ ಹೆಸರನ್ನು ಕೊಡಲ್ಪಟ್ಟಿದೆ. ಈ ಚಳುವಳಿಯ ನಾಯಕರು ಕೆಲವು ಕಥೋಲಿಕ ಆಚರಣೆಗಳ (ಪೋಪ ಮತ್ತು ಪ್ರೀಸ್ಟರ ಅಧಿಕಾರವನ್ನು ಗುರುತಿಸುವಂಥ) ವಿರುದ್ಧ "ವಿರೋಧಿಸಿದರು." ಈ ಚಳುವಳಿಯು ಕೆಲವು ತತ್ವಗಳನ್ನು ತಿರಸ್ಕರಿಸಿದೆ. ಹೊಸ ಒಡಂಬಡಿಕೆಯ ಸಭೆಯು ದೇವರ ವಾಕ್ಯದ ಮೇಲೆ ಅವಲಂಬಿಸಿರತಕ್ಕದ್ದು. ಇತರರು ಬೋಧಿಸಿದ್ದಕ್ಕೆ ಪ್ರತಿಕ್ರಿಯೆಯ ಮೇಲೆ ಅಲ್ಲ.

---

ಟಿಪ್ಪಣಿ

[1]ಕರ್ತನ ಭೋಜನವು ಎಷ್ಟು ಸಲ ಆಚರಿಸಲ್ಪಡುತ್ತಿತ್ತೆಂದು ಲೂಕನಿಂದ ಈ ವಾಕ್ಯ ಭಾಗದಲ್ಲಿ ಚರ್ಚಿಸಲ್ಪಟ್ಟಿಲ್ಲ. ಆದರೆ ಯೇಸು ಪುನರುತ್ಥಾನವಾದ ದಿನ ಅಂದರೆ ವಾರದ ಪ್ರತೀ ಮೊದಲನೆಯ ದಿನ ಸಭೆಯು ಭೋಜನದಲ್ಲಿ ಭಾಗವಹಿಸಿತೆಂದು ಅಪೊಸ್ತಲರ ಕೃತ್ಯಗಳು 20:7ರಲ್ಲಿ ಅವನು ಸೂಚಿಸಿದ್ದಾನೆ.

13

# ದೇವರ ಜನರಿಗಾಗಿ ವಿಶೇಷ ಪದಗಳು

ಬೈಬಲ್ ವಿವರಣೆಯನ್ನು ಅವಲಂಭಿಸಿ ಪರಲೋಕವನ್ನು ಚಿತ್ರಿಸಿಕೊಳ್ಳಲು ಎಂದಾದರೂ ಪ್ರಯತ್ನಿಸಿರುವಿರೋ? ಅದು ಬಹುಶಃ ನಾವು ನಿರೀಕ್ಷಿಸಿದ್ದಕ್ಕಿಂತಲೂ ಬಹಳ ಭಿನ್ನವಾದದ್ದಾಗಿರಬಹುದು. ನಮ್ಮ ಪರಲೋಕದ ಮನೆಯು ನಿಶ್ಚಯವಾಗಿಯೂ ನಾವು ಕಲ್ಪಿಸುವದಕ್ಕಿಂತಲೂ ದೊಡ್ಡದಾಗಿರುವುದು. ಹಾಗೂ ಅದನ್ನು ವಿವರಿಸಲು ಉಪಯೋಗಿಸಿದ ಭೂಲೋಕದ ಸಂಕೇತಗಳಾದ ಬಂಗಾರ, ಗಾಜು ಮತ್ತು ಮುತ್ತುಗಳಿಗಿಂತಲೂ ಹೆಚ್ಚು ಮಹಿಮೆಯುಳ್ಳದ್ದಾಗಿರುವುದು.

ದೇವರ ಸಂದೇಶವಾಹಕರು "ರಾಜ್ಯದಂತೆ" ಹಾಗೂ "ಸಭೆಯಂತೆ" ವಿವರಿಸುವದನ್ನು ಚಿತ್ರೀಕರಿಸಲು ಪ್ರಯತ್ನಿಸಿದವರಿಗೂ ಇದೇ ಸತ್ಯವಾಗಿರುತ್ತದೆ. ಈ ಎರಡು ಪದಗಳನ್ನು ಅರ್ಥಮಾಡಿಕೊಳ್ಳದೇ ರಕ್ಷಣೆಯ ದೇವರ ಯೋಜನೆಯನ್ನು ಅರ್ಥಮಾಡಿಕೊಳ್ಳುವದಕ್ಕೆ ನಾವು ಬಹುಶಃ ನಿರೀಕ್ಷಿಸಲಾರದಂತೆ ಈ ಪದಗಳು ಬಹಳ ಸಲ ಉಪಯೋಗಿಸಲ್ಪಟ್ಟಿವೆ.

## "ದೇವರ ರಾಜ್ಯ" ಎಂಬ ಪದ

ದೇವರ ರಾಜ್ಯವು ರಾಜ್ಯದಂತೆ ಬೈಬಲಿನ ಎರಡು ಒಡಂಬಡಿಕೆಗಳಲ್ಲಿ ಮುಂತಿಳಿಸಲ್ಪಟ್ಟಿದೆ ಮತ್ತು ಪ್ರಕಟಿಸಲ್ಪಟ್ಟಿದೆ. ಇದು ಹಳೇ ಒಡಂಬಡಿಕೆಯಲ್ಲಿ ಹಾಗೂ ಹೊಸ ಒಡಂಬಡಿಕೆಯ ಮೊದಲಿನ ಭಾಗದಲ್ಲಿ ಪ್ರವಾದನೆಯಾಗಿ ಹೇಳಲ್ಪಟ್ಟಿದೆ (ಮುಂತಿಳಿಸಲ್ಪಟ್ಟಿದೆ) ಮತ್ತು ಅಪೊಸ್ತಲರ ಕೃತ್ಯಗಳು 2ರಲ್ಲಿಯೂ ಹೊಸ ಒಡಂಬಡಿಕೆಯ ಉಳಿದ ಭಾಗಗಳಲ್ಲಿಯೂ ಭೂಲೋಕದಲ್ಲಿಯ ವಾಸ್ತವಿಕತೆಯಾಗಿ ತೋರಿಸಲ್ಪಟ್ಟಿದೆ. ಕೆಲವು ಸಲ ರಾಜ್ಯವು ರೂಪಕಗಳಲ್ಲಿಯೂ ಪ್ರವಾದನೆಯಲ್ಲಿ ಸಂಕೇತಗಳಾಗಿಯೂ ತೋರಿಸಲ್ಪಟ್ಟಿದ್ದರಿಂದ, ಅದರ ವಾಸ್ತವಿಕತೆಯು ಪ್ರವಾದಿಗಳಿಂದ ಕೊಡಲ್ಪಟ್ಟ ಅದರ ಚಿತ್ರಕ್ಕಿಂತ ದೊಡ್ಡದೂ ಹೆಚ್ಚು ಮಹಿಮೆಯುಳ್ಳದ್ದೂ ಆಗಿರುತ್ತದೆ. ಪ್ರವಾದಿಕ ವರ್ಣ ಚಿತ್ರವು ಸರಿಯಾದದ್ದಾಗಿದೆ.

ಆದರೆ ಅಲಂಕಾರಿಕ ಭಾಷೆಯು ಉಪಯೋಗಿಸಲ್ಪಟ್ಟ ಕಾರಣದಿಂದ ರಹಸ್ಯದ ಮುಸುಕನ್ನು ಹೊಂದಿತ್ತು.

"ರಾಜ್ಯ" ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಹಾಗೆಯೇ ಹಳೇ ಒಡಂಬಡಿಕೆಯಲ್ಲಿ ಮಹತ್ವವುಳ್ಳದ್ದಾಗಿದೆ. ಆದರೆ ಹೊಸ ಒಡಂಬಡಿಕೆಯಲ್ಲಿ ಅದರ ಉಪಯೋಗದ ಬಗ್ಗೆ ನಾವು ವಿಶೇಷವಾಗಿ ಆಸಕ್ತರಾಗಿದ್ದೇವೆ. ದೇವರ ರಾಜ್ಯವು ಹೊಸ ಒಡಂಬಡಿಕೆಯಲ್ಲಿ ಹಳೇ ಒಡಂಬಡಿಕೆಯ ಪ್ರವಾದನೆಗಳು ನೆರವೇರುವಿಕೆಯಂತೆ ತೋರಿಸಲ್ಪಟ್ಟಿದೆ. ಬೈಬಲಿನಲ್ಲಿ ಈ ಪದದ ಉಪಯೋಗವನ್ನು ಆಳವಾಗಿ ಅರ್ಥಮಾಡಿಕೊಳ್ಳದಿದ್ದರೆ ಕ್ರಿಸ್ತನ ಸಭೆಯನ್ನು ಒಬ್ಬನು ಅರ್ಥಮಾಡಿ ಕೊಳ್ಳದೇ ಹೋಗುವನು. (ಪುರವಣಿ 4ನ್ನು ನೋಡಿರಿ.)

ಕ್ರಿಸ್ತನು ಸ್ಥಾಪಿಸಿದ ಸಭೆಯೊಂದಿಗಿನ ಸಂಬಂಧದಲ್ಲಿ ಅದು ಉಪಯೋಗಿಸಿದ್ದನ್ನು ಸಂಬಂಧಿಸಿದ ಮೂರು ಕೋನಗಳಿಂದ ಈ ಪದವನ್ನು ಪರೀಕ್ಷಿಸೋಣ.

**ರಾಜಕೀಯ ಉಪಯೋಗ**

ಬೈಬಲಿನಲ್ಲಿ "ರಾಜ್ಯ" ಎಂಬ ಪದವು ಮೊದಲು ರಾಜಕೀಯ ಅರ್ಥದಲ್ಲಿ ಶ್ರೇಷ್ಠ ನಾಯಕನಾಗಿರುವವನ, ಸಾಮ್ರಾಟನ, ಬಲಶಾಲಿ ಅಧಿಕಾರಿಯ ಕ್ಷೇತ್ರಕ್ಕೆ ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ.

"ರಾಜ್ಯ" ಎಂಬ ಪದದ ರಾಜಕೀಯ ಉಪಯೋಗವು ಇಸ್ರಾಯೇಲ ಜನಾಂಗದೊಂದಿಗೆ ಯೆಹೋವನ ಸಂಬಂಧದಿಂದಲೂ ಉದಾಹರಿಸಲ್ಪಟ್ಟಿದೆ. ಇಸ್ರಾಯೇಲ್ಯರ ಚರಿತ್ರೆಯಲ್ಲಿ ಮೊದಲು, ದೇವರು ಅವರ ಅರಸನಾಗಿದ್ದನು. ಅವರ ಧರ್ಮದ ಶಿರಸ್ಸೂ ಹಾಗೆಯೇ ಅವರ ಆಡಳಿತದ ಸರ್ವಶ್ರೇಷ್ಠ ನಾಯಕನೂ ಆಗಿದ್ದನು. ಈ ಸಮಯದಲ್ಲಿ ಇಸ್ರಾಯೇಲಿನ ಆಡಳಿತವು ದೇವರಾಧಿಪತ್ಯ, ಜನಾಂಗವು ದೇವರಾಳುವಿಕೆಯಲ್ಲಿತ್ತು. ಮೋಶೆ ಮತ್ತು ಇಸ್ರಾಯೇಲ್ಯರು, ಕೆಂಪು ಸಮುದ್ರದಲ್ಲಿ ಐಗುಪ್ತರನ್ನು ದೇವರು ನಾಶಪಡಿಸಿದ್ದನ್ನು ನೋಡಿದಾಗ, "ಯೆಹೋವನು ಯುಗ ಯುಗಾಂತರಗಳಲ್ಲಿಯೂ ಆಳುವಾತನು" (ವಿಮೋಚನಕಾಂಡ 15:18) ಎಂದು ಹಾಡಿದರು. ಇಸ್ರಾಯೇಲ್ಯರು ಸೀನಾಯಿ ಬೆಟ್ಟದ ಎದುರಿನಲ್ಲಿ ಬೀಡು ಬಿಟ್ಟಾಗ, "ಹೀಗಿರಲಾಗಿ ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಯನ್ನು ಅನುಸರಿಸಿ ನಡೆದರೆ ನೀವು ಎಲ್ಲಾ ಜನಾಂಗ ಗಳಲ್ಲಿ ನನಗೆ ಸ್ವಕೀಯ ಜನರಾಗಿರುವಿರಿ. ಸಮಸ್ತ ಭೂಮಿಯು ನನ್ನದಷ್ಟೇ. ನೀವು ನನಗೆ ಯಾಜಕರ ರಾಜ್ಯವೂ ಪರಿಶುದ್ಧ ಜನವೂ ಆಗಿರುವಿರಿ" (ವಿಮೋಚನಾ ಕಾಂಡ 19:5, 6ಎ) ಎಂದು ಕರ್ತನಿಂದ ಜನಾಂಗಕ್ಕೆ ಹೇಳಲ್ಪಟ್ಟಿತು. ಅವರು ಜೀವಿಸಬೇಕಾಗಿದ್ದ ನಿಯಮಗಳನ್ನು ಯೆಹೋವನು ಇಸ್ರಾಯೇಲ್ಯರಿಗೆ ಕೊಟ್ಟನು. ಎಲ್ಲಾ ನ್ಯಾಯವೂ, ಧಾರ್ಮಿಕ ಚಟುವಟಿಕೆಗಳೂ ಆತನ ಹೆಸರಿನಲ್ಲಿ

ನಡಿಸಲ್ಪಟ್ಟವು. ಇಸ್ರಾಯೇಲ್ಯರ ಯುದ್ಧಗಳಲ್ಲಿ ಆತನು ಅವರನ್ನು ನಡಿಸಿದನು ಮತ್ತು ಅವರ ಜಯಗಳಿಗೆ ಗೌರವಿಸಲ್ಪಟ್ಟನು (ಅರಣ್ಯಕಾಂಡ 21:34). ಆತನು ಇಸ್ರಾಯೇಲಿನ ಅರಸನಾಗಿದ್ದನು ಮತ್ತು ಇಸ್ರಾಯೇಲ್ ಆತನ ಆಳಿಕೆಯೊಳಗೆ ಒಂದು ಜನಾಂಗವಾಗಿತ್ತು, ಆತನ ರಾಜ್ಯವಾಗಿತ್ತು.

ಸಮುವೇಲನ ದಿನಗಳಲ್ಲಿ, ಇಸ್ರಾಯೇಲ್ ತನ್ನ ಸುತ್ತಲಿನ ಜನಾಂಗದವರಂತಾಗಲು ಅಪೇಕ್ಷಿಸಿ, ದೇವರು ತನಗೆ ಭೂಲೋಕದ ಅರಸನನ್ನು ಕೊಡಬೇಕೆಂದು ಕೇಳಿ ಕೊಂಡಿತು. ದೇವರು ಜನರ ಬೇಡಿಕೆಯನ್ನು ಅನುಗ್ರಹಿಸಿದನು, ಹಾಗೂ ಅವರ ಮೊದಲನೆಯ ಅರಸನಾಗಿ ಸೌಲನನ್ನು ಅವರಿಗೆ ಕೊಟ್ಟನು. ಪದದ ಅತೀ ಕಟ್ಟುನಿಟ್ಟಾದ ಅರ್ಥದಲ್ಲಿ ಇಸ್ರಾಯೇಲಿನ ಅರಸನು ಚಕ್ರಾಧಿಪತಿಯಾಗಿರಲಿಲ್ಲ. ಸಹಾಯಕ ಆಡಳಿತೆಗಾರನಂತೆ ಮತ್ತು ಸೇವಕನಂತೆ ಯೆಹೋವನಿಗೆ ಅವನು ಜವಾಬ್ದಾರನಾಗಿದ್ದನು. ಮೋಶೆಯ ಧರ್ಮಶಾಸ್ತ್ರದಿಂದ ಅವನ ಅಧಿಕಾರವು ಪರಿಮಿತಗೊಳ್ಳಬೇಕಾಗಿತ್ತು. ಅವನು ಯೆಹೋವನ ಸೇವಕನಾಗಿರಬೇಕಾಗಿತ್ತು, ಆತನ ಭೂಲೋಕದ ಪ್ರತಿನಿಧಿಯಾಗಿ ಸೇವೆ ಮಾಡಬೇಕಾಗಿತ್ತು, ಅವನು ವೈರಿಗಳಿಗೆ ವಿರುದ್ಧವಾಗಿ ಇಸ್ರಾಯೇಲನ್ನು ಕಾಪಾಡಬೇಕಾಗಿತ್ತು, ನೀತಿಯಲ್ಲಿ ಇಸ್ರಾಯೇಲನ್ನು ನಡಿಸಬೇಕಾಗಿತ್ತು, ಮತ್ತು ಐಕ್ಯತೆಯಲ್ಲಿ ಜನರನ್ನು ಒಂದು ಗೂಡಿಸಬೇಕಾಗಿತ್ತು.

ಆಗ ರಾಜಕೀಯ ಅರ್ಥದಲ್ಲಿ ರಾಜ್ಯವು ಸಾರ್ವಭೌಮನಾದ ಅರಸನನ್ನು, ಒಂದು ರೀತಿಯ ಆಡಳಿತವನ್ನು, ಆಳ್ವಿಕೆಯನ್ನು ಮತ್ತು ತನ್ನ ಆಡಳಿತವನ್ನು ನಡೆಸಲು ಅರಸನಿಂದ ನೇಮಕ ಮಾಡಲ್ಪಟ್ಟ ಕಾನೂನುಗಳನ್ನು ಒಳಗೊಂಡಿರ ಬೇಕಾಗಿತ್ತು. ರಾಜ್ಯಗಳು ದೊಡ್ಡವುಗಳಾಗಿರಬಹುದು ಇಲ್ಲವೇ ಸಣ್ಣವುಗಳಾಗಿರ ಬಹುದು; ಅವು ಭೂಮಿಯ ಆಡಳಿತವನ್ನು ಇಲ್ಲವೇ ಸಂಚಾರಿ ಜನಾಂಗವನ್ನು ಒಳಗೊಂಡಿರ ಬೇಕಾಗಿತ್ತು. "ರಾಜ್ಯ" ಎಂಬ ಪದದಲ್ಲಿಯ ಮುಖ್ಯ ವಿಚಾರವು ಅರಸನ ಆಳ್ವಿಕೆ ಮತ್ತು ಆ ಅರಸನಿಗೆ ಪ್ರಜೆಗಳ ವಿಧೇಯತೆಯಾಗಿದೆ.

**ಅದರ ಪ್ರವಾದಿಕ ಉಪಯೋಗ**

"ರಾಜ್ಯ" ಎಂಬ ಪದವು ಪರಿಶುದ್ಧ ಬರಹಗಳಲ್ಲಿ ಪ್ರವಾದಿಕ ಉಪ ಯೋಗ ಹೊಂದಿದೆ. ಈ ರಾಜಕೀಯ ಮಾತು ಜಗತ್ತಿನ ಅಂತಿಮ ಯುಗದಲ್ಲಿ, ಕ್ರೈಸ್ತಯುಗದಲ್ಲಿ ದೇವರು ಮಾಡಬೇಕೆಂದು ಉದ್ದೇಶಿಸಿದ ಕಾರ್ಯವನ್ನು ಮುಂತಿಳಿಸಲು ಪರಿಶುದ್ಧಾತ್ಮನಿಂದ ಉಪಯೋಗಿಸಲ್ಪಟ್ಟಿತು.

ಹಳೇ ಒಡಂಬಡಿಕೆಯ ಪ್ರಮುಖ "ರಾಜ್ಯ" ಪ್ರವಾದನೆಯು ದಾನಿಯೇಲ 2ರಲ್ಲಿ ಕಂಡು ಬರುತ್ತದೆ. "ಆ ರಾಜ್ಯ ಕಾಲದಲ್ಲಿ ಪರಲೋಕ ದೇವರು ಒಂದು ರಾಜ್ಯವನ್ನು ಸ್ಥಾಪಿಸುವನು; ಅದು ಎಂದಿಗೂ ಅಳಿಯದು, ಅದರ ಪ್ರಾಬಲ್ಯವು

ಬೇರೆ ಜನಾಂಗಕ್ಕೆ ಕದಲಿಹೋಗದು. ಆ ರಾಜ್ಯಗಳನ್ನೆಲ್ಲಾ ಭಂಗಪಡಿಸಿ ನಿರ್ನಾಮ ಮಾಡಿ ಶಾಶ್ವತವಾಗಿ ನಿಲ್ಲುವುದು" (ದಾನಿಯೇಲ 2:44) ಎಂದು ಬರೆಯಲು ದಾನಿಯೇಲನು ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟನು. ದಾನಿಯೇಲನ ಪ್ರಕಟನೆಯು ಪ್ರವಾದಿಸಲ್ಪಟ್ಟ ರಾಜ್ಯವನ್ನು ಕುರಿತು ಮಹತ್ವದ ಸತ್ಯಗಳನ್ನು ಬೋಧಿಸಿತು. ಮೊದಲನೆಯದಾಗಿ ಅದು ವಿಶೇಷವಾದ ರಾಜ್ಯವಾಗಿರುವುದು, ಇಲ್ಲವೇ ಪರಲೋಕದ ದೇವರಿಂದ ಸ್ಥಾಪಿಸಲ್ಪಟ್ಟ ರಾಜನ ಆಳ್ವಿಕೆಯಾಗಿರುವುದು. ಎರಡನೆಯದು, ಅದು ನಿತ್ಯವಾಗಿರುವ ಇಲ್ಲವೇ ಅಂತ್ಯವಿಲ್ಲದ ರಾಜ್ಯವಾಗಿರುವುದು. ಮೂರನೆಯದು, ಅದು ಬಲದಲ್ಲಿಯೂ ತಾಳಿಕೊಳ್ಳುವದರಲ್ಲಿಯೂ ಲೋಕದ ಎಲ್ಲಾ ಇತರ ರಾಜ್ಯಗಳಿಗಿಂತ ಮೇಲಾಗಿರುವುದು.

ಹೀಗಿದ್ದರೂ, ಈ ದೇವರ ರಾಜ್ಯದ ಬರುವಿಕೆಯನ್ನು ಕುರಿತ ಪ್ರವಾದನೆಗೆ ಸ್ನಾನಿಕನಾದ ಯೋಹಾನನ ಪ್ರಸಂಗದಲ್ಲಿ (ಮತ್ತಾಯ 3:1, 2) ಮತ್ತು ಯೇಸುವಿನ ಪ್ರಸಂಗ ಹಾಗೂ ಬೋಧನೆಯಲ್ಲಿ (ಮತ್ತಾಯ 4:17) ಮಹತ್ವದ ಕೇಂದ್ರ ಸ್ಥಾನವಿತ್ತು. ಸುವಾರ್ತೆಯು ಯೇಸುಕ್ರಿಸ್ತನಿಂದ ದೇವರ ರಾಜ್ಯದ ಸುವಾರ್ತೆಯಂತೆ ಹೇಳಲ್ಪಟ್ಟಿರುವುದು (ಮತ್ತಾಯ 9:35). ಹನ್ನೆರಡು ಜನ ಅಪೊಸ್ತಲರು ಮತ್ತು ಎಪ್ಪತ್ತು ಜನರು (ಲೂಕ 10:1-20) ದೇವರ ರಾಜ್ಯವು ಸಮೀಪಿಸಿದೆ ಎಂದು ಸಾರಲು ಯೇಸುವಿನಿಂದ ಕಳುಹಿಸಲ್ಪಟ್ಟರು (ಮತ್ತಾಯ 10:7; ಲೂಕ 10:9). ಯೇಸುವಿನ ಸಾಮ್ಯಗಳಲ್ಲಿ ಮೂರರಲ್ಲಿ ಒಂದಕ್ಕಿಂತ ಹೆಚ್ಚಿನವುಗಳು ರಾಜ್ಯದ ಬಗೆಗಿನ ಸತ್ಯಗಳನ್ನು ಬಹಿರಂಗ ಪಡಿಸುತ್ತವೆ. ರಾಜ್ಯವು ಬರುವದಕ್ಕಾಗಿ ಪ್ರಾರ್ಥಿಸಬೇಕೆಂದು ಯೇಸು ತನ್ನ ಶಿಷ್ಯರಿಗೆ ಬೋಧಿಸಿದನು (ಮತ್ತಾಯ 6:10).

ಯೋಹಾನನೂ, ಕ್ರಿಸ್ತನೂ ರಾಜ್ಯದ ಬಗ್ಗೆ ಎಷ್ಟು ಸಲ ಬೋಧಿಸಿದರು ಎಂಬುದರ ಮೇಲೆ ಅವಲಂಬಿಸಿ ಹಲವಾರು ಸಂಗತಿಗಳನ್ನು ಕಲಿತುಕೊಳ್ಳಬಹುದು. ಮೊದಲನೆಯದು, ರಾಜ್ಯದ ಬರುವಿಕೆಯು ದೇವರ ಯೋಜನೆಯಲ್ಲಿ ಬಹಳ ಮಹತ್ವದ್ದಾಗಿತ್ತು. ಎರಡನೆಯದು, ರಾಜ್ಯದ ಬರೋಣವು ಹತ್ತಿರವಾಗಿತ್ತು, "ಉದಯವಾಗಿತ್ತು" ಇಲ್ಲವೇ "ಸಮೀಪವಾಗಿತ್ತು." ಮೂರನೆಯದು, ಬರಲಿಕ್ಕಿದ್ದ ರಾಜ್ಯವು ದಾನಿಯೇಲನ ಪ್ರವಾದನೆಯ ಸ್ಪಷ್ಟವಾದ ನೆರವೇರುವಿಕೆಯಾಗಿತ್ತು. ನಾಲ್ಕನೆಯದು, ರಾಜ್ಯದ ಆಗಮನವು ದೇವರ ಕಾರ್ಯವಾಗಿತ್ತು, ಆದರೆ ಮನುಷ್ಯರ ಕಾರ್ಯವಾಗಿರಲಿಲ್ಲ. ಐದನೆಯದು, ಅದು ಬಂದಾಗ, ಪ್ರವೇಶಕ್ಕಾಗಿರುವ ದೇವರ ಶರತ್ತುಗಳನ್ನು ಪೂರೈಸುವ ಜನರು ಮಾತ್ರ ಅದರಲ್ಲಿ ಪ್ರವೇಶಿಸುವರು (ಯೋಹಾನ 3:5).

ಅಪೊಸ್ತಲರ ಕೃತ್ಯಗಳು 2ರಿಂದ ಮುಂದೆ ರಾಜ್ಯವು ಯಾವಾಗಲೂ ವಾಸ್ತವಿಕತೆಯಂತೆ, ಆಗಲೇ ಬಂದಿರುವಂತೆ ಹೇಳಲ್ಪಟ್ಟಿದೆ. "ನಾನು ನಿನಗೆ ನಿಜ

ನಿಜವಾಗಿ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು'' (ಯೋಹಾನ 3:5) ಎಂದು ಯೇಸುವು ನಿಕೊದೇಮನಿಗೆ ಹೇಳಿದನು. ಆದರೆ ಸಮಾರ್ಯದಲ್ಲಿ ಫಿಲಿಪ್ಪನು ಕ್ರಿಸ್ತನನ್ನು ಪ್ರಸಂಗಿಸಿದ್ದರ ಬಗ್ಗೆ, ಲೂಕನು ಹೀಗೆ ಬರೆದನು. "ಆದರೆ ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸುಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಶುಭವರ್ತಮಾನವನ್ನು ಸಾರಲು ಗಂಡಸರೂ ಹೆಂಗಸರೂ ನಂಬಿ ಬಾಪ್ತಿಸ್ಮ ಮಾಡಿಸಿಕೊಂಡರು'' (ಅಪೊಸ್ತಲರ ಕೃತ್ಯಗಳು 8:12). ರಾಜ್ಯವು ಬಂದಿರದಿದ್ದರೆ ಫಿಲಿಪ್ಪನು ಈ ಸಂದೇಶವನ್ನು ಪ್ರಸಂಗಿಸುತ್ತಿರಲಿಲ್ಲ.

"ರಾಜ್ಯ'' ಎಂಬ ಪದದ ಪ್ರವಾದಿಕ ಉಪಯೋಗವು ಜಗತ್ತಿಗಾಗಿ ಆತನ ಚಿತ್ತಕ್ಕೆ ಒಪ್ಪಿಸಿಕೊಟ್ಟವರ ಮೇಲೆ ದೇವರ ಆತ್ಮಿಕ ಆಳ್ವಿಕೆಯನ್ನು ಸಂಬಂಧಿಸಿರುತ್ತದೆ. ಅದು ಆಳ್ವಿಕೆಯನ್ನೂ ಆಡಳಿತಾ ಕ್ಷೇತ್ರವನ್ನೂ ಸಂಬಂಧಿಸಿದೆ - ಆಳ್ವಿಕೆಯು ಜೀವನದ ಮೇಲೆ ದೇವರ ಆತ್ಮಿಕ ಆಳ್ವಿಕೆಯಾಗಿದೆ, ಮತ್ತು ಆಡಳಿತೆಯ ಕ್ಷೇತ್ರವು ದೇವರ ಆಳ್ವಿಕೆಯು ಪ್ರತ್ಯಕ್ಷವಾಗಿರುವ ಆತ್ಮಿಕ ಸ್ಥಳವಾಗಿದೆ. ಕ್ರಿಸ್ತನ ರಾಜ್ಯಾಡಳಿತವು "ಸಭೆ'' ಎಂಬ ಪದದಲ್ಲಿ ಒಳಗೊಂಡಿರುತ್ತದೆ. ಸುವಾರ್ತೆಯನ್ನು ಸ್ವೀಕರಿಸುವದರಿಂದ ಒಬ್ಬನು ಕ್ರಿಸ್ತನ ಚಿತ್ತಕ್ಕೆ ಸಮರ್ಪಿಸಿಕೊಳ್ಳುವಾಗ ಅವನು ಕ್ರಿಸ್ತನ ದೇಹದೊಳಗೆ, ಸಭೆಯೊಳಗೆ ತರಲ್ಪಡುತ್ತಾನೆ; ಮತ್ತು ಸಭೆಯ ಶಿರಸ್ಸಿಗೆ, ಕ್ರಿಸ್ತನಿಗೆ ಒಪ್ಪಿಸಿ ಕೊಟ್ಟ ಅವನು ಜೀವಿಸುವಾಗ ದೇವರ ಭೂಲೋಕದ ರಾಜ್ಯದಲ್ಲಿ ಹಾಗೂ ದೇವರ ಭೂಲೋಕದ ರಾಜ್ಯದಂತೆ ಜೀವಿಸುವನು. ಜನರ ಹೃದಯಗಳ ಮೇಲೆ ಕ್ರಿಸ್ತನ ರಾಜ್ಯಾಡಳಿತ ಸಭೆಯನ್ನು ಸೃಷ್ಟಿಸುತ್ತದೆ. ಹೀಗೆ "ದೇವರ ರಾಜ್ಯ'' ಮತ್ತು "ಕ್ರಿಸ್ತನ ಸಭೆ'' ಎಂಬ ಮಾತುಗಳಿಗೆ ಮತ್ತಾಯ 16:18, 19ರಲ್ಲಿ ಯೇಸು ಪ್ರಕಟಿಸಿದಂತೆ ಒಂದೇ ಅರ್ಥವಿರುವುದು.

**ಅದರ ಇಂದಿನ ದಿನದ ಉಪಯೋಗ**

"ರಾಜ್ಯ'' ಎಂಬ ಪದದ ರಾಜಕೀಯ ಹಿನ್ನೆಲೆ, ಪ್ರವಾದಿಕ ಉಪಯೋಗ, ಹಾಗೂ ಹೊಸ ಒಡಂಬಡಿಕೆಯ ವಾಸ್ತವಿಕತೆಯು ಪದದ ಇಂದಿನ ದಿನದ, ವ್ಯಾವ ಹಾರಿಕ ಉಪಯೋಗದ ಅವಶ್ಯಕತೆಯುಳ್ಳದ್ದಾಗಿದೆ.

ಮೊದಲನೆಯದು, *ಪ್ರವಾದಿಕ ನೆರವೇರುವಿಕೆಯ* ಅರ್ಥದಲ್ಲಿ ಅದು ಉಪಯೋಗಿಸಲ್ಪಡಬೇಕು, ದಾನಿಯೇಲನು ಮಾತಾಡಿದಂಥ ರಾಜ್ಯವು ಬಂದಿರುತ್ತದೆ. ರಾಜ್ಯವು, ಆತ್ಮಿಕ ಕ್ಷೇತ್ರವನ್ನು ಒಳಗೊಂಡಿರುವ ಆಳ್ವಿಕೆಯ ರೂಪದಲ್ಲಿ ದೇವರ ವಿಶೇಷ ಕಾರ್ಯವು ಈಗ ಪ್ರತ್ಯಕ್ಷವಾಗಿದೆ; ದೇವರ ಚಿತ್ತಕ್ಕೆ ತಮ್ಮ ತಲೆಬಾಗಿದವರು ದೇವರ ರಾಜ್ಯಾಡಳಿತದೊಳಗೆ ಬಂದರು. ಬರಲಿಕ್ಕಿದ್ದ ದೇವರ ರಾಜ್ಯದ ಬಗೆಗಿನ ಪ್ರವಾದನೆಗಳು ನೆರವೇರಿಸಲ್ಪಟ್ಟಿರುವವು.

ಎರಡನೆಯದು, "ರಾಜ್ಯ" ಎಂಬ ಪದವನ್ನು *ಇಂದಿನ ದಿನದ ವಾಸ್ತವಿಕತೆಯ* ಅರ್ಥದಲ್ಲಿ ಉಪಯೋಗಿಸಬೇಕು. ದೇವರ ರಾಜ್ಯವು ಇನ್ನು ಮುಂದೆ ಯಾವುದೇ ಒಂದು ದಿನ ಬರಲಿಕ್ಕಿದುದ್ದು ಆಗಿರುವದಿಲ್ಲ. ವಿಧೇಯ, ವಿಶ್ವಾಸ ಮುಖಾಂತರವಾಗಿ ಆತನ ಸಭೆಯೊಳಗೆ ಬಂದವರ ಮೇಲೆ ಕ್ರಿಸ್ತನು ಈಗ ಆಳಿಕೆ ಮಾಡುವನು. ಒಂದು ಅರ್ಥದಲ್ಲಿ ನಮ್ಮ ಪ್ರಾರ್ಥನೆಯು "ರಾಜ್ಯವು ಬರಲಿ" ಎಂಬುದಾಗಿರಬಾರದು. ಆದರೆ, "ನನ್ನ ಜೀವಿತದ ಮೇಲೆ ನೀನು ಆಳಿಕೆ ಮಾಡುವಂತೆ ಮತ್ತು ನಾನು ನಿನ್ನ ರಾಜ್ಯದಲ್ಲಿ ಜೀವಿಸಲಿಕ್ಕಾಗುವಂತೆ ನಿನ್ನ ಚಿತ್ತಕ್ಕೆ ಸಂಪೂರ್ಣವಾಗಿ ಒಪ್ಪಿಸುವೆನು" ಎಂದಿರಬೇಕು.

ಮೂರನೆಯದು, ದೇವರ ಪರಲೋಕದ ಆಳ್ವಿಕೆಯು, ಭೂಲೋಕದ *ಒಂದು ಭಾಗಕ್ಕೆ ಸಂಬಂಧದಲ್ಲಿ ಈ ಪದವು ಉಪಯೋಗಿಸಲ್ಪಡಬೇಕು.* ವಿಶೇಷವಾಗಿ ಆಯ್ದುಕೊಂಡ ದೇವರ ಜನಾಂಗವು, ಸಭೆಯು, ಆತನ ರಾಜ್ಯದ ಭೂಲೋಕದ ಭಾಗವಾಗಿದೆ. ಯೇಸು ಮತ್ತು ಹೊಸ ಒಡಂಬಡಿಕೆಯ ಬರಹಗಾರರು - ಸಭೆಯು ಬಂದಿರುವ ದೇವರ ರಾಜ್ಯವಾಗಿದೆ ಇಲ್ಲವೇ ಕ್ರಿಸ್ತನ ರಾಜ್ಯವಾಗಿದೆ ಎಂದು ತೋರಿಸಿದ್ದಾರೆ. ಅರಸನಿಗೆ ಸಮರ್ಪಿಸುವುದು ನಾಗರಿಕತ್ವವನ್ನೂ ರಾಜ್ಯವನ್ನೂ ಸೃಷ್ಟಿಸುತ್ತದೆ. ವಿಧೇಯ ವಿಶ್ವಾಸಿಗಳ ಈ ಸಮಾಜವನ್ನು ಯೇಸುವು ತನ್ನ ಸಭೆ ಎಂದು ಕರೆದನು (ಮತ್ತಾಯ 16:18, 19).

ನಾಲ್ಕನೆಯದು, ಈ ಪದವನ್ನು ನಾವು *ಆತ್ಮಿಕ ಆಡಳಿತದ* ಸಬಂಧದಲ್ಲಿ ನೋಡಬೇಕು. ನಂಬಿಗಸ್ತ  ಕ್ರೈಸ್ತರು ಇಂದು ಕ್ರಿಸ್ತನ ಆತ್ಮಿಕ ಆಡಳಿತೆಯಲ್ಲಿ ಇದ್ದಾರೆ. ಬರಲಿದ್ದ ನಿತ್ಯತ್ವದಲ್ಲಿ ದೇವರೊಂದಿಗೆ, ಕ್ರಿಸ್ತನೊಂದಿಗೆ, ಮತ್ತು ಪರಿಶುದ್ಧಾತ್ಮನೊಂದಿಗೆ ನಿಕಟವಾದ ಹಾಗೂ ಸಂಪೂರ್ಣವಾದ ಸಂಬಂಧದಲ್ಲಿ ಪ್ರವೇಶಿಸುವ ನಿರೀಕ್ಷೆಯಲ್ಲಿದ್ದಾರೆ. ಈಗ ಸಭೆಯು ರಾಜ್ಯವಾಗಿರುವುದು: ಅದರ ಸದಸ್ಯರು ಬರಲಿದ್ದ ನಿತ್ಯ ರಾಜ್ಯಕ್ಕೆ ಮುನ್ನೋಡುತ್ತಿದ್ದಾರೆ. "ರಾಜ್ಯ" ಎಂಬ ಪದಕ್ಕೆ ಅದರ ಭವಿಷ್ಯದ ಅರ್ಥವಿದೆ. "ನನ್ನನ್ನು ಸ್ವಾಮೀ, ಸ್ವಾಮೀ, ಅನ್ನುವವರೆಲ್ಲರು ಪರಲೋಕದ ರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ ..." (ಮತ್ತಾಯ 7:21) ಎಂದು ಕ್ರಿಸ್ತನು ಹೇಳಿದನು. "ನಾನು ಯಾವ ದುಷ್ಟತ್ವವನ್ನೂ ಮಾಡದಂತೆ ಕರ್ತನು ನನ್ನನ್ನು ಕಾಪಾಡಿ ತನ್ನ ಬಳಿಗೆ ಪರಲೋಕ ರಾಜ್ಯಕ್ಕೆ ಸೇರಿಸುವನು. ಯುಗಯುಗಾಂತರಗಳಲ್ಲಿಯೂ ಆತನಿಗೆ ಸ್ತೋತ್ರ. ಆಮೆನ್" (2 ತಿಮೊಥೆ 4:18) ಎಂದು ಪೌಲನು ಬರೆದಿದ್ದಾನೆ. ಪೌಲನು ದೇವರ ರಾಜ್ಯದಲ್ಲಿದ್ದನು, ಆದರೆ ಪರಲೋಕ ರಾಜ್ಯದಲ್ಲಿ ಪ್ರವೇಶಿಸುವದನ್ನು ಎದುರು ನೋಡಿದನು. ರಾಜ್ಯವನ್ನು ಹಳೇ ಮತ್ತು ಹೊಸ ಒಡಂಬಡಿಕೆಯಲ್ಲಿಯ ಪ್ರವಾದನೆಗಳ ನೆರವೇರುವಿಕೆಯನ್ನು ನೋಡಿದನು. ಇವೆರಡೂ ಕ್ರಿಸ್ತನು ಕಟ್ಟಿದ ಸಭೆಯಲ್ಲಿ ಮತ್ತು ನಿತ್ಯತ್ವಕ್ಕಾಗಿರುವ ವಾಗ್ದಾನದಲ್ಲಿ ಇಂದಿನ ದಿನದ ವಾಸ್ತವಿಕತೆಯಂತೆ ತೋರಿಸಲ್ಪಟ್ಟಿವೆ.

ಹೊಸ ಒಡಂಬಡಿಕೆಯ ಮುಖಾಂತರ ಒಬ್ಬನು ಚಲಿಸುವಾಗ, ಅವನು "ಪರಲೋಕ ರಾಜ್ಯ," "ದೇವರ ರಾಜ್ಯ" ಎಂದಾಗಿರಲೀ ಇಲ್ಲವೇ ರಾಜ್ಯಕ್ಕೆ ಸಂಬಂಧಿಸಿದ ಬೇರೆ ಯಾವುದೇ ಮಾತಾಗಲೀ "ರಾಜ್ಯ" ಎಂಬ ಪದದ ಉಪಯೋಗವು ಕಡಿಮೆಯಾಗುತ್ತಿರುವದನ್ನು ಗಮನಿಸುತ್ತಾನೆ. ರಾಜ್ಯ ಎಂಬುದಕ್ಕೆ ಮತ್ತಾಯನಲ್ಲಿ ನಲ್ವತ್ತೊಂಭತ್ತು ಸಲ, ಮಾರ್ಕನಲ್ಲಿ ಹದಿನೈದು ಸಲ, ಲೂಕನಲ್ಲಿ ಮೂವತ್ತೊಂಭತ್ತು ಸಲ, ಯೋಹಾನನಲ್ಲಿ ಐದು ಸಲ, ಅಪೊಸ್ತಲರ ಕೃತ್ಯಗಳಲ್ಲಿ ಎಂಟುಸಲ, ಪೌಲ ಪತ್ರಿಕೆಗಳಲ್ಲಿ ಹದಿನಾಲ್ಕು ಸಲ, ಸಾಮಾನ್ಯ ಪತ್ರಿಕೆ ಗಳಲ್ಲಿ ಎರಡು ಸಲ, ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಎರಡು ಸಲ, ಪ್ರಕಟನೆ ಗ್ರಂಥದಲ್ಲಿ ಮೂರು ಸಲ ಉಲ್ಲೇಖಗಳಿವೆ. ಹೀಗಿರುವದರಿಂದ "ರಾಜ್ಯ" ಎಂಬ ಪದವು ಮುಂದುವರಿಸಲ್ಪಟ್ಟಿದೆ ಆದರೆ ಹೊಸ ಒಡಂಬಡಿಕೆಯಲ್ಲಿ ಉಪಯೋಗವು ಕಡಿಮೆಯಾಗುತ್ತ ಹೋಗಿದೆ (ಪುರವಣಿ 4ನ್ನು ನೋಡಿರಿ).

"ಪರಲೋಕ ರಾಜ್ಯ" ಎಂಬ ಪದವನ್ನು ಉಪಯೋಗಿಸಿದ ಹೊಸ ಒಡಂಬಡಿಕೆಯ ಬರಹಗಾರನು ಮತ್ತಾಯನು ಮಾತ್ರವೇ. ಮಾರ್ಕ, ಲೂಕ, ಯೋಹಾನರು "ದೇವರ ರಾಜ್ಯ" ಎಂಬುದನ್ನು ಮಾತ್ರ ಉಪಯೋಗಿಸಿದ್ದಾರೆ. "ರಾಜ್ಯ" ಎಂಬ ಪದದ ಉಪಯೋಗವು ಕಡಿಮೆಯಾಗುತ್ತಾ ಬರುವಾಗ, ಒಬ್ಬನು ಅಪೊಸ್ತಲರ ಕೃತ್ಯಗಳಿಗೆ ಬರುವಾಗ "ಸಭೆ" ಎಂಬ ಪದದ ಉಪಯೋಗವು ಹೆಚ್ಚಾಗುತ್ತ ಹೋಗುವದನ್ನು ಕಂಡುಕೊಳ್ಳುವನು. "ರಾಜ್ಯ" ಎಂಬ ಪದಕ್ಕೆ ಬದಲಾಗಿ "ಸಭೆ" ಎಂಬ ಪದವನ್ನು ಪರಿಶುದ್ಧಾತ್ಮನು ಇಟ್ಟನೆಂಬಂತೆ ತೋರುತ್ತದೆ.

## "ಸಭೆ" ಎಂಬ ಪದ

"ಸಭೆ" ಎಂಬ ಪದಕ್ಕೆ ಅದು ಇಡೀ ಹೊಸ ಒಡಂಬಡಿಕೆಯ ಸಂದೇಶಕ್ಕೆ ಪ್ರಮುಖವಾಗಿ ಸಂಬಂಧಿಸಿದ್ದರಿಂದ ವಿಶೇಷ ಮಹತ್ವ ಬಂದಿದೆ. "ಸಭೆ"ಯು ಒಂದು ಪದದ ಇಂಗ್ಲೀಷ್ ಭಾಷಾಂತರವಾಗಿದ್ದು ಗ್ರೀಕ ಹೊಸ ಒಡಂಬಡಿಕೆಯಲ್ಲಿ 114 ಸಲ ಕಂಡು ಬರುತ್ತದೆ. ಹೊಸ ಒಡಂಬಡಿಕೆಯಲ್ಲಿ ಈ ಪದದ ಉಪಯೋ ಗವನ್ನು ಅರ್ಥಮಾಡಿಕೊಳ್ಳದೇ ಒಬ್ಬನು ರಕ್ಷಣೆಯ ಕ್ರಿಸ್ತನ ಮಾರ್ಗವನ್ನು ಅರ್ಥ ಮಾಡಿಕೊಳ್ಳುವದನ್ನು ನಿರೀಕ್ಷಿಸಲಾಗದು ಎಂದು ಹೇಳುವುದು ಬಹುಶಃ ಸರಿಯಾದದ್ದಾಗಿದೆ.

### ಅದರ ಲೌಕಿಕ ಉಪಯೋಗ

ಈ ಪದವು ಮೊದಲನೆಯದಾಗಿ ಸಾಮಾನ್ಯವಾದ ಪದವಾಗಿದ್ದು ಯಾವುದೇ ಒಂದು ಧಾರ್ಮಿಕ ಅರ್ಥವಿಲ್ಲದ ಅನುದಿನದ ಮಾತಾಗಿದೆ.

ಅಪೊಸ್ತಲರ ಕೃತ್ಯಗಳು 19ರಲ್ಲಿ ಎಫೆಸದಲ್ಲಿ ನಡೆದ ದಂಗೆಯೊಂದಿಗೆ ಸಂಬಂಧಿಸಿದ್ದರಲ್ಲಿ ಈ ಪದದ ಉಪಯೋಗವು ಒಂದು ಮಾದರಿಯಾಗಿದೆ. ಕ್ರೈಸ್ತತ್ವವನ್ನು ಕುರಿತ ಗಲಿಬಿಲಿಯು ಬೆಳೆಯಿತು. ಜನರು ಸಮೀಪದ ನಾಟಕ ಶಾಲೆಯೊಳಗೆ ನುಗ್ಗಿದರು. ಗಲಿಬಿಲಿಯು ಹೆಚ್ಚಾಯಿತು. ಅವರು ಕೂಡಿಬಂದದ್ದನ್ನು ಲೇಖಕನಾದ ಲೂಕನು ಹೀಗೆ ಹೇಳಿದ್ದಾನೆ, "*ಸಭೆಯು* ಗಲಿಬಿಲಿಯಾಯಿತು, ಮತ್ತು ಹೆಚ್ಚಾದ ಜನರಿಗೆ, ತಾವು *ಕೂಡಿ ಬಂದಿದ್ದ* ಕಾರಣವು ಗೊತ್ತಿರಲಿಲ್ಲ. ಕೆಲವರು ಒಂದು ಬಗೆಯಾಗಿ ಮತ್ತೆ ಕೆಲವರು ಇನ್ನೊಂದು ಬಗೆಯಾಗಿ ಕೂಗುತ್ತಿದ್ದರು" (ಅಪೊಸ್ತಲರ ಕೃತ್ಯಗಳು 19:32; ಒತ್ತಿ ಹೇಳಿದ್ದು ನನ್ನದು).

ಈ ವಚನದಲ್ಲಿ ಸಭೆಗಾಗಿ ಲೂಕನು ಉಪಯೋಗಿಸಿದ ಪದ *ಎಕ್ಲೇಸಿಯ.* ಈ ಪದವು ಇಂಗ್ಲೀಷ್‌ನಲ್ಲಿ ನಮ್ಮ ಪದ "church," ಸಭೆ ಎಂದು ಭಾಷಾಂತರಿಸಲ್ಪಟ್ಟಿದೆ. ಅಂತಿಮವಾಗಿ ಪಟ್ಟಣದ ಯಜಮಾನನು ಹೀಗೆ ಹೇಳಿದನು.

> ಏನಾದರೂ ಹೆಚ್ಚು ವಿಚಾರಣೆ ಬೇಕಾದರೆ ಅದು ನ್ಯಾಯವಾಗಿ *ನೆರೆದ ಸಭೆಯಲ್ಲಿ* ತೀರ್ಮಾನಿಸಲ್ಪಡಬೇಕು. ಈ ದಿನದಲ್ಲಿ ನ್ಯಾಯವಾದ ಕಾರಣವಿಲ್ಲದೆ ನೆರೆದ ಕೂಟದ ವಿಷಯದಲ್ಲಿ ಇದು ಒಂದು ದಂಗೆ ಎಂಬುದಾಗಿ ನಮ್ಮ ಮೇಲೆ ತಪ್ಪು ಹೊರಿಸುವದಕ್ಕೆ ಆಸ್ಪದವಾಯಿತು. ಈ ದೊಂಬಿಯನ್ನು ಕುರಿತು ವಿಚಾರಣೆ ನಡೆದರೆ ನಮ್ಮಿಂದ ಉತ್ತರ ಕೊಡುವದಕ್ಕೆ ಆಗುವದೇ ಇಲ್ಲ ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 19:39, 40; ಒತ್ತಿ ಹೇಳಿದ್ದು ನನ್ನದು).

"ಈ ಮಾತುಗಳನ್ನು ಹೇಳಿ *ಸಭೆಯನ್ನು* ಮುಗಿಸಿದನು" ಎಂದು ಲೂಕನು ಕೂಡಿಸಿದ್ದಾನೆ.

ಪಟ್ಟಣದ ಸಭೆಯ ಈ ವರದಿಯಲ್ಲಿ ಲೂಕನು ಮೂರುಸಲ "ಎಕ್ಲೇಸಿಯಾ" ಎಂಬ ಗ್ರೀಕ ಪದವನ್ನು ಉಪಯೋಗಿಸಿದ್ದಾನೆ (ಅಪೊಸ್ತಲರ ಕೃತ್ಯಗಳು 19:32, 39, 41). ಕೂಡಿಬಂದ ಗುಂಪಿನ ಅರ್ಥದಲ್ಲಿ ಮಾತ್ರವೇ ಅವನು ಇದನ್ನು ಉಪಯೋಗಿಸಿರುವನು. ಯಾಕಂದರೆ ವಚನ 32 ಮತ್ತು 41ರಲ್ಲಿ ಕೂಡಿ ಬಂದ ಜನಸಮೂಹವು ಎಕ್ಲೇಸಿಯ ಎಂದು ಕರೆಯಲ್ಪಟ್ಟಿದ್ದು ವಚನ 30ರಲ್ಲಿ ಗಲಭೆಯ ಗುಂಪು ಎಂದು ಹೇಳಲ್ಪಟ್ಟಿದೆ. ನಾಟಕ ಶಾಲೆಯೊಳಗೆ ಬಂದ ಜನರಗುಂಪು *(ಎಕ್ಲೇಸಿಯಾ)* ಒಂದಾಗಿ ಕರೆಯಲ್ಪಟ್ಟಿರಲಿಲ್ಲ: ಎಲ್ಲಾ ಗಲಿಬಿಲಿಯಲ್ಲಿಯೂ ಘಟನೆಗಳ ಭರತದಲ್ಲಿ ಸಂಭವಿಸಿತು. ಅದು ನಿರ್ಣಯಿಸಲ್ಪಡುವ ಕಾನೂನು ಬದ್ಧ ಸಭೆಯನ್ನು ಎಕ್ಲೇಸಿಯಾ 39ನೆಯ ವಚನದಲ್ಲಿ ಎಂದು ಕರೆದಿದ್ದಾನೆ.

ಎಕ್ಲೇಸಿಯಾದ ಲೂಕನ ಉಪಯೋಗದ ಬೆಳಕಿನಲ್ಲಿ, ಅದರ ಲೌಕಿಕ ಉಪಯೋಗದಲ್ಲಿ, ಯಾವುದೇ ರೀತಿಯ ಸಭೆಗೆ ಸಂಬಂಧಿಸುವದನ್ನು ಯೋಚಿ

ಸುವುದು ಉತ್ತಮವಾದದ್ದಾಗಿದೆ. ಕೆಲವು ಸಲ ಸಭೆಯು ಕೂಡಿಸಲ್ಪಟ್ಟಿರುತ್ತದೆ, ಇಲ್ಲವೇ ಒಂದಾಗಿ ಬರಲು ಆಜ್ಞಾಪಿಸಲ್ಪಡುತ್ತದೆ. ಕೆಲವು ಸಲ ಸಭೆಯು ತನ್ನಷ್ಟಕ್ಕೆ ತಾನೇ ಕೂಡಿಬರುತ್ತದೆ. ಸಭೆಯ ಆ ಪ್ರತಿಯೊಂದು ವಿಧಾನವನ್ನು *ಎಕ್ಲೇಸಿಯಾ* ಎಂದು ಲೂಕನು ಕರೆದಿದ್ದಾನೆ.

ಇಂದು ಕೆಲವು ಭಾಷಾಪಂಡಿತರು ಹೊಸ ಒಡಂಬಡಿಕೆಯ ದಿನಗಳಲ್ಲಿ *ಎಕ್ಲೇಸಿಯದ* ಲೌಕಿಕ ಉಪಯೋಗಕ್ಕೆ "ಹೊರಗೆ ಕರೆಯಲ್ಪಟ್ಟ ಸಭೆ" ಎಂಬುದಕ್ಕಿಂತ "ಕೇವಲ ಒಂದು ಕೂಟ" ಎಂಬುದಕ್ಕೆ ಹೆಚ್ಚು ಅರ್ಥವಿತ್ತೆಂದು ನಂಬುತ್ತಾರೆ. ಅಪೊಸ್ತಲರ ಕೃತ್ಯಗಳು 19ರಲ್ಲಿ ಲೂಕನಿಂದ ಈ ಪದದ ಉಪಯೋಗವು ಅವರ ತೀರ್ಮಾನ ಗಳನ್ನು ದೃಢಪಡಿಸುವಂತೆ ತೋರುತ್ತದೆ.

ಎಕ್ಲೇಸಿಯಾ ಪದದ ಲೂಕನ ಉಪಯೋಗವು ನಮ್ಮ ಕರ್ತನು ಧಾರ್ಮಿಕ ಅರ್ಥದಲ್ಲಿ ಉಪಯೋಗಿಸುವ ಮೊದಲು ಲೌಕಿಕ ಜಗತ್ತಿನಲ್ಲಿ ಈ ಪದ ಹೇಗೆ ಉಪಯೋಗಿಸಲ್ಪಟ್ಟದ್ದರ ಒಳನೋಟವನ್ನು ಕೊಡುತ್ತದೆ. ಪದದ ಈ ಹಿನ್ನೆಲೆಯು, ಎಕ್ಲೇಸಿಯ ಪದವನ್ನು ನಮ್ಮ ಕರ್ತನು ಉಪಯೋಗಿಸುವದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಸಹಾಯ ಮಾಡುವುದು.

**ಅದರ ಧಾರ್ಮಿಕ ಉಪಯೋಗ**

*ಎಕ್ಲೇಸಿಯ* ಪದಕ್ಕೆ ಹೊಸ ಒಡಂಬಡಿಕೆಯಲ್ಲಿ ಧಾರ್ಮಿಕ ಉಪಯೋಗವು ಸಹ ಇರುತ್ತದೆ.

ಕ್ರೈಸ್ತತ್ವಕ್ಕೆ ಯೆಹೂದೀ ಹಿನ್ನೆಲೆಯಲ್ಲಿ ದೇವರ ಜನಾಂಗದ ಸಭೆಯ ತತ್ವವಿತ್ತೆಂದು ಹಳೇ ಒಡಂಬಡಿಕೆಯಿಂದ ಸ್ಪಷ್ಟವಾಗುತ್ತದೆ. *ಸೆಪ್ಟುಜೆಂಟ್‌ದಲ್ಲಿ* ಅಂದರೆ ಹಳೇ ಒಡಂಬಡಿಕೆಯ ಪರಿಶುದ್ಧ ಗ್ರಂಥದ ಗ್ರೀಕ ಭಾಷಂತರದಲ್ಲಿ, ಇಸ್ರಾಯೇಲಿನ "ಸಭೆಯು" ಹಿಬ್ರೂವಿನಲ್ಲಿ *qahal* (ಖಹಾಲ) ಎಂದು ಇದ್ದು, ಗ್ರೀಕಿನಲ್ಲಿ *ಎಕ್ಲೇಸಿಯಾ* ಎಂಬ ಪದದಿಂದ ಭಾಷಾಂತರಿಸಲ್ಪಟ್ಟಿದೆ. ಧಾರ್ಮಿಕ ಉದ್ದೇಶಗಳಿಗಾಗಿ ಕರ್ತನ ಮುಂದೆ ಕೂಡಿದ ಇಸ್ರಾಯೇಲ್ಯರನ್ನೊಳಗೊಂಡ "ಸಭೆ" ಯಾಗಿದ್ದಕ್ಕೆ ಇದು ವಿಶೇಷವಾಗಿ ಉಪಯೋಗಿಸಲ್ಪಟ್ಟಿದೆ (ಧರ್ಮೋಪದೇಶಕಾಂಡ 18:16; 31:30; 1 ಅರಸುಗಳು 8:65; ಅಪೊಸ್ತಲರ ಕೃತ್ಯಗಳು 7:38).

"ಸಿನಾಗೋಗ" (ಸಭಾಮಂದಿರ) ಎಂಬ ಪದವು ಮೂಲದಲ್ಲಿ ಉಪಯೋಗಿಸಲ್ಪಟ್ಟಿದ್ದು ಪ್ರತ್ಯೇಕವಾದ ಉದ್ದೇಶಕ್ಕಾಗಿ ಒಟ್ಟಾಗಿ ಕೂಡಿಬಂದಿದ್ದ ಜನರ ಸಭೆಗೆ ಸಂಬಂಧಿಸಿದೆ. ಅನಂತರದಲ್ಲಿ ಆರಾಧನೆಗಾಗಿ ಕೂಡಿಬಂದ ಕ್ರೈಸ್ತರ ಅಸೆಂಬ್ಲಿಗೆ ಈ ಪದ ಅನ್ವಯಿಸಲ್ಪಟ್ಟಿತು. ಯಾಕೋಬನು ಸಿನಾಗೋಗ ಮತ್ತು *ಎಕ್ಲೇಸಿಯ* ಎಂಬ ಎರಡೂ ಗ್ರೀಕ ಪದಗಳನ್ನು ಉಪಯೋಗಿಸಿದ್ದಾನೆ. ಯಾಕಂದರೆ ತನ್ನ

ಪುಸ್ತಕವನ್ನು ಓದುವವರು ಯೆಹೂದಿ ಕ್ರೈಸ್ತರೆಂಬುದು ಅವನ ಮನಸ್ಸಿನಲ್ಲಿತ್ತು. ಆರಾಧನೆಗಾಗಿ ಕೂಡಿಬಂದ ಕ್ರೈಸ್ತರ ಸಭೆಗಾಗಿ ಅವನು ಸಿನಾಗೋಗ ಉಪಯೋಗಿಸಿದನು (ಯಾಕೋಬ 2:2) ಹಾಗೂ ಕೂಡಲ್ಪಟ್ಟ ಸ್ಥಳದಲ್ಲಿರುವ ವಿಶ್ವಾಸಗಳ ಗುಂಪಿಗೆ ಎಕ್ಲೇಸಿಯ ಎಂಬುದನ್ನು ಉಪಯೋಗಿಸಿದನು (ಯಾಕೋಬ 5:14).

ಹೀಗೆ ತನ್ನ ರಕ್ಷಣೆಯ ಮುಖಾಂತರವಾಗಿ ದೇವರ ಅದ್ವಿತೀಯ ಜನಾಂಗವಾಗಿ ನಾಮಾಂಕಿತವಾಗಿರುವ ಪದವನ್ನು ನಮ್ಮ ಕರ್ತನು ಆಯ್ಕೆಮಾಡಿದನು (ಮತ್ತಾಯ 16:18). ಬಹುಶಃ ಅದರ ಲೌಕಿಕ ಅರ್ಥದಲ್ಲಿ "ಅಸೆಂಬ್ಲಿ" ಎಂದಾಗುತ್ತದೆ. ಆದರೆ ಅದರ ಹಳೆ ಒಡಂಬಡಿಕೆಯ ಉಪಯೋಗದಲ್ಲಿ ಅದು "ದೇವರ ಜನರ ಸಭೆ" ಆಗಿತ್ತು. ನಮ್ಮ ಕರ್ತನು ಲೌಕಿಕ ಪದವನ್ನು ತೆಗೆದುಕೊಂಡು ಅದಕ್ಕೆ ಒಂದು ವಿಶೇಷ ಧಾರ್ಮಿಕ ಅರ್ಥಕೊಟ್ಟನು. ಈ ಪದದ ಆತನ ಆಯ್ಕೆಯಲ್ಲಿ, ಅದರ ಲೌಕಿಕ ಮತ್ತು ಧಾರ್ಮಿಕ ಹಿನ್ನೆಲೆಗಳನ್ನು ತೆಗೆದುಕೊಂಡು ತನ್ನ ಹೊಸ ಅರ್ಥಗಳನ್ನು ಕೂಡಿಸಿದನು. ಯೇಸುವಿನ ಉಪಯೋಗದಲ್ಲಿ ಆತನು ಅದಕ್ಕೆ ಕೊಟ್ಟ ಪದವು ಅವರು ಒಂದಾಗಿ ಕೂಡಿಬರಲಿ ಇಲ್ಲವೇ ಬಾರದೇ ಇರಲಿ ಕ್ರಿಸ್ತನ ರಕ್ತದಿಂದ ವಿಮೋಚಿತರಾದ ಸಾರ್ವತ್ರಿಕ ಜನಾಂಗಕ್ಕೆ ಸಂಬಂಧಿಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 8:3; ಎಫೆಸ 1:22).

*ಎಕ್ಲೇಸಿಯಾ* ಪದಕ್ಕೆ ಸಂಬಂಧಿಸಿದ, ಹೊಸ ಒಡಂಡಿಕೆಯಲ್ಲಿ ಕೊಡಲ್ಪಟ್ಟ ಇನ್ನೊಂದು ಯೋಚನೆಯು "ಹೊರಗೆ ಕರೆಯಲ್ಪಟ್ಟವರು" ಇಲ್ಲವೇ "ಪ್ರತ್ಯೇಕಿಸಲ್ಪಟ್ಟವರು" ಆಗಿರುವ ವರ್ಣ ಚಿತ್ರವು. ಈ ಯೋಚನೆಯು, ಬಹುಶಃ ಪದದ ಸಾಮಾನ್ಯ ಉಪಯೋಗದಲ್ಲಿ ಇಲ್ಲದ್ದಾಗಿದ್ದರೂ ಕ್ರಿಸ್ತನ ವಿಶೇಷ ಉಪಯೋಗದಲ್ಲಿ ಅರ್ಥದ ಪ್ರಮುಖ ಭಾಗವಾಗಿತ್ತು. ಈ ಭಾವನೆ ನಾಮಾಂಕಿತಗೊಂಡ ಜನರ ಸ್ವಭಾವದಿಂದ ಪದದೊಳಗೆ ಪ್ರಕಟಿಸಲ್ಪಟ್ಟಿತ್ತು.

ಪಂಚಾಶತ್ತಮದ ದಿನದಂದು ಜನಸಮೂಹಕ್ಕೆ ಪೇತ್ರನು ಹೀಗೆ ಹೇಳಿದನು, "ಆ ವಾಗ್ದಾನವು ನಿಮಗೂ, ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ" (ಅಪೊಸ್ತಲರ ಕೃತ್ಯಗಳು 2:39). "ತನ್ನ ರಾಜ್ಯ ಪ್ರಭಾವಗಳಲ್ಲಿ ಪಾಲುಗಾರರಾಗುವದಕ್ಕೆ ಕರೆಯುವ ದೇವರಿಗೆ ಯೋಗ್ಯರಾಗಿ ನಡೆಯಬೇಕು" (1 ಥೆಸಲೊನೀಕ 2:12) ಎಂದು ಪೌಲನು ಥೆಸಲೊನೀಕದವರಿಗೆ ಹೇಳಿದನು. ಸುವಾರ್ತೆಯ ಮೂಲಕವಾಗಿ ದೇವರು ಅವರನ್ನು ಕರೆದನು. "ನೀವು ಹೀಗೆ ರಕ್ಷಿಸಲ್ಪಟ್ಟು ನಮ್ಮ ಕರ್ತನಾದ ಯೇಸುಕ್ರಿಸ್ತನ ಪ್ರಭಾವವನ್ನು ಸಂಪಾದಿಸಿಕೊಳ್ಳಬೇಕೆಂದು ದೇವರು ನಮ್ಮ ಸುವಾರ್ತೆಯ ಮೂಲಕವಾಗಿ ನಿಮ್ಮನ್ನು ಕರೆದನು" (2 ಥೆಸಲೊನೀಕ 2:14) ಎಂದು ಪೌಲನು ಹೇಳಿದನು.

ಹೀಗೆ ಸುವಾರ್ತೆಯ ಮುಖಾಂತರ ದೇವರ ಕಡೆಗೆ ಕರೆಯಲ್ಪಟ್ಟ ಜನರು "ಸಭೆ" ಎಂದು ಕರೆಯಲ್ಪಟ್ಟರು (1 ಕೊರಿಂಥ 1:1-3).

ಇದಲ್ಲದೇ, ಕೊಲೊಸ್ಸೆಯಲ್ಲಿರುವ ಸಭೆಗೆ ಹೀಗೆ ಹೇಳಿದನು, "ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು. ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರ ವಾಗಿ ನಮಗೆ ಬಿಡುಗಡೆ ಯಾಯಿತು" (ಕೊಲೊಸ್ಸೆ 1:13, 14). "ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡಬೇಕು" (1 ಪೇತ್ರ 2:9ಬಿ) ಎಂದು ಪೇತ್ರನು ಹೇಳಿದನು. "ನಿಮ್ಮನ್ನು ಕರೆದಾತನು ಪರಿಶುದ್ಧನಾಗಿರುವ ಪ್ರಕಾರವೇ ನೀವೂ ವಿಧೇಯರಿಗೆ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರಿ" (1 ಪೇತ್ರ 1:15) ಎಂದು ಪೇತ್ರನು ಹೇಳಿದನು.

ಸ್ಥಳ ಹಾಗೂ ಪ್ರತ್ಯೇಕ ಸಮಯಕ್ಕೆ ನೀಮಿತಗೊಳಿಸದೇ ಕ್ರೈಸ್ತ ಯುಗದಲ್ಲಿ ದೇವರ ಜನಾಂಗದ ಎಲ್ಲರಿಗಾಗಿ ಸಂಬಂಧಿಸಿ, "ಸಭೆ" ಎಂಬ ಪದವನ್ನು ಯೇಸು ಉಪಯೋಗಿಸಿದನು. ಇಂದು ಯಾವುದೇ ಕ್ರೈಸ್ತರು ಪಂಚಾಶತ್ತಮ ದಿನದಂದು ಸ್ಥಾಪಿಸಲ್ಪಟ್ಟ ಸಭೆಯ ಸದಸ್ಯರಾಗಿರದಿದ್ದರೂ ಎಲ್ಲಾ ಕಾಲಗಳ ಮತ್ತು ಎಲ್ಲಾ ಸ್ಥಳಗಳ ಎಲ್ಲಾ ನಿಜವಾದ ಕ್ರೈಸ್ತರು ಆ ದಿನ ಕರ್ತನು ಸ್ಥಾಪಿಸಿದ ಸಭೆಯ ಸದಸ್ಯರಾಗಿರುವರು. ಯೇಸುವಿನ ಪುನರುತ್ಥಾನದ ನಂತರ ಮೊದಲನೆಯ ಪಂಚಾಶತ್ತಮ ಹಬ್ಬದ ದಿನದಂದು ಯೆರೂಸಲೇಮಿನಲ್ಲಿ ಎಲ್ಲಾ ದಿನವಿರುವುದು. ಪ್ರತೀ ಶತಮಾನದಲ್ಲಿ ಅದು ಪುನಃ ಪುನಃ ಇಲ್ಲವೇ ಧರ್ಮಭ್ರಷ್ಟತೆಯ ಅವಧಿಯ ನಂತರ ಹುಟ್ಟಿರುವದಿಲ್ಲ.

**ಅದರ ವ್ಯವಹಾರಿಕ ಉಪಯೋಗ**

ಯೇಸುವಿನಿಂದಲೂ ಪರಿಶುದ್ಧಾತ್ಮನಿಂದಲೂ ಹೊಸ ಒಡಂಬಡಿಕೆಯಲ್ಲಿ ವ್ಯವಹಾರಿಕ ಮಾರ್ಗದಲ್ಲಿ ತರಲು "ಸಭೆ" ಎಂಬ ಪದಕ್ಕೆ ಕೊಡಲ್ಪಟ್ಟ ಅರ್ಥವನ್ನು ನಾವು ನಿರೀಕ್ಷಿಸುತ್ತೇವೆ. ಅದು ಹೀಗೆಯೇ ಇರುವದೆಂದು ನಾವು ಕಂಡುಕೊಳ್ಳುತ್ತೇವೆ.

ವ್ಯವಹಾರಿಕ ಉಪಯೋಗದಲ್ಲಿ ಪ್ರೇರೇಪಿತ ಬರಹಗಾರರು "ಸಭೆ" ಎಂಬ ಪದವನ್ನುನಾಲ್ಕುವಿಧಗಳಲ್ಲಿಉಪಯೋಗಿಸಿದರು. ಮೊದಲನೆಯದು, ಕೊಡಲ್ಪಟ್ಟ ಸ್ಥಳದಲ್ಲಿ ದೇವರ ಜನಾಂಗದ ಸಭೆಗೆ ಸಂಬಂಧಿಸಿ ಅದನ್ನು ಅವರು ಉಪಯೋಗಿ ಸಿದರು. ಯೇಸು ಕ್ರಿಸ್ತನಲ್ಲಿ ಶುದ್ಧೀಕರಿಸಲ್ಪಟ್ಟವರಿಗೆ, ಕೊರಿಂಥದಲ್ಲಿಯ "ದೇವರ ಸಭೆಗೆ" ಎಂದು ಪೌಲನು ಕರೆದನು (1 ಕೊರಿಂಥ 1:2). "ಫಿಲಿಪ್ಪಿಯಲ್ಲಿ ಕ್ರಿಸ್ತ ಯೇಸುವಿನ ಮೂಲಕ ದೇವರ ಜನರಾಗಿರುವವರೆಲ್ಲರಿಗೂ" (ಫಿಲಿಪ್ಪಿ 1:1) ಎಂದು ಫಿಲಿಪ್ಪಿಯದಲ್ಲಿಯ ಸಭೆಯು ಕರೆಯಲ್ಪಟ್ಟಿದೆ. "ತಂದೆಯಾದ ದೇವರಲ್ಲಿಯೂ

ಕರ್ತನಾದ ಯೇಸು ಕ್ರಿಸ್ತನಲ್ಲಿಯೂ ಇರುವ ಥೆಸಲೊನೀಕದಲ್ಲಿಯ ದೇವರ ಜನರು'' ಹೇಳಲ್ಪಟ್ಟಿದ್ದಾರೆ. ಕೊಡಲ್ಪಟ್ಟ ಸ್ಥಳದಲ್ಲಿಯ ಎಲ್ಲಾ ಕ್ರೈಸ್ತರು ಆ ಸ್ಥಳದ "ಸಭೆ'' ಎಂದು ಕರೆಯಲ್ಪಟ್ಟಿದ್ದಾರೆ. ಸಾರ್ವತ್ರಿಕ ಸಭೆ ಎಂಬ ಹೇಳಿಕೆಯು ಕ್ರೈಸ್ತರ ಸ್ಥಳಿಕ ಸಭೆಯಾಗಿದೆ. ಒಬ್ಬನು ಕ್ರಿಸ್ತನ ಸಭೆಯ ಸದಸ್ಯನಾಗುವಾಗ ಅವನು ವಾಸಿಸುವಲ್ಲಿ ಕ್ರೈಸ್ತರ ಸಭೆಯ ಭಾಗವಾಗುವನು.

ಎರಡನೆಯದಾಗಿ, ಪ್ರೇರೇಪಿತ ಬರಹಗಾರರು "ಸಭೆ'' ಎಂಬ ಪದವನ್ನು ಒಂದು ಕ್ಷೇತ್ರದ ಸ್ಥಳಿಕ ಸಭೆಗಳ ಬಗ್ಗೆ ಮಾತಾಡುವಲ್ಲಿ ಉಪಯೋಗಿಸಿದರು. "ಹೀಗಿರಲಾಗಿ ಯೂದಾಯ, ಗಲಿಲಾಯ, ಸಮಾರ್ಯ ಸೀಮೆಗಳಲ್ಲಿದ್ದ ಸಭೆಯು ಸಮಾಧಾನ ಹೊಂದಿತು, ಮತ್ತು ಭಕ್ತಿಯಲ್ಲಿ ಬೆಳೆದು ಕರ್ತನ ಭಯದಲ್ಲಿ ನಡೆದು ಪರಿಶುದ್ಧಾತ್ಮನಿಂದ ಪ್ರೋತ್ಸಾಹವನ್ನು ಹೊಂದಿ ಹೆಚ್ಚುತ್ತಾ ಬಂತು'' (ಅಪೊಸ್ತಲರ ಕೃತ್ಯಗಳು 9:31) ಎಂದು ಲೂಕನು ಬರೆದಿದ್ದಾನೆ. ಕೆಲವು ಸಲ ಒಂದೇ ಕ್ಷೇತ್ರದಲ್ಲಿಯ ಸಭೆಯು "ಸಭೆಗಳು'' ಎಂದು ಬಹುವಚನದಲ್ಲಿ ನಾಮಾಂಕಿತಗೊಂಡಿದೆ. ಪೌಲನು ಗಲಾತ್ಯದವರಿಗೆ ಪತ್ರಿಕೆಯನ್ನು ಬರೆಯುವಾಗ, "ಗಲಾತ್ಯದಲ್ಲಿರುವ ಸಭೆಗಳಿಗೆ'' ಎಂದು ಬರೆದನು (ಗಲಾತ್ಯ 1:2). ಯುರೋಪದಲ್ಲಿಯ ಸಭೆ ಇಲ್ಲವೇ ಯುರೋಪದಲ್ಲಿಯ ಸಭೆಗಳು ಎಂದು ಹೇಳುವುದು "ಸಭೆ'' ಎಂಬ ಪದದ ಬೈಬಲಿಗೆ ಅನುಗುಣವಾದ ಉಪಯೋಗವಾಗಿದೆ.

ಮೂರನೆಯದು, ಸಭೆಯು ಹೇಗೆ ಮಾಡಲ್ಪಟ್ಟಿದೆ ಎಂಬುದನ್ನು ತೋರಿಸಲು "ಸಭೆ'' ಎಂಬ ಪದವನ್ನು ಹೊಸ ಒಡಂಬಡಿಕೆಯ ಬರಹಗಾರರು ಉಪಯೋಗಿಸಿದ್ದಾರೆ. ಸಭೆಗಳಲ್ಲಿಯ ಜನರ ತರವನ್ನು ಕುರಿತು ಅವರು ಅದನ್ನು ಉಪಯೋಗಿಸಿದರು. ರೋಮಾಪುರ 16ರಲ್ಲಿ ತನ್ನ ವಂದನೆಯಲ್ಲಿ "ಅನ್ಯಜನರ ಸಭೆಗಳವರೆಲ್ಲರೂ'' ಎಂದು ಪೌಲನು ಸಂಬಂಧಿಸಿ ಹೇಳಿದ್ದಾನೆ (ರೋಮಾಪುರ 16:3-5).

ನಾಲ್ಕನೆಯದು, ಪ್ರೇರೇಪಿತ ಬರಹಗಾರರು "ಸಭೆ'' ಎಂಬ ಪದವನ್ನು ಆರಾಧನೆಗಾಗಿ ಕೂಡಿಬರುವ ಸಭೆಗೆ ಸಂಬಂಧಿಸಿ ಉಪಯೋಗಿಸಿದ್ದಾರೆ. ಆರಾಧನೆಗಾಗಿ ಕೂಡಿ ಬರದೇ ಇರುವಾಗಲೂ ಸಭೆಯು ಅಸ್ತಿತ್ವದಲ್ಲಿ ಇರುತ್ತದೆ. ಆದರೆ "ಸಭೆ'' ಎಂಬ ಪದವು ಕೂಡಲ್ಪಟ್ಟ ಸ್ಥಳದಲ್ಲಿಯ ಸಭೆಯ ಕೂಟಕ್ಕಾಗಿ ವಿಶೇಷವಾದ ರೀತಿಯಲ್ಲಿ ಉಪಯೋಗಿಸಲ್ಪಟ್ಟಿದೆ, ಕೊರಿಂಥದವರು ಒಟ್ಟಾಗಿ ತಾವು ಕೂಡಿಬಂದಾಗ ಸಭೆ ಎಂದು ಪೌಲನಿಂದ ಹೇಳಲ್ಪಟ್ಟಿದ್ದಾರೆ (1 ಕೊರಿಂಥ 11:18). ಸಭೆಗಳಲ್ಲಿ ಮೌನವಾಗಿರಬೇಕೆಂದು ಅವನು ಮಹಿಳೆಯರಿಗೆ ಹೇಳಿದನು, "... ಸ್ತ್ರೀಯರು ಸಭೆಯ ಕೂಟಗಳಲ್ಲಿ ಸುಮ್ಮಗಿರಬೇಕು; ಮಾತಾಡುವದಕ್ಕೆ ಅವರಿಗೆ ಅಪ್ಪಣೆಯಿಲ್ಲ; ಅವರು ಅಧೀನದಲ್ಲಿರ ಬೇಕು; ಧರ್ಮ ಶಾಸ್ತ್ರದಲ್ಲಿಯೂ ಹೀಗೆ ಹೇಳಿದೆಯೆಲ್ಲಾ'' (1 ಕೊರಿಂಥ 14:34). ಈ ವಾಕ್ಯ ಭಾಗದಲ್ಲಿ ಸಭೆಯ

ಆರಾಧನಾಕೂಟಕ್ಕೆ ಸಂಬಂಧಿಸಿ ಅವನು ಹೇಳಿದನು.

ಒಬ್ಬನು ಯಾವುದೇ ರೀತಿಯಲ್ಲಿ ಸಭೆಗೆ ಸಂಬಂಧಿಸುವಾಗ, ಕ್ರಿಸ್ತನ ಸುವಾರ್ತೆಗೆ ಸಮರ್ಪಿಸಿಕೊಳ್ಳುವದರಿಂದ ಕ್ರಿಸ್ತನ ದೇಹದಲ್ಲಿ ತರಲ್ಪಟ್ಟವರ ಬಗ್ಗೆ ಅವನು ಮಾತಾಡುತ್ತಿದ್ದಾನೆ. ಕ್ರೈಸ್ತನು ಭೂಲೋಕದೊ ಳಗಿಂದ ಮತ್ತು ಕತ್ತಲೆ ಯೊಳಗಿಂದ ಹೊರಗೆ ಕರೆಯಲ್ಪಟ್ಟಿದ್ದಾನೆ. ಹಾಗೂ ದೇವರ ಕೃಪೆಯಿಂದ "ಸಭೆ" ಎಂದು ಕ್ರಿಸ್ತನಿಂದಲೂ ಹೊಸ ಒಡಂಬಡಿಕೆಯ ಪ್ರೇರೇಪಿತ ಬರಹಗಾರರಿಂದಲೂ ಕರೆಯಲ್ಪಟ್ಟ ಸಭೆಯೊಳಗೆ ಇಡಲ್ಪಟ್ಟಿದ್ದಾರೆ.

## ಮುಕ್ತಾಯ

ತನ್ನ ಜನಾಂಗಕ್ಕೆ ಸಂಬಂಧಿಸಿ ದೇವರು ಆಯ್ದುಕೊಂಡ ಪದಗಳ ಈ ಸಂಕ್ಷಿಪ್ತ ಅಧ್ಯಯನವು ನಿಶ್ಚಯವಾಗಿಯೂ ಆತನ ರಾಜ್ಯದಲ್ಲಿ, ಆತನ ಸಭೆಯಲ್ಲಿ ಪ್ರವೇಶಿಸಲು ನಮ್ಮನ್ನು ಆಹ್ವಾನಿಸುತ್ತದೆ ಈ ಲೌಕಿಕ ಪದಗಳನ್ನು ದೇವರು ತೆಗೆದು ಕೊಂಡರು. ಅವುಗಳಿಗೆ ಹೆಚ್ಚಿನ ಅರ್ಥಕೂಡಿಸಿ, ಆತನ ಕೃಪೆಯ ಸುವಾರ್ತೆಯ ಮುಖಾಂತರ ರಕ್ಷಣೆಯೊಳಗೆ ಕರೆಯಲ್ಪಟ್ಟ ಜನರಿಗೆ ಅನ್ವಯಿಸಿದನು. ಹೀಗೆ ಈ ಪದಗಳು ದೇವರ ಆಳಿಕೆಗೆ ಸಮರ್ಪಿಸಲ್ಪಟ್ಟ ಹಾಗೂ ಕ್ರಿಸ್ತನ ರಕ್ತದಿಂದ ವಿಮೋಚಿಸಲ್ಪಟ್ಟ ಎಲ್ಲರಿಗೆ ಸಂಬಂಧಿಸಿವೆ. ಪಿತೃಗಳ ದೀರ್ಘ ವಾದ ವರ್ಷಗಳ ಮುಖಾಂತರ ಮತ್ತು ಮೋಶೆಯ ಯುಗಗಳ ಮುಖಾಂತರ ತನ್ನ ವಿಶೇಷ ಜನಾಂಗಕ್ಕಾಗಿ ದೇವರು ಯೋಚಿಸಿದನು. ಆತನ ಸಂದೇಶವಾಹಕರು ಮುಂತಿಳಿಸಲು ಆತನು ಪ್ರೇರೇಪಿಸಿದ್ದ ಎಲ್ಲವನ್ನೂ ಆತನು ನೆರವೇರಿಸಿದನು. ಈಗ ಆತನ ರಾಜ್ಯದಲ್ಲಿ ಪ್ರವೇಶಿಸುವುದು ಮತ್ತು ಆತನ ಸಭೆಗೆ ಕೂಡಿಸಲ್ಪಡುವುದು ನಿಮಗೆ ಬಿಟ್ಟದ್ದಾಗಿರುತ್ತದೆ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ಒಬ್ಬ ರಾಜ ಹಾಗೂ ಒಂದು ರಾಜ್ಯದ ಮಾತುಗಳಲ್ಲಿ ಇಸ್ರಾಯೇಲಿಗೆ ದೇವರೊಂದಿಗಿರುವ ಸಂಬಂಧವನ್ನು ಚರ್ಚಿಸಿರಿ.
2. ಇಸ್ರಾಯೇಲಿನ ಪ್ರಥಮ ರಾಜನಾದ ಸೌಲನಿಗೆ ದೇವರ ರಾಜ್ಯವಾದ ಇಸ್ರಾಯೇಲಿನ ಮೇಲೆ ಅರಸನಂತೆ ಯಾವ ಜವಾಬ್ದಾರಿಕೆಗಳಿದ್ದವು?
3. ಬರಲಿಕ್ಕಿರುವ ರಾಜ್ಯವನ್ನು ಕುರಿತು ದಾನಿಯೇಲನ ಪ್ರವಾದನೆಯಿಂದ ಯಾವ ಪಾಠಗಳನ್ನು ಕಲಿಯಬಹುದು? (ದಾನಿಯೇಲ 2:44 ನೋಡಿರಿ.)
4. ಹೊಸ ಒಡಂಬಡಿಕೆಯಲ್ಲಿ "ರಾಜ್ಯ" ಪದದ ಉಪಯೋಗ ಕಡಿಮೆಯಾದದ್ದನ್ನು

ಗಮನಿಸಿರಿ. ಇದರ ಅರ್ಥವೇನು?

5. ಇಂದು ಒಬ್ಬನು ದೇವರ ರಾಜ್ಯದಲ್ಲಿ ಇದ್ದುಕೊಂಡು ನಿತ್ಯ ರಾಜ್ಯದ ಕಡೆಗೆ ಹೇಗೆ ಮುನ್ನೋಡಬಹುದು ಎಂಬುದನ್ನು ವಿವರಿಸಿರಿ (2 ತಿಮೊಥೆ 4:18 ನೋಡಿರಿ).
6. ಹೊಸ ಒಡಂಬಡಿಕೆಯಲ್ಲಿ ಪ್ರತಿಬಿಂಬಿಸುವ "ಸಭೆ" ಎಂಬುದು ಎಷ್ಟು ಸಲ ಕಂಡು ಬರುತ್ತದೆ. ಪದದ ಬಗ್ಗೆ ಇದು ಯಾವ ಅರ್ಥವನ್ನು ಸೂಚಿಸುತ್ತದೆ?
7. ಹೊಸ ಒಡಂಬಡಿಕೆಯಲ್ಲಿ ಪ್ರತಿಬಿಂಬಿಸುವ "ಸಭೆ" ಎಂಬ ಪದದ ಸರಳವಾದ ಲೌಕಿಕ ಉಪಯೋಗವನ್ನು ಕೊಡಿರಿ. ಹೀಗೆ ಅದು ಉಪಯೋಗಿಸಲ್ಪಟ್ಟ ವಚನವನ್ನು ಹೇಳಿರಿ.
8. "ಸಭೆ" ಎಂಬ ಪದವು ಅದರ ಲೌಕಿಕ ಅರ್ಥದಲ್ಲಿ ಯಾವಾಗಲೂ ಧಾರ್ಮಿಕ ಕೂಟಕ್ಕೆ ಸಂಬಂಧಿಸಿರುವುದೋ? ಅದು ಯಾವಾಗಲು "ಹೊರಗೆ ಕರೆಯಲ್ಪಟ್ಟವರ ಸಭೆ," ವಿಶೇಷವಾದ ಉದ್ದೇಶಕ್ಕಾಗಿ ಒಂದಾಗಿ ಕರೆಯಲ್ಪಟ್ಟದ್ದಕ್ಕೆ ಸಂಬಂಧಿಸಿರುವುದೋ?

## ಪದ ಸಹಾಯಗಳು

ಕ್ರಿಸ್ತನ ಮದಲಗಿತ್ತಿ - ಸಭೆ, ಕ್ರಿಸ್ತನೊಂದಿಗೆ ಸಭೆಯ ಸಂಬಂಧವು ಪುರುಷನಿಗೆ ತನ್ನ ಹೆಂಡತಿಯೊಂದಿಗಿನ ಸಂಬಂಧಕ್ಕೆ ಹೋಲಿಸಲ್ಪಟ್ಟಿದೆ (ಎಫೆಸ 5:22-29 ನೋಡಿರಿ).

ಸಾಮ್ಯಗಳು - ಆತ್ಮಿಕ ಸತ್ಯಗಳನ್ನು ಉದಾಹರಿಸಲಿಕ್ಕೆ ದಿನನಿತ್ಯ ಜೀವನದಲ್ಲಿಯ ಕಥೆಗಳನ್ನು ಯೇಸು ಆಗಾಗ ಉಪಯೋಗಿಸಿದನು (ಮತ್ತಾಯ 13:34).

ಪಿತೃಗಳ ಯುಗ - ಬೈಬಲ್ ಚರಿತ್ರೆಯಲ್ಲಿ ಸ್ಪಷ್ಟವಾದ, ಮೂರು ಅವಧಿಗಳಲ್ಲಿ ಒಂದು, ಮೊದಲನೆಯದು ಪಿತೃಗಳ ಯುಗ. ಆಗ ದೇವರು ಕುಟುಂಬದ ಮುಖ್ಯಸ್ಥರೊಂದಿಗೆ ನೇರವಾಗಿ ಮಾತಾಡಿದನು. ಅನಂತರ ಮೋಶೆಯ ಯುಗ, ಆಗ ಇಸ್ರಾಯೇಲ್ಯರು ಮೋಶೆಗೆ ಕೊಡಲ್ಪಟ್ಟ ಧರ್ಮಶಾಸ್ತ್ರವನ್ನು (ದಶಾಜ್ಞೆಗಳನ್ನೊಳಗೊಂಡು) ಅನುಸರಿಸಿದರು. ಇದು ಯೇಸುವು ಶಿಲುಬೆಯ ಮೇಲೆ ಮರಣ ಹೊಂದುವವರೆಗೆ ಇತ್ತು. ಅಂತಿಮ ಯುಗವು ಕ್ರೈಸ್ತ ಯುಗವಾಗಿದೆ. ಈ ಯುಗದಲ್ಲಿ, ರಕ್ಷಿಸಲ್ಪಟ್ಟವರೆಲ್ಲರೂ ಸಭೆಗೆ ಸೇರಿಸಲ್ಪಡುತ್ತಾರೆ. ಹೊಸ ಒಡಂಬಡಿಕೆಯು ಮಾತ್ರವೇ ಬೋಧನೆಗಾಗಿಯೂ ಆರಾಧನೆಗಾಗಿಯೂ ದೈವಿಕ ಮಟ್ಟದ್ದಾಗಿರುವುದು. ಈ ಯುಗವು ಯೇಸುವಿನ ಎರಡನೆಯ ಬರೋಣದವರೆಗೆ ಇರುವುದು.

ಪ್ರವಾದನೆ - ಪ್ರವಾದಿಯ ಪ್ರೇರಿತ ಮಾತುಗಳು ದೇವರ ಚಿತ್ತದ ಪ್ರಕಟನೆಯಂತೆ ದೃಷ್ಟಿಸಲ್ಪಟ್ಟಿವೆ, ಕೆಲವು ಸಲ ದೈವೀಯ ಪ್ರೇರಣೆಯಿಂದ ಭವಿಷ್ಯವು ಮುಂತಿಳಿಸಲ್ಪಡುತ್ತದೆ.

ಸಮುವೇಲ - ಹಳೇ ಒಡಂಬಡಿಕೆಯ ಮಹಾ ಪ್ರವಾದಿ, ಯಾಜಕ ಹಾಗೂ ನ್ಯಾಯಸ್ಥಾಪಕ.

ಸಾರ್ವಭೌಮ - ಅರಸ ಇಲ್ಲವೇ ಇತರ ಆಡಳಿತೆಗಾರ, ಅತೀ ದೊಡ್ಡ ಬಲವುಳ್ಳವನು. 1 ತಿಮೊಥೆ 6:14, 15ರಲ್ಲಿ ಕರ್ತನಾದ ಯೇಸು ಕ್ರಿಸ್ತನು "ಭಾಗ್ಯವಂತನಾದ ಏಕಾಧಿತಿ, ರಾಜಾಧಿ ರಾಜನೂ ಕರ್ತನ ಕರ್ತನೂ" ಆಗಿದ್ದಾನೆಂದು ಹೇಳಲ್ಪಟ್ಟಿದೆ.

## ಹೊಸ ಒಡಂಬಡಿಕೆಯ ಸಭೆ

| | |
|---|---|
| ಸಂಸ್ಥಾಪಕರು: ಕ್ರಿಸ್ತ<br>ಮತ್ತಾಯ 16:18 | ಎಲ್ಲಿ: ಯೆರೂಸಲೇಮಿನಲ್ಲಿ<br>ಯೆಶಾಯ 2:3;<br>ಅಪೊಸ್ತಲರ ಕೃತ್ಯಗಳು2:5,47 <br> ಯಾವಾಗ: ಕ್ರಿ.ಶ. 33<br>ಅಪೊಸ್ತಲರ ಕೃತ್ಯಗಳು 2 <br> ಶಿರಸ್ಸು: ಕ್ರಿಸ್ತ<br>ಎಫೆಸ 1:22 |
| ಸಂಘಟನೆ<br>ಫಿಲಿಪ್ಪಿ 1:1 | ಹಿರಿಯರು: ತೀತ 1:5; 1 ಪೇತ್ರ 5:1-3; ಅಪೊಸ್ತಲರ ಕೃತ್ಯಗಳು 20:28; 1 ತಿಮೊಥೆ 3:1-7; ಡೀಕನರು: ಅಪೊಸ್ತಲರ ಕೃತ್ಯಗಳು 6:1-6; 1 ತಿಮೊಥೆ 3:8-13; ಸದಸ್ಯರು: ಅಪೊಸ್ತಲರ ಕೃತ್ಯಗಳು 2:41-47; ಕೊಲೊಸ್ಸೆ 1:13; 1 ಕೊರಿಂಥ 1:2 |
| ಸಭೆಗಾಗಿ ಅಂಕಿತಗಳು<br>ಎಫೆಸ 3:15 | ಸಭೆ: ಕೊಲೊಸ್ಸೆ 1:18, 24; ಕ್ರಿಸ್ತನ ದೇಹ: ಎಫೆಸ 1:22, 23; ರಾಜ್ಯ: ಅಪೊಸ್ತಲರ ಕೃತ್ಯಗಳು 8:12; ಕ್ರಿಸ್ತನ ಸಭೆಗಳು: ರೋಮಾಪುರ 16:16; ದೇವರ ಸಭೆ: 1 ಕೊರಿಂಥ 1:2; ಅಪೊಸ್ತಲರ ಕೃತ್ಯಗಳು 20:28; ದೇವರ ಕುಟುಂಬ: ಎಫೆಸ 2:19; 1 ತಿಮೊಥೆ 3:15; ಕರ್ತನ ಶಿಷ್ಯರು: ಅಪೊಸ್ತಲರ ಕೃತ್ಯಗಳು 9:1; ದೇವರ ಆಲಯ: 1 ಕೊರಿಂಥ 3:16; ಚೊಚ್ಚಲ ಮಕ್ಕಳ ಸಭೆ: ಇಬ್ರಿಯ 12:23 |
| ಕ್ರೈಸ್ತರಿಗಾಗಿ ಅಂಕಿತಗಳು<br>ಎಫೆಸ 3:15 | ಶಿಷ್ಯರು: ಅಪೊಸ್ತಲರ ಕೃತ್ಯಗಳು 11:26; ಪರಿಶುದ್ಧರು: 1 ಕೊರಿಂಥ 1:2; ಫಿಲಿಪ್ಪಿ 1:1; ದೇವರ ಮಕ್ಕಳು ಗಲಾತ್ಯ 3:26; 1 ಯೋಹಾನ 2:1; ಸಹೋದರರು: ಲೂಕ 8:21; ಗಲಾತ್ಯ 6:1; ಕ್ರೈಸ್ತರು: ಅಪೊಸ್ತಲರ ಕೃತ್ಯಗಳು 11:26; 26:28; 1 ಪೇತ್ರ 4:16 |
| ವಿಶ್ವಾಸ ಸೂತ್ರ | ಯೇಸು ಕ್ರಿಸ್ತ: ಮತ್ತಾಯ 16:16-18; ಅಪೊಸ್ತಲರ ಕೃತ್ಯಗಳು 8:37 |
| ವಿಶ್ವಾಸದ ಮತ್ತು ಆಚರಣೆಗಳ ನಿಯಮ: ದೇವರ ವಾಕ್ಯ | ಎಲ್ಲಾ ಅಧಿಕಾರ: ಮತ್ತಾಯ 28:18-20; ರೋಮಾಪುರ 1:16; ಇಬ್ರಿಯ 4:12; ಸಭೆಯ ಆಡಳಿತೆ: 2 ತಿಮೊಥೆ 3:16, 17; 2 ಪೇತ್ರ 1:3; ರಾಜ್ಯದ ಬೀಜ: ಮತ್ತಾಯ 13:3; ಲೂಕ 8:11; ಆತ್ಮಿಕ ಖಡ್ಗ: ಎಫೆಸ 6:17 |
| ಆರಾಧನೆ | ಹಾಡುವುದು: ಕೊಲೊಸ್ಸೆ 3:16; ಪ್ರಾರ್ಥನೆ: 1 ಥೆಸಲೊನೀಕ 5:17; ಬೋಧನೆ: ಅಪೊಸ್ತಲರ ಕೃತ್ಯಗಳು 20:7; ಅನ್ಯೋನ್ಯತೆ: ಅಪೊಸ್ತಲರ ಕೃತ್ಯಗಳು 20:7; 1 ಕೊರಿಂಥ 11:23; ಕೊಡುಗೆ: 1 ಕೊರಿಂಥ 16:1, 2 |
| ಸೇವೆ | ಆತ್ಮಗಳನ್ನು ರಕ್ಷಿಸುವುದು: ಮತ್ತಾಯ 28:18-20; ಯೋಹಾನ 6:45; ಎಫೆಸ 3:10; 1 ತಿಮೊಥೆ 4:16 |
| ಎಚ್ಚರಿಕೆ | ಸತ್ಯದಲ್ಲಿ ನೆಲೆಗೊಳ್ಳಿರಿ: ಗಲಾತ್ಯ 1:6-8; ಮತ್ತಾಯ 15:9, 13; 2 ಕೊರಿಂಥ 11:3; ಪ್ರಕಟನೆ 22:18, 19; 2 ಯೋಹಾನ 9 |

## 14

# ಸಭೆಯ ದೈವಿಕ ಅಂಕಿತಗಳು

ಹೊಸ ಒಡಂಬಡಿಕೆಯನ್ನು ಜಾಗರೂಕತೆಯಿಂದ ಓದಿದರೆ ಸಭೆಯು ಒಂದು ವಿಶೇಷವಾದ ಸಜೀವ ರಚನೆಯಾಗಿ ಸೃಷ್ಟಿಸಲ್ಪಟ್ಟಿತೆಂಬುದನ್ನು ಪ್ರಕಟಿಸುತ್ತದೆ. ಆದುದರಿಂದ ಅದು ಪ್ರೇರಿತ ಬರಹಗಾರರಿಂದ ವಿಶೇಷ ವಾದ ರೀತಿಗಳಲ್ಲಿ ಹೇಳಲ್ಪಟ್ಟಿದೆ. ಈ ಹೇಳಿಕೆಗಳನ್ನು ಮೂರು ಗುಂಪುಗಳಲ್ಲಿ ವಿಭಾಗಿಸಬಹುದು. ಅವು ವಿಶೇಷವಾದ ಅರ್ಥದೊಂದಿಗೆ, ಕಾರ್ಯವನ್ನು, ಒಡೆತನ ಹಾಗೂ ಸಂಬಂಧವನ್ನು ಪ್ರಕಟಿಸಲು ಉಪಯೋಗಿಸಲ್ಪಟ್ಟಿವೆ. ಅವು ದೈವಿಕ ನಿರ್ದೇಶನಗಳಿಂದ ಕೊಡಲ್ಪಟ್ಟಿವೆ ಮತ್ತು ದೈವಿಕ ಉದ್ದೇಶವನ್ನು ನೆರವೇರಿಸುತ್ತವೆ.

ಸಭೆಯನ್ನುದ್ದೇಶಿಸಿ ಪರಿಶುದ್ಧಾತ್ಮನಿಂದ ಉಪಯೋಗಿಸಿದ ಮಾತುಗಳನ್ನು ಕೇವಲ ಉದಾಹರಣೆಗಳೆಂದು ಯೋಚಿಸಬಾರದು.[1] ಹೊಸ ಒಡಂಬಡಿಕೆಯು ಕ್ರಿಸ್ತನ ನಂಬಿಗಸ್ತ ಹಿಂಬಾಲಕರನ್ನು, ಆತನ "ಸಭೆ," ಆತನ "ದೇಹ" ಹಾಗೂ ಆತನ "ರಾಜ್ಯ" ಎಂದು ಕರೆಯುತ್ತದೆ. ಈ ದೈವಿಕವಾದ ಅಂಕಿತಗಳು[2] ಕರ್ತನು ಸ್ಥಾಪಿಸಿದ ಸಭೆಯನ್ನು ಗುರುತಿಸುತ್ತವೆ, ಗುಣಲಕ್ಷಣಗಳನ್ನು ವಿವರಿಸುತ್ತವೆ ಹಾಗೂ ವರ್ಣಿಸುತ್ತವೆ. ಅವುಗಳನ್ನು ಜಾಗರೂಕತೆಯಿಂದ ಆಲೋಚಿಸಿ.

### ಕರ್ತವ್ಯದ ಅಂಕಿತಗಳು

ಹೊಸ ಒಡಂಬಡಿಕೆಯಲ್ಲಿ ಸಭೆಗೆ ಕೊಡಲ್ಪಟ್ಟ ಕೆಲವು ಅಂಕಿತಗಳು ಒಂದು ದೇಹದಂತೆ, ಜೀವಿಸುವಂತಾ ಸಭೆಯ ಕಾರ್ಯಕ್ಕೆ ಸಂಬಂಧಿಸಿರುತ್ತವೆ. ಈ ಅಂಕಿತಗಳು ಕರ್ತನ ಸಭೆಯು, ಉದ್ದೇಶದಲ್ಲಿ, ರಚನೆಯಲ್ಲಿ ಹಾಗೂ ಕೃತ್ಯದಲ್ಲಿ ಏನಾಗಿದೆ ಎಂಬುದನ್ನು ಪ್ರತ್ಯಕ್ಷಪಡಿಸುತ್ತವೆ.

ಕ್ರಿಸ್ತನು ಸ್ಥಾಪಿಸಿದ್ದನ್ನು ಸರಳವಾಗಿ "ಸಭೆ" ಎಂದು ಹೇಳಲಾಗಿದೆ (ಕೊಲೊಸ್ಸೆ 1:18, 24). ಈ ಮಾತಿನ ಅರ್ಥ "ಕರ್ತನ ಅನುಯಾಯಿಗಳಾದ ಜನರ ಒಂದು

ಕೂಟ" ಎಂದು. ಈ ಜನರು ಕೂಟವಾಗಿ ಕೂಡಿ ಬಂದ ಅರ್ಥದಲ್ಲಿ (1 ಕೊರಿಂಥ 11:18), ಸ್ಥಳಿಕ ಅರ್ಥದಲ್ಲಿ (1 ಕೊರಿಂಥ 1:2), ಕ್ಷೇತ್ರದ ಅರ್ಥದಲ್ಲಿ (1 ಕೊರಿಂಥ 16:1) ಹಾಗೂ ಸಾರ್ವತ್ರಿಕದ ಅರ್ಥದಲ್ಲಿ (ಎಫೆಸ 5:23) ಸಂಬಂಧಿಸಿ ಹೇಳಲ್ಪಟ್ಟಿದೆ. ಈ ಅಂಕಿತವು ಕ್ರಿಸ್ತನು ಸ್ಥಾಪಿಸಿದ್ದರ ಮೂಲ ಅರ್ಥವನ್ನು - ಆತನಿಗಾಗಿ ಜೀವಿಸುವ, ಆತನನ್ನು ಆರಾಧಿಸುವ, ಆತನ ಕಾರ್ಯಮಾಡುವ ಆತನ ರಕ್ತದಿಂದ ವಿಮೋಚಿಸಲ್ಪಟ್ಟ ಜನರ ಗುಂಪನ್ನು ಪ್ರಕಟಿಸುತ್ತದೆ.

ಸಭೆಯ ವೈಯಕ್ತಿಕ ಸದಸ್ಯರು " ಕ್ರೈಸ್ತರು" ಎಂದು ಕರೆಯಲ್ಪಟ್ಟಿದ್ದಾರೆ. ಯಾಕಂದರೆ ಅವರು ಕ್ರಿಸ್ತನಂತಾಗಲು ಪ್ರಯತ್ನಿಸುವವರು ( ಕ್ರೈಸ್ತನು ಎಂಬ ಪದದ ಅರ್ಥ "ಕ್ರಿಸ್ತನಂತೆ" ಇಲ್ಲವೇ "ಕ್ರಿಸ್ತನ ಅನುಯಾಯಿ" ಎಂದಾಗುತ್ತದೆ). ಕ್ರೈಸ್ತರು ಎಂಬ ಹೆಸರು ಶಿಷ್ಯರಿಗೆ ಮೊದಲು ಅಂತಿಯೋಕ್ಯದಲ್ಲಿ ಕೊಡಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 11:26). ಈ ಹೆಸರು ಕೊಡಲ್ಪಡುವದರ ಹಿನ್ನೆಲೆಗಳು ಸ್ಪಷ್ಟವಾಗಿಲ್ಲ, ಆದರೆ ದೇವರು ತನ್ನ ಜನಾಂಗಕ್ಕಾಗಿ ಆಯ್ದುಕೊಂಡನೆಂಬುದರ ಬಗ್ಗೆ ನಾವು ಖಚಿತತೆಯುಳ್ಳವರಾಗಿರಬಹುದು. ಒಂದು ಹೆಸರಾಗಿ ಅದು ಹೊಸ ಒಡಂಬಡಿಕೆಯಲ್ಲಿ ಮೂರು ಸಲ ಕಂಡುಬರುತ್ತದೆ (ಅಪೊಸ್ತಲರ ಕೃತ್ಯಗಳು 11:26; 26:28; 1 ಪೇತ್ರ 4:16).

ಬೈಬಲ್ ಸಭೆಯ ಸದಸ್ಯರನ್ನು "ಪರಿಶುದ್ಧರು," ಪವಿತ್ರಗೊಳಿಸಲ್ಪಟ್ಟ ಜನರು ಎಂದು ಕರೆಯಲ್ಪಟ್ಟಿದ್ದಾರೆ. ದೇವರಿಂದ ಆಯ್ಕೆಗೊಂಡವರಾಗಿ ಇವರು ಪ್ರತ್ಯೇಕಿಸಲ್ಪಟ್ಟ ಜನರಾಗಿದ್ದಾರೆ. "ದೇವರ ಚಿತ್ತಾನುಸಾರವಾಗಿ ಕ್ರಿಸ್ತ ಯೇಸುವಿನ ಅಪೊಸ್ತಲನಾದ ಪೌಲನು ಎಫೆಸಿದಲ್ಲಿರುವ ಪರಿಶುದ್ಧರಿಗೂ, ಕ್ರಿಸ್ತ ಯೇಸುವಿನಲ್ಲಿ ನಂಬಿಕೆಯಿಟ್ಟವರಿಗೂ ಬರೆಯುವುದು" (ಎಫೆಸ 1:1) ಎಂದು ಪೌಲನು ಎಫೆಸದವರನ್ನು ಸಂಬೋಧಿಸಿದ್ದಾನೆ. ಬೈಬಲಿನ ಕಿಂಗ್ ಜೇಮ್ಸ್ ಆವೃತ್ತಿಯ ತೀತ 2:14ರಲ್ಲಿ "ಸ್ವಕೀಯ ಜನರು" ಎಂದಿದೆ. ಈ ಪುಸ್ತಕದ ಕೊನೆಯಲ್ಲಿರುವ ಹೊಸ ಒಡಂಬಡಿಕೆಯು "ತನ್ನ ಸ್ವಾಸ್ತ್ಯವಾಗಿರುವ ಜನಾಂಗ" ಎಂದು ಹೇಳುತ್ತದೆ. "ಹೋಲಿ" ಇಲ್ಲವೇ "ಸೇಂಟ" ಇವುಗಳ ಮೂಲ ಅರ್ಥವು "ದೇವರಿಗಾಗಿ ಪ್ರತ್ಯೇಕಿಸಲ್ಪಟ್ಟವರು" ಎಂದಾಗುತ್ತದೆ. ದೇವರ ಸಭೆಯು "ದೇವರ ಸ್ವಂತ ಸ್ವಾಸ್ತ್ಯವಾಗಿರುವ ಜನಾಂಗ," ಪರಿಶುದ್ಧ ಜನಾಂಗ, ದೇವರಿಗಾಗಿ ಪ್ರತ್ಯೇಕಿಸಲ್ಪಟ್ಟ ಜನಾಂಗ ಆಗಿದೆ. ಕ್ರೈಸ್ತರು ಪರಿಶುದ್ಧವಾದ ಕರೆಯಿಂದ ಕರೆಯಲ್ಪಡುತ್ತಾರೆ (2 ತಿಮೊಥೆ 1:9). ಅವರು ಪರಿಶುದ್ಧ ನಡವಳಿಕೆಯಲ್ಲಿಯೂ ಭಕ್ತಿಯಲ್ಲಿಯೂ ಜೀವಿಸ ಬೇಕು (2 ಪೇತ್ರ 3:11). ಆತನ ಮುಂದೆ ಅವರು ಅಂತ್ಯದಿನದಲ್ಲಿ "ಪರಿಶುದ್ಧರಾಗಿಯೂ ನಿರ್ದೋಷಿಗಳಾಗಿಯೂ ನಿರಪರಾಧಿಗಳಾಗಿಯೂ" ಕಾಣಿಸಿಕೊಳ್ಳಲು ಹುಡುಕುತ್ತಾರೆ (ಕೊಲೊಸ್ಸೆ 1:22ಬಿ).

ಬೈಬಲಿನ ಕೆಲವು ಭಾಷಾಂತರಗಳಲ್ಲಿ ಮತ್ತಾಯ, ಮಾರ್ಕ, ಲೂಕ ಹಾಗೂ

ಯೋಹಾನ ಸುವಾರ್ತೆಗಳ ಶೀರ್ಷಿಕೆಗಳಲ್ಲಿ "ಸೇಂಟ" ಎಂದಿರುವುದು. ಹಾಗೂ ಪ್ರಕಟನೆಯ ಪುಸ್ತಕಕ್ಕೆ "ದೈವಿಕನಾದ ಸೇಂಟ ಯೋಹಾನನ ಪ್ರಕಟನೆ" ಎಂಬ ಹೆಸರು ಹೊಂದಿದೆ. ಹೊಸ ಒಡಂಬಡಿಕೆಯ ಈ ಪುಸ್ತಕಗಳ ಶೀರ್ಷಿಕೆಗಳು ಮನುಷ್ಯನಿಂದ ಬಂದಿವೆ ಆದರೆ ದೇವರಿಂದ ಅಲ್ಲ. ಕ್ರಿಸ್ತನಲ್ಲಿರುವ ವ್ಯಕ್ತಿಯನ್ನು "ಪರಿಶುದ್ಧರು" ಎಂದು ಹೊಸ ಒಡಂಬಡಿಕೆಯು ಕರೆಯುತ್ತಿದೆ. ಸಭೆಯು "ಪರಿಶುದ್ಧರ ಸಭೆಗಳು" (1 ಕೊರಿಂಥ 14:33) ಎಂದೂ ಹೇಳಲ್ಪಟ್ಟಿದೆ. ಜನರು ಕ್ರೈಸ್ತರಾಗುವಾಗ ದೇವರಿಗಾಗಿ ಪ್ರತ್ಯೇಕಿಸಲ್ಪಡುತ್ತಾರೆ.

ಇದಲ್ಲದೇ, ಸಭೆಯು ಕ್ರಿಸ್ತನ "ದೇಹ" ಎಂದು ಹೇಳಲ್ಪಟ್ಟಿದೆ (ಎಫೆಸ 1:22, 23). ಈ ಮಾತು ಕೆಲವು ಸಲ ಕಾರ್ಯಾಚರಣೆಯಲ್ಲಿ ಸಭೆಯು ಏನಾಗಿದೆಯೆಂಬುದನ್ನು ಉದಾಹರಿಸಲು ಉಪಯೋಗಿಸಲ್ಪಟ್ಟಿದೆ (1 ಕೊರಿಂಥ 12:12-27) ಹಾಗೂ ಕೆಲವು ಸಲ ಸಭೆಯು ನಿಜವಾಗಿಯೂ ಏನಾಗಿದೆ ಎಂಬುದನ್ನು ಗುರುತಿಸಿ ತೋರಿಸುತ್ತದೆ. ಅಂಕಿತವಾಗಿ ಉಪಯೋಗಿಸಲ್ಪಡುವಾಗ, "ಕ್ರಿಸ್ತನ ದೇಹ" ಎಂಬ ಮಾತುಗಳು ಕಾರ್ಯವನ್ನು ಹಾಗೆಯೇ ಸಭೆಯ ಸಂಬಂಧವನ್ನು ಒತ್ತಿ ಹೇಳುತ್ತದೆ. ಸಭೆಯು ಭೂಲೋಕದಲ್ಲಿ ಕ್ರಿಸ್ತನ ಆತ್ಮಿಕ ದೇಹವಾಗಿದೆ ಹಾಗೂ ದೇಹವು ತನ್ನ ತಲೆಗೆ ಸಂಬಂಧಿಸಿದಂತೆ ಅದು ಕ್ರಿಸ್ತನಿಗೆ ಸಂಬಂಧಿಸಿದೆ. ಕ್ರಿಸ್ತನ ಈ ಆತ್ಮಿಕ ದೇಹದಲ್ಲಿ ವೈಯಕ್ತಿಕ ಕ್ರೈಸ್ತರು ದೇಹದ "ಅಂಗಗಳಂತೆ" ಪ್ರತಿಯೊಬ್ಬ ಕ್ರೈಸ್ತನು ಅದರ ಸದಸ್ಯನಾಗಿ ಮತ್ತು ದೇವರ ಅಂಗವಾಗಿ ಕಾರ್ಯಮಾಡುತ್ತ ವರ್ತಿಸುವುದು ಎಂದು ಹೇಳಲಾಗಿದೆ. "ನೀವು ಕ್ರಿಸ್ತನ ದೇಹವು ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ" (1 ಕೊರಿಂಥ 12:27) ಎಂದು ಪೌಲನು ಕೊರಿಂಥದ ಸಭೆಗೆ ಬರೆದಿದ್ದಾನೆ.

ಸಭೆಯು "ದೇವರ ರಾಜ್ಯ" ಎಂದೂ ಹೇಳಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 8:12). ಕೆಲವು ಸಲ "ಪರಲೋಕ ರಾಜ್ಯ" ಎಂಬುದಾಗಿಯೂ ಹೇಳಲ್ಪಟ್ಟಿದೆ (ಮತ್ತಾಯ 16:18, 19) ಮತ್ತು ಕೆಲವು ಸಲ ಅದು "ದೇವರ ರಾಜ್ಯ"ವಾಗಿದೆ (ಯೋಹಾನ 3:3). ಈ ಎರಡೂ ಪದ ಪ್ರಯೋಗಗಳು ಸಭೆಯ/ರಾಜ್ಯದ ಆಡಳಿತೆಯ ಹಾಗೂ ಆಳ್ವಿಕೆಯ ಆತ್ಮಿಕ ಸ್ವಭಾವವನ್ನು ಪ್ರತಿಬಿಂಬಿಸುತ್ತವೆ (ಯೋಹಾನ 18:36). ಸಭೆಯು ಭೂಲೋಕದಲ್ಲಿ ದೇವರ ಆಳ್ವಿಕೆಗೆ ಸಮರ್ಪಿಸಿಕೊಂಡ ಕ್ರಿಸ್ತನ ಅನುಯಾಯಿಗಳ ಗುಂಪಾಗಿರುತ್ತದೆ. ಕ್ರಿಸ್ತನು ಅರಸನಾಗಿದ್ದು ಈಗ ತನ್ನ ರಾಜ್ಯದ ಮೇಲೆ, ಸಭೆಯ ಮೇಲೆ ಆಳಿಕೆ ನಡಿಸುತ್ತಿರುವನು (1 ಕೊರಿಂಥ 15:24, 25). ಇದರ ಪರಿಣಾಮವಾಗಿ ಸಭೆಗೆ ದೈವಿಕ ಶಿರಸ್ಸು ಇಲ್ಲವೇ ಅರಸನು ಇರುವನು ಹಾಗೂ ಅದು ದೈವಿಕ ಅಧಿಕಾರದಿಂದ ನಡಿಸಲ್ಪಡುತ್ತಿರುವುದು. ಸಭೆಯ ಸದಸ್ಯರು ಅರಸ ಯೇಸುವಿನ ಅಧಿಕಾರಕ್ಕೆ ತಲೆಬಾಗಿ, ಅವರು ಭೂಲೋಕದಲ್ಲಿ ವಾಸಿಸುತ್ತಿದ್ದರೂ ಆತನ ಆತ್ಮಿಕ

ರಾಜ್ಯದ "ಪೌರರಾಗಿ" ಜೀವಿ ಸುತ್ತಿರುವರು (ಫಿಲಿಪ್ಪಿ 3:20).

ದೇವರ ರಾಜ್ಯದ ಭಾಗವಾಗಿರುವರು ಹಾಗೆಯೇ ಪರಲೋಕ ರಾಜ್ಯದ "ಪೌರರು" ಎಂದು ವಿವರಿಸಲ್ಪಡುತ್ತಾರೆ (ಮತ್ತಾಯ 16:18, 19). "ನಾವಾದರೋ ಪರಲೋಕ ನಿವಾಸಿಗಳು, ಕರ್ತನಾದ ಯೇಸು ಕ್ರಿಸ್ತನು ಅಲ್ಲಿಂದಲೇ ರಕ್ಷಕನಾಗಿ ಬರುವದನ್ನು ಎದುರು ನೋಡುತ್ತಾ ಇದ್ದೇವೆ" (ಫಿಲಿಪ್ಪಿ 3:20) ಎಂದು ಪೌಲನು ಹೇಳುತ್ತಾನೆ. "ಹೀಗಿರಲಾಗಿ ನೀವು ಇನ್ನು ಮೇಲೆ ಪರದೇಶದವರೂ ಅನ್ಯರೂ ಆಗಿರದೆ ಪರಿಶುದ್ಧರೊಂದಿಗೆ ಒಂದೇ ಪೌರತ್ವದವರೂ ದೇವರ ಮನೆಯವರೂ ಆಗಿದ್ದೀರಿ. ಅಪೊಸ್ತಲರೂ ಪ್ರವಾದಿಗಳೂ ಎಂಬ ಅಸ್ತಿವಾರದ ಮೇಲೆ ನೀವು ಕಟ್ಟಲ್ಪಟ್ಟಿದ್ದೀರಿ. ಯೇಸು ಕ್ರಿಸ್ತನೇ ಮುಖ್ಯವಾದ ಮೂಲೆಗಲ್ಲು" (ಎಫೆಸ 2:19, 20) ಎಂದೂ ಅವನು ಬರೆದಿದ್ದಾನೆ. ಕ್ರಿಸ್ತನು ನಮ್ಮ ಅರಸನು (1 ಕೊರಿಂಥ 15:24, 25), ಮತ್ತು ಕ್ರಿಸ್ತನ ಆಡಳಿತದಲ್ಲಿ ಜೀವಿಸುವವರು ಮಾತ್ರವೇ ಆತನ ರಾಜ್ಯದಲ್ಲಿರುವರು (ಮತ್ತಾಯ 7:21).

ಕ್ರೈಸ್ತರು ಹಳೇ ಒಡಬಡಿಕೆಯಲ್ಲಿ ದಾನಿಯೇಲನು ಹೇಳಿದ ನಿತ್ಯರಾಜ್ಯದ ಪೌರರಾಗಿದ್ದಾರೆ (ದಾನಿಯೇಲ 2:44). ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನು ಅದನ್ನು "ಕದಲಿಸಲಾರದ" ರಾಜ್ಯ ಎಂದು ವಿವರಿಸಿದ್ದಾನೆ: "ಆದಕಾರಣ ಯಾರೂ ಕದಲಿಸಲಾರದ" ರಾಜ್ಯವನ್ನು ಹೊಂದುವವರಾದ ನಾವು ಕೃತಜ್ಞತೆಯುಳ್ಳವರಾಗಿದ್ದು, ..." (ಇಬ್ರಿಯ 12:28). ಇಂದಿನಿಂದ ಒಂದು ಸಾವಿರ ವರ್ಷಗಳ ನಂತರ ನೀವು ಎಲ್ಲಿರುವಿರಿ ಎಂದು ಮುಂದಿನ ಸಲ ನೀವು ಕೇಳಿಕೊಳ್ಳುವಾಗ, ನೀವು ಕ್ರೈಸ್ತರಾಗಿದ್ದರೆ, "ನಾನು ನಿತ್ಯವಾದ ರಾಜ್ಯದಲ್ಲಿ ಇರುವೆನು!" ಎಂದು ನಿಮಗೆ ನೀವೇ ಹೇಳಬಹುದು. ದೇವರ ರಾಜ್ಯವು ಇಂದು ಇದ್ದು ನಾಳೆ ಹೊರಟು ಹೋಗುವಂತದ್ದಲ್ಲ - ಅದು ನಿತ್ಯವಾದದ್ದಾಗಿದೆ.

## ಒಡೆತನದ ಅಂಕಿತಗಳು

ಹೊಸ ಒಡಂಬಡಿಕೆಯಲ್ಲಿ ಸಭೆಗೆ ಸಂಬಂಧಿಸಿದ ಮೂರು ವಿಧಾನಗಳು ಸಭೆಯು ದೇವರಿಗೆ ಹಾಗೂ ಕ್ರಿಸ್ತನಿಗೆ ಒಳಪಟ್ಟ ಸಂಬಂಧವನ್ನು ಒತ್ತಿ ಹೇಳುತ್ತವೆ. ಈ ಮಾತುಗಳು ಒಡೆತನವನ್ನೂ ನಾಯಕತ್ವವನ್ನೂ ಸೂಚಿಸುತ್ತವೆ.

ಮೊದಲನೆಯದಾಗಿ, ಸಭೆಯು "ಕ್ರಿಸ್ತನ ಸಭೆ" ಎಂದು ಹೇಳಲ್ಪಟ್ಟಿದೆ. ಪೌಲನು ರೋಮಾಪುರದವರಿಗೆ ಬರೆದ ಪತ್ರದ ಮುಕ್ತಾಯದಲ್ಲಿ ಅಖಾಯದ ಸಭೆಗಳಿಗೆ ಅವನು ವಂದನೆಗಳನ್ನು ಕಳುಹಿಸುತ್ತಾ; "ಕ್ರಿಸ್ತನ ಸಭೆಗಳೆಲ್ಲಾ ನಿಮ್ಮನ್ನು ವಂದಿಸುತ್ತವೆ" (ರೋಮಾಪುರ 16:16ಬಿ). ಈ ಅಂಕಿತವು ಸಭೆಯ ಒಡೆತನವನ್ನು ನಿಕಟ ಸಂಬಂಧವನ್ನು ಒತ್ತಿ ಹೇಳುತ್ತದೆ. ಸಭೆಯು ಕ್ರಿಸ್ತನ ಸಭೆಯಾಗಿದೆ

ಯಾಕಂದರೆ ಕ್ರಿಸ್ತನು ಅದನ್ನು ಸ್ಥಾಪಿಸಿದ್ದಾನೆ. ಅದನ್ನು ಕೊಂಡು ಕೊಂಡಿದ್ದಾನೆ, ಅದರ ಶಿರಸ್ಸಾಗಿ ಸೇವೆ ಮಾಡುತ್ತಾನೆ. ಒಮ್ಮೆ ಒಬ್ಬನು ಕ್ರಿಸ್ತನಿಗಾಗಿ ಮಾರ್ಪಟ್ಟರೆ ಅವನು ಕ್ರಿಸ್ತನಿಗೆ ಒಳಪಟ್ಟವನಾಗುತ್ತಾನೆ (1 ಕೊರಿಂಥ 6:20). ಅವನು ಕ್ರೈಸ್ತನು, ಕ್ರಿಸ್ತನ ಅನುಯಾಯಿ ಎಂದು ಕರೆಯಲ್ಪಡುವಂತೆ ಕ್ರಿಸ್ತನೊಂದಿಗೆ ಸಂಪೂರ್ಣವಾಗಿ ಗುರುತಿಸಲ್ಪಡುವವನಾಗುತ್ತಾನೆ (ಅಪೊಸ್ತಲರ ಕೃತ್ಯಗಳು 11:26; 26:28; 1 ಪೇತ್ರ 4:16). ಆಗ ಕ್ರಿಸ್ತನ ಅನುಯಾಯಿಗಳ ವಿಶೇಷ ಕೂಟವು ಸಭೆಯು ಯಾರಾಗಿದ್ದರು, ಯಾರ ಒಡೆತನದಲ್ಲಿ ಇರುವುದು ಮತ್ತು ಅದರ ಭಾಗ ಯಾರು ಎಂಬುದನ್ನು ತೋರಿಸಲು ಸಭೆ ಎಂದು ಕರೆಯಲ್ಪಟ್ಟಿದೆ.

ಎರಡನೆಯದು, ಸಭೆಯು "ದೇವರ ಸಭೆ" ಎಂದು ಸಂಬಂಧಿಸಿ ಹೇಳಲ್ಪಟ್ಟಿದೆ (1 ಕೊರಿಂಥ 1:2). ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನ ಸಭೆ ಎಂದು ಹೇಳಲ್ಪಟ್ಟಿದೆ. ನಾವು ಅದನ್ನು ದೇವರ ಸಭೆಗೆ ಸಂಬಂಧಿಸಿ ಹೇಳುವದನ್ನು ನಿರೀಕ್ಷಿಸುತ್ತೇವೆ ಯಾಕಂದರೆ ಯೇಸುವು ತಾನು ಮತ್ತು ತನ್ನ ತಂದೆ ಒಂದೇ ಎಂದು ಹೇಳುತ್ತಾನೆ (ಯೋಹಾನ 10:30). ಜಗದುತ್ಪತ್ತಿಗೆ ಮೊದಲೇ ದೇವರು ಸಭೆಯನ್ನು ಯೋಜಿಸಿದನು (ಎಫೆಸ 3:10, 11). ಸಭೆಗಾಗಿ ಸಿದ್ಧತೆ ಮಾಡಲು (ಮತ್ತಾಯ 16:18) ಹಾಗೂ ಅದನ್ನು ತನ್ನ ರಕ್ತದಿಂದ ಕೊಳ್ಳಲು ಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿದನು (ಅಪೊಸ್ತಲರ ಕೃತ್ಯಗಳು 20:28). ಲೋಕವನ್ನು ತನ್ನೊಂದಿಗೆ ಸಂಧಾನ ಪಡಿಸಿಕೊಳ್ಳಲು ಶಿಲುಬೆಯಲ್ಲಿ ಕ್ರಿಸ್ತನಲ್ಲಿ ದೇವರು ಇದ್ದ ಹಾಗೆಯೇ (2 ಕೊರಿಂಥ 5:19) ದೇವರು ಸಭೆಯನ್ನು ಸ್ಥಾಪಿಸುವದರಲ್ಲಿಯೂ, ಕೊಂಡುಕೊಳ್ಳುವದರಲ್ಲಿಯೂ ಕ್ರಿಸ್ತನೊಂದಿಗೆ ಇದ್ದನು.

ಮೂರನೆಯದು, ಸಭೆಯ ಸದಸ್ಯರು "ದಾಸರು" ಇಲ್ಲವೇ "ಸೇವಕರು" ಎಂದು ವಿವರಿಸಲ್ಪಟ್ಟಿದ್ದಾರೆ. ಕ್ರಿಸ್ತನಿಗೆ ಸಮರ್ಪಿಸಲ್ಪಡುವವರು ಆತನಿಗೆ ವಿಧೇಯರಾಗುವವರು ಆತನ ಸೇವಕರಾಗಿದ್ದಾರೆ. ಹೊಸ ಒಡಂಬಡಿಕೆಯು ಬರೆಯಲ್ಪಟ್ಟಾಗ, ಗುಲಾಮ/ಯಜಮಾನ ಸಂಬಂಧವು ರೋಮ್ ಸಾಮ್ರಾಜ್ಯದ ಭಾಗವಾಗಿತ್ತು, ದಾಸನು ಸಂಪೂರ್ಣವಾಗಿ ತನ್ನ ಯಜಮಾನನ ನಿಯಂತ್ರಣದಲ್ಲಿ ಇದ್ದನು. ಅವನಿಗೆ ನಿಜವಾದ ಯಾವುದೇ ಹಕ್ಕೂ, ನಿಜವಾದ ಸೊತ್ತೂ ಇರಲಿಲ್ಲ. ಅವನು ತನಗೇ ಸ್ವಂತದವನಾಗಿರಲಿಲ್ಲ. ಈ ಮಾತು ಹಾಗೂ ಈ ಸಂದರ್ಭವು ಕ್ರಿಸ್ತನಿಗೆ ನಮ್ಮನ್ನು ಸಮರ್ಪಿಸುವ ಮತ್ತು ಆತನ ವಾಕ್ಯದ ಅಡಿಯಲ್ಲಿ ನಮ್ಮ ಜೀವಿತವನ್ನು ಉದಾಹರಿಸುವದಕ್ಕೆ ಉಪಯೋಗಿಸಲ್ಪಟ್ಟದ್ದರಲ್ಲಿ ಆಶ್ಚರ್ಯವಿಲ್ಲ. "ಇನ್ನೂ ಮನುಷ್ಯರನ್ನು ಮೆಚ್ಚಿಸುವವನಾಗಿದ್ದರೆ, ನಾನು ಕ್ರಿಸ್ತನ ದಾಸನಲ್ಲ" (ಗಲಾತ್ಯ 1:10ಬಿ; ಫಿಲಿಪ್ಪಿ 1:1 ನೋಡಿರಿ) ಎಂದು ಪೌಲನು ಬರೆದನು. "ನಾವು ವಿತರ್ಕಗಳನ್ನೂ ದೇವಜ್ಞಾನವನ್ನೂ ವಿರೋಧಿಸುವದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲಗಳನ್ನೂ ಕೆಡವಿಹಾಕಿ ಎಲ್ಲಾ ಯೋಚನೆಗಳನ್ನೂ

ಕ್ರಿಸ್ತನಿಗೆ ವಿಧೇಯರಾಗುವಂತೆ ಸೆರೆಹಿಡಿದು ... ಸಿದ್ಧರಾಗಿದ್ದೇವೆ'' (2 ಕೊರಿಂಥ 10:5) ಎಂದೂ ಅವನು ಬರೆದನು.

ಕ್ರೈಸ್ತರು - ಕ್ರಿಸ್ತನನ್ನು ತಮ್ಮ ಯಜಮಾನನೆಂದು ಹೇಳಿಕೊಳ್ಳುವವರು - ತಮ್ಮ ಜೀವನಗಳ ಮೇಲೆ ಇನ್ನು ಮುಂದೆ ಯಜಮಾನನಾಗಿರಲಾರರು. ಅವರು ತಮ್ಮ ಸ್ವಂತ ಚಿತ್ತವನ್ನು ''ಶಿಲುಬೆಗೆ'' ಹಾಕತಕ್ಕದ್ದು. ಅಂದರೆ, ಅವರು ತಮ್ಮ ಪಾಪಭರಿತ ಮಾನವ ಅಪೇಕ್ಷೆಗಳನ್ನು ನಾಶಪಡಿಸತಕ್ಕದ್ದು ಮತ್ತು ಜೀವನದಲ್ಲಿ ದೇವರ ಆಜ್ಞೆಗಳನ್ನು ಮೊದಲಾಗಿ ಇಡತಕ್ಕದ್ದು. ''ನನಗಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳ ಪಡುವುದು ಬೇಡವೇ ಬೇಡ. ಆತನ ಮೂಲಕ ಲೋಕವು ಶಿಲುಬೆಗೆ ಹಾಕಿಸಿಕೊಂಡು ನನ್ನ ಪಾಲಿಗೆ ಸತ್ತಿತು. ನಾನು ಶಿಲುಬೆಗೆ ಹಾಕಿಸಿಕೊಂಡು ಲೋಕದ ಪಾಲಿಗೆ ಸತ್ತನು'' (ಗಲಾತ್ಯ 6:14) ಎಂದು ಪೌಲನು ಹೇಳಿದನು. ''ಇನ್ನು ಮೇಲೆ ಯಾರೂ ನನ್ನನ್ನು ತೊಂದರೆ ಪಡಿಸಬಾರದು, ನನ್ನ ದೇಹದಲ್ಲಿ ಯೇಸುವಿನ ಮುದ್ರೆಗಳು ಹಾಕಿರುತ್ತವಲ್ಲಾ'' (ಗಲಾತ್ಯ 6:17) ಎಂದೂ ಅವನು ಹೇಳಿದ್ದಾನೆ.

## ಸಂಬಂಧದ ಅಂಕಿತಗಳು

ಸಭೆಗೆ ಸಂಬಂಧಿಸಿ ಹೊಸ ಒಡಂಬಡಿಕೆಯಲ್ಲಿ ಉಲ್ಲೇಖಿಸಿರುವ ವಿಧಾನಗಳು ಸಂಬಂಧದ ವಿಚಾರವನ್ನು ಒತ್ತಿ ಹೇಳುತ್ತವೆ. ಕರ್ತನ ಸಭೆಯ ಸದಸ್ಯರಾಗಿರುವುದು ವಿವಿಧ ಸಂಬಂಧಗಳನ್ನು ಒಳಗೊಂಡಿರುವದರಿಂದ ಇದು ನಿರೀಕ್ಷಿಸಲ್ಪಟ್ಟಿದೆ.

ಗುಲಾಮ/ಯಜಮಾನ ಸಂಬಂಧವಲ್ಲದೇ ಈಗಾಗಲೇ ಹೇಳಿದ ದೇಹ/ಶಿರಸ್ಸು ಸಂಬಂಧದೊಂದಿಗೆ '' ಕ್ರೈಸ್ತ'' ಎಂಬ ಪದವು ತಮ್ಮ ಕರ್ತನೊಂದಿಗೆ ಸಭಾ ಸದಸ್ಯರೊಂದಿಗಿರುವ ಸುಂದರವಾದ ಸಂಬಂಧವನ್ನು ಪ್ರಕಟಿಸುತ್ತದೆ. ಅವರು ಆತನ ಅನುಯಾಯಿಗಳು; ಅವರು ಆತನಿಗಾಗಿ ಜೀವಿಸುವರು ಮತ್ತು ಆತನ ಹೆಸರನ್ನು ಧರಿಸುವರು. ಅಪೊಸ್ತಲರಾದ ಪೌಲನು ಕ್ರೈಸ್ತನಾದ ತರುವಾಯ ತನ್ನ ಧಾರ್ಮಿಕ ಜೀವನವನ್ನು ಈಗ ಪ್ರಸಿದ್ಧವಾಗಿರುವ ಮಾತುಗಳೊಂದಿಗೆ ವಿವರಿಸಿದ್ದಾನೆ: ''ನನಗಂತೂ ಬದುಕುವದೆಂದರೆ ಕ್ರಿಸ್ತನೇ, ಸಾಯುವುದು ಲಾಭವೇ'' (ಫಿಲಿಪ್ಪಿ 1:21). ಪೌಲನ ಜೀವನದಲ್ಲಿ ಕೇವಲ ಮೊದಲಿಗನು ಮಾತ್ರವಲ್ಲ - ಕ್ರಿಸ್ತನು ಅವರ ಜೀವವಾಗಿದ್ದನು! ಪೌಲನ ಜೀವನದ ಒಟ್ಟು ತಾತ್ಪರ್ಯ ಕ್ರಿಸ್ತನಾಗಿದ್ದನು. ಅವನು ನಿಜವಾಗಿಯೂ ಕ್ರೈಸ್ತನಾಗಿದ್ದನು.

ಹೊಸ ಒಡಂಬಡಿಕೆಯು ಸಭೆಯನ್ನು ''ದೇವರ ಕುಟುಂಬ'' ಎಂದು ವಿವರಿಸುತ್ತದೆ. ಕ್ರೈಸ್ತರು ''ದೇವರ ಮನೆಯವರು'' ಆಗಿರುವರೆಂದು ಪೌಲನು

ಹೇಳಿದನು (ಎಫೆಸ 2:19). "ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನಾದ ದೇವರ ಸಭೆಯಲ್ಲಿ" (1 ತಿಮೊಥೆ 3:15) ಹೇಗೆ ನಡೆದುಕೊಳ್ಳಬೇಕೆಂದು ತಿಳಿಯುವದಕ್ಕಾಗಿ ತಿಮೊಥೆಯನಿಗೆ ಬರೆದೆನೆಂದು ಅವನು ಹೇಳಿದನು. ಒಬ್ಬನು ಕ್ರಿಸ್ತನಿಗಾಗಿ ಮಾರ್ಪಾಟು ಹೊಂದುವ ಸಮಯದಲ್ಲಿ, ದೇವರು ಅವನನ್ನು ತನ್ನ ಮಗುವಿನಂತೆ ದತ್ತು ತೆಗೆದುಕೊಳ್ಳುತ್ತಾನೆ. ಅವನಿಗೆ ಕುಟುಂಬದ ಹಕ್ಕುಗಳನ್ನು ಕೊಡುತ್ತಾನೆ ಹಾಗೂ ಅವನನ್ನು ಕ್ರಿಸ್ತನೊಂದಿಗೆ ನಿತ್ಯಜೀವದ ಬಾಧ್ಯನನ್ನಾಗಿ ಮಾಡುತ್ತಾನೆ (ರೋಮಾಪುರ 8:15-17; ಎಫೆಸ 1:5). ಪ್ರಾರ್ಥಿಸಲು ಕ್ರೈಸ್ತರಿಗೆ ಪರಲೋಕದ ತಂದೆಯಿರುವನು. ಪ್ರಾರ್ಥಿಸುವದಕ್ಕಾಗಿ ಪ್ರೀತಿಯ ರಕ್ಷಕನು - ಹಿರಿಯ ಸಹೋದರನು, ಯೇಸುವು - ಇರುವನು. ಸಹೋದರ, ಸಹೋದರಿ ಯರಂತೆ ಅವರು ಒಬ್ಬರನ್ನೊಬ್ಬರು ಪ್ರೀತಿಸುವರು. ಸಹಾಯ ಮಾಡುವರು ಹಾಗೂ ಪ್ರೋತ್ಸಾಹಿಸುವರು (ಅಪೊಸ್ತಲರ ಕೃತ್ಯಗಳು 2:44).

ಸಭೆಯ ಸದಸ್ಯರು "ದೇವರ ಮಕ್ಕಳು" ಎಂದು ಸಂಬಂಧಿಸಿ ಹೇಳ ಲ್ಪಟ್ಟಿದ್ದಾರೆ. ದೇವರೊಂದಿಗೆ ಅವರಿಗೆ ವಿಶೇಷ ಸಂಬಂಧವಿರುವುದು; ಆತನು ಅವರ ತಂದೆ ಹಾಗೂ ಅವರು ಆತನ ಮಕ್ಕಳು. ವಿಶ್ವಾಸಿಗಳು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದುವಾಗ, ಅವರು ದೇವರ "ಮಕ್ಕಳಂತೆ" ದತ್ತು ಸ್ವೀಕಾರ ಹೊಂದುವರು (ಎಫೆಸ 1:5) ಆತನ ಮಕ್ಕಳಂತೆ, ಕ್ರೈಸ್ತರಿಗೆ ನಿತ್ಯವಾದ ಬಾಧ್ಯಸ್ಥಿಕೆಯಿರುವುದು (ಎಫೆಸ 1:11) ಹಾಗೂ ದೇವರ ಭೂಲೋಕದ ಕುಟುಂಬದ ಬಲವೂ ಸಹಕಾರವೂ ಇರುವುದು (1 ತಿಮೊಥೆ 3:15; ಎಫೆಸ 2:19-22). ಈ ಆತ್ಮಿಕ, ಪರಲೋಕದ ಕುಟುಂಬದಲ್ಲಿ ದೇವರು ತಂದೆಯಾಗಿರುವನು (ಮತ್ತಾಯ 6:9). ಯೇಸುವು ಹಿರಿಯ ಸಹೋದರನಾಗಿರುವನು (ರೋಮಾಪುರ 8:17). ಎಲ್ಲಾ ಕ್ರೈಸ್ತರು ಸಹೋದರರೂ ಸಹೋದರಿಯರೂ ಆಗಿರುವರು (2 ಪೇತ್ರ 3:15; 1 ಯೋಹಾನ 2:8-11).

ತನ್ನ ಮಕ್ಕಳಿಗಾಗಿ ದೇವರಿಗೆ ವಿಶೇಷ ಪ್ರೀತಿಯಿರುವುದು (1 ಯೋಹಾನ 3:1). ಆತನು ಅವರನ್ನು ಸೈತಾನನಿಂದ ಕಾಪಾಡುವನು ಮತ್ತು ಅವರ ಅನುದಿನದ ಅಗತ್ಯತೆಗಳನ್ನು ಪೂರೈಸುವನು, ಭೂಲೋಕದ ತಂದೆಯು ತನ್ನ ಮಕ್ಕಳಿಗೆ ಒಳ್ಳೆಯ ವರಗಳನ್ನು ಕೊಡುವಂತೆ ಸರ್ವಶಕ್ತನಾದ ದೇವರ - ಪರಲೋಕದ ಪರಿಪೂರ್ಣ ತಂದೆಯ ಮಕ್ಕಳು - ಕೇಳುವಾಗ ಇನ್ನೂ ಎಷ್ಟೋ ಹೆಚ್ಚು ಸುಂದರವಾದ ವರಗಳನ್ನು ನಿರೀಕ್ಷಿಸ ಬಹುದಲ್ಲವೇ! (ಮತ್ತಾಯ 7:11 ನೋಡಿರಿ).

ಆದಿ ಸಭೆಯ ಸದಸ್ಯರು ಒಬ್ಬರನ್ನೊಬ್ಬರು ಸಹೋದರರು ಎಂದು ಅಷ್ಟೇ ಅಲ್ಲ ಆದರೆ ಸುಂದರವಾದ ಸ್ನೇಹದಲ್ಲಿ ಒಂದಾಗಿ ನಿಲ್ಲುವ ಸ್ನೇಹಿತರೆಂದೂ ಯೋಚಿಸಿದರು (2 ಪೇತ್ರ 3:15; 3 ಯೋಹಾನ 15). ಕ್ರೈಸ್ತರು ಅತೀ ಉನ್ನತವಾದ ರೀತಿಯ ಸ್ನೇಹಿತರಾಗಿದ್ದಾರೆ.

“ನಿಮಗೆ ಶಾಂತಿಯಿರಲಿ, ಸ್ನೇಹಿತರು ನಿಮಗೆ ವಂದನೆ ಹೇಳುತ್ತಾರೆ. ಸ್ನೇಹಿತರನ್ನು ಹೆಸರ್ಹೆಸರಾಗಿ ವಂದಿಸು” (3 ಯೋಹಾನ 14) ಎಂದು ಬರೆಯುವದರಿಂದ ಯೋಹಾನನು ತನ್ನ ಮೂರನೆಯ ಪತ್ರಿಕೆಯನ್ನು ಮುಕ್ತಾಯಗೊಳಿಸಿದನು. ತನ್ನ ಸುತ್ತಲಿರುವ ಕ್ರೈಸ್ತರನ್ನು “ಸ್ನೇಹಿತರು” ಎಂದು ಕರೆದನು. ಪತ್ರವನ್ನು ಸ್ವೀಕರಿಸಲಿಕ್ಕಿದ್ದ ಕ್ರೈಸ್ತರನ್ನು “ಸ್ನೇಹಿತರು” ಎಂದು ಕರೆದನು. ಯೇಸುವು ತನ್ನ ಶಿಷ್ಯರನ್ನು ‘‘ಸ್ನೇಹಿತರು’’ ಎಂದು ಕರೆದನು. ಯೋಹಾನನು ಯೇಸುವಿನ ಮಾದಿರಿಯಂತೆ ಈ ಪದವನ್ನು ಉಪಯೋಗಿಸಿದನು ಎಂಬದರಲ್ಲಿ ಸಂಶಯವಿಲ್ಲ. ಯೇಸುವು ತನ್ನ ಶಿಷ್ಯರಿಗೆ ಹೀಗೆ ಹೇಳಿದನು,

> ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವುದೂ ಇಲ್ಲ. ನಾನು ನಿಮಗೆ ಕೊಟ್ಟ ಆಜ್ಞೆಗಳಿಗೆ ಸರಿಯಾಗಿ ನೀವು ನಡೆದರೆ ನೀವು ನನ್ನ ಸ್ನೇಹಿತರು. ಇನ್ನು ಮೇಲೆ ನಾನು ನಿಮ್ಮನ್ನು ಆಳು ಗಳನ್ನುವದಿಲ್ಲ; ಯಜಮಾನನು ಮಾಡುವಂಥದು ಆಳಿಗೆ ತಿಳಿಯುವದಿಲ್ಲ. ನಿಮ್ಮನ್ನು ಸ್ನೇಹಿತರೆಂದು ಹೇಳಿದ್ದೇನೆ; ತಂದೆಯ ಕಡೆಯಿಂದ ನಾನು ಕೇಳಿದ್ದನೆಲ್ಲಾ ನಿಮಗೆ ತಿಳಿಸಿದ್ದೇನೆ (ಯೋಹಾನ 15:13-15).

‘‘ಉಳಿದ ಪ್ರತಿಯೊಬ್ಬರೂ ಬಿಟ್ಟು ಹೋಗುವಾಗ ನಿನ್ನೊಂದಿಗೆ ಉಳಿಯುವವನೇ ಸ್ನೇಹಿತನು’’ ಎಂದು ಯಾರೋ ಹೇಳಿದ್ದಾರೆ. ಯೇಸು ಈ ರೀತಿಯ ಸ್ನೇಹಿತನಾಗಿದ್ದಾನೆ. ನಮಗೆ ಯಾರೂ ಸಹಾಯ ಮಾಡಲಾರದೇ ಇದ್ದಾಗ, ಆತನು ನಮಗಾಗಿ ತನ್ನ ಪ್ರಾಣಕೊಟ್ಟನು. ಕ್ರೈಸ್ತರು ಒಬ್ಬರಿಗೊಬ್ಬರು ಈ ರೀತಿಯ ಸ್ನೇಹಿತರಾಗಿರತಕ್ಕದ್ದು (1 ಯೋಹಾನ 3:16). ಕ್ರೈಸ್ತರು “ಸ್ನೇಹಿತರು” ಆಗಿದ್ದಾರೆ.

ಮೊದಲನೆಯ ಶತಮಾನದ ಸಭೆಯು ಬಹಳ ಸಲ ‘‘ಕರ್ತನ ಶಿಷ್ಯರು’’ (ಅಪೊಸ್ತಲರ ಕೃತ್ಯಗಳು 9:1) ಇಲ್ಲವೇ ಸರಳವಾಗಿ ‘‘ಶಿಷ್ಯರು’’ (ಅಪೊಸ್ತಲರ ಕೃತ್ಯಗಳು 9:26; 11:26) ಎಂದು ಸಂಬಂಧಿಸಿ ಕರೆಯಲ್ಪಟ್ಟಿದೆ. ‘‘ಶಿಷ್ಯ’’ ಎಂಬ ಪದದ ಅರ್ಥ ಕಲಿಯುವ ಅಥವಾ ಹಿಂಬಾಲಕ ಎಂದಾಗುತ್ತದೆ. ಇದು ಕ್ರೈಸ್ತನ ಮತ್ತು ಅವನ ಕರ್ತನ ಮಧ್ಯದಲ್ಲಿ ಸತತವಾಗಿ ಅಸ್ತಿತ್ವದಲ್ಲಿರುವ ಸಂಬಂಧವನ್ನು ಸೂಚಿಸುತ್ತದೆ. ಶಿಷ್ಯನು ತನಗಿಂತ ದೊಡ್ಡವನಾದವನಿಗೆ ಒಪ್ಪಿಸಿಕೊಟ್ಟವನು. ದೊಡ್ಡವನಾದವನಿಗೆ ಒಪ್ಪಿಸಿಕೊಟ್ಟವನು ದೊಡ್ಡವನಾದವನಿಂದ ಕಲಿತುಕೊಳ್ಳುವವನು. ಬೋಧನೆ, ಅನುಕರಣೆಯ ಮುಖಾಂತರ ಸತತವಾಗಿ ಕಲಿಯಲು ಹುಡುಕುವವನು ಆಗಿದ್ದಾನೆ. ಅವನು ಕೇವಲ ಕೇಳುವವನಲ್ಲ; ಅವನು ಕಲಿಯುವವನಾಗಿದ್ದಾನೆ. ಅವನ ಕರ್ತನು ಅವನ ಯಜಮಾನನಾಗಿದ್ದಾನೆ, ಅವನು ಬೋಧಕನಾಗಿದ್ದಾನೆ (ಯೋಹಾನ 13:13).

"ಶಿಷ್ಯ" ಎಂಬ ಪದವು ಸುವಾರ್ತೆಗಳಲ್ಲಿ ವಿಶೇಷವಾಗಿ ಉಪಯೋಗಿಸಲ್ಪಟ್ಟಿದೆ. ಅವುಗಳಲ್ಲಿ 238 ಸಲ ಕಂಡು ಬರುತ್ತದೆ. ಅದು ಅಪೊಸ್ತಲರ ಕೃತ್ಯಗಳಲ್ಲಿ ಇಪ್ಪತ್ತೆಂಟು ಸಲ ಕಂಡು ಬರುತ್ತದೆ. ಪತ್ರಿಕೆಗಳಲ್ಲಿ, ಪ್ರಕಟನೆ ಗ್ರಂಥದಲ್ಲಿ ಕಂಡು ಬರುವದಿಲ್ಲ. ಸುವಾರ್ತೆಗಳಿಂದ, ಅಪೊಸ್ತಲರ ಕೃತ್ಯಕ್ಕೆ, ಪತ್ರಿಕೆಗಳಿಗೆ ಹೋಗುವಾಗ ಪದ ಪ್ರಯೋಗದಲ್ಲಿ ಸ್ಪಷ್ಟವಾದ ಬದಲಾವಣೆಯಾಗುವದಕ್ಕೆ ಕಾರಣವು ಭೂಲೋಕದಲ್ಲಿಯ ಕ್ರಿಸ್ತನ ಜೀವನದ ಸಮಯದಲ್ಲಿ ಆತನಿಗೆ ಸಂಬಂಧಿಸಿ ಆತನ ಅನುಯಾಯಿಗಳು "ಶಿಷ್ಯರು" ಎಂದು ಕರೆಯಲ್ಪಟ್ಟಿದ್ದು, ಅನಂತರ ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ, ಪತ್ರಿಕೆಗಳಲ್ಲಿ ಮತ್ತು ಪ್ರಕಟನೆಯಲ್ಲಿ ಅವರು ಅವರ ಪವಿತ್ರ ಕರೆಯುವಿಕೆಯ ಸಂಬಂಧದಲ್ಲಿ "ಪರಿಶುದ್ಧರು" ಎಂದೂ ಅಥವಾ ಅವರ ಒಬ್ಬರಿಗೊಬ್ಬರ ಸಂಬಂಧದಲ್ಲಿ "ಸಹೋದರರು" ಎಂದು ಕರೆಯಲ್ಪಟ್ಟರು.

ತನ್ನ ದಿವಾರೋಹಣಕ್ಕಿಂತ ಮೊದಲು ತನ್ನ ಅಪೊಸ್ತಲರಿಗೆ ಮಹಾನಿಯೋಗ ದಲ್ಲಿ ಕ್ರಿಸ್ತನು ಹೀಗೆ ಆಜ್ಞಾಪಿಸಿದನು: "ಆದ್ದರಿಂದ ನೀವು ಹೊರಟುಹೋಗಿ ಸಮಸ್ತ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಕುಮಾರನ, ಪರಿಶುದ್ಧಾತ್ಮನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿರಿ. ನೋಡಿರಿ. ನಾನು ಯುಗದ ಸಮಾಪ್ತಿಯವರೆಗೂ ಸದಾಕಾಲ ನಿಮ್ಮ ಸಂಗಡ ಇರುತ್ತೇನೆ" (ಮತ್ತಾಯ 28:19, 20). ಈ ರೀತಿಯಲ್ಲಿ, ಹೊಸ ಒಡಂಬಡಿಕೆಯ ಅನಂತರದ ಭಾಗದಲ್ಲಿ ಈ ಪದವು ಕಂಡು ಬಾರದಿದ್ದರೂ, "ಶಿಷ್ಯ" ಎಂಬ ಪದಕ್ಕೆ ಸತತವಾದ ಉಪಯೋಗ ವನ್ನು ಆತನು ಕೊಟ್ಟನು.

ಶಿಷ್ಯನು ವಾಕ್ಯದ ಕಾರ್ಯವನ್ನು ಮಾಡುವವನಾಗಿದ್ದಾನೆ. "ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ" (ಯಾಕೋಬ 1:22) ಎಂದು ಯಾಕೋಬನು ಹೇಳಿದ್ದಾನೆ. ಶಿಷ್ಯನು ವಿದ್ಯಾರ್ಥಿಗಳಿಗಿಂತ ಹೆಚ್ಚಿನವನಾಗಿದ್ದಾನೆ; ಅವನು ಕ್ರಿಸ್ತನನ್ನು ಅನುಕರಣೆ ಮಾಡುವವನಾಗಿದ್ದಾನೆ. ಕ್ರಿಸ್ತನ ಅನುಯಾಯಿ ಆಗಿದ್ದಾನೆ.

ಇನ್ನೊಂದು ದೃಷ್ಟಿಕೋನದಿಂದ ಹೊಸ ಒಡಂಬಡಿಕೆಯ ಸಭೆಯು "ದೇವರ ಆಲಯ" ಎಂದು ಕರೆಯಲ್ಪಟ್ಟಿದೆ. "ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸ ಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ?" (1 ಕೊರಿಂಥ 3:16) ಎಂದು ಕೊರಿಂಥದಲ್ಲಿಯ ಕ್ರೈಸ್ತರಿಗೆ ಪೌಲನು ಹೇಳಿದ್ದಾನೆ. ಸಭೆಯು ಕ್ರೈಸ್ತರ ಕೂಟವಾಗಿ ದೇವರಿಗಾಗಿ ವಾಸಿಸುವ ಸ್ಥಳವನ್ನು ರೂಪಿಸುತ್ತದೆ. ದೇವರ ಪವಿತ್ರ ಆಲಯವು ಇಂದು ಸಜೀವ ದೇಹ, ಸಭೆ ಆಗಿದೆ. ವೈಯಕ್ತಿಕ ಕ್ರೈಸ್ತರು ಹೀಗೆ "ಪರಿಶುದ್ಧರು" ಎಂದು ಕರೆಯಲ್ಪಟ್ಟಿದೆ ಯಾಕಂದರೆ ಅವರು ಪರಿಶುದ್ಧವಾದ ಕಾರ್ಯ ಮಾಡಲು ದೇವರಿಗಾಗಿ ವಾಸಸ್ಥಾನವನ್ನು

ಒದಗಿಸಿ ಕೊಡಲು ಸುವಾರ್ತೆಯಿಂದ ಪ್ರತ್ಯೇಕಿಸಲ್ಪಟ್ಟಿದ್ದಾರೆ (1 ಕೊರಿಂಥ 1:2).

ಹೊಸ ಒಡಂಬಡಿಕೆಯ ಒಂದು ವಾಕ್ಯದಲ್ಲಿ ಸಭೆಯು "ಚೊಚ್ಚಲ ಮಕ್ಕಳ ಸಭೆ" ಎಂದು ಕರೆಯಲ್ಪಟ್ಟಿದೆ (ಇಬ್ರಿಯ 12:23). ಸಭೆಯು ಭವಿಷ್ಯದೊಂದಿಗೆ ಅದ್ವಿತೀಯವಾದ ಸಂಬಂಧವನ್ನು ಕಾಪಾಡಿಕೊಂಡು ಹೋಗುತ್ತದೆ. ಯಾಕಂದರೆ ಸಭೆಯ ಪ್ರತಿಯೊಬ್ಬ ಸದಸ್ಯನು "ಪರಲೋಕದಲ್ಲಿ ದಾಖಲೆ ಮಾಡಲ್ಪಟ್ಟವನಾಗಿದ್ದಾನೆ." ಕ್ರೈಸ್ತನಿಗಾಗಿ ಭವಿಷ್ಯವು ಭಯವನ್ನೂ ಹೆದರಿಕೆಯನ್ನೂ ಹೊಂದಿಕೊಂಡಿರುವದಿಲ್ಲ ಯಾಕಂದರೆ ಕ್ರಿಸ್ತನು ನಿತ್ಯವಾದ ನಿರೀಕ್ಷೆಯನ್ನು ಅವರಿಗೆ ಕೊಡುವನು. ಸಂಬಂಧಕ್ಕೆ ಸಂಬಂಧಿಸಿದ ರೀತಿಯ ಅಂಕಿತಗಳು ಸಭೆಯು ಏನಾಗಿದೆ ಎಂದು ಕೊಡಲ್ಪಟ್ಟ ಒಳನೋಟವು ಸಭೆಯು ಹೇಗೆ ಜೀವಿಸತಕ್ಕದ್ದು ಎಂದಾಗಿದೆ. ಅವು ಭೂಲೋಕದಲ್ಲಿ ಹೇಗೆ ಜೀವಿಸ ಬೇಕು ಮತ್ತು ಭವಿಷ್ಯದಲ್ಲಿ ದೇವರೊಂದಿಗೆ ರಕ್ಷಿಸಲ್ಪಟ್ಟವರು ಹೇಗೆ ಇರುವರು ಎಂಬುದನ್ನು ಕ್ರೈಸ್ತರಿಗೆ ಹೇಳುತ್ತವೆ.

## ಮುಕ್ತಾಯ

ಅಬ್ರಾಮ ಎಂಬ ಹೆಸರು ಮುಂದೆ ಸರಿಯಾಗಿ ಹೊಂದಿಕೆಯಾಗದ್ದರಿಂದ ದೇವರು ಅಬ್ರಾಮನ ಹೆಸರನ್ನು ಅಬ್ರಹಾಮ ಎಂದು ಬದಲಾಯಿಸಿದನು. ಅವನು ಅನೇಕ ಜನಾಂಗಗಳ ತಂದೆಯಾಗುವನೆಂದು ಅಬ್ರಾಮನಿಗೆ ಹೇಳ ಲ್ಪಟ್ಟಿತು (ಆದಿಕಾಂಡ 17:5). ಅಬ್ರಾಮ ಎಂದರೆ "ಉನ್ನತಿಗೆ ಏರಿಸಲ್ಪಟ್ಟ ತಂದೆ" ಎಂದರ್ಥ. ಅಬ್ರಾಮ ಎಂಬುದು ಅರ್ಥಗರ್ಭಿತವಾದ ಹೆಸರಾಗಿತ್ತು. ಆದರೆ ಅದು ಭವಿಷ್ಯದ ಅಬ್ರಾಮನು ಹೇಗಿರುವನೆಂಬುದನ್ನು ಪ್ರತಿನಿಧಿಸುವದಿಲ್ಲ. ಅಬ್ರಹಾಮ ಎಂಬ ಹೆಸರಿನ ಅರ್ಥ "ಸಮೂಹದ ತಂದೆ" ಎಂಬುದು. ಜನಾಂಗದ ತಂದೆಯಾಗಿರುವ ಮನುಷ್ಯನಿಗಾಗಿ ಸರಿಯಾದ ಹೆಸರಾಗಿದೆ. ಅಬ್ರಾಹಾಮನಿಗೆ ದೇವರು ಕೊಟ್ಟ ಅಂಕಿತವು ದೇವರಿಗೂ ಅಬ್ರಹಾಮನಿಗೂ ಅರ್ಥಗರ್ಭಿತವಾಗಿತ್ತು. ಹಾಗೆಯೇ ದೇವರು ಸಭೆಗೆ ಕೊಟ್ಟ ಅಂಕಿತದ ಅರ್ಥವು ದೇವರಿಗೆ ವಿಶೇಷವಾದ ದ್ದಾಗಿದೆ ಮತ್ತು ನಮಗೂ ಬಹಳ ಅರ್ಥಗರ್ಭಿತವುಳ್ಳದ್ದಾಗಿರಬೇಕು.

ಹೊಸ ಒಡಂಬಡಿಕೆಯ ಸಭೆಗೆ ಸಂಬಂಧಿಸಿ ಹೇಳುವ ಯೋಗ್ಯ ಮಾರ್ಗಗಳಿವೆ ಮತ್ತು ಅವುಗಳನ್ನು ಉಪಯೋಗಿಸಿಕೊಳ್ಳತಕ್ಕದ್ದು. ಸಭೆಗೆ, ಬೈಬಲ್‌ಗೆ ಸಂಬಂಧಿಸದೇ ಇರುವಂಥ ಅಂಕಿತಗಳನ್ನು ಉಪಯೋಗಿ ಸುವದರಿಂದ ಸಭೆಯ ಗುರುತನ್ನು ಗಲಿಬಿಲಿಗೊಳಿಸುತ್ತದೆ. ಜನರ ಒಂದು ಗುಂಪು ಹೊಸ ಒಡಂಬಡಿಕೆಯ ಸಭೆಯಂತೆ ಇರಲು ಹುಡುಕಿದರೆ ಮತ್ತು ಹೊಸ

ಒಡಂಬಡಿಕೆಯ ಸಭೆಯೆಂದು ತಿಳಿಯಲ್ಪಡ ಬೇಕಾದರೆ, ಅವರು ಸಭೆಗಾಗಿ ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಟ್ಟ ಅಂಕಿತಗಳನ್ನು ಉಪಯೋಗಿಸತಕ್ಕದ್ದು. ಒಂದು ಸಭೆಯು ತನ್ನನ್ನು ಹೊಸ ಒಡಂಬಡಿಕೆಯ ಸಭೆಯೆಂದು ಕರೆದುಕೊಳ್ಳ ಬಹುದು. ಆದರೆ ಹೊಸ ಒಡಂಬಡಿಕೆಯ ಸಭೆಯಾಗಿರದೇ ಇರಬಹುದು. ಅದು ನಿಜವಾಗಿಯೂ ಹೊಸ ಒಡಂಬಡಿಕೆಯ ಸಭೆಯಾಗಿದ್ದರೆ, ಅದು ತನ್ನನ್ನು ಯೋಗ್ಯವಾದ ಹೊಸ ಒಡಂಬಡಿಕೆಯ ಭಾಷೆಯೊಂದಿಗೆ ಸಂಬಂಧಿಸಿ ಪ್ರಸ್ತಾಪಿಸಿಕೊಳ್ಳಬೇಕು.

ಇಂದು ದೇವರ ಸಭೆಯಾಗಿರುವದಕ್ಕೆ ಒಪ್ಪಿಸಿ ಕೊಡಲ್ಪಟ್ಟಿದ್ದ ಸದಸ್ಯನು ತನಗೆ ಅಂಕಿತ ಇಟ್ಟುಕೊಳ್ಳುವದರಲ್ಲಿ ಮತ್ತು ವಿವರಿಸಿಕೊಳ್ಳುವದರಲ್ಲಿ ತೋರಿ ಸಲ್ಪಡತಕ್ಕದ್ದು. ದೇವರು ತನ್ನ ಸಭೆಗಾಗಿ ಉಪಯೋಗಿಸಿದ ಅಂಕಿತಗಳನ್ನು ಉಪಯೋಗಿಸುವುದು ತನ್ನ ಸಭೆಯು ಏನಾಗಿರಬೇಕು ಮತ್ತು ಏನು ಮಾಡಬೇಕು ಎಂದು ದೇವರು ಬಯಸುವದನ್ನು ತನ್ನ ಜೀವನದಲ್ಲಿ ರೂಢಿಸಲು ಪ್ರಯತ್ನಿಸುವ ಕ್ರೈಸ್ತರಿಗಾಗಿ ಪ್ರಾರಂಭದ ಸ್ಥಳವಾ ಗಿರುವುದು. ದೇವರು ಸಭೆಯನ್ನು ಕರೆದದ್ದನ್ನು ತಮಗೆ ಕರೆದುಕೊಳ್ಳುವಾಗ ಅವರು ತಮ್ಮನ್ನು ಸರಿಯಾದ ಮಾರ್ಗದಲ್ಲಿಟ್ಟು ಕೊಳ್ಳುವರು ಮತ್ತು ಅವರು ಏನಾಗಿರಬೇಕೆಂದು ಬಯಸುವರೋ ಅದಾಗುವದರ ಕಡೆಗೆ ಹೋಗುತ್ತಿರುವರು. (ಪುರವಣಿ 3ನ್ನು ನೋಡಿರಿ.)

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ಹೊಸ ಒಡಂಬಡಿಕೆಯಲ್ಲಿ "ರಾಜ್ಯ" ಎಂಬ ಪದವು ಸಭೆಯೊಂದಿಗಿನ ಸಂಬಂಧದಲ್ಲಿ ಹೇಗೆ ಉಪಯೋಗಿಸಲ್ಪಟ್ಟಿದೆ?
2. ಪೌಲನು ಸಭೆಯನ್ನು "ಕ್ರಿಸ್ತನ ಸಭೆ" ಎಂದು ಯಾಕೆ ಹೇಳಿದ್ದಾನೆ? ಸಭೆಗಾಗಿ ಬೇರೆ ಯಾವ ಅಂಕಿತಗಳು ಒಡೆತನವನ್ನು ಸೂಚಿಸುತ್ತವೆ?
3. ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಟ್ಟ ಸಭೆಗಾಗಿರುವ ಅಂಕಿತಗಳನ್ನು ನಾವು ಯಾಕೆ ಉಪಯೋಗಿಸಬೇಕು?
4. ಬೈಬಲು ಹೇಳುವಂತೆ ನಾವು ಸಭೆಗೆ ಸಂಬಂಧಿಸಿ ಹೇಳುವಾಗ ನಾವು ಏನನ್ನು ಸಾಧಿಸುತ್ತೇವೆ?
5. ಸಭೆಯು "ದೇವರ ಕುಟುಂಬ" ಎಂದು ಯಾಕೆ ಕರೆಯಲ್ಪಟ್ಟಿದೆ?
6. " ಕ್ರೈಸ್ತ" ಎಂಬ ಪದದ ಮೂಲ ಅರ್ಥ ಯಾವುದು? ಒಬ್ಬನು ಕ್ರೈಸ್ತನಂತೆ ಜೀವಿ ಸುವಾಗ ಅವನು ಹೇಗೆ ಜೀವಿಸುವನು?
7. ಫಿಲಿಪ್ಪಿ 1:21ರಲ್ಲಿ ಪೌಲನು ತನ್ನ ಜೀವಿತವನ್ನು ಕ್ರೈಸ್ತನಂತೆ ಹೇಗೆ ವಿವರಿಸಿದನು?

8. "ದೇವರ ಮಗುವಾಗಿರುವುದು" ಎಂಬುದರ ಅರ್ಥವೇನು? ದೇವರೊಂದಿಗಿನ ಗುಣಲಕ್ಷಣಗಳನ್ನು ಕೊಡಿರಿ.
9. ಹೊಸ ಒಡಂಬಡಿಕೆಯಲ್ಲಿ "ಶಿಷ್ಯ" ಎಂಬ ಪದ ಎಷ್ಟು ಸಲ ಕಂಡು ಬರುತ್ತದೆ?
10. ಶಿಷ್ಯನ ಗುಣಲಕ್ಷಣಗಳನ್ನು ಕೊಡಿರಿ.
11. "ಸೇಂಟ್" (ಪರಿಶುದ್ಧರು) ಎಂಬ ಪದದ ಮೂಲ ಅರ್ಥ ಕೊಡಿರಿ. ಒಬ್ಬ ವ್ಯಕ್ತಿಯು ಯಾವಾಗ "ಸೇಂಟ್" ಆಗುವನು? ಒಬ್ಬ ಸೇಂಟ್‌ನ ಗುಣಲಕ್ಷಣಗಳು ಯಾವವು?

---

ಟಿಪ್ಪಣಿಗಳು

[1]ಹೊಸ ಒಡಂಬಡಿಕೆಯಲ್ಲಿ ಸಭೆಯು ಉದಾಹರಿಸಲ್ಪಟ್ಟಿದೆ. ಉದಾಹರಣೆಯಾಗಿ - ಕುರಿಮಂದೆಯಂತೆ (ಯೋಹಾನ 10:1), ದ್ರಾಕ್ಷ ತೋಟದಂತೆ (ಮತ್ತಾಯ 20:1) ಅಥವಾ ಅಮೂಲ್ಯ ಮುತ್ತು (ಮತ್ತಾಯ 13:45, 46) ಅಂಥ ರೂಪಗಳು ಸಭೆಯನ್ನು ಹೆಚ್ಚು ಉತ್ತಮವಾಗಿ ತಿಳಿದುಕೊಳ್ಳಲು ಸಹಾಯ ಮಾಡುತ್ತವೆ. ಆದರೆ ಅವು ಕೇವಲ ಉದಾಹರಣೆಗಳು. [2]ಸಭೆಯನ್ನು ಗುರುತಿಸುವ ಮಾರ್ಗಗಳಲ್ಲಿ "ಅಂಕಿತಗಳು" ಎಂದು ಇಲ್ಲಿ ಉಪಯೋಗಿಸಿದಂತೆ, ಸಭೆಯನ್ನು ಕುರಿತು ಹೇಳುವ ಬೈಬಲಿನ ಮಾತುಗಳು ಎಂದರ್ಥದಲ್ಲಿವೆ.

15

# ಕ್ರಿಸ್ತ, ಸಭೆಯ ಶಿರಸ್ಸು

ಒಂದು ಅಂಗಡಿಯೊಳಗೆ ಓಡುತ್ತ ಒಂದು ಬಾಲಕರ ಗುಂಪು ಬಂದದ್ದರ ಕಥೆಯು ಹೇಳುತ್ತದೆ. ಅವರು ಕೆಲವು ವಸ್ತುಗಳನ್ನು ಕೊಂಡುಕೊಂಡರು ಹಾಗೂ ಹೊರಗೆ ಓಡಿ ಹೋದರು. ಕೆಲವು ನಿಮಿಷಗಳಲ್ಲಿ ಅವರು ಕಣ್ಣಿಗೆ ಮರೆಯಾಗಿದ್ದರು. ಕೆಲವು ನಿಮಿಷಗಳ ನಂತರ ಇನ್ನೊಬ್ಬ ಬಾಲಕನು ಓಡುತ್ತ ಅಂಗಡಿಯೊಳಗೆ ಬಂದನು. "ಬಾಲಕರ ಒಂದು ಗುಂಪು ಬಂದದ್ದನ್ನು ನೋಡಿದಿರೋ?" ಎಂದು ಅಂಗಡಿಯವನಿಗೆ ಕೇಳಿದನು. "ಹೌದು, ಅವರು ಹದಿನೈದು ನಿಮಿಷಗಳಿಗಿಂತ ಹೆಚ್ಚು ಸಮಯ ಇಲ್ಲಿ ಇರಲಿಲ್ಲ, ಅವರು ಬಹಳ ಅವಸರದಲ್ಲಿ ಇದ್ದರು" ಎಂದು ಅಂಗಡಿಯವನು ಹೇಳಿದನು. "ಯಾವ ಕಡೆಗೆ ಅವರು ಹೋದರು? ನಾನು ಅವರ ನಾಯಕನು!" ಎಂದು ಬಾಲಕನು ಹೇಳಿದನು.

ಆ ಬಾಲಕನು ನಾವು ಬಹಳ ಸಲ ನೋಡಿದ ನಾಯಕತ್ವದ ಉದಾಹರಣೆಯಾಗಿದ್ದಾನೆ - ಇದು ಮುಂದಿನಿಂದ ನಡಿಸುವ ನಾಯಕತ್ವವಾಗಿರುವದಿಲ್ಲ, ಆದರೆ ಹಿಂಬಾಲಕರು ಯಾವ ಮಾರ್ಗದಲ್ಲಿ ಹೋಗಿದ್ದಾರೆ ಎಂದು ಆಶ್ಚರ್ಯಪಡುವ ನಾಯಕತ್ವವಾಗಿದೆ. ಮಾನವ ನಾಯಕತ್ವದ ತೊಂದರೆಯು ಅದರ ಕೊರತೆಗಳಲ್ಲಿಯೂ ತಪ್ಪುಗಳಲ್ಲಿಯೂ ಇರುತ್ತದೆ. ಒಂದಿಲ್ಲಾ ಒಂದು ಸಮಯದಲ್ಲಿ ಮಾನವ ನಾಯಕತ್ವವು ನಿರಾಶೆಯನ್ನು ತರುತ್ತದೆ. ಜನರು ಯಾವಾಗಲೂ ಜನರಾಗಿರುತ್ತಾರೆ.

ಕೆಲವು ಸಂದರ್ಭಗಳಲ್ಲಿ ಸಭೆಗೂ ಬಲಹೀನ ನಾಯಕತ್ವವಿರುವುದೋ? ಪರಲೋಕದ ಕಡೆಗೆ ಹೋಗುತ್ತಿರುವ ಹಡಗಿನ ಯಜಮಾನನು ಮಾನವ ಬಲಹೀನತೆ ಹಾಗೂ ಸೋಲುಗಳಿಗೆ ಒಳಪಟ್ಟಿರುವನೋ? ಸಭೆಯು ಭೂಲೋಕದಿಂದ ಮಹಾನಿತ್ಯತ್ವದ ತೀರಕ್ಕೆ ಪ್ರಯಾಣ ಮಾಡುತ್ತಿರುವಾಗ ಅದರ ಸದಸ್ಯರು ಮುರಿದ ದಿಕ್ಸೂಚಿಯ ಮೇಲೆ ಅವಲಂಭಿಸಬೇಕೋ?

ಸಭೆಯ ಶಿರಸ್ಸು ಬೇರೆ ಯಾರೂ ಅಲ್ಲ, ಯೇಸು ಕ್ರಿಸ್ತನೇ ಆಗಿದ್ದಾನೆಂದು ಒಪ್ಪಿಕೊಳ್ಳುವ ಪ್ರೇರೇಪಣೆಯ ಮಾತುಗಳಿಂದ ಅಂಥ ಭಯಗಳು ತೆಗೆದು

ಹಾಕಲ್ಪಟ್ಟಿವೆ. "ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ... ಕ್ರಿಸ್ತನೋ ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ" (ಎಫೆಸ 5:23-25) ಎಂದು ಪೌಲನು ಬರೆದಿದ್ದಾನೆ. ಯೇಸು ಸಭೆಯ ಶಿರಸ್ಸಾಗಿದ್ದಾನೆ ಯಾಕಂದರೆ ಆತನು ಅದನ್ನು ಪ್ರೀತಿ ಮಾಡಿದನು ಮತ್ತು ಅದಕ್ಕಾಗಿ ಮರಣ ಹೊಂದಿದನು. ಯೇಸುವಿಗೆ ಆತನ ಮಹಾತ್ಯಾಗದ ಕಾರಣದಿಂದ ಸಭೆಯನ್ನು ನಡಿಸುವ ಹಕ್ಕು ಇರುವುದು. "ಕ್ರಿಸ್ತನು ಸಭೆಗೆ ಶಿರಸ್ಸು ಆಗಿರುವನು" ಎಂಬ ಮಾತು ನಿಮ್ಮ ಯೋಚನೆಯಲ್ಲಿ ಆಳವಾಗಿ ಪ್ರವೇಶಿಸಲಿ. ಕ್ರಿಸ್ತನನ್ನು ಸಭೆಯ ಶಿರಸ್ಸಿನಂತೆ ನೋಡುವುದು ಕ್ರಿಸ್ತನ ಸಭೆಯ ಸದಸ್ಯರಾಗಿರುವವರಿಗೆ ಬರವಸೆಯನ್ನು ಕೊಡುತ್ತದೆ. ಯಾಕಂದರೆ ಅದು ಅವರು ಹೊಂದುವ ತಪ್ಪಲ್ಲದ ಮಾರ್ಗದರ್ಶನವನ್ನು ಅವರ ಜ್ಞಾಪಕಕ್ಕೆ ತರುತ್ತದೆ. ಕ್ರೈಸ್ತೇತರರು ಸಭೆಯಲ್ಲಿ ಪ್ರವೇಶಿಸುವದಕ್ಕೆ ಅದು ಒಂದು ಕಾರಣ ವಾಗಿರತಕ್ಕದ್ದು. ಅದರಿಂದ ಅವರು ಕ್ರಿಸ್ತನ ದೋಷಾತೀತದ ನಾಯಕತ್ವದ ಕೆಳಗೆ ಬರುವರು.

ಆತನು ಯಾವ ವಿಧಗಳಲ್ಲಿ ಸಭೆಯ ಶಿರಸ್ಸಾಗಿದ್ದಾನೆ ಎಂಬುದನ್ನು ಯೋಚಿಸುವದರಿಂದ "ಕ್ರಿಸ್ತನು, ಸಭೆಯ ಶಿರಸ್ಸು" ಎಂಬ ಪುನಃ ಭರವಸೆಯನ್ನು ಕೊಡುವ ಮುಖ್ಯ ಪ್ರಸ್ತಾಪವನ್ನು ಆಲೋಚಿಸೋಣ.

## ಅಧಿಕಾರದಲ್ಲಿ ಆತನು ಶಿರಸ್ಸಾಗಿದ್ದಾನೆ

ಮೊದಲನೆಯದು, ಕ್ರಿಸ್ತನು ಅಧಿಕಾರದಲ್ಲಿ ಸಭೆಯ ಶಿರಸ್ಸಾಗಿದ್ದಾನೆ. ಆತನು ಕರ್ತನು, ಹಾಗೂ ಆತನು ತನ್ನ ನಿಯಮದಿಂದ ನಡಿಸುತ್ತಾನೆ.

ಸತ್ತವರೊಳಗಿಂದ ತನ್ನ ಪುನರುತ್ಥಾನ ಹಾಗೂ ಪರಲೋಕಕ್ಕೆ ತನ್ನ ದಿವಾರೋಹಣದನಂತರ ಕ್ರಿಸ್ತನು ಪರಲೋಕದಲ್ಲಿ ತಂದೆಯ ಬಲಗಡೆಯಲ್ಲಿ ಆಸನಾರೂಢನಾದನು. "ಸಕಲ ರಾಜತ್ವ ಅಧಿಕಾರ ಮಹತ್ವ ಪ್ರಭುತ್ವಾದಿಗಳ ಮೇಲೆಯೂ ಈ ಲೋಕದಲ್ಲಿ ಮಾತ್ರವಲ್ಲದೆ ಬರುವ ಲೋಕದಲ್ಲಿ ಸಹ ಹೆಸರುಗೊಂಡವರೆಲ್ಲರ ಮೇಲೆಯೂ ತನ್ನ ಬಲಗಡೆಯಲ್ಲಿ ಕೂಡ್ರಿಸಿಕೊಂಡನು" (ಎಫೆಸ 1:21). ದೇವರು "ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ; ..." (ಎಫೆಸ 1:22, 23). ಪೌಲನ ಇದೇ ಸತ್ಯವನ್ನು ಕೊಲೊಸ್ಸೆ ಪತ್ರಿಕೆಯಲ್ಲಿ ಒತ್ತಿ ಹೇಳಿದ್ದಾನೆ. "ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು! ಆತನು ಆದಿ ಸಂಭೂತನು. ಎಲ್ಲಾದರಲ್ಲಿ ಪ್ರಮುಖನಾಗಿರುವಂತೆ ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ. ತಂದೆಯಾದ ದೇವರು ಆತನಲ್ಲಿ ತನ್ನ ಸರ್ವ ಸಂಪೂರ್ಣತೆಯು ವಾಸವಾಗಿರಬೇಕೆಂತಲೂ ಆತನು

ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನುಂಟು ಮಾಡಿ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಆತನ ಮೂಲಕ ತನಗೆ ಸಂಧಾನಪಡಿಸಿಕೊಳ್ಳ ಬೇಕೆಂತಲೂ ನಿಷ್ಕರ್ಷೆ ಮಾಡಿದನು" (ಕೊಲೊಸ್ಸೆ 1:18, 19). ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನಿಗನುಗುಣವಾಗಿ, ದೇವರು ಅಂತಿಮ ದಿನಗಳಲ್ಲಿ ಇಲ್ಲವೇ ಕ್ರೈಸ್ತಯುಗದಲ್ಲಿ ತನ್ನ ಕುಮಾರನ ಮುಖಾಂತರ ನಮ್ಮ ಕೂಡ ಮಾತಾಡುವನು (ಇಬ್ರಿಯ 1:1, 2). ಆತನು ಯೇಸುವನ್ನು ಬಹಳವಾಗಿ ಮಹಿಮೆ ಪಡಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಕೊಟ್ಟಿದ್ದಾನೆ. "ಆದದರಿಂದ ಸ್ವರ್ಗ ಮರ್ತ್ಯ ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡ ಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆ ಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು" (ಫಿಲಿಪ್ಪಿ 2:10, 11). ಕ್ರಿಸ್ತನು ಸಭೆಯ ಶಿರಸ್ಸಿನಂತೆ ಇಲ್ಲವೇ ರಾಜ್ಯದ ರಾಜನಂತೆ ಅಂತ್ಯದವರೆಗೆ ಆಳ್ವಿಕೆ ಮಾಡುವನು ಹಾಗೂ ಆಗ ಎಲ್ಲಾ ಅಳ್ವಿಕೆ, ಅಧಿಕಾರ ಮತ್ತು ಬಲಗಳು ತೆಗೆದು ಹಾಕಲ್ಪಡುತ್ತಿರುವಾಗ ಆತನು ದೇವರಿಗೆ ರಾಜ್ಯವನ್ನು ಒಪ್ಪಿಸಿ ಕೊಡುವನು (1 ಕೊರಿಂಥ 15:23, 24).

ಯೇಸುವಿನ ಸಭೆಯು ಆತನ ಅಧಿಕಾರದಲ್ಲಿಯೂ, ನಾಯಕತ್ವದಲ್ಲಿಯೂ ಜೀವಿಸುವುದು. "ನಾನು" ಕೇಂದ್ರಗೊಳ್ಳುತ್ತಿರುವ ಯುಗದಲ್ಲಿಯೂ ಕ್ರಿಸ್ತನ ಸಭೆಯಲ್ಲಿಯ ಜನರು ತಮ್ಮ ಸ್ವಂತ ಮಾರ್ಗವನ್ನು ಕೇಳಲಾರರು. "ನಾನು ಮೊದಲು" ಎಂದು ಅವರು ಹೇಳಲಾರರು. ಹಾಗೂ ಅದೇ ಸಮಯದಲ್ಲಿ ಯೇಸುವನ್ನು ಕರ್ತನೆಂದು ಒಪ್ಪಿಕೊಳ್ಳುವರು. ಕ್ರಿಸ್ತನು ಮಾಡುವ ಪ್ರತಿಯೊಂದು ತೀರ್ಮಾನವೂ ಆತ್ಮಿಕ ತೀರ್ಮಾನವಾಗಿದ್ದು, ಆತನ ಒಡೆತನಕ್ಕೆ ವಿಧೇಯತೆ ಯಿಂದ ನಡಿಸಲ್ಪಡುತ್ತದೆ.

## ಆದರ್ಶದಲ್ಲಿ ಆತನು ಶಿರಸ್ಸಾಗಿದ್ದಾನೆ

ಎರಡನೆಯದು, ಕ್ರಿಸ್ತನು ಆದರ್ಶದಲ್ಲಿ ಸಭೆಯ ಶಿರಸ್ಸಾಗಿದ್ದಾನೆ. ದೇವರಿಗೆ ವಿಧೇಯತೆಯಲ್ಲಿ ಆತನು ಪರಿಪೂರ್ಣ ಆದರ್ಶನಾಗಿದ್ದಾನೆ. ಆತನು ತನ್ನ ಪಾಪರಹಿತ ಜೀವನದಿಂದ ನಡಿಸುವನು.

ಕ್ರಿಸ್ತನು ಯಾವುದೇ ಪಾಪ ಮಾಡಲಿಲ್ಲ ಮತ್ತು ಆತನ ಬಾಯಲ್ಲಿ ಯಾವುದೇ ವಂಚನೆಯು ಸಿಕ್ಕಲಿಲ್ಲ ಎಂದು ಪೇತ್ರನು ಹೇಳಿದ್ದಾನೆ ಬೈಯುವವರನ್ನು ಆತನು ಪ್ರತಿಯಾಗಿ ಬೈಯಲಿಲ್ಲ. ಆತನು ಬಾಧೆಯನ್ನನುಭವಿಸಿದಾಗ ಯಾರನ್ನೂ ಬೆದರಿಸಲಿಲ್ಲ (1 ಪೇತ್ರ 2:21-23).

ಕ್ರಿಸ್ತನು ತಪ್ಪು ಮಾಡಿ ಅದಕ್ಕೆ ಕ್ಷಮಾಪಣೆ ಕೇಳುವ ಅವಶ್ಯಕತೆ ಎಂದೂ

ಇರಲಿಲ್ಲ. ತಪ್ಪಾಗಿ ಮಾತಾಡಿದ ಪದವನ್ನು ಹಿಂತೆಗೆದು ಕೊಳ್ಳುವ ಪರಿಸ್ಥಿತಿ ಅವರಿಗೆ ಎಂದೂ ಬರಲಿಲ್ಲ. ಆತನ ಹೃದಯವು ಪಾಪಭರಿತ ವಿಚಾರವನ್ನು ಎಂದೂ ತಿಳಿದಿರಲಿಲ್ಲ. ಆತನ ವೈರಿಗಳು ಆತನ ಜೀವಿತವನ್ನು ಪರೀಕ್ಷಿಸಿದರು ಆದರೆ ಒಂದೇ ಒಂದು ಪಾಪವನ್ನು ಆತನಲ್ಲಿ ಕಂಡು ಕೊಳ್ಳಲಿಲ್ಲ.

ಅಂಥ ನಿಜವಾದ, ಶುದ್ಧವಾದ ಹಾಗೂ ಗೌರವವುಳ್ಳ ಜೀವಿತವನ್ನು ನಾವು ನಡಿಸಬೇಕೆಂದು ಆತನು ಬಯಸುತ್ತಾನೆ (ಫಿಲಿಪ್ಪಿ 4:8). "... ದೇವರು ಕೆಟ್ಟದ್ದರಿಂದ ಶೋಧಿಸಲ್ಪಡಲಾರನು; ಆತನು ಯಾರನ್ನೂ ಶೋಧಿಸುವುದಿಲ್ಲ. ಆದರೆ ಪ್ರತಿಯೊಬ್ಬನೂ ತನ್ನ ಸ್ವಂತ ದೂರಾಶೆಯಿಂದ ಎಳೆಯಲ್ಪಟ್ಟು ಮರುಳು ಕೊಂಡವನಾಗಿ ಶೋಧಿಸಲ್ಪಡುತ್ತಾನೆ" (ಯಾಕೋಬ 1:13, 14) ಎಂದು ಯಾಕೋಬನು ಬರೆದನು. ನಮ್ಮ ವಿರೋಧಿಯು ಕ್ರಿಸ್ತನಲ್ಲ, ಆದರೆ ಸೈತಾನನು, ಅವನು ಮತ್ತಾಯ 4:3ರಲ್ಲಿ "ಶೋಧಕನು" ಎಂದು ಕರೆಯಲ್ಪಟ್ಟಿದ್ದಾನೆ. ಯಾರನ್ನಾದರೂ ನುಂಗುವದಕ್ಕಾಗಿ ಹುಡುಕುವ ಗರ್ಜಿಸುವ ಸಿಂಹದಂತೆ ಅವನು ಬೇಟೆಯನ್ನು ಹುಡುಕುತ್ತ ಅಲೆಯುತ್ತಿದ್ದಾನೆ (1 ಪೇತ್ರ 5:8). ನಮ್ಮ ಬಲಹೀನತೆಯ ದುರ್ಲಾಭ ಪಡೆಯಲು ಅವನು ಸಿದ್ಧನಾಗಿರುವನು.

ಕ್ರಿಸ್ತನು ನಮ್ಮ ಬಲಹೀನತೆಯನ್ನು ಬಲ್ಲವನಾಗಿದ್ದಾನೆ. ನಮ್ಮ ಹೋರಾ ಟವನ್ನು ಅರ್ಥ ಮಾಡಿಕೊಳ್ಳುತ್ತಾನೆ. ಆತನೂ ಸಹ ಶೋಧಕನನ್ನು ಎದಿರಿಸ ಬೇಕಾಗಿತ್ತು. ಆದಾಗ್ಯೂ ಆತನು ಪಾಪ ಮಾಡಲಿಲ್ಲ (ಇಬ್ರಿಯ 4:15). ಆತನು ನಮ್ಮ ಮುಂದೆ ಶೋಧನೆಗಳನ್ನು ಇಡುವದಿಲ್ಲ. ನಾವು ಸಹಿಸಿಕೊಳ್ಳ ಲಾರದ ಶೋಧನೆಗಳಿಂದ ನಮ್ಮನ್ನು ಕಾಪಾಡುತ್ತ, ಪಾಪದಿಂದ ತಪ್ಪಿಸಿಕೊಳ್ಳಲು ಮಾರ್ಗವನ್ನು ಒದಗಿಸುವನು (1 ಕೊರಿಂಥ 10:13).

ಸಭೆಯ ಶಿರಸ್ಸು ಅಧಿಕಾರದಲ್ಲಿ ಪರಿಪೂರ್ಣನಾಗಿರುವಂತೆಯೇ ಗುಣಲಕ್ಷಣಗಳಲ್ಲಿಯೂ ಪರಿಪೂರ್ಣನಾಗಿದ್ದಾನೆ. ಆತನ ಸಭೆಯು ಆತನ ಆಜ್ಞೆಗಳಿಗೆ ಕಿವಿಗೊಡಬೇಕು ಹಾಗೂ ಆತನ ಜೀವಿತವನ್ನು ಅನುಸರಿಸ ಬೇಕು "ಆತನಲ್ಲಿ ನೆಲೆಗೊಂಡವನಾಗಿದ್ದೇನೆಂದು ಹೇಳುವವನು ಕ್ರಿಸ್ತನು ನಡೆದಂತೆಯೇ ತಾನೂ ನಡೆಯುವದಕ್ಕೆ ಬದ್ಧನಾಗಿದ್ದಾನೆ" ಎಂದು 1 ಯೋಹಾನ 2:6 ಹೇಳುತ್ತದೆ. ಸಭೆಗೆ ಯೇಸುವು ಅದ್ವಿತೀಯವಾದ ನಾಯಕತ್ವವನ್ನು ಕೊಡುವದರಿಂದ, "ನಾನು ಕ್ರಿಸ್ತನನ್ನು ಅನುಸರಿಸುವಂತೆಯೇ ನೀವು ನನ್ನನ್ನು ಅನುಸರಿಸುವವರಾಗಿರಿ" (1 ಕೊರಿಂಥ 11:1) ಎಂದು ಪೌಲನು ಇತರರಿಗೆ ಆಜ್ಞಾಪಿಸಲು ಶಕ್ತನಾದನು.

ಒಂದು ದೃಷ್ಟಿಕೋನದಿಂದ, ಕ್ರಿಸ್ತನು ನಮ್ಮ ಪರಿಪೂರ್ಣ ರಕ್ಷಕನಾದನು. ದೇವರ ಮುಂದೆ ಪರಿಪೂರ್ಣ ಜೀವನ ಜೀವಿಸುವದರಿಂದ ಆತನು ನಮ್ಮ ರಕ್ಷಕನಾಗಿರಲು ಮತ್ತು ಪಾಪದಿಂದ ಬಿಡುಗಡೆಗಾಗಿ (ಕ್ರಯವನ್ನು)

ಕೊಡುವದಕ್ಕಾಗಿ ಪಾಪರಹಿತ ಜೀವಿತವನ್ನು ದೇವರಿಗೆ ಸಮರ್ಪಿಸಲು ಪರಿಪೂರ್ಣನಾಗಿ ಅರ್ಹನಾದನು. "ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. ಇದಲ್ಲದೆ ಆತನು ಸಿದ್ಧಿಗೆ ಬಂದು ದೇವರಿಂದ ... ತನಗೆ ವಿಧೇಯರಾಗಿರುವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು" (ಇಬ್ರಿಯ 5:8, 9) ಎಂದು ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನು ವಾದಿಸಿದ್ದಾನೆ.

"ದಿ ಗ್ರೇಟ್ ಸ್ಟೋನ್ ಫೇಸ" ಎಂಬ ಕಥೆಯನ್ನು ನಥಾನಿಯೇಲ ಹಾಥೋರ್ನ ಬರೆದನು. ಅದು ನಾವು ನೋಡುವಂಥದ್ದರ ಹಾಗೆ ನಾವು ಆಗುತ್ತೇವೆ ಎಂಬುದನ್ನು ಜ್ಞಾಪಿಸುತ್ತದೆ. ನಾವು ಮೆಚ್ಚಿಕೊಳ್ಳುವದನ್ನು ನಾವು ಅನುಸರಿಸುತ್ತೇವೆ. ವಿನಯವಾಗಿರುವ ಮುಖ, ಒಂದು ಪರ್ವತದ ಪಾರ್ಶ್ವದಲ್ಲಿ ಕೆತ್ತಲ್ಪಟ್ಟದ್ದು, ದಲಿತ ಜನರು ಜೀವಿಸಿದ ಗ್ರಾಮವಿದ್ದ ಕೊಳ್ಳದ ಕಡೆಗೆ ನೋಡುತ್ತಿತ್ತು. ಆ ದೊಡ್ಡ ಕಲ್ಲಿನ ಮುಖದಂತಿರುವ ಮುಖದವನೊಬ್ಬನು ಒಂದು ದಿನ ತಮ್ಮ ವಿಮೋಚಕನಾಗಿ ಬರುವನೆಂದು ಆ ಸಮಾಜವು ನಂಬಿತ್ತು. ಗ್ರಾಮದ ಒಬ್ಬ ಬಾಲಕನು ಹಿರಿಯಾಸೆಯಿಂದಲೂ ಅಪೇಕ್ಷೆಯಿಂದಲೂ ಸತತವಾಗಿ ಕಲ್ಲಿನ ಮುಖದ ಬಗ್ಗೆ ಯೋಚಿಸಿದನು. ಆ ಕಲ್ಲಿನ ಮುಖವನ್ನು ದೃಷ್ಟಿಸುತ್ತ ಮೆಚ್ಚಿಕೊಳ್ಳುವದರ ಮುಖಾಂತರ ಸಮಯದಲ್ಲಿ ಆ ಯುವಕನು ಆ ಮುಖದ ಹಾಗೆ ಬೆಳೆದನು. ಸಮಾಜದ ಜನರು ಬೇಗನೇ ಅವನನ್ನು ತಮ್ಮ ವಿಮೋಚಕನನ್ನಾಗಿ ಗುರುತಿಸಿಕೊಂಡರು.

ನಾವು ನೋಡುವಂತದ್ದರ ಹಾಗೆ ನಾವಾಗುವೆವು ಎಂಬ ಸತ್ಯವು ಸಭೆಯ ವಿಷಯದಲ್ಲಿ ವಿಶೇಷವಾಗಿ ಸತ್ಯವಾಗಿದೆ. "ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ" (2 ಕೊರಿಂಥ 3:18) ಎಂದು ಪೌಲನು ಹೇಳಿದ್ದಾನೆ.

ಕ್ರಿಸ್ತನ ಸಭೆಯು ಕ್ರಿಸ್ತನ ಜೀವನವನ್ನು ಹೇಗೆ ಜೀವಿಸಬೇಕೆಂಬುದರ ಒಂದು ಮಾದರಿಯನ್ನಾಗಿ ನೋಡುತ್ತದೆ. ಉದಾಹರಣೆಯಲ್ಲಿ ಆತನು ನಮ್ಮ ಶಿರಸ್ಸಾಗಿದ್ದಾನೆ. ಆತನ ಸದಸ್ಯರು ಆತನ ಕಡೆಗೆ ನೋಡುವುದಲ್ಲದೆ, ಆತನು ತನ್ನ ಪರಿಪೂರ್ಣ ಜೀವನದಿಂದ ಸಭೆಯನ್ನು ನೋಡುವಂತೆ ಆತನನ್ನು ನೋಡುತ್ತದೆ (ಇಬ್ರಿಯ 12:2).

## ಪ್ರೀತಿಯಲ್ಲಿ ಆತನು ಶಿರಸ್ಸಾಗಿದ್ದಾನೆ

ಮೂರನೆಯದು, ಪ್ರೀತಿಯಲ್ಲಿ ಕ್ರಿಸ್ತನು ಸಭೆಯ ಶಿರಸ್ಸಾಗಿದ್ದಾನೆ. ತನ್ನ ಅದ್ಭುತವಾದ ಪ್ರೀತಿಯೊಂದಿಗೆ ಆತನು ತನ್ನ ಜನರನ್ನು ನಡಿಸುತ್ತಿದ್ದಾನೆ ಮತ್ತು ಆಜ್ಞಾಪಿಸುತ್ತಿದ್ದಾನೆ.

ತನ್ನ ಮರಣದ ಹಿಂದಿನ ಸಾಯಂಕಾಲ ತನ್ನ ಶಿಷ್ಯರಿಗೆ ಯೇಸು ಹೀಗೆ ಹೇಳಿದನು, "ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ: ಏನಂದರೆ ನೀವು ಒಬ್ಬರನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನೊಬ್ಬರು ಪ್ರೀತಿಸಬೇಕು ಎಂಬುದೇ. ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿ ಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳಿದುಕೊಳ್ಳುವರು" (ಯೋಹಾನ 13:34, 35; ಒತ್ತಿ ಹೇಳಿದ್ದು ನನ್ನದು); "*ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ* ನೀವು ಒಬ್ಬರನೊಬ್ಬರು ಪ್ರೀತಿಸ ಬೇಕೆಂಬುದೇ ನಾನು ಕೊಡುವ ಆಜ್ಞೆಯಾಗಿದೆ" (ಯೋಹಾನ 15:12; ಒತ್ತಿ ಹೇಳಿದ್ದು ನನ್ನದು) ಎಂದು ಹೇಳಿದನು.

ಜನರಿಗಾಗಿ ಯೇಸುವು ತೋರಿಸುವ ಈ ಪ್ರೀತಿಯು ಮೂರು ಮಾರ್ಗಗಳಲ್ಲಿ ಆತನ ಅನುಯಾಯಿಗಳನ್ನು ನಡಿಸುತ್ತದೆ. ಮೊದಲನೆಯದು, ಅದು ಆತನನ್ನು ಪ್ರೀತಿಸುವಂತೆ ಮಾಡುತ್ತದೆ, "ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ" (1 ಯೋಹಾನ 4:19) ಎಂದು ಯೋಹಾನನು ಹೇಳಿದ್ದಾನೆ. ಎರಡನೆಯದು, ಆತನ ಪ್ರೀತಿಯು ಕ್ರೈಸ್ತರು *ಒಬ್ಬರನೊಬ್ಬರು ಪ್ರೀತಿಸುವಂತೆ ಮಾಡುತ್ತದೆ* "ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟದ್ದರಲ್ಲಿಯೇ ಪ್ರೀತಿ ಇಂತದೆಂದು ನಮಗೆ ತಿಳಿದುಬಂದಿದೆ. ನಾವು ಸಹ ಸಹೋದರರಿಗೋಸ್ಕರ ತನ್ನ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ" (1 ಯೋಹಾನ 3:16) ಎಂದು ಯೋಹಾನನು ಬರೆದಿದ್ದಾನೆ. ಮೂರನೆಯದು, ಆತನ ಪ್ರೀತಿಯು ಆತನ ಚಿತ್ತವನ್ನು ಆತನ ಹಿಂಬಾಲಕರು ಮಾಡುವದಕ್ಕೆ ಕಾರಣವಾಗುತ್ತದೆ. "ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ" (ಯೋಹಾನ 14:15) ಎಂದು ಕ್ರಿಸ್ತನು ಹೇಳಿದ್ದಾನೆ.

ಕ್ರಿಸ್ತನ ಭೂಲೋಕದ ಸೇವೆಯನ್ನು ದೇವದೂತರು ಗಮನಿಸಿದಾಗ ಅವರು ಭಕ್ತಿಪರವಶರಾಗಿರಬೇಕು. ಶಿಲುಬೆಯ ಮೇಲಿನ ತನ್ನ ಮರಣದ ದಿನದ ಮೊದಲು ಆತನು ಬೋಗುಣಿಯನ್ನು, ಕೈಪಾವುಡವನ್ನು ತೆಗೆದುಕೊಂಡು ಪ್ರೀತಿಯಿಂದಲೂ ದೀನತೆಯಿಂದಲೂ ತನ್ನ ಶಿಷ್ಯರ ಪಾದಗಳನ್ನು ತೊಳೆದನು. ಅರಸರುಗಳ ಅರಸನು ಪ್ರೀತಿಯ ಸೇವೆಯಲ್ಲಿ ತನ್ನ ಶಿಷ್ಯರ ಮುಂದೆ ಮೊಣಕಾಲೂರಿದನು. ಕ್ರಿಸ್ತನು ಮನುಷ್ಯನಾದದ್ದು ಅಷ್ಟೇ ಅಲ್ಲ, ಆತನು ಮನುಷ್ಯರ ಸೇವಕನೂ ಆದನು. ಆತನು ಮನುಷ್ಯನ ರೂಪಧರಿಸಿ ಸೇವಕನ ಜೀವಿತ ಜೀವಿಸಿದನು

(ಫಿಲಿಪ್ಪಿ 2:7).

ಯೋಹಾನನು ಈ ಮಹತ್ವದ ದೃಶ್ಯವನ್ನು ಈ ಮಾತುಗಳಿಂದ ಪರಿಚಯಿಸಿದ್ದಾನೆ: "ತನ್ನ ಕೈಯಲ್ಲಿ ತಂದೆ ಎಲ್ಲವನ್ನು ಕೊಟ್ಟಿದ್ದಾನೆಂದು ತಾನು ದೇವರ ಬಳಿಯಿಂದ ಹೊರಟು ಬಂದಿದ್ದು ಮತ್ತು ದೇವರ ಬಳಿಗೆ ಹೋಗುತ್ತೇನೆಂದೂ ಯೇಸು ತಿಳಿದುಕೊಂಡನು" (ಯೋಹಾನ 13:3). ಕ್ರಿಸ್ತನು ತನ್ನ ಅಧಿಕಾರ, ಸ್ಥಾನ ಹಾಗೂ ಭವಿಷ್ಯದ ಬಗ್ಗೆ ವಿಶೇಷ ವಾಗಿ ಅರುಹುವುಳ್ಳ ಸಮಯದಲ್ಲಿ ತಾನು ಜೀವಿಸಿದ ಸೇವಕ ಜೀವನದೊಂದಿಗೆ ಸಾಮರಸ್ಯತೆಯಲ್ಲಿ ಸೇವೆಯ ಕಾರ್ಯಮಾಡಲು ತನ್ನನ್ನು ತಗ್ಗಿಸಿಕೊಂಡನು ಎಂದು ಇನ್ನೊಂದು ಮಾತು ಗಳಲ್ಲಿ ಹೇಳಬಹುದು. ಆತನು ತನ್ನ ಶ್ರೇಷ್ಠತೆಯನ್ನು, ಬಲವನ್ನು, ಅಧಿಕಾರವನ್ನು. ಸ್ಥಾನವನ್ನು ಕಳಂಕಿತಗೊಳಿಸಲಿಲ್ಲ. ಪ್ರೀತಿಯಲ್ಲಿ ದೀನತೆಯ ಪಾಠವನ್ನು ತನ್ನ ಶಿಷ್ಯರಿಗೆ ಬೋಧಿಸಲು ಆತನು ಅದನ್ನು ಉಪಯೋಗಿಸಿದನು.

ಸಭೆಯ ಶಿರಸ್ಸಿನಂತೆ ಆತನು ತನ್ನ ಬಲದಿಂದಲೂ ಅಧಿಕಾರದಿಂದಲೂ ಪ್ರೀತಿಯಿಂದ ತನ್ನ ಸಭೆಯ ಸೇವೆಮಾಡುವನು! ತನ್ನ ಶಿಷ್ಯರ ಪಾದಗಳನ್ನು ತೊಳೆದಾಗ ಆತನು ತನ್ನ ಒಡೆತನದ ಸ್ಥಾನವನ್ನು ಬಿಟ್ಟು ಕೊಡಲಿಲ್ಲ; ಕರ್ತನಾಗಿರುವ ತನ್ನ ಸ್ಥಾನವನ್ನು ಅವನ ಸೇವೆ ಮಾಡುವದಕ್ಕಾಗಿ ಮತ್ತು ಅವರಲ್ಲಿ ಸೇವೆಯ ಆತ್ಮವನ್ನು ಹುಟ್ಟಿಸುವದಕ್ಕಾಗಿ ಉಪಯೋಗಿಸಿದನು. "ನೀವು ನನ್ನನ್ನು ಗುರುವೆಂದೂ ಕರ್ತನೆಂದೂ ಕರೆಯುತ್ತೀರೀ. ನೀವು ಕರೆಯುವದು ಸರಿ; ನಾನು ಅಂಥವನೇ ಹೌದು. ಕರ್ತನೂ ಗುರುವೂ ಆಗಿರುವ ನಾನು ನಿಮ್ಮ ಕಾಲುಗಳನ್ನು ತೊಳೆದಿರಲಾಗಿ ನೀವು ಸಹ ಒಬ್ಬರ ಕಾಲನ್ನು ಒಬ್ಬರು ತೊಳೆ ಯುವ ಹಂಗಿನವರಾಗಿದ್ದೀರಿ. ನಾನು ನಿಮಗೆ ಮಾಡಿದ ಮೇರೆಗೆ ನೀವು ಸಹ ಮಾಡುವಂತೆ ನಿಮಗೆ ಮಾದರಿಯನ್ನು ತೋರಿಸಿದ್ದೇನೆ" (ಯೋಹಾನ 13:13-15) ಎಂದು ಆತನು ಅವರಿಗೆ ಹೇಳಿದನು.

ಸಾಧ್ಯವಾದಷ್ಟು ಉನ್ನತ ರೀತಿಯಲ್ಲಿ ಪ್ರೀತಿಯು ಏನಾಗಿದೆ ಮತ್ತು ನಿಜವಾದ ಪ್ರೀತಿಯು ಹೇಗೆ ಪ್ರಕಟಿಸಲ್ಪಟ್ಟಿದೆ ಎಂಬುದನ್ನು ಆತನು ತೋರಿಸಿದನು. ಆತನು ತನ್ನ ಸಭೆಯನ್ನು ತನ್ನ ಪ್ರೀತಿಯ ವಾತಾವರಣದಲ್ಲಿ ನಡಿಸುತ್ತಾನೆ. ಕ್ರೈಸ್ತರು ಆತನ ಪ್ರೀತಿಯ ವಾತಾವರಣದಲ್ಲಿ ಜೀವಿಸುವಂತೆ, ಆ ವಾತಾವರಣವನ್ನು ಉಪಯೋಗಿಸುವಂತೆ ಹಾಗೂ ಅದಕ್ಕೆ ಉತ್ತರಕೊಡುವಂತೆ ಅವರು ಆತನ ಸ್ವರೂಪಕ್ಕೆ ಮಾರ್ಪಡಿಸಲ್ಪಡುವರು. "ಪ್ರಿಯರೇ, ನಾವು ಒಬ್ಬರನೊಬ್ಬರು ಪ್ರೀತಿ ಸೋಣ ಪ್ರೀತಿಯು ದೇವರಿಂದಾಗಿದೆ, ಮತ್ತು ಪ್ರೀತಿಮಾಡುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನೂ ದೇವರನ್ನು ಬಲ್ಲವನೂ ಆಗಿದ್ದಾನೆ. ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲ; ಯಾಕಂದರೆ ದೇವರು ಪ್ರೀತಿ ಸ್ವರೂಪನು" (1 ಯೋಹಾನ 4:7, 8) ಎಂದು ಯೋಹಾನನು ಹೇಳಿದ್ದಾನೆ.

## ಮುಕ್ತಾಯ

ನಿಶ್ಚಯವಾಗಿ ಕ್ರಿಸ್ತನು ಅಧಿಕಾರದಲ್ಲಿ, ಆದರ್ಶದಲ್ಲಿ, ಮತ್ತು ಪ್ರೀತಿ ಹಾಗೂ ಸೇವೆಯಲ್ಲಿ ಸಭೆಗೆ ಶಿರಸ್ಸಾಗಿದ್ದಾನೆ. ಆತನು ತನ್ನ ಒಡತನದ ಮುಖಾಂತರ, ತನ್ನ ಪರಿಪೂರ್ಣ ಜೀವನದ ಮುಖಾಂತರ, ತನ್ನ ಒತ್ತಾಯ ಪೂರ್ವಕವಾದ ಪ್ರೀತಿಯ ಮುಖಾಂತರ ತನ್ನ ಸಭೆಯನ್ನು ನಡಿಸುತ್ತಾನೆ.

ಯಾವುದೇ ಸಂಘಟನೆಯ ಇಲ್ಲವೇ ಸಭೆಯ ಶಿರಸ್ಸಾದವನು ತಾನು ಹೊಂದಿರುವ ವಿಶ್ವಾಸರ್ಹತೆಯನ್ನು, ಅಧಿಕೃತತೆಯನ್ನು ಬಲವನ್ನು ತಾನು ನಡಿಸುವ ಸಂಘಟನೆಗೆ ಇಲ್ಲವೇ ಸಭೆಗೆ ಕೊಡತಕ್ಕದ್ದು. ಇದು ನಿಶ್ಚಯವಾಗಿಯೂ ಕ್ರಿಸ್ತನಿಗೂ ಅತನ ಸಭೆಗೂ ಸತ್ಯವಾಗಿದೆ. ಕ್ರಿಸ್ತನು, ದೇವರ ದೈವಿಕ ಕುಮಾರನು ತನ್ನ ಕಪ್ಪುಚುಕ್ಕೆಯಿಲ್ಲದ ಪರಿಪೂರ್ಣತೆಯನ್ನು ಅಪರಿಮಿತ ಜ್ಞಾನವನನ್ನು, ಸರ್ವಶಕ್ತ ಬಲವನ್ನು, ಸರಿಗಟ್ಟಲಾಗದ ಪ್ರಾಮಾಣಿಕತೆಯನ್ನು ತನ್ನ ಹಿರಿತನ ಮತ್ತು ನಾಯಕತ್ವವನ್ನು ಸಭೆಗೆ ಕೊಡುತ್ತಾನೆ.

ಕ್ರಿಸ್ತನಿಂದ ಸ್ಥಾಪಿಸಲ್ಪಟ್ಟ ಸಭೆಯು ಕ್ರಿಸ್ತನಿಂದ ನಡಿಸಲ್ಪಡುತ್ತದೆ ಮತ್ತು ಕ್ರಿಸ್ತನ ಹೆಸರನ್ನು ಧರಿಸಿಕೊಳ್ಳುತ್ತದೆ. ಕ್ರಿಸ್ತನು ಹೊಂದಿಕೊಂಡಿರುವಂಥದ್ದೆಲ್ಲವನ್ನು ಆತನು ತನ್ನ ಸಭೆಗೆ ಕೊಡುತ್ತಾನೆ. ಕ್ರಿಸ್ತನಿಗಿರುವ ಯಾವುದೇ ಭವಿಷ್ಯವು ಸಭೆಗಿರುವುದು. ತನ್ನ ಸಭೆಯನ್ನು ಇಂದು ಸಂರಕ್ಷಿಸಿಕೊಂಡು ಹೋಗುವುದಕ್ಕಾಗಿ ಹಾಗೂ ಅದರ ಭವಿಷ್ಯಕ್ಕಾಗಿ ಅದನ್ನು ಶುದ್ಧೀಕರಿಸುವದನ್ನು ವಾಗ್ದಾನ ಮಾಡಿದ್ದಾನೆ: “ಅದನ್ನು ಕಳಂಕ ಸುಕ್ಕು ಮುಂತಾದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ... ಶುದ್ಧ ಮಾಡಿದನು (ಎಫೆಸ 5:27).

ಕ್ರಿಸ್ತನು ಸಭೆಯನ್ನು ಸೃಷ್ಟಿಸಿದ್ದಾನೆ, ಸಭೆಗೆ ತನ್ನ ಪ್ರೀತಿ ಮತ್ತು ರಕ್ಷಣೆಯನ್ನು ದಯಪಾಲಿಸಿದ್ದಾನೆ. ನಿತ್ಯ ಮಹಿಮೆಯ ತನ್ನ ವಾಗ್ದಾನದೊಂದಿಗೆ ಸಭೆಗೆ ಕಿರೀಟ ಹಾಕಿದ್ದಾನೆ. ಆತನ ಸಭೆಯಾಗಿರಲು ಯಾರು ಬಯಸದಿರುವರು?

ಕ್ರಿಸ್ತನಿಂದ ನಡಿಸಲ್ಪಡುವ ಸಭೆಯ ಭಾಗ ನೀವಾಗಿರುವಿರೋ?

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ನಿಜವಾಗಿಯೂ ನಡಿಸದ ನಾಯಕತ್ವದ ಉದಾಹರಣೆಗಳನ್ನು ಕೊಡಿರಿ.
2. ಯೇಸುವು ಅಧಿಕಾರದಲ್ಲಿ ಹೇಗೆ ಸಭೆಯ ಶಿರಸ್ಸಾಗಿದ್ದಾನೆ? ಯೇಸುವಿಗೆ ಎಲ್ಲಾ ಅಧಿಕಾರ ಇರುವದೆಂದು ಬೋಧಿಸುವ ಪರಿಶುದ್ಧ ಬರಹಗಳ ವಾಕ್ಯ ಭಾಗಗಳನ್ನು ಕೊಡಿರಿ.

3. ಸಭೆಯ ಶಿರಸ್ಸಿನಂತೆ ಕ್ರಿಸ್ತನು ಎಷ್ಟರವರೆಗೆ ಆಳ್ವಿಕೆ ಮಾಡಬೇಕು? (1 ಕೊರಿಂಥ 15:23-25 ನೋಡಿರಿ.)
4. ಯೇಸುವು ಹೇಗೆ ನಮ್ಮ ಪರಿಪೂರ್ಣ ರಕ್ಷಕನಾದನು? (ಇಬ್ರಿಯ 5:8, 9 ನೋಡಿರಿ.)
5. ಕ್ರಿಸ್ತನ ಕಡೆಗೆ ಮಾರ್ಪಡುವುದು ಸಮಯದಲ್ಲಿ ಒಂದು ಘಟನೆಯಾಗಿದೆ. ಆದರೆ ಆತನ ಸ್ವರೂಪದೊಳಗೆ ಬದಲಾಗುವುದು ಸಮಯದಲ್ಲಿ ಪ್ರಗತಿಯ ವಿಧಾನವಾಗಿದೆ. ಬದಲಾಗುವ ಈ ವಿಧಾನವನ್ನು ಚರ್ಚಿಸಿರಿ. (2 ಕೊರಿಂಥ 3:18 ನೋಡಿರಿ.)
6. ಶಿಷ್ಯರ ಪಾದಗಳನ್ನು ಕ್ರಿಸ್ತನು ತೊಳೆದದ್ದು ಕ್ರಿಸ್ತನಿಗಾಗಿ ಅನುದಿನ ಜೀವಿಸುವದರ ಬಗ್ಗೆ ನಮಗೆ ಏನು ಬೋಧಿಸುತ್ತದೆ?
7. ಕ್ರೈಸ್ತರು ಇಂದು ಹೇಗೆ "ಒಬ್ಬರ ಪಾದಗಳನ್ನು ಒಬ್ಬರು ತೊಳೆಯುತ್ತಾರೆ"?

## 16

# ಸಭೆಯನ್ನು ಪ್ರವೇಶಿಸುವುದು

ಉತ್ತಮ ಬಟ್ಟೆಗಳಂತೆ ಕೆಲವು ವಸ್ತುಗಳು ದುಬಾರಿಯಾದವುಗಳಾಗಿರುತ್ತವೆ ಆದರೆ ಅವು ನಿಜವಾಗಿ ಬಹು ಬೆಲೆಯುಳ್ಳವುಗಳಲ್ಲ; ಸೂರ್ಯನ ಬೆಳಕು, ನೀರು ಇತ್ಯಾದಿಗಳಂತೆ ಕೆಲವು ವಸ್ತುಗಳು ಅಗ್ಗವಾದವುಗಳಾಗಿದ್ದು ಆದರೆ ಬೆಲೆಯುಳ್ಳವುಗಳಾಗಿರುತ್ತವೆ. ಕ್ರಿಸ್ತನ ಸಭೆಯು ಈ ಸಾಲಿಗೆ ಸೇರುತ್ತದೆ.

ಸಭೆಯ ಅಮೂಲ್ಯ ಬೆಲೆಯ ಬಗ್ಗೆ ಹೊಸ ಒಡಂಬಡಿಕೆಯು ಯಾವ ಸಂಶಯವನ್ನು ಬಿಡುವದಿಲ್ಲ. ಮೂರು ವಿಧಗಳಲ್ಲಿಯಾದರೂ ಅದರ ಮೌಲ್ಯವು ಹೇಳಲ್ಪಟ್ಟಿದೆ: ಮೊದಲನೆಯದು ಅದರ ದೈವಿಕ ಮೂಲದಲ್ಲಿ ಅದರ ಮೌಲ್ಯವನ್ನು ನೋಡುತ್ತೇವೆ. ಪರಲೋಕದ ನಿತ್ಯವಾದ ಸಮಾಲೋಚನೆಯಲ್ಲಿ ಅದು ಯೋಚಿಸಲ್ಪಟ್ಟಿತ್ತು ಮತ್ತು ಉದ್ದೇಶಿಸಲ್ಪಟ್ಟಿತು (ಎಫೆಸ 3:10, 11). ಯೇಸುವಿನ ಭೂಲೋಕದ ಸೇವೆಯ ಮುಖಾಂತರ ಸಿದ್ಧಪಡಿಸಲ್ಪಟ್ಟಿತು (ಮತ್ತಾಯ 4:17). ಅದು ದೈವಿಕ ಮುಂದಾಲೋಚನೆಯಾಗಿರುವುದು; ತಪ್ಪಾದ ಅನಂತರದ ವಿಚಾರವಾಗಿರುವದಿಲ್ಲ. ಎರಡನೆಯದು, ಅದರ ಅಮೂಲ್ಯ ಬೆಲೆಯಲ್ಲಿ ನಾವು ಅದರ ಮೂಲ್ಯ ಮೌಲ್ಯವನ್ನು ನೋಡುತ್ತೇವೆ. ಅದು ಕ್ರಿಸ್ತನ ರಕ್ತದಿಂದ ಕೊಳ್ಳಲ್ಪಟ್ಟಿತೆಂದು ಪೌಲನು ಹೇಳಿದ್ದಾನೆ (ಅಪೊಸ್ತಲರ ಕೃತ್ಯಗಳು 20:28). ಸಭೆಯನ್ನು ಅಸ್ತಿತ್ವದಲ್ಲಿ ತರುವುದು ಕ್ರಿಸ್ತನ ಮರಣದ ಅಂತಿಮ ಗುರಿಯಾಗಿತ್ತು. ಕೊಂಡುಕೊಳ್ಳುವ ಬೆಲೆಯು ಮೌಲ್ಯವನ್ನು ಸೂಚಿಸಿದರೆ, ಆಗ ಸಭೆಯು ಕ್ರಿಸ್ತನ ರಕ್ತದಿಂದ ಕೊಂಡು ಕೊಳ್ಳಲ್ಪಟ್ಟದ್ದು ನಿಶ್ಚಯವಾಗಿ ಭೂಲೋಕದ ಎಲ್ಲವುಗಳಿಗಿಂತಲೂ ಅಧಿಕವಾಗಿ ಮೌಲ್ಯವುಳ್ಳದ್ದಾಗಿರುವುದು ನಿಶ್ಚಿತವಾಗಿದೆ. ಮೂರನೆಯದು, ಅದರ ಮೇಲಿಡಲ್ಪಟ್ಟಿರುವ ಮಹಾ ಮೌಲ್ಯದ ಬೆಲೆಯಲ್ಲಿದೆ. ಎಲ್ಲವುಗಳನ್ನು ಹುಡುಕುವುದಕ್ಕಿಂತ ಹೆಚ್ಚಾಗಿ ಪರಲೋಕ ರಾಜ್ಯವನ್ನು ಹುಡುಕಬೇಕೆಂದು ಕ್ರಿಸ್ತನು ನಮಗೆ ಒತ್ತಾಯ ಮಾಡುತ್ತಾನೆ. “ಮತ್ತು ಪರಲೋಕ ರಾಜ್ಯವು ಉತ್ತಮವಾದ ಮುತ್ತುಗಳನ್ನು ಹುಡುಕುವ ವ್ಯಾಪಾರಸ್ಥನಿಗೆ ಹೋಲಿಕೆಯಾಗಿದೆ. ಅವನು ಬಹು ಬೆಲೆಯುಳ್ಳ

ಒಂದು ಮುತ್ತನ್ನು ಕಂಡು ತನ್ನ ಬದುಕನ್ನೆಲ್ಲಾ ಮಾರಿ ಬಂದು ಅದನ್ನು ಕೊಂಡು ಕೊಂಡನು" (ಮತ್ತಾಯ 13:45, 46) ಎಂದು ಯೇಸು ಹೇಳಿದನು. ಆತನು ಸಭೆಯನ್ನು ಅಮೂಲ್ಯ ಮುತ್ತಿಗೆ ಹೋಲಿಸಿದ್ದಾನೆ. ಎಲ್ಲಾ ಮುತ್ತುಗಳಲ್ಲಿ ಅತೀ ಹೆಚ್ಚು ಬೆಲೆಯುಳ್ಳ ಮುತ್ತಿಗೆ ಹೋಲಿಸಿದನು!

ಸಭೆಯ ಈ ಅತೀ ಶ್ರೇಷ್ಠವಾದ ಮೌಲ್ಯವು ಹೊಸ ಒಡಂಬಡಿಕೆಯ ಸಭೆಯನ್ನು ಅಲಕ್ಷಿಸುವುದು ಎಲ್ಲಾ ತಪ್ಪುಗಳಲ್ಲಿ ಅತೀ ದೊಡ್ಡ ತಪ್ಪಾಗಿದೆಯೆಂಬುದನ್ನು ಸೂಚಿಸುತ್ತದೆ. ಅದನ್ನು ಕಂಡುಕೊಂಡು ಕರ್ತನ ಸಭೆಯೊಳಗೆ ಪ್ರವೇಶಿಸದ ಲಕ್ಷಾಧಿಪತಿಯು ಅನಾಥನಂತವನಾಗುತ್ತಾನೆ. ಸಭೆಯ ಹೊರಗಿರುವ ಅತೀ ದೊಡ್ಡ ಮನುಷ್ಯನು ಕನಿಷ್ಠನಾಗುತ್ತಾನೆ.

ಸಭೆಯ ತಪ್ಪಾಗಿರದ ಮೌಲ್ಯದ ಬೆಳಕಿನಲ್ಲಿ "ಸಭೆಯನ್ನು ಪ್ರವೇಶಿ ಸುವುದು ಹೇಗೆ?" ಎಂಬ ಯಥಾರ್ಥವಾದ ಪ್ರಶ್ನೆಯನ್ನು ನಾವು ಕೇಳು ವಂತೆ ವಿವೇಕವು ಆಜ್ಞಾಪಿಸುತ್ತದೆ. ಬಹುಶಃ ಯಾವುದೇ ದೊಡ್ಡ ಪ್ರಶ್ನೆಯು ಯೋಚಿಸಲ್ಪಡ ಬೇಕಾಗಿಲ್ಲ. ಈ ಪ್ರಶ್ನೆಗೆ ಹೊಸ ಒಡಂಬಡಿಕೆಯ ಉತ್ತರವನ್ನು ಕಂಡುಕೊಳ್ಳಲು ಸಮರ್ಪಿಸಿಕೊಳ್ಳೋಣ.

## ಉತ್ತರವು ಪ್ರಕಟಿಸಲ್ಪಟ್ಟಿತು

ಕ್ರಿಸ್ತನು ತನ್ನ ಭೂಲೋಕದ ಸೇವೆಯಿಂದ ಪರಲೋಕಕ್ಕೆ ಹಿಂದಿರುಗಿದ ನಂತರ ತನ್ನ ಶಿಷ್ಯರು ಏನು ಮಾಡಬೇಕೆಂದು ಆತನು ಬಯಸುವದರ ಬಗ್ಗೆ ಖಚಿತತೆಯುಳ್ಳವನಾಗಿದ್ದನು, ಆತನ ನಿಯೋಗದ ಮೂರು ಪೂರ್ಣ ವಿಷಯ ಗಳು ಹೊಸ ಒಡಂಬಡಿಕೆಯಲ್ಲಿ ದಾಖಲೆ ಮಾಡಲ್ಪಟ್ಟಿವೆ (ಮತ್ತಾಯ 28:18-20; ಮಾರ್ಕ 16:15, 16; ಲೂಕ 24:46, 47). ಈ ವಿವರಣೆಯ ವೈಶಿಷ್ಟ್ಯತೆಯು ಎಂದಿಗೂ ಅತಿಯಾಗಿರುವದಿಲ್ಲ. ಇಡೀ ಕ್ರೈಸ್ತ ಯುಗಕ್ಕಾಗಿ ಆತನ ಶಿಷ್ಯರಿಗೆ ಅದು ಕ್ರಿಸ್ತನ ಮಾರ್ಗದರ್ಶನವನ್ನು ಕೊಡುತ್ತದೆ.

"ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ" (ಮಾರ್ಕ 16:15) ಎಂದು ಹೇಳುವದರಿಂದ ಕ್ರಿಸ್ತನು ತನ್ನ ಶಿಷ್ಯರಿಗೆ ಜಾಗತ್ರಿಕ ಅಪ್ಪಣೆಯನ್ನು ಕೊಟ್ಟನು. ಎರಡನೆಯದಾಗಿ, ಸುವಾರ್ತೆಯು ಸಾರಲ್ಪಡುವಂತೆ, ರಕ್ಷಣೆಯ ಮೇಲೆ ಅವಲಂಭಿಸಿರುವ ಶರತ್ತುಗಳನ್ನು ಆತನು ಸ್ಪಷ್ಟಪಡಿಸಿದನು. ಆತನು ತನ್ನ ಶಿಷ್ಯರಿಗೆ ಏನು ಮಾಡಬೇಕೆಂದು - "ಹೋಗಿರಿ," ಎಂದು ಹೇಳಿದನು. ಏನು ಹೇಳ ಬೇಕೆಂದು - "ಸುವಾರ್ತೆಯನ್ನು ಸಾರಿರಿ." - "ಹೋಗಿರಿ" ಮತ್ತು "ಸುವಾರ್ತೆ" ಎಂಬ ಪದಗಳೊಂದಿಗೆ ಅವರ ಭವಿಷ್ಯದ ಕಾರ್ಯವನ್ನು ಸಾರಾಂಶವಾಗಿ ಹೇಳಿದನು.

ಮಾರ್ಕನ ಪ್ರಕಾರವಾಗಿ, ಒಂದು ಸಲ, ಕ್ರಿಸ್ತನು ನಿಯೋಗವನ್ನು ಕೊಟ್ಟನು ಮತ್ತು ವಿಶ್ವಾಸದ ಶರತ್ತನ್ನು ಒತ್ತಿ ಹೇಳಿದನು. "ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ. ನಂಬಿ ಬಾಪ್ತಿಸ್ಮ ಮಾಡಿಸಿ ಕೊಳ್ಳುವವನು ರಕ್ಷಣೆ ಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ 16:15, 16) ಎಂದು ಆತನು ಹೇಳಿದನು. ನಿಯೋ ಗದ ಈ ದಾಖಲೆಯಲ್ಲಿ ಶರತ್ತಾಗಿ ಬಾಪ್ತಿಸ್ಮವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಆದರೆ ವಿಶ್ವಾಸದ ಮೇಲೆ ಒತ್ತು ಕೊಡಲ್ಪಟ್ಟಿರುವಂತೆ ತೋರುತ್ತದೆ.

ಲೂಕನ ಪ್ರಕಾರವಾಗಿ, ಕ್ರಿಸ್ತನು ಇನ್ನೊಂದು ಸಮಯದಲ್ಲಿ ನಿಯೋ ಗವನ್ನು ಕೊಟ್ಟನು ಹಾಗೂ ಮಾನಸಾಂತರವನ್ನು ಒತ್ತಿಹೇಳಿದನು. "ಕ್ರಿಸ್ತನು ಶ್ರಮೆ ಪಟ್ಟು, ಸತ್ತು ಮೂರನೆಯ ದಿನದಲ್ಲಿ ಜೀವಿತನಾಗಿ ಎದ್ದು ಬರುವನೆಂತಲೂ ಪಾಪ ಪರಿಹಾರಕೋಸ್ಕರ[1] ದೇವರ ಕಡೆಗೆ ತಿರುಗಿಕೊಳ್ಳ ಬೇಕೆಂಬ ಮಾತು ಯೆರೂಸಲೇಮು ಮೊದಲುಗೊಂಡು ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವದೆಂತಲೂ ಬರೆದದೆ" (ಲೂಕ 24:46, 47) ಎಂದು ಆತನು ಹೇಳಿದನು. ಮಾನಸಾಂತರವು, ಪಾಪದಿಂದ ದೇವರ ಕಡೆಗೆ ತಿರುಗುವಂಥದ್ದು ಕ್ರಿಸ್ತನ ಯುಗದ ಸುವಾರ್ತಾ ಪ್ರಸಂಗದಲ್ಲಿ ಪ್ರಮುಖ ವಿಚಾರ ವಾಗಿರಬೇಕಾಗಿತ್ತು.

ಗಲಿಲಾಯದಲ್ಲಿ ಪರ್ವತದ ಮೇಲೆ ಕ್ರಿಸ್ತನು ನಿಯೋಗವನ್ನು ಕೊಡುತ್ತಿರುವಂತೆ ಮತ್ತಾಯನು ಚಿತ್ರಿಸಿದ್ದಾನೆ. ಅಲ್ಲಿ ಬಾಪ್ತಿಸ್ಮದ ಮೇಲೆ ಒತ್ತು ಕೊಡಲ್ಪಟ್ಟಿದೆ. "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ, ಅವರಿಗೆ ತಂದೆಯ, ಕುಮಾರನ, ಪರಿಶುದ್ಧಾತ್ಮನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ" (ಮತ್ತಾಯ 28:18-20) ಎಂದು ಆತನು ಹೇಳಿದನು.

ಹಾಗಾದರೆ, ರಕ್ಷಣೆಯು ವಿಸ್ತರಿಸಬೇಕಾದ ಮೂರು ಶರತ್ತುಗಳು ವಿಶ್ವಾಸ, ಮಾನಸಾಂತರ ಮತ್ತು ಬಾಪ್ತಿಸ್ಮ. ಇವುಗಳಲ್ಲಿ ಪ್ರತಿಯೊಂದು ನಮ್ಮ ರಕ್ಷಕನಿಂದ ಪ್ರತ್ಯೇಕಿಸಲ್ಪಟ್ಟ ಮಹಾ ನಿಯೋಗದ ಮೂರು ವಿವರಣೆಗಳಲ್ಲಿ ಒತ್ತಿ ಹೇಳಲ್ಪಟ್ಟಿವೆ.

ಈ ಮೂರು ಶರತ್ತುಗಳು ಪ್ರತ್ಯಕ್ಷವಾಗಿವೆ ಹಾಗೂ ಸುಲಭವಾಗಿ ಗ್ರಹಿಸಿ ಕೊಳ್ಳಲ್ಪಡಬಹುದು. ಈ ಶರತ್ತುಗಳನ್ನು ಸ್ವೀಕರಿಸಿಕೊಳ್ಳದೇ ಹಾಗೂ ಕರ್ತನ ಯೋಜನೆಯಲ್ಲಿ ಅವುಗಳ ಮಹತ್ವವನ್ನು ಗುರುತಿಸದೇ ಯಾರೂ ಯೇಸುವಿನ ನಿಯೋಗವನ್ನು ಗಂಭೀರವಾಗಿ ತೆಗೆದುಕೊಳ್ಳಲಾರರು. ಕರ್ತನ ರಾಜ್ಯದೊಳಗೆ

ಇಲ್ಲವೇ ಸಭೆಯೊಳಗೆ ಪ್ರವೇಶದ ನಿಬಂಧನೆಗಳನ್ನು ಇಲ್ಲವೇ ಶರತ್ತುಗಳನ್ನು ಹೊಂದಿಕೊಂಡಿರುತ್ತವೆ. ಇವೇ ಕ್ರೈಸ್ತ ಯುಗವನ್ನು ನಿಯಂತ್ರಿಸುತ್ತವೆ.

## ಉತ್ತರವು ವಿಶದವಾಗಿ ವರ್ಣಿಸಲ್ಪಟ್ಟಿದೆ

ರಕ್ಷಣೆಯ ಶರತ್ತುಗಳು ಹೊಸ ಒಡಂಬಡಿಕೆಯಲ್ಲಿ ತಪ್ಪಿಲ್ಲದೇ ಕೊಡಲ್ಪಟ್ಟಿರುವವಷ್ಟೇ ಅಲ್ಲ, ಆದರೆ ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಸ್ಪಷ್ಟ ವಾಗಿ ಉದಾಹರಿಸಲ್ಪಟ್ಟಿವೆ.

ಉದಾಹರಣೆಯಾಗಿ, ಪುಸ್ತಕವು ಸಭೆಯ ಸ್ಥಾಪನೆಯ ರೋಮಾಂಚನಕರ ವಾದ ಕಥೆಯೊಂದಿಗೆ ಪ್ರಾರಂಭವಾಗುತ್ತದೆ. ಅಪೊಸ್ತಲರ ಕೃತ್ಯಗಳು 2ರಲ್ಲಿ ಜನಸಮೂಹವು ಪೇತ್ರನ ಪ್ರಸಂಗದಿಂದ ತಪ್ಪಿಗಸ್ಥರೆಂದು ನಿರ್ಣಯಕ್ಕೆ ಬಂದು “ನಾವು ಏನು ಮಾಡ ಬೇಕು?” ಎಂದು ಕೇಳಿದರು. ಯೇಸುವಿನಲ್ಲಿಯ ವಿಶ್ವಾಸವು ಅವರು ಕೇಳುವಂತೆ ಮುನ್ನಡಿಸಿತು. ಮಾನಸಾಂತರ ಪಟ್ಟು ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಹೊಂದಿರಿ ಎಂದು ಪೇತ್ರನು ಅವರಿಗೆ ಆಜ್ಞಾಪಿಸಿದನು (ಅಪೊಸ್ತಲರ ಕೃತ್ಯಗಳು 2:38). ಆ ದಿನ ಮೂರು ಸಾವಿರ ಜನರು ಬಾಪ್ತಿಸ್ಮ ಹೊಂದಿದರು (ಅಪೊಸ್ತಲರ ಕೃತ್ಯಗಳು 2:41). ಅದರಂತೆ, “ಕರ್ತನು ರಕ್ಷಣೆ ಹೊಂದುತ್ತಿದ್ದವರನ್ನು ದಿನಾಲು ಅವರೊಂದಿಗೆ ಸೇರಿಸುತ್ತಿದ್ದನು” ಎಂದು ಅಪೊಸ್ತಲರ ಕೃತ್ಯಗಳು 2:47ಬಿ ಹೇಳುತ್ತದೆ. ಅವರು ಕೂಡಿಸಲ್ಪಟ್ಟ ಮಂಡಲಿಯು ಅನಂತರದಲ್ಲಿ ಸಭೆ ಎಂದು ಹೇಳಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 5:11). ನಮ್ಮ ಕರ್ತನು ತನ್ನ ಅಂತಿಮ ಆದೇಶದಲ್ಲಿ ರಕ್ಷಣೆಯು ಪ್ರಕಟಿಸಲ್ಪಡುವದಕ್ಕಾಗಿ ವಿಶ್ವಾಸವನ್ನು (ನಂಬಿಕೆಯನ್ನು), ಮಾನಸಾಂತರವನ್ನು ಹಾಗೂ ಬಾಪ್ತಿಸ್ಮವನ್ನು ಶರತ್ತುಗಳಂತೆ ಸ್ಪಷ್ಟ ಪಡಿಸಿದನು. ಪಂಚಾಶತ್ತಮ ದಿನದಂದು ಸಭೆಯನ್ನು ಪ್ರವೇಶಿಸಿದ ಜನರು ಈ ಮೂರು ಶರತ್ತುಗಳನ್ನು ಪೂರೈಸಿದರು.

ಇನ್ನೊಂದು ಉದಾಹರಣೆಯು ಅಪೊಸ್ತಲರ ಕೃತ್ಯಗಳು 8ರಲ್ಲಿ ಕಂಡುಬರುತ್ತದೆ. ಅನಂತರದ ಭಾಗದಲ್ಲಿ ಫಿಲಿಪ್ಪನು ಪ್ರಸಂಗಿಸುವದಕ್ಕಾಗಿ ದಕ್ಷಣದ ಕಡೆಗೆ ಹೋಗ ಬೇಕೆಂದು ದೇವರಿಂದ ಹೇಳಲ್ಪಟ್ಟನು (ಅಪೊಸ್ತಲರ ಕೃತ್ಯಗಳು 8:26). ಹೋಗುವ ದಾರಿಯಲ್ಲಿ ಒಂದು ರಥದಲ್ಲಿ ಪ್ರಯಾಣಿಸುತ್ತಿದ್ದ ಐಥಿಯೋಪ್ಯದ ಕಂಚುಕಿಯನ್ನು ಫಿಲಿಪ್ಪನು ನೋಡಿದನು (ಅಪೊಸ್ತಲರ ಕೃತ್ಯಗಳು 8:27, 28). ಈ ಮನುಷ್ಯನು ಬಹಳ ಧಾರ್ಮಿಕ ವ್ಯಕ್ತಿಯಾಗಿದ್ದನು. ಅವನು ಇನ್ನೂ ಕ್ರೈಸ್ತನಾಗಿರಲಿಲ್ಲ. ಐಥಿಯೋಪ್ಯದವನ ಸಮೀಪದಲ್ಲಿ ಹೋಗಿ ಅವನೊಂದಿಗೆ ಮಾತಾಡಬೇಕೆಂದು ಫಿಲಿಪ್ಪನು ಪರಿಶುದ್ಧಾತ್ಮನಿಂದ ನಿರ್ದೇಶಿಸ ಲ್ಪಟ್ಟನು (ಅಪೊಸ್ತಲರ ಕೃತ್ಯಗಳು 8:29). ಅವನ ಬಳಿಗೆ ಓಡುತ್ತ ಹೋಗಿ

ಐಥಿಯೋಪ್ಯನು ಯೆಶಾಯನ ಗ್ರಂಥ ಓದುತ್ತಿದ್ದಾನೆಂಬುದನ್ನು ಅವನು ಕಂಡುಕೊಂಡನು. ಆದರೆ ಅವನು ಓದುತ್ತಿರುವದನ್ನು ಅವನು ಅರ್ಥಮಾಡಿಕೊಳ್ಳುತ್ತಿದ್ದಿಲ್ಲ (ಅಪೊಸ್ತಲರ ಕೃತ್ಯಗಳು 8:31). ಐಥಿಯೋಪ್ಯನು ಓದುತ್ತಿದ್ದ ವಾಕ್ಯಭಾಗದೊಂದಿಗೆ ಫಿಲಿಪ್ಪನು ಅವನಿಗೆ ಕ್ರಿಸ್ತನ ಕಥೆಯನ್ನು ಬಹಿರಂಗ ಪಡಿಸಿದನು (ಅಪೊಸ್ತಲರ ಕೃತ್ಯಗಳು 8:35). ಕ್ರಿಸ್ತನು ಈ ಲೋಕ ದೊಳಗೆ ಬಂದದ್ದನ್ನು ಹಾಗೂ ನಮ್ಮ ಪಾಪಗಳಿಗಾಗಿ ಮರಣ ಪಟ್ಟದ್ದನ್ನು ಸಂಶಯವಿಲ್ಲದೆ ಅವನಿಗೆ ಹೇಳಿರಬೇಕು.

ಕ್ರಿಸ್ತನ ಬಗ್ಗೆ ಮಾತಾಡುತ್ತ ಅವರು ಪ್ರಯಾಣ ಮಾಡುತ್ತಿದ್ದಂತೆ ನೀರಿನ ಬಳಿಗೆ ಬಂದರು. “ನನಗೆ ಬಾಪ್ತಿಸ್ಮವಾಗ ಬಹುದೋ?” ಎಂದು ಐಥಿಯೋಪ್ಯನು ಪ್ರಶ್ನಿಸಿದನು. ಐಥಿಯೋಪ್ಯನು ನಂಬಿದ್ದರಿಂದ ಬಾಪ್ತಿಸ್ಮ ಹೊಂದುವುದು ಅವನಿಗೆ ಯೋಗ್ಯವಾಗಿತ್ತು.[2] ಅವರು ರಥವನ್ನು ನಿಲ್ಲಿಸಿ, ನೀರಿನೊಳಗೆ ಹೋದರು. ಫಿಲಿಪ್ಪನು ಐಥಿಯೋಪ್ಯನಿಗೆ ಬಾಪ್ತಿಸ್ಮ ಮಾಡಿಸಿದನು (ಅಪೊಸ್ತಲರ ಕೃತ್ಯಗಳು 8:38). ತನ್ನ ಬಾಪ್ತಿಸ್ಮದ ನಂತರ ಐಥಿಯೋಪ್ಯದವನು ಸಂತೋಷವುಳ್ಳವನಾಗಿ ತನ್ನ ದಾರಿಹಿಡಿದು ಹೋದನು.

ನಮ್ಮ ಕರ್ತನ ಅಂತಿಮ ಆದೇಶದಲ್ಲಿ ರಕ್ಷಣೆಗಾಗಿ ಇಡಲ್ಪಟ್ಟ ಅದರ ಶರತ್ತುಗಳು ಪುನಃ ಅನುಕರಿಸಲ್ಪಟ್ಟಿವೆ. ಕ್ರಿಸ್ತನಲ್ಲಿ ನಂಬಿಕೆಯು ಫಿಲಿಪ್ಪನಿಂದ ಮಾಡಲ್ಪಟ್ಟ ಪ್ರಸಂಗದ ಪರಿಣಾಮವಾಗಿ ವಾಸ್ತವಿಕತೆಯಾಯಿತು (ಅಪೊಸ್ತಲರ ಕೃತ್ಯಗಳು 8:35, 36). ಐಥಿಯೋಪ್ಯದವನು ಧಾರ್ಮಿಕ ಮನುಷ್ಯನಾಗಿದ್ದನು. ದೇವರ ಚಿತ್ತವನ್ನು ಮಾಡಲು ಯಥಾರ್ಥವಾಗಿ ಪ್ರಯತ್ನಿಸುತ್ತಿದ್ದನು. ಆದುದರಿಂದ ಮಾನಸಾಂತರವು ಫಿಲಿಪ್ಪನು ಅವನಿಗೆ ತಂದ ಕ್ರಿಸ್ತನ ಬಗೆಗಿನ ಸಂದೇಶವನ್ನು ಅವನು ಸ್ವೀಕರಿಸಿದ್ದರಿಂದ ಪ್ರಕಟವಾಗಿದೆ. ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿಯ ಬೇರೆ ಯಾವುದೇ ವಿವರಣೆಯಲ್ಲಿಗಿಂತ ಇಲ್ಲಿ ಹೆಚ್ಚು ಸ್ಪಷ್ಟವಾಗಿ ಬಾಪ್ತಿಸ್ಮದ ವಿವರಣೆಯು ಕೊಡಲ್ಪಟ್ಟಿದೆ. ಫಿಲಿಪ್ಪ ಹಾಗೂ ಐಥಿಯೋಪ್ಯ ದವನು ಇಬ್ಬರೂ ನೀರಿನೊಳಗೆ ಇಳಿದರು, ಫಿಲಿಪ್ಪನು ಅವನಿಗೆ ಬಾಪ್ತಿಸ್ಮ ಮಾಡಿಸಿದನು (“ಅಪೊಸ್ತಲರ ಕೃತ್ಯಗಳಲ್ಲಿ ಪರಿವರ್ತನೆ ಹೊಂದಿದವರ ಉದಾಹರಣೆಗಳು” ಎಂಬ ಚಾರ್ಟನ್ನು ಈ ಪಾಠದ ಅಂತ್ಯದಲ್ಲಿ ನೋಡಿರಿ).

ನೀವು ಒಂದು ರಾಜ್ಯದಲ್ಲಿರುವಿರಿ ಮತ್ತು ನೀವು ಅರಸನನ್ನು ನಿಮ್ಮ ವೈಯ ಕ್ತಿಕ ಸ್ನೇಹಿತನಂತೆ ತಿಳಿದಿರುವಿರೆಂದು ಕಲ್ಪನೆ ಮಾಡಿಕೊಳ್ಳಿರಿ. ಒಂದು ದಿನ ಅರಸನೊಂದಿಗೆ ಒಂದು ಸಂವಾದದಲ್ಲಿ, ಅನಂತರದಲ್ಲಿ ನೀವು ಅವನನ್ನು ನೋಡಲು ಹಿಂದಿರುಗಿ ಬಂದರೆ, ನಿಮ್ಮ ತೆಲಿಗೆಗಳನ್ನು ಕ್ಷಮಿಸುವೆನು ಎಂದು ಅವನು ನಿಮಗೆ ಹೇಳಿದನು. ನೀವು ಈ ಸಮಾಚಾರವನ್ನು ಸಂತೋಷದಿಂದ ಸ್ವೀಕರಿಸುವಿರಿ. ಒಂದು ತಿಂಗಳಲ್ಲಿ ಅವನನ್ನು ನೋಡಲು ಹಿಂದಿರುಗಿ ಬರುವದನ್ನು ತೀರ್ಮಾನಿಸಿಕೊಳ್ಳುವಿರಿ. ಕೊನೆಗೆ ನಿಮ್ಮ ತೆಲಿಗೆಗಳ ಕ್ಷಮಾಪಣೆಯನ್ನು ನಿರೀಕ್ಷಿಸಿ

ಕೊಂಡು ಅರಸನನ್ನು ನೋಡಲು ಹಿಂದಿರುಗಿ ಬರುವಿರಿ. ಅರಮನೆಗೆ ನೀವು ತಲುಪಿದಾಗ, ಅರಸನು ಇನ್ನೊಂದು ದೇಶಕ್ಕೆ ಪ್ರಯಾಣ ವಾಗಿ ಹೋಗಿದ್ದಾನೆಂದು ನಿಮಗೆ ಹೇಳಲ್ಪಡುವುದು. ನೀವು ಅರಸನನ್ನು ನೋಡಲು ಹಿಂದಿರುಗಿ ಬಂದರೆ ನಿಮ್ಮ ತೆರಿಗೆಗಳು ಕ್ಷಮಿಸಲ್ಪಡುವುದು ಎಂದು ಅರಸನು ಹೇಳಿದ್ದ ನೆಂದು ನೀವು ಅರಮನೆಯ ದ್ವಾರಪಾಲಕನಿಗೆ ತಿಳಿಸುವಿರಿ. "ಅರಸನು ನಿಮಗಾಗಿ ವಿಶೇಷ ವ್ಯವಸ್ಥೆ ಮಾಡಿರುವನು" ಎಂದು ದ್ವಾರಪಾಲಕನು ಹೇಳುವನು. ಹನ್ನೆರಡು ಜನ ಆಡಳಿತಾಧಿಕಾರಿಗಳಿದ್ದ ಕೋಣೆಯೊಳಗೆ ನಿಮ್ಮನ್ನು ಕರೆದುಕೊಂಡು ಹೋಗುವನು. ಅವರಿಗೆ ನಿಮ್ಮ ಕಥೆಯನ್ನು ಹೇಳುವಿರಿ. "ಅರಸನು ಇಲ್ಲಿದ್ದಾಗ ಕೇವಲ ಒಂದು ಮಾತಿನಿಂದ ತೆರಿಗೆಗಳನ್ನು ಕ್ಷಮಿಸುತ್ತಿದ್ದ ಅಧಿಕಾರ ಅವನಿಗಿತ್ತು. ಆದರೆ ಈಗ ಅರಸನು ಹೊರಟು ಹೋಗಿದ್ದಾನೆ. ತೆರಿಗೆಗಳನ್ನು ಕ್ಷಮಿಸಲು ಸ್ಪಷ್ಟವಾದ ಶರತ್ತುಗಳನ್ನು ಹೇಳಿ ಹೋಗಿದ್ದಾನೆ. ಈಗ ನೀವು ಆ ಶರತ್ತುಗಳನ್ನು ಪಾಲಿಸಬೇಕು. ನೀವು ಮೊದಲು ನಿಮ್ಮ ಮನೆಗೆ ಹಿಂದಿರುಗಿ ಹೋಗಬೇಕು; ಎರಡನೆಯದು, ನಿಮ್ಮ ಕಥೆಯನ್ನು ಹೇಳಿ ಒಂದು ಪತ್ರವನ್ನು ನಮಗೆ ಬರೆಯ ಬೇಕು, ಮೂರನೆಯದು, ನಿಮ್ಮ ಕುಟುಂಬದ ಎಲ್ಲಾ ಸದಸ್ಯರ ಪಟ್ಟಿ ಮಾಡ ಬೇಕು, ಹಾಗೂ ನಾಲ್ಕನೆಯದು, ಮೂರು ಸಾಕ್ಷಿಗಳ ಎದುರಿನಲ್ಲಿ ಆ ಪತ್ರಕ್ಕೆ ಸಹಿ ಹಾಕಬೇಕು. ಈ ಶರತ್ತುಗಳನ್ನು ಪೂರೈಸುವಾಗ ನಿಮ್ಮ ತೆರಿಗೆಗಳು ಕ್ಷಮಿಸಲ್ಪಡುವವು" ಎಂದು ಅವರು ತಿಳಿಸುವರು.

ಕ್ರಿಸ್ತನು ನಿಜವಾಗಿಯೂ ಮಾಡಿದ್ದರೊಂದಿಗೆ ಈ ಕಥೆಯನ್ನು ಹೋಲಿಸಿರಿ. ಆತನು ಇಲ್ಲಿ ಇದ್ದಾಗ, ಕೇವಲ ಒಂದು ಮಾತಿನಿಂದ ಆಗಾಗ ಪಾಪಗಳನ್ನು ಕ್ಷಮಿಸಿದನು. ಉದಾಹರಣೆಯಾಗಿ ಶಿಲುಬೆಯ ಮೇಲಿನ ಕಳ್ಳನನ್ನು ಕ್ಷಮಿಸಿದನು (ಲೂಕ 23:43). ಹೀಗಿದ್ದರೂ, ಕ್ರಿಸ್ತನು ಈ ಲೋಕವನ್ನು ಬಿಟ್ಟು ಹೋಗಲು ಸಿದ್ಧನಾದಾಗ, ಕ್ರೈಸ್ತ ಯುಗದಲ್ಲಿ ಜನರಿಗೆ ಕೊಡಲ್ಪಡುವ ರಕ್ಷಣೆಗಾಗಿ, ಆತನು ಶರತ್ತುಗಳನ್ನು ಕೊಟ್ಟಿದ್ದಾನೆ. ಅದಕ್ಕೆ ಕೂಡಿಸಿ ಲೋಕದ ಅಂತ್ಯದವರೆಗೆ ನಿಯೋಗವು ಪರಿಣಾಮ ಕಾರಿಯಾದದ್ದಾಗಿರ ಬೇಕೆಂದು ಆತನು ಸೂಚಿಸಿದ್ದಾನೆ (ಮತ್ತಾಯ 28:20). ಈಗ ಅರಸನು ಹೊರಟು ಹೋಗಿದ್ದಾನೆ, ಕ್ಷಮಾಪಣೆಯ ಆತನ ಶರತ್ತುಗಳು ಜಾರಿಯಲ್ಲಿವೆ.

## ಉತ್ತರವು ಅನ್ವಯಿಸಲ್ಪಟ್ಟಿದೆ

ಸಭೆಯೊಳಗಿನ ಪ್ರವೇಶದ ಈ ಶರತ್ತುಗಳು ನಮ್ಮೊಬ್ಬೊಬ್ಬರಿಗೆ ಅನ್ವಯಿಸಲ್ಪಡ ತಕ್ಕದ್ದು. ಕ್ರಿಸ್ತನ ಅಂತಿಮ ನಿಯೋಗವು ಬದಲಾಯಿಸಲ್ಪಟ್ಟಿರುವದಿಲ್ಲ. ಅದು ಕೊಡಲ್ಪಟ್ಟಾಗ ಇದ್ದಂತೆಯೇ ಈ ದಿನದಲ್ಲಿಯೂ ಇದೆ. ರಕ್ಷಣೆಯ ಶರತ್ತುಗಳು

ಪೇತ್ರನಿಂದ ಮೊದಲನೆಯ ಪ್ರಸಂಗವು ಪ್ರಸಂಗಿಸಲ್ಪಟ್ಟದ್ದನ್ನು ಕೇಳಿದವರಿಗಾಗಿ ಇದ್ದಂತೆಯೇ ಸ್ಪಷ್ಟವಾಗಿ ನಮಗಾಗಿಯೂ ಇವೆ. ಸಭೆಯೊಳಗಿನ ಪ್ರವೇಶದ ಶರತ್ತುಗಳನ್ನು ಕ್ರಿಸ್ತನು ನೇಮಿಸುತ್ತಾನೆ. ಅದಕ್ಕೆ ನಿಜವಾಗಿ ಕೂಡಿಸುವದನ್ನು ಆತನು ಮಾಡುತ್ತಾನೆ. ಮನುಷ್ಯರ ಚರ್ಚೆಗಳೂ, ಆದೇಶಗಳೂ ಆತನ ಮರಣ ಶಾಸನವನ್ನು, ಒಡಂಬಡಿಕೆಯನ್ನು ಬದಲಾಯಿಸಲಾರವು. ಅರಸನು ಹೊರಟು ಹೋಗಿದ್ದಾನೆ. ಕ್ರೈಸ್ತ ಯುಗಕ್ಕಾಗಿ ಆತನು ನೇಮಿಸಿದ ಶರತ್ತುಗಳು ಅನುಸರಿಸಲ್ಪಡತಕ್ಕದ್ದು.

ಆತನ ಸಭೆಯೊಳಗೆ ಪ್ರವೇಶಿಸುವ ಆತನ ಶರತ್ತುಗಳ ವಿಷಯದಲ್ಲಿ ನೀವೆಲ್ಲಿ ನಿಂತಿರುವಿರಿ? ನೀವು ನಂಬುವಿರೋ? ವಿಶ್ವದ ಮೂಲವು ದೇವರ ವಾಕ್ಯವಾಗಿದೆ (ರೋಮಾಪುರ 10:17). ಮನುಷ್ಯನ ಜ್ಞಾನ, ವಿದ್ಯೆ ಇಲ್ಲವೇ ಸಾಧನೆಗಳು ವಿಶ್ವಾಸವನ್ನು ಹುಟ್ಟಿಸಲಾರವು. ನೀವು ದೇವರಲ್ಲಿ ನಂಬುವಿರೋ? ಕ್ರಿಸ್ತನು ಆತನ ಕುಮಾರನಾಗಿದ್ದಾನೆ ಮತ್ತು ಮಾನವ ಕುಲದ ರಕ್ಷಕನಾಗಿದ್ದಾನೆಂದು ನೀವು ನಂಬುವಿರೋ?

ನಿಮ್ಮ ಪಾಪಗಳಿಗಾಗಿ ನೀವು ಮಾನಸಾಂತರ ಪಟ್ಟಿರುವಿರೋ (ಅಪೊಸ್ತಲರ ಕೃತ್ಯಗಳು 17:30, 31)? ಪಾಪವನ್ನು ಬಿಟ್ಟು ಜೀವಿಸುವ ದೇವರ ಕಡೆಗೆ ತಿರುಗಿಕೊಂಡಿರುವಿರೋ? ಅದರ ಅರ್ಥವೇನು ಆಗುವುದು ಇಲ್ಲವೇ ಅದು ಎಲ್ಲಿಗೆ ನಡಿಸುತ್ತದೆ ಎಂಬುದನ್ನು ಯೋಚಿಸದೇ ದೇವರ ಚಿತ್ತಕ್ಕೆ ನಿಮ್ಮ ಹೃದಯವನ್ನು ನೀವು ಸಮರ್ಪಿಸುವಿರೋ?

ದೇವರ ಕುಮಾರನೆಂದೂ ಒಡೆಯನೆಂದೂ ಯೇಸುವಿನಲ್ಲಿ ನಿಮ್ಮ ನಂಬಿಕೆಯನ್ನು ಬಹಿರಂಗವಾಗಿ ಹೇಳಿರುವಿರೋ (ರೋಮಾಪುರ 10:10)? ಯೇಸುವು ರಕ್ಷಕನೂ ಕರ್ತನೂ ಆಗಿದ್ದಾನೆಂದು ನಿಮ್ಮ ತುಟಿಗಳಿಂದ ಅರಿಕೆ ಮಾಡಿರುವಿರೋ?

ನೀವು ಬಾಪ್ತಿಸ್ಮ ಹೊಂದಿರುವಿರೋ? ಮಹಾ ನಿಯೋಗದ ಬಾಪ್ತಿಸ್ಮವು ಮುಳುಗೇಳಿ ಸುವದರಿಂದ (ರೋಮಾಪುರ 6:4), ಕ್ರಿಸ್ತನಲ್ಲಿ (ರೋಮಾಪುರ 6:3; ಗಲಾತ್ಯ 3:27), ಪಾಪಗಳ ಕ್ಷಮಾಪಣೆಗಾಗಿ (ಅಪೊಸ್ತಲರ ಕೃತ್ಯಗಳು 2:38; 22:16) ಹಾಗೂ ತಂದೆ, ಕುಮಾರನ, ಪರಿಶುದ್ಧಾತ್ಮನ ಹೆಸರಿನಲ್ಲಿ (ಮತ್ತಾಯ 28:19, 20) ಇರುವುದು. ಹೊಸ ಒಡಂಬಡಿಕೆಯ ವಿಧಾನ ಪ್ರಕಾರವಾಗಿ ನೀವು ಬಾಪ್ತಿಸ್ಮ ಹೊಂದಿರುವಿರೋ?

ಯೇಸುವು ತನ್ನ ಅಂತಿಮ ನಿಯೋಗದಲ್ಲಿ ಕೊಟ್ಟ ಶರತ್ತುಗಳನ್ನು ಇಂದು ಒಬ್ಬನು ಅನುಸರಿಸಿದರೆ, ನಮ್ಮ ನಂಬಿಗಸ್ತ ಕರ್ತನೂ ರಕ್ಷಕನೂ ಆಗಿರುವಾತನು ಅವನನ್ನು ತನ್ನ ಸಭೆಗೆ, ರಾಜ್ಯಕ್ಕೆ ಕೂಡಿಸುವನು ಎಂದು ನಂಬುವುದು ಯೋಗ್ಯ ವಾದದ್ದು ಆಗಿರುತ್ತದೆ ಅಲ್ಲವೇ? ಕರ್ತನ ಶರತ್ತುಗಳನ್ನು ಯಾರೂ ವಿವರಿಸಿ

ಬಿಟ್ಟುಬಿಡಲಾಗದು. ಅವುಗಳಿಗೆ ಬದಲಿಯಾದವುಗಳಿಗೆ ನಾವು ಅವಕಾಶ ಕೊಡಬಾರದು; ಇಲ್ಲವೇ ಅವುಗಳನ್ನು ಕೆಡಿಸಬಾರದು. ಕ್ರಿಸ್ತನಿಗಾಗಿ ನಿಜವಾದ ಸಮರ್ಪಣೆಗೆ ವಿಧೇಯತೆಯನ್ನು ಬಿಟ್ಟು ಬೇರೆ ಯಾವುದೂ ಬೇಕಾಗಿಲ್ಲ.

## ಮುಕ್ತಾಯ

ಹೊಸ ಒಡಂಬಡಿಕೆಯ ಸಭೆಯನ್ನು ನೀವು ಪ್ರವೇಶಿಸಿದ್ದೀರೋ? ಇಂದು ಅದರಲ್ಲಿ ಪ್ರವೇಶಿಸಲು ಬಯಸುವಿರೋ?

ಹೊಸ ಒಡಂಬಡಿಕೆಯಲ್ಲಿ ಸ್ಥಾಪಿಸಲ್ಪಟ್ಟ ಸಭೆಯಲ್ಲಿ ಪ್ರವೇಶಿಸುವ ದಕ್ಕಾಗಿರುವ ಕರ್ತನ ಶರತ್ತುಗಳನ್ನು ಯಥಾರ್ಥವಾಗಿ ಒಪ್ಪಿಕೊಳ್ಳುವವನು ಪ್ರವೇಶಿಸಬಹುದು ಎಂಬುದು ನಮಗೆ ಅತೀದೊಡ್ಡದಾದ ಹಾಗೂ ಅತೀ ಭವ್ಯ ವಾದ ಸಮಾಚಾರವಾಗಿದೆ. ಎಲ್ಲಾ ರಾಷ್ಟ್ರಗಳು, ಎಲ್ಲಾ ಕುಲಗಳು ಹಾಗೂ ಎಲ್ಲಾ ಜನಾಂಗಗಳು ಆತನ ರಾಜ್ಯದಲ್ಲಿ ಪ್ರವೇಶಿಸಬಹುದು ಮತ್ತು ಕ್ರಿಸ್ತನಲ್ಲಿ ಒಂದಾಗಿ ಇರಬಹುದು (ಎಫೆಸ 2:14).

ಅಸ್ತಿವಾರವು ಸತ್ಯವಾದದ್ದಾಗಿದೆಯೆಂದು ನಿಶ್ಚಯ ಪಡಿಸಿಕೊಂಡು ಆರಂಭದಲ್ಲಿ ನಾವು ಪ್ರಾರಂಭಿಸಬೇಕೆಂದು ಜ್ಞಾನವು ಕೇಳುತ್ತದೆ. ರಕ್ಷಣೆಗಾಗಿರುವ ಕರ್ತನ ಶರತ್ತುಗಳಿಗೆ ನೀವು ವಿಧೇಯರಾಗಿರದಿದ್ದರೆ, ಆ ಶರತ್ತುಗಳನ್ನು ಸಂಪೂರ್ಣವಾಗಿ ಕೂಡಲೇ ಪೂರೈಸಿರಿ. ಆತನ ರಾಜ್ಯದಲ್ಲಿ ಪ್ರವೇಶಿಸಿರಿ ಹಾಗೂ ಇಂದಿನಿಂದ ಆತನ ರಾಜ್ಯದ ಪೌರನಂತೆ ಜೀವಿಸಿರಿ.

ಕ್ರಿಸ್ತನ ಸಭೆಯೊಳಗೆ ನೀವು ಪ್ರವೇಶಿಸದಿದ್ದರೆ ಅದು ನಿಜವಾಗಿಯೂ ನಿಮಗೆ ಬೆಲೆಯುಳ್ಳದ್ದಾಗಿರುವದಿಲ್ಲ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ಕರ್ತನ ಸಭೆಯ ಹೋಲಿಸಲಾಗದ ಮೌಲ್ಯವನ್ನು ವಿವರಿಸಿರಿ.
2. ಮಹಾನಿಯೋಗದ ಶರತ್ತುಗಳು ಇಂದು ಕ್ರೈಸ್ತರ ಮೇಲೆ ಬಂಧಿಸಲ್ಪಡುತ್ತವೆಯೋ?
3. ಶಿಲುಬೆಯ ಮೇಲೆ ಕಳ್ಳನು ರಕ್ಷಿಸಲ್ಪಟ್ಟಂತೆ - ನಾವು ಇಂದು ಯಾಕೆ ರಕ್ಷಿಸಲ್ಪಡ ಬಾರದು?
4. ಇಂದು ಒಬ್ಬನು ಹೇಗೆ ಸಭೆಯ ಸದಸ್ಯನಾಗಬಹುದು?
5. ರಕ್ಷಿಸಲ್ಪಟ್ಟವರನ್ನು ಮನುಷ್ಯರು ಸಭೆಗೆ ಸೇರಿಸುವರೋ?
6. ಒಬ್ಬನು ಕ್ರೈಸ್ತನಾಗಲು ಅಪೊಸ್ತಲರ ಕೃತ್ಯಗಳಲ್ಲಿ ಒಬ್ಬನು ಮಾಡಿದ್ದನ್ನು ಒಬ್ಬನು ಮಾಡಿದರೆ, ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಆತನ ಚಿತ್ತಕ್ಕೆ ವಿಧೇಯರಾದವರಿಗೆ

ಆತನು ಮಾಡಿದ್ದನ್ನು ಅವನಿಗಾಗಿ ಮಾಡುವದಿಲ್ಲ ಎಂದು ನಂಬುವದಕ್ಕೆ ಯಾವುದೇ ಕಾರಣವಿರುವುದೋ?

7. ಒಬ್ಬನು ತಾನು ಕ್ರಿಸ್ತನ ಸಭೆಯಲ್ಲಿ ಇರುವೆನೆಂದು ಹೇಗೆ ನಿಶ್ಚಿತಪಡಿಸಿ ಕೊಳ್ಳಬಹುದು?
8. ರಕ್ಷಣೆಯ ಕರ್ತನ ಶರತ್ತುಗಳು ಕೆಡಿಸಲ್ಪಡುವಾಗ, ದೊಡ್ಡ ಹಾನಿಯು ಮಾಡಲ್ಪ ಡುವುದೋ?

## ಪದ ಸಹಾಯಗಳು

ಯೇಸುವಿನ ಅಂತಿಮ ಮರಣಶಾಸನ ಹಾಗು ಒಡಂಬಡಿಕೆ - ಹೊಸ ಒಡಂಬಡಿಕೆ (ಇಬ್ರಿಯ 9:15-17).

ವಿಶಿಷ್ಟವಾದ - ಭಿನ್ನವಾದ; ಪ್ರತ್ಯೇಕಿಸಲ್ಪಟ್ಟ ಕ್ರೈಸ್ತರ ಬಗ್ಗೆ 1 ಪೇತ್ರ 2:9, "ನೀವಾದರೊ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿ ಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದು ಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಪರಿಶುದ್ಧ ಜನಾಂಗವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ" KJV ಎಂದು ಹೇಳುತ್ತದೆ.

---

ಟಿಪ್ಪಣೆಗಳು

[1]ಕೆಲವು ಮೂಲ ಪ್ರತಿಗಳು "for" ಎಂಬುದಕ್ಕೆ ಬದಲಾಗಿ ಇಲ್ಲಿ "and" ಎಂದು ಹೇಳುತ್ತವೆ.

[2]ಅನೇಕ ನಂಬಲರ್ಹವಾದ ಅಪೊಸ್ತಲರ ಕೃತ್ಯದ ಮೂಲ ಪ್ರತಿಯಲ್ಲಿ ಅಪೊಸ್ತಲರ ಕೃತ್ಯಗಳು 8ರ 37ನೆಯ ವಚನ ಕಂಡು ಬರುವದಿಲ್ಲ. ಈ ವಚನವು ಹೊಸ ಒಡಂಬಡಿಕೆಯ ಮೂಲ ಪಠ್ಯದ ಭಾಗವಾಗಿ ಇರುವದಿಲ್ಲ ಎಂಬ ತೀರ್ಮಾನಕ್ಕೆ ನಡಿಸಲ್ಪಟ್ಟಿದೆ. ಹೀಗಿದ್ದರೂ ಈ ವಚನದಲ್ಲಿ ಫಿಲಿಪ್ಪನಿಂದ ಕೇಳಲ್ಪಟ್ಟ ಪ್ರಮುಖ ಹೇಳಿ ಕೆಯು ಬರುವದಕ್ಕೆ ಅತೀ ನೈಸರ್ಗಿಕವಾದ ಉದಾಹರಣೆಯಾಗಿದೆಯೆಂದು ತೆಗೆದುಕೊಳ್ಳ ಬೇಕಾಗುವುದು. ಐಥಿಯೋಪ್ಯದ ಕಂಚುಕಿಯು ಕ್ರಿಸ್ತನ ಬಗೆಗಾಗಲೀ ಇಲ್ಲವೇ ಆತನ ಬಗೆಗಿನ ಪ್ರವಾದನೆಗಳನ್ನು ಯಾರು ಬರೆದರು ಎಂಬುದನ್ನಾಗಲೀ ತಿಳಿದಿರಲಿಲ್ಲ. ಆಗ ಕ್ರಿಸ್ತನ ಬಗೆಗಿನ ಒಂದು ಮಾತುಕತೆಯಿಂದ, ಕಂಚುಕಿಯು ಬಾಪ್ತಿಸ್ಮ ಹೊಂದಲು ಬಯಸಿದನು. ಆದುದರಿಂದ "ನೀನು ಮನಃ ಪೂರ್ವಕವಾಗಿ ನಂಬಿದರೆ ಆಗಬಹುದು" ಎಂಬ ಹೇಳಿಕೆಯು ಯೋಗ್ಯವಾದದ್ದಾಗಿರುವುದು ಹಾಗೂ ಬಾಪ್ತಿಸ್ಮಕ್ಕೆ ಸಿದ್ಧತೆ ಮಾಡುವಲ್ಲಿ ಅವಶ್ಯವಾದದ್ದು ಆಗಿರುವುದು. ಕ್ರಿಸ್ತನು ದೇವರ ಕುಮಾರನು ಎಂಬ ಅರಿಕೆಯು ವಿಶ್ವಾಸದ ಒಪ್ಪಿಕೊಳ್ಳುವಿಕೆಯಾಗಿದೆ ಹಾಗೂ ನಂಬುವದಕ್ಕಾಗಿ ಮಹಾ ನಿಯೋಗದ ಶರತ್ತಿನಿಂದ ಬೆಳೆದು ಬಂದಿದ್ದಾಗಿದೆ.

**ಅಪೊಸ್ತಲರ ಕೃತ್ಯಗಳಲ್ಲಿ ಪರಿವರ್ತನೆ ಹೊಂದಿದವರ ಉದಾಹರಣೆಗಳು**

| ಕೇಳಿದರು | ನಂಬಿದರು | ಮಾನಸಾಂತರಪಟ್ಟರು | ಅರಿಕೆ ಮಾಡಿದರು | ಬಾಪ್ತಿಸ್ಮ ಹೊಂದಿದರು | ರಕ್ಷಿಸಲ್ಪಟ್ಟರು |
|---|---|---|---|---|---|
| ಯೆಹೂದ್ಯರು<br>ಅಪೊಸ್ತಲರ ಕೃತ್ಯಗಳು 2 | "ಅವರಿಗೆ ಹೃದಯದಲ್ಲಿ ಅಲಗು ನೆಟ್ಟಂತಾಯಿತು" (ವ. 37) | "ದೇವರ ಕಡೆಗೆ ತಿರುಗಿಕೋ" (ವ. 38) | | "ಬಾಪ್ತಿಸ್ಮ ಮಾಡಿಸಿ ಕೊಳ್ಳಿರಿ" (ವ. 38); "ಬಾಪ್ತಿಸ್ಮ ಮಾಡಿಸಿ ಕೊಂಡರು" (ವ. 41) | "ನಿಮ್ಮ ಪಾಪಗಳು ಪರಿಹಾರ ವಾಗುವದಕ್ಕಾಗಿ" (ವ. 38) |
| ಸಮಾರ್ಯದವರು<br>ಅಪೊಸ್ತಲರ ಕೃತ್ಯಗಳು 8 | "ಅವರು ನಂಬಿದಾಗ" (ವ. 12) | | | "ಅವರು ಬಾಪ್ತಿಸ್ಮ ಮಾಡಿಸಿಕೊಂಡರು" (ವ. 12) | |
| ಐಥಿಯೋಪ್ಯದವನು<br>ಅಪೊಸ್ತಲರ ಕೃತ್ಯಗಳು 8 | ["ನೀನು ನಂಬುವದಾದರೆ"] (ವ. 37) | | ["ಯೇಸು ಕ್ರಿಸ್ತನನ್ನು ದೇವರ ಕುಮಾರನೆಂದು ನಂಬುತ್ತೇನೆ" (ವ. 37)] | "ಬಾಪ್ತಿಸ್ಮವಾಗಬೇಕು" (ವ. 36); "ಅವನಿಗೆ ಬಾಪ್ತಿಸ್ಮ ಮಾಡಿಸಿದನು" (ವ. 38) | "ಸಂತೋಷವುಳ್ಳವನಾಗಿ ತನ್ನ ದಾರಿ ಹಿಡಿದು ಹೋದನು" (ವ. 39) |
| ಸೌಲ<br>ಅಪೊಸ್ತಲರ ಕೃತ್ಯಗಳು 9; 22; 26 | | ಉಪವಾಸ ಮತ್ತು ಪ್ರಾರ್ಥನೆ (9:9, 11) | "ಕರ್ತನೇ" (9:5) | "ಬಾಪ್ತಿಸ್ಮ ಮಾಡಿಸಿಕೊಂಡನು" (9:18); "ಬಾಪ್ತಿಸ್ಮ ಮಾಡಿಸಿ ಕೊಳ್ಳಿರಿ" (22:16) | "ನಿನ್ನ ಪಾಪಗಳನ್ನು ತೊಳೆದುಕೋ" (22:16) |
| ಕೊರ್ನೇಲ್ಯನು<br>ಅಪೊಸ್ತಲರ ಕೃತ್ಯಗಳು 10; 11 | "ಆತನಲ್ಲಿ ನಂಬಿಕೆಯಿಡುವ" (10:43) | "ಜೀವಕ್ಕೆ ನಡಿಸುವ ಮಾನಸಾಂತರ" (11:18) | | "ಬಾಪ್ತಿಸ್ಮವಾಗಬೇಕು" (10:47); "ಬಾಪ್ತಿಸ್ಮ ಮಾಡಿಸಿ ಕೊಳ್ಳ ಬೇಕೆಂದು ಅಪ್ಪಣೆ ಕೊಟ್ಟನು" (10:48) | "ಪಾಪ ಪರಿಹಾರ" (10:43) |
| ಲುದ್ಯ<br>ಅಪೊಸ್ತಲರ ಕೃತ್ಯಗಳು 16 | | | | "ಬಾಪ್ತಿಸ್ಮ ಮಾಡಿಸಿ ಕೊಂಡಳು" (ವ. 15) | |
| ಸೆರೆಯ ಯಜಮಾನ<br>ಅಪೊಸ್ತಲರ ಕೃತ್ಯಗಳು 16 | "ಯೇಸುವಿನ ಮೇಲೆ ನಂಬಿಕೆಯಿಡು" (ವ. 31); "ನಂಬಿದ ನಂತರ" (ವ. 34) | "ಅವರ ಗಾಯಗಳನ್ನು ತೊಳೆದು" (ವ. 33) | | "ಬಾಪ್ತಿಸ್ಮ ಮಾಡಿಸಿಕೊಂಡನು" (ವ. 33) | "ರಕ್ಷಣೆ ಹೊಂದುವಿ" (ವ. 31); "ಉಲ್ಲಾಸ ಗೊಂಡರು" (ವ. 34) |
| ಕೊರಿಂಥದವರು<br>ಅಪೊಸ್ತಲರ ಕೃತ್ಯಗಳು 18 | "ನಂಬಿದರು" (ವ. 8) | | | "ಬಾಪ್ತಿಸ್ಮ ಮಾಡಿಸಿ ಕೊಂಡರು" (ವ. 8) | |

## 17

# ಸಭೆಯ ಐಕ್ಯತೆ

ಅವನನ್ನು ತಿಳಿಯಲ್ಪಟ್ಟವರಿಂದ ಗುರುತಿಸಲ್ಪಟ್ಟ, ಕ್ರಿಸ್ತನಂತಿರುವ ಆತ್ಮವುಳ್ಳ ಸುವಾ ರ್ತಾ ಪ್ರಸಂಗಿ ಟಿ. ಬಿ. ಲಾರಿಮೋರೆ ಎಂಬುವರು ಕ್ರಿಸ್ತನ ಸಭೆಯ ಕುಟುಂಬ ಐಕ್ಯತೆಯನ್ನು ಕೀರ್ತನೆ 133:1ರೊಂದಿಗೆ ವಿವರಿಸಿದರು: "ಆಹಾ ಸಹೋದರರು ಒಂದಾಗಿರುವುದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು!" ಕೆಲವು ಸಂಗತಿಗಳು ಒಳ್ಳೆಯವುಗಳಾಗಿರುತ್ತವೆ ಆದರೆ ರಮ್ಯವಾದವುಗ ಳಾಗಿರುವದಿಲ್ಲ. ಕ್ಯಾನ್ಸರಿನಂತ ಬೆಳವಣಿಗೆಯನ್ನು ತೆಗೆದು ಹಾಕಲು ಶಸ್ತ್ರ ಚಿಕಿತ್ಸೆಯು ಜೀವ ಉಳಿಸುವದಕ್ಕಾಗಿದ್ದು ಒಳ್ಳೆಯದಾಗಿದೆ ಆದರೆ ರೋಗಿಗೆ ರಮ್ಯವಾದದ್ದಾಗಿರುವದಿಲ್ಲ. ಕೆಲವು ಸಂಗತಿಗಳು ರಮ್ಯವಾದವುಗಳಾಗಿರುತ್ತವೆ. ಆದರೆ ಒಳ್ಳೆಯವುಗಳಾಗಿರುವದಿಲ್ಲ. ವಿಶೇಷ ಸಂದರ್ಭಗಳಲ್ಲಿ ಆಟವು ರಮ್ಯವಾ ದದ್ದಾಗಿರುತ್ತದೆ. ಸಂತೋಷವನ್ನು ತರುತ್ತದೆ. ಆದರೆ ಸತತವಾಗಿ ಆಡುವುದು ಕೆಟ್ಟದ್ದಾಗಿದೆ. ಸಹೋದರ ಲಾರಿಮೋರೆ ಅವರು, ಈ ಜಗತ್ತಿನಲ್ಲಿ ಒಳ್ಳೆ ಯವುಗಳೂ ರಮ್ಯವಾದವುಗಳೂ ಆದ ಸಂಗತಿಗಳನ್ನು ಕಂಡು ಕೊಳ್ಳುತ್ತೇವೆ, ನಿಜವಾಗಿಯೂ ಅವು ನಮಗೆ ಲಾಭದಾಯಕವಾಗಿರುವವು, ಅದೇ ಸಮಯದಲ್ಲಿ ಅನುಭವಿಸಲು ಆನಂದಕರವಾದವುಗಳೂ ಆಗಿರುತ್ತವೆ ಎಂಬುದನ್ನು ಗಮನಿಸಿದರು. ಈ ಎರಡೂ ಗುಣಲಕ್ಷಣಗಳು ಕ್ರಿಸ್ತನಲ್ಲಿಯ ಐಕ್ಯತೆಯಲ್ಲಿ, ಒಂದೇ ಮನಸ್ಸಿನಿಂದ ಒಂದಾಗಿ ವಾಸಿಸುವ ಸಹೋದರರಲ್ಲಿ ಕಂಡು ಬರುತ್ತದೆಂದು ಅವರು ತೋರಿಸಿದರು.[1] ಅವರೊಂದಿಗೆ ಯಾರು ಒಪ್ಪಿಕೊಳ್ಳದೆಯಿರುವರು?

ಹೊಸ ಒಡಂಬಡಿಕೆಯ ಪ್ರಕಾರವಾಗಿ ಕ್ರಿಸ್ತನಲ್ಲಿಯ ಐಕ್ಯತೆಯು ನಮಗೆ ಒಳ್ಳೆಯದಾಗಿಯೂ ರಮ್ಯವಾದದ್ದಾಗಿಯೂ ಇರುವುದು. ಆದರೆ ಅದಕ್ಕಿಂತ ಹೆಚ್ಚು ಮುಖ್ಯವಾದದ್ದು ಅದು ದೇವರಿಗೆ ಒಳ್ಳೆಯದೂ ರಮ್ಯವಾದದ್ದೂ ಆಗಿರುವಂತದ್ದು. ಜಗತ್ತಿನ ಅಂಧಕಾರದ ರಾತ್ರಿಯಲ್ಲಿ ನೀತಿಭ್ರಷ್ಟ ಜನರ ಕೈಗೆ ಯೇಸುವು ಹಿಡಿದು ಕೊಡಲ್ಪಡುವ ಮೊದಲು, ಆತನು ಭವಿಷ್ಯದಲ್ಲಿ ತನ್ನಲ್ಲಿ ನಂಬಿಕೆಯಿಡುವವರ ಐಕ್ಯತೆಗಾಗಿ ಪ್ರಾರ್ಥಿಸಿದನು. ಆತನು ತನ್ನ ತಂದೆಗೆ ಹೀಗೆ ಪ್ರಾರ್ಥಿಸಿದನು:

“ಇವರಿಗೋಸ್ಕರ ಮಾತ್ರವಲ್ಲದೆ ಇವರ ವಾಕ್ಯದಿಂದ ನನ್ನನ್ನು ನಂಬುವವರಿಗೋಸ್ಕರ ಸಹ ಕೇಳಿಕೊಳ್ಳುತ್ತೇನೆ, ನೀನು ನನ್ನನ್ನು ಕಳುಹಿಸಿ ಕೊಟ್ಟಿದ್ದೀ ಎಂದು ಲೋಕವು ನಂಬುವದಕ್ಕಾಗಿ ಅವರೆಲ್ಲರೂ ಒಂದಾಗಿರ ಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ” (ಯೋಹಾನ 17:20, 21).

ನಾಳೆ ನಿಮಗೆ ಮರಣದಂಡನೆ ವಿಧಿಸಲು ನೇಮಕವಾದಾಗ, ಇಂದು ರಾತ್ರಿ ನೀವು ಮೊಣಕಾಲೂರಿ ಪ್ರಾರ್ಥಿಸುವಾಗ, ಯಾವುದಕ್ಕಾಗಿ ನೀವು ಪ್ರಾರ್ಥಿಸುವಿರಿ? ಅಲ್ಪವಾದ, ಮಹತ್ವವಿಲ್ಲದ ಯೋಜನೆಗಳಿಗಾಗಿ ಪ್ರಾರ್ಥಿಸುವಿರೋ? ಈ ಲೋಕದಲ್ಲಿ ನಿಮಗೆ ಅತೀ ಮಹತ್ವವುಳ್ಳ, ಅತೀ ಪ್ರೀತಿಯುಳ್ಳ ನಿರೀಕ್ಷೆಗಳಿಗಾಗಿ ನೀವು ಪ್ರಾರ್ಥಿಸುವುದಿಲ್ಲವೋ? ಕ್ರಿಸ್ತನು ತಾನು ಶಿಲುಬೆಗೆ ಹಾಕಲ್ಪಡುವದರ ಹಿಂದಿನ ರಾತ್ರಿ ಐಕ್ಯತೆಗಾಗಿ ಮಾಡಿದ ಆತನ ಪ್ರಾರ್ಥನೆಯನ್ನು ನಾವು ಓದಿದರೆ ಕ್ರಿಸ್ತನು ಐಕ್ಯತೆಗೆ ಹೇಗೆ  ಬೆಲೆಕೊಟ್ಟನೆಂಬುದನ್ನು ನಾವು ನೋಡುವದಿಲ್ಲವೋ? ವಿಶ್ವಾಸಿಗಳ ಐಕ್ಯತೆಯು ಯೇಸುವಿನ ಹೃದಯದಲ್ಲಿ ಅತೀ ಪ್ರೀತಿಯುಳ್ಳ ಮತ್ತು ಬಹಳ ಮಹತ್ವದ ಬಯಕೆಯಾಗಿತ್ತು. ಇಲ್ಲದಿದ್ದರೆ ಆತನು ತನ್ನ ಮರಣದ ಹಿಂದಿನ ರಾತ್ರಿ ಅದಕ್ಕಾಗಿ ಆತನು ಪ್ರಾರ್ಥಿಸುತ್ತಿರಲಿಲ್ಲ.

ಭಯಂಕರವಾಗಿ ವಿಭಾಗಿಸಲ್ಪಟ್ಟ ಕೊರಿಂಥ ಸಭೆಗೆ ಅನೇಕ ಸಮಸ್ಯೆಗಳಿಂದಲೂ ಬಲಹೀನತೆಗಳಿಂದಲೂ ಪೀಡಿತವಾದ ಸಭೆಗೆ ಪೌಲನು ಬರೆದಾಗ ಮೊದಲು ಆತನು ಐಕ್ಯತೆಗಾಗಿ ಬಲವಾದ ಕರೆಯನ್ನು ಕೊಟ್ಟನು: “ಸಹೋದರರರೇ, ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು; ನಿಮ್ಮಲ್ಲಿ ಭೇದಗಳಿರಬಾರದು, ನೀವು ಒಂದೇ ಮನಸ್ಸೂ ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು ಎಂಬುದಾಗಿ ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ” (1 ಕೊರಿಂಥ 1:10). ಪೌಲನು ಕೊರಿಂಥದವರಿಗೆ ಬರೆದ ಸಮಯದಲ್ಲಿ, ಕ್ರಿ. ಶ. 54ರಿಂದ 56ರವರೆಗೆ ಸಭಾಪಂಗಡಗಳು (denominations) ಅಸ್ತಿತ್ವದಲ್ಲಿರಲಿಲ್ಲ.  ಅಸ್ತಿತ್ವದಲ್ಲಿದ್ದ ಒಂದೇ ಸಭೆಯು ಕರ್ತನ ಸಭೆಯಾಗಿತ್ತು ಮತ್ತು ಪೌಲನು ಪರಿಶುದ್ಧಾತ್ಮನ ಪ್ರೇರಣೆಯಿಂದ ಕೊರಿಂಥದಲ್ಲಿಯ ದೇವರ ಸಭೆಗೆ ಐಕ್ಯತೆಯಲ್ಲಿ ಒಂದಾಗಿರಬೇಕೆಂದು ಹೇಳಿದರು. ಈ ಐಕ್ಯತೆಗಾಗಿ ಅವನು ಬೇಡಿಕೊಂಡದ್ದಲ್ಲದೇ, ಯೇಸು ಕ್ರಿಸ್ತನ ಹೆಸರಿನಲ್ಲಿಯೇ ಅದಕ್ಕಾಗಿ ಬೇಡಿಕೊಂಡನು.

ಸಭೆಯ ಐಕ್ಯತೆಯನ್ನು ಇನ್ನೂ ಹೆಚ್ಚು ವಿವರವಾಗಿ ನೋಡೋಣ? ಈಗಾಗಲೇ ಉಲ್ಲೇಖಿಸಿದ ಎರಡು ವಾಕ್ಯಭಾಗಗಳನ್ನು ಕ್ರಿಸ್ತನ ಸಭೆಯು ಸುಂದರವಾದ ಐಕ್ಯತೆಯನ್ನು ಹೊಂದಿರಬೇಕೆಂದು ಸ್ಪಷ್ಟಪಡಿಸುತ್ತವೆ. ಆದರೆ ಅದಕ್ಕೆ ಯಾವ ರೀತಿಯ ಐಕ್ಯತೆಯು ಇರಬೇಕು? ಆ ಐಕ್ಯತೆಯ ಸಹಜ

ಗುಣ ಯಾವುದು? ಕ್ರಿಸ್ತನು ಪ್ರಾರ್ಥಿಸಿದ ಐಕ್ಯತೆಯನ್ನು ಅರ್ಥ ಮಾಡಿಕೊಳ್ಳು ವುದು ಸಭೆಯ ಬಗ್ಗೆ ಹೆಚ್ಚಾದದ್ದನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ.

## ಒಂದು ದೇಹದ ಭಾಗವಾಗಿರುವದರಿಂದ ಐಕ್ಯತೆ

ಮೊದಲನೆಯದು, ಒಂದು ಜನಾಂಗವಾಗಿ ದೇವರಿಂದ ಕೊಡಲ್ಪಟ್ಟ ಕ್ರಿಸ್ತನ ಸಭೆಯ ಐಕ್ಯತೆಯನ್ನು ಅರ್ಥಮಾಡಿಕೊಳ್ಳಲಿಕ್ಕೆ ಪ್ರಯತ್ನಿಸೋಣ. ಕ್ರಿಸ್ತನಲ್ಲಿ ಇರುವದಕ್ಕೆ ನೈಸರ್ಗಿಕವಾದ ಹಾಗೂ ಮೂಲವಾದ ಐಕ್ಯತೆಯ ಬಗ್ಗೆ ಹೊಸ ಒಡಂಬಡಿಕೆಯು ಮಾತಾಡುತ್ತದೆ. ಈ ಐಕ್ಯತೆಯು ಒಬ್ಬನು ಕ್ರಿಸ್ತನ ಸಭೆಯಲ್ಲಿ ಪ್ರವೇಶಿಸುವಾಗ ದೇವರ ಕೃಪೆಯಿಂದ ಸಂಭವಿಸುತ್ತದೆ. ಕ್ರಿಸ್ತನ ದೇಹದ ಯಥಾರ್ಥವಾದ ಸದಸ್ಯನಾಗಿರುವವನು ಈ ಐಕ್ಯತೆಯನ್ನು ಸ್ವೀಕರಿಸಿದವನು.

ಹೊಸ ಒಡಂಬಡಿಕೆಯ ಜಗತ್ತು ಎರಡು ಮುಖ್ಯ ಸಮಾಜಗಳಾಗಿ ವಿಂಗಡಿಸಲ್ಪಟ್ಟಿತ್ತು: ಯೆಹೂದ್ಯರು ಮತ್ತು ಅನ್ಯರು. ಈ ಎರಡು ಗುಂಪುಗಳ ಮಧ್ಯದಲ್ಲಿಯ ವಿಭಜನೆಯು ಇಂದು ಎರಡು ಜನಾಂಗಗಳ ಮಧ್ಯದಲ್ಲಿ ಅಸ್ತಿತ್ವದಲ್ಲಿರುವ ವಿಭಜನೆಯಷ್ಟು ಅಗಲವಾಗಿತ್ತು. ಆದಾಗ್ಯೂ ಪೌಲನು ಯೆಹೂದ್ಯರೂ ಅನ್ಯರೂ ಕ್ರಿಸ್ತನಲ್ಲಿ ಒಂದೇ ಆಗಿದ್ದಾರೆ ಎಂದು ಒಪ್ಪಿಕೊಳ್ಳುತ್ತಾನೆ:

> ನಿಮ್ಮನ್ನೂ ನಮ್ಮನ್ನೂ ಒಂದುಮಾಡಿದವನಾದ ಆತನೇ ಸಮಾಧಾನ ಕರ್ತೃನಾಗಿದ್ದಾನೆ ... (ಎಫೆಸ 2:14).

> ... ಆತನು ಸಮಾಧಾನ ಮಾಡುವವನಾಗಿ ಉಭಯರನ್ನೂ ತನ್ನಲ್ಲಿ ಒಬ್ಬ ನೂತನ ಪುರುಷನನ್ನಾಗಿ ನಿರ್ಮಿಸಿದ್ದಾನೆ, ಆ ಶಿಲುಬೆಯ ಮೂಲಕ ಉಭಯರನ್ನೂ ಒಂದೇ ದೇಹದಂತಾಗಿ ಮಾಡಿ ದೇವರೊಂದಿಗೆ ಸಮಾಧಾನ ಪಡಿಸಿದ್ದಾನೆ, ... (ಎಫೆಸ 2:15, 16).

> ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ (ಗಲಾತ್ಯ 3:28).

ಕ್ರಿಸ್ತನು ತನ್ನ ಶಿಲುಬೆಯ ಮರಣದ ಮುಖಾಂತರವಾಗಿ ಯಾವುದೇ ಹಿನ್ನೆಲೆ ಮತ್ತು ಜನಾಂಗ ಎಂಬ ಭೇದಭಾವ ಮಾಡದೇ ಕ್ರಿಸ್ತನೊಳಗೆ ಬರುವ ಎಲ್ಲರನ್ನೂ ಒಂದು ಜನಾಂಗವಾಗಿ ಮಾಡಿದ್ದಾನೆ. ಯೆಹೂದ್ಯರೂ ಅನ್ಯರೂ ಎರಡು

ಭಿನ್ನವಾದ ಜನಾಂಗವಾಗಿದ್ದವರನ್ನು ಹೊಸ ಜನಾಂಗವಾಗಿ ಪುನಃ ಸೃಷ್ಟಿಸಿ ಅವರನ್ನು ಕ್ರೈಸ್ತರೆಂದು ಕರೆದಿದ್ದಾನೆ. ಕ್ರಿಸ್ತನು ಯೆಹೂದ್ಯರನ್ನು ಅನ್ಯರನ್ನಾಗಿಯೂ ಇಲ್ಲವೇ ಅನ್ಯರನ್ನು ಯೆಹೂದ್ಯರನ್ನಾಗಿಯೂ ಮಾಡಲಿಲ್ಲ. ಯೆಹೂದ್ಯರು ಹಿಡಿದು ಕೊಂಡ ಭಾಗದ ಸ್ಥಾನಕ್ಕೆ ಆತನು ಅನ್ಯರನ್ನು ಮೇಲಕ್ಕೇರಿಸಲಿಲ್ಲ; ಇಲ್ಲವೇ ಅನ್ಯ ಜನರ ಸ್ಥಾನಕ್ಕೆ ಆತನು ಯೆಹೂದ್ಯರನ್ನು ತರಲಿಲ್ಲ. ಆತನು ಯೆಹೂದ್ಯರನ್ನೂ ಅನ್ಯರನ್ನೂ ಕ್ರಿಸ್ತನಲ್ಲಿ ಪರಲೋಕದ ಸ್ಥಾನಕ್ಕೇರಿಸಿದನು. ಅವರಿಬ್ಬರಿಂದಲೂ ಹೊಂದಿಕೊಂಡಿದ್ದ ಇಲ್ಲವೇ ಎಂದಾದರೂ ವಾಗ್ದಾನ ಮಾಡಲ್ಪಟ್ಟ ಸ್ಥಾನಕ್ಕಿಂತ ಇಲ್ಲವೇ ಭಾಗ್ಯಕ್ಕಿಂತ ಅದು ಎಷ್ಟೋ ದೊಡ್ಡದಾಗಿತ್ತು. ಯೆಹೂದ್ಯನು ತಾನು ಯೆಹೂದ್ಯನಾಗಿರುವದನ್ನು ಮರೆಯಬೇಕಾಗಿತ್ತು ಮತ್ತು  ಅನ್ಯನು ತಾನು ಅನ್ಯನಾಗಿರುವದನ್ನು ಮರೆಯಬೇಕಾಗಿತ್ತು.

ಇದು ಇಂದು ಸಭೆಯಲ್ಲಿ ಸತ್ಯವಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ತಾನು ಕ್ರಿಸ್ತನಲ್ಲಿ ಏನಾಗಿರುವೆನೆಂಬುದನ್ನು ಮಾತ್ರವೇ ಯೋಚಿಸತಕ್ಕದ್ದು. ಕ್ರಿಸ್ತನು ಎಲ್ಲಾ  ಕ್ರೈಸ್ತರಿಗೆ ರಕ್ಷಕನೂ ಕರ್ತನೂ ಆಗಿದ್ದಾನೆ. ಈ ದೈವಿಕ ಏಕತೆಯಲ್ಲಿ ಎಲ್ಲಾ ರಾಷ್ಟ್ರೀಯ, ಜನಾಂಗಿಕ, ಸಾಮಾಜಿಕ ಹಾಗೂ ಕುಟುಂಬದ ಭಿನ್ನತೆಗಳು ತೆಗೆದು ಹಾಕಲ್ಪಟ್ಟಿವೆ.

ಕ್ರಿಸ್ತನ ಮುಖಾಂತರವಾಗಿ ಜನರು ದೇವರೊಂದಿಗೆ ಸಂಧಾನ ಮಾಡಲ್ಪಟ್ಟಿದ್ದಾರೆ; ದೇವರೊಂದಿಗೆ ಒಂದಾಗಿ ತರಲ್ಪಟ್ಟಿದ್ದಾರೆ (ಕೊಲೊಸ್ಸೆ 1:20). ಆಗ, ಆ ಸಂಧಾನದ ಮುಖಾಂತರವಾಗಿ  ಕ್ರೈಸ್ತರು ಒಬ್ಬರಿಗೊಬ್ಬರು ಒಂದಾಗಿ ತರಲ್ಪಟ್ಟಿದ್ದಾರೆ. ಹಾಗೂ "ಆತನಲ್ಲಿ ಪರಿಶುದ್ಧಾತ್ಮನ ಮೂಲಕವಾಗಿ ದೇವರಿಗೆ ನಿವಾಸಸ್ಥಾನವಾಗುವದಕ್ಕಾಗಿ ... ಕಟ್ಟಲ್ಪಡುತ್ತಾ ಇದ್ದೀರಿ" (ಎಫೆಸ 2:22). ಇಬ್ಬರು ಒಬ್ಬರಿಗೊಬ್ಬರು ಐಕ್ಯವಾಗುವ ಮೊದಲು ಅವರು ದೇವರೊಂದಿಗೆ ಐಕ್ಯತೆಯಲ್ಲಿ ಇರಬೇಕು.

ಒಬ್ಬರೊಂದಿಗೊಬ್ಬರು ಸತತವಾಗಿ ಯುದ್ಧ ಮಾಡುತ್ತಿದ್ದ ನೊರ್ಮನ್ ಹಾಗೂ ಸ್ಯಾಕ್ಷನ್ಸ್ ಜನಾಂಗಗಳ ಉದಾಹರಣೆಯು ಚರಿತ್ರೆಯಲ್ಲಿರುತ್ತದೆ. ವಿರೋಧ ಹಾಗೂ ತಿರಸ್ಕಾರ ಮುಗಿಯದಂಥ ಗುಣಲಕ್ಷಣವುಳ್ಳವರಾಗಿದ್ದರು. ಶತಮಾನಗಳಲ್ಲಿ ಜನಾಂಗ ಗಳು ಮಿಶ್ರಣಗೊಂಡು, ಮದುವೆಗಳಾದವು. ಕ್ರಮೇಣ ವಾಗಿ ಈ ಎರಡು ಜನಾಂಗಗಳು ಒಂದು ಜನಾಂಗವಾಗಿ ಕೂಡಿಸಲ್ಪಟ್ಟವು. ಹೀಗೆ ಭಿನ್ನವಾದ ಜನಾಂಗಗಳು, ಅದ್ವಿತೀಯವಾದ ಸಮಾಜಗಳು ಅಸ್ತಿತ್ವವನ್ನು ಕಳೆದುಕೊಂಡವು. ಅವರ ಮಧ್ಯದಲ್ಲಿಯ ವಿಭಜನೆ ಅಸ್ತಿತ್ವದಲ್ಲಿ ಉಳಿದದ್ದರಿಂದ ಯುದ್ಧಗಳು ಮುಗಿದು ಹೋದವು. ಎರಡು ಸಮಾಜಗಳು ಪರಸ್ಪರ ಹೊಕ್ಕು ಬಳಕೆಯು ಪರಸ್ಪರರನ್ನು ಪ್ರೀತಿಸುವ ಮತ್ತು ಗೌರವಿಸುವ ಜನರ ಹೊಸ ಸಮಾಜವಾಗುವಂತೆ ಮಾಡಿತು.[2]

ಅದೇ ರೀತಿಯಲ್ಲಿ, ಎಲ್ಲಾ ಮಾನವ ವಿಭಜನೆಗಳೂ ಆತಂಕಗಳೂ ಕ್ರಿಸ್ತನಲ್ಲಿ ಮುರಿದು ಬಿದ್ದವು; ದೇವರ ಆಶ್ಚರ್ಯಕರವಾದ ಕೃಪೆಯಿಂದ ಒಂದು ನೂತನ ಜನಾಂಗವು, ಸಭೆಯು ಸೃಷ್ಟಿಸಲ್ಪಟ್ಟಿತು, ಆತನ ಸಭೆಯಲ್ಲಿ ಜನರು ಯೆಹೂದ್ಯ ಇಲ್ಲವೇ ಗ್ರೀಕ, ಗುಲಾಮ ಇಲ್ಲವೇ ಸ್ವತಂತ್ರ, ಐಶ್ವರ್ಯವಂತ ಇಲ್ಲವೇ ಬಡವ, ಗಂಡು ಇಲ್ಲವೇ ಹೆಣ್ಣು, ಬಿಳಿಯ ಇಲ್ಲವೇ ಕರಿಯ ಎಂದು ನೋಡುವದಿಲ್ಲ. ಕ್ರೈಸ್ತರು ತಾವೆಲ್ಲರೂ "ಕ್ರಿಸ್ತ ಯೇಸುವಿನಲ್ಲಿ ಒಂದಾಗಿರುವೆವು" ಎಂಬುದನ್ನು ಮಾತ್ರ ನೋಡುವರು (ಗಲಾತ್ಯ 3:28ಬಿ).

ಹಾಗಾದರೆ ಕ್ರಿಸ್ತನಲ್ಲಿಯ ಐಕ್ಯತೆಯನ್ನು ಅರ್ಥಮಾಡಿಕೊಳ್ಳಲಿಕ್ಕೆ ಕ್ರೈಸ್ತರು ಆತನ ಸಭೆಯಲ್ಲಿ ಪ್ರವೇಶಿಸುವಾಗ, ಕೊಡಲ್ಪಟ್ಟ ಐಕ್ಯತೆಯ ಬಗ್ಗೆ ನಾವು ಮೊದಲು ತಿಳಿದು ಕೊಳ್ಳತಕ್ಕದ್ದು, ಹೊಸ ಕ್ರೈಸ್ತರಿಗೆ ಅವರು ಕ್ರಿಸ್ತನ ಸಭೆಯನ್ನು ಪ್ರವೇಶಿಸಿದಾಗ ಈಗ ಅವರು ಆತನ ಸಭೆಯ ಇತರ ಎಲ್ಲಾ ಸದಸ್ಯರೊಂದಿಗೆ ಒಂದಾಗಿದ್ದಾರೆ ಎಂಬುದನ್ನು ಹೇಳುವುದು ಯೋಗ್ಯವಾದದ್ದೂ, ಅಗತ್ಯವಾದದ್ದೂ ಆಗಿದೆ. ಸಭೆಯು ಈ ಸತ್ಯದೊಂದಿಗೆ ಯೋಚಿಸತಕ್ಕದ್ದೂ ಹಾಗೂ ಒಪ್ಪಿಗೆಯೊಂದಿಗೆ ಕಾರ್ಯಮಾಡತಕ್ಕದ್ದು. ಹುದ್ದೆಗಳಾಗಲೀ, ಆತಂಕಗಳಾಗಲೀ, ಗುಂಪುಗಳಾಗಲೀ, ಗೋತ್ರಗಳಾಗಲೀ ಕ್ರಿಸ್ತನ ಸಭೆಯಲ್ಲಿ ಮಹತ್ವವುಳ್ಳವುಗಳಾಗಿರಬಾರದು. ಎಲ್ಲಾ ಸದಸ್ಯರು ಕ್ರಿಸ್ತನೊಂದಿಗೂ ಒಬ್ಬರೊಬ್ಬರೊಂದಿಗೂ ಒಂದಾಗಬೇಕು.

## ಬೋಧನೆಯಲ್ಲಿ ಐಕ್ಯತೆ

ಎರಡನೆಯದು, ಬೋಧನೆಯಲ್ಲಿ ಐಕ್ಯತೆಯು ಕ್ರಿಸ್ತನಲ್ಲಿ ಕಂಡು ಬಂದಿದೆ. ಜನರು ಕ್ರಿಸ್ತನ ಸಭೆಯೊಳಗೆ ಪ್ರವೇಶಿಸುವಾಗ ಆತ್ಮನಿಂದ ಐಕ್ಯತೆಯು ಕೊಡಲ್ಪಡುತ್ತದೆ. ಆದರೆ ಈ ಐಕ್ಯತೆಯು ಪರಿಶುದ್ಧ ಬರಹಗಳ ಬೋಧನೆಗಳಿಗೆ ಪ್ರತಿಯೊಬ್ಬ ಸದಸ್ಯನಿಂದ ಕಾಪಾಡಲ್ಪಡುತ್ತದೆ.

ಕ್ರೈಸ್ತರು ಬೋಧನೆಯ ಹಾಗೂ ನಂಬಿಕೆಯ ಐಕ್ಯತೆಯಿಂದ ಒಂದಾಗಿ ಬಂಧಿಸಲ್ಪಟ್ಟಿದ್ದಾರೆ. ಕ್ರಿಸ್ತನ ಸಭೆಯು ದೇವರ ಬಗ್ಗೆ ಸಿದ್ಧಪಡಿಸಲ್ಪಡದ ನಂಬಿಕೆಗಳಿಂದಲೂ, ಜೀವನದ ಬಗೆಗಿನ ತರ್ಕಗಳಿಂದಲೂ ನಡಿಸಲ್ಪಡುವ ಜನರ ಗುಂಪಾಗಿರುವದಿಲ್ಲ. ಆತನ ಸಭೆಯ ಸದಸ್ಯರುಗಳು ಸತ್ಯದ ದೇವರ ದೈವಿಕ ಪ್ರಕಟಣೆಯಿಂದ ಒಂದಾಗಿಸಲ್ಪಟ್ಟಿದ್ದಾರೆ.

ಕ್ರಿಸ್ತನ ಸಭೆಯ ಐಕ್ಯತೆಯನ್ನು ಪೌಲನು ಚರ್ಚಿಸಿದಂತೆ, ಆತ್ಮನ ಐಕ್ಯತೆಯನ್ನು ಸಮಾಧಾನದ ಬಂಧನದಿಂದ ಕ್ರೈಸ್ತರು ಐಕ್ಯತೆಯನ್ನು ಕಾಯ್ದುಕೊಳ್ಳಬೇಕೆಂದು ಒತ್ತಾಯ ಮಾಡಿದನು. ಕ್ರಿಸ್ತನ ದೇಹದಲ್ಲಿ ಐಕ್ಯತೆಯನ್ನು ಕಾಯ್ದುಕೊಳ್ಳುವದಕ್ಕಾಗಿ ಮೂಲ ಬೋಧನೆಯನ್ನು ರೂಪಿಸಿದ

ಏಳು “ಒಂದು”ಗಳನ್ನು (“one’s”) ಅವನು ಹೆಸರಿಸಿದ್ದಾನೆ. “ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು, ಒಬ್ಬನೇ ಆತ್ಮನನ್ನು ಹೊಂದಿದವರು, ಒಂದೇ ಪದವಿಯನ್ನು ನಿರೀಕ್ಷಿಸುವದಕ್ಕೆ ಕರೆಯಲ್ಪಟ್ಟವರು; ನಿಮ್ಮೆಲ್ಲರಿಗೂ ಕರ್ತನು ಒಬ್ಬನೇ, ಭರವಸವು ಒಂದೇ, ಬಾಪ್ತಿಸ್ಮ ಒಂದೇ, ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ; ಆತನು ಎಲ್ಲರ ಮೇಲಿರುವವನೂ ಎಲ್ಲರ ಮುಖಾಂತರ ಕಾರ್ಯ ನಡಿಸುವವನೂ ಎಲ್ಲರಲ್ಲಿ ವಾಸಿಸುವವನೂ ಆಗಿದ್ದಾನೆ” (ಎಫೆಸ 4:4-6) ಎಂದು ಅವನು ಹೇಳಿದ್ದಾನೆ. ಪೌಲನು ದೇಹದ ಬಗ್ಗೆ ಬರೆದದ್ದು ಕ್ರಿಸ್ತನ ಆತ್ಮಿಕ ದೇಹದ ಸಭೆಯಾಗಿದೆ (ಎಫೆಸ 1:22, 23). ಆತ್ಮನು ದೈವತ್ವದ ತೃತೀಯ ಸದಸ್ಯನಾಗಿದ್ದು, ಪರಿಶುದ್ಧ ಬರಹಗಳ ಪ್ರಕಟಣೆಯನ್ನು ನಮಗೆ ಕೊಟ್ಟನು. ಒಂದು ನಿರೀಕ್ಷೆಯು ಸುವಾರ್ತೆಯ ಮುಖಾಂತರವಾಗಿ ಪ್ರತಿಯೊಬ್ಬ ಕ್ರೈಸ್ತನ ಹೃದಯದಲ್ಲಿ ಇಡಲ್ಪಟ್ಟ ನಿತ್ಯವಾದ ನಿರೀಕ್ಷೆಯಾಗಿದೆ (ಕೊಲೊಸ್ಸೆ 1:23). ಒಬ್ಬನೇ ಕರ್ತನು ಕ್ರಿಸ್ತನು, ಜೀವಿಸುವ ದೇವರ ಕುಮಾರನು, ನಮ್ಮ ಪಾಪಗಳಿಗಾಗಿ ಮರಣ ಹೊಂದಿದನು ಮತ್ತು ನೀತಿ ನಿರ್ಣಯಗೋಸ್ಕರ ಎಬ್ಬಿಸಲ್ಪಟ್ಟವನು. ಒಂದೇ ವಿಶ್ವಾಸವು ಕ್ರಿಸ್ತನಲ್ಲಿ ಹಾಗೂ ಪರಿಶುದ್ಧ ಬರಹಗಳ ಸಾಕ್ಷಿಯಿಂದ ಬರುವಂಥ ಆತನ ವಾಕ್ಯದಲ್ಲಿ ನಂಬಿಕೆಯಾಗಿದೆ (ರೋಮಾಪುರ 10:17). ಒಂದೇ ಬಾಪ್ತಿಸ್ಮವು, ಕ್ರಿಸ್ತನು ಮಹಾ ನಿಯೋಗದಲ್ಲಿ ಆಜ್ಞಾಪಿಸಿದ ಹಾಗೂ ಕ್ರೈಸ್ತ ಯುಗದ ಅಂತ್ಯದವರೆಗೆ ಪರಿಣಾಮಕಾರಿಯಾಗಿರುವ ಬಾಪ್ತಿಸ್ಮವು (ಮತ್ತಾಯ 28:19, 20). ಒಬ್ಬನೇ ದೇವರು, ಸೃಷ್ಟಿಕರ್ತನೂ, ಭೂಲೋಕಕ್ಕೆ ಒದಗಿಸುವವನೂ, ಒಬ್ಬನೇ ಸತ್ಯ ಮತ್ತು ಜೀವಿಸುವ ದೇವರು, ನಿತ್ಯನಾದ ದೇವರು ಆಗಿದ್ದಾನೆ. ಈ ಏಳು “ಒಂದೇ” ಎಂಬವುಗಳನ್ನು ಕುರಿತು ಆರ್. ಸಿ. ಬೆಲ್ಲ್ ಹೀಗೆ ಹೇಳಿದ್ದಾನೆ: “ಈ ಬದಲಾಯಿಸಲಾಗದ ಅಂತಿಮ ಸಂಗತಿಗಳು, ಸ್ವೀಕಾರವನ್ನು ಇಲ್ಲವೇ ತಿರಸ್ಕಾರವನ್ನು ಕೇಳುತ್ತವೆ. ಬೇರೆ ಯಾವುದೇ ಪ್ರತಿಕ್ರಿಯೆಯ ಸಾಧ್ಯತೆಯಿಲ್ಲ. ಅವುಗಳಲ್ಲಿ ಒಂದನ್ನಾದರೂ ತಿರಸ್ಕರಿಸುವವನು ತನ್ನನ್ನು ಕ್ರೈಸ್ತನೆಂದು ಯೋಚಿಸಲಾರನು.”[3]

ಒಕ್ಕೂಟ ಒಂದು ಸಂಗತಿ, ಆದರೆ ಐಕ್ಯತೆಯು (ಒಗ್ಗಟ್ಟು) ಇನ್ನೊಂದಾಗಿದೆ. ಐಕ್ಯಮತವು ಒತ್ತಾಯದಿಂದ ಸಾಧಿಸಲ್ಪಡುವುದು, ಆದರೆ ಐಕ್ಯತೆಯು ಕೇವಲ ಶ್ರದ್ಧೆಯಲ್ಲಿ ಕಂಡುಕೊಳ್ಳಬಹುದು. ಒಕ್ಕೂಟ ಹಗ್ಗದಿಂದ ಇಬ್ಬರನ್ನು ಒಂದಾಗಿ ಕಟ್ಟುವದರಿಂದ ಸೃಷ್ಟಿಸಬಹುದು. ಆದರೆ ಐಕ್ಯತೆಯು ನಂಬಿಕೆ ಮತ್ತು ಪ್ರೀತಿಯಿಂದ ಹೃದಯಗಳು ಒಂದಾಗಿ ಬಂಧಿಸಲ್ಪಡುವಾಗ ಮಾತ್ರ ಬರಬಹುದು. ಮನಸ್ಸುಗಳೂ ಚಿತ್ತಗಳೂ ವಿಭಾಗವಾಗಿದ್ದ ಜನರು ಒಂದು ರೀತಿಯ ಐಕ್ಯತೆಯನ್ನು ಅನುಭವಿಸಬಹುದು, ಆದರೆ ಒಂದೆ ಸತ್ಯವನ್ನು ಮಾತಾಡುವದರ ಮುಖಾಂತರ ಹಾಗೂ ಮನಸ್ಸಿನಲ್ಲಿಯೂ ತೀರ್ಪಿನಲ್ಲಿಯೂ ಒಂದೇ ಯಾಗಿರುವದರಿಂದ ಜನರು

ಒಂದೇ ಮನಸ್ಸುಳ್ಳವರಾಗಿ ವಾಸಿಸಬಹುದು.

1 ಕೊರಿಂಥ 1:10ರಲ್ಲಿ ಪೌಲನು ಐಕ್ಯತೆಗಾಗಿ ಮಾತ್ರ ಬೇಡಿಕೊಳ್ಳಲಿಲ್ಲ. ಆದರೆ ಅವನು ಬೇಡಿಕೊಳ್ಳುತ್ತಿದ್ದ ಐಕ್ಯತೆಯ ರೀತಿಯನ್ನು - ವಿಭಾಗಗಳಿಲ್ಲದ, ಮನಸ್ಸು ಹಾಗೂ ತೀರ್ಪಿನಲ್ಲಿ ಸಂಪೂರ್ಣವಾಗಿರುವ ಒಪ್ಪಿಗೆಯ ಐಕ್ಯತೆಯನ್ನು ನಿಶ್ಚಯವಾಗಿ ಹೇಳಿದನು. ಈ ರೀತಿಯ ಐಕ್ಯತೆಯು ಕ್ರಿಸ್ತನ ಚಿತ್ತಕ್ಕೆ ಸಮರ್ಪಿಸಿ ಕೊಳ್ಳುವದರಿಂದ ತರಲ್ಪಡುತ್ತದೆ. ಅಪೊಸ್ತಲರ ಕೃತ್ಯಗಳು 2ರಲ್ಲಿ ಸಭೆಯು ಸ್ಥಾಪಿಸಲ್ಪಟ್ಟ ದಿನದಂದು ಪ್ರತಿಯೊಬ್ಬ ವ್ಯಕ್ತಿಯು ಪ್ರೇರಿತ ಜನರಿಂದ ಕೊಡಲ್ಪಟ್ಟ ಆತ್ಮನ ಸಂದೇಶಕ್ಕೆ ಸಮರ್ಪಿಸಿಕೊಂಡರು. ಈ ಒಪ್ಪಿಸಿಕೊಳ್ಳುವಿಕೆಯು ದೇವರ ಬೋಧನೆಯಲ್ಲಿ ಹಂಚಿಕೊಂಡ ವಿಶ್ವಾಸದ ಮೇಲೆ ಅವಲಂಭಿಸಿದ ಐಕ್ಯತೆಯಲ್ಲಿ ಪರಿಣಾಮಗೊಂಡಿತು. “ಇವರು ಅಪೊಸ್ತಲರ ಬೋಧನೆಯನ್ನು ಕೇಳು ವದರಲ್ಲಿಯೂ, ಸಹೋದರರ ಅನ್ಯೋನ್ಯತೆಯಲ್ಲಿಯೂ, ... ನಿರತರಾಗಿದ್ದರು ... ನಂಬಿದ್ದವರೆಲ್ಲರು ಒಗ್ಗಟ್ಟಾಗಿದ್ದು ತಮ್ಮದೆಲ್ಲವನ್ನೂ ಹುದುವಾಗಿ ಅನುಭೋಗಿಸುತ್ತ ...” (ಅಪೊಸ್ತಲರ ಕೃತ್ಯಗಳು 2:42-44). ಫಿಲಿಪ್ಪಿಯಲ್ಲಿಯ ಸಹೋದರರಿಗೆ ಪೌಲನು “... ನಾವು ಯಾವ ಸೂತ್ರವನ್ನನುಸರಿಸಿ ಇಲ್ಲಿಯವರೆಗೆ ಬಂದೆವೋ ಅದನ್ನೇ ಅನುಸರಿಸಿ ನಡೆಯೋಣ” (ಫಿಲಿಪ್ಪಿ 3:16) ಎಂದು ಬರೆದನು.

## ಅನುದಿನದ ಜೀವನದಲ್ಲಿ ಐಕ್ಯತೆ

ಮೂರನೆಯದು, ಕ್ರಿಸ್ತನ ಸಭೆಯ ಅನುದಿನದ ಜೀವಿಸುವಿಕೆಯಲ್ಲಿ ಐಕ್ಯತೆಯು ಕಂಡುಬರಬೇಕು. ಜನರು ಕ್ರಿಸ್ತನಲ್ಲಿ ಪ್ರವೇಶಿಸುವಾಗ ಪರಿಶುದ್ಧಾತ್ಮ ನಿಂದ ಕೊಡಲ್ಪಡುವ ಐಕ್ಯತೆಯು ಪರಿಶುದ್ಧ ಬಹರಗಳ ಸರಳ ಬೋಧನೆಗೆ ಪ್ರತಿಯೊಬ್ಬ ಸದಸ್ಯರ ವಿಧೇಯತೆಯಿಂದ ಕಾಪಾಡಲ್ಪಡುವುದು ಅಷ್ಟೇ ಅಲ್ಲ, ಆದರೆ ಪ್ರತಿಯೊಬ್ಬ ಸದಸ್ಯನು ಕ್ರಿಸ್ತನಲ್ಲಿ ಒಂದೇ ಮನಸ್ಸಿನಿಂದ ಒಂದಾಗಿ ಜೀವಿ ಸುವದಕ್ಕೆ ಕ್ರಿಯಾಶೀಲ, ಸಾಮಾನ್ಯ ಜ್ಞಾನವನ್ನು ಅನುಸರಿಸುವುದೂ ಆಗಿದೆ.

ಫಿಲಿಪ್ಪಿಯ ಸಹೋದರರಿಗೆ ಪೌಲನು ಪ್ರೀತಿಯಲ್ಲಿಯೂ ಸಾಮರಸ್ಯದಲ್ಲಿಯೂ ಒಂದಾಗಿ ಜೀವಿಸಲು ಪ್ರೋತ್ಸಾಹಿಸಿದನು. “ಐಕ್ಯಮತ್ಯವುಳ್ಳವರಾಗಿದ್ದು ನನ್ನ ಸಂತೋಷವನ್ನು ಪರಿಪೂರ್ಣಮಾಡಿರಿ. ನಿಮ್ಮೆಲ್ಲರಲ್ಲಿ ಒಂದೇ ಪ್ರೀತಿಯಿರಲಿ; ಅನ್ಯೋನ್ಯ ಭಾವವುಳ್ಳವರೂ ಒಂದೇ ಗುರಿಯಿಟ್ಟು ಕೊಂಡವರೂ ಆಗಿರ್ರಿ” (ಫಿಲಿಪ್ಪಿ 2:2) ಎಂದು ಅವನು ಹೇಳಿದನು. “ಕರ್ತನಲ್ಲಿ ಒಂದೇ ಮನಸ್ಸು ಳ್ಳವರಾಗಿರ್ರಿಯೆಂದು ಯುವೊದ್ಯಳನ್ನೂ ಸಂತುಕೆಯನ್ನೂ ಪ್ರಬೋಧಿಸುತ್ತೇನೆ” (ಫಿಲಿಪ್ಪಿ 4:2) ಎಂದೂ ಹೇಳಿದನು. ಕ್ರಿಸ್ತನ ಸಭೆಯ ಪ್ರತಿಯೊಬ್ಬ ಸದಸ್ಯನೂ ಬೈಬಲಿನ ಬೋಧನೆಯಿಂದ ಜೀವಿಸ ಬೇಕೆಂಬುದನ್ನು ಈ ವಚನಗಳು

ಅವಶ್ಯವಾಗಿ ಕೇಳುತ್ತವೆ. ಐಕ್ಯತೆಯನ್ನು ಕಾಪಾಡಿಕೊಳ್ಳುವದಕ್ಕಾಗಿ ಕ್ರೈಸ್ತರು ಕೆಲವು ಸಲ ತಮ್ಮ ಅಭಿಪ್ರಾಯಗಳನ್ನೂ ಅಪೇಕ್ಷೆಗಳನ್ನೂ ತಮ್ಮಲ್ಲಿಯೇ ಇಟ್ಟುಕೊಳ್ಳಬೇಕಾಗುತ್ತದೆ.

ಒಬ್ಬ ಸಹೋದರನು ಅವನ ಸ್ವಂತ ಮನಸ್ಸಿಗೆ ವಿರುದ್ಧವಾಗಿ ಹೋಗುವ ಯಾವುದನ್ನಾದರೂ ಮಾಡಬೇಕೆಂದು ಸಭೆಯು ಎಂದೂ ಹೇಳುವದಿಲ್ಲ. ಪೌಲನು ಹೀಗೆ ಹೇಳಿದ್ದಾನೆ,

> ಆದಕಾರಣ ಇನ್ನು ಮೇಲೆ ಒಬ್ಬರ ವಿಷಯದಲ್ಲೊಬ್ಬರು ತೀರ್ಪು ಮಾಡದೆ ಇರೋಣ. ಅದಕ್ಕೆ ಬದಲಾಗಿ ಸಹೋದರನ ಎದುರಿಗೆ ಅಡ್ಡಿಯನ್ನಾಗಲಿ ಎಡತಡೆಯನ್ನಾಗಲಿ ಹಾಕಬಾರದೆಂದು ತೀರ್ಮಾನಿಸಿಕೊಳ್ಳಿರಿ (ರೋಮಾಪುರ 14:13).

> ದೃಢವಾದ ನಂಬಿಕೆಯುಳ್ಳ ನಾವು ನಮ್ಮ ಸುಖವನ್ನು ನೋಡಿಕೊಳ್ಳದೆ ದೃಢವಿಲ್ಲದವರ ಅನುಮಾನಗಳನ್ನು ಸಹಿಸಿಕೊಳ್ಳಬೇಕು. ನಮ್ಮಲ್ಲಿ ಪ್ರತಿಯೊಬ್ಬನು ತನ್ನ ನೆರೆಯವನ ಹಿತವನ್ನೂ ಭಕ್ತಿವೃದ್ಧಿಯನ್ನೂ ಅಪೇಕ್ಷಿಸುವವನಾಗಿ ಅವನ ಸುಖವನ್ನು ನೋಡಿಕೊಳ್ಳಲಿ. ದೇವರೇ, “ನಿನ್ನನ್ನು ದೂಷಿಸಿದವರ ದೂಷಣೆಗಳು ನನ್ನ ಮೇಲೆ ಬಂದವು” ಎಂಬದಾಗಿ ಬರೆದಿರುವಂತೆ ಆತನಿಗೆ ಸಂಭವಿಸಿತಲ್ಲಾ (ರೋಮಾಪುರ 15:1-3).

ಕಾರ್ಯಶೀಲ ಐಕ್ಯತೆಯು ಕೊಡುವದನ್ನೂ - ತೆಗೆದುಕೊಳ್ಳುವದನ್ನೂ ಆಗಾಗ ಕೇಳುತ್ತದೆ. ಸ್ವಾರ್ಥಿ ಮನುಷ್ಯನು ಇತರರೊಂದಿಗಿನ ಐಕ್ಯತೆಯನ್ನು ಎಂದೂ ತಿಳಿದಿರಲಾರನು. ಅವನು ಯಾವಾಗಲೂ ತನ್ನ ಸ್ವಾರ್ಥದ ಬೇಡಿಕೆಗಳಿಂದ ಎಲ್ಲಾ ದಿಕ್ಕುಗಳಲ್ಲಿ ಬಂಧಿಸಲ್ಪಟ್ಟ ಚಿಕ್ಕ ಸಾಮ್ರಾಜ್ಯದಲ್ಲಿ ವಾಸಿಸುವನು. ಇತರರೊಂದಿಗಿನ ಯಥಾರ್ಥವಾದ ಅನ್ಯೋನ್ಯತೆಗಾಗಿ ಅವನು ಆ ರಾಜ್ಯದಿಂದ ಹೊರಗೆ ಬರಲಾರನು ಹಾಗೂ ಅವನೊಂದಿಗೆ ಯಥಾರ್ಥವಾದ ಅನ್ಯೋನ್ಯತೆಗಾಗಿ ಯಾರೂ ಅದರೊಳಗೆ ಪ್ರವೇಶಿಸಲಾರರು.

ಕ್ರಿಸ್ತನಲ್ಲಿಯ ಈ ಕಾರ್ಯಶೀಲ ಐಕ್ಯತೆಯು ಕ್ರಿಸ್ತನ ಸಭೆಯ ಪ್ರತಿಯೊಬ್ಬ ಸದಸ್ಯನ ಪರವಾಗಿ ಪ್ರೀತಿ ಮತ್ತು ಕೃಪೆಯೊಂದಿಗೆ ತನ್ನ ಸಹೋದರನ ಇಲ್ಲವೇ ಸಹೋದರಿಯ ಬಗ್ಗೆ ಯೋಚಿಸುವುದರಿಂದ ಬೆಳೆಯುವುದು. ಕ್ರೈಸ್ತನು ತನ್ನ ಸ್ವಂತ ಅಭಿಪ್ರಾಯಗಳೊಂದಿಗೆ ಹಾಗೂ ಅಪೇಕ್ಷೆಗಳ ಬಗ್ಗೆ ಕಡಿಮೆ ಕೇಳುವವನಾಗಿರುವನು. ಸ್ವಾರ್ಥತೆಯಿಂದ ಇಲ್ಲವೇ ಒಣಹೆಮ್ಮೆಯಿಂದ ಅವನು ಏನನ್ನೂ ಮಾಡಬಾರದು. ಆದರೆ ದೀನ ಮನಸ್ಸಿನಿಂದ ಮಾಡ ಬೇಕು, ತನಗಿಂತ

ಇತರರು ಶ್ರೇಷ್ಠರೆಂದು ನೋಡಬೇಕು (ಫಿಲಿಪ್ಪಿ 2:3). ಅವನು ತನ್ನ ಸ್ವಂತ ಆಸಕ್ತಿಗಳ ಕಡೆಗೆ ನೋಡಬಾರದು. ಇತರರ ಆಸಕ್ತಿಗಳ ಕಡೆಗೆ ನೋಡಬೇಕು (ಫಿಲಿಪ್ಪಿ 2:4). ಆ ರೀತಿಯಲ್ಲಿ ಅವನು ಜೀವಿಸುವಾಗ ಕ್ರಿಸ್ತನ ಮನಸ್ಸನ್ನು ಅದ್ವಿತೀಯವಾಗಿ ಪ್ರದರ್ಶಿಸುವನು (ಫಿಲಿಪ್ಪಿ 2:5-8).

## ಮುಕ್ತಾಯ

ಆದುದರಿಂದ, ಕ್ರಿಸ್ತನ ಸಭೆಯ ಈ ಐಕ್ಯತೆಗಾಗಿ ತಿಳಿದು ಕೊಳ್ಳತಕ್ಕದ್ದು. ಈ ಐಕ್ಯತೆಗೆ ಮೂರು ವಿಧದ ಸ್ವಭಾವವಿದೆ. ಕ್ರೈಸ್ತರು ಒಂದೇ ದೇಹವಾಗಿ, ಒಂದೇ ಬೋಧನೆಯ ವಿಶ್ವಾಸಿಗಳಂತೆ ಮತ್ತು ಅನುದಿನದ ಜೀವನದಲ್ಲಿ ಒಬ್ಬರನೊಬ್ಬರು ವಿಚಾರ ಪೂರ್ವಕವಾಗಿ ನಡೆಸಿಕೊಳ್ಳುವ ಜನರಂತೆ ಐಕ್ಯ ವಾಗಿದ್ದಾರೆ. ಹೊಸ ಕ್ರೈಸ್ತರು ಆತನ ಸಭೆಯಲ್ಲಿ ಪ್ರವೇಶಿಸುವಾಗ ಐಕ್ಯತೆಯು ದೇವರ ಕೃಪೆಯಿಂದ ಬರುತ್ತದೆ. ಪರಿಶುದ್ಧ ಬರಹಗಳ ಬೋಧನೆಗಳಿಗೆ ಸಭೆಯ ಸಂಪೂರ್ಣ ಸಮರ್ಪಣೆಯ ಮುಖಾಂತರವಾಗಿ ಅದು ಇಡಲ್ಪಡುತ್ತದೆ ಹಾಗೂ ಅನುಭವಿಸಲ್ಪಡುತ್ತದೆ. ಸಭೆಯಿಂದ ಐಕ್ಯತೆಯು ಅನುಭವಿಸಲ್ಪಡುತ್ತದೆ. ಯಾಕಂದರೆ ಪ್ರತಿಯೊಬ್ಬ ಸದಸ್ಯನು ಸಹ ಕ್ರೈಸ್ತರ ಆತ್ಮಿಕ ಜೀವನದ ಬಗ್ಗೆ ಆಸಕ್ತಿಯುಳ್ಳವನಾಗಿರುತ್ತಾನೆ.

ದೇವರು ತನ್ನ ಜಗತ್ತಿನಲ್ಲಿಯ ವೈರತ್ವದ ಎಲ್ಲಾ ಧ್ವನಿಯನ್ನು ಕ್ರಿಸ್ತನಲ್ಲಿ ಸಾಮರಸ್ಯದೊಂದಿಗೆ ತರಲು ಹುಡುಕುವನು: "ತಂದೆಯಾದ ದೇವರು ಆತನಲ್ಲಿ ತನ್ನ ಸರ್ವಸಂಪೂರ್ಣತೆಯು ವಾಸವಾಗಿರಬೇಕೆಂತಲೂ ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನು ಉಂಟು ಮಾಡಿ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಆತನ ಮೂಲಕ ತನಗೆ ಸಂಧಾನ ಪಡಿಸಿಕೊಳ್ಳಬೇಕೆಂತಲೂ ನಿಷ್ಕರ್ಷೆ ಮಾಡಿದನು" (ಕೊಲೊಸ್ಸೆ 1:19, 20). ಕ್ರಿಸ್ತನು ತನ್ನ ಸುವಾರ್ತೆಯ ಮುಖಾಂತರ ತನ್ನ ಸಭೆಯಲ್ಲಿ ಈ ಐಕ್ಯತೆಗೆ ಕರೆಯುತ್ತಾನೆ. ದೇವರು ಅದನ್ನು ಯೋಚಿಸಿದನು (ಎಫೆಸ 3:6). ಕ್ರಿಸ್ತನು ಅದಕ್ಕಾಗಿ ಪ್ರಾರ್ಥಿಸಿದನು ಹಾಗೂ ಅದಕ್ಕಾಗಿ ಸಾಧ್ಯತೆಯನ್ನು ಒದಗಿಸಿ ಕೊಟ್ಟನು (ಯೋಹಾನ 17:21; ಎಫೆಸ 2:16). ಪೌಲನು ಅದಕ್ಕಾಗಿ ಬೇಡಿಕೊಂಡನು (1 ಕೊರಿಂಥ 1:10), ಹಾಗೂ ಪರಿಶುದ್ಧಾತ್ಮನು ಅದನ್ನು ಹುಟ್ಟಿಸುವನು (ಎಫೆಸ 4:1-6).

ಅದನ್ನು ಸ್ವೀಕರಿಸುವದರಿಂದಲೂ ಅದರಲ್ಲಿ ಜೀವಿಸುವದರಿಂದಲೂ ಈ ಐಕ್ಯತೆಯನ್ನು ನಾವು ಸ್ವೀಕರಿಸಬಾರದೋ?

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ಕ್ರಿಸ್ತನಲ್ಲಿ ಐಕ್ಯತೆಯು ಆನಂದಕರವಾದದ್ದೂ ಒಳ್ಳೆಯದೂ ಯಾವ ವಿಧದಲ್ಲಿದೆ?
2. ಕ್ರಿಸ್ತನು ಶಿಲುಬೆಗೆ ಹಾಕಲ್ಪಡುವ ದಿನದ ಹಿಂದಿನ ರಾತ್ರಿಯಲ್ಲಿ ಸಭೆಗಾಗಿ ಕ್ರಿಸ್ತನು ಮಾಡಿದ ವಿಶೇಷ ಪ್ರಾರ್ಥನೆಯು ಯಾವುದು? (ಯೋಹಾನ 17:21-24 ನೋಡಿರಿ.)
3. 1 ಕೊರಿಂಥ 1:10ರಲ್ಲಿ ಪೌಲನಿಂದ ಐಕ್ಯತೆಗಾಗಿ ಕೊಡಲ್ಪಟ್ಟ ಬೇಡಿಕೆಯನ್ನು ಚರ್ಚಿಸಿರಿ.
4. ದೇಹದಂತೆ ಕ್ರಿಸ್ತನ ಸಭೆಗಿರುವ ಐಕ್ಯತೆಯನ್ನು ವಿವರಿಸಿರಿ.
5. ಸಭೆಯ ಐಕ್ಯತೆಯು ಸಭೆಯನ್ನು ಪ್ರವೇಶಿಸುವವನಿಗೆ ಯಾವಾಗ ಕೊಡಲ್ಪಡುವುದು?
6. ಬೋಧನೆಯಲ್ಲಿ ಸಭೆಯ ಐಕ್ಯತೆಯನ್ನು ನಿರೂಪಿಸಿರಿ. ದೇಹದಂತೆ ಐಕ್ಯತೆಯಿರುವುದು ಹಾಗೂ ಬೋಧನೆಯಲ್ಲಿ ಐಕ್ಯತೆಯಿರುವುದು ಇವುಗಳ ಮಧ್ಯದಲ್ಲಿ ವ್ಯತ್ಯಾಸವೇನು?
7. ಐಕ್ಯತೆ ಮತ್ತು ಕ್ರಿಸ್ತನ ಚಿತ್ತಕ್ಕೆ ಸಮರ್ಪಣೆ ಹೇಗೆ ಸಂಬಂಧಿಸಿವೆ?
8. ಬೋಧನೆಯಲ್ಲಿ ಐಕ್ಯತೆಯಿರುವುದು ಹಾಗೂ ಅನುದಿನದ ಜೀವಿತದಲ್ಲಿ ಐಕ್ಯತೆಯಿರುವುದು ಇವುಗಳ ಮಧ್ಯದಲ್ಲಿ ವ್ಯತ್ಯಾಸವೇನು?
9. ಸಭೆಯಲ್ಲಿ ಕಾರ್ಯಾಚರಣೆಯ ಐಕ್ಯತೆಯಿಟ್ಟುಕೊಳ್ಳಲು ಕೆಲವು ಸಲ ಕ್ರೈಸ್ತರು ತೆಗೆದು ಕೊಳ್ಳತಕ್ಕ ಕೆಲವು ಹೆಜ್ಜೆಗಳು ಯಾವವು?

## ಪದ ಸಹಾಯಗಳು

ಮನಸ್ಸಾಕ್ಷಿ - ಮಾನವರಲ್ಲಿ ಕಂಡು ಬರುವ ಆಂತರಿಕ ನೈತಿಕ ಸಾಕ್ಷಿ; ಕೆಲವು ಸಲ ಸರಿ, ತಪ್ಪುಗಳನ್ನು ನಮಗೆ ಹೇಳುವ ಆಂತರಿಕ ಧ್ವನಿಯೆಂದು ತಿಳಿಯಲ್ಪಟ್ಟಿದೆ. ದೇವರ ವಾಕ್ಯದಿಂದ ಮನಸ್ಸಾಕ್ಷಿಯು ತರಬೇತಿಗೊಳಿಸಲ್ಪಡುವ ಅಗತ್ಯತೆಯಿದೆ.

ಯುವೊದ್ಯಳು ಹಾಗೂ ಸಂತುಕೆಯು - ಒಬ್ಬರಿಗೊಬ್ಬರಿಗೆ ಮನಸ್ತಾಪವಿದ್ದ ಇಬ್ಬರು ಕ್ರೈಸ್ತ ಮಹಿಳೆಯರು (ಫಿಲಿಪ್ಪಿ 4:2). ಒಬ್ಬರಿಗೊಬ್ಬರು ಸಮಾಧಾನದಿಂದ ಇರಬೇಕೆಂದು ಪೌಲನು ಒತ್ತಾಯ ಪಡಿಸಿದನು.

ಟಿಪ್ಪಣಿ

[1]T. B. Larimore, "Unity," in *Biographies and Sermons*, ed. F. D. Srygley (n.p., n.d.; reprint Nashville: Gospel Advocate, 1961), 35-36. [2]R. C. Bell, *Studies in Ephesians* (Austin, Tex.: Firm Foundation Publishing House, 1971), 25. [3]Ibid., 24.

## 18

# ನಿತ್ಯ ಬಹುಮಾನ ಹಾಗೂ ನಿತ್ಯ ಶಿಕ್ಷೆ

ನಮ್ಮ ಮನಸ್ಸಿಗೆ ಗ್ರಹಿಸಿಕೊಳ್ಳುವ ಅತೀ ಕಷ್ಟಕರವಾದ ಭಾವನೆಗಳಲ್ಲಿ ಒಂದು "ನಿತ್ಯತ್ವ," ಅಂದರೆ ಎಂದೂ ಮುಗಿಯದ ಅಸ್ತಿತ್ವ. ನಮ್ಮ ಪ್ರಾಪಂಚಿಕ ವಿಶ್ವದಲ್ಲಿಯ ಪ್ರತಿಯೊಂದಕ್ಕೂ, ನಾವು ನೋಡುವಂತದ್ದಕ್ಕೂ ಸ್ಪರ್ಶಿಸುವಂತದ್ದಕ್ಕೂ ಒಂದು ಪ್ರಾರಂಭವಿದೆ ಹಾಗೆಯೇ ಒಂದು ಅಂತವೂ ಇದೆ. ಆದುದರಿಂದ ನಿತ್ಯತ್ವದ ಭಾವನೆಯೊಂದಿಗೆ ಹೋರಾಡುವುದು ಭಾವಪರವಶಗೊಳಿಸುವಂತದ್ದಾಗಿದೆ. ನಿತ್ಯತ್ವವು ನಮ್ಮ ಅನುಭವದ ಹೊರಗಿರುವಂಥದ್ದಾಗಿರುವದರಿಂದ ಅದನ್ನು ಅರ್ಥಮಾಡಿಕೊಳ್ಳುವುದು ನಮ್ಮ ಮನಸ್ಸಿಗೆ ಅಸಾಧ್ಯವಾಗಿರುವದೇನೋ ಎಂಬಂತೆ ಕಾಣುತ್ತದೆ.

ಅದ್ಭುತಗಳೊಂದಿಗೆ ಪರಲೋಕವನ್ನು ದೇವರು ನಮಗೆ ಕೊಡುವದನ್ನು ಸುಲಭವಾಗಿ ಒಪ್ಪಿಕೊಳ್ಳಬಹುದು. ಈ ರೀತಿಯ ಜೀವನದಲ್ಲಿ ನಿತ್ಯವಾಗಿಯೂ ಅಲ್ಲಿ ಇರುವ ಹಕ್ಕನ್ನು ಸಂಪಾದಿಸಿಕೊಳ್ಳುವ ಸಾಧ್ಯತೆಯಿಲ್ಲವೆಂದೂ ಅರ್ಥಮಾಡಿಕೊಂಡಿರಬಹುದು. ಅದೇ ಸಮಯದಲ್ಲಿ ಮುಗಿಯಲಾರದ ದಂಡನೆಗೆ ನಾವು ಪಾತ್ರರಾಗುವಷ್ಟು ಈ ಜೀವನದಲ್ಲಿ ಕೆಟ್ಟವರಾಗಿರುವದಿಲ್ಲ ಎಂದು ಯೋಚಿಸುತ್ತ ನರಕದ ಭಯಾನಕತೆಗಳನ್ನು ನಾವು ವಿರೋಧಿಸಬಹುದು. ದೇವರ ಪ್ರತೀಕಾರಕ್ಕೆ ಯೋಗ್ಯರಾದ ಅನೀತಿವಂತರಿಗಿಂತಲೂ ಹೆಚ್ಚಾಗಿ ನೀತಿವಂತರು ದೇವರ ದಯೆ, ಕೃಪೆಗಳಿಗೆ ಅರ್ಹರಾಗಿದ್ದಾರೆಂದೂ ನಾವು ಯೋಚಿಸಬಹುದು.

ದೇವರ ಪ್ರೀತಿ, ದಯೆ ಮತ್ತು ಕೃಪೆಯೊಂದಿಗೆ ನಿತ್ಯದಂಡನೆಯು ಸಾಮರಸ್ಯತೆಯಲ್ಲಿರುವುದಿಲ್ಲವೆಂದು ಯೋಚಿಸುವ ತಪ್ಪನ್ನು ಕೆಲವರು ಮಾಡುತ್ತಾರೆ. ಆದುದರಿಂದ ಅವರು ಕೇವಲ ಪ್ರೀತಿಸುವ, ದಯೆಯುಳ್ಳ ಹಾಗೂ ದೀರ್ಘಶಾಂತನಾದ ದೇವರೊಂದಿಗೆ ಅನುಗುಣವಾಗುವಂತೆ ಬೈಬಲನ್ನು ವ್ಯಾಖ್ಯಾನಿಸಲು ಪ್ರಯತ್ನಿಸುವರು (1 ತಿಮೊಥೆ 1:2; 1 ಯೋಹಾನ 4:8). ದೇವರ ಇನ್ನೊಂದು ಭಾಗವನ್ನು ಅವರು ಕಡೆಗಣಿಸುತ್ತಾರೆ. ಆತನು ರೋಷದ ಹಾಗೂ ಪ್ರತೀಕಾರದ ದೇವರೂ ಆಗಿದ್ದಾನೆ.[1] ಆತನು ಅಧರ್ಮವನ್ನು ದ್ವೇಷಿಸುತ್ತಾನೆ (ಇಬ್ರಿಯ 1:9),

“ಕಾಠಿಣ್ಯ”ವನ್ನು ತೋರಿಸುತ್ತಾನೆ (ರೋಮಾಪುರ 11:12), ಆತನು “ದಹಿಸುವ ಅಗ್ನಿಯಾಗಿದ್ದಾನೆ” (ಇಬ್ರಿಯ 12:29). “ಆದದರಿಂದ ದೇವರ ದಯೆಯನ್ನೂ ಕಾಠಿಣ್ಯವನ್ನೂ ನೋಡು; ಬಿದ್ದವರ ಕಡೆಗೆ ಕಾಠಿಣ್ಯ; ನಿನ್ನ ಕಡೆಗೆ ನೀನು ದೇವರ ದಯೆಯನ್ನು ಆಶ್ರಯಿಸಿಕೊಂಡೇ ಇದ್ದರೆ ಆತನ ದಯೆ; ಇಲ್ಲವಾದರೆ ನಿನ್ನನ್ನೂ ಕಡಿದು ಹಾಕುವನು” (ರೋಮಾಪುರ 11:22) ಎಂದು ಓದುತ್ತೇವೆ. “ಜೀವವುಳ್ಳ ದೇವರ ಕೈಯಲ್ಲಿ ಸಿಕ್ಕಿ ಬೀಳುವುದು ಭಯಂಕರವಾದದ್ದು” ಎಂದು ಇಬ್ರಿಯ 10:31 ಹೇಳುತ್ತದೆ.

ಪೇತ್ರನೊಂದಿಗೆ (ಲೂಕ 22:31, 32), ಪೌಲನೊಂದಿಗೆ (1 ತಿಮೊಥೆ 1:15, 16) ಹಾಗೂ ಇತರರೊಂದಿಗೆ ಆತನ ವ್ಯವಹಾರಗಳಲ್ಲಿ ದೇವರ ದಯೆಯು ಹೊಸ ಒಡಂಬಡಿಕೆಯಲ್ಲಿ ಹೇಳಲ್ಪಟ್ಟಿದೆ. ಅನನೀಯ ಸಪ್ಫೈರರ ಮರಣದಲ್ಲಿ (ಅಪೊಸ್ತಲರ ಕೃತ್ಯಗಳು 5:1-10), ಹೆರೋದನ ಸಾವಿನಲ್ಲಿ (ಅಪೊಸ್ತಲರ ಕೃತ್ಯಗಳು 12:20-23) ಆತನ ರೋಷವು ಕಂಡುಬಂದಿದೆ. ಈ ಜನರ ತಪ್ಪಿಗಾಗಿ ದೇವರು ಅವರನ್ನು ಸಾಯುವಂತೆ ಬಡಿದನು.

ಅವಿಧೇಯರೊಂದಿಗೆ ದೇವರ ವ್ಯವಹಾರಗಳು ಆತನು ಕಠಿಣವಾಗಿ ದಂಡಿಸಲು ಶಕ್ತನಾಗಿದ್ದಾನೆ ಎಂಬುದನ್ನು ತೋರಿಸುತ್ತವೆ. ದೇವರನ್ನು ಕೇವಲ ಪ್ರೀತಿಯ ದೇವರಂತೆ ನೋಡುವವರು ಪಾಪದ ಕಡೆಗೆ, ಆತನ ಚಿತ್ತಕ್ಕೆ ಒಪ್ಪಿಸಿಕೊಡದವರಿಗೆ ಆತನು ಕೊಡುವ ದಂಡನೆಯ ಬಗ್ಗೆ ಆತನು ಉಗ್ರತೆಯುಳ್ಳವನಾಗಿರುವನು ಎಂಬುದನ್ನು ಕಡೆಗಣಿಸುತ್ತಾರೆ.

## ದಂಡನೆಯ ಮುನ್ನೋಟ

ಜೀವನದಲ್ಲಿ ವಿನೋದಗಳು ಎಂದೂ ಅಂತ್ಯಗೊಳ್ಳಬಾರದೆಂದು ನಾವು ಅಪೇಕ್ಷಿಸುವಾಗ ನೋವು ಕೂಡಲೇ ಇಲ್ಲವಾಗಿ ಹೋಗಬೇಕೆಂದು ಬಯಸುತ್ತೇವೆ. ಆಹ್ಲಾದಕರವಾಗಿರುವಂತದ್ದು ಮತ್ತು ಅನುಭವಿಸತಕ್ಕಂತದ್ದು ದಂಡನೆಯಲ್ಲ. ತಪ್ಪು ಕಾರ್ಯಕ್ಕೆ ಪ್ರತೀಕಾರವು ನಮಗೆ ಒಪ್ಪಿಗೆಯಿಲ್ಲದ ಸಂಗತಿಗಳನ್ನು ನಾವು ಸಹಿಸಿಕೊಳ್ಳುವಂತೆ ಮಾಡುವದರಿಂದ ಮಾತ್ರವೇ ನಿರ್ವಹಿಸಬಲ್ಲದು. ಏನು ಮಾಡುವೆನೆಂದು ದೇವರು ಹೇಳುವಂಥದ್ದು ನೋವನ್ನುಂಟು ಮಾಡುವಂತದ್ದಾಗಿದ್ದರೆ, ಅಂಥದ್ದು ನಿರೀಕ್ಷಿಸಲ್ಪಡ ಬೇಕು. ಪಾಪಭರಿತ ಮನುಷ್ಯನನ್ನು ದೇವರು ಬೇರೆ ಹೇಗೆ ದಂಡಿಸಬಹುದು?

### ದಂಡನೆಯು ಯಾವ ರೀತಿಯಲ್ಲಿ ಇರುವುದು?

ನಾವು ಆಗಲೇ ತೀರ್ಮಾನಿಸಿದಂತೆ ಅಂತ್ಯ ಸಮಯದಲ್ಲಿರುವ ದುಷ್ಟತ್ವದ

ಶಿಕ್ಷೆಯು ಸದಾಕಾಲಕ್ಕೂ ಇರುವುದು ಎಂದು ಬೈಬಲು ಬೋಧಿಸುತ್ತದೆ. "ನಿತ್ಯ ಶಿಕ್ಷೆಯು" ಯಾವರೀತಿಯಲ್ಲಿ ಇರುವುದು ಎಂಬುದನ್ನು ಕಲ್ಪಿಸಿಕೊಳ್ಳಿರಿ (ಮತ್ತಾಯ 25:46).

*ಸರ್ವನಾಶ?* ಯಾರೂ ಸದಾಕಾಲಕ್ಕೂ ದಂಡಿಸಲ್ಪಡುವದಿಲ್ಲ ಎಂದು ಕೆಲವರು ಬೋಧಿಸುತ್ತಾರೆ. "ನಿತ್ಯ ದಂಡನೆ" ಅಂದರೆ ಅವಿಧೇಯರು ಸರ್ವನಾಶಗೊಳ್ಳುವದು ಮತ್ತು ಅಸ್ತಿತ್ವದಿಂದ ದಾಟಿಹೋಗುವದು ನಿತ್ಯದಂಡನೆಯಾಗಿರುವುದು ಎಂದು ಹೇಳುವರು. ದುಷ್ಟರು ನಾಶವಾಗುವರು ಇಲ್ಲವೇ ನಿತ್ಯ ನಾಶನವನ್ನು ಹೊಂದುವರು ಎಂದು ಹೇಳುವ ವಚನಗಳ ಮೇಲೆ ಈ ಬೋಧನೆಯು ಅವಲಂಬಿಸಿರುವುದು (ಮತ್ತಾಯ 10:28).

ಮತ್ತಾಯ 10:28ರಲ್ಲಿ "ನಾಶವಾಗುವುದು" ಎಂದು ಭಾಷಾಂತರಿಸಲ್ಪಟ್ಟ *ಅಪೊಲ್ಲುಮಿ* ಎಂಬ ಗ್ರೀಕ್ ಪದವು "ಸಾಯುತ್ತೇವೆ" (ಮತ್ತಾಯ 8:25) ಹಾಗೂ "ಕಳೆದು ಹೋಗುವುದು" (ಲೂಕ 15:4, 6) ಎಂದು ಭಾಷಾಂತರಿಸಲ್ಪಟ್ಟಿದೆ. ಮತ್ತಾಯ 9:17ರಲ್ಲಿ ಯೇಸು ಹೇಳಿದ ದ್ರಾಕ್ಷಾ ಬುದ್ದಲಿಗಳು ಒಡೆದು ಹೋಗುವವು, ಕೆಟ್ಟು ಹೋಗು ವವು ಆದರೆ ನಾಶವಾಗಿ ಹೋಗುವದಿಲ್ಲ; ಕಳೆದು ಹೋದ (ಅಪೊಲ್ಲುಮಿ) ಕುರಿ, ಪಾವಲಿ ಮತ್ತು ಮಗನು ಪುನಃ ದೊರೆತವು, ದೊರೆತನು (ಲೂಕ 15:6, 9, 24). ಯೇಸುವು "ನಶಿಸಿ ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು" (ಲೂಕ 19:10) ಹಾಗೂ "ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು" (ಮತ್ತಾಯ 10:39) ಎಂದು ಆತನು ವಾಗ್ದಾನ ಮಾಡಿದನು. ನಿರ್ಮೂಲ ಮಾಡಲ್ಪಟ್ಟದ್ದು ಕಂಡುಕೊಳ್ಳಲ್ಪಡಲಾರದು ಇಲ್ಲವೇ ರಕ್ಷಿಸ್ಪಡಲಾರದು, ಪ್ರತಿಯೊಂದು ಮುಕ್ತಾಯಗೊಳಿಸುವ ಹಿನ್ನೆಲೆಯಲ್ಲಿ ಅಪೊಲ್ಲುಮಿ ಎಂಬ ಪದವು "ಕಳೆದು ಹೋಗುವುದು" "ಹಾಳಾಗಿ ಹೋಗುವುದು" ಇಲ್ಲವೇ "ನಾಶಪಡಿಸಲ್ಪಡುವುದು" ಎಂದರ್ಥ ಕೊಡುತ್ತದೆ ಆದರೆ "ನಿರ್ಮೂಲವಾಗುವುದು" ಎಂದರ್ಥ ಕೊಡಲಾರದು.

ದುಷ್ಟರು ನಿತ್ಯತ್ವದಲ್ಲೆಲ್ಲಾ ದಂಡಿಸಲ್ಪಡುತ್ತಲೇ ಇರುವರು: "ಅಂಥವರ ಯಾತನೆಯ ಹೊಗೆಯು ಯುಗಯುಗಾಂತರಗಳಲ್ಲಿಯೂ ಏರುತ್ತಾ ಹೋಗುತ್ತದೆ; ... ಹಗಲಿರುಳು ಉಪಶಮನವಿಲ್ಲದೆ ಯಾತನೆ ಪಡುವರು" (ಪ್ರಕಟನೆ 14:11). ಇದೇ ವಿವರಣೆಯು ಪ್ರಕಟನೆ 20:10ರಲ್ಲಿ ಮೊದಲು ಪ್ರಕಟನೆ 19:20ರಲ್ಲಿ ಬೆಂಕಿ ಕೆರೆಯಲ್ಲಿ ದೊಬ್ಬಲ್ಪಟ್ಟ ಸೈತಾನ, ಮೃಗ, ಸುಳ್ಳು ಪ್ರವಾದಿಯ ದಂಡನೆಯನ್ನು ಕುರಿತು ಕೊಡಲ್ಪಟ್ಟಿದೆ. ಬೆಂಕಿ ಕೆರೆಯು ತನ್ನಲ್ಲಿ ಎಸೆಯಲ್ಪಟ್ಟವರನ್ನು ಸರ್ವನಾಶ ಮಾಡಿದರೆ, ಬೆಂಕಿ ಕರೆಯೊಳಗೆ ಮೊದಲು ದೊಬ್ಬಲ್ಪಟ್ಟ ಮೃಗ ಮತ್ತು ಸುಳ್ಳು ಪ್ರವಾದಿಯು ಒಂದು ಸಾವಿರ ವರ್ಷಗಳ ನಂತರ ಬೆಂಕಿಯ ಕೆರೆಯೊಳಗೆ ದೊಬ್ಬಲ್ಪಟ್ಟ ಸಮಯದೊಳಗೆ ಸುಟ್ಟು ಹೋಗಿರಬೇಕಾಗಿತ್ತು (ಪ್ರಕಟನೆ 20:2, 3). ಅವರು

ಇನ್ನೂ ಅಲ್ಲಿದ್ದರು ಮತ್ತು ಅವರು "ಹಗಲಿರುಳು ಯುಗಯುಗಾಂತರಗಳಲ್ಲಿಯೂ" ಅಲ್ಲಿ ಯಾತನೆ ಪಡುತ್ತಲೇ ಇರುವರು (ಪ್ರಕಟನೆ 20:10).

ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ದೇವರ ಕೃಪೆಯನ್ನು ತಿರಸ್ಕರಿಸುವವರು ಮೋಶೆಯ ಧರ್ಮಶಾಸ್ತ್ರವನ್ನು ಮೀರಿ ನಡೆದ ಇಸ್ರಾಯೇಲ್ಯರ ಮೇಲೆ ಜರುಗಿಸಲ್ಪಟ್ಟಕ್ಕಿಂತಲೂ ಹೆಚ್ಚು ಕಠಿಣವಾದ ದಂಡನೆಗೆ ಯೋಗ್ಯರೆಂದು ಎಣಿಸಲ್ಪಡುವರು (ಇಬ್ರಿಯ 10:29). ಮೋಶೆಯ ಧರ್ಮ ಶಾಸ್ತ್ರವನ್ನು ಮೀರಿದವರಿಗೆ ಕೊಡಲ್ಪಟ್ಟ ಅತೀ ಕೆಟ್ಟದಾದ ಶಿಕ್ಷೆಯು ಮರಣವಾಗಿದ್ದುದರಿಂದ, ಮರಣಕ್ಕಿಂತಲೂ ಹೆಚ್ಚು ಭಯಾನಕವಾದ ಶಿಕ್ಷೆಯು ಇರಲೇ ಬೇಕು. ಆ ದಂಡನೆಯು ನರಕವಾಗಿದೆ.

*ನಿಜವಾದ ದಂಡನೆ?* ನರಕ (ಗ್ರೀಕ್: *ಗೆಹೆನ್ನ*[2]) ಎಂಬುದು ನಿಜವಾದ ಸ್ಥಳವಾಗಿದೆ; ಯಾಕೋಬ 3:6ರಲ್ಲಿ ಹೇಳಲ್ಪಟ್ಟದ್ದನ್ನು ಬಿಟ್ಟರೆ, ಯೇಸುವಿನಿಂದ ಮಾತ್ರವೇ ಈ ಪದ ಹೇಳಲ್ಪಟ್ಟಿದೆ.[3] ಸತ್ತವರಿಗಾಗಿ ಮಧ್ಯದಲ್ಲಿಯ ಸ್ಥಳ ಹೇಡಿಸ್ ಮತ್ತು ದುಷ್ಟರು ದಂಡಿಸಲ್ಪಡುವ ಸ್ಥಳ ನರಕ (ಹೆಲ್) ಎಂಬುದರ ಮಧ್ಯದಲ್ಲಿಯ ಸ್ಪಷ್ಟವಾದ ಭಿನ್ನತೆಯನ್ನು ಗಮನಿಸತಕ್ಕದ್ದು.

*ಗೆಹೆನ್ನ* ಎಂಬ ಪದವು ಯೆರೂಸಲೇಮಿನ ದಕ್ಷಿಣ ದಿಕ್ಕಿನಲ್ಲಿದ್ದ, ಹಿನ್ನೋಮನ ಮಕ್ಕಳಿಗೆ ಒಳಪಟ್ಟಿದ್ದ ಕಣಿವೆಗೆ ಮೊದಲು ಅನ್ವಯಿಸಲ್ಪಟ್ಟಿತ್ತು. ಆ ಸ್ಥಳವು ದೇವರಿಗೂ ಮನುಷ್ಯನಿಗೂ ಅಸಹ್ಯವಾದದ್ದೂ, ಜಿಗುಪ್ಸೆ ಹುಟ್ಟಿಸುವಂಥದ್ದೂ ಆಗಿತ್ತು. ಯಾಕಂದರೆ ವಿಗ್ರಹಾರಾಧಕರು ತಮ್ಮ ಮಕ್ಕಳನ್ನು ಅಲ್ಲಿ ಸುಡುತ್ತಿದ್ದರು.[4] ಹೀಗೆ ಯೇಸುವಿನ ದಿನದಲ್ಲಿ, ಅದು ಯೆರೂಸಲೇಮಿನ ಕಸವನ್ನು ಹಾಕುವ ಸ್ಥಳವಾಗಿತ್ತು, ಹೊಲಸು ವಾಸನೆಯಿಂದ ಕೂಡಿತ್ತು, ಹುಳಗಳಿಂದ ತುಂಬಿತ್ತು, ಸತತವಾದ ಬೆಂಕಿಯಿಂದ ಹೊಗೆಯಾಡುತ್ತಿತ್ತು. *ಗೆಹೆನ್ನ* ಪದವನ್ನು ದುಷ್ಟರಿಗೆ ದಂಡನೆಯ ಸ್ಥಳದ ಸರಿಯಾಗಿ ಹೊಂದುವ ವಿವರಣೆಯಂತೆ ಯೇಸುವು ಉಪಯೋಗಿಸಿದನು.

ಗೆಹೆನ್ನದ ಬೆಂಕಿಯನ್ನು ಯೇಸುವು ಬೆಂಕಿಯ ಕೊಂಡವೆಂದು ಹೇಳಿದ್ದಾನೆ (ಮತ್ತಾಯ 13:42, 50). ಈ ಬೆಂಕಿಯು ಸದಾಕಾಲ ಇರುವಂಥದ್ದು ಮತ್ತು ಆರಿಸಲ್ಪಡುವದಿಲ್ಲ (ಮತ್ತಾಯ 3:12; 18:8; 25:41; ಮಾರ್ಕ 9:48[5]). "ಹುಳ" ಸಾಯುವದಿಲ್ಲವೆಂದು ಆತನು ಹೇಳಿದ್ದಾನೆ. ಹುಳವು ಸಾಯುವದಿಲ್ಲವೆಂದೂ ಹೇಳಿದನು. ಬೆಂಕಿ ಮತ್ತು ಹುಳಗಳು ಶವಗಳನ್ನು ತಿಂದು ಹಾಕಿದರೆ, ತಿನ್ನಲಿಕ್ಕೆ ಏನೂ ಉಳಿಯದೇ ಬೆಂಕಿಯು ನಂದಿ ಹೋಗುವುದು, ಹುಳಗಳು ಸತ್ತು ಹೋಗುವವು. ಬೆಂಕಿಯನ್ನು ಹುಳಗಳನ್ನು ಯೇಸುವು ಅಕ್ಷರಶಃವಾಗಿ ಉದ್ದೇಶಿಸಿದ್ದರೂ ದಂಡನೆಯ ಮುಗಿಯದ ಗುಣವನ್ನು ಸೂಚಿಸಲು ಆತನು ಈ ಮಾತುಗಳನ್ನು ಉಪಯೋಗಿಸಿದನು.

ಬೆಂಕಿಯು ಅಕ್ಷರಶಃವಾದದ್ದು ಆಗಿರದಿದ್ದರೆ ಯೇಸುವು ಬಹಳ ಸಲ "ಬೆಂಕಿ" ಎಂಬ ಪದವನ್ನು ಯಾಕೆ ಉಪಯೋಗಿಸಿದನು? ಇನ್ನೊಂದು ಕಡೆಯಲ್ಲಿ ದೈಹಿಕ ಮಾತುಗಳನ್ನು ಬಿಟ್ಟು ಆತ್ಮದ ದಂಡನೆಯನ್ನು ಅರ್ಥವಾಗುವ ರೀತಿಯಲ್ಲಿ ಆತನು ಹೇಗೆ ವಿವರಿಸಬಹುದು? ಬಹುಶಃ ಅದೇ ರೀತಿ ಯಲ್ಲಿ ಪರಲೋಕದ ಸೌಂದರ್ಯವನ್ನು ತೋರಿಸಲು ದೈಹಿಕ ಮಾತುಗಳಲ್ಲಿ ಪರಲೋಕವು ವಿವರಿಸಲ್ಪಟ್ಟಿದೆ. ನರಕದ ಭಯಾನಕತೆಗಳನ್ನು ತಿಳಿದುಕೊಳ್ಳಲು ನಮಗೆ ಸಹಾಯ ಮಾಡುವಂತೆ ದೈಹಿಕ ಮಾತುಗಳನ್ನು ಯೇಸುವು ಉಪಯೋಗಿಸಿರಬಹುದು.

ನರಕದಲ್ಲಿ ಯಾವ ರೀತಿಯ ಶಿಕ್ಷೆಯು ಅನುಭವಿಸಲ್ಪಡುವುದು? ಅವಿಧೇಯ ರಾದವರು ಯಾವುದನ್ನು ನಿರೀಕ್ಷಿಸಬಹುದು?

(1) ನರಕಕ್ಕೆ ಕಳುಹಿಸಲ್ಪಡುವವರಿಗೆ "ತೊಲಗಿ ಹೋಗಿರಿ" ಎಂದು ಹೇಳ ಲ್ಪಡು ವುದು (ಮತ್ತಾಯ 7:23; 25:41; ಲೂಕ 13:27 ನೋಡಿರಿ). ಅವರು ದೇವರಿಂದ ಬೇರ್ಪಡಿಸಲ್ಪಡುವರು.

(2) ನರಕದಲ್ಲಿರುವವರು ದೇವರ ಸಮ್ಮುಖದಿಂದ ದೂರದಲ್ಲಿ ದಂಡನೆಯನ್ನು ಅನುಭವಿಸುವರು (2 ಥೆಸಲೊನೀಕ 1:9). ದೇವರು ಅವರನ್ನು ನೋಡುವದಿಲ್ಲ, ಕೇಳುವದಿಲ್ಲ ಇಲ್ಲವೇ ಅವರಿಗೆ ಸಹಾಯ ಮಾಡುವದಿಲ್ಲ ಎಂಬುದನ್ನು ತೋರಿಸುತ್ತದೆ.

(3) ಸೈತಾನನು ಮತ್ತು ಅವನ ದೂತರು ಹಾಗೆಯೇ ಎಂದಾದರೂ ಜೀವಿ ಸಿದ ದುಷ್ಟ ಜನರು ನರಕದಲ್ಲಿರುವರು (ಮತ್ತಾಯ 25:41).

(4) ನರಕವು ಬೆಂಕಿಯಿಂದಲೂ ಗಂಧಕದಿಂದಲೂ ಯಾತನೆ ಇರುವ ಸ್ಥಳ ವಾಗಿದೆ (ಪ್ರಕಟನೆ 14:10; 20:10; 21:8 ನೋಡಿರಿ).

(5) ನರಕದಲ್ಲಿರುವವರು ನಿತ್ಯನಾಶನದ ದಂಡನೆಯನ್ನು ಅನುಭವಿಸುವರು (2 ಥೆಸಲೊನೀಕ 1:9).

(6) ದೇವರ ನಿತ್ಯ ರಾಜ್ಯದಲ್ಲಿ ಪ್ರವೇಶಿಸಲು ಅವರಿಗೆ ಅಪ್ಪಣೆಯಿರುವದಿಲ್ಲ (1 ಕೊರಿಂಥ 6:9; ಗಲಾತ್ಯ 5:21).

(7) ಅವರು ದೇವರ ಕೋಪದ ಶಿಕ್ಷೆಯನ್ನು ಸಹಿಸುವರು (ಮತ್ತಾಯ 3:7; ರೋಮಾಪುರ 2:5; 5:9; ಎಫೆಸ 5:6; ಕೊಲೊಸ್ಸೆ 3:6). ಅದು ಏನೂ ಬೆರಸದೇ ಅವರ ಮೇಲೆ ಸುರಿಸಲ್ಪಡುವದು (ಪ್ರಕಟನೆ 14:10).

(8) ಅವರು ಹೊರಗೆ, ಗಾಢಕತ್ತಲೆಯೊಳಗೆ ಇರುವರು (ಮತ್ತಾಯ 8:12; 22:13; 25:30; 2 ಪೇತ್ರ 2:17; ಯೂದ 13 ನೋಡಿರಿ).

(9) ಅವರು ನರಕದ ಶಿಕ್ಷೆಯನ್ನು ಸ್ವೀಕರಿಸುವರು (ಮಾರ್ಕ 16:16; ಯೋಹಾನ 5:29; 2 ಥೆಸಲೊನೀಕ 2:12; 2 ಪೇತ್ರ 2:3; KJV).

(10) ಅವರು ನಾಶನದ ಅವಸ್ಥೆಯಲ್ಲಿರುವರು (ಗಲಾತ್ಯ 6:8).

(11) ಅವರು ದೇವರ ಪ್ರತೀಕಾರವನ್ನು ಅನುಭವಿಸುವರು (ರೋಮಾಪುರ 12:19).

ಶಿಕ್ಷಿಸಲ್ಪಡುತ್ತಿರುವವರ ಪ್ರತಿಕ್ರಿಯೆಯು ವರ್ಣನಾತೀತವಾಗಿರುವುದು: ಅವರು ಕಷ್ಟವನ್ನೂ, ಸಂಕಟವನ್ನೂ ಅನುಭವಿಸುತ್ತಿರುವರು (ರೋಮಾಪುರ 2:9). ಅವರು ಅಳುತ್ತಿರುವರು, ಹಲ್ಲು ಕಡಿಯುತ್ತಿರುವರು ಎಂದು ಯೇಸುವು ಹೇಳಿದ್ದಾನೆ. ಇದು ಅತೀಯಾದ ನೋವಿನ ವಿವರಣೆಯಾಗಿದೆ (ಮತ್ತಾಯ 8:12; 13:42, 50; 22:13; 24:51; 25:30; ಲೂಕ 13:28).

ನರಕದ ಬಗ್ಗೆ ಹೇಳಿದ್ದೆಲ್ಲವೂ ಭಯಾನಕವಾಗಿ ಕೆಟ್ಟದ್ದಾಗಿದೆ; ಯಾವ ಒಳ್ಳೆಯದೂ ಹೇಳಲ್ಪಟ್ಟಿರುವದಿಲ್ಲ. ಅಲ್ಲಿಗೆ ಹೋಗುವವರು, ಜೀವಿಸಿದ ಪ್ರತಿಯೊಬ್ಬ ದುಷ್ಟ ವ್ಯಕ್ತಿಯೊಂದಿಗೂ, ಸೈತಾನನೊಂದಿಗೂ ಅವನ ದೂತರೊಂದಿಗೂ ಎಂದೆಂದಿಗೂ ಸಹವಾಸದಲ್ಲಿ ಇರಬೇಕಾಗುತ್ತದೆ (ಮತ್ತಾಯ 25:41)! ಅವರು ಎಂದೂ ದೇವರೊಂದಿಗೂ, ನೀತಿವಂತರೊಂದಿಗೂ ಇರುವದಿಲ್ಲ. ಅವರು ಎಂದೆಂದಿಗೂ ಕತ್ತಲೆಯಲ್ಲಿ ವಾಸಿಸುವರು. ಬೆಳಕಾಗಿರುವ ದೇವರು ಅಲ್ಲಿರುವದಿಲ್ಲ, ಸೂರ್ಯ, ಸೌರಮಂಡಳಿ, ನಕ್ಷತ್ರಗಳು ಹಾಗೂ ನಮ್ಮ ವಿಶ್ವದ ಪ್ರತಿಯೊಂದು ಬೆಳಕೂ ಅಲ್ಲಿ ಅಸ್ತಿತ್ವದಲ್ಲಿರುವದಿಲ್ಲ. ದೇವರು ಮತ್ತು ಈ ಬೆಳಕು ಇಲ್ಲದೇ ಅಲ್ಲಿ ಕೇವಲ ಕತ್ತಲೆಯಿರುವುದು.

**ನರಕಕ್ಕೆ ಯಾರು ಹೋಗುವರು?**

ಯಾರು ದಂಡಿಸಲ್ಪಡುವರು ಎಂಬುದು ನಮಗೆ ಹೇಳಲ್ಪಟ್ಟಿದೆ. ಪೌಲನು ಅವರನ್ನು ಹಟಮಾರಿಗಳೂ, ಪಶ್ಚಾತ್ತಾಪವಿಲ್ಲದ ಮನಸ್ಸುಳ್ಳವರೂ “ಸ್ವೇಚ್ಛೆಯುಳ್ಳವರಾಗಿ ಸತ್ಯವನ್ನು ಅನುಸರಿಸದೇ ಅನ್ಯಾಯವನ್ನು ಅನುಸರಿಸುವವರೂ” ಕೆಟ್ಟದ್ದನ್ನು ನಡಿಸುವವರೂ ಆಗಿದ್ದಾರೆಂದು ಹೇಳಿದ್ದಾನೆ (ರೋಮಾಪುರ 2:5, 8, 9). “ದೇವರನ್ನರಿಯದವರನ್ನೂ, ... ಸುವಾರ್ತೆಗೆ ಒಳಪಡದವರನ್ನೂ” (2 ಥೆಸಲೊನೀಕ 1:8) ಒಳಗೊಂಡಿರುವರೆಂದು ಅವನು ಬರೆದನು. ಪರಲೋಕಕ್ಕೆ ಹೋಗದವರ ಅಂದರೆ ನರಕಕ್ಕೆ ಹೋಗುವ ಜನರ ಪಟ್ಟಿಯನ್ನು ಪೌಲನು ಕೊಟ್ಟನು (1 ಕೊರಿಂಥ 6:9; ಗಲಾತ್ಯ 5:21; ಎಫೆಸ 5:5 ನೋಡಿರಿ). ಅವರು ಜೀವಿಸಿದ ಜೀವಿತದ ಕಾರಣದಿಂದ ನರಕವು ಅವರ ನಿತ್ಯ ವಾಸಸ್ಥಾನವಾಗಿರುವುದು.

ಭಯದ ಬಗ್ಗೆ ಹೊಸ ಒಡಂಬಡಿಕೆಯು ಮಾತಾಡುವದರಲ್ಲಿ ಆಶ್ಚರ್ಯವಿಲ್ಲ. “ಕರ್ತನ ಭಯವು ನಮಗಿರುವದರಿಂದ ನಾವು ಮನುಷ್ಯರನ್ನು ಒಡಂಬಡಿಸುತ್ತೇವೆ” (2 ಕೊರಿಂಥ 5:11) ಎಂದು ಪೌಲನು ಬರೆದನು. ಅದೇ ಧ್ವನಿಯಲ್ಲಿ ಪೇತ್ರನು, “ಪ್ರತಿಯೊಬ್ಬನ ಕೆಲಸವನ್ನು ನೋಡಿ ಪಕ್ಷಪಾತವಿಲ್ಲದೆ ತೀರ್ಪುಮಾಡುವಾತನನ್ನು ನೀವು ತಂದೆಯೆಂದು ಕರೆಯುವವರಾಗಿರಲಾಗಿ ಈ

ಲೋಕದಲ್ಲಿ ನಿಮ್ಮ ಪ್ರಯಾಸಕಾಲವನ್ನು ಭಯಭಕ್ತಿಯುಳ್ಳವರಾಗಿ ಕಳೆಯಿರಿ" (1 ಪೇತ್ರ 1:17) ಎಂದು ಬರೆದನು, "ಇದಲ್ಲದೆ ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರ ಬೇಡಿರಿ. ಆತ್ಮ, ದೇಹ ಎರಡನ್ನೂ ಕೂಡ ನರಕದಲ್ಲಿ ಹಾಕಿ ನಾಶಮಾಡ ಬಲ್ಲಾತನಿಗೇ ಹೆದರಿರಿ" (ಮತ್ತಾಯ 10:28) ಎಂದು ಯೇಸು ಹೇಳಿದನು. "ಹೀಗಿರುವಲ್ಲಿ ನನ್ನ ಪ್ರಿಯರೇ, ನೀವು ನನ್ನ ಮಾತನ್ನು ಯಾವಾಗಲೂ ಕೇಳಿದಂತೆ ಈಗಲೂ ಕೇಳಿರಿ. ನಾನು ನಿಮ್ಮಲ್ಲಿರುವಾಗ ಮಾತ್ರವಲ್ಲದೆ, ನಾನಿಲ್ಲದಿರುವಾಗಲೂ ಬಹು ಹೆಚ್ಚಾಗಿ ಮನೋಭೀತಿಯಿಂದ ನಡುಗುವವರಾಗಿ ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ" (ಫಿಲಿಪ್ಪಿ 2:12) ಎಂದೂ ಪೌಲನು ಬರೆದನು.

"ಪೂರ್ಣ[6] ಪ್ರೀತಿಯು ಹೆದರಿಕೆಯನ್ನು ಹೊರಡಿಸಿಬಿಡುತ್ತದೆ" (1 ಯೋಹಾನ 4:18) ಹಾಗೂ ಪರಿಪೂರ್ಣ ಪ್ರೀತಿಯು ನಮ್ಮನ್ನು ವಿಧೇಯರನ್ನಾಗಿ ಇಡುತ್ತದೆ (ಯೋಹಾನ 14:15, 21; 1 ಯೋಹಾನ 5:3). ಪ್ರೀತಿ ಮತ್ತು ದೇವರ ಭಯ ಎರಡನ್ನೂ ನಾವು ಬೆಳೆಸಿಕೊಳ್ಳತಕ್ಕದ್ದು. ದೇವರಿಗಾಗಿರುವ ನಮ್ಮ ಪ್ರೀತಿಯು ಆತನ ಸೇವೆ ಮಾಡಲು ನಮ್ಮನ್ನು ಆತನ ಸಮೀಪಕ್ಕೆ ತರಬೇಕು ಹಾಗೂ ದೇವರ ಬಗ್ಗೆ ನಮ್ಮ ಭಯವು ಆತನ ಚಿತ್ತವನ್ನು ಮಾಡಲು ಸಾಕಷ್ಟು ಗೌರವಿಸುವದಕ್ಕೆ ನಮ್ಮನ್ನು ನಡಿಸತಕ್ಕದ್ದು (1 ಪೇತ್ರ 1:17).

ಹೀಗೆ ಹೇಳಿದ ಎಲ್ಲವೂ ನಾವು ನರಕಕ್ಕೆ ಹೋಗಲು ಬಯಸುವದಿಲ್ಲ ಎಂಬುದನ್ನು ಮನವೊಲಿಸಲು ಸಾಕಷ್ಟಾಗುತ್ತದೆ. ನರಕವು ನಮಗಾಗಿ ರೂಪಿಸಲ್ಪಟ್ಟದ್ದಲ್ಲ. ಆದರೆ ಸೈತಾನನಿಗಾಗಿಯೂ ಅವನ ದೂತರಿಗಾಗಿಯೂ ರಚಿಸಲ್ಪಟ್ಟಿದೆ. ಜಗತ್ತಿನ ಚರಿತ್ರೆಯಲ್ಲಿ ಸೈತಾನನು ಕೊಟ್ಟ ತೊಂದರೆಯ ನಿಮಿತ್ತವಾಗಿ ದೇವರು ಕೂಡಿಸಬಹುದಾದ ಅತೀ ಉಷ್ಣತೆಯುಳ್ಳ ನರಕವು ಸದಾಕಾಲವೂ ಅವನಿಗೆ ಯೋಗ್ಯವಾದದ್ದಾಗಿದೆ. ದೇವರಿಗೆ ವಿಧೇಯರಾಗದವರು, ಸೈತಾನನನ್ನು ಹಿಂಬಾಲಿಸುವವರು ತಮ್ಮ ಪಾಪಗಳ ದಂಡನೆಗಾಗಿ ಇದಕ್ಕಿಂತಲೂ ಹೆಚ್ಚಾಗಿ ಅರ್ಹರಾಗಿದ್ದಾರೆಂಬುದನ್ನು ಅರಿತು ಕೊಳ್ಳತಕ್ಕದ್ದು.

ನಮ್ಮ ಅತೀ ದೊಡ್ಡ ಗುರಿಯು ಪರಲೋಕವನ್ನು ತಲುಪುವುದು ಹಾಗೂ ದಂಡನೆಯನ್ನು ತಪ್ಪಿಸಿ ಕೊಳ್ಳುವುದು. ಪರಲೋಕದ ಒಂದು ಕೀಳಾದ ಸ್ಥಳವು, ಅಂಥದ್ದು ಪರಲೋಕದಲ್ಲಿದ್ದರೆ, ನರಕದಲ್ಲಿಯ ಅತೀ ಉತ್ತಮವಾದ ಸ್ಥಳಕ್ಕಿಂತ, ಅಂಥದ್ದು ಇದ್ದರೆ, ಹೆಚ್ಚಾಗಿ ಅದನ್ನು ಅಪೇಕ್ಷಿಸಬಹುದು. ದೇವರು ಬಯಸುವ ರೀತಿಯಲ್ಲಿ ನಾವು ಜೀವಿಸುವದರಿಂದ ನರಕದ ಭಯಾನಕತೆಗಳನ್ನು ನಾವು ತಪ್ಪಿಸಿಕೊಳ್ಳಬಹುದು. ಹಾಗೂ ಇತರರು ಪರಲೋಕಕ್ಕೆ ಹೋಗುವಂತೆ ಸಿದ್ಧಪಡಿಸಲು ಸಹಾಯ ಮಾಡಬಹುದು.

# ಪರಲೋಕದ ಮುನ್ನೋಟ

ಯೇಸು ಮಾಡಿದ ಒಂದು ಕುತೂಹಲಕರವಾದ ವಾಗ್ದಾನವು, “ಪರಲೋಕ ದಲ್ಲಿಯ ನಿಮ್ಮ ಬಹುಮಾನವು ದೊಡ್ಡದು” (ಮತ್ತಾಯ 5:12; ಲೂಕ 6:23) ಎಂಬುದು. ಕ್ರೈಸ್ತರಾದ ನಮಗೆ ಪರಲೋಕದಲ್ಲಿಯ ಜೀವನದ ಬಗ್ಗೆ ನಿರೀಕ್ಷೆಯಿದೆ (ಎಫೆಸ 4:4). ಅದು ಮಹಿಮೆಯಲ್ಲಿ ಅಪಾರವಾದದ್ದಾಗಿದೆ. ಕ್ರೈಸ್ತರಾಗಿರುವದನ್ನು ಯೋಗ್ಯವಾದದ್ದನ್ನಾಗಿ ಮಾಡುವ ಒಂದು ಆಶೀರ್ವಾದ ಅದಾಗಿದೆ. ಬೇರೆ ಯಾವ ಜನಾಂಗದಲ್ಲಿಯೂ ಪರಲೋಕವನ್ನು ಕುರಿತು ಅಷ್ಟು ಸಂಖ್ಯೆಯಲ್ಲಿ ಸಂಗೀತಗಳು ಇರುವದಿಲ್ಲ. ಇಲ್ಲವೇ ಭವಿಷ್ಯದ ಮನೆಯ ಬಗ್ಗೆ ಅಷ್ಟು ಸಲ ಹಾಡುವಂಥದ್ದು ಇರುವದಿಲ್ಲ. ಪರಲೋಕದ ನಮ್ಮ ನಿರೀಕ್ಷೆಯು, ಇತರರನ್ನು ದುಃಖಕ್ಕೂ, ನಿರಾಶೆಗೂ ನಡಿಸುವ ಅನೇಕ ಕಷ್ಟಗಳ, ಭಾರಗಳ ಮುಖಾಂತರ ಸಂತೋಷದೊಂದಿಗೆ ನಡೆಸುತ್ತದೆ (1 ಥೆಸಲೊನೀಕ 4:13).

“ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿ ಯಾಗಿ ಇರಬೇಕೆಂತಲೂ ಬಂದೆನು” (ಯೋಹಾನ 10:10) ಎಂದು ಯೇಸು ಹೇಳಿದನು. ಸಮೃದ್ಧ ಜೀವಿತವು ಸಮಸ್ಯೆಗಳಿಲ್ಲದೇ ಇರುವದಿಲ್ಲ. “ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗುವರು” (2 ತಿಮೊಥೆ 3:12) ಎಂದು ಪೌಲನು ಬರೆದನು. ಪೌಲನು ಸಹಿಸಿದ ಹಿಂಸೆಯು, “ಈ ಜೀವಮಾನಕಾಲದ ಪೂರ್ತಿಗೆ ನಾವು ಕ್ರಿಸ್ತನಲ್ಲಿ ನಿರೀಕ್ಷೆಯಿಟ್ಟು ಕೊಂಡಿದ್ದೇ ಹೊರತು ಮತ್ತೇನೂ ಇಲ್ಲದಿದ್ದರೆ ಎಲ್ಲಾ ಮನುಷ್ಯರಲ್ಲಿಯೂ ನಿರ್ಭಾಗ್ಯರೇ ಸರಿ” (1 ಕೊರಿಂಥ 15:19) ಎಂದು ಹೇಳಲು ನಡೆಸಿತು. ಕ್ರಿಸ್ತನಿಗಾಗಿ ತಾನು ಸಹಿಸಿದ ಕಷ್ಟಗಳ ಬಗ್ಗೆ ಹೀಗೆ ಬರೆದನು: “ನಾನು ಎಫೆಸದಲ್ಲಿ ಮೃಗಗಳೊಂದಿಗೆ ಯುದ್ಧಮಾಡಿದ್ದು ಕೇವಲ ಮಾನುಷಾಭಿಪ್ರಾಯದಿಂದಾದರೆ ನನಗೇನು ಪ್ರಯೋಜನ? ಸತ್ತವರು ಎದ್ದು ಬರುವದಿಲ್ಲವಾದರೆ - ತಿನ್ನೋಣ, ಕುಡಿಯೋಣ, ನಾಳೆ ಸಾಯುತ್ತೇವಲ್ಲಾ” (1 ಕೊರಿಂಥ 15:32; ಯೆಶಾಯ 22:13 ನೋಡಿರಿ).

ಹೊಸ ಒಡಂಬಡಿಕೆಯು ನಮಗೆ ಮುನ್ನೋಡಲು ಬಹಳವಾದದ್ದನ್ನು ಕೊಡುತ್ತದೆ. ರಕ್ಷಿಸಲ್ಪಟ್ಟವರ ನಿಶ್ಚಿತವಾದ ಮನೆಯ ಅರ್ಥದಲ್ಲಿ ಕೊಡಲ್ಪಟ್ಟ ಪರಲೋಕವು ಬಹಳ ಸಲ ಬೈಬಲಿನಲ್ಲಿ ನಮೂದಿಸಲ್ಪಟ್ಟಿರುವದಿಲ್ಲ. ಇಲ್ಲವೇ ವಿವರವಾಗಿ ವಿವರಿಸಲ್ಪಟ್ಟಿರುವದಿಲ್ಲ; ಆದರೆ ಅನೇಕ ಸಮಯಗಳಲ್ಲಿ ಪರಲೋಕದ ಆಶೀರ್ವಾದದಂತೆ ಸೂಚಿಸಲ್ಪಟ್ಟಿದೆ.

ಪರಲೋಕದಲ್ಲಿಯ ಮನೆಯ ಕ್ರೈಸ್ತರ ನಿರೀಕ್ಷೆಯು ನಮಗೆ ಆನಂದವನ್ನು ತರುತ್ತದೆ (ರೋಮಾಪುರ 12:12). ಹಳೇ ಒಡಂಬಡಿಕೆಯ ಅಧೀನತೆಯಲ್ಲಿದ್ದವರಿಗೆ ಮಾಡಿದ ವಾಗ್ದಾನಕ್ಕಿಂತ ಇದು ಹೆಚ್ಚು ಉತ್ತಮವಾದ ವಾಗ್ದಾನವಾಗಿದೆ (ಇಬ್ರಿಯ

8:6; 10:34). ಅವರು ತಮ್ಮೊಂದಿಗೆ ದೇವರು ಮಾಡಿದ ಒಡಂಬಡಿಕೆಯನ್ನು ಕೈಕೊಂಡರೆ ದೀರ್ಘಾಯುಷ್ಯ ಮತ್ತು ಸಮೃದ್ಧಿಯೊಂದಿಗೆ ಕಾನಾನ್ ದೇಶದ ವಾಗ್ದಾನವನ್ನು ಹೊಂದಿದರು (ಧರ್ಮೋಪದೇಶಕಾಂಡ 4:13; 5:33). ನಮಗೆ ವಾಗ್ದಾನ ಮಾಡಿದ್ದೆಲ್ಲವೂ ತನ್ನ ಯಾಜಕತ್ವ ಸ್ಥಿತಿಗೆ ಪುನಃ ಸ್ಥಾಪಿಸಲ್ಪಟ್ಟ ಭೂಲೋಕದ ಸ್ಥಳವಷ್ಟೇ ಆಗಿದ್ದರೆ, ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ನಮಗೆ ದೇವರ ವಾಗ್ದಾನಗಳು ನಮ್ಮ ನಿರೀಕ್ಷೆಯ ಮೂಲವು, ಇಸ್ರಾಯೇಲ್ಯರಿಗೆ ದೇವರು ಕೊಟ್ಟ ನಾಡಿನ ವಾಗ್ದಾನಗಳಿಗಿಂತ ಎಷ್ಟೋ ಹೆಚ್ಚು ಉತ್ತಮವಾದವುಗಳಾಗಿರುತ್ತವೆ (ಧರ್ಮೋಪದೇಶಕಾಂಡ 28:1-14). ಹೀಗಿರುವಾಗ, ನಮ್ಮ ನಿರೀಕ್ಷೆಯು ಎಂದೆಂದಿಗೂ ಪರಲೋಕದಲ್ಲಿಯ ಸ್ಥಳವಾಗಿದೆ (1 ಪೇತ್ರ 1:3, 4). ಆದರೆ ಭೂಲೋಕದಲ್ಲಿ ಸಮೃದ್ಧಿ ಹಾಗೂ ದೀರ್ಘಾಯುಷ್ಯದೊಂದಿಗಿನ ಭೂಮಿಯ ಒಂದು ಸ್ಥಳವಾಗಿರುವದಿಲ್ಲ. ಈ ಭೂಲೋಕದಲ್ಲಿ ನಾವೆಷ್ಟು ಕಾಲ ಜೀವಿಸಿದರೂ ಇಲ್ಲಿ ದೇವರ ಆಶೀರ್ವಾದವನ್ನು ಅನುಭವಿಸಿದರೂ, ಪ್ರಪಂಚದ ಜೀವಿತವು ತಾತ್ಕಲಿಕವಾದದ್ದಾಗಿದೆ. ಬಾಹ್ಯ ಮನುಷ್ಯನು ದಿನದಿಂದ ದಿನಕ್ಕೆ ಬಾಡಿ ಹೋಗುತ್ತಿದ್ದಾನೆ (2 ಕೊರಿಂಥ 4:16); ಒಂದು ದಿನ ನಾವು ಪ್ರತಿಯೊಬ್ಬರೂ ಸತ್ತು ಹೋಗುತ್ತೇವೆ (ಇಬ್ರಿಯ 9:27). ಅದರ ನಂತರ ಈ ಭೂಮಿಯ ಮೇಲೆ ಬೇರೆ ಯಾವುದೇ ಜೀವಿತವನ್ನು - ಇನ್ನೊಬ್ಬ ಮಾನವ ಜೀವಿಯಾಗಿ, ಇನ್ನೊಂದು ಬೇರೆ ಜೀವಿಯಾಗಿ ನಾವು ಅನುಭವಿಸುವದಿಲ್ಲ. ಈ ಜೀವಿತವನ್ನು ದಾಟಿದ ಜೀವಿತಕ್ಕೆ ನಾವು ಸೇವೆಮಾಡಿದ ದೇವರೊಂದಿಗೆ ಪರಲೋಕದಲ್ಲಿಯಾಗಲೀ (ಮತ್ತಾಯ 25:34 ನೋಡಿರಿ) ಇಲ್ಲವೇ ಆತನ ಸೇವೆ ಮಾಡುವದನ್ನು ತಿರಸ್ಕರಿಸುವವರಿಗಾಗಿ ಸಿದ್ಧ ಪಡಿಸಿದ ನಿತ್ಯ ಬೆಂಕಿಯಲ್ಲಿ (ಮತ್ತಾಯ 25:41 ನೋಡಿರಿ) ಇದರ ತೀರ್ಪು ದೊರೆಯುವುದು.

**ಪರಲೋಕವು ಹೇಗಿರುವುದು?**

ಬೈಬಲಿನಲ್ಲಿ ವಿವರಿಸಲ್ಪಟ್ಟಂತೆ ಪರಲೋಕವನ್ನು ಅರ್ಥ ಮಾಡಿಕೊಳ್ಳುವದಕ್ಕಾಗಿ ಮೂರು ಭಿನ್ನವಾದ ಕ್ಷೇತ್ರಗಳಲ್ಲಿ ಉಪಯೋಗಿಸಿದ "ಪರಲೋಕವನ್ನು" ನಾವು ಅರಿತುಕೊಳ್ಳಬೇಕು (2 ಕೊರಿಂಥ 12:2-4): (1) ಮೋಡಗಳಿರುವ ಆಕಾಶ (ಧರ್ಮೋಪದೇಶಕಾಂಡ 11:11) ಮತ್ತು ಹಕ್ಕಿಗಳು ಹಾರಾಡುವ ಸ್ಥಳ (ಕೀರ್ತನೆ 79:2), (2) ಚುಕ್ಕೆಗಳಿಂದಲೂ ನಕ್ಷತ್ರರಾಶಿಗಳಿಂದಲೂ ತುಂಬಿದ ವಿಶ್ವ (ಆದಿಕಾಂಡ 1:14-18; ಧರ್ಮೋಪದೇಶಕಾಂಡ 1:10), ಹಾಗೂ (3) ದೇವರ ವಾಸಸ್ಥಳ, ಭೂಲೋಕದಿಂದ ವಿಮೋಚಿತರಾದವರೆಲ್ಲರೂ ಸದಾಕಾಲವೂ ಅಲ್ಲಿ ಜೀವಿಸುವರು (1 ಪೇತ್ರ 1:3, 4). ಈ ಕೊನೆಯ ವಿಷಯವು ನಮ್ಮ ಪಾಠದ ವಿಷಯವಾಗಿದೆ.

*"ಪರಲೋಕ ರಾಜ್ಯ" ಎಂಬ ಮಾತು (1) ದೇವರ ನಿತ್ಯರಾಜ್ಯವನ್ನು (ಮತ್ತಾಯ 13:43), (2) ರಕ್ಷಿಸಲ್ಪಟ್ಟವರಿಗಾಗಿ ಸಿದ್ಧವಾದ ರಾಜ್ಯವನ್ನು (ಮತ್ತಾಯ 25:34) ಹಾಗೂ (3) ಕ್ರಿಸ್ತನು ಪ್ರಸಂಗಿಸಿದ ಆತನ ರಾಜ್ಯವು ಸಮೀಪಿಸಿರುವ ಹಾಗೂ ಅದಕ್ಕಾಗಿ ಪ್ರಸಂಗಿಸಲು ಇತರರನ್ನು ಕಳುಹಿಸಿದ್ದನ್ನು ಸೂಚಿಸುತ್ತದೆ.* ರಾಜ್ಯವು "ಪರಲೋಕ ರಾಜ್ಯ" (ಮತ್ತಾಯ 4:17); "ದೇವರ ರಾಜ್ಯ" (ಮಾರ್ಕ 1:15); "ನನ್ನ ರಾಜ್ಯ" (ಲೂಕ 22:30) ಹಾಗೂ "ಆತನ ಪ್ರಿಯ ಕುಮಾರನ ರಾಜ್ಯ" (ಕೊಲೊಸ್ಸೆ 1:13) ಎಂದು ಹೇಳಲ್ಪಟ್ಟಿದೆ. ಈ ಮಾತುಗಳ ಮುಖಾಂತರ ಒಂದುಗೂಡಿಸುವ ಅರ್ಥದಲ್ಲಿ ಅವುಗಳನ್ನು ಬಂಧಿಸುತ್ತದೆ. ಯಾಕಂದರೆ ಅವುಗಳಲ್ಲಿ ಪ್ರತಿಯೊಂದು ಪರಲೋಕದ ಆಳ್ವಿಕೆಗೆ ಸಂಬಂಧಿಸಿದೆ. ಕ್ರಿಸ್ತನು ಪ್ರಸಂಗಿಸಿದ ಆತನ ವಿಶೇಷ ಆಳ್ವಿಕೆಯು ಸಮೀಪದಲ್ಲಿತ್ತು (ಮತ್ತಾಯ 4:17). ಆತನ ದಿವಾರೋಹಣದಲ್ಲಿ ಪ್ರಾರಂಭವಾಯಿತು (ಎಫೆಸ 1:19-23) ಹಾಗೂ ಆತನು ಹಿಂದಿರುಗಿ ಬರುವಾಗ ಅಂತ್ಯಗೊಳ್ಳುವುದು (1 ಕೊರಿಂಥ 15:24). ತಮ್ಮ ನಿತ್ಯ ಬಹುಮಾನವಾಗಿ ರಕ್ಷಿಸಲ್ಪಟ್ಟವರು ಪ್ರವೇಶಿಸುವ ರಾಜ್ಯವನ್ನು ಈ ಪದವು ಒತ್ತಿಹೇಳುವುದು (ಮತ್ತಾಯ 25:34). ಹಿನ್ನೆಲೆಯು ಮಾತ್ರವೇ ಪ್ರತಿಯೊಂದು ವಾಕ್ಯದಲ್ಲಿ ಉಪಯೋಗಿಸಲ್ಪಟ್ಟ ಮಾತಿನ ಅರ್ಥವೇನೆಂಬುದನ್ನು ಸೂಚಿಸುವುದು.

ಪರಲೋಕವು ಸ್ಪರ್ಷಿಸಲ್ಪಡಲಾಗದ್ದೂ ಪ್ರಾಕೃತಿಕ ಆಯಾಮವಲ್ಲದ್ದೂ ಆಗಿರುವುದರಿಂದ ಅದನ್ನು ವಿವರಿಸಲು ಉಪಯೋಗಿಸಿದ ಪ್ರಾಕೃತಿಕ ಮಾತುಗಳು ಆ ಆತ್ಮಿಕ ರಾಜ್ಯದ ವಾಸ್ತವಿಕತೆಗಳನ್ನು ಸೂಚಿಸಬಹುದೆಂದು ನಾವು ಅರ್ಥ ಮಾಡಿಕೊಳ್ಳಬೇಕು. ಈ ರಾಜ್ಯದ ಬಗ್ಗೆ ಪೌಲನು ಹೀಗೆ ಬರೆದನು, "ನಾವು ಕಾಣುವಂಥದನ್ನು ಲಕ್ಷಿಸದೆ ಕಾಣದಿರುವಂಥದನ್ನು ಲಕ್ಷಿಸುವವರಾಗಿದ್ದೇವೆ. ಕಾಣುವಂಥದು ಸ್ವಲ್ಪಕಾಲ ಮಾತ್ರ ಇರುವದು; ಕಾಣದಿರುವಂಥದು ಸದಾಕಾಲವೂ ಇರುವದು" (2 ಕೊರಿಂಥ 4:17, 18). ಭೂಲೋಕದ ಮಾತುಗಳಲ್ಲಿ ದೇವರು ಪರಲೋಕವನ್ನು ವಿವರಿಸಿದರೂ ಅದನ್ನು ಪ್ರಾಕೃತವಾದದ್ದೆಂದು ಯೋಚಿಸತಕ್ಕದ್ದಲ್ಲ.

ಭೂಲೋಕವನ್ನು ಆತ್ಮಿಕ ವಾಸಸ್ಥಾನವನ್ನಾಗಿ ಹೊಸದಾಗಿ ರೂಪಿಸುವುದಕ್ಕಾಗಲೀ ಇಲ್ಲವೇ ಬದಲಾಯಿಸುವದಕ್ಕಾಗಲೀ ಆಗುವದಿಲ್ಲ. ಅದು ಹಾಗಿದ್ದರೆ "ಇಗೋ, ನಾನು ಎಲ್ಲವನ್ನೂ ಹೊಸದು ಮಾಡುತ್ತೇನೆ" (ಪ್ರಕಟನೆ 21:5) ಎಂದು ಹೇಳಿದ, ಸಿಂಹಾಸನದ ಮೇಲೆ ಕುಳಿತಿರುವಾತನನ್ನು ನಾವು ಗಂಭೀರವಾಗಿ ತೆಗೆದು ಕೊಳ್ಳುವದಿಲ್ಲ. ಇಲ್ಲವೇ, "ತರುವಾಯ ನೂತನಾಕಾಶಮಂಡಲವನ್ನೂ ನೂತನ ಭೂಮಂಡಲವನ್ನೂ ಕಂಡೆನು. ಮೊದಲಿದ್ದ ಆಕಾಶಮಂಡಲವೂ ಮೊದಲಿದ್ದ ಭೂಮಂಡಲವೂ ಇಲ್ಲದೆ ಹೋದವು;

…” (ಪ್ರಕಟನೆ 21:1) ಎಂಬ ಹೇಳಿಕೆಯನ್ನು ಅಕ್ಷರಶಃವಾಗಿ ತೆಗೆದು ಕೊಳ್ಳುವದಿಲ್ಲ.

ಹೊಸ ಯೆರೂಸಲೇಮ, ರಕ್ಷಿಸಲ್ಪಟ್ಟವರ ಪಟ್ಟಣವು ಭೂಲೋಕದಲ್ಲಿ ಅತೀ ಬೆಲೆಯುಳ್ಳ ವಸ್ತುಗಳಿಂದ ಮಾಡಲ್ಪಟ್ಟಿರುವಂತೆ ವಿವರಿಸಲ್ಪಟ್ಟಿದೆ (ಪ್ರಕಟನೆ 21:11-21). ಅಂಥ ವಿವರಣೆಯು ಭಯ ಭಕ್ತಿಯನ್ನು ಹುಟ್ಟಿಸುವಂಥದ್ದಾಗಿದ್ದು ಮಾನವ ಕಲ್ಪನೆಯನ್ನು ಮೀರಿದ್ದಾಗಿದೆ. ಮರ್ತ್ಯರಾದ ನಮಗೆ ಆ ಚಿತ್ರವಿರುವಂತೆ ದೇವರು ಬಯಸಿದನು. ಆತನ ರಾಜ್ಯದಲ್ಲಿ ನಾವೆಲ್ಲರು ಮಹಿಮೆ ಪಡಿಸಲ್ಪಡು ವಾಗ ಭಯಭಕ್ತಿಯುಳ್ಳವರಾಗಿರುವೆವು (1 ಥೆಸಲೊನೀಕ 2:12; ಇಬ್ರಿಯ 2:10). ಅದರ ವೈಭವವನ್ನು ಮಹಿಮೆಯನ್ನು ನೋಡಿ (ರೋಮಾಪುರ 8:18), ಮಹಿಮೆಯಲ್ಲಿ ಪಾಲುಗಾರರಾಗುವೆವು (1 ಪೇತ್ರ 5:1). ಆತನು ತನ್ನ “ಪರಿಶುದ್ಧರ ಮುಖಾಂತರ ಮಹಿಮೆಯನ್ನು ಹೊಂದುವನು” (2 ಥೆಸಲೊನೀಕ 1:10). ಇದು ದಾಟಿಹೋಗು ವಂಥದ್ದಲ್ಲ, ಆದರೆ ಪರಲೋಕ ಪಟ್ಟಣದವರಾದ ನಮಗೆ “ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ” (2 ಕೊರಿಂಥ 4:17). ಭೂ ಲೋಕಕ್ಕೆ ಹೋಲಿಸಿದರೆ ಅದು “ಉತ್ತಮವಾಗಿಯೂ, ಸ್ಥಿರವಾಗಿಯೂ ಇರುವ ಆಸ್ತಿಯಾಗಿದೆ” (ಇಬ್ರಿಯ 10:34), “ಉತ್ತಮ ದೇಶ ಅಂದರೆ ಪರಲೋಕವೆಂಬ ಉತ್ತಮ ದೇಶ” (ಇಬ್ರಿಯ 11:16) ಆಗಿರುವುದು.

ಪರಲೋಕದ ಅತೀ ಅದ್ಭುತಕರವಾದ ವಿಷಯವು ನಿತ್ಯತ್ವದಲ್ಲೆಲ್ಲಾ ದೇವರೊಂದಿಗೆ, ಯೇಸುವಿನೊಂದಿಗೆ, ಪರಿಶುದ್ಧಾತ್ಮನೊಂದಿಗೆ (ಪ್ರಕಟನೆ 21:3), ಹಾಗೂ ಜೀವಿಸಿದ ರಕ್ಷಿಸಲ್ಪಟ್ಟ ಅದ್ಭುತವಾದ ಜನರೊಂದಿಗೆ ಸಂಬಂಧದಲ್ಲಿರುವುದು. ಪರಲೋಕದಲ್ಲಿ ನಮಗಿರುವ ನಿತ್ಯವಾದ ಅನ್ಯೋನ್ಯತೆಗೆ ಭೂಲೋಕದಲ್ಲಿಯ ಯಾವುದೇ ಅನ್ಯೋನ್ಯತೆಯು ಹೋಲಿಸಲ್ಪಡಲಾರದು.

ಪರಲೋಕದ ಮಹಿಮೆಯ ಕಡೆಗೆ ನಾವು ಒಂದು ಕ್ಷಣ ದಿಟ್ಟಿಸಿ ನೋಡಿದರೆ ಹಾಗೂ ನಾವು ಅನುಭವಿಸುವ ಅನ್ಯೋನ್ಯತೆಯಲ್ಲಿ ನೋಡಿದರೆ ಅಲ್ಲಿಗೆ ಹೋಗು ವದರ ಬಗ್ಗೆ ಕುತೂಹಲ ಭರಿತರಾಗುವೆವು. ಅದರ ಬಗ್ಗೆ ಕನಸು ಕಾಣುತ್ತಲೇ ಎಚ್ಚರವಾಗಿರುವ ಪ್ರತಿಯೊಂದು ಕ್ಷಣವನ್ನು ಕಳೆಯುವೆವು. ಅದರ ಕಡೆಗೆ ಕಾರ್ಯಮಾಡುವೆವು. ಅದಕ್ಕಾಗಿ ಯೋಚಿಸುವೆವು. “ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಾ ಪದವಿಯನ್ನು ಆಲೋಚಿಸಿ ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದು ಎಣಿಸುತ್ತೇನೆ” (ರೋಮಾಪುರ 8:18) ಎಂದು ಪೌಲನು ಬರೆದಿದ್ದಾನೆ.

**ಪರಲೋಕದಲ್ಲಿ ಏನು ಇರುವುದು?**

ಪರಲೋಕವನ್ನು ಅರ್ಥಮಾಡಿಕೊಳ್ಳುವಂತೆ ನಮಗೆ ಸಹಾಯ ಮಾಡಲು

ಸಂಕೇತಗಳು ಉಪಯೋಗಿಸಲ್ಪಟ್ಟಿವೆ. ಸೂರ್ಯ, ಚಂದ್ರ, ಇಲ್ಲವೇ ದೀಪ ದಂಥ ಭೂಲೋಕದಲ್ಲಿ ನಮಗೆ ಅವಶ್ಯವಾಗಿರುವಂಥ ವಸ್ತುಗಳು ಪರ ಲೋಕದಲ್ಲಿ ಇರುವದಿಲ್ಲ; ಅಲ್ಲಿ ಕತ್ತಲೆಯು ಇರುವದಿಲ್ಲ, ಯಾಕಂದರೆ ಕುರಿಮರಿಯಾದಾತನು (ಯೇಸುಕ್ರಿಸ್ತನು) ಬೆಳಕಾಗಿರುವನು (ಪ್ರಕಟನೆ 21:23, 25; 22:5). ದೇವರ ಕಡೆಗೆ ನಮಗೆ ನೇರವಾದ ಪ್ರವೇಶ ವಿರುವದರಿಂದ ದೇವಾಲಯದ ಅಗತ್ಯತೆಯು ಇರುವದಿಲ್ಲ; ಯಾಕಂದರೆ ದೇವರು ಮತ್ತು ಕುರಿಮರಿಯಾದಾತನು ದೇವಾಲಯವಾಗಿರುವನು (ಪ್ರಕಟನೆ 21:22).

ನಮಗೆ ದೈಹಿಕ ಆಹಾರದ ಅಗತ್ಯತೆಯಿರುವದಿಲ್ಲ. ಯಾಕಂದರೆ ಜೀವಜಲದ ನದಿಯಿಂದಲೂ ಜೀವವೃಕ್ಷದ ಫಲದಿಂದಲೂ ಜೀವವು ಸಂರಕ್ಷಿಸಲ್ಪಡುವುದು (ಪ್ರಕಟನೆ 21:1, 2). ನಾವು ದೇವರಿಂದ ಎಂದೂ ದೂರವಾಗಿರಲಾರೆವು. ಯಾಕಂದರೆ, "ಇಗೋ, ದೇವರ ನಿವಾಸವು ಮನುಷ್ಯರಲ್ಲಿ ಅದೆ; ಆತನು ಅವರೊಡನೆ ವಾಸಮಾಡುವನು, ಅವರು ಆತನಿಗೆ ಪ್ರಜೆಗಳಾಗಿರುವರು; ದೇವರು ತಾನೇ ಅವರ ಸಂಗಡ ಇರುವನು" (ಪ್ರಕಟನೆ 21:3). ದೇವರ ಸಿಂಹಾಸನವೂ ಕುರಿಮರಿಯಾದಾತನ ಸಿಂಹಾಸನವು ಅಲ್ಲಿರುವುದು. ಈ ಕಾರಣದಿಂದ ಅಲ್ಲಿ ಶಾಪಗ್ರಸ್ತವಾದದ್ದು ಇರುವದಿಲ್ಲ (ಪ್ರಕಟನೆ 22:3). ನಮ್ಮ ನೂತನ ವಾಸ ಸ್ಥಾನದಲ್ಲಿ ಕೇವಲ ನೀತಿಯು ಇರುವುದು (2 ಪೇತ್ರ 3:13).

**ನಾವು ಯಾವ ರೀತಿಯಲ್ಲಿ ಇರುವೆವು?**

ನಮ್ಮ ಪ್ರಾಕೃತ ದೇಹಗಳು ಆತ್ಮಿಕ ದೇಹಗಳಾಗಿ ಮಾರ್ಪಡುವವವು (1 ಕೊರಿಂಥ 15:44, 51-54). ನಾವು ಪ್ರವೇಶಿಸಲಿಕ್ಕಿರುವ ಆತ್ಮೀಯ ಪರಿಮಾಣಕ್ಕೆ ಪ್ರಾಕೃತ ದೇಹಗಳು ಅಯೋಗ್ಯವಾಗಿರುವವು, ಯಾಕಂದರೆ, "ರಕ್ತ ಮಾಂಸವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು" (1 ಕೊರಿಂಥ 15:50). ದೇವರ ಆತ್ಮಿಕ ರಾಜ್ಯವು ಆತನಿಗೆ ನೈಸರ್ಗಿಕವಾದದ್ದು ಯಾಕಂದರೆ ಆತನು ಆತ್ಮ ಸ್ವರೂಪನಾಗಿರುವನು (ಯೋಹಾನ 4:24) ಹಾಗೂ ದೇವದೂತರಿಗೂ ನೈಸರ್ಗಿಕವಾದದ್ದಾಗಿರುವುದು ಯಾಕಂದರೆ ಅವರೂ ಆತ್ಮಸ್ವರೂಪರಾಗಿರುವರು (ಇಬ್ರಿಯ 1:14). ಆ ಆಯಾಮದಲ್ಲಿ ದೇಹವು ಹೇಗಿರುವದೆಂಬುದನ್ನು ನಾವು ಅರ್ಥಮಾಡಿ ಕೊಳ್ಳಲಾರೆವು. ಆದರೆ, "ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು" (1 ಯೋಹಾನ 3:2) ಎಂಬ ಭರವಸೆಯಿದೆ. ದೇವರನ್ನು ನಾವು ನೋಡುವದಕ್ಕಾಗಿ ಆತನ ಆಯಾಮದಲ್ಲಿ ನಾವು ಪ್ರವೇಶಿಸತಕ್ಕದ್ದು. ಯಾಕಂದರೆ ಪ್ರಾಕೃತ ಜೀವಿಗಳು ದೇವರನ್ನು ನೋಡಲಾರರು (1 ತಿಮೊಥೆ 6:16).

ಯೇಸುವು, "ಎಲ್ಲವನ್ನೂ ತನಗೆ ಅಧೀನಮಾಡಿಕೊಳ್ಳಲಾಗುವ ಪರಾಕ್ರಮವನ್ನು ಸಾಧಿಸಿ ದೀನಾವಸ್ಥೆಯುಳ್ಳ ನಮ್ಮ ದೇಹವನ್ನು ರೂಪಾಂತರಪಡಿಸಿ ಪ್ರಭಾವ ವುಳ್ಳ ತನ್ನ ದೇಹದ ಸಾರೂಪ್ಯವಾಗುವಂತೆ ಮಾಡುವನು" (ಫಿಲಿಪ್ಪಿ 3:20, 21; RSV). ಇದು ಸಂಭವಿಸುವಾಗ, ನಾವು "ಆತನ ಮುಖವನ್ನು ನೋಡುವೆವು" (ಪ್ರಕಟನೆ 22:4), ನಮ್ಮ ಪ್ರಾಕೃತ ದೇಹದಲ್ಲಿ ನಾವು ಯಾರೂ ನೋಡಿ ಜೀವಿ ಸದ ಮುಖವು ಅದಾಗಿರುವುದು (ವಿಮೋಚನಾಕಾಂಡ 33:20).

ನಾವು ಬದಲಾಗುವಾಗ, ನಮಗೆ ಪರಲೋಕದ ಜೀವಿಗಳ ಮಹಿಮೆಯಿ ರುವುದು. ನಾವು ಕ್ರಿಸ್ತನೊಂದಿಗೆ "ಮಹಿಮೆ ಪಡಿಸಲ್ಪಡುವೆವು" (ರೋಮಾಪುರ 8:17). ಮಹಿಮೆ, ಗೌರವ ಮತ್ತು ಸಮಾಧಾನಗಳಲ್ಲಿ ಪ್ರವೇಶಿಸುವೆವು (ರೋಮಾಪುರ 2:7, 10). ನಮ್ಮ ನೂತನ ಸ್ಥಿತಿಯಲ್ಲಿ "ನಮ್ಮ ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವೆವು" (ಮತ್ತಾಯ 13:43). "ನಾವು ಮಣ್ಣಿನಿಂದ ಹುಟ್ಟಿದವನ ಸಾರೂಪ್ಯವನ್ನು ಧರಿಸಿಕೊಂಡಿರುವ ಪ್ರಕಾರ ಪರಲೋಕದಿಂದ ಬಂದಾತನ ಸಾರೂಪ್ಯವನ್ನೂ ಧರಿಸಿಕೊಳ್ಳಬೇಕು" (1 ಕೊರಿಂಥ 15:49).

ಇನ್ನು ಮುಂದೆಂದೂ ಸಾಯದಂತೆ "ನಿತ್ಯ ಜೀವದೊಂದಿಗೆ" ನಿತ್ಯ ಜೀವಿ ಗಳಾಗಿರುವೆವು (ಲೂಕ 20:36; ಪ್ರಕಟನೆ 21:4). "ನಿತ್ಯಜೀವ" ಅಂದರೆ ಜೀವದ ಗುಣಮಟ್ಟ ಹಾಗೆಯೇ ಜೀವದ ವ್ಯಾಪ್ತಿ ಎಂದರ್ಥ. ಅದು ಇಂದಿನ ಸ್ವಾಸ್ಥ್ಯಕ್ಕೆ[7] ಇಲ್ಲವೇ ಯೇಸುವಿನಲ್ಲಿ ನಂಬುವದಕ್ಕಾಗಿಯೂ ಮತ್ತು ಆತನ ಸೇವೆ ಮಾಡುವದಕ್ಕಾಗಿಯೂ ಬಹುಮಾನವಾಗಿ ಸ್ವೀಕರಿಸುವ ಜೀವಕ್ಕೂ ಸಂಬಂಧಿಸಿರುವುದು.[8]

**ನಾವೇನು ಮಾಡುತ್ತಿರುವೆವು?**

ನಾವು ಪರಲೋಕದಲ್ಲಿ ಏನು ಮಾಡುತ್ತಿರುವೆವು ಎಂಬುದರ ಬಗ್ಗೆ ಪೂರ್ಣ ವಿವರಣೆಗಳನ್ನು ದೇವರು ನಮಗೆ ಕೊಟ್ಟಿರುವದಿಲ್ಲ. ಇದು ಬಹುಶಃ ಒಳ್ಳೇ ಕಾರಣಕ್ಕಾಗಿರಬಹುದು. ಬಹಳ ಆಶ್ಚರ್ಯವಾಗಿರಲು ಆತ್ಮಿಕ ಜೀವಿಗಳು ಏನು ಮಾಡುವರು ಎಂಬುದನ್ನು ಯೋಚಿಸಲಾರೆವು. ಯಾಕಂದರೆ ನಾವು ಪ್ರಾಕೃತ - ಜೀವಿಗಳು. ನಮ್ಮ ಸಂತೋಷವು ಸಾಮಾನ್ಯವಾಗಿ ಪ್ರಾಕೃತ ಸಂಗತಿಗಳ ಮೇಲೆ ಅವಲಂಬಿಸಿರುವದರಿಂದ ಪರಲೋಕದ ಆತ್ಮಿಕ ಚಟುವಟಿಕೆಗಳನ್ನು ಕುರಿತು ಉತ್ತೇಜನಗೊಳ್ಳುವದರಲ್ಲಿ ತೊಂದರೆಯಿರುವುದು.

ಪರಲೋಕದಲ್ಲಿ ಕೇವಲ ಆನಂದವನ್ನು ಮಾತ್ರವೇ ನಾವು ತಿಳಿದಿರುವೆವು, ಯಾಕಂದರೆ ದೇವರು, "ಅವರ ಕಣ್ಣೀರನ್ನೆಲ್ಲಾ ಒರಸಿ ಬಿಡುವನು. ಇನ್ನು ಮರಣ ವಿರುವದಿಲ್ಲ, ಇನ್ನು ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವದಿಲ್ಲ;

ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು" (ಪ್ರಕಟನೆ 21:4). ನಾವು ದುಃಖಪಡಲು ಕಾರಣವಾದ ಪ್ರಾಪಂಚಿಕ ವಿಷಯಗಳು ಇಲ್ಲವೇ ನಮಗೆ ಶಾಪವಾಗಿದ್ದಂಥವುಗಳು ಇನ್ನು ಮುಂದೆ ಅಸ್ತಿತ್ವದಲ್ಲಿರುವದಿಲ್ಲ (ಪ್ರಕಟನೆ 22:3). ರಕ್ಷಿಸಲ್ಪಟ್ಟವರು ನಮ್ಮ ಒಡೆಯನ "ಸೌಭಾಗ್ಯದಲ್ಲಿ" ಪ್ರವೇಶಿಸುವರು (ಮತ್ತಾಯ 25:21, 23). ಈ ಜೀವನದ ಶ್ರಮೆಗಳಿಂದ ವಿಶ್ರಾಂತಿಪಡೆಯುವೆವು (ಪ್ರಕಟನೆ 14:13; ಇಬ್ರಿಯ 4:8-11).

ನಿತ್ಯತ್ವದಲ್ಲೆಲ್ಲಾ ನಾವು ಉಲ್ಲಾಸಿಸುವೆವು, ಯಾಕಂದರೆ, ನಾವು ತಂದೆಯೊಂದಿಗೆ (ಪ್ರಕಟನೆ 21:3), ಯೇಸುವಿನೊಂದಿಗೆ (ಯೋಹಾನ 12:26[9]), ದೇವದೂತರೊಂದಿಗೆ (ಲೂಕ 9:26) ಮತ್ತು ರಕ್ಷಿಸಲ್ಪಟ್ಟವರೊಂದಿಗೆ (ಮತ್ತಾಯ 13:43) ಇರುವೆವು. ನಾವು ಸಂತೋಷದಿಂದ ಯೇಸುವಿನ ಸೇವೆ ಮಾಡುವೆವು (ಪ್ರಕಟನೆ 22:3) ಹಾಗೂ ಆತನೊಂದಿಗೆ ಸದಾಕಾಲವೂ ಆಳುವೆವು (2 ತಿಮೊಥೆ 2:12; ಪ್ರಕಟನೆ 22:5). ಪರಿಶುದ್ಧರಲ್ಲಿ ಆತನು ಮಹಿಮೆ ಪಡಿಸಲ್ಪಡುವನು (2 ಥೆಸಲೊನೀಕ 1:10). ತನ್ನಿಂದ ರಕ್ಷಿಸಲ್ಪಟ್ಟವರಿಂದ ಬಹಳ ಗಂಭೀರವಾಗಿ ಗೌರವಿಸಲ್ಪಡತಕ್ಕದ್ದು ಎಂದರ್ಥವಾಗುತ್ತದೆ (ಫಿಲಿಪ್ಪಿ 2:10, 11). ಪರಲೋಕವು ಪ್ರೀತಿಯ, ಅನ್ಯೋನ್ಯತೆಯ ಹಾಗೂ ಉಲ್ಲಾಸದ ಅದ್ಭುತವಾದ ಸ್ಥಳವಾಗಿರುವುದು.

**ಪರಲೋಕಕ್ಕೆ ಯಾರು ಹೋಗುವರು?**

ಪರಲೋಕದ ಮಹಿಮೆಗಳು ಅರ್ಹತೆಯ ತಳಹದಿಯ ಮೇಲೆ ಕೊಡಲ್ಪಟ್ಟಿರುವದಿಲ್ಲ; ಆದರೆ ಕೃಪೆಯ ತಳಹದಿಯ ಮೇಲೆ ಕೊಡಲ್ಪಟ್ಟಿರುತ್ತದೆ (2 ಥೆಸಲೊನೀಕ 2:16). ನಮ್ಮ ಒಳ್ಳೇಕಾರ್ಯಗಳಿಂದ ಪರಲೋಕವನ್ನು ಸಂಪಾದಿಸಿಕೊಂಡಿದ್ದೇವೆಂದು ಕೊಚ್ಚಿಕೊಳ್ಳಲು ನಾವು ಶಕ್ತರಲ್ಲ (ಎಫೆಸ 2:8, 9; ತೀತ 3:5). "ಮಾಡಬೇಕಾದದ್ದನ್ನೇ ಮಾಡಿದ್ದೇವೆ" (ಲೂಕ 17:10) ಎಂದು ಮಾತ್ರವೇ ನಾವು ಹೇಳಬೇಕು.

ಪರಲೋಕವು ನಮಗೆ ಸ್ವಾಸ್ಥ್ಯವಾಗಿ ಕೊಡಲ್ಪಡುವುದು[10] ಸ್ವಾಸ್ಥ್ಯವು ಸಂಪಾದಿಸಲ್ಪಡುವದಿಲ್ಲ; ಅದು ಒಂದು ದಾನವಾಗಿದೆ. ಬಾಧ್ಯಸ್ಥರು, ದೇವರ ಮಕ್ಕಳು (ರೋಮಾಪುರ 8:16, 17; ಗಲಾತ್ಯ 3:6, 7, 29), ನೀರಿನಿಂದಲೂ ಆತ್ಮನಿಂದಲೂ ಹೊಸದಾಗಿ ಹುಟ್ಟುವದರಿಂದ (ಯೋಹಾನ 3:5) ನಾವು ದೇವರಿಂದ ಹುಟ್ಟುತ್ತೇವೆ (ಯೋಹಾನ 1:12, 13). ಈ ರೀತಿಯಲ್ಲಿ ನಾವು ದೇವರ ಮಕ್ಕಳೂ ವಿಶ್ವಾಸ ಹಾಗೂ ಬಾಪ್ತಿಸ್ಮದ ಮುಖಾಂತರ ಪರಲೋಕದ ಬಾಧ್ಯಸ್ಥರೂ ಆಗುತ್ತೇವೆ (ಗಲಾತ್ಯ 3:26, 27).

ಪರಲೋಕವನ್ನು ಪ್ರವೇಶಿಸದವರು ದೇವರಿಗೆ ದಂಗೆಯೇಳುವವರೂ

ಅನೈತಿಕ ಜೀವಿತ ಜೀವಿಸುವವರೂ ಆಗಿದ್ದಾರೆ (1 ಕೊರಿಂಥ 6:9, 10; ಗಲಾತ್ಯ 5:19-21). ಅವರು ಯೇಸುವಿನ ರಕ್ತದಿಂದ ಶುದ್ಧೀಕರಿಸಲ್ಪಡದೇ ಇದ್ದುದರಿಂದ, ಅವರು ಹೊಲೆಯಾಗಿ ಉಳಿದು ಪರಲೋಕವನ್ನು ಪ್ರವೇ ಶಿಸಲಾರರು (ಪ್ರಕಟನೆ 21:27; 2 ಪೇತ್ರ 3:13). ಪರಲೋಕದಲ್ಲಿ ಪ್ರವೇಶಿಸುವವರು ಯೇಸುವಿನ ರಕ್ತದಿಂದ ಶುದ್ಧೀಕರಿಸಲ್ಪಟ್ಟವರಾಗಿರುವರು (ಎಫೆಸ 5:25-27; ಕೊಲೊಸ್ಸೆ 1:19-22).

## ಮುಕ್ತಾಯ

ಆತನಿಗೆ ವಿಧೇಯರಾಗದವರನ್ನು ಸದಾಕಾಲಕ್ಕೂ ದೇವರು ದಂಡಿಸುವನು ಎಂಬ ಯೋಚನೆಯು ಭಯಾನಕವಾದದ್ದಾಗಿದೆ. ಅದು ಆತನ ವಾಕ್ಯದಲ್ಲಿದೆ. ಅನೀತಿವಂತರ ದಂಡನೆಯು ನೀತಿವಂತರ ಆಶೀರ್ವಾದಗಳಂತೆ ನಿತ್ಯವಾದ ದ್ದಾಗಿರುತ್ತದೆ. ಈ ನಿಶ್ಚಿತತೆಯು ನಾವು ಮಾಡುವ ಪ್ರತಿಯೊಂದರಲ್ಲಿಯೂ ದೇವರನ್ನು ಮೆಚ್ಚಿಸುವಂತೆ ನಮ್ಮನ್ನು ಪ್ರೋತ್ಸಾಹಿಸಬೇಕು. ಪರಲೋಕದಲ್ಲಿ ನಾವು ಆತನೊಂದಿಗೆ ಎಲ್ಲವನ್ನು ಹಂಚಿಕೊಂಡರೆ ಹಾಗೂ ಸೈತಾನನೊಂದಿಗೂ ಅವನ ದೂತನೊಂದಿಗೂ ನಿತ್ಯವಾದ ಬೆಂಕಿಯನ್ನು ತಪ್ಪಿಸಿಕೊಂಡರೆ ಪ್ರತಿಯೊಂದು ಪ್ರಯತ್ನವೂ, ಪ್ರತಿಯೊಂದು ಕಷ್ಟವು, ಸೇವೆಯ ಪ್ರತಿಯೊಂದು ನಿಮಿಷವೂ ಯೋಗ್ಯವಾದದ್ದಾಗುವುದು.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ನಿತ್ಯ ದಂಡನೆಯು ದೇವರ ಪ್ರೀತಿ, ದಯೆ ಮತ್ತು ಕೃಪೆಯೊಂದಿಗೆ ಸಾಮರಸ್ಯದಲ್ಲಿ ಇರಲಾರದು. ಈ ತೀರ್ಮಾನವು ಯಾಕೆ ತಪ್ಪಾಗಿರುತ್ತದೆ?
2. ಅವಿಧೇಯರು ನಿರ್ಮೂಲವಾಗುವರು ಎಂಬ ದೃಷ್ಟಿಕೋನವು ಯಾಕೆ ಸುಳ್ಳು ಬೋಧನೆಯಾಗಿದೆ?
3. ನರಕದಲ್ಲಿ ಯಾವ ರೀತಿಯ ದಂಡನೆಯನ್ನು ನಿರೀಕ್ಷಿಸಬಹುದು?
4. ಶಿಕ್ಷಿಸಲ್ಪಡುವವರನ್ನು ಪೌಲನು ಹೇಗೆ ವಿವರಿಸುತ್ತಾನೆ?
5. ನಮ್ಮ ಅತೀ ದೊಡ್ಡ ಗುರಿಯು ಯಾವುದಾಗಿರಬೇಕು?
6. ಹಳೇ ಧರ್ಮಶಾಸ್ತ್ರದ ಕೆಳಗಿದ್ದವರಿಗಾಗಿ ಮಾಡಿದ್ದಕ್ಕಿಂತ ಕ್ರೈಸ್ತರ ಪರಲೋಕದ ನಿರೀಕ್ಷೆಯು ಹೇಗೆ ಹೆಚ್ಚು ಉತ್ತಮವಾದ ವಾಗ್ದಾನವಾಗಿದೆ?
7. "ಪರಲೋಕವು" ಯಾವ ಮೂರು ವಿಧಗಳಲ್ಲಿ ಉಪಯಯೋಗಿಸಲ್ಪಟ್ಟಿದೆ?
8. ಈ ಭೂಲೋಕದಲ್ಲಿ ನಮಗೆ ಬೇಕಾಗಿರುವ ವಸ್ತುಗಳು ಪರಲೋಕದಲ್ಲಿ ಯಾಕೆ

ಇರುವದಿಲ್ಲ?

9. ಯಾರು ಪರಲೋಕಕ್ಕೆ ಹೋಗುವರು?

---

ಟಿಪ್ಪಣೆಗಳು

[1]ಓದಿರಿ: ರೋಮಾಪುರ 1:18; 2:8; 3:5; 12:19; ಎಫೆಸ 5:6; ಕೊಲೊಸ್ಸೆ 3:6; 2 ಥೆಸಲೊನೀಕ 1:8. [2]*ಗೆಹೆನ್ನ* ಎಂಬುದು ಹಿಬ್ರೂ ಪದದ ಗ್ರೀಕ್‌ದಲ್ಲಿ ಅಕ್ಷರಾನುವಾದ. ಎರಡು ಹಿಬ್ರೂ ಪದಗಳ ನ್ನು ಕೂಡಿಸಿದ್ದು *ge* ಅಂದರೆ "ಕೊಳ್ಳ" ಮತ್ತು Hinnon ಅಂದರೆ ಕೊಳ್ಳದ ಒಡೆಯ ಎಂದರ್ಥ. [3]ನೋಡಿರಿ. ಮತ್ತಾಯ 5:22, 29, 30; 10:28; 18:9; 23:15, 33; ಮಾರ್ಕ 9:43, 45, 47; ಲೂಕ 12:5; ಯಾಕೋಬ 3:6. [4]ನೋಡಿರಿ 2 ಅರಸುಗಳು 23:10; ನೋಡಿರಿ? 2 ಪೂರ್ವಕಾಲವೃತ್ತಾಂತ 28:3; 33:6; ಯೆರೆಮೀಯ 7:31, 32; 19:6. [5]ನೋಡಿರಿ ಮಾರ್ಕ 9:43; ಲೂಕ 3:17. [6]"ಪರಿಪೂರ್ಣ" ಎಂದು ಭಾಷಾಂತರಿಸಲ್ಪಟ್ಟ ಗ್ರೀಕ್ ಪದವು *telios,* ಇದರ ಅರ್ಥ "ಪ್ರೌಢ" ಎಂದಾಗುವುದು. [7]ನೋಡಿರಿ ಯೋಹಾನ 3:36; 5:24; 6:47, 54; 1 ಯೋಹಾನ 5:11, 13. [8]ಮತ್ತಾಯ 19:29; ಮಾರ್ಕ 10:31; ಲೂಕ 18:30; ಯೋಹಾನ 10:28; ರೋಮಾಪುರ 2:7; 6:22; 1 ತಿಮೊಥೆ 6:12. [9]ನೋಡಿರಿ ಯೋಹಾನ 14:3; 17:24; 2 ಕೊರಿಂಥ 5:6-8; ಫಿಲಿಪ್ಪಿ 1:23; ಕೊಲೊಸ್ಸೆ 3:4; 1 ಥೆಸಲೊನೀಕ 4:17. [10]ನೋಡಿರಿ ಅಪೊಸ್ತಲರ ಕೃತ್ಯಗಳು 20:32; ನೋಡಿರಿ 26:18; ಎಫೆಸ 1:11, 14, 18; 5:5; ಕೊಲೊಸ್ಸೆ 1:12; 3:24; ಇಬ್ರಿಯ 9:15; 1 ಪೇತ್ರ 1:4.

## 19

# ಮಾನಸಾಂತರ

ನಾವಿರುವ ಸನ್ನಿವೇಶಗಳು ನಮ್ಮ ಆತ್ಮಿಕ ಮೌಲ್ಯಗಳನ್ನು ನಿರ್ಧರಿಸುವಂತೆ ಕೆಲವು ಸಲ ಬಿಟ್ಟುಬಿಡುತ್ತೇವೆ. ಲೂಕ 16ರಲ್ಲಿಯ ಐಶ್ವರ್ಯವಂತನು ಮತ್ತು ಲಾಜರನ ಬಗ್ಗೆ ಹೇಳಿರುವ ಮರೆಯಲಾರದ ದೃಶ್ಯವು ಇದು ಹೇಗೆ ಸತ್ಯವೆಂದು ಉದಾಹರಿಸುತ್ತದೆ. ಐಶ್ವರ್ಯವಂತನಿಗೆ ಈ ಜೀವನದಲ್ಲಿ ಇತರರ ಬಗ್ಗೆ ಯಾವ ಆಲೋಚನೆಯಿರಲಿಲ್ಲ ಮತ್ತು ತನ್ನ ಆತ್ಮಿಕ ಅಗತ್ಯತೆಗಳ ಬಗ್ಗೆಯೂ ಯಾವುದೇ ವಿಚಾರವಿರಲಿಲ್ಲ. ತನ್ನ ಐಶ್ವರ್ಯದ ಅಪೇಕ್ಷೆ, ಆಕಾಂಕ್ಷೆಗಳ ಚಿಕ್ಕ ಜಗತ್ತಿನಲ್ಲಿಯೇ ಅವನ ಆಸಕ್ತಿಗಳು ನಿಯಮಿತಗೊಂಡಿದ್ದವು. ಮರಣದ ಸಮಯದಲ್ಲಿ ಅವನು ತಾನು ಮಾಡಿದ್ದರ ಪರಿಣಾಮವನ್ನು ಎದುರಿಸಲು ನಿತ್ಯತ್ವದೊಳಗೆ ಹೋದನು. ಅವನು ಐಶ್ವರ್ಯದಿಂದ "ಹೆಡಿಸ್ಸ್" ಎಂದು ಕರೆಯಲ್ಪಡುವ ಆತ್ಮಿಕ ಜಗತ್ತಿನ ಯಾತನೆಯೊಳಗೆ ಹೋದನು (ಲೂಕ 16:23).

ಮರಣಾನಂತರ ಅವನ ಪ್ರಾಧಾನ್ಯತೆಗಳು ಸಂಪೂರ್ಣವಾಗಿ ಬದಲಾದವು. ಇತರ ಎಲ್ಲಾ ಆಲೋಚನೆಗಳು ಬಾಡಿಹೋದವು. ಎರಡು ಮಹತ್ವದ ಯೋಚನೆಗಳಿಂದ ತುಂಬಿಕೊಂಡನು: ಮೊದಲನೆಯದು (ಬಹುಶಃ ಮೊದಲನೆಯ ಸಲ) ಅವನು ತನ್ನ ಪ್ರಾಣದ ಬಗ್ಗೆ ಚಿಂತಿಸುವವನಾದನು. ದಯೆಗಾಗಿ, ಕೃಪೆಗಾಗಿ ಬೇಡಿಕೊಂಡನು. "ತಂದೆಯೇ, ಅಬ್ರಹಾಮನೇ, ನನ್ನ ಮೇಲೆ ದಯವಿಟ್ಟು ಲಾಜರನನ್ನು ಕಳುಹಿಸು; ಅವನು ತನ್ನ ತುದಿಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಾಲಿಗೆಯನ್ನು ತಣ್ಣಗೆ ಮಾಡಲಿ; ಈ ಉರಿಯಲ್ಲಿ ಸಂಕಟ ಪಡುತ್ತೇನೆ ಎಂದು ಕೂಗಿ ಹೇಳಿದನು" (ಲೂಕ 16:24) ಎಂದು ಯೇಸು ಹೇಳಿದನು.

ಎರಡನೆಯದು, ತನ್ನ ಸಹೋದರುಗಳ ಆತ್ಮಿಕ ಪರಿಸ್ಥಿತಿಯ ಬಗ್ಗೆ ತನ್ನ ಚಿಂತನೆಯನ್ನು ವ್ಯಕ್ತಪಡಿಸಿದನು, ಬಹುಶಃ ಇದು ಅವನ ಜೀವನದಲ್ಲಿ ಮೊದಲನೆಯ ಸಲ ತನ್ನ ಸಹೋದರರ ಬಗ್ಗೆ ಯಾವುದೇ ಆತ್ಮಿಕ ಪ್ರೀತಿಯನ್ನು ವ್ಯಕ್ತಪಡಿಸಿದ್ದಾಗಿದೆ. ಕೆಲವೇ ಕ್ಷಣಗಳ ಯಾತನೆಯು ಅವನಿಗೆ ಮಿಶನರಿ ಹೃದಯವನ್ನು ಕೊಟ್ಟಿತು. ಅವನು ಬೇಡಿಕೊಂಡನು,

> ಆಗ ಅವನು - ಅಪ್ಪಾ, ಹಾಗಾದರೆ ಲಾಜರನನ್ನು ನನ್ನ ತಂದೆಯ ಮನೆಗೆ ಕಳುಹಿಸ ಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆ. ನನಗೆ ಐದು ಮಂದಿ ಅಣ್ಣತಮ್ಮಂದಿರಿದ್ದಾರೆ; ಅವರು ಸಹ ಈ ಯಾತನೆಯ ಸ್ಥಳಕ್ಕೆ ಬಂದಾರು; ಬಾರದಂತೆ ಅವನು ತಾನು ಕಂಡದ್ದನ್ನು ಅವರಿಗೆ ಚೆನ್ನಾಗಿ ಹೇಳಲಿ (ಲೂಕ 16:27, 28).

ಅವನ ಸಹೋದರರು ಇತರರಂತೆ ಧರ್ಮಶಾಸ್ತ್ರವನ್ನೂ ಪ್ರವಾದಿಗಳ ಗ್ರಂಥಗಳನ್ನೂ ಓದಲಿ ಎಂದು ಅವನಿಗೆ ಹೇಳಲ್ಪಟ್ಟಾಗ, ಅವನು, "ತಂದೆಯೇ, ಅಬ್ರಹಾಮನೇ, ಹಾಗಲ್ಲ; ಸತ್ತವರ ಕಡೆಯಿಂದ ಒಬ್ಬನು ಅವರ ಬಳಿಗೆ ಹೋದರೆ ಅವರು ದೇವರ ಕಡೆಗೆ ತಿರುಗಿ ಕೊಳ್ಳುವರು ಅಂದನು" (ಲೂಕ 16:30). ಅವನು ಎಂದಾದರೂ ಮಾತಾಡಿದ್ದರಲ್ಲಿ "ಮಾನಸಾಂತರ" ಎಂಬ ಪದವು ಮೊದಲನೆಯ ಸಲ ಹೇಳಿದ್ದಾಗಿರುವುದೋ? ಮರಣವು ಅವನು ಯೋಚಿಸುವುದನ್ನೂ ಅವನ ಆಸಕ್ತಿಗಳನ್ನೂ ಬದಲಾಯಿಸಿತು. ತನ್ನ ಸಹೋದರರಿಗೆ ಯಾವುದರ ಅಗತ್ಯತೆಯಿದೆ ಎಂಬುದನ್ನು ಮಾರ್ಪಾಟುಗೊಳಿಸುವ ಮಾನಸಾಂತರವನ್ನು ಅವನು ತಿಳಿದು ಕೊಂಡನು.

ಸಮಯವು ಹಾಗೂ ನಿತ್ಯತ್ವವು ಜೀವನದ ದೊಡ್ಡ ವಿಷಯವು ಮಾನಸಾಂತರ ಎಂಬುದರ ತಿಳುವಳಿಕೆಯನ್ನು ನಮ್ಮಲ್ಲಿ ಹುಟ್ಟಿಸುವುದು. ಮರಣವು ನಮ್ಮನ್ನು ಬಲವಾಗಿ ಹೊಡೆಯುವವರೆಗೆ ಇದನ್ನು ಅರ್ಥ ಮಾಡಿಕೊಳ್ಳಲು ಕಾಯುವುದು ಬೇಡ. "ಹಾಗೆ ಭಾವಿಸಕೂಡದೆಂದು ನಿಮಗೆ ಹೇಳುತ್ತೇನೆ. ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಹಾಗೆಯೇ ಹಾಳಾಗಿ ಹೋಗುವಿರಿ" (ಲೂಕ 13:3, 5) ಎಂದು ಯೇಸು ಹೇಳಿದನು. ಅಥೇನೆಯವರಿಗೆ ತನ್ನ ಘೋಷಣೆಯೊಂದಿಗೆ ಮಾನಸಾಂತರ ಪಡಲು ಎಲ್ಲಾ ನಿರೀಕ್ಷೆಯೊಂದಿಗೆ ಪೌಲನು ಆಜ್ಞಾಪಿಸಿದನು: "ಆ ಅಜ್ಞಾನ ಕಾಲಗಳನ್ನು ದೇವರು ಲಕ್ಷ್ಯಕ್ಕೆ ತರಲಿಲ್ಲ; ಈಗಲಾದರೋ ಆತನು ಎಲ್ಲಾ ಕಡೆಗಳಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆಕೊಡುತಿದ್ದಾನೆ" (ಅಪೊಸ್ತಲರ ಕೃತ್ಯಗಳು 17:30). ಮಾನವ ಜನಾಂಗವು ದೇವರ ಮುಂದೆ ಇರುವ ಎರಡು ಮಾರ್ಗಗಳಲ್ಲಿ ಒಂದು ಮಾರ್ಗದ ಮೇಲೆ ನಡೆಯುತ್ತದೆ: ಮಾನಸಾಂತರದ ಮಾರ್ಗ ಅಥವಾ ದಂಗೆಯ ಮಾರ್ಗ. ದೇವರು ಒಂದು ಕಾರಣಕ್ಕಾಗಿ ಹೆಚ್ಚು ಜನರನ್ನು ಮಾನಸಾಂತರಕ್ಕೆ ತರುವದಕ್ಕಾಗಿ - ಯೇಸುವಿನ ಬರೋಣವನ್ನು ತಡಮಾಡುತ್ತಿದ್ದಾನೆ: "ಕರ್ತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ತಡಮಾಡುತ್ತಾನೆಂಬುದಾಗಿ ಕೆಲವರು ಅರ್ಥಮಾಡಿಕೊಳ್ಳುವ ಪ್ರಕಾರ ಆತನು ತಡಮಾಡುವವನಲ್ಲ. ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿ

ಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘ ಶಾಂತಿಯುಳ್ಳವನಾಗಿದ್ದಾನೆ" (2 ಪೇತ್ರ 3:9). ಪ್ರತಿಯೊಬ್ಬ ಮನುಷ್ಯನು ಮಾನಸಾಂತರ ಪಡುವನೋ ಇಲ್ಲವೋ ಎಂಬುದರ ಮೇಲೆ ಅವನ ಅಂತಿಮ ಸ್ಥಿತಿಯು ಅವಲಂಭಿಸಿರುವುದು: "ಆದರೆ ಹೇಡಿಗಳು, ನಂಬಿಕೆಯಿಲ್ಲದವರು, ಅಸಹ್ಯವಾದದ್ದರಲ್ಲಿ ಸೇರಿದವರು, ಕೊಲೆಗಾರರು, ಜಾರರು, ಮಾಟಗಾರರು, ವಿಗ್ರಹಾರಾಧಿಕರು, ಎಲ್ಲಾ ಸುಳ್ಳುಗಾರರು ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ; ಅದು ಎರಡನೆಯ ಮರಣವು" (ಪ್ರಕಟನೆ 21:8).

ಹೊಸ ಒಡಂಬಡಿಕೆಯ ಮಾನಸಾಂತರದ ಕರೆಗೆ ಉತ್ತರ ಕೊಟ್ಟ ಜನರಿಂದ ಸಭೆಯು ಮಾಡಲ್ಪಟ್ಟಿದೆ. ಕ್ರೈಸ್ತರು ಕರ್ತನ ಹೆಸರನ್ನು ಹೇಳಿಕೊಂಡವರು ಮತ್ತು ದುಷ್ಟತನದಿಂದ ತೊಲಗಿ ಹೋದವರು ಆಗಿದ್ದಾರೆ (2 ತಿಮೊಥೆ 2:19). ಕ್ರಿಸ್ತನ ಕಡೆಗೆ ಮಾನಸಾಂತರ ಪಡುವದರ ಮುಖಾಂತರ ಅವರು ಅಂಧಕಾರದ ದೊರೆತನದಿಂದ ಬಿಡುಗಡೆ ಹೊಂದಿ ದೇವರ ಕುಮಾರನ ರಾಜ್ಯದೊಳಗೆ ವರ್ಗಾಯಿಸಲ್ಪಟ್ಟಿದ್ದಾರೆ (ಕೊಲೊಸ್ಸೆ 1:13). ಅಜ್ಞಾನದಿಂದಲೂ ಅವಿಧೇಯತೆಯಿಂದಲೂ ತಾವು ಜೀವಿಸಿದ ಹಿಂದಿನ ಆಶೆಗಳಿಗೆ ಹಿಂದಿರುಗುವದನ್ನು ತಿರಸ್ಕರಿಸಿ, ದೇವರ ವಿಧೇಯ ಮಕ್ಕಳಾಗಿ ಜೀವಿಸಲು ತಮ್ಮನ್ನು ಸಮರ್ಪಿಸಿ ಕೊಂಡಿದ್ದಾರೆ (1 ಪೇತ್ರ 1:14). ಅವರ ಅಪೇಕ್ಷೆಯು ತಮ್ಮನ್ನು ಕರೆದ ಒಬ್ಬಾತನಂತೆ ಆಗಿರುವುದಾಗಿದೆ. ತಮ್ಮ ಎಲ್ಲಾ ನಡತೆಯಲ್ಲಿ, ತಮ್ಮ ಎಲ್ಲಾ ಕಾರ್ಯಗಳಲ್ಲಿ ಕರ್ತನ ಅಪೇಕ್ಷೆಯನ್ನು ಒಪ್ಪಿಕೊಂಡು ಆತನನ್ನು ಅನುಸರಿಸಲು ಅವರು ಪ್ರಯತ್ನಿಸುತ್ತಿರುವರು: "ನಾನು ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರ ಬೇಕು" (1 ಪೇತ್ರ 1:16).

ಆದುದರಿಂದ, ಮಾನಸಾಂತರವು ಕ್ರೈಸ್ತನಾಗಲು ಹುಡುಕುತ್ತಿರುವವನಿಗೆ, ಕರ್ತನ ಸಭೆಯ ಸದಸ್ಯನಿಗೆ ಮೂಲೆಗಲ್ಲಿನಂಥ ಪದವೂ ಮುಖ್ಯ ಮನೋಭಾವನೆಯೂ ಆಗಿದೆ. ಸಭೆಯ ಸ್ವಭಾವವು ಈ ಪದದ ಮೂಲ ಅರ್ಥದಲ್ಲಿಯೂ ಅನ್ವಯಗಳಲ್ಲಿಯೂ ಪ್ರತಿಬಿಂಬಿಸಲ್ಪಟ್ಟಿದೆ. ದೇವರು ತನ್ನ ಸಭೆಯನ್ನು ಕರೆಯುವ ರೀತಿಯ ಜನರಿಗಾಗಿ ಮಾನಸಾಂತರವು ಅಂಕಿತವಾಗಿ ನಿಲ್ಲುತ್ತದೆ: ಮಾನಸಾಂತರ ಹೊಂದಿದವರಿಂದ ಸಭೆಯು ಮಾಡಲ್ಪಟ್ಟಿದೆ. ಕೊರ್ನೇಲ್ಯನ ಮನೆಯಲ್ಲಿಯ ಅನ್ಯರ ಬಾಪ್ತಿಸ್ಮವನ್ನು ಕುರಿತು ಪೇತ್ರನು ಯೆರೂಸಲೇಮಿನಲ್ಲಿ ಯೆಹೂದಿ ಕ್ರೈಸ್ತರಿಗೆ ವಿವರಿಸಿದಾಗ, ಈ ಯೆಹೂದಿ ಸಹೋದರರು, "ಹಾಗಾದರೆ ದೇವರು ಅನ್ಯಜನರಿಗೂ ಜೀವಕ್ಕಾಗಿ ಮಾನಸಾಂತರವನ್ನು ದಯಪಾಲಿಸಿದ್ದಾನೆ" (ಅಪೊಸ್ತಲರ ಕೃತ್ಯಗಳು 11:18 ನೋಡಿರಿ) ಎಂದು ಹೇಳುವದರಿಂದ ಉತ್ತರ ಕೊಟ್ಟರು. ಅದು ಅವರಿಗೆ ಸ್ಪಷ್ಟವಾಗಿದ್ದರೆ, ಅದು ನಮಗೂ ಸ್ಪಷ್ಟವಾಗಿರತಕ್ಕದ್ದು. ನಿಜವಾದ ಜೀವನದ ಬಾಗಿಲು ನಿಜವಾದ ಮಾನಸಾಂತರದಿಂದ ಮಾತ್ರವೇ ತೆರೆಯಲ್ಪಡುತ್ತದೆ.

ಮಾನಸಾಂತರವು ಏನಾಗಿದೆ? ಅದು ಏನಾಗಿದೆ ಹಾಗೂ ಅದರ ಅರ್ಥ ವೇನು ಎಂಬುದರ ಬಗ್ಗೆ ತಪ್ಪು ಭಾವನೆ ಬಾರದಂತೆ ಈ ಪದವನ್ನು ಹೆಚ್ಚು ಸ್ಪಷ್ಟವಾಗಿ ವಿವರಿಸೋಣ. ಇದನ್ನು ಉದಾಹರಿಸಲು ಸೌಲನ ಪರಿವರ್ತನೆಯ ಹಿನ್ನೆಲೆಯನ್ನು ಉಪಯೋಗಿಸುತ್ತೇವೆ.

## ಪಾಪದಿಂದ ಹಿಂದಿರುಗುವುದು

ಮೊದಲನೆಯದು, ಮಾನಸಾಂತರವು ಪಾಪದಿಂದ ಹಿಂದಿರುಗುವಿಕೆಯಾಗಿದೆ. ದುಷ್ಟತ್ವವನ್ನು ಕುರಿತು ದಿಕ್ಕಿನಲ್ಲಿ ಬದಲಾವಣೆ ಮಾಡುವುದಾಗಿದೆ.

ಮಾನಸಾಂತರವು ವೈಯಕ್ತಿಕ ಸುಧಾರಣೆಗಿಂತ ಹೆಚ್ಚಿನದಾಗಿದೆ. ಒಬ್ಬನ ಜೀವನವನ್ನು ಹೆಚ್ಚು ಉತ್ತಮವಾಗಿ ನಿಯಂತ್ರಿಸಿಕೊಳ್ಳುವದಕ್ಕಿಂತ ಹೆಚ್ಚಿನ ಮಾರ್ಗವಾಗಿದೆ. ಅದು ಆಳವಾದ ತೀರ್ಮಾನವಾಗಿದೆ. ದೇವರಿಗೆ ವಿರುದ್ಧ ವಾದ ಎಲ್ಲವನ್ನೂ ತ್ಯಜಿಸಿ ಬಿಡುವ ತೀರ್ಮಾನವಾಗಿದೆ. ಈ ತೀರ್ಮಾನವು ಯೇಸುವು ಹೊಸದಾಗಿ ಹುಟ್ಟುವುದು ಎಂದು ಕರೆದ ಸಂಪೂರ್ಣ ಬದಲಾವಣೆಗೆ ಕೊಡುಗೆಯನ್ನೀ ಡುತ್ತದೆ (ಯೋಹಾನ 3:3).

*ಒಬ್ಬನು ಪಾಪ ಮಾಡಿದ್ದೇನೆಂದು ಕೇವಲ ದುಃಖಪಡುವುದು ಮಾನಸಾಂತರ ವಾಗಿರುವದಿಲ್ಲ.* ಪಾಪವು ಒಬ್ಬನ ಮೇಲೆ ತಂದ ತೊಂದರೆಯ ನಿಮಿತ್ತವಾಗಿ ಇಲ್ಲವೇ ತನ್ನ ಪಾಪಕ್ಕಾಗಿ ಅವನು ಸಲ್ಲಿಸಬೇಕಾದ ದಂಡದ ನಿಮಿತ್ತವಾಗಿ ಒಬ್ಬನು ತಾನು ಪಾಪಮಾಡಿದ್ದಕ್ಕಾಗಿ ದುಃಖ ಪಡಬಹುದು. ಯೂದನು ಯೇಸುವನ್ನು ಹಿಡಿದು ಕೊಟ್ಟವನು ದುಃಖ ಪಟ್ಟನು, ಆದರೆ ಅವನು ಮಾನಸಾಂತರಪಡಲಿಲ್ಲ (ಮತ್ತಾಯ 27:3). ಕ್ರಿಸ್ತನನ್ನು ಅಲ್ಲಗಳೆದ ಪೇತ್ರನು (ಮತ್ತಾಯ 26:34, 69-75), ಮಾನಸಾಂತರ ಪಟ್ಟನು; ಯೂದನು ಕೇವಲ ದುಃಖಪಟ್ಟನು. ಒಬ್ಬನು ತಾನು ಪಾಪ ಮಾಡಿದ್ದಕ್ಕಾಗಿ ಆಳವಾಗಿ ವ್ಯಾಕುಲಪಡಬಹುದು; ಆದರೆ ಎಂದೂ ಮಾನಸಾಂತರ ಪಡಲಿಕ್ಕಿಲ್ಲ.

*ಮಾನಸಾಂತರವು ಕೇವಲ ಪಾಪದ ಮನವರಿಕೆ ಆಗಿರುವದಿಲ್ಲ. ಪಂಚಾಶತ್ತಮದ ದಿನದಂದು,* ಪೇತ್ರನು ತನ್ನ ಮಾತಿಗೆ ಕಿವಿಗೊಡುತ್ತಿದ್ದ ಯೆಹೂದ್ಯರ ಪಾಪಗಳನ್ನು ತೋರಿಸಿಕೊಟ್ಟನು. ಅವನ ಮಾತುಗಳು ಅವರ ಹೃದಯಗ ಳಲ್ಲಿ ದೋಷ ನಿರ್ಣಯ ಮಾಡಿದವು. ಅವರು “ನಾವೇನು ಮಾಡಬೇಕು?” (ಅಪೊಸ್ತಲರ ಕೃತ್ಯಗಳು 2:37) ಎಂದು ಕೇಳಿದರು. ಹೀಗಿದ್ದರೂ ಪೇತ್ರನು ಅವರ ಮನವರಿಕೆಯನ್ನು ಪಶ್ಚಾತ್ತಾಪ ಎಂದು ತೆಗೆದು ಕೊಳ್ಳಲಿಲ್ಲ, ಯಾಕಂದರೆ ಅವರ ಪ್ರಶ್ನೆಗೆ ಅವನು “ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ, ಆಗ ನೀವು ಪರಿಶುದ್ಧಾತ್ಮ ಎಂಬ ವರವನ್ನು

ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 2:38) ಎಂದು ಹೇಳಿದನು.

*ಮಾನಸಾಂತರವು ಕೇವಲ ದೇವರ ಚಿತ್ತಾನುಸಾರವಾಗಿರುವ ದುಃಖಪಡುವಿಕೆಯಾಗಿರುವದಿಲ್ಲ.* ಪಾಪಗಳಿಗಾಗಿ ದೇವರ ಚಿತ್ತಾನುಸಾರವಾಗಿ ದುಃಖಪಡುವಿಕೆಯು ಮಾನಸಾಂತರವನ್ನು ಹುಟ್ಟಿಸುತ್ತದೆ. ಪೌಲನು ಹೀಗೆ ಹೇಳಿದ್ದಾನೆ:

> ದೇವರ ಚಿತ್ತಾನುಸಾರವಾಗಿರುವ ದುಃಖವು ಮಾನಸಾಂತರವನ್ನುಂಟು ಮಾಡಿ ರಕ್ಷಣೆಗೆ ಕಾರಣವಾಗಿದೆ; ಆ ಮಾನಸಾಂತರದಲ್ಲಿ ಪಶ್ಚಾತ್ತಾಪಕ್ಕೆ ಆಸ್ಪದವಿಲ್ಲ; ಆದರೆ ಲೋಕದವರಿಗಿರುವಂಥ ದುಃಖವು ಮರಣವನ್ನುಂಟು ಮಾಡುತ್ತದೆ (2 ಕೊರಿಂಥ 7:10).

ದೇವರ ಚಿತ್ತಾನುಸಾರವಾಗಿರುವ ದುಃಖವು ಮಾನಸಾಂತರದ ವಿಧಾನದ ಭಾಗವಾಗಿದೆ. ಆದರೆ ಅದು ತಾನೇ ಮಾನಸಾಂತರವಾಗಿರುವದಿಲ್ಲ.

*ಮಾನಸಾಂತರವು ಜೀವನದ ಪುನಃಸ್ಥಾಪನೆಯಂತೆಯೂ ವಿವರಿಸಲ್ಪಡತಕ್ಕದ್ದಲ್ಲ.* ಆದರೆ ಅದು ಜೀವನದ ಪುನಃ ಸ್ಥಾಪನೆಯನ್ನು ಹುಟ್ಟಿಸುತ್ತದೆ. ಬದಲಾದ ಜೀವನದ ಮೇಲೆ ಮಾನಸಾಂತರವು ಪರಿಣಾಮ ಮಾಡದೆಯಿದ್ದರೆ, ಆಗ ಅದು ತಾನೇ ನಿಜವಾದ ಮಾನಸಾಂತರವಾಗಿರುವದಿಲ್ಲ. ಸ್ನಾನಿಕನಾದ ಯೋಹಾನನು ತನ್ನ ಬಳಿಗೆ ಬರುವ ಜನರಿಗೆ "ಹಾಗಾದರೆ ನಿಮ್ಮ ಮನಸ್ಸು ದೇವರ ಕಡೆಗೆ ತಿರುಗಿತೆಂಬುದನ್ನು ತಕ್ಕ ಫಲದಿಂದ ತೋರಿಸಿರಿ" (ಮತ್ತಾಯ 3:8) ಎಂದು ಹೇಳಿದನು. ನಿಜವಾದ ಮಾನಸಾಂತರದ ನಂತರ ಮಾನಸಾಂತರದ ಫಲವು, ಬದಲಾದ ಜೀವಿತವು ಬರುತ್ತದೆ.

ಮಾನಸಾಂತರವು ಪಾಪವನ್ನು ಕುರಿತಾದ ಒಬ್ಬನ ಚಿತ್ತದ ನಿರ್ದಿಷ್ಟವಾದ ಬದಲಾವಣೆಯೊಂದಿಗೆ ಸಂಬಂಧಿಸಿದೆ. ಅದು ಜ್ಞಾನವನ್ನೂ, ಭಾವನೆಗಳನ್ನೂ, ಮನಸ್ಸಾಕ್ಷಿಯನ್ನೂ ಒಳಗೊಂಡಿರುತ್ತದೆ. ಪಾಪದ ಬಗೆಗಿರುವ ಈ ಮನಸ್ಸಿನ ಬದಲಾವಣೆಯು ಜೀವನದ ನಡವಳಿತೆಯನ್ನು ಬಿಟ್ಟುಕೊಡಲು ವ್ಯಕ್ತಿಯನ್ನು ಶಕ್ತನನ್ನಾಗಿ ಮಾಡುವಂತೆ ಮಾನವ ವ್ಯಕ್ತಿತ್ವದಲ್ಲಿ ಬಹಳ ಸಂಕೀರ್ಣವಾದದ್ದಾಗಿದೆ. ಬಾಪ್ತಿಸ್ಮದಲ್ಲಿ ಪಾಪದ ದೇಹವು ನಾಶಪಡಿಸಲ್ಪಡುವಂತೆ ಒಬ್ಬನು ಪಾಪಕ್ಕೆ ತನ್ನ ಆತ್ಮಿಕ ಮರಣದಲ್ಲಿ ಮುಳುಗೇಳಿಸಲ್ಪಡುತ್ತಾನೆ. ಹಳೆ ಸ್ವಭಾವವು ಶಿಲುಬೆಗೆ ಹಾಕಲ್ಪಡುತ್ತದೆ (ರೋಮಾಪುರ 6:6).

ಮಾನಸಾಂತರದ ಈ ಅರ್ಥವು ಸೌಲನ ಪರಿವರ್ತನೆಯಲ್ಲಿ ಕಂಡು ಬರುತ್ತದೆ. ತಾರ್ಸದ ಸೌಲನು ಫರಿಸಾಯನಾಗಿದ್ದನು, ಯೆಹೂದ್ಯರಲ್ಲಿ ಯೆಹೂದ್ಯನಾಗಿದ್ದನು (ಫಿಲಿಪ್ಪಿ 3:5). ಮೋಶೆಯ ಧರ್ಮಶಾಸ್ತ್ರದ ಪ್ರಕಾರ ತಾನು ನಿರ್ದೋಷಿಯಾಗಿದ್ದೇನೆಂದು ಅವನು ಹೇಳಿದನು (ಫಿಲಿಪ್ಪಿ 3:6). ಬೇರೆ ಮಾತುಗಳಲ್ಲಿ ಧರ್ಮಶಾಸ್ತ್ರವನ್ನು

ಕೈಕೊಳ್ಳುವದರಲ್ಲಿ ಸೋತು ಹೋಗಿದ್ದನ್ನು ಅವನ ವಿರುದ್ಧವಾಗಿ ತರಲು ಯಾವ ಕಾನೂನು ಬದ್ಧ ದೂರುಗಳೂ ಇರಲಿಲ್ಲ ಎಂದು ಬೇರೆ ಮಾತಿನಲ್ಲಿ ಹೇಳಬಹುದು. ಫರಿಸಾಯನಂತೆ - ಯೆಹೂದಿ ಧರ್ಮದಲ್ಲಿ ಉನ್ನತ ಮಟ್ಟದಲ್ಲಿದ್ದ ಯೆಹೂದ್ಯನಂತೆ - ಸೌಲನು ಯೇಸುವು ಮೋಸಗಾರನೂ ಯೆಹೂದಿ ಧರ್ಮವನ್ನು ನಾಶಮಾಡಲು ಉದ್ದೇಶಿಸಿದವನೂ ಆಗಿದ್ದನೆಂದು ನಂಬಿದ್ದನು. ನಾಶ ಮಾಡುವ ಹಿಂಸೆಯ ರೋಷ ದೊಂದಿಗೆ ಯೇಸುವನ್ನು ವಿರೋಧಿಸತಕ್ಕದ್ದೆಂದು ಸೌಲನು ಯೋಚಿಸಿದನು. ಸಂಶಯವಿಲ್ಲದೇ ಯೇಸುವನ್ನು ಅನುಸರಿಸಿದ ಯಾರೇ ಆಗಲಿ ಅವರು ತನ್ನ ವೈರಿಯೆಂದು ಅವನು ತಿಳಿದನು. ನಿರ್ದಯದ ಬಲದೊಂದಿಗೆ ಹಾಗೂ ಉದ್ದೇಶಿತ ತೀರ್ಮಾನದೊಂದಿಗೆ ಕ್ರಿಸ್ತ ಸಭೆಯನ್ನು ಅಂತ್ಯಗೊಳಿಸಲು ಅವನು ಹುಡುಕಿದನು.

ಸಭೆಯನ್ನು ಹಿಂಸಿಸುವ ಕಾರ್ಯದಲ್ಲಿ ಮುಂದುವರಿದಾಗ, ಸೌಲನು ಮಹಾಯಾಜಕನ ಬೆಂಬಲವನ್ನು ಕೇಳಿದನು (ಅಪೊಸ್ತಲರ ಕೃತ್ಯಗಳು 9:1, 2). ಅಧಿಕಾರವನ್ನು ಪಡೆದು ಕೊಂಡಾಗ ಅವನು ತನ್ನ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ದಮಸ್ಕಕ್ಕೆ ಹೊರಟನು. ಅವನು ದಮಸ್ಕಕ್ಕೆ ಹೊರಟಾಗ, ಕರ್ತನಾದ ಯೇಸುವು ಮಧ್ಯಾಹ್ನದಲ್ಲಿ ಸೂರ್ಯಪ್ರಕಾಶಕ್ಕಿಂತ ಹೆಚ್ಚಾದ ಬೆಳಕಿನಲ್ಲಿ ಅವನಿಗೆ ಕಾಣಿಸಿಕೊಂಡನು. ಕರ್ತನ ಪ್ರಸನ್ನತೆಯ ಬೆಳಕಿನಿಂದ ಕುರುಡನಾದ ಸೌಲನು ನೆಲದ ಮೇಲೆ ಬಿದ್ದನು. ತನ್ನೊಂದಿಗೆ ಮಾತಾಡುತ್ತಿರುವವನು ಯೇಸು ಕ್ರಿಸ್ತನು, ದೇವರ ಕುಮಾರನು ಎಂದು ಭೂಮಿ ನಡುಗುವ ದೃಢತೆಯ ಸತ್ಯವನ್ನು ಸೌಲನು ಅರಿತು ಕೊಂಡನು. ಆಗ ಆಳವಾದ ಮಾನಸಾಂತರದಿಂದ, ಪಶ್ಚಾತ್ತಾಪದಿಂದ "ಕರ್ತನೇ, ನಾನೇನು ಮಾಡ ಬೇಕು?" ಎಂದು ಕೇಳಿದನು (ಅಪೊಸ್ತಲರ ಕೃತ್ಯಗಳು 22:10). ಅವನು ದಮಸ್ಸಕ್ಕೆ ಹೋಗಿ, ಅಲ್ಲಿ ಏನು ಮಾಡಬೇಕೆಂಬುದು ಹೇಳಲ್ಪಡುವುದು ಎಂದು ಅವನಿಗೆ ಆದೇಶಿಸಲ್ಪಟ್ಟಿತ್ತು (ಅಪೊಸ್ತಲರ ಕೃತ್ಯಗಳು 9:6). ಅವನು ಅಲ್ಲಿಗೆ ತಲುಪಿದಾಗ, ಅನನೀಯನಿಂದ ಅವನಿಗೆ ಉತ್ತರವು ತರಲ್ಪಡುವವರೆಗೆ ಉಪವಾಸ ಮತ್ತು ಪ್ರಾರ್ಥನೆಯಲ್ಲಿ ಅವನು ಮೂರು ದಿನ ಕಾದುಕೊಂಡಿದ್ದನು.

ಸೌಲನು ಮಾನಸಾಂತರ ಹೊಂದಿದನು. ಜೀವನದ ತನ್ನ ಮಾರ್ಗವನ್ನು ಕುರಿತು ತನ್ನ ಚಿತ್ತದ ಬದಲಾವಣೆಯ ಸ್ಥಿರ ತೀರ್ಮಾನ ಮಾಡಿಕೊಂಡನು. ಅವನ ಜೀವನವು ಯೆಹೂದಿ ಧರ್ಮಕ್ಕೆ ಮತ್ತು ಕ್ರೈಸ್ತರನ್ನು ಹಿಂಸಿಸುವದಕ್ಕೆ ಸಮರ್ಪಿಸಲ್ಪಟ್ಟಿತ್ತು; ದಮಸ್ಕದ ಹಾದಿಯಲ್ಲಿ ಅವನು ಮಾನಸಾಂತರ ಪಟ್ಟಾಗ, ಅವನ ಜೀವನವು ಸಂಪೂರ್ಣವಾಗಿ ಹೊಸ ಮಾರ್ಗವನ್ನು ಹಿಡಿಯಿತು. ಅವನ ಇಡೀ ವ್ಯಕ್ತಿತ್ವದ ಮೇಲೆ - ಜ್ಞಾನ, ಭಾವನೆಗಳು ಮತ್ತು ಮನಸ್ಸಾಕ್ಷಿಯ ಮೇಲೆ ಪರಿಣಾಮ ಮಾಡಿದ ಚಿತ್ತದ ಕ್ರಾಂತಿಕಾರಿ ಬದಲಾವಣೆಯೊಂದಿಗೆ ಅವನು ತನ್ನ

ಹಳೆ ಜೀವಿತದಿಂದ ಬದಲಾಯಿಸಲ್ಪಟ್ಟನು. ಅನಂತರದಲ್ಲಿ, "ನನಗೆ ಲಾಭವಾಗಿದ್ದಂಥವುಗಳನ್ನು ಕ್ರಿಸ್ತನ ನಿಮಿತ್ತ ನಷ್ಟವೆಂದೆಣಿಸಿದ್ದೇನೆ" (ಫಿಲಿಪ್ಪಿ 3:7) ಎಂದು ಅವನು ಹೇಳಿದನು.

ಕ್ರೈಸ್ತರು ಸೌಲನಂತೆ ಮಾನಸಾಂತರದಲ್ಲಿ ಪಾಪದಿಂದ ತಿರುಗಿಕೊಂಡವರಾಗಿರುವರು. ದೇವರ ಜನಾಂಗದ ಜೀವನ ಶೈಲಿಯು ದುಷ್ಟತ್ವದ ಪ್ರತಿಯೊಂದು ರೂಪದಿಂದ ತೊಲಗಿರುವುದು (1 ಥೆಸಲೊನೀಕ 5:22). ಈ ಜಗತ್ತಿಗೆ ಅನುರೂಪವಾದವುಗಳನ್ನು ತಿರಸ್ಕರಿಸುವುದು (ರೋಮಾಪುರ 12:2), ಒಳ್ಳೆಯದರಿಂದ ಕೆಟ್ಟವುಗಳನ್ನು ಜಯಿಸುವುದು (ರೋಮಾಪುರ 12:21) ಮತ್ತು ಅತ್ಯುತ್ತಮ ನಡತೆಯಿಂದ ತಮಗೆ ವಿರುದ್ಧವಾಗಿರುವ ಯಾವುದೇ ಸುಳ್ಳು ದೂರನ್ನು ಮೌನಗೊಳಿಸುವುದು (1 ಪೇತ್ರ 2:12) ಆಗಿದೆ.

## ಪಾಪದಿಂದ ಕ್ರಿಸ್ತನ ಕಡೆಗೆ ತಿರುಗುವುದು

ಎರಡನೆಯದು, ಮಾನಸಾಂತರವು ಕ್ರಿಸ್ತನ ಕಡೆಗೆ ತಿರುಗುವುದಾಗಿದೆ. ಅದು ಸೈತಾನನಿಗೆ ಕೇವಲ ನಕಾರಾತ್ಮಕವಾದ ಪ್ರತಿ ಕ್ರಿಯೆಯಲ್ಲ; ಅದು ಕ್ರಿಸ್ತನಿಗೆ ಸಕಾರಾತ್ಮಕವಾದ ಉತ್ತರವಾಗಿದೆ.

ಥೆಸಲೊನೀಕದವರ ಬಗ್ಗೆ ಪೌಲನು ಮೆಚ್ಚಿಕೆ ವ್ಯಕ್ತಪಡಿಸಿದನು. ಯಾಕಂದರೆ ಅವರು ತಮ್ಮ ಮಾನಸಾಂತರದಲ್ಲಿ "ವಿಗ್ರಹಗಳನ್ನು ಬಿಟ್ಟು ಬಿಟ್ಟು ದೇವರ ಕಡೆಗೆ ತಿರುಗಿಕೊಂಡು ಜೀವವುಳ್ಳ ಸತ್ಯ ದೇವರನ್ನು ಆರಾಧಿಸುವವರು" ಆಗಿದ್ದರು (1 ಥೆಸಲೊನೀಕ 1:9). ಒಬ್ಬನು ಪಾಪದಿಂದ ತಿರುಗಿಕೊಂಡು, ಆದರೆ ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ, ಹೊಸ ಒಡಂಬಡಿಕೆಯಲ್ಲಿಯ ಈ ಮಾತಿನ ಸಂಪೂರ್ಣ ಅರ್ಥದಲ್ಲಿ ಅವರು ಮಾನಸಾಂತರ ಹೊಂದಿರುವದಿಲ್ಲ.

ಹೊಸ ಒಡಂಬಡಿಕೆಯ ಪ್ರಸಂಗವು ತನ್ನ ಒತ್ತಡದಲ್ಲಿ ಕ್ರಿಸ್ತನನ್ನು ಮಹಿಮೆಪಡಿಸಿತು. ಸಮಾರ್ಯದಲ್ಲಿಯ ಫಿಲಿಪ್ಪನ ಪ್ರಸಂಗದ ಬಗ್ಗೆ ಲೂಕನ ವಿವರಣೆಯು ಪ್ರೇರೇಪಣೆ ಹೊಂದಿದ ಎಲ್ಲಾ ಜನರ ಪ್ರಸಂಗಿಸುವಿಕೆಯ ವಿಧಾನದ ಒಂದು ಉದಾಹರಣೆಯಾಗಿದೆ: "ಫಿಲಿಪ್ಪನು ಸಮಾರ್ಯವೆಂಬ ಪಟ್ಟಣಕ್ಕೆ ಹೋಗಿ ಕ್ರಿಸ್ತನನ್ನು ಅಲ್ಲಿರುವವರಿಗೆ ಪ್ರಕಟಿಸಿದನು" (ಅಪೊಸ್ತಲರ ಕೃತ್ಯಗಳು 8:5). ಈ ರೀತಿಯ ಪ್ರಸಂಗಿಸುವಿಕೆಗೆ ಜನರು ಪ್ರತಿಕ್ರಿಯೆ ತೋರಿಸಿದಂತೆ ಅವರು ತಮ್ಮ ಪಾಪವನ್ನು ತೊರೆದು ಬಿಟ್ಟರು, ಸುವಾರ್ತಾ ಸಂದೇಶಕ್ಕೆ ಒಪ್ಪಿಸಿ ಕೊಡುವದರಿಂದ ಕ್ರಿಸ್ತನನ್ನು ಸ್ವೀಕರಿಸಿದರು. ಎಫೆಸದಲ್ಲಿ ಪೌಲನು ಪ್ರಸಂಗಿಸಿದ ನಂತರ ಮಾನಸಾಂತರದ ಎರಡೂ ಭಾಗಗಳು ಪ್ರತ್ಯಕ್ಷವಾಗಿವೆ. ಲೂಕನು ಹೀಗೆ ಹೇಳಿದ್ದಾನೆ:

> ಅವರೆಲ್ಲರಿಗೆ ಭಯ ಹಿಡಿಯಿತು, ಮತ್ತು ಕರ್ತನಾದ ಯೇಸುವಿನ ಹೆಸರು ಪ್ರಖ್ಯಾತಿಗೆ ಬಂತು. ಆತನನ್ನು ನಂಬಿದವರಲ್ಲಿ ಅನೇಕರು ಬಂದು ತಮ್ಮ ಕೃತ್ಯಗಳನ್ನು ಒಪ್ಪಿಕೊಂಡು ತಿಳಿಸಿದರು. ಇದಲ್ಲದೆ ಮಾಟ ಮಂತ್ರಗ ಳನ್ನು ನಡಿಸಿದವರಲ್ಲಿ ಅನೇಕರು ತಮ್ಮ ಪುಸ್ತಕಗಳನ್ನು ತಂದು ಕೂಡಿಸಿ ಎಲ್ಲರ ಮುಂದೆ ಸುಟ್ಟುಬಿಟ್ಟರು (ಅಪೊಸ್ತಲರ ಕೃತ್ಯಗಳು 19:17ಬಿ-19ಎ).

ಮಾನಸಾಂತರಪಟ್ಟ ಎಫೆಸದವರು ಕ್ರಿಸ್ತನನ್ನು ಅಂಗೀಕರಿಸಿಕೊಂಡರು ಹಾಗೂ ತಮ್ಮ ಪಾಪಭರಿತ ಆಚರಣೆಗಳನ್ನು ತಳ್ಳಿಬಿಟ್ಟರು.

ಸೌಲನ ಮಾನಸಾಂತರವು ಪಾಪದಿಂದ ತಿರುಗಿಕೊಳ್ಳುವುದು ಮತ್ತು ಕ್ರಿಸ್ತನ ಕಡೆಗೆ ತಿರುಗಿಕೊಳ್ಳುವುದು ಎರಡೂ ಆಗಿತ್ತು ಅವನು ದಮಸ್ಕಕ್ಕೆ ಪ್ರಯಾಣ ಮಾಡುತ್ತಿದ್ದಾಗ  ಕ್ರೈಸ್ತರನ್ನು ಹಿಂಸಿಸುವ ತನ್ನ ಮಾರ್ಗದಲ್ಲಿದ್ದನು. ಮೋಶೆಯ ಧರ್ಮಶಾಸ್ತ್ರದ ಅಡಿಯಲ್ಲಿ ಜೀವಿಸುತ್ತ ನೈತಿಕ ಮತ್ತು ಆಚಾರ ಪದ್ಧ ತಿಯ ಅಧಿಕಾರಗಳಿಂದ ಸ್ವತಂತ್ರನಾಗಿದ್ದನು. ಯಾವುದೇ ಅರ್ಥದಲ್ಲಿ ಅವನು ದುಷ್ಟ ಭ್ರಷ್ಟನಾಗಿರಲಿಲ್ಲ. ಆದುದರಿಂದ ಅವನ ಮಾನಸಾಂತರವು ದೇವರನ್ನು ಮೆಚ್ಚಿಸಬೇಕೆಂಬ ಅವನ ಮೂಲ ಅಪೇಕ್ಷೆಯ ಮೇಲೆ ಪರಿಣಾಮ ಮಾಡಲಿಲ್ಲ. ತನ್ನ ಯೌವ್ವನದ ಅಪೇಕ್ಷೆಯಿಂದ ಅವನು ನಡಿಸಲ್ಪಟ್ಟನು. ಮೋಶೆಯ ಧರ್ಮಶಾಸ್ತ್ರವನ್ನು ನಂಬಿಗಸ್ತಿಕೆಯಿಂದ ಕೈಕೊಳ್ಳುವದರಲ್ಲಿ ಅದನ್ನು ಪ್ರಕಟಿಸಿದನು. ಹೀಗಿದ್ದರೂ ಅವನು  ಕ್ರೈಸ್ತರನ್ನು ಹಿಂಸಿಸಿದ್ದು ಭಯಂಕರ ವಾದ ಪಾಪವಾಗಿತ್ತು. ಅದರ ಪರಿಣಾಮವಾಗಿ ದೇವರ ಮುಂದೆ ಅವನ ಮಾನಸಾಂತರವು, ದೇವರ ಸೇವೆ ಮಾಡುವುದು,  ಕ್ರೈಸ್ತರನ್ನು ಹಿಂಸಿಸುವುದೂ, ಕ್ರಿಸ್ತನನ್ನು ತಿರಸ್ಕರಿಸುವುದೂ ಎಂಬ ಅವನ ಹಿಂದಿನ ನಂಬಿಕೆಯನ್ನು ತಿರಸ್ಕರಿಸಿ ಬಿಡುವಲ್ಲಿ ಪರಿಣಾಮಗೊಂಡಿತು. ಅದಕ್ಕಾಗಿ ಕ್ರಿಸ್ತನ ಕಡೆಗೆ ತಿರುಗಿ ಕೊಳ್ಳುವುದು, ಆತನನ್ನು ಕರ್ತನೆಂದು ಒಪ್ಪಿಕೊಳ್ಳುವುದು ಮತ್ತು ಆತನ ಚಿತ್ತಕ್ಕೆ ಸಮರ್ಪಣೆಯಲ್ಲಿ ದೀನತೆಯಿಂದ ಬಾಗುವುದು ಅಗತ್ಯವಾಗಿ ಬೇಕಾಗಿತ್ತು.

ಫಿಲಿಪ್ಪಿ 3:8-11ರಲ್ಲಿ ಪೌಲನು ತಾನೇ ತನ್ನ ಮಾನಸಾಂತರವನ್ನು ವಿವರಿಸಿದ್ದಾನೆ:

> ... ನನ್ನ ಕರ್ತನಾದ ಕ್ರಿಸ್ತ ಯೇಸುವನ್ನರಿಯುವದೇ ಅತಿ ಶ್ರೇಷ್ಠವಾದದ್ದೆಂದು ತಿಳಿದು ನಾನು ಎಲ್ಲವನ್ನು ನಷ್ಟವೆಂದೆಣಿಸುತ್ತೇನೆ. ಆತನ ನಿಮಿತ್ತ ನಾನು ಎಲ್ಲವನ್ನೂ ಕಳಕೊಂಡು ಅದನ್ನು ಕಸವೆಂದೆಣಿಸುತ್ತೇನೆ. ಇದರಲ್ಲಿ ನನ್ನ ಉದ್ದೇಶವೇನೆಂದರೆ - ನಾನು ಕ್ರಿಸ್ತನನ್ನು ಸಂಪಾದಿಸಿಕೊಂಡು ನೇಮನಿಷ್ಠೆಗಳ ಫಲವಾಗಿರುವ ಸ್ವನೀತಿಯನ್ನಾಶ್ರಯಿಸದೆ ಕ್ರಿಸ್ತನನ್ನು ನಂಬುವದರಿಂದ ದೊರಕುವಂಥ ಅಂದರೆ ಕ್ರಿಸ್ತನ

ಮೇಲಣ ನಂಬಿಕೆಯ ಆಧಾರದಿಂದ ದೇವರು ಕೊಡುವಂಥ ನೀತಿಯನ್ನೇ ಹೊಂದಿ ಕ್ರಿಸ್ತನಲ್ಲಿರುವವನಾಗಿ ಕಾಣಿಸಿಕೊಳ್ಳ ಬೇಕೆಂಬದೇ. ಆತನ ಪುನರುತ್ಥಾನದಲ್ಲಿರುವ ಶಕ್ತಿಯನ್ನೂ ಆತನ ಶ್ರಮೆಯಲ್ಲಿ ಪಾಲುಗೊಳ್ಳುವ ಅನ್ಯೋನ್ಯತೆಯನ್ನೂ ಆತನ ಹೇಗೆ ಆಗುವುದನ್ನೂ ತಿಳಿಯುವುದೇ ಆತನ ಮರಣದದಲ್ಲಿ ಸರೂಪನಾಗಬೇಕೆಂಬುದೇ ನನ್ನ ಕುತೂಹಲವಾಗಿದೆ. ಹೀಗಾದರೆ ಸತ್ತವರೊಳಗಿಂದ ಆಗುವ ಪುನರುತ್ಥಾನವು ನನಗೆ ಒದಗಿ ಬಂದೀತು.

ಆದುದರಿಂದ, ಸೌಲನು ಪಾಪದಿಂದ ಕ್ರಿಸ್ತನ ಕಡೆಗೆ ತಿರುಗಿಕೊಂಡನು. ಮಾನಸಾಂತರವು ಅವನಿಗೆ ನಕಾರಾತ್ಮಕವಾದದ್ದೂ ಸಕಾರಾತ್ಮಕವಾದದ್ದೂ ಆಗಿತ್ತು. ಜೀವನದ ತನ್ನ ಹಿಂದಿನ ಮಾರ್ಗದಿಂದ ತಿರುಗಿಕೊಂಡು, ಕ್ರಿಸ್ತನಲ್ಲಿ ಹೆಚ್ಚು ಉತ್ತಮವಾದ ನೂತನ ಮಾರ್ಗಕ್ಕೆ ಹೋಗುವಂಥದ್ದು ಆಗಿತ್ತು.

ಸಭೆಯು, ಪಶ್ಚಾತ್ತಾಪ ಪಟ್ಟ ಜನರ ಕ್ರಿಸ್ತನ ದೇಹವು, ಕ್ರಿಸ್ತನಿಗೆ ಸಮರ್ಪಣೆಯಲ್ಲಿ ಜೀವಿಸುವುದು. ಅದರ ಸದಸ್ಯರು ಕ್ರಿಸ್ತನೊಂದಿಗೆ ಒಂದಾಗಿದ್ದಾರೆ. ಮಾನಸಾಂತರದ ಮುಖಾಂತರವಾಗಿ, ಕ್ರೈಸ್ತನು ಪವಿತ್ರತೆಯ ಹಾಗೂ ನೀತಿಯ ಜೀವನದೊಳಗೆ ಪ್ರವೇಶಿಸಿದ್ದಾನೆ ಅವನು ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟಿದ್ದಾನೆ. ತನ್ನ ಮಾನಸಾಂತರದಿಂದ ಪರಿಣಾಮಗೊಂಡ ತನ್ನ ನೂತನ ಜೀವನದಲ್ಲಿ, ದೇವರ ಕುಮಾರನಲ್ಲಿಯ ನಂಬಿಕೆಯಿಂದ ಜೀವಿಸುವನು (ಗಲಾತ್ಯ 2:20). ಮಾನಸಾಂತರಪಟ್ಟ ದೇವರ ಜನಾಂಗದಂತೆ, ಕ್ರೈಸ್ತರು ಕ್ರಿಸ್ತನ ಹೆಸರನ್ನು ಧರಿಸಿಕೊಳ್ಳುವರು. ಕ್ರಿಸ್ತನೊಂದಿಗೆ ಐಕ್ಯತೆಯಲ್ಲಿ ಜೀವಿಸುವರು, ಆರಾಧನೆಯಲ್ಲಿ ಕ್ರಿಸ್ತನನ್ನು ಮಹಿಮೆ ಪಡಿಸುವರು. ಆತನ ಬರೋಣದಲ್ಲಿ ಇಲ್ಲವೇ ಮರಣದಲ್ಲಿ ಆತನೊಂದಿಗೆ ಹೆಚ್ಚು ಸಂಪೂರ್ಣವಾಗಿ ಇರಲು ಹೋಗುವ ತಮ್ಮ ನಿರೀಕ್ಷೆ ಯಿಂದ ನೀತಿವಂತರಾಗಿರಲು ಒತ್ತಾಯಿಸಲ್ಪಟ್ಟಿದ್ದಾರೆ.

## ಜೀವಕ್ಕಾಗಿ ಪಾಪದಿಂದ ಕ್ರಿಸ್ತನ ಕಡೆಗೆ ತಿರುಗಿ ಕೊಳ್ಳುವುದು

ಮೂರನೆಯದು, ಮಾನಸಾಂತರವು ಜೀವಕ್ಕಾಗಿ ಪಾಪದಿಂದ ಕ್ರಿಸ್ತನ ಕಡೆಗೆ ತಿರುಗಿಕೊಳ್ಳುವುದಾಗಿದೆ. ಯೇಸುವು ಧಾರ್ಮಿಕ ವಿರಾಮ ತೆಗೆದು ಕೊಳ್ಳು ವದಕ್ಕಾಗಿ ಇಲ್ಲವೇ ದುಷ್ಟತ್ವದಿಂದ ಸ್ವಲ್ಪ ಸಮಯ ಬಿಡುವನ್ನು ತೆಗೆದುಕೊಳ್ಳಲು ಯಾರನ್ನೂ ಆಮಂತ್ರಿಸಲಿಲ್ಲ. ಸಂಪೂರ್ಣ ಸಮರ್ಪಣೆಗಾಗಿ ಆತನು ಕೇಳಿದನು. ನೀರಿನಿಂದಲೂ ಆತ್ಮನಿಂದಲೂ ಬಾಪ್ತಿಸ್ಮ ಹೊಂದಿ ಮೇಲಣಿಂದ ಹುಟ್ಟುವದಕ್ಕೆ ಸಂಬಂಧಿಸಿ ಇದನ್ನು ಹೇಳಿದನು (ಯೋಹಾನ 3:5). ಈ ಬದಲಾವಣೆಯು ತೀವ್ರವಾದದ್ದು, ತೀರದಂಥದ್ದು ಆಗಿತ್ತು. ಇದನ್ನು ಪೌಲನು ಆತ್ಮಿಕ ಸುನ್ನತಿಗೆ,

ದೇವರ ಸುವಾರ್ತೆಯ ಮುಖಾಂತರ ದೇಹದ ಶರೀರ ಭಾವದ ಸಂಪೂರ್ಣ ತೆಗೆದು ಹಾಕುವಿಕೆಗೆ ಹೋಲಿಸಿದನು:

> ನೀವು ಆತನಲ್ಲಿ ಸುನ್ನತಿಯನ್ನೂ ಹೊಂದಿದಿರಿ; ಈ ಸುನ್ನತಿಯು ಕೈಯಿಂದ ಮಾಡಿದ್ದಲ್ಲ. ಇದು ಪಾಪಾಧೀನ ಸ್ವಭಾವವನ್ನು ವಿಸರ್ಜಿಸುವುದೇ; ಇದೇ ಕ್ರಿಸ್ತನಿಂದಾದ ಸುನ್ನತಿ (ಕೊಲೊಸ್ಸೆ 2:11).

ಮತ್ತೊಮ್ಮೆ ಎಂದೂ ಉಪಯೋಗಿಸದ ಉದ್ದೇಶದಿಂದ ಹರಿದು ಹೋದ, ಹೊಲಸಾದ, ಜೀರ್ಣವಾದ ಬಟ್ಟೆಗಳನ್ನು ಒಬ್ಬನು ಬಿಟ್ಟು ಬಿಡುವಂತೆ ಹಳೇ ಸ್ವಭಾವವನ್ನು ತೆಗೆದು ಹಾಕಿ ಹೊಸ ಸ್ವಭಾವವನ್ನು ಧರಿಸಿಕೊಳ್ಳುವ ಅರ್ಥವನ್ನು ಪೌಲನು ಈ ಪರಿವರ್ತನೆಗೆ ಕೊಟ್ಟನು (ಎಫೆಸ 4:24; ಕೊಲೊಸ್ಸೆ 3:10). ದೇವರು ನಮ್ಮನ್ನು ಪಾಪದಿಂದಲೂ, ಮರಣದಿಂದಲೂ ಮೇಲಕ್ಕೆ ಎತ್ತುತ್ತಾನೆ, ಹಾಗೂ ಕ್ರಿಸ್ತನ ರಕ್ತದಿಂದ ನಾವು ವಿಮೋಚಿಸ ಲ್ಪಟ್ಟಾಗ ಕ್ರಿಸ್ತನಲ್ಲಿ ನಮಗೆ ಜೀವಕೊಡುತ್ತಾನೆ (ಕೊಲೊಸ್ಸೆ 2:13).

ಮಾನಸಾಂತರವು ಮುಂದುವರಿದ ಸಮರ್ಪಣೆಯನ್ನು ಒಳಗೊಂಡಿರುತ್ತದೆ. ದೇವರಿಗೆ ನಮ್ಮ ಪ್ರತ್ಯುತ್ತರದಲ್ಲಿ ದೇಹದ ಕಾರ್ಯಗಳನ್ನು ನಾವು ಮರಣಕ್ಕೆ ಒಪ್ಪಿಸುತ್ತೇವೆ. ಇಂದಿನಿಂದ ಕ್ರೈಸ್ತರಂತೆ ನಮಗಿರುವ ಒಂದೇ ಕೆಲಸವು ಈ ಕಾರ್ಯಗಳು ಪುನಃ ಮೇಲಕ್ಕೆ ಬಾರದಂತೆ ನೋಡಿ ಕೊಳ್ಳುವುದು. "ಆದದರಿಂದ ನಿಮ್ಮಲ್ಲಿರುವ ಭೂಸಂಬಂಧವಾದ ಭಾವಗಳನ್ನು ಸಾಯಿಸಿರಿ. ಜಾರತ್ವ, ಬಂಡುತನ, ಕಾಮಾಭಿಲಾಷೆ, ದುರಾಶೆ, ವಿಗ್ರಹಾರಾಧನೆಗೆ ಸಮವಾಗಿರುವ ಲೋಭ ಇವುಗಳನ್ನು ವಿಸರ್ಜಿಸಿಬಿಡಿರಿ" (ಕೊಲೊಸ್ಸೆ 3:5) ಎಂದು ಪೌಲನು ಹೇಳಿದ್ದಾನೆ.

> ಈಗಲಾದರೋ ಕ್ರೋಧ, ಕೋಪ, ಮತ್ಸರ, ದೂಷಣೆ ಬಾಯಿಂದ ಹೊರಡುವ ದುರ್ಭಾಷೆ ಇವುಗಳನ್ನು ವಿಸರ್ಜಿಸಿ ಬಿಡಿರಿ. ಒಬ್ಬರಿಗೊಬ್ಬರು ಸುಳ್ಳಾಡಬೇಡಿರಿ; ನೀವು ಪೂರ್ವಸ್ವಭಾವವನ್ನು ಅದರ ಕೃತ್ಯಗಳ ಕೂಡ ತೆಗೆದಿಟ್ಟು ನೂತನ ಸ್ವಭಾವವನ್ನು ಧರಿಸಿಕೊಂಡಿದ್ದೀರಲ್ಲವೇ (ಕೊಲೊಸ್ಸೆ 3:8, 9).

ಸಮಯದ ಒಂದು ಹಂತದಲ್ಲಿ, ಮರಣದ ಹಂತದಲ್ಲಿ ಸತತವಾಗಿ ತೆಗೆದು ಹಾಕುವದನ್ನು, ಮುಂದರಿದ ಮಾನಸಾಂತರವನ್ನು ಕುರಿತು ಪೌಲನು ಬರೆದನು,

ಸೌಲನ ಮಾರ್ಪಡುವಿಕೆಯನ್ನು ಬಿಟ್ಟು ಮಾನಸಾಂತರದ ಈ ಅರ್ಥದ ಹೆಚ್ಚು ವಿವರವಾದ ಉದಾಹರಣೆಗೆ ನಾವು ಬೇರೆ ಎಲ್ಲಿ ಹೋಗಬಹುದು? "ದೇವರು ತನ್ನ ಕಡೆಗೆ ಸಂಪೂರ್ಣವಾಗಿ ಪರಿವರ್ತನೆ ಹೊಂದಿದ ಒಬ್ಬ ಮನುಷ್ಯನೊಂದಿಗೆ ಏನು

ಮಾಡಬಹುದು ಎಂಬುದನ್ನು ನಾವು ಇನ್ನೂ ನೋಡಿರುವದಿಲ್ಲ" ಎಂದು ಒಬ್ಬನು ಹೇಳಿದ್ದಾನೆ. ನಾವು ನೋಡಿರದಿದ್ದರೆ ಸೌಲನ ಜೀವನದಲ್ಲಿ ನಾವು ಅದಕ್ಕೆ ಬಹಳ ಸಮೀಪದಲ್ಲಿ ಬರುವೆವು. ಸೌಲನ ಪರಿವರ್ತನೆಯ ಪರಿಣಾಮದಂತೆ ಪರಿಣಾಮದ ಪ್ರಭಾವವು ಜಗತ್ತಿನಲ್ಲಿ ಎರಡು ಸಾವಿರ ವರ್ಷಗಳಿಂದ ಕಂಡು ಬರುತ್ತಲಿದೆ. ಕ್ರಿಸ್ತನನ್ನು ಹಿಂಬಾಲಿಸಬೇಕೆಂಬ ಅವನ ತೀರ್ಮಾನವು ಅಂತಿಮವಾದದ್ದಾಗಿತ್ತು ಹಾಗೂ ರದ್ದುಪಡಿಸದಂಥದ್ದು ಆಗಿತ್ತು. ಶಿಲುಬೆಯ ಅಡಿಯಲ್ಲಿ ಅವನು ತನ್ನ ಜೀವಿತವನ್ನು ಸೇವೆಗಾಗಿ ಮತ್ತು ಅದರೊಂದಿಗೆ ಕ್ರಿಸ್ತನು ಮಾಡಬಹುದಾದ ಒಳ್ಳೆಯದಕ್ಕಾಗಿ ಇಟ್ಟನು.

ದೊಡ್ಡ ಅಲೆಕ್ಸಾಂಡರನು ಒಂದು ದೊಡ್ಡ ಯುದ್ಧಕ್ಕಾಗಿ ತನ್ನ ಸೈನ್ಯವನ್ನು ಸಮುದ್ರದ ದಢಕ್ಕೆ ತಂದನು. ಹಡಗುಗಳು ಖಾಲಿಯಾಗುವಾಗ ಅವುಗಳಿಗೆ ಬೆಂಕಿ ಹಚ್ಚಬೇಕೆಂದು ಅವನು ಆಜ್ಞಾಪಿಸಿದನು, ಯುದ್ಧದಲ್ಲಿ ಸೋತು ಹಿಂದಿರುಗಿ ಹೋಗುವ ಸಾಧ್ಯತೆಯನ್ನು ಅಲೆಕ್ಸಾಂಡರನು ಯೋಚಿಸಲಿಲ್ಲ. ವೈರಿಗಳಿಗೆ ಬೆನ್ನುಹಾಕಿ ಓಡಿಹೋಗುವುದು ಅವನಿಗಾಗಲೀ ಅವನ ಸೈನಿಕರಿಗಾಗಲೀ ಇರಲಿಲ್ಲ. ಅವರಿಗಿದ್ದ ಯಾವುದೇ ಭವಿಷ್ಯವು ನೇರವಾಗಿ ಮುಂದೆ ಇತ್ತು, ಹಿಂದೆ ಇರಲಿಲ್ಲ. ಹಾಗೆಯೇ ಸೌಲನೊಂದಿಗೆ ಇತ್ತು. ಅವನ ಹೃದಯದಲ್ಲಿ ಯಾವುದೇ ರೀತಿಯ ಮೀಸಲಾತಿಯಾಗಲೀ ಇಲ್ಲವೇ ಹಿಂದಿರುಗಿ ಹೋಗುವ ಯಾವುದೇ ಸಾಧ್ಯತೆಯಾಗಲೀ ಇರಲಿಲ್ಲ.

ದೇವರ ಜನಾಂಗ, ಸಭೆ, ಒಂದು ಸಮರ್ಪಣೆ ಮಾಡಿಕೊಂಡಿದೆ - ಅದು ಬಹಳ ಬಲವಾದದ್ದು. ಅದನ್ನು ಪರಿವರ್ತನೆ, ಮರಣದಿಂದ ದಾಟಿ ಜೀವಕ್ಕೆ ಹೋಗುವುದು ಎಂದು ಹೆಸರಿಸಬಹುದು (1 ಯೋಹಾನ 3:14). ಜೀವಕ್ಕಾಗಿ ಅವರು ಕ್ರಿಸ್ತನಲ್ಲಿ ನೂತನ ಮನುಷ್ಯನನ್ನು ಧರಿಸಿಕೊಂಡಿದ್ದಾರೆ. ಸಮಯದ ಒಂದು ಹಂತದಲ್ಲಿ, ಕ್ರಿಸ್ತನಿಗೆ ಅವರ ಪರಿವರ್ತನೆ ಆದಾಗ ಸಂಭವಿಸಿತು. ಆದರೆ ಹೃದಯ ಶುದ್ಧೀಕರಣವು ಅವರಿಗೆ ಸತತವಾದ ಹಂಗು ಆಗಿತ್ತು (ರೋಮಾಪುರ 6:2ಬಿ). ಹಳೇ ಮನುಷ್ಯನು ಮರಣಕ್ಕೆ ಒಪ್ಪಿಸಲ್ಪಟ್ಟಿದ್ದಾನೆ ಆದರೆ ಅವನ ಪುನರುತ್ಥಾನಕ್ಕೆ ಅವಕಾಶ ಮಾಡಿಕೊಟ್ಟರೆ ಪುನಃ ಜೀವಕ್ಕೆ ಬರಲು ಪ್ರಯತ್ನಿಸುವನು (ರೋಮಾಪುರ 6:12, 13). ಹುಚ್ಚುತನದಲ್ಲಿ ಅಲ್ಲ ಆದರ ಜ್ಞಾನದಲ್ಲಿ ನಡೆಯುವ ಕ್ರೈಸ್ತನು ಜಾಗರೂಕನಾಗಿರತಕ್ಕದ್ದು (ಎಫೆಸ 5:17). ಕತ್ತಲೆಯ ಫಲವಿಲ್ಲದ ಕಾರ್ಯಗಳಲ್ಲಿ ಅವರು ಭಾಗವಹಿಸುವದಿಲ್ಲ, ಆದರೆ ಅವುಗಳನ್ನು ಬಹಿರಂಗ ಪಡಿಸುವನು (ಎಫೆಸ 5:11). ಅವನು ಮರಣ ಹೊಂದಿದನು ಮತ್ತು ಅವನ ಜೀವವು ದೇವರಲ್ಲಿ ಕ್ರಿಸ್ತನೊಂದಿಗೆ ಮರೆಯಾಗಿ ಇಡಲ್ಪಟ್ಟಿದೆ (ಕೊಲೊಸ್ಸೆ 3:3). ಸತ್ತವರೊಳಗಿಂದ ಜೀವಿತನಾಗಿ ಬಂದಂತೆ ತನ್ನನ್ನು ದೇವರಿಗೆ ಸಮರ್ಪಿಸಿಕೊಂಡ ಕ್ರೈಸ್ತನು ನೀತಿಗೆ ಪ್ರತಿಷ್ಠಿಸಿಕೊಂಡವನಾಗಿದ್ದಾನೆ (ರೋಮಾಪುರ 6:13).

## ಮುಕ್ತಾಯ

ದೇವರ ಮಂದೆ ಲೆಕ್ಕಾ ಕೊಡಬೇಕಾದ ಪ್ರತಿಯೊಬ್ಬನೂ ಮಾನಸಾಂತರ ಪಡುವ ಮತ್ತು ಮಾನಸಾಂತರ ಕೇಳುವ ಜೀವನ ಜೀವಿಸುವ ಹಂಗಿನಲ್ಲಿದ್ದಾನೆ. ಮಾನಸಾಂತರವು ಚಿತ್ತದ ಅಗಾಧವಾದ ಬದಲಾವಣೆಯೂ ಜೀವಕ್ಕಾಗಿ ಕ್ರಿಸ್ತನ ಕಡೆಗೆ ಪಾಪದಿಂದ ತಿರುಗಿಕೊಳ್ಳುವುದೂ ಆಗಿದೆ. ಅದು ಪಾಪದ ಮನವರಿಕೆ, ದೇವರ ಚಿತ್ತಾನುಸಾರ ದುಃಖಪಡುವದರಿಂದ, ದೇವರ ಒಳ್ಳೆಯ ತನದಿಂದ ತರಲ್ಪಡುತ್ತದೆ. ದೇವರಲ್ಲಿ ಕ್ರಿಸ್ತನೊಂದಿಗೆ ಅಡಗಿಸಲ್ಪಟ್ಟಿರುವ ನೂತನ ವ್ಯಕ್ತಿಯನ್ನು ಜೀವಕ್ಕೆ ತರುವ ಮಾರ್ಪಡುವಿಕೆಯಲ್ಲಿ ಇದು ಪರಿಣಾಮಗೊಳ್ಳುತ್ತದೆ.

ಸಭೆಯು ನೂತನ ವ್ಯಕ್ತಿಗಳ ಸಮಾಜವಾಗಿರುತ್ತದೆ, ಅವರು ಪರಿಪೂರ್ಣರಲ್ಲ ಆದರೆ ಅವರು ಶುದ್ಧತೆಯ, ಭಕ್ತಿಯ ಹಾಗೂ ನೀತಿಯ ಹುಡುಕುವಿಕೆಯಲ್ಲಿದ್ದಾರೆ. ಅವರ ಜೀವಾಂತ್ಯದವರೆಗಿರುವ ಸಮರ್ಪಣೆಯು ಕರ್ತನ ಸೇವೆಯಲ್ಲಿ ಗೌರವವುಳ್ಳ ಪಾತ್ರಗಳಾಗಿರುವುದು.

ಪರಿಶುದ್ಧ ಬರಹಗಳಲ್ಲಿ ಮಾನಸಾಂತರಕ್ಕಾಗಿ ಮೂರು ಉತ್ತೇಜಕಗಳನ್ನು ಸುಲಭವಾಗಿ ಗುರುತಿಸಬಹುದು. ಮೊದಲನೆಯದು, ದೇವರ ಒಳ್ಳೆಯತನವು ಮಾನಸಾಂತರಕ್ಕೆ ನಡಿಸುವುದು ಎಂದು ಪೌಲನು ಹೇಳಿದನು. "ಆತನ ಅಪಾರ ವಾದ ದಯಾ, ಸಹನ ದೀರ್ಘಶಾಂತಿಗಳನ್ನು ಅಸಡ್ಡೆ ಮಾಡುತ್ತೀಯಾ? ಮನಸ್ಸನ್ನು ಬೇರೆ ಮಾಡಿಕೊಳ್ಳುವದಕ್ಕೆ ದೇವರ ಉಪಕಾರವು ನಿನ್ನನ್ನು ಪ್ರೇರಿಸುತ್ತದೆಂಬದು ನಿನಗೆ ಗೊತ್ತಿಲ್ಲವೆ?" (ರೋಮಾಪುರ 2:4). ಎರಡನೆಯದು, ಬಹುಮಾನದ ವಾಗ್ದಾನವನ್ನು ಪೇತ್ರನು ನಮೂದಿಸಿದು: "ಆದದರಿಂದ ದೇವರು ನಿಮ್ಮ ಪಾಪಗ ಳನ್ನು ಅಳಿಸಿ ಬಿಡುವ ಹಾಗೆ ನೀವು ಪಶ್ಚಾತ್ತಾಪ ಪಟ್ಟು ಆತನ ಕಡೆಗೆ ತಿರುಗಿ ಕೊಳ್ಳಿರಿ. ತಿರುಗಿದರೆ ದೇವರ ಸನ್ನಿಧಾನದಿಂದ ವಿಶ್ರಾಂತಿಕಾಲಗಳು ಒದಗಿ ಆತನು ನಿಮಗೆ ನೇಮಕವಾಗಿರುವ ಕ್ರಿಸ್ತನಾದ ಯೇಸುವನ್ನು ಕಳುಹಿಸಿಕೊಡುವನು" (ಅಪೊಸ್ತಲರ ಕೃತ್ಯಗಳು 3:19). ಮೂರನೆಯದು, ದಂಡನೆಯ ಭಯಕ್ಕೆ ಸಂಬಂಧಿಸಿ ಯೋಹಾನನು ಹೇಳಿದ್ದು:

> ಆ ದಿನಗಳಲ್ಲಿ ಸ್ನಾನಿಕನಾದ ಯೋಹಾನನು, "ಪರಲೋಕ ರಾಜ್ಯವು ಸಮೀಪವಾಯಿತು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಯೂದಾಯದ ಅಡವಿಯಲ್ಲಿ ಸಾರಿ ಹೇಳುತ್ತಾ ಬಂದನು ... ಈಗಲೇ ಮರಗಳ ಬೇರಿಗೆ ಕೊಡಲಿ ಹಾಕಿದೆ; ಒಳ್ಳೇ ಫಲವನ್ನು ಕೊಡದ ಪ್ರತಿಯೊಂದು ಮರವನ್ನು ಕಡಿದು ಬೆಂಕಿಯಲ್ಲಿ ಹಾಕುವರು" (ಮತ್ತಾಯ 3:1-10).

ಮಾನಸಾಂತರವಷ್ಟೇ ದೇವರನ್ನು ಮೆಚ್ಚಿಸಲಿಕ್ಕೆ ಸಾಕಾಗುವದಿಲ್ಲ. ಆದರೆ ಮಾನಸಾಂತರವು ನಮ್ಮೊಳಗೆ ವಿನಯವುಳ್ಳ ಆತ್ಮವನ್ನು ಸೃಷ್ಟಿಸುತ್ತದೆ. ಅಂಥ ಆತ್ಮವು ಕ್ರಿಸ್ತನೊಳಗೆ ಬರುವದಕ್ಕೆ ಆತನು ಅವಶ್ಯಕತೆಯನ್ನಾಗಿ ಮಾಡಿದ್ದಾನೆ. ದೇವರ ಎಲ್ಲಾ ಆಜ್ಞೆಗಳಿಗೆ ವಿಧೇಯರಾಗಲು ನಮ್ಮನ್ನು ಒತ್ತಾಯ ಮಾಡುತ್ತದೆ. ಅದು ಒಬ್ಬನ ಜೀವಿತವನ್ನು ದೇವರ ಚಿತ್ತಕ್ಕೆ ತೆರೆಯುತ್ತದೆ.

ನಮ್ಮ ರಕ್ಷಕನ ಕೊನೆಯ ಮಾತು ಮಹಾ ನಿಯೋಗವಲ್ಲ, ಆದರೆ ಆಸಿಯಾದ ಏಳು ಸಭೆಗಳಲ್ಲಿ ಐದು ಸಭೆಗಳಿಗೆ ಮಾನಸಾಂತರ ಪಡುವದಕ್ಕೆ ಕೊಟ್ಟ ಆತನ ಕರೆ ಎಂದು ಹೇಳಲ್ಪಟ್ಟಿದೆ (ಪ್ರಕಟನೆ 1-3). ನೀವು ಮಾನಸಾಂತರ ಪಡದೆ, ದೇವರ ಪಶ್ಚಾತ್ತಾಪ ಪಟ್ಟ ಜನಾಂಗದಂತೆ ಜೀವಿಸಲು ಕ್ರಿಸ್ತನ ಸಭೆಯೊಳಗೆ ಬಂದಿದ್ದರೆ ನಿಮಗೆ ದೊಡ್ಡ ಅಗತ್ಯತೆಯಿರುವದಿಲ್ಲ. ನೀವು ಕ್ರೈಸ್ತರಾಗಿದ್ದರೆ, ಕ್ರಿಸ್ತನಲ್ಲಿ ನೂತನ ವ್ಯಕ್ತಿಗಳಂತೆ ಜೀವಿಸುತ್ತಿದ್ದರೆ ನಿಮ್ಮ ಅತ್ಯಂತ ಶ್ರೇಷ್ಠ ಹಂಗು ನೀವು ಮಾಡಿದ ಸಮರ್ಪಣೆಯಂತೆ ಜೀವಿಸುವುದಾಗಿದೆ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ಮರಣವು ಐಶ್ವರ್ಯವಂತನ ಯೋಚನೆಯನ್ನು ಹೇಗೆ ಬದಲಾಯಿಸಿತು?
2. ಕ್ರೈಸ್ತನಾಗಲು ಹುಡುಕುತ್ತಿರುವ ಯಾವನಿಗೇ ಆಗಲಿ "ಮಾನಸಾಂತರವು" ಯಾಕೆ ಮೂಲೆಗಲ್ಲಾದ ಪದವೂ ಹಾಗೂ ಪ್ರಮುಖ ಮನೋಭಾವನೆಯು ಆಗಿರುವುದು?
3. ಒಬ್ಬನು ಪಾಪಮಾಡಿದ್ದಾನೆಂದು ದುಃಖಪಡುವದಕ್ಕಿಂತ ಮಾನಸಾಂತರವು ಯಾಕೆ ಹೆಚ್ಚಾಗಿದೆ?
4. ಯಾಕೆ ಮಾನಸಾಂತರವು ಕೇವಲ ದೇವಭಕ್ತಿಯ ದುಃಖ ಮಾತ್ರ ಆಗಿರುವದಿಲ್ಲ.
5. ಸೌಲನ ಪರಿವರ್ತನೆಯಲ್ಲಿ ಮಾನಸಾಂತರವು ಹೇಗೆ ಕಂಡು ಬರುತ್ತದೆ?
6. ಪೌಲನು ಥೆಸಲೊನೀಕದವರನ್ನು ಯಾಕೆ ಪ್ರಶಂಶಿಸಿದನು?
7. ಮಾನಸಾಂತರವು ಪಾಪಗಳ ಅರಿಕೆಗಿಂತ ಹೇಗೆ ಹೆಚ್ಚಾದದ್ದಾಗಿದೆ?
8. ಮಾನಸಾಂತರಕ್ಕಾಗಿ ಯಾವ ಮೂರು ಬೈಬಲಿನ ಉತ್ತೇಜನಗಳಿವೆ?

## ಹೆಚ್ಚಿನ ಬೈಬಲಿನ ಅಧ್ಯಯನಕ್ಕಾಗಿ ಮಾರ್ಗದರ್ಶಿ

ಯಾರು ಮಾನಸಾಂತರ ಪಡಬೇಕು? - 2 ಪೇತ್ರ 3:9; ಅಪೊಸ್ತಲರ ಕೃತ್ಯಗಳು 17:30, 31; ಲೂಕ 13:3.

ಮಾನಸಾಂತರದ ಹೊಸ ಒಡಂಬಡಿಕೆಯ ಉದಾಹರಣೆಗಳು - ತಪ್ಪಿ ಹೋದ ಮಗ

(ಲೂಕ 15:11-24); ಜಕ್ಕಾಯ (ಲೂಕ 19:2-8).

ಮಾನಸಾಂತರದ ಕ್ರಯ - ಮತ್ತಾಯ 10:34-39; ಲೂಕ 12:51-53.

ಮಾರ್ಪಡುವಿಕೆಗಳ ಉದಾಹರಣೆಗಳು - ಅಪೊಸ್ತಲರ ಕೃತ್ಯಗಳು 2:36-47; 8:5, 6, 12, 18-22, 26-39; 9:1-18; 10:1-48; 16:13-15, 25-34; 19:1-5.

ಕ್ರೈಸ್ತ ಪ್ರಭಾವ - ಮತ್ತಾಯ 5:13-16; 1 ಕೊರಿಂಥ 15:33.

ಎಲ್ಲಾ ಜನರಿಗಾಗಿ ಯೇಸು ತನ್ನ ರಕ್ತಸುರಿಸಿದನು - ವಿಧೇಯರಾದವರಿಗೆ ರಕ್ಷಣೆಯು ಒದಗಿಸಲ್ಪಟ್ಟಿದೆ (ಇಬ್ರಿಯರಿಗೆ 9:11-14); ಹೋತ ಹೋರಿಗಳ ರಕ್ತವು ಪಾಪ ಗಳನ್ನು ತೆಗೆದು ಹಾಕಲು ಸಾಕಷ್ಟಾಗಿರಲಿಲ್ಲ (ಇಬ್ರಿಯರಿಗೆ 10:4); ಆತನ ರಕ್ತವು ನಮ್ಮನ್ನು ವಿಮೋಚಿಸಿದೆ (1 ಪೇತ್ರ 1:18, 19); ಪ್ರತಿಯೊಬ್ಬರಿಗಾಗಿ ಯೇಸು ಮರಣವನ್ನು ಅನುಭವಿಸಿದನು (ಇಬ್ರಿಯ 2:9).

ನಾವು ಶಿಲುಬೆಯ ಕಡೆಗೆ ನೋಡುವಾಗ ಕಲಿತುಕೊಳ್ಳುವೆವು - ನಮಗೆ ರಕ್ಷಕನು ಅವಶ್ಯಕತೆಯಿದೆಯೆಂದು (ರೋಮಾಪುರ 3:23; 5:12); ದೇವರು ನಮ್ಮನ್ನು ಎಷ್ಟು ಪ್ರೀತಿಸುತ್ತಾನೆ (ಯೋಹಾನ 3:16); ಜನರು ಪಾಪಿಗಳಾಗಿದ್ದರೂ ಕ್ರಿಸ್ತನು ಅವರನ್ನು ಪ್ರೀತಿಸುತ್ತಾನೆ (ರೋಮಾಪುರ 5:8, 9); ರಕ್ಷಣೆಯು ದೇವರಿಂದ ಬಂದ ವರವೆಂದು (ಎಫೆಸ 2:8-10).

ಬಾಪ್ತಿಸ್ಮದ ಮುಖಾಂತರ ಆತನ ರಕ್ತಕ್ಕೆ ಸಂಬಂಧಿಸುವಾಗ ಶಿಲುಬೆಯ ಮೇಲಿನ ಯೇಸುವಿನ ಮರಣವು ನಮ್ಮನ್ನು ರಕ್ಷಿಸುತ್ತದೆ - ಬಾಪ್ತಿಸ್ಮದಲ್ಲಿ ನಾವು ಆತನೊಂದಿಗೆ ಹೂಣಲ್ಪಡುತ್ತೇವೆ (ರೋಮಾಪುರ 6:3, 4); ಬಾಪ್ತಿಸ್ಮವು ರಕ್ಷಿಸುತ್ತದೆ (1 ಪೇತ್ರ 3:21).

ಸುವಾರ್ತೆಗೆ ವಿಧೇಯರಾದ ಮೇಲೆ ನೀವು ಕ್ರೈಸ್ತನಂತೆ ಹೇಗೆ ಜೀವಿಸಬಹುದು?

1. *ಆತ್ಮಿಕ ಬೆಳವಣಿಗೆಗಾಗಿ ಮಹಾ ಸಮರ್ಪಣೆಯೊಂದಿಗೆ.* ಬೆಳೆಯುವದಕ್ಕೆ ಪ್ರತಿಯೊಂದು ಪ್ರಯತ್ನ ಮಾಡಿರಿ (2 ಪೇತ್ರ 1:1-10). ಬೆಳೆಯಲು ಯೋಚಿಸಿರಿ (ಫಿಲಿಪ್ಪಿ 3:7-15).
2. *ಬೈಬಲ್ ಅಧ್ಯಯನ ಮಾಡಿರಿ.* ಬೈಬಲ್ ವಾಕ್ಯವನ್ನು ಸರಿಯಾಗಿ ಉಪದೇಶಿಸು (2 ತಿಮೊಥೆ 2:15). ಜ್ಞಾನದಲ್ಲಿ ವೃದ್ಧಿಯಾಗು (2 ಪೇತ್ರ 3:18). ಬೈಬಲನ್ನು ಅನುದಿನ ಅಧ್ಯಯನ ಮಾಡು (ಅಪೊಸ್ತಲರ ಕೃತ್ಯಗಳು 17:11). ದೀನತೆಯಿಂದ ವಾಕ್ಯವನ್ನು ಸ್ವೀಕರಿಸು ಮತ್ತು ಅದಕ್ಕೆ ವಿಧೇಯನಾಗು (ಯಾಕೋಬ

1:21-25).

3. *ಕ್ರೈಸ್ತ ಸದ್ಗುಣಗಳನ್ನು ನಿನ್ನ ಜೀವಿತಕ್ಕೆ ಕೂಡಿಸಿಕೋ.* ನಂಬಿಕೆ, ಸದ್ಗುಣ, ಜ್ಞಾನ, ದಯೆ, ತಾಳ್ಮೆ, ಭಕ್ತಿ, ಸಹೋದರ ಸ್ನೇಹ, ಪ್ರೀತಿಯನ್ನು ಕೂಡಿಸಿಕೋ (2 ಪೇತ್ರ 1:5-7).
4. *ಎಡಬಿಡದೆ ಪ್ರಾರ್ಥಿಸು.* ಜ್ಞಾನಕ್ಕಾಗಿ ಪ್ರಾರ್ಥಿಸು (ಯಾಕೋಬ 1:5, 6). ಕ್ರಮವಾಗಿ ಪ್ರಾರ್ಥಿಸು (1 ಥೆಸಲೊನೀಕ 5:17).
5. *ಕ್ರಮ ಪ್ರಕಾರವಾಗಿ (ಸಾಧ್ಯವಾದರೆ ಇತರ ಕ್ರೈಸ್ತರೊಂದಿಗೆ) ಆರಾಧನೆ ಮಾಡಿರಿ.* ಸಭೆಯಾಗಿ ಕೂಡುವದನ್ನು ಮರೆತು ಬಿಡಬೇಡಿ (ಇಬ್ರಿಯ 10:25). ನಿಮ್ಮ ಸ್ಥಳದಲ್ಲಿ ಸಭೆ ಇರದಿದ್ದರೆ, ನಿಮ್ಮ ಮನೆಯಲ್ಲಿ ಒಂದನ್ನು ನೀವು ಪ್ರಾರಂಭಿಸಬಹುದು. (ಪುರಾವಣಿ 2ರಲ್ಲಿ "**ಬೈಬಲಿಗೆ ಅನುಗುಣವಾಗಿ ಒಂದು ಹೊಸ ಸಭೆಯನ್ನು ಸಂಘಟಿಸುವುದು ಹೇಗೆ**" ಎಂಬ ಚಾರ್ಟನ್ನು ನೋಡಿರಿ.) ಆತ್ಮದಲ್ಲಿಯೂ ಸತ್ಯದಲ್ಲಿಯೂ ಆರಾಧಿಸಿರಿ (ಯೋಹಾನ 4:24).
6. *ಯೇಸುವಿನ ಬಗ್ಗೆ ಇತರರಿಗೆ ಹೇಳಿರಿ.* ನಿಮಗೆ ಸಾಧ್ಯವಾದಷ್ಟು ಪ್ರತಿಯೊಬ್ಬರಿಗೆ ಬೋಧಿಸಿರಿ (ಮತ್ತಾಯ 28:18-20; ಮಾರ್ಕ 16:15, 16). ಈ ಪುಸ್ತಕವನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳಿರಿ ಹಾಗೂ ಅವರು ಕ್ರೈಸ್ತರಾಗಲಿಕ್ಕೆ ಸಹಾಯ ಮಾಡಿರಿ.
7. ಒಳ್ಳೇ ಕೆಲಸಗಳನ್ನು ಮಾಡಿರಿ. ಯೇಸುವಿನಿಂದ ರಕ್ಷಿಸಲ್ಪಟ್ಟವರು ಒಳ್ಳೆಯ ಕೆಲಸಗಳನ್ನು ಮಾಡಲು ಸೃಷ್ಟಿಸಲ್ಪಟ್ಟಿರುವರು (ಎಫೆಸ 2:10).

## 20

# ಯೇಸುವಿನೊಂದಿಗೆ ನೀವೇನು ಮಾಡುವಿರಿ?

ಈ ಜಗತ್ತು ವಿಶಾಲವಾದದಾಗ್ಯೂ ಸಂಕೀರ್ಣತೆಗಳನ್ನೊಳಗೊಂಡಿದ್ದರೂ ದೈವಿಕ ಪಲಿಶುದ್ಧ ಬರಹಗಳಿಗನಸಾರವಾಗಿ, ಇದು ಕೇವಲ ನಾವು ನಿತ್ಯತ್ವದಲ್ಲಿ ಜೀವಿಸುವದಕ್ಕಾಗಿರುವ ಜೀವನಕ್ಕಾಗಿ ಸಿದ್ಧತೆಯ ಸ್ಥಳ ಮಾತ್ರ ಆಗಿದೆ. ಆದುದರಿಂದ ಇಲ್ಲಿಯ ಜೀವನವು ಕೇವಲ ಅಲ್ಪವಾದ ಪ್ರಾರಂಭವಾಗಿದೆ. ಪ್ರತಿಯೊಬ್ಬ ಮಾನವ ಜೀವಿಯೂ ಜೀವಿಸುವ ಆತ್ಮನಾಗಿದ್ದಾನೆ, ಈ ಲೋಕವನ್ನು ದಾಟಿ ಆಚೆಕಡೆಯಲ್ಲಿ ಪರಲೋಕದಲ್ಲಾಗಲೀ ಇಲ್ಲವೇ ನರಕದಲ್ಲಾಗಲೀ ಜೀವಿಸಲು ನೇಮಕಗೊಂಡಿದ್ದಾನೆ. ಹೊಸ ಒಡಂಬಡಿಕೆಯು ನಮಗಾಗಿ ನಿತ್ಯ ಜೀವನವನ್ನೂ ಹಾಗೂ ನಿತ್ಯ ನಾಶನವನ್ನೂ ವಿವಲಿಸುತ್ತದೆ (ಮತ್ತಾಯ 25:46). ಅನಂತರದಲ್ಲಿ ವಾಸಿಸುವದಕ್ಕಾಗಿ ನಮಗೆ ನಿತ್ಯಜೀವ ಹಾಗೂ ನಿತ್ಯ ಮರಣದ ಮಧ್ಯದಲ್ಲಿ ಯಾವ ಸ್ಥಳವು ಇರುವದಿಲ್ಲ. ಮರಣದಲ್ಲಿ ಇಲ್ಲವೇ ಯೇಸುವು ಹಿಂದಿರುಗಿ ಬರುವಾಗ ನಮ್ಮ ಅಂತಿಮ ಸ್ಥಿತಿಯು ಎಂದೆಂದಿಗೂ ನಿರ್ಧರಿಸಲ್ಪಡುತ್ತದೆ. ನಿತ್ಯತ್ವದ ಲೋಕದಲ್ಲಿ ಪ್ರವೇಶಿಸಿದ ನಂತರ ದೇವರೊಂದಿಗಿನ ನಮ್ಮ ಸಂಬಂಧದಲ್ಲಿ ಬದಲಾವಣೆಗೆ ಎರಡನೆಯ ಅವಕಾಶಗಳೇ ಇರುವದಿಲ್ಲ. ಎಂಥಾ ಸ್ವಸ್ಥ ಚಿತ್ತವುಳ್ಳ ಆಲೋಚನೆ! ಯೇಸುವಿನ ಬಗ್ಗೆ ನಾವು ಮಾಡುವಂಥದ್ದಕ್ಕೆ ನಿತ್ಯತ್ವದ ಪರಿಣಾಮವಿರುತ್ತದೆ. ಈಗ ನಿಮಗೆ ಸಮೃದ್ಧ ಜೀವನ ಇರುವಂತೆಯೇ (ಯೋಹಾನ 10:10) ಮತ್ತು ಬರಲಿಕ್ಕಿದ್ದ ಲೋಕ ದಲ್ಲಿ ನಿತ್ಯಜೀವ (1 ಯೋಹಾನ 2:25) ಇರುವಂತೆಯೂ ನೀವು ಕ್ರೈಸ್ತರಾಗಬೇಕೆಂತಲೂ ಕ್ರಿಸ್ತನಿಗಾಗಿ ನಿಮ್ಮ ಜೀವಿತ ಜೀವಿಸಬೇಕೆಂತಲೂ ನಾವು ನಿಮ್ಮನ್ನು ಬೇಡಿಕೊಳ್ಳುತ್ತೇವೆ.

ಪಲಿಶುದ್ಧ ಬರಹದಲ್ಲಿ ಹೇಳಲ್ಪಟ್ಟ ಮುಖ್ಯ ಪ್ರಸ್ತಾಪದಂತೆ "ಸಭೆಯ" ನಂಬಿಗಸ್ತ ಸದಸ್ಯನಾಗುವದರ ಈ ಅಧ್ಯಯನದ ಅಂತ್ಯಕ್ಕೆ ನಾವು ಬಂದಿದ್ದೇವೆ, ಯೇಸು ಕ್ರಿಸ್ತನಿಗೆ - ದೇವರ ಕುಮಾರನಿಗೆ - ಈ ಲೋಕಕ್ಕೆ ಬಂದು ತನ್ನ ಜೀವನ, ಬೋಧನೆ ಮತ್ತು ಪ್ರೀತಿಯಿಂದ ದೇವರು ಹೇಗಿದ್ದಾನೆ ಹಾಗೂ ದೇವರ ಚಿತ್ತವು

ನಮಗೆ ಏನಾಗಿದೆ ಎಂಬುದನ್ನು ಪ್ರದರ್ಶಿಸಿದಾತನಿಗೆ ಸಂಕ್ಷೇಪವಾಗಿ ನೀವು ಪರಿಚಯಿಸಲ್ಪಟ್ಟಿದ್ದೀರಿ. ನಮ್ಮ ಪಾಪಗಳಿಗಾಗಿ ಶಿಲುಬೆಯ ಮೇಲೆ ಆತನು ಮರಣ ಹೊಂದಿದನು; ರಕ್ಷಣೆಯ ಆತನ ಸಂದೇಶಕ್ಕೆ ವಿಧೇಯರಾಗುವ ಪ್ರತಿಯೊಬ್ಬರೂ ದೇವರ ಮಗುವಾಗಲು ಹಾಗೂ ದೇವರ ಮಗುವಿನಂತೆ ಜೀವಿಸಲು ಸಾಧ್ಯವಾಗುವಂತೆ ಮಾಡಿದ್ದಾನೆ. ಅಷ್ಟೇ ಅಲ್ಲದೆ, ಆತನ ಜೀವನ ಮತ್ತು ಮರಣದಿಂದ ಪರಿಣಾಮವಾದ ಮತ್ತು ಪರಿಣಾಮವಾಗುತ್ತಲೇ ಇರುವ ಸಭೆಯ ಸ್ವಭಾವವನ್ನು ಜಾಗರೂಕತೆಯಿಂದ ಅಧ್ಯಯನ ಮಾಡಿರುವಿರಿ. ಒಬ್ಬನು ಹೇಗೆ ಆ ಸಭೆಯಲ್ಲಿ ಪ್ರವೇಶಿಸುವುದು, ಆ ಸಭೆಯಾಗಿ ಜಗತ್ತಿನಲ್ಲಿ ಹೇಗೆ ಜೀವಿಸುವುದು ಎಂಬುದನ್ನು ನೀವು ನೋಡಿದ್ದೀರಿ. ಈಗ ನೀವು ಒಂದು ದೊಡ್ಡ ಪ್ರಶ್ನೆಗೆ, ನೀವೆಂದೂ ಯೋಚಿಸಿದ ಅತೀ ಗಂಭೀರ ವಾದ ಪ್ರಶ್ನೆಗೆ ಬಂದಿದ್ದೀರಿ: “ಯೇಸುವಿನೊಂದಿಗೆ ನಾನೇನು ಮಾಡಬೇಕು?”

ನಿಮ್ಮ ಹೃದಯದಲ್ಲಿ ನೀವು ಕ್ರೈಸ್ತರಾಗಬೇಕೆಂಬುದೂ ನಿಮ್ಮ ಉಳಿದ ಜೀವನದಲ್ಲಿ ನೀವು ಕ್ರಿಸ್ತನ ನಂಬಿಗಸ್ತ ಹಿಂಬಾಲಕರಾಗಿರ - ಬೇಕೆಂಬುದೂ ಎಲ್ಲಾ ಕ್ರೈಸ್ತರ ಯಥಾರ್ಥವಾದ ಮತ್ತು ಆಸಕ್ತಿಯುಳ್ಳ ನಿರೀಕ್ಷೆಯಾಗಿದೆ. ನಿಮ್ಮ ಅಧ್ಯಯನ ಸಮಯದಲ್ಲಿ “ನಾನು ಕ್ರೈಸ್ತನಾಗಲು ಬಯಸುವೆನು” ಎಂದು ನಿಮ್ಮಷ್ಟಕ್ಕೆ ನೀವೇ ಹೇಳಿಕೊಂಡಿರಬಹುದು. “ ಕ್ರೈಸ್ತನಾಗುವದರ ಬಗ್ಗೆ ನನಗೆ ಪ್ರಶ್ನೆಗಳಿವೆ ಮತ್ತು ಆ ಪ್ರಶ್ನೆಗಳು ಉತ್ತರಿಸಲ್ಪಟ್ಟನಂತರ ನಾನು ಕ್ರೈಸ್ತನಾಗುವೆನು” ಎಂದು ನೀವು ಯೋಚಿಸಿರಬಹುದು.

ನೀವು ಪ್ರಶ್ನೆಯನ್ನು ಕೇಳುತ್ತಿದ್ದರೆ, ಈ ಪುಸ್ತಕದ ಉಳಿದ ಭಾಗವನ್ನು ಜಾಗರೂಕತೆಯಿಂದ ಓದಿರಿ. ಇದು ಕೆಲವು ಉತ್ತರಗಳನ್ನು ಒದಗಿಸುವುದು. ನೀವು ಕ್ರೈಸ್ತರಾಗುವ ಹಾಗೂ ಕ್ರೈಸ್ತನಂತೆ ಜೀವಿಸುವ ನಿಮ್ಮ ಅಪೇಕ್ಷೆಯು ನೆರವೇರಲಿಕ್ಕಾಗುವಂತೆ ನೀವು ತೆಗೆದು ಕೊಳ್ಳಬೇಕಾದ ಕೆಲವು ಹೆಜ್ಜೆಗಳನ್ನು ಅದು ಪಟ್ಟಿ ಮಾಡುವುದು ಮತ್ತು ವಿವರಿಸುವುದು.

## ಮೊದಲನೆ ಹೆಜ್ಜೆ: ರಕ್ಷಣೆ

ಮೊದಲನೆಯ ಹೆಜ್ಜೆಯು ಕ್ರೈಸ್ತನಾಗುವುದು. ಯಾವನಾದರೂ, ಜಗತ್ತಿನಲ್ಲಿ ಎಲ್ಲಿಯಾದರೂ ಒಬ್ಬನು ಕ್ರಿಸ್ತನಲ್ಲಿ ನಂಬಿಕೆಯಿಟ್ಟು (ಯೋಹಾನ 8:24), ಮಾನಸಾಂತರ ಪಟ್ಟು ಇಲ್ಲವೇ ತನ್ನ ಪಾಪಗಳಿಂದ ಹಿಂದಿರುಗಿ ಕೊಂಡು; (ಅಪೊಸ್ತಲರ ಕೃತ್ಯಗಳು 17:30), ಯೇಸುವನ್ನು ಕ್ರಿಸ್ತನೆಂದು ಅರಿಕೆ ಮಾಡಿ (ರೋಮಾಪುರ 10:10), ಪಾಪಗಳ ಪರಿಹಾರಕ್ಕಾಗಿ ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದಿದರೆ (ಅಪೊಸ್ತಲರ ಕೃತ್ಯಗಳು 2:38) ಅವನು ಕ್ರೈಸ್ತನಾಗಬಹುದು.

ನೀವು ಕೇಳ ಬಯಸುವ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡೋಣ:

**“ಮಕ್ಕಳ ಬಗ್ಗೆ ಏನು?”**

ಶಿಶುಗಳ ಇಲ್ಲವೇ ಚಿಕ್ಕಮಕ್ಕಳ ಬಾಪ್ತಿಸ್ಮದ ಬಗ್ಗೆ ಹೊಸ ಒಡಂಬಡಿಕೆಯು ಏನನ್ನೂ ನಮೂದಿಸಿರುವದಿಲ್ಲ. ಅವರಿಗೆ ಬಾಪ್ತಿಸ್ಮ ಮಾಡಿಸುವ ಅಗತ್ಯತೆಯಿರುವದಿಲ್ಲ. ಯಾಕಂದರೆ ಕರ್ತನ ಮುಂದೆ ಅವರು ತಮ್ಮ ನಿರ್ದೋಷತ್ವದಲ್ಲಿ ಸುರಕ್ಷಿತರಾಗಿದ್ದಾರೆ. ಕೆಟ್ಟದ್ದರಿಂದ ಒಳ್ಳೆಯದನ್ನು ಅವರು ತಿಳಿದಿರುವದಿಲ್ಲ. ಹೀಗಿರುವದರಿಂದ ಅವರು ದೇವರ ದೃಷ್ಟಿಯಲ್ಲಿ ಲೆಕ್ಕ ಕೊಡಬೇಕಾಗಿರುವದಿಲ್ಲ. ಕರ್ತನು ತಮ್ಮಿಂದ ಏನನ್ನು ಕೇಳುತ್ತಾನೆಂಬುದರ ಅರುಹನ್ನು ಹೊಂದುವಾಗ ಅವರು ರಕ್ಷಣೆಯ ಕರ್ತನ ಮಾರ್ಗಕ್ಕೆ ವಿಧೇಯ ರಾಗುವದರಿಂದ (ಎಲ್ಲಾ ಜನರಂತೆ) ಅವರು ಕ್ರೈಸ್ತರಾಗುವರು. ಅವರು ತಮ್ಮ ನಿರ್ಮಲತ್ವದಲ್ಲಿ ದೇವರ ಮುಂದೆ ಸುರಕ್ಷಿತರಾಗಿದ್ದಾರೆ. ಯಾಕಂದರೆ ಅವರು ಪಾಪ ಮಾಡಿರುವದಿಲ್ಲ ಅವರಿರುವಂತೆಯೇ ಅವರ ಮನಸ್ಸುಗಳೊಂದಿಗೆ ತಮ್ಮನ್ನು ನಡಿಸಿದವರಲ್ಲಿ ತಿಳಿದುಕೊಳ್ಳಲು ಹುಡುಕುತ್ತ, ಸಂಪೂರ್ಣವಾಗಿ ತಮ್ಮ ವಿಶ್ವಾಸವನ್ನಿಡುವದರಲ್ಲಿ ಅವರ ಭರವಸೆ, ನಂಬಿಕೆ ಮತ್ತು ಬೋಧಿಸಲ್ಪಡುವದನ್ನು ಅನುಸರಿಸಲು ಪ್ರೌಢರಿಗೆ ಒಂದು ಉದಾಹರಣೆಯಾಗಿದೆ (ಮತ್ತಾಯ 18:3). “ಪರಲೋಕ ರಾಜ್ಯವು ಇಂಥವರದೇ” (ಮತ್ತಾಯ 19:14ಬಿ) ಎಂದು ಯೇಸು ಚಿಕ್ಕಮಕ್ಕಳ ಬಗ್ಗೆ ಹೇಳಿದನು.

ದೇವರ ಮುಂದೆ ಪಾಪ ಮಾಡಿರುವಿರೆಂದು ತಿಳಿದು ಕೊಳ್ಳುವ, ರಕ್ಷಣೆಯ ಮಾರ್ಗವನ್ನು ಅರ್ಥ ಮಾಡಿಕೊಳ್ಳುವ ಹಾಗೂ ರಕ್ಷಿಸಲ್ಪಡಲು ಕ್ರೈಸ್ತರಾಗ ಬೇಕೆಂಬುದನ್ನು ತಿಳಿದಿರುವ ಯುವಕನಂತೆ ಇಲ್ಲವೇ ವಯಸ್ಕನಂತೆ ಈಗ ನೀವು ರಕ್ಷಣೆಯ ಕರ್ತನ ಯೋಜನೆಗೆ ವಿಧೇಯರಾಗುವ ಅಗತ್ಯತೆಯಿದೆ.

**“ನಾನು ಏನು ಮಾಡತಕ್ಕದ್ದು?”**

ನಮ್ಮ ಅಧ್ಯಯನಗಳಲ್ಲಿ ಕ್ರೈಸ್ತನಾಗುವುದು ಹೇಗೆ ಎಂಬುದನ್ನು ನೀವು ನೋಡಿದ್ದೀರಿ. ಯೇಸುವು ದೇವರ ಕುಮಾರನಾಗಿರುವನೆಂಬುದರ ಬಗೆಗಿನ ಪರಿಶುದ್ಧ ಬರಹಗಳ ಪುರಾವೆಯನ್ನೂ, ಸಾಕ್ಷಿಯನ್ನೂ ಸ್ವೀಕರಿಸುವದರಿಂದ ನೀವು ಕ್ರೈಸ್ತರಾಗಬಹುದು. ಸತ್ಯವಾಗಿ ಸ್ಪಷ್ಟವಾಗಿರುವ ಒಂದೇ ಪುಸ್ತಕವು, ಬೈಬಲ್ ಯೇಸುವು ಯಾರಾಗಿದ್ದಾನೆ ಮತ್ತು ಜಗತ್ತಿನೊಳಗೆ ಏನನ್ನು ಮಾಡಲು ಬಂದನು ಎಂಬುದನ್ನು ನಿಮಗೆ ಹೇಳುತ್ತದೆ. ಈ ಸಂದೇಶವನ್ನು ನೀವು ಸ್ವೀಕರಿಸುವಿರೋ? ನೀವು ಸ್ವೀಕರಿಸಿದರೆ, ಯೇಸು ಕ್ರಿಸ್ತನು ದೇವರ ಕುಮಾರನು, ನಿಮ್ಮ ಪಾಪಗಳಿಗಾಗಿ ಶಿಲುಬೆಯ ಮೇಲೆ ಮರಣ ಹೊಂದಲು ಈ ಲೋಕಕ್ಕೆ ಬಂದನು ಮತ್ತು ನೀವು ದೇವರ ಮಗುವಾಗಿರಲು ಸಾಧ್ಯವಾಗುವಂತೆ ಮಾಡಲು ಬಂದನು ಎಂಬುದನ್ನು ನಂಬಲು ಬಂದಿದ್ದೀರಿ.

"ನನ್ನ ಪಾಪಗಳಿಂದ ನಾನು ತಿರುಗಿಕೊಂಡಿದ್ದೇನೋ?" ಎಂದು ನೀವು ನಿಮ್ಮನ್ನು ಕೇಳಿಕೊಳ್ಳಬೇಕು. ನೀವು ಈ ಲೋಕದಲ್ಲಿ ಎಂದೂ ಪರಿಪೂರ್ಣರಾಗಿರುವದಿಲ್ಲ. ಆದರೆ ಮಾನಸಾಂತರ ಪಡುವದರಿಂದ ಪಾಪವನ್ನು ನಿಮ್ಮ ಜೀವನದಿಂದ ತೆಗೆದು ಹಾಕಿ ಇಂದಿನಿಂದ ಕರ್ತನ ವಾಕ್ಯವನ್ನು ಯಥಾರ್ಥವಾಗಿ ಅನುಸರಿಸಲು ನೀವು ನಿರ್ಣಯಿಸಿಕೊಳ್ಳಿರಿ. ನಿಮ್ಮ ಯಥಾರ್ಥವಾದ ಮಾನಸಾಂತರವನ್ನು ಅನುಸರಿಸಿ, ಯೇಸುವು ನಿಮ್ಮ ಕರ್ತನಾಗಿರುವನು ಹಾಗೂ ಪರಿಶುದ್ಧ ಬರಹಗಳು ನೀವು ಜೀವಿಸುವ ದಕ್ಕಾಗಿ ನಿಮಗೆ ಮಾರ್ಗದರ್ಶಿ ಪುಸ್ತಕವಾಗಿರುವುದು.

ಅನಂತರ ನಿಮ್ಮ ಪಾಪಗಳ ಕ್ಷಮಾಪಣೆಗಾಗಿ ಕ್ರಿಸ್ತನಲ್ಲಿ ನಿಮಗೆ ಬಾಪ್ತಿಸ್ಮ ಕೊಡುವವರನ್ನು ನೀವು ಕಂಡುಕೊಳ್ಳತಕ್ಕದ್ದು. ನಿಮ್ಮ ಸಮಾಜದಲ್ಲಿ ಒಂದು ಕ್ರಿಸ್ತನ ಸಭೆಯಿರಬಹುದು. ಹಾಗಿದ್ದರೆ, ಆ ಸಭೆಯ ಒಬ್ಬ ಸದಸ್ಯನನ್ನು ಕಂಡು ಕೊಳ್ಳಿರಿ. ಕ್ರಿಸ್ತನಲ್ಲಿ ನಿಮಗೆ ಬಾಪ್ತಿಸ್ಮ ಕೊಡುವ ಕ್ರೈಸ್ತ ವ್ಯಕ್ತಿಗೆ ನಿಮ್ಮನ್ನು ಪರಿಚಯಿಸಲು ಸಭೆಯ ಒಬ್ಬನನ್ನು ಕಂಡುಕೊಳ್ಳಿರಿ. ಕ್ರೈಸ್ತ ಮನುಷ್ಯನಿಗೆ ನೀವು ಪರಿಚಯವಿಲ್ಲದವರಾದ್ದರಿಂದ, ಯೇಸುವು ಕ್ರಿಸ್ತನಾಗಿದ್ದಾನೆಂದು ಇತರರ ಮುಂದೆ ಅರಿಕೆ ಮಾಡಲು ನೀವು ಸಿದ್ಧರಾಗಿರುವಿರೆಂದು, ನಿಮ್ಮ ಪಾಪಗಳ ಕ್ಷಮಾಪಣೆಗಾಗಿ ಕ್ರಿಸ್ತನ ಆತ್ಮಿಕ ದೇಹದಲ್ಲಿ ಅವರು ನಿಮಗೆ ಬಾಪ್ತಿಸ್ಮ ಮಾಡಿಸುವಂತೆ ಬಯಸುವಿರೆಂದು ಹೇಳಿರಿ. ನಿಮಗೆ ಸಹಾಯ ಮಾಡಲು ಅವರು ಸಂತೋಷವುಳ್ಳವರಾಗಿರುವರು.

**"ಕ್ರಿಸ್ತನ ಸಭೆಯನ್ನು ನಾನು ಕಂಡುಕೊಳ್ಳುವುದು ಹೇಗೆ?"**

ಧಾರ್ಮಿಕ ಗಲಿಬಿಲಿಯ ಇಂದಿನ ದಿನದಲ್ಲಿ ನೀವು ಕರ್ತನ ಸಭೆಯನ್ನು ಪ್ರವೇಶಿಸಿದ ಜನರ ಗುಂಪನ್ನು ಸಂಪರ್ಕಿಸಿರುವಿರೆಂದೂ ಕರ್ತನ ಸಭೆಯಾಗಿ ಮುಂದರಿದಿರುವಿರೆಂದೂ ನೀವು ನಿಶ್ಚಿತಪಡಿಸಿ ಕೊಳ್ಳಲು ಬಯಸುವಿರಿ. ಒಂದು ರೀತಿಯಲ್ಲಿ ನೀವು ಹೇಳುವುದು ಅವರು ತಮ್ಮನ್ನು ತಾವೇ ಹೇಗೆ ಸಂಬಂಧಿಸಿಕೊಳ್ಳುವರು ಎಂಬುದನ್ನು ಗಮನಿಸುವುದು ಆಗಿದೆ. ಅವರು ಮಾನವ ನಿರ್ಮಿತ ಯಾವುದೇ ಹೆಸರುಗಳನ್ನು ಧರಿಸಿಕೊಳ್ಳುವದಿಲ್ಲ. ಅವರು ತಮ್ಮನ್ನು ಕ್ರಿಸ್ತನ ಸಭೆ ಎಂದು ಕರೆದು ಕೊಳ್ಳುವರು. ಬೈಬಲಿನಲ್ಲಿ ಕಂಡು ಬರುವ ಸಭೆಗಾಗಿರುವ ಇತರ ನಾಮಾಂಕಿತಗಳಿಂದ ತಮ್ಮನ್ನು ಸಂಭೋಧಿಸಿಕೊಳ್ಳುವರು. ಸಭೆಗೆ ಸಂಬಂಧಿಸಿ ಹೇಳದಿರುವ, ಬೈಬಲನುಗುಣವಾಗಿರದ ಹೆಸರನ್ನು ತಮಗೆ ಕೊಟ್ಟು ಕೊಂಡದ್ದನ್ನು ನೀವು ನೋಡಿದರೆ, ಅದು ಅವರು ಒಂದು ಸಭಾಪಂಗಡಕ್ಕೆ (denomination) ಸೇರಿರುವ ಸಂಕೇತವಾಗಿದೆ ಮತ್ತು ಆದುದರಿಂದ ಅವರು ಪ್ರತ್ಯೇಕವಾಗಿರುವರು ಮತ್ತು ಕರ್ತನ ಸಭೆಗಿಂತ ಭಿನ್ನವಾಗಿರುವರು.

ದೇವರ ವಾಕ್ಯವನ್ನು ಅವರು ಅನುಸರಿಸುತ್ತಿರುವರೋ ಎಂಬುದನ್ನು ಪರೀಕ್ಷಿಸುವದರಿಂದ ಆ ಗುಂಪು ಕ್ರಿಸ್ತನ ಸಭೆಯಾಗಿರುವುದೋ ಎಂದು ಹೇಳುವ

ಇನ್ನೊಂದು ವಿಧಾನವಾಗಿದೆ. ಅವರ ಗುರಿಗಳನ್ನೂ ಉದ್ದೇಶಗಳನ್ನೂ ನಿರ್ಧರಿಸಲು ಅವರಿಗೆ ನೀವು ಕೇಳಬೇಕಾದ ಕೆಲವು ಪ್ರಶ್ನೆಗಳು ಇಲ್ಲಿವೆ:

ನೀವು ಹೊಸ ಒಡಂಬಡಿಕೆಯ ಸಭೆಯಾಗಿರಲು ಸುಮ್ಮನೆ ಪ್ರಯತ್ನಿಸುತ್ತಿರುವಿರೋ?
ಸಮಾಜಕ್ಕೆ ಪ್ರೀತಿ, ಕರುಣೆ, ಐಕ್ಯತೆ, ಅನುಕಂಪ ಹಾಗೂ ಸೇವೆಯು ಆಚರಿಸಲ್ಪಡುತ್ತಿದೆಯೋ?
ಭಾನುವಾರ ನೀವು, ಆರಾಧನೆಗಾಗಿ ಕೂಡಿ ಬರುವಾಗ, ನಿಮ್ಮ ಆರಾಧನೆಯು ಹೇಗಿರುವುದು?
ಅಪೊಸ್ತಲರ ಕೃತ್ಯಗಳು 20:7ರಲ್ಲಿಯಂತೆ ವಾರದ ಪ್ರತಿ ಮೊದಲನೆಯ ದಿನ (ಪ್ರತೀ ಭಾನುವಾರ) ಕರ್ತನ ಭೋಜನದಲ್ಲಿ ನೀವು ಭಾಗವಹಿಸುವಿರೊ?
ಹೊಸ ಒಡಂಬಡಿಕೆಯ ಉದಾಹರಣೆಯಂತೆ ವಾದ್ಯಗಳ ಉಪಯೊಗವಿಲ್ಲದ ಸಂಗೀತ ಹಾಡುವಿರೋ?
ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸುವಿರೋ?
ನಿಮ್ಮ ಒಂದೇ, ವಿಶ್ವಾಸ ಸೂತ್ರವಾಗಿ ಮತ್ತು ಮಾರ್ಗದರ್ಶಿಯಾಗಿ ಬೈಬಲಿನ ಅಧ್ಯಯನ ಮಾಡುವಿರೋ?
ನೀವು ಸಮೃದ್ಧಿಗೊಂಡಂತೆ ಪ್ರತೀ ಭಾನುವಾರ ಕಾಣಿಕೆ ಕೊಡುವಿರೋ (1 ಕೊರಿಂಥ 16:1, 2)?
ಒಂದು ಸಭೆಯಾಗಿ ನೀವು ಹೇಗೆ ಸಂಘಟಿಸಲ್ಪಟ್ಟಿರುವಿರಿ? ಪ್ರಸಂಗಿಗಳು, ಬೋಧಕರು, ಹಿರಿಯರು, ಡೀಕನರು, ಇವರಿಗಿಂತ ಹೆಚ್ಚಾದ ಸಂಘಟನೆಗಳಿರುವುದೋ?[1]
ನಿಮಗೆ ಭೂಲೋಕದ ಮುಖ್ಯ ಕೇಂದ್ರ ಸ್ಥಾನವಿದೆಯೋ ಇಲ್ಲವೇ ನಿಮ್ಮ ಶಿರಸ್ಸಿನಂತೆ ಕ್ರಿಸ್ತನ ಕಡೆಗೆ ಮಾತ್ರ ನೋಡುತ್ತಿರುವಿರೋ?[2]
ಈ ಜಗತ್ತಿನಲ್ಲಿ ನಿಮ್ಮ ನಿಯೋಗವು ಯಾವುದು? ನಮ್ಮ ಕರ್ತನ ಮಹಾ ನಿಯೋಗವನ್ನು ನೆರವೇರಿಸಲು ನೀವು ಹುಡುಕುತ್ತಿರುವಿರೋ (ಮತ್ತಾಯ 28:19, 20)?

ಈ ಪ್ರಶ್ನೆಗಳನ್ನು ಕೇಳಲು ನೀವು ಜಾಣರಾಗಿರುವಿರಿ. ಯಾಕಂದರೆ ನೀವು ಅವರು ಯಾರಾಗಿದ್ದರೆಂಬುದನ್ನು ಅರ್ಥಮಾಡಿಕೊಳ್ಳಲು ಹುಡುಕುತ್ತಿರುವಿರಿ. ನೀವು ಕರ್ತನ ಸಭೆಯ ಸದಸ್ಯರಾಗಿರಲು ಬಯಸುತ್ತಿರುವಿರಿ; ಆದರೆ ಸಭಾಪಂಗಡದ (denomination) ಸದಸ್ಯರಾಗಿ ಅಲ್ಲ. (ಪುರಾವಣಿ 2ರಲ್ಲಿ "ಬೈಬಲಿಗೆ ಅನುಗುಣವಾಗಿ ಒಂದು ಹೊಸ ಸಭೆಯನ್ನು ಸಂಘಟಿಸುವುದು ಹೇಗೆ" ಎಂಬ ಚಾರ್ಟನ್ನು ನೋಡಿರಿ.)


ಕ್ರಿಸ್ತನ ಸಭೆಯನ್ನು ನೀವು ಕಂಡುಕೊಳ್ಳದಿದ್ದರೆ, ಆಗ ನೀವು ಒಂದನ್ನು ಸ್ಥಾಪಿಸಿರಿ. ಅದನ್ನು ಹೇಗೆ ಮಾಡುವುದು ಎಂಬುದು ಇಲ್ಲದೆ. ನಿಜವಾದ ದೇವರ ಸೇವೆ ಮಾಡಲು ಆಸಕ್ತಿಯುಳ್ಳ ಒಬ್ಬ ಯಥಾರ್ಥವಾದ ಮನುಷ್ಯನನ್ನು ಕಂಡುಕೊಳ್ಳಿರಿ. ಅವನು ತನ್ನ ಬೈಬಲನ್ನು ಅಧ್ಯಯನ ಮಾಡುತ್ತಿರುವಂತೆ ಈ ಪುಸ್ತಕವನ್ನು ಓದಲು ಅವನಿಗೆ ಹೇಳಿರಿ. ಆಮೇಲೆ ನಿಮ್ಮೊಂದಿಗೆ ಕ್ರೈಸ್ತನಾಗಲು ಹಾಗೂ ನಿಮ್ಮ ಸಮಾಜದಲ್ಲಿ ಕರ್ತನ ಸಭೆಯಾಗಿರಲು ನಿಮ್ಮೊಂದಿಗೆ ಕೂಡಿ ಕೊಳ್ಳುವನೋ ಎಂದು ಅವನನ್ನು ಕೇಳಿರಿ. ಅವನು ಕ್ರಿಸ್ತನನ್ನು ಹಿಂಬಾಲಿಸಲು ಬಯಸಿದರೆ, ನೀವು ಒಬ್ಬರಿಗೊಬ್ಬರು ಬಾಪ್ತಿಸ್ಮ ಮಾಡಿಸಿಕೊಳ್ಳಿರಿ. ಸಮೀಪದ ಹೊಳೆಗೆ, ಸರೋವರಕ್ಕೆ ಇಲ್ಲವೇ ಕೆರೆಗೆ (ಒಬ್ಬನನ್ನು ಮುಳುಗೇಳಿಸಲು ಸಾಕಷ್ಟು ನೀರು ಇರುವ ಸ್ಥಳಕ್ಕೆ) ಹೋಗಿರಿ.

ನೀವು ಅವನಿಗೆ ಬಾಪ್ತಿಸ್ಮ ಮಾಡಿಸುವಾಗ, ಬೈಬಲಿನ ಮೂರು ಆಜ್ಞೆಗಳನ್ನು ಪೂರೈಸಲು ನಿಶ್ಚಯಮಾಡಿಕೊಳ್ಳಿರಿ. ಮೊದಲನೆಯದು, "ಯೇಸು ಕ್ರಿಸ್ತನು ದೇವರ ಕುಮಾರನಾಗಿರುವನೆಂದು ನಂಬುವಿಯೋ?" ಎಂದು ಅವನಿಗೆ ಪ್ರಶ್ನೆ ಕೇಳಿರಿ. ಈ ಆಜ್ಞೆಯನ್ನು ನಾವು ರೋಮಾಪುರ 10:10ರಲ್ಲಿ ನೋಡುತ್ತೇವೆ. ಅವನು ಯೇಸುವನ್ನು ದೇವರ ಕುಮಾರನೆಂದು ಒಪ್ಪಿಕೊಳ್ಳತಕ್ಕದ್ದು.


ಎರಡನೆಯದು, ಪಾಪಗಳ ಕ್ಷಮಾಪಣೆಗಾಗಿ ಕ್ರಿಸ್ತನ ದೇಹದಲ್ಲಿ - ಸಭೆಯಲ್ಲಿ - ಆ ಮನುಷ್ಯನಿಗೆ ಬಾಪ್ತಿಸ್ಮ ಮಾಡಿಸುತ್ತಿರುವಿರೆಂದು ನಿಶ್ಚಿತ ಪಡಿಸಿಕೊಳ್ಳುವ ಅಗತ್ಯದೆ ನಿಮಗಿದೆ. ಆದುದರಿಂದ, ನೀವು ಅವನಿಗೆ ಬಾಪ್ತಿಸ್ಮ ಮಾಡಿಸುವ ಮೊದಲು, ಅಲ್ಲಿದ್ದವರ ಪ್ರಯೋಜನಕ್ಕಾಗಿ ಮತ್ತು ಏನು ಸಂಭವಿಸುತ್ತದೋ ಎಂಬುದಕ್ಕೆ ಜ್ಞಾಪಕವಾಗಿ, ಗಟ್ಟಿಯಾಗಿ ವಿವರಿಸಿರಿ. ಅದನ್ನು ಹೇಗೆ ಹೇಳಬೇಕೆಂಬುದರ ಒಂದು ಉದಾಹರಣೆ ಇಲ್ಲಿದೆ (ಮತ್ತಾಯ 28:19, 20; ರೋಮಾಪುರ 6:3; ಅಪೊಸ್ತಲರ ಕೃತ್ಯಗಳು 2:38; ಹಾಗೂ ಮಾರ್ಕ 16:16; ಇವುಗಳ ಮೇಲೆ ಅವಲಂಭಿಸಿದೆ):

> ಕ್ರಿಸ್ತನ ಆಜ್ಞೆಗೆ ವಿಧೇಯನಾಗಿ, ಯೇಸು ಕ್ರಿಸ್ತನ ರಕ್ತದ ಮುಖಾಂತರ ನಿಮ್ಮ ಪಾಪಗಳ ಕ್ಷಮಾಪಣೆಗಾಗಿ, ಕ್ರಿಸ್ತನ ಆತ್ಮಿಕ ದೇಹದಲ್ಲಿ, ಹೊಸ ಒಡಂಬಡಿಕೆಯ ಸಭೆಯಲ್ಲಿ, ತಂದೆ, ಕುಮಾರ, ಪರಿಶುದ್ಧಾತ್ಮನ ಹೆಸರಿನಲ್ಲಿ ನಾನು ನಿನಗೆ ಬಾಪ್ತಿಸ್ಮ ಮಾಡಿಸುತ್ತೇನೆ.

ಮೂರನೆಯದು, ನೀವು ಅವನಿಗೆ ಬಾಪ್ತಿಸ್ಮ ಮಾಡಿಸುವಾಗ, ಅವನನ್ನು ಸಂಪೂರ್ಣವಾಗಿ ಮುಳುಗಿಸುವದನ್ನು ನಿಶ್ಚಿತ ಮಾಡಿಕೊಳ್ಳಿರಿ. ಹೊಸ ಒಡಂಬಡಿಕೆಯಲ್ಲಿ ಬಾಪ್ತಿಸ್ಮವು ನೀರಿನಲ್ಲಿ ಹೂಣಿಡುವಿಕೆಯಾಗಿದೆ ಎಂಬುದನ್ನು ಜ್ಞಾಪಿಸಿಕೊಳ್ಳಿರಿ (ರೋಮಾಪುರ 6:4). ಬಾಪ್ತಿಸ್ಮ ಹೇಗೆ ಮಾಡಿಸಬೇಕೆಂಬುದಕ್ಕೆ ಕೆಲವು ದೃಷ್ಟಾಂತಗಳು ಇಲ್ಲಿವೆ:



*ಆಳವಿಲ್ಲದ ನೀರಿನಲ್ಲಿ ಬಾಪ್ತಿಸ್ಮ ಹೊಂದುವವನು ಕುಳಿತುಕೊಳ್ಳಬಹುದು. ಅವನು ಪೂರ್ಣ ವಾಗಿ ನೀರಿನಲ್ಲಿ ಮುಳುಗುವವರೆಗೆ ಹಿಂದಕ್ಕೆ ಬಾಗಿಸಲ್ಪಡಬೇಕು.*



*ಆಳವಾದ ನೀರಿನಲ್ಲಿ ಬಾಪ್ತಿಸ್ಮ ಹೊಂದುವವನು ಪೂರ್ಣವಾಗಿ ಮುಳುಗಿಸಲ್ಪಡುವಂತೆ ಹಿಂದಕ್ಕೆ ಬಾಗಿಸಲ್ಪಡಬೇಕು.*

ಒಮ್ಮೆ ನೀವು ಅವನಿಗೆ ಬಾಪ್ತಿಸ್ಮ ಮಾಡಿಸಿದ ಮೇಲೆ ಅದೇ ರೀತಿಯಲ್ಲಿ ಅವನು ನಿಮಗೆ ಬಾಪ್ತಿಸ್ಮ ಮಾಡಿಸಲಿ. ಅದೇ ಪ್ರಶ್ನೆಯನ್ನು ಅವನು ನಿಮಗೆ ಕೇಳುವಂಥದ್ದು ಹಾಗೂ ನೀವು  ಅವನಿಗೆ ಹೇಳಿದಂತೆ ನಿಮಗೆ ಬಾಪ್ತಿಸ್ಮ ಯಾಕೆ ಮಾಡಿಸುತ್ತಿರುವನೆಂಬುದನ್ನು ನಿಮಗೆ ಸ್ಪಷ್ಟವಾಗಿ ಹೇಳುವಂಥದ್ದು ಇರಬೇಕು.

ನಿಮ್ಮ ಬಾಪ್ತಿಸ್ಮವಾದ ನಂತರ ನೀವು  ಕ್ರೈಸ್ತರು, ಕ್ರಿಸ್ತನ ಸಭೆಯ ಸದಸ್ಯರು ಆದಿರಿ. ಹಿಂದೆ ನಿಮ್ಮ ಸಮಾಜದಲ್ಲಿ ಕರ್ತನ ಸಭೆಯು ಅಸ್ತಿತ್ವದಲ್ಲಿ ಇಲ್ಲದೇ ಇದ್ದರೂ ಈಗ ಅದು ಇರುತ್ತದೆ - ಯಾಕಂದರೆ ನೀವು ಕ್ರಿಸ್ತನ ಸಭೆಯಾಗಿರುವಿರಿ. ಕ್ರೈಸ್ತರಾಗಿರುವುದರಿಂದ ನೀವು ವಾಸಿಸುವಲ್ಲಿಯೇ ಸಭೆಯನ್ನು ಸ್ಥಾಪಿಸುವಿರಿ.

## ಎರಡನೆಯ ಹೆಜ್ಜೆ:  ಕ್ರೈಸ್ತನಾಗಿ ಜೀವಿಸುವುದು

ನೀವು ತೆಗೆದು ಕೊಳ್ಳುವ ಎರಡನೆಯ ಹೆಜ್ಜೆಯು ಅಂದರೆ ಕ್ರೈಸ್ತ ಜೀವಿತ ಜೀವಿಸುವುದು. ಅದು ಎಂದಿಗೂ ಅಂತ್ಯಗೊಳ್ಳದ ಹೆಜ್ಜೆಯಾಗಿದೆ. ನೀವು ಈಗ ಕ್ರೈಸ್ತರಾಗಿದ್ದು ಅದರಂತೆ ಜೀವಿಸಲು ಬಯಸುವಿರಿ (ಪುರಾವಣಿ 2ರಲ್ಲಿ "ಹಿರಿಯರು ಏನಾಗಿರಬೇಕು, ಎಲ್ಲಾ  ಕ್ರೈಸ್ತರು ಏನಾಗಿರಬೇಕು" ಎಂಬ ಚಾರ್ಟುಗಳನ್ನು ನೋಡಿರಿ).

ಒಬ್ಬ ಕ್ರೈಸ್ತನು ಹೇಗೆ ಜೀವಿಸುವನು? ಒಬ್ಬ ಕ್ರೈಸ್ತನ ಜೀವಿತವನ್ನು ಸಂಕ್ಷೇಪವಾಗಿ ಹೇಳುವ ಒಳ್ಳೇ ವಿಧಾನವು ಅವನ ಹೆಸರು ಅನ್ವಯಿಸುವುದು ಅವನಾಗಿರುವನು ಎಂದು ಹೇಳುವುದಾಗಿದೆ: ಅಂದರೆ ಕ್ರಿಸ್ತನನ್ನು ಹಿಂಬಾಲಿಸುವವನು, ಅವನು CHRIST-ian, ಕ್ರಿಸ್ತನು ಜೀವಿಸಿದ ರೀತಿಯಲ್ಲಿ ಜೀವಿಸುವವನು (ಫಿಲಿಪ್ಪಿ 1:21). ಕ್ರೈಸ್ತನಿಗೆ ಜೀವವು ಕ್ರಿಸ್ತನಾಗಿದ್ದಾನೆ.

**ಪರಿಶುದ್ಧ ಬರಹಗಳನ್ನು ಹುಡುಕುವುದು**

ಕ್ರಿಸ್ತನನ್ನು ಹಿಂಬಾಲಿಸುವ ಯಾರೇ ಆಗಲಿ ಅವರು ಮಹತ್ವದ ಲಕ್ಷಣದೊಂದಿಗೆ ವಿಶಿಷ್ಠತೆಯುಳ್ಳವರಾಗುವರು: ತಂದೆಯ ಚಿತ್ತಕ್ಕೆ ಸಮರ್ಪಿಸಿಕೊಳ್ಳುವರು. ಪ್ರತಿಯೊಂದು ರೀತಿಯಲ್ಲಿ ಯೇಸುವು ಪರಿಪೂರ್ಣನಾಗಿದ್ದನು. ಆದರೆ ನಾನೂ ನೀವೂ ಅನುಸರಿಸಬೇಕಾದ ಆತನ ಜೀವನದ ಒಂದು ವೈಶಿಷ್ಠವು ತಂದೆಗೆ ನಂಬಿಗಸ್ತಿಕೆಯ ವಿಧೇಯತೆ. ಆಗ ಕ್ರೈಸ್ತ ಜೀವಿತವು ಅಂದರೆ ದೇವರ ಚಿತ್ತಕ್ಕಾಗಿ ಬೈಬಲನ್ನು ಹುಡುಕುವುದು ಮತ್ತು ದೀನತೆಯಿಂದ, ಭಕ್ತಿಯಿಂದ, ಪ್ರೀತಿಯಿಂದ ಆ ಚಿತ್ತಕ್ಕೆ ವಿಧೇಯನಾಗುವುದು ಆಗಿದೆ. ಕ್ರೈಸ್ತನು ದೇವರ ವಾಕ್ಯಕ್ಕೆ ಸಮೀಪದಲ್ಲಿ ಇರುವನು. ಅದನ್ನು ಅನುದಿನವೂ ಓದುವನು, ಅದನ್ನು ಕಲಿತು ಕೊಳ್ಳುವದನ್ನು ರೂಢಿಯಲ್ಲಿ ತರಲು ಪ್ರಯತ್ನಿಸುವನು.

**ಯೇಸುವಿನ ಜೀವನ ವಿಧಾನವನ್ನು ಅನುಸರಿಸಲು ಪ್ರಯತ್ನಿಸುವುದು**

ಯೇಸುವಿಗಾಗಿ ನಮ್ಮ ಜೀವಿಸುವಿಕೆಯಲ್ಲಿ ನಮ್ಮನ್ನು ನಡಿಸುವದಕ್ಕಾಗಿ ಮೂರು ಇತರ ತತ್ವಗಳು, "ಸುವರ್ಣ ನಿಯಮ," ಅನುಕಂಪ ಮತ್ತು ಪ್ರಾರ್ಥನೆಯನ್ನು ಒಳಗೊಂಡಿರುತ್ತದೆ. ಯೇಸುವನ್ನು ಅನುಸರಿಸುವ ಒಳ್ಳೆಯ ಮಾರ್ಗವು, "ನಾನು ಹೇಗೆ ನಡಿಸಲ್ಪಡಲು ಬಯಸುವೆನು?" ಎಂದು ಯಾವಾಗಲೂ ನಮಗೆ ಕೇಳಿಕೊಳ್ಳುವುದಾಗಿದೆ. "ಸುವರ್ಣ ನಿಯಮ" (ಮತ್ತಾಯ 7:12) ನಾವು ಹೇಗೆ ನಡಿಸಿಕೊಳ್ಳಲ್ಪಡಬೇಕು ಎಂಬುದನ್ನು ತೀರ್ಮಾನಿಸಿ ಕೊಂಡು ಆಮೇಲೆ ಇತರರನ್ನು ಆ ರೀತಿಯಲ್ಲಿ ನಡಿಸಲು ಮುಂದುವರಿಯುವಾಗ ಅನುಸರಿಸಲ್ಪಡುತ್ತದೆ. ಈ ನಿಯಮವು ಜೀವಿಸುವ ಕ್ರಿಸ್ತನ ಮಾರ್ಗವಾ ಗಿತ್ತು. ಇದು ಈ ಲೋಕದಲ್ಲಿ ಜೀವಿಸಲು ಅತ್ಯುತ್ತಮ ಮಾರ್ಗವಾಗಿದೆ.

ಯೇಸುವು ಅನುಕಂಪದ ಮನುಷ್ಯನಾಗಿದ್ದನು. "ಅನುಕಂಪ" ಅಂದರೆ ಇತರರೊಂದಿಗೆ ಅನುಭವಿಸುವುದು ಎಂದರ್ಥ. ಯೇಸುವು ಬಡವರನ್ನು, ಕೊರತೆಯಲ್ಲಿರುವವರನ್ನು, ಏಕಾಂಗಿಗಳನ್ನು ಪ್ರೀತಿಸಿದನು. ಆತನು ಅವರ ಬಗ್ಗೆ ಕನಿಕರಪಟ್ಟನು. ಆತನು ಅವರಿಗೆ ಸೇವೆ ಮಾಡಿದನು. ಆದುದರಿಂದ ಕ್ರೈಸ್ತನು ಇತರರ ಬಗ್ಗೆ ಚಿಂತಿಸುವ ಮತ್ತು ಸತತವಾಗಿ ತನಗೆ ಸಾಧ್ಯವಾದರೆ ಅವರಿಗೆ ಸಹಾಯ ಮಾಡುತ್ತ ಪ್ರೀತಿ ಮಾಡುವ ವ್ಯಕ್ತಿಯಾಗಿದ್ದಾನೆ (ಮತ್ತಾಯ 9:36).

ಯೇಸುವು ದೇವರ ಕುಮಾರನಾಗಿದ್ದರೂ ತಂದೆಗೆ ಆಗಾಗ - ಪ್ರತ್ಯೇಕವಾಗಿ, ಬಹಿರಂಗವಾಗಿ, ಸಣ್ಣ ಗುಂಪುಗಳಲ್ಲಿ ಪ್ರಾರ್ಥಿಸಿದನು. ಕ್ರೈಸ್ತನೂ ಸಹ ದೇವರಿಗೆ ಸತತವಾಗಿ ಪ್ರಾರ್ಥಿಸುವನು.

ಈಗ ನೀವು ಕ್ರೈಸ್ತರಾಗಿರುವದರಿಂದ ದೇವರು ನಿಮ್ಮ ತಂದೆಯಾಗಿದ್ದಾನೆ.

ಆತನು ನಿಮ್ಮನ್ನು ತನ್ನ ಸ್ವಂತದವರಂದೆ ಸ್ವೀಕರಿಸಿದ್ದಾನೆ. ನಂಬಿಕೆಯ ಹೃದಯದಿಂದ ಆತನಿಗೆ ಕ್ರಮ ಪ್ರಕಾರವಾಗಿ ಪ್ರಾರ್ಥಿಸಿರಿ. ಯೇಸುವಿನ ಹೆಸರಿನಲ್ಲಿ ಆತನಿಗೆ ಪ್ರಾರ್ಥಿಸುತ್ತ, ನಿಮ್ಮ ಜೀವನದಲ್ಲಿ ಆತನ ಚಿತ್ತವು ಮಾಡಲ್ಪಡುವಂತೆ ಕೇಳಿ ಕೊಳ್ಳಿರಿ. ದೇವರಿಗೆ ನೀವು ಹೇಗೆ ಪ್ರಾರ್ಥಿಸಬಹುದೆಂಬ ಒಂದು ಉದಾಹರಣೆ ಇಲ್ಲಿದೆ:

*ದೇವರನ್ನು ಸಂಬೋಧಿಸುವುದು:* ಪ್ರೀತಿಯುಳ್ಳ ತಂದೆ.
*ಆತನಿಗೆ ಸ್ತೋತ್ರ ಮಾಡುವುದು:* ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ.
*ಆತನಿಗೆ ಉಪಕಾರ ಹೇಳುವುದು:* ನೀನು ನಮಗೆ ಕೊಟ್ಟ ಆಶೀರ್ವಾದಗಳಿಗಾಗಿ ನಾವು ಕೃತಜ್ಞತರಾಗಿದ್ದೇವೆ ... (ಕೆಲವನ್ನು ಹೇಳಿರಿ).
*ಆತನಿಗೆ ಬಿನ್ನವಿಸಿರಿ:* ನಾವು ಹೇಳ ಬಹುದಾದಷ್ಟು ನಮಗೆ ಅವಶ್ಯವಾದದ್ದು ಇಲ್ಲದೆ, ಇವು ನಿನ್ನ ಚಿತ್ತಕ್ಕೆ ಯೋಗ್ಯವಾಗಿದ್ದರೆ ಈ ಬಿನ್ನಹವನ್ನು ಅನುಗ್ರಹಿಸು.
*ಆತನಿಗೆ ಬಿನ್ನವಿಸಿರಿ:* ಇತರರಿಗೆ ಕ್ಷಮಿಸುವಂತೆ ನಮ್ಮ ಪಾಪಗಳನ್ನು ಕ್ಷಮಿಸು. ಕೆಡುಕರಿಂದ ನಮ್ಮನ್ನು ತಪ್ಪಿಸು.
*ಆತನಿಗೆ  ಸ್ತೋತ್ರ ಮಾಡಿರಿ:* ಎಲ್ಲಾ ಮಹಿಮೆಯು ನಿನ್ನದಾಗಿರಲಿ.
*ಮುಕ್ತಾಯ:* ಯೇಸುವಿನ ಹೆಸರಿನಲ್ಲಿ ನಾವು ನಿನಗೆ ಪ್ರಾರ್ಥಿಸುತ್ತೇವೆ. ಆಮೆನ್.

ಮತ್ತಾಯ 6:9-13ರಲ್ಲಿ ನಮ್ಮ ಕರ್ತನು ತನ್ನ ಶಿಷ್ಯರಿಗೆ ಕಲಿಸಿದ ಮಾದರಿಯ ಭಾಗದಿಂದ ಈ ವಿಧಾನವು ತೆಗೆದು ಕೊಳ್ಳಲ್ಪಟ್ಟಿದೆಯೆಂದು ನೀವು ಬಹುಶಃ ಗುರುತಿಸಿರ ಬಹುದು. ಆತನ ಪಾರ್ಥನೆಯ ಕೆಲವು ಭಾಗ ನಮಗೆ ಅನ್ವಯಿಸುವದಿಲ್ಲ (ಉದಾಹರಣೆಯಾಗಿ, ರಾಜ್ಯವು ಬರಲಿ ಎಂಬ ಬಿನ್ನಹವು ನಮಗೆ ಅನ್ವಯಿಸುವದಿಲ್ಲ. ಯಾಕಂದರೆ ಆತನ ರಾಜ್ಯವು ಪಂಚಾಶತ್ತಮ ದಿನದಂದು ಬಂದಿದೆ), ಆದರೆ ಅದರ ಬಹು ಭಾಗವು ನಮಗೆ ಅನ್ವಯವಾಗುವುದು. ಕೊಡಲ್ಪಟ್ಟ ವಿಧಾನವು ಒಂದು ಮಾದರಿಯಾಗಿದೆ ಮತ್ತು ಒಬ್ಬನು ತನ್ನ ವಿಚಾರಗಳನ್ನು ದೇವರಿಗೆ ಪ್ರಕಟಿಸುವಾಗ ಅನುಸರಿಸಲು ಕೇವಲ ಸೂಚಿತ ಕ್ರಮವಾಗಿರಲು ಉದ್ದೇಶಿಸಲ್ಪಟ್ಟಿದೆ.

ಈ ಸತ್ಯವನ್ನು ನಾವು ಒತ್ತಿ ಹೇಳೋಣ: ನೀವು ಪರಿಪೂರ್ಣರಾಗಿರುವದಿಲ್ಲ. ಮಾನವ ಜೀವಿಗಳು ಪರಿಪೂರ್ಣರಾಗಿರಲಾರರು. ಆದರೆ ದೇವರ ಚಿತ್ತವನ್ನು ಮಾಡಲು ನಮ್ಮ ಹೃದಯಗಳನ್ನು ನಾವು ಆತನಿಗೆ ಸಮರ್ಪಿಸಬಲ್ಲೆವು. ನಾವು

ಸೋತು ಹೋಗುವಾಗ ನಾವು ಏಳಬಹುದು. ನಮ್ಮ ಧೂಳನ್ನು ಜಾಡಿಸಬಹುದು, ಮಾನಸಾಂತರ ಪಟ್ಟು ನಮ್ಮನ್ನು ಕ್ಷಮಿಸಲು ದೇವರನ್ನು ಕೇಳಬಹುದು ಹಾಗೂ ಪುನಃ ಆತನ ಚಿತ್ತವನ್ನು ಮಾಡಲು ಮುಂದರಿಯ ಬಹುದು. ನಾವು ಆತನ ಚಿತ್ತವನ್ನು ಮಾಡಲು ಪ್ರಯತ್ನಿಸುತ್ತಿರುವುದು ಮಹತ್ವದ ಸಂಗತಿಯಾಗಿದೆ. ನಾವು ಕೇವಲ ಕೃಪೆಯಿಂದ ನಂಬಿಕೆಯ ಮುಖಾಂತರವಾಗಿ ರಕ್ಷಿಸಲ್ಪಡುತ್ತೇವೆ ಆದರೆ ಪರಿಪೂರ್ಣತೆಯಿಂದಲ್ಲ (ಎಫೆಸ 2:8). ನಂಬಿಕೆಯಿರಲಿ ಅಂದರೆ ಆತನ ಚಿತ್ತವನ್ನು ಯಥಾರ್ಥವಾಗಿ ಹುಡುಕುವುದು ಎಂದರ್ಥ.

ನಾವು ಇತರರಿಗೆ ನೋವು ಕೊಡುವಂಥ ರೀತಿಯಲ್ಲಿ ಸೋತು ಹೋಗುವಾಗ ಅವರ ಕ್ಷಮಾಪಣೆ ಕೇಳೋಣ. ನಾವು ನಿಜವಾಗಿಯೂ ದುಃಖಗೊಂಡಿದ್ದೇವೆ ಮತ್ತು ಇನ್ನು ಮುಂದೆ ಒಳ್ಳೆಯದನ್ನು ಮಾಡಲು ಪ್ರಯತ್ನಿಸುತ್ತೇವೆ ಎಂಬ ಭರವಸೆಕೊಡೋಣ (ಯಾಕೋಬ 5:16). ನಾವು ಪಾಪ ಮಾಡಿದರೆ ಹಾಗೂ ನಮ್ಮ ಪಾಪವು ಇಡೀ ಸಭೆಗೆ ನೋವನ್ನುಂಟು ಮಾಡಿದ್ದರೆ ನಾವು ಸಭೆಯ ಮುಂದೆ ಬಂದು ಕ್ಷಮಾಪಣೆಗಾಗಿ ಕೇಳಿಕೊಂಡು, ಕ್ರಿಸ್ತನಲ್ಲಿಯ ನಮ್ಮ ಸಹೋದರ ಸಹೋದರಿಯರಿಗೆ ನಮಗಾಗಿ ಪ್ರಾರ್ಥಿಸಬೇಕೆಂದು ಕೇಳಿಕೊಳ್ಳೋಣ (ಯಾಕೋಬ 5:16). ದೇವರು ನಮ್ಮನ್ನು ಕ್ಷಮಿಸುವರು.

ಕ್ರೈಸ್ತನಂತೆ ನೀವು ನಿಮ್ಮ ಜೀವಿತವನ್ನು ಪ್ರವೇಶಿಸುವಾಗ ಮೊದಲು ನೀವು ಓದಲು ಬಯಸುವ ಬೈಬಲಿನ ಒಂದು ಭಾಗವು ಹೊಸ ಒಡಂಬಡಿಕೆಯ ಪ್ರಾರಂಭವು - ಮತ್ತಾಯ, ಮಾರ್ಕ, ಲೂಕ ಹಾಗೂ ಯೋಹಾನ - ಕ್ರಿಸ್ತನ ಜೀವನ. ಓದುವುದು ಮತ್ತು ಅಧ್ಯಯನ ಮಾಡುವದು ಯೇಸುವು ಈ ಭೂಲೋಕ ದಲ್ಲಿ ಹೇಗೆ ಜೀವಿಸಿದನು ಎಂಬುದರ ತಿಳುವಳಿಕೆಯನ್ನು ನಿಮಗೆ ಕೊಡುವುದು. ಆತನ ಬಗ್ಗೆ ನೀವು ಕಲಿತುಕೊಳ್ಳುವ ಪ್ರತಿಯೊಂದೂ ನೀವು ಹೆಚ್ಚೆಚ್ಚು ಸಮೀಪದಿಂದ ಆತನನ್ನು ಅನುಸರಿಸಲು ನಿಮಗೆ ಸಹಾಯ ಮಾಡುವುದು.

## ಮೂರನೆಯ ಹೆಜ್ಜೆ: ದೇವರನ್ನು ಆರಾಧಿಸುವುದು

ಕ್ರೈಸ್ತರಾಗಿರುವದನ್ನು ನೀವು ಹುಡುಕುವಾಗ ನೀವು ತೆಗೆದುಕೊಳ್ಳಲು ಅವಶ್ಯವಾದ ಮೂರನೆಯ ಹೆಜ್ಜೆಯು ಕ್ರಮವಾಗಿ ದೇವರನ್ನು ಆರಾಧಿಸುವದನ್ನು ಪ್ರಾರಂಭಿಸುವುದು. ನಿಮ್ಮ ನೆರೆಹೊರೆಯಲ್ಲಿ ಕ್ರಿಸ್ತನ ಸಭೆಯು ಅಸ್ತಿತ್ವದಲ್ಲಿದ್ದರೆ, ಅವರು ಸಾಮೂಹಿಕ ಆರಾಧನೆಗಾಗಿ ಕೂಡಿ ಬರುವ ಭಾನುವಾರದಂದು ಇಲ್ಲವೇ ಬೇರೆ ಯಾವುದೋ ದಿನದಂದು ಅವರನ್ನು ಸಂದರ್ಶಿಸಲು ನೀವು ಬಯಸಬಹುದು. ಪ್ರತೀ ಭಾನುವಾರದಂದು ಅವರು ಹಾಡಲು, ಪ್ರಾರ್ಥಿಸಲು, ದೇವರ ವಾಕ್ಯದ ಅಧ್ಯಯನ ಮಾಡಲು, ಕರ್ತನ ಭೋಜನ ಆಚರಿಸಲು, ದೇವರು ತಮ್ಮನ್ನು ಆಶೀರ್ವದಿಸಿದಂತೆ

ಕಾಣಿಕೆಗಳನ್ನು ಕೊಡಲು ಕೂಡಿಬರುವರು. ಆರಾಧನೆಯ ಈ ಪ್ರಕಟಣೆಯ ಪ್ರತಿಯೊಂದರಲ್ಲಿ ನೀವು ಅವರೊಂದಿಗೆ ಭಾಗವಹಿಸಬೇಕು. (ಪುಟ 154ನೋಡಿ.)

ನಿಮ್ಮ ಸಮಾಜದಲ್ಲಿ ಕರ್ತನ ಸಭೆಯಾಗಿ ಕೂಡಿಬರುವ ಸ್ಥಳಿಕ ಸಭೆ ಇಲ್ಲದಿದ್ದರೆ, ನಿಮ್ಮ ಸ್ವಂತ ಮನೆಯಲ್ಲಿ, ಖಾಲಿಯಾಗಿರುವ ಯಾವುದೇ ಕಟ್ಟಡದಲ್ಲಿ ಇಲ್ಲವೇ ಮರದ ಕೆಳಗೆ ಸಹ ನೀವು ಕ್ರಮವಾದ, ದೇವರ ನಂಬಿಗಸ್ತ ಆರಾಧನೆಯನ್ನು ಪ್ರಾರಂಭಿಸಬಹುದು. ಅಪ್ಪಣೆ ದೊರೆತರೆ ಆರಾಧಿಸುವದಕ್ಕಾಗಿ ನೀವು ಒಂದು ಕಟ್ಟಡವನ್ನು ಕಟ್ಟುವದನ್ನೂ ಬಯಸಬಹುದು, ಯೇಸುವಿನ ಹೆಸರಿನಲ್ಲಿ ಇಬ್ಬರಾಗಲೀ ಮೂವರಾಗಲೀ ಕೂಡಿ ಬಂದರೆ ಬೈಬಲನುಗುಣವಾಗಿ ಆರಾಧನೆಯಾಗುವುದೆಂದು ಹೊಸ ಒಡಂಬಡಿಕೆ ಹೇಳುತ್ತದೆ (ಮತ್ತಾಯ 18:20).

**ಸಭೆಯಾಗಿ ಕೂಡಿಬರುವುದು**

ಹೊಸ ಒಡಂಬಡಿಕೆಯಲ್ಲಿ ಆದಿ ಕ್ರೈಸ್ತರು ವಾರದ ಮೊದಲನೆಯ ದಿನದಂದು ಇಲ್ಲವೇ ಭಾನುವಾರದಂದು ಕೂಡಿಬರುತ್ತಿದ್ದರು. ಇದು ಕರ್ತನು ಸತ್ತವರೊಳಗಿಂದ ಎದ್ದು ಬಂದ ದಿನವಾಗಿತ್ತು. ಭಾನುವಾರದಂದು ಆದಿ ಕ್ರೈಸ್ತರು ಆರಾಧನೆಗಾಗಿ ಕೂಡಿಬರುವಾಗ, ಆತನ ಮರಣ ಹಾಗೂ ಪುನರುತ್ಥಾನದ ಸ್ಮರಣಾರ್ಥವಾಗಿ ಆಚರಿಸಲು ಯೇಸುವು ಸ್ಥಾಪಿಸಿದ ಭೋಜನದಲ್ಲಿ ಪಾಲುಗಾರರಾಗುತ್ತಿದ್ದರು. ಪ್ರತೀ ಭಾನುವಾರ ಅವರು ಈ ಭೋಜನದಲ್ಲಿ ಭಾಗವಹಿಸುವುದು ಸ್ಪಷ್ಟವಾಗಿದೆ. ಅದು "ಕರ್ತನ ಭೋಜನ"ವಾಗಿತ್ತು (1 ಕೊರಿಂಥ 11:20), ಪ್ರತೀ ಕರ್ತನ ದಿನದಂದು ತೆಗೆದುಕೊಳ್ಳಲ್ಪಡುತ್ತಿತ್ತು. ಇಬ್ರಿಯ 10:25; 1 ಕೊರಿಂಥ 11:22; 16:1, 2; ಹಾಗೂ ಅಪೊಸ್ತಲರ ಕೃತ್ಯಗಳು 20:7ನ್ನು ಜಾಗರೂಕತೆಯಿಂತ ಅಧ್ಯಯನ ಮಾಡಿರಿ.

**ಕರ್ತನ ಭೋಜನವನ್ನು ಆಚರಿಸುವುದು**

ಕ್ರಿಸ್ತನು ಕರ್ತನ ಭೋಜನವನ್ನು ಸ್ಥಾಪಿಸಿದಾಗ, ಎರಡು ವಸ್ತುಗಳನ್ನು ಉಪಯೋಗಿಸಿದನು: ದ್ರಾಕ್ಷೆಯ ಫಲ ಹಾಗೂ ಹುಳಿಯಿಲ್ಲದ ರೊಟ್ಟಿ. ಈ ಭೋಜನವನ್ನು ಆಚರಿಸಬೇಕೆಂದು ಹೇಳಿದಾಗ ನಮ್ಮ ಕರ್ತನು ತನ್ನ ಶಿಷ್ಯರೊಂದಿಗೆ ಪಸ್ಕ ಭೋಜನ ಮಾಡುತ್ತಿದ್ದನು. ಪಸ್ಕದ ಭೋಜನವು ಕೇವಲ ಹುಳಿಯಿಲ್ಲದ ರೊಟ್ಟಿಯನ್ನು ದ್ರಾಕ್ಷೆ ಹಣ್ಣಿನ ಮಿಶ್ರಣದ ಪಾನೀಯವನ್ನು (ದ್ರಾಕ್ಷೇ ಹಣ್ಣಿನ ರಸವನ್ನು) ಹಾಗೂ ನೀರನ್ನು ಒಳಗೊಂಡಿತು. ಯೇಸುವು ತನ್ನ ಶಿಷ್ಯರಿಗೆ ರೊಟ್ಟಿಯನ್ನು ತಿಂದು, ಆತನ ದೇಹವು ಅವರಿಗಾಗಿ ಕೊಡಲ್ಪಟ್ಟಿದೆಯೆಂಬುದನ್ನು ಜ್ಞಾಪಿಸಿಕೊಳ್ಳಬೇಕೆಂದು ಹೇಳಿದನು. ಆತನು ಅವರಿಗೆ ಪಾತ್ರೆಯಲ್ಲಿರುವದನ್ನು

ಇಲ್ಲವೇ ದ್ರಾಕ್ಷೆಹಣ್ಣಿನ ರಸವನ್ನು ಕುಡಿದು, ಅವರಿಗಾಗಿ ಸುರಿಸಲ್ಪಟ್ಟ ಆತನ ರಕ್ತವನ್ನು ಜ್ಞಾಪಿಸಿಕೊಳ್ಳ ಬೇಕೆಂದು ಹೇಳಿದನು.

ನಮ್ಮ ಕರ್ತನ ನಿರ್ದೇಶನಗಳನ್ನು ಹಾಗೂ ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿಯ ಕ್ರೈಸ್ತರ ಉದಾಹರಣೆಯನ್ನು ಅನುಸರಿಸಲು ನೀವು ಬಯಸಬಹುದು. ಪ್ರತೀ ಭಾನುವಾರ, ಕ್ರಿಸ್ತನಿಗೆ ವಿಧೇಯರಾಗುವ ನೀವು ಆರಾಧನೆಗಾಗಿ ಕೂಡಿಬರಬೇಕು. ನೀವು ಹಾಡಬೇಕು, ಪ್ರಾರ್ಥಿಸಬೇಕು ಹಾಗೂ ದೇವರ ವಾಕ್ಯವನ್ನು ಅಧ್ಯಯನ ಮಾಡತಕ್ಕದ್ದು. ಆರಾಧನೆಯಲ್ಲಿ ಒಂದು ಹಂತದಲ್ಲಿ ಯೇಸುವು ನಿಮಗೆ ಕೊಟ್ಟ ಭೋಜನದಲ್ಲಿ ಪಾಲುಗಾರರಾಗಬೇಕು. ಹುಳಿಯಿಲ್ಲದ ರೊಟ್ಟಿಯನ್ನು ಒಂದು ಪ್ಲೇಟಿನಲ್ಲಿಟ್ಟಿರ ಬೇಕು. ಕ್ರಿಸ್ತನ ದೇಹವನ್ನು ಪ್ರತಿನಿಧೀಕರಿಸುವ ರೊಟ್ಟಿಗಾಗಿ ಮತ್ತು ಆತನ ಮಹಾ ಯಜ್ಞಕ್ಕಾಗಿ ಉಪಕಾರ ಸ್ವೀಕರಿಸಲು ದೇವರನ್ನು ಕೇಳಿಕೊಳ್ಳಿರಿ. ಅದರಲ್ಲಿ ಪಾಲುಗಾರರಾಗಲು ಮತ್ತು ಯೇಸುವಿನ ದೇಹವನ್ನು ಜ್ಞಾಪಿಸಲು ಬರುವ ಪ್ರತಿಯೊಬ್ಬ ಕ್ರೈಸ್ತರಿಗೆ ರೊಟ್ಟಿಯನ್ನು ಕೊಡಿರಿ.

ಕರ್ತನ ಭೋಜನಕ್ಕಾಗಿ ರೊಟ್ಟಿಯನ್ನು ಬೇಯಿಸಲು ಕೆಲವು ಸಾಮಾನ್ಯ ವಸ್ತುಗಳು ಬೇಕಾಗುತ್ತದೆ: ಗೋದಿಹಿಟ್ಟು, ನೀರು, ಉಪ್ಪು ಹಾಗೂ ಎಣ್ಣೆ. ಯಾವುದೇ ಹುಳಿಯು ಕೂಡಿಸಲ್ಪಡಬಾರದು. ನಿಮ್ಮ ಹಸ್ತದ ಅಳತೆಯ ಎರಡು ರೊಟ್ಟಿಗಳನ್ನು ಬೇಯಿಸುವದಕ್ಕಾಗಿ ಇಲ್ಲಿ ಒಂದು ಮಾದರಿ ಇದೆ:

ಪದಾರ್ಥಗಳು:

| | |
|---|---|
| 1 ಕಪ್ ಗೋದಿ ಇಲ್ಲವೇ ಬಾರ್ಲಿ ಹಿಟ್ಟು | 1 ಟೀಸ್ಪೂನ್ ನೀರು |
| 3 ಟೀಸ್ಪೂನ್ ಎಣ್ಣೆ | ಒಂದು ಚಿಟಿಕೆ ಉಪ್ಪು |

ನಿರ್ದೇಶನಗಳು:

ಮೇಲೆ ಪಟ್ಟಿ ಮಾಡಿದ ಪದಾರ್ಥಗಳನ್ನು ಮಿಶ್ರಮಾಡಿರಿ. ಎಣ್ಣೆ ಹಂಚಿನ ಮೇಲೆ ಕಣಕವನ್ನು ಸುರುಳಿ ಮಾಡಿ ಹಾಕಿರಿ. ಕಣಕದ ತೆಳುವಾದ ಪದರು ಹತ್ತು ನಿಮಿಷಗಳವರೆಗೆ ಒಲೆಯ ಮೇಲೆ 350°F ಇಲ್ಲವೇ 175°C ಉಷ್ಣತೆಯಲ್ಲಿ ಬೇಯಿಸಲ್ಪಡಲಿ. ಬೆಂದ ರೊಟ್ಟಿಯು ಕಂದು ಬಣ್ಣಕ್ಕೆ ತಿರುಗುವುದು. ರೊಟ್ಟಿಯು ಗರಿಗರಿಯಾಗುವವರೆಗೆ ಕಣಕವು ಬೆಂಕಿಯ ಮೇಲೆ ಬೇಯಿಸಲ್ಪಡಬೇಕು.

ಎರಡನೆಯದು, ದ್ರಾಕ್ಷೇ ಹಣ್ಣಿನ ರಸವನ್ನು ತುಂಬಿಸಿದ ಪಾತ್ರೆಯನ್ನು ಇಲ್ಲವೇ ಪಾತ್ರೆಗಳನ್ನು ತೆಗೆದು ಕೊಳ್ಳಿರಿ. ಪಾತ್ರೆಗಾಗಿ ಮತ್ತು ನಮ್ಮ ಕ್ಷಮಾಪಣೆಗಾಗಿ ಯೇಸು ತನ್ನ ಅಮೂಲ್ಯ ರಕ್ತವನ್ನು ಸುರಿಸಿದ್ಧಕ್ಕಾಗಿ ಕೃತಜ್ಞತೆ ಹೇಳುತ್ತ ದೇವರಿಗೆ ಪ್ರಾರ್ಥಿಸಿರಿ. ಪ್ರಾರ್ಥನೆಯ ನಂತರ, ಅಲ್ಲಿರುವ ಕ್ರೈಸ್ತರಿಗೆ

ಕೊಡಿರಿ. ಪ್ರತಿಯೊಬ್ಬನು ಪಾತ್ರೆಯಲ್ಲಿ ಪಾಲುತೆಗೆದು ಕೊಂಡು ಯೇಸುವಿನ ರಕ್ತವು ನಮಗಾಗಿ ಸುರಿಸಲ್ಪಟ್ಟಿತೆಂಬುದನ್ನು ಜ್ಞಾಪಿಸಿಕೊಳ್ಳಿರಿ.

ಯೇಸುವು ಭೋಜನವನ್ನು ಆಜ್ಞಾಪಿಸಿದಾಗ, ಆತನು "ದ್ರಾಕ್ಷೇ ಹಣ್ಣಿನ ರಸವನ್ನು" ಉಪಯೋಗಿಸಿದನು. ದ್ರಾಕ್ಷಾರಸವು ಜಗತ್ತಿನಲ್ಲೆಲ್ಲಾ ಬಹಳವಾಗಿ ಲಭ್ಯವಿದೆ. ಹೀಗಿದ್ದರೂ ನಿಮ್ಮ ಕ್ಷೇತ್ರದಲ್ಲಿ ನೀವು ಅದನ್ನು ಕೊಂಡು ಕೊಳ್ಳ ಲಾಗದಿದ್ದರೆ, ಒಂದು ಶೀಸೆಯಲ್ಲಿ ಹಿಂಡುವದರಿಂದ ದ್ರಾಕ್ಷೆ ಹಣ್ಣಿನ ರಸವನ್ನು ಉತ್ಪಾದಿಸಬಹುದು. ಅದನ್ನು ಯೋಗ್ಯವಾಗಿ ಕಾಪಾಡಿ ಇಟ್ಟರೆ, ದ್ರಾಕ್ಷೇ ಹಣ್ಣಿನ ಫಲದ ಕಾಲದಲ್ಲಿ ಹಿಂಡಿಟ್ಟ ರಸವು ವರ್ಷದಲ್ಲೆಲ್ಲಾ ಉಳಿದಿರುವುದು. ಒಣ ದ್ರಾಕ್ಷಿಯನ್ನು ನೀರಿನಲ್ಲಿ ಕುದಿಸುವದರಿಂದ ದ್ರಾಕ್ಷಾರಸವನ್ನು ಪಡಿಯಬಹುದು. ಒಣ ದ್ರಾಕ್ಷಿಗಳನ್ನು ತೆಗೆದ ನಂತರ ಉಳಿಯುವ ರಸವು ಭೋಜನದ ಆರಾಧನೆಯಲ್ಲಿ ಉಪಯೋಗಿಸಲ್ಪಡ ಬಹುದು.

**ಪ್ರತ್ಯೇಕಿಸಿಡುವುದು ಇಲ್ಲವೇ ಕೊಡುಗೆ**

ಪ್ರತಿಯೊಬ್ಬ ಕ್ರೈಸ್ತನು ಕರ್ತನ ಕೆಲಸಕ್ಕಾಗಿ ಕೊಡುವದಕ್ಕಾಗಿ "ಪ್ರತ್ಯೇಕಿಸಿಡ ಬೇಕು ಹಾಗೂ ಉಳಿಸಿಡ ಬೇಕು" ಸಭೆಯು ಆರಾಧನೆಗಾಗಿ ಕೂಡಿಬರುವಾಗ ತಕ್ಕ ಸಮಯದಲ್ಲಿ ಹೊಸ ಒಡಂಬಡಿಕೆಯಲ್ಲಿ ಬೋಧಿಸಿದಂತೆ ಕಾಣಿಕೆ ಕೊಡಲು ಅವಕಾಶ ಮಾಡಬೇಕು (1 ಕೊರಿಂಥ 16:1, 2). ಕಾಣಿಕೆ ಕೂಡಿಸಲು ಒಂದು ಚೀಲ ಕೊಡಲ್ಪಡಬಹುದು. ಇಲ್ಲವೇ ಹಣವನ್ನು ಇಲ್ಲವೇ ದೇವರಿಗಾಗಿ ಅವರು ಮೀಸಲಾಗಿಟ್ಟ ಅಮೂಲ್ಯ ದೇಣಿಗೆಗಳನ್ನು ಇಡಲು ಒಂದು ಸ್ಥಳವನ್ನು ಒದಗಿಸಬೇಕು. ಇದು ಆರಾಧನೆಯ ಒಂದು ಭಾಗವಾಗಿರ - ಬೇಕು. ಇದು ಭಕ್ತಿ ಭಾವದಿಂದಲೂ ಸಂತೋಷದಿಂದಲೂ ಮಾಡಲ್ಪಡಬೇಕೆಂಬುದನ್ನು ಜ್ಞಾಪಿಸಿಕೊಳ್ಳಿರಿ. ಕೊಡಲ್ಪಟ್ಟ ಕಾಣಿಕೆಗಳು ಸಭೆಯ ಕೆಲಸಕ್ಕಾಗಿ ಉಪಯೋಗಿಸಲ್ಪಡಬೇಕು. ಉದಾಹರಣೆಯಾಗಿ, ಇತರರಿಗೆ ಸುವಾರ್ತೆ ಸಾರಲು, ಬಡವರಿಗೆ ಸಹಾಯ ಮಾಡಲು, ಅಧ್ಯಯನಕ್ಕಾಗಿ ಬೈಬಲಿನ ಪ್ರತಿಗಳನ್ನು ಕೊಳ್ಳಲು, ಸಭೆಯ ಕೆಲಸಕ್ಕೆ ಸಮರ್ಪಕವಾದ ಯಾವುದೇ ಕಾರಣಕ್ಕಾಗಿ ಕೊಡಲ್ಪಟ್ಟ ಕಾಣಿಕೆಗಳು ಉಪಯೋಗಿಸಲ್ಪಡಬೆಕು. ಕೂಡಿಸಲ್ಪಟ್ಟದ್ದನ್ನು ಹೇಗೆ ಉಪಯೋಗಿಸಬೇಕೆಂಬ ತೀರ್ಮಾನಗಳು ಸಭೆಯಿಂದ ಮಾಡಲ್ಪಡಬೇಕು ಆದರೆ ಒಬ್ಬನೇ ವ್ಯಕ್ತಿಯಿಂದಲ್ಲ.

ಒಂದು ಆರಾಧನಾ ಕ್ರಮವು ಹೇಗೆ ಯೋಚಿಸಲ್ಪಡಬೇಕೆಂಬುದರ ಒಂದು ಉದಾಹರಣೆ ಇಲ್ಲಿದೆ:

ಪ್ರಾರ್ಥನೆ

ಹಾಡು ಅಥವಾ ಹಾಡುಗಳು

ಬೈಬಲಿನ ಒಂದು ಅಧ್ಯಾಯದ ಮೇಲೆ ಚರ್ಚೆ ಇಲ್ಲವೇ ಯೋಗ್ಯ ಬೋಧಕರಿದ್ದರೆ, ಪ್ರಸಂಗಿಯಿದ್ದರೆ ಒಂದು ಪ್ರಸಂಗ
ಹಾಡು
ಕರ್ತನ ಭೋಜನವನ್ನು ಕುರಿತ ಬೈಬಲಿನ ಭಾಗದ ಪಾರಾಯಾಣ
ಕರ್ತನ ಭೋಜನದ ಆಚರಣೆ
ಹಾಡು
ಪ್ರತಿಯೊಬ್ಬರಿಂದ ಕಾಣಿಕೆ ಸಮರ್ಪಣೆ
ಹಾಡು
ಪ್ರಾರ್ಥನೆ

ಆರಾಧನೆಯು ಏರ್ಪಡಿಸಲ್ಪಟ್ಟಾಗ ಆರಾಧನೆಯು ಈ ಪ್ರತಿಯೊಂದು ವಿಷಯವು ಒಳಗೊಂಡಿರುತ್ತದೆ.

**ಸಭಾಕೂಟಗಳನ್ನು ನಡಿಸುವುದು**

ಸ್ಥಳಿಕ ಸಭೆಗೆ ತನ್ನ ಕೆಲಸವು "ಮರ್ಯಾದೆಯಿಂದಲೂ ಕ್ರಮದಿಂದಲೂ" ನಡೆಯುವದಕ್ಕಾಗಿ (1 ಕೊರಿಂಥ 14:40) ಸಭೆಯ ಜನರು ಕಾಲಕಾಲಕ್ಕೆ ಕೂಡಿ ಬರಬೇಕು. ಸಭಾ ಹಿರಿಯರು ಇಲ್ಲದಿದ್ದರೆ ಇದು ವಿಶೇಷವಾಗಿ ಅವಶ್ಯ ವಾಗಿದೆ. ಇದು ದೇವರಿಗಾಗಿ ನಿಯಮಗಳನ್ನು ಮಾಡುವ ಉದ್ದೇಶಕ್ಕಾಗಿರುವದಿಲ್ಲ ಆದರೆ ಸ್ಥಳಿಕ ಸಭೆಯ ಆರಾಧನೆ ಮತ್ತು ಕೆಲಸವು ಕ್ರಿಸ್ತನ ರೀತಿಯ ವಿಧಾನದಲ್ಲಿ ಮಾಡುವದನ್ನು ನಿಶ್ಚಯಪಡಿಸಿ ಕೊಳ್ಳುವದಕ್ಕಾಗಿರುವುದು. ಕೂಟಗಳು ಆರಾಧನೆಯ ಸಮಯಗಳ ಮೇಲೆ, ಆರಾಧನೆಯೊಳಗೆ ಸಹಾಯ ಮಾಡುವದನ್ನು ಒಪ್ಪಿಸಿಕೊಡುವದಕ್ಕಾಗಿ, ಒಳ್ಳೆಯ ಕಾರ್ಯಗಳನ್ನು ಯೋಚಿಸುವದಕ್ಕಾಗಿ ಇತರ ಆತ್ಮಿಕ ಆರಾಧನೆಗಳ ಮೇಲೆ ಚರ್ಚಿಸುವದಕ್ಕಾಗಿ ಯೋಗ್ಯ ಸಮಯವನ್ನು, ಸ್ಥಳವನ್ನು ಒದಗಿಸಿ ಕೊಡುವುದು, ಕೂಟದಲ್ಲಿ ಭಾಗವಹಿಸುವ ಪ್ರತಿಯೊಬ್ಬನೂ ಕ್ರಿಸ್ತನ ರೀತಿಯಲ್ಲಿಯಂತೆ ಎದುರಿಸುವುದು ಅಗತ್ಯವಾಗಿದೆ (ಎಫೆಸ 4:1-3). "ತನ್ನ ಹೇಳಿಕೆಯನ್ನು ಹೇಳಲು ಪ್ರತಿಯೊಬ್ಬನಿಗೆ ಹಕ್ಕು ಇದೆ. ಆದರೆ ಅವನ ಮಾರ್ಗವನ್ನು ನಿರೀಕ್ಷಿಸುವ ಹಕ್ಕು ಯಾರಿಗೂ ಇರುವದಿಲ್ಲ" ಎಂದು ಯಾರೋ ಒಬ್ಬನು ಒಮ್ಮೆ ಹೇಳಿದ್ದಾನೆ, ಇದು ಒಳ್ಳೇ ಧ್ಯೇಯವಾಗಿದೆ.

ಸಭೆಯ ವಿಷಯಗಳು ಚರ್ಚಿಸಲ್ಪಡುವಾಗ ಪ್ರತಿಯೊಂದು ತೀರ್ಮಾನದ ಬಗ್ಗೆ ಈ ಪ್ರಶ್ನೆಗಳು ಕೇಳಲ್ಪಡಬೇಕು:

- ಅದು ಬೈಬಲನುಗುಣವಾಗಿದೆಯೋ?

- ಅದು ದೇವರನ್ನು ಮಹಿಮೆಪಡಿಸುವುದೋ?
- ಅದು ಭಕ್ತಿವೃದ್ಧಿ ಮಾಡುವುದೋ?
- ಅದು ಕಾರ್ಯಸಾಧಿಸುವುದೋ?

ಈ ಕೂಟಗಳಿಗಾಗಿ ಸಮಯ ಹಾಗೂ ಎಷ್ಟು ಸಲ ನಡೆಯ ಬೇಕೆಂಬುದರ ಬಗ್ಗೆ ಜನರು ಒಪ್ಪಿಕೊಳ್ಳುವ ಅಗತ್ಯತೆಯಿದೆ, ಹೆಚ್ಚು ಸಂಖ್ಯೆಯಲ್ಲಿ ಜನರು ಸೇರುವ ಸಮಯವನ್ನು ಆಯ್ದುಕೊಳ್ಳಬೇಕು. ಒಬ್ಬ ಪ್ರೌಢ ಕ್ರೈಸ್ತ ಸಹೋದರನು ಕೂಟಗಳನ್ನು ನಡಿಸುವಂತೆ ಆಯ್ದುಕೊಳ್ಳಬೇಕು. ಈ ಜವಾಬ್ದಾರಿಕೆಯನ್ನು ಬದಲಿಸುತ್ತಿರುವುದು ಒಳ್ಳೆಯದು. ಇದು ಅಧಿಕಾರದ ಹುದ್ದೆಯಾಗಿರುವದಿಲ್ಲ. ಮುಂದುವರಿಯಲು ಪ್ರಗತಿಪರ ಮಾರ್ಗವಾಗಿದೆ. ತೆಗೆದು ಕೊಳ್ಳುವ ತೀರ್ಮಾನಗಳು ಜನರ ಒಪ್ಪಿಗೆಯನ್ನು ಪ್ರತಿನೀಧೀಕರಿಸುವಂಥವುಗಳಾಗಿರಬೇಕು. ಯಾರಾದರೂ ತೀರ್ಮಾನಗಳನ್ನು ದಾಖಲೆ ಮಾಡಿ ಇಡಬೇಕು. ಕೂಟವು ಈ ಕ್ರಮವನ್ನು ಅನುಸರಿಸತಕ್ಕದ್ದು:

ಪ್ರಾರ್ಥನೆ
ಹಳೇ ವಿಷಯಗಳು - ಹಿಂದಿನ ಕೂಟಗಳಲ್ಲಿ ಬಿಡಲ್ಪಟ್ಟ ವಿಷಯಗಳ ಚರ್ಚೆ; ಪ್ರಗತಿಯ ಮತ್ತು ಕೊಡಲ್ಪಟ್ಟ ಜವಾಬ್ದಾರಿಕೆಗಳ ಪ್ರಗತಿಯ ವರದಿಗಳು
ಹೊಸ ವಿಷಯಗಳು - ಅಗತ್ಯತೆಗಳ, ಮುಂದಿನ ಯೋಜನೆಗಳ, ಜವಾಬ್ದಾರಿಕೆಗಳ ಹಾಗೂ ಆತ್ಮಿಕ ವಿಷಯಗಳನ್ನು ಕುರಿತ ಯೋಜನೆಗಳು
ಪ್ರಾರ್ಥನೆ

**ದೇವರನ್ನು ಪ್ರತಿದಿನ ಆರಾಧಿಸುವುದು**

ನಿಮ್ಮ ಹೃದಯದಲ್ಲಿಯೂ ನಿಮ್ಮ ಕುಟುಂಬದವರೊಂದಿಗೂ ಅನುದಿನವೂ ದೇವರನ್ನು ಆರಾಧಿಸಲು ಬಯಸಬಹುದು. ಪ್ರತಿಯೊಂದು ಊಟದ ಸಮಯದಲ್ಲಿ ನೀವು ತಿನ್ನುವದಕ್ಕಿಂತ ಮೊದಲು ಆತನು ನಿಮಗೆ ಕೊಟ್ಟ ಆಹಾರಕ್ಕಾಗಿ ದೇವರಿಗೆ ಉಪಕಾರ ಹೇಳಿ ಪ್ರಾರ್ಥಿಸಿ. ನಿಮ್ಮ ಕುಟುಂಬದೊಂದಿಗೆ ಕ್ರಮಪ್ರಕಾರವಾಗಿ ಪ್ರಾರ್ಥಿಸಿರಿ. ದೇವರ ಮುಂದೆ ನಿಮಗಿರುವ ಕೊರತೆಗಳನ್ನು ತನ್ನಿರಿ. ಆತನಿಗೆ ಉಪಕಾರ ಹೇಳಿರಿ, ಆತನು ನಿಮಗಾಗಿ ಮಾಡಿದ ಎಲ್ಲವುಗಳಿಗಾಗಿ ಸ್ತೋತ್ರಸಲ್ಲಿಸಿರಿ.

ಭಾನುವಾರವಲ್ಲದೇ, ಬೇರೆ ಸಮಯಗಳಲ್ಲಿಯೂ ನೀವು ದೇವರನ್ನು

ಆರಾಧಿಸಲು ಬಯಸಬಹುದು. ಕರ್ತನ ಭೋಜನ ಸಂಸ್ಕಾರದ ಆಚರಣೆಯನ್ನು, ಕಾಣಿಕೆ ಕೊಡುವದನ್ನು ಒಳಗೊಂಡ ಆರಾಧನೆಯಲ್ಲಿ ನೀವು ಯಾವಾಗಲೂ ಭಾನುವಾರ ಕೂಡಿಬರುತ್ತೀರಿ. ಅದನ್ನು ದಾಟಿ, ವಾರದ ಇತರ ಸಮಯಗಳಲ್ಲಿ ಬೈಬಲಿನ ಅಧ್ಯಯನಕ್ಕಾಗಿ, ಪ್ರಾರ್ಥನೆಗಾಗಿ ಮತ್ತು ಹಾಡುವದಕ್ಕಾಗಿ ಜೊತೆ ಕ್ರೈಸ್ತರೊಂದಿಗೆ ಕೂಡಿ ಬರಲು ನೀವು ಬಯಸಬಹುದು. ಆಗಾಗ ಒಂದಾಗಿ ಕೂಡಿಬರುವುದು, ಒಂದಾಗಿ ಆರಾಧಿಸುವುದು, ಕರ್ತನಲ್ಲಿ ಒಬ್ಬರನ್ನೊಬ್ಬರು ಪ್ರೋತ್ಸಾಹಿಸುವುದು ಕ್ರೈಸ್ತರಿಗೆ ಮಹತ್ವದ್ದಾಗಿದೆ.

ಕರ್ತನ ಸೇವಕರಾಗಿ ನೀವು ಆತನ ವಾಕ್ಯವನ್ನು ಓದುವದರಿಂದಲೂ ಅಧ್ಯಯನ ಮಾಡುವದರಿಂದಲೂ ಅನುದಿನವೂ ಆತನು ನಿಮ್ಮೊಂದಿಗೆ ಮಾತನಾಡಲು ಬಿಡಿರಿ. ಆತನಿಗೆ ಪ್ರಾರ್ಥನೆ ಮಾಡುವದರಿಂದ ಅನುದಿನವೂ ನೀವು ಆತನೊಂದಿಗೆ ಮಾತಾಡಬಹುದು.

## ನಾಲ್ಕನೆಯ ಹೆಜ್ಜೆ: ಒಳ್ಳೇ ಕೆಲಸಗಳನ್ನು ಮಾಡುವುದು

ನೀವು ತೆಗೆದು ಕೊಳ್ಳಬೇಕಾದ ನಾಲ್ಕನೆಯ ಹೆಜ್ಜೆಯು ಕರ್ತನ ಸೇವೆ ಮಾಡುವುದು. ಈಗ ನೀವು ಕ್ರೈಸ್ತರು, ಕ್ರಿಸ್ತನ ಹಿಂಬಾಲಕರು, ಆದುದರಿಂದ ಆತನು ಬೋಧಿಸಿದ ಮಾರ್ಗವನ್ನು ಅನುಸರಿಸಿರಿ. ಒಳ್ಳೆಯದನ್ನು ಮಾಡುತ್ತಾ ಆತನು ಸಂಚರಿಸಿದನೆಂದು ನಮಗೆ ಹೇಳಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 10:38).

### ಸುವಾರ್ತೆಯನ್ನು ಹಂಚಿಕೊಳ್ಳುವುದು

ಕ್ರೈಸ್ತರು ಸುವಾರ್ತೆ ಸಾರಬೇಕು. ಸುವಾರ್ತೆಯನ್ನು ಹಂಚಬೇಕು. "ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆ ಸಾರಿರಿ" (ಮಾರ್ಕ 16:15) ಎಂದು ಯೇಸು ಪರಲೋಕಕ್ಕೆ ಹಿಂದಿರುಗಿ ಹೋಗುವ ಮೊದಲು ನಮಗೆ ಹೇಳಿದನು. ಸುವಾರ್ತೆಯನ್ನು ಸೃಷ್ಟಿಸಲು ಕ್ರಿಸ್ತನು ಮರಣ ಹೊಂದಿದನು; ಈಗ ಅದು ಪ್ರತಿಯೊಬ್ಬ ವ್ಯಕ್ತಿಗೂ ಪ್ರಸಂಗಿಸಲ್ಪಡುವಂತೆ ನೋಡಿಕೊಳ್ಳಲು ನಾವು ಕಾರ್ಯಮಾಡತಕ್ಕದ್ದು. ನೀವು ಸುವಾರ್ತೆಯನ್ನು ಸಾರುವದರಲ್ಲಿ ಒಂದು ವಿಧವು ಈ ಪುಸ್ತಕವನ್ನು ಓದುವಂತೆ ಇತರರನ್ನು ಕೇಳಿಕೊಳ್ಳುವುದು. ಕ್ರೈಸ್ತರಾಗಲು ಅವರನ್ನು ಪ್ರೋತ್ಸಾಹಿಸಿರಿ. ಕ್ರಿಸ್ತನ ಕಡೆಗೆ ಇತರರನ್ನು ನಡಿಸಲು ನಮಗೆ ಸಾಧ್ಯವಾದದ್ದೆಲ್ಲವನ್ನೂ ಮಾಡೋಣ.

## ಇತರರ ಭಕ್ತಿವೃದ್ಧಿಗೊಳಿಸುವುದು

ಕ್ರೈಸ್ತರ ಇನ್ನೊಂದು ಕಾರ್ಯವು ಇತರರ ಭಕ್ತಿ ವೃದ್ಧಿ ಮಾಡುವುದು. "Edify" ಎಂಬ ಪದದ ಅರ್ಥ ಕಟ್ಟುವುದು ಎಂದಾಗುತ್ತದೆ. ಹದಿನೈದು ಇಲ್ಲವೇ ಹೆಚ್ಚು ಜನರ ಸ್ಥಾಪಿತವಾದ ಸಭೆಯು ನಿಮಗಿರುವಾಗ, ದಯವಿಟ್ಟು Truth for Today World Mission Schoolಗೆ (ಪುಟ 303ರಲ್ಲಿರುವ ವಿಳಾಸ ಉಪಯೋಗಿಸಿರಿ) ಬರೆಯಿರಿ. ಬೈಬಲ್ ಅಧ್ಯಾಯನ ಮಾಡುವಲ್ಲಿ ನಿಮಗೆ ಸಹಾಯ ಮಾಡಲು ಕೆಲವು ಸಾಹಿತ್ಯವನ್ನು ನಿಮಗೆ ಕಳುಹಿಸುವೆವು. ಕ್ರಿಸ್ತನ ಮತ್ತು ಆತನ ಮಾರ್ಗದ ನಮ್ಮ ಜ್ಞಾನದಲ್ಲಿ ಬೆಳೆಯುವದನ್ನೂ ಮುಂದುವರಿಸೋಣ ಮತ್ತು ನಮ್ಮೊಂದಿಗೆ ಬೆಳೆಯಲು ಇತರರನ್ನು ಪ್ರೋತ್ಸಾಹಿಸೋಣ.

## ಇತರರಿಗೆ ಸಹಾಯ ಮಾಡುವುದು

ಸಹಾಯ ಮಾಡುವ ಕಾರ್ಯಗಳಲ್ಲಿಯೂ ನೀವು ನಿರತರಾಗಿರಲು ಬಯಸುವಿರಿ. "ಬಡವರಿಗೆ ಸಹಾಯ ಮಾಡಲು ನಾನು ಏನು ಮಾಡಬೇಕು?" ಎಂದು ನಿಮ್ಮನ್ನು ನಿವೇ ಕೇಳಿಕೊಳ್ಳಿರಿ. ಅಗತ್ಯತೆಯಲ್ಲಿರುವವರ ಬಗ್ಗೆ ನೀವು ಚಿಂತಿಸದಿದ್ದರೆ ನೀವು ಕ್ರಿಸ್ತನಂತೆ ಆಗಲಾರಿರಿ (ಮತ್ತಾಯ 25:31-46).

ಕ್ರೈಸ್ತರು ಮಾಡುವ ಕೆಲವು ಒಳ್ಳೇ ಕಾರ್ಯಗಳ ಒಂದು ಪಟ್ಟಿಯು ಇಲ್ಲಿರುವುದು.

ಇತರರಿಗೆ ಸುವಾರ್ತೆ ಬೋಧಿಸುವುದು
ರೋಗಿಗಳಿಗೆ ಸೇವೆ ಮಾಡುವುದು
ದೇವರ ಬಗ್ಗೆ ತಿಳಿಯಲು ಮಕ್ಕಳಿಗೆ ಸಹಾಯ ಮಾಡುವುದು
ಹಸಿದವರಿಗೆ ಊಟ ಕೊಡುವುದು
ವಿಧವೆಗಳಿಗೂ ಅನಾಥರಿಗೂ ಸಹಾಯ ಮಾಡುವುದು
ಸೆರೆಮನೆಯಲ್ಲಿರುವವರನ್ನು ಸಂದರ್ಶಿಸುವುದು
ಅತಿಥಿ ಸತ್ಕಾರ ಮಾಡುವುದು
ಕ್ರೈಸ್ತ ಸಾಹಿತ್ಯವನ್ನು ವಿತರಣೆ ಮಾಡುವುದು
ಆರಾಧನಾ ಕೂಟಗಳಿಗೆ ಇತರರನ್ನು ಆಹ್ವಾನಿಸುವುದು
ಇತರರಿಗಾಗಿ ಪ್ರಾರ್ಥಿಸುವುದು
ಓದಲು ಬಾರದವರಿಗೆ ಬೈಬಲನ್ನು ಓದಿ ಹೇಳುವುದು

ಸೇವೆ ಮಾಡಲು ಯೇಸು ಈ ಲೋಕದೊಳಗೆ ಬಂದನು. ಸೇವೆ ಮಾಡಿಸಿಕೊಳ್ಳುವದಕ್ಕಲ್ಲ ಆದರೆ ಇತರರಿಗೆ ಸೇವೆ ಮಾಡುವದಕ್ಕೂ, ಅನೇಕರಿಗಾಗಿ ತನ್ನ

ಪ್ರಾಣವನ್ನು ಕೊಡುವದಕ್ಕೂ ಆತನು ಬಂದನು (ಮಾರ್ಕ 10:45). ಯೇಸುವು ಮಾಡಿದಂತೆ ನಾವು ಇತರರಿಗಾಗಿ ಸಾಯಲಾರೆವು; ಆದರೆ ಇತರರಿಗಾಗಿ ಅವರಿಗೆ ಸುವಾರ್ತೆಯನ್ನು ಬೋಧಿಸುವದರಿಂದಲೂ, ಕ್ರಿಸ್ತನಲ್ಲಿ ಬೆಳೆಯುವಂತೆ ಅವರಿಗೆ ಸಹಾಯ ಮಾಡುವದರಿಂದಲೂ, ನೋವು ಹೊಂದುತ್ತಿರುವವರಿಗೆ ಅನುಕಂಪ ತೋರಿಸುವದರಿಂದಲೂ ನಾವು ಜೀವಿಸ ಬಹುದು.

## ಮುಕ್ತಾಯ

ಅಪೊಸ್ತಲರ ಕೃತ್ಯಗಳು 8ರಲ್ಲಿ ಐಥಿಯೋಪ್ಯದ ಕಂಚುಕಿಯ ಕಥೆಯನ್ನು ನೀವು ಓದಿರುವಿರೋ? ಓದಿರದಿದ್ದರೆ ಈ ಪುಸ್ತಕವನ್ನು ಓದುತ್ತಿರುವದನ್ನು ನಿಲ್ಲಿಸಿ, ಆ ಕಥೆಯನ್ನು ಓದಿರಿ. ಅವನಿಗೆ ಸುವಾರ್ತೆಯನ್ನು ಬೋಧಿಸಲು ಫಿಲಿಪ್ಪನು ಕಳುಹಿಸಲ್ಪಟ್ಟನು. ಸಂತೋಷದಿಂದ ಐಥಿಯೋಪ್ಯದವನು ಸುವಾರ್ತೆಯನ್ನು ಸ್ವೀಕರಿಸಿ ಕ್ರೈಸ್ತನಾದನು.

ಫಿಲಿಪ್ಪನು ಪ್ರೇರೇಪಣೆ ಹೊಂದಿದ ಮನುಷ್ಯನು. ನೀವು ಓದುತ್ತಿರುವ ಈ ಪುಸ್ತಕವು (ಕೊನೆಯ ಭಾಗದಲ್ಲಿರುವ ಹೊಸ ಒಡಂಬಡಿಕೆಯನ್ನು ಹೊರತು ಪಡಿಸಿ) ಪ್ರೇರೇಪಿತವಾದದ್ದಲ್ಲ. ಹೀಗಿದ್ದರೂ ಈ ಪುಟಗಳಲ್ಲಿ ಕ್ರಿಸ್ತನು ತಂದ ರಕ್ಷಣೆಯ ಬಗ್ಗೆ ಮತ್ತು ಆತನು ಸ್ಥಾಪಿಸಿದ ಸಭೆಯ ಬಗ್ಗೆ ಹೊಸ ಒಡಂಬಡಿಕೆಯು ಬೋಧಿಸುವದನ್ನು ನೀವು ಓದಿರುವಿರಿ. ಹೇಗೆ ಈ ಪುಟಗಳು ಪ್ರೇರೇಪಿತ ಪುಸ್ತಕದ ಕಡೆಗೆ, ಬೈಬಲಿನ ಕಡೆಗೆ ನಿಮ್ಮನ್ನು ತೋರಿ ಸುತ್ತದೆ. ನೀವು ಇಲ್ಲಿ ಓದಿದ್ದನ್ನು ಪರಿಶುದ್ಧ ಬರಹಗಳೊಂದಿಗೆ ಹೋಲಿಸಿರಿ ಹಾಗೂ ಹೊಸ ಒಡಂಬಡಿಕೆಯು ಬೋಧಿ ಸಿದ್ದನ್ನು ನಿಮಗೆ ಬೋಧಿಸಲು ನಾವು ಪ್ರಯತ್ನಿಸಿದ್ದನ್ನು ನೀವು ನೋಡುವಿರಿ.

ಐಥಿಯೋಪ್ಯದವನಿಗೆ ರಕ್ಷಿಸಲ್ಪಡಲು ದೇವರು ಒಂದು ಅವಕಾಶವನ್ನು ಕೊಟ್ಟನು. ಅದು ದೀರ್ಘವಾದ, ಸಿದ್ಧ ಪಡಿಸಿದ ಅಧ್ಯಯನವಾಗಿರಲಿಲ್ಲ, ಆದರೆ ಅವನು ಹೇಗೆ ಕ್ರೈಸ್ತನಾಗಬಹುದು ಮತ್ತು ಕ್ರೈಸ್ತನಾಗಿ ಜೀವಿಸಬಹುದು ಎಂದು ಬೋಧಿಸಲು ಸಾಕಷ್ಟಾಗಿತ್ತು. ಅದೇ ಬೋಧನೆಯನ್ನು ನಿಮಗೆ ಒದಗಿಸಲು ನಾವು ಪ್ರಯತ್ನಿಸಿದ್ದೇವೆ. ಅವಕಾಶವು ಈಗ ನಿಮ್ಮದು, ಈ ಅವಕಾಶದ ಸಂಪೂರ್ಣ ಸದುಪಯೋಗ ಮಾಡಿಕೊಳ್ಳಿರಿ. ಯಥಾರ್ಥವಾದ ವಿದಾಯ ವಂದನೆ ಹೇಳು ತ್ತೇವೆ. ತನ್ನ ಕುಮಾರನ ಮುಖಾಂತರ ಆತನು ಕೊಟ್ಟ ಸುವಾರ್ತೆಗೆ ನೀವು ವಿಧೇಯರಾಗುವಂತೆ ದೇವರ ವಿಪುಲವಾದ ಆಶೀರ್ವಾದಗಳು ನಿಮ್ಮ ಮೇಲೆ ಇರಲಿ. ಮೊದಲೇ ಆಗದಿದ್ದರೂ ಪರಲೋಕದಲ್ಲಿ ನಿಮ್ಮನ್ನು ಸಂದರ್ಶಿಸುವದನ್ನು ಮುನ್ನೋಡುತ್ತಿರುತ್ತೇವೆ.

## ಅಧ್ಯಯನ ಪ್ರಶ್ನೆಗಳು

*(ತ್ತರಗಳು ಪುರಾವಣಿ 1ರಲ್ಲಿವೆ)*

1. "ಯೇಸುವಿನೊಂದಿಗೆ ನೀವೇನು ಮಾಡುವಿರಿ?" ಎಂಬ ಪ್ರಶ್ನೆಗೆ ನಿತ್ಯವಾದ ಅನ್ವಯವಿರುವುದು ಯಾಕೆ?
2. ಶಿಶುಗಳಿಗೂ ಮಕ್ಕಳಿಗೂ ಬಾಪ್ತಿಸ್ಮ ಮಾಡಿಸಿಕೊಳ್ಳುವ ಅಗತ್ಯತೆ ಯಿರುವುದೋ? ಯಾಕೆ ಅಥವಾ ಯಾಕೆ ಇಲ್ಲ?
3. ಬಾಪ್ತಿಸ್ಮದ ಉದ್ದೇಶವೇನು?
4. ಕ್ರಿಸ್ತನ ಸಭೆಯನ್ನು ಕಂಡುಕೊಳ್ಳಲಿಕ್ಕೆ ನಿಮಗೆ ಸಹಾಯ ಮಾಡುವ ಕೆಲವು ಪ್ರಶ್ನೆಗಳು ಯಾವವು?
5. ಬಾಪ್ತಿಸ್ಮವು ನೀರಿನಲ್ಲಿ ಹೂಣಿಡುವಿಕೆಯಾಗಿದೆಯೆಂದು ಬೈಬಲ್‌ನಲ್ಲಿ ಯಾವ ಭಾಗ ಬೋಧಿಸುತ್ತದೆ?
6. ಕ್ರೈಸ್ತನ ಜೀವನವನ್ನು ಸಾರಾಂಶವಾಗಿ ಹೇಳಲು ಉತ್ತಮವಾದ ಮಾರ್ಗವು ಯಾವುದು?
7. ದೇವರ ವಾಕ್ಯಕ್ಕೆ ಕ್ರೈಸ್ತನು ಸಮೀಪದಲ್ಲಿರಬೇಕು ಯಾಕೆ?
8. ಪ್ರತೀ ಭಾನುವಾರ ದೇವರನ್ನು ಆರಾಧಿಸುವದಕ್ಕೆ ಸಭೆಯು ಕೂಡಿ ಬರುವುದು. ಆರಾಧನೆಯ ಯಾವ ಭಾವನೆಗಳು ಉಪಯೋಗಿಸಲ್ಪಡಬೇಕು?
9. ಯೇಸುವು ಕರ್ತನ ಭೋಜನವನ್ನು ಸ್ಥಾಪಿಸಿದಾಗ ಯಾವ ಎರಡು ಮೂಲ ವಸ್ತುಗಳನ್ನು ಉಪಯೋಗಿಸಿದನು?
10. ಕ್ರೈಸ್ತನಾಗಲು ಮತ್ತು ಕ್ರೈಸ್ತನಂತೆ ಜೀವಿಸಲು ನೀವು ತೆಗೆದುಕೊಳ್ಳಲು ಅಗತ್ಯವಾಗಿರುವ ನಾಲ್ಕು ಹೆಜ್ಜೆಗಳು ಯಾವವು?

## ಪದ ಸಹಾಯಗಳು

ಪರಿಶುದ್ಧ ಬರಹಗಳು - ಬೈಬಲ್ ಹಳೇ ಮತ್ತು ಹೊಸ ಒಡಂಬಡಿಕೆಯನ್ನು ಒಳಗೊಂಡದ್ದು. ಹಳೇ ಒಡಂಬಡಿಕೆಯ ಯೆಹೂದ್ಯರಿಗಾಗಿ ದೇವರ ಧರ್ಮಶಾಸ್ತ್ರವಾಗಿತ್ತು; ಹೊಸ ಒಡಂಬಡಿಕೆಗಾಗಿ ಮಾರ್ಗ ಮಾಡಿತು (ಗಲಾತ್ಯ 3:24). ಎಲ್ಲರೂ ಇಂದು ಅನುಸರಿಸುವದಕ್ಕಾಗಿ ಇರುತ್ತದೆ. ಇದು ದೇವರ ಜಗತ್ತಿನ ಸೃಷ್ಟಿ, ದೇವರು ಆಯ್ದುಕೊಂಡ ಇಸ್ರಾಯೇಲ ಜನಾಂಗಕ್ಕೆ ಆತನು ಕೊಟ್ಟ ಧರ್ಮಶಾಸ್ತ್ರ, ಪ್ರೇರೇಪಿತ ಪದ್ಯ ಹಾಗೂ ತನ್ನ ಪ್ರವಾದಿಗಳ ಮುಖಾಂತರ ದೇವರು ಕೊಟ್ಟ ಬೋಧನೆಗಳನ್ನು ಒಳಗೊಂಡಿರುತ್ತದೆ.

ಟಿಪ್ಪಣಿಗಳು

[1]ಹೊಸ ಒಡಂಬಡಿಕೆಯ ಸಭೆಗಳ ಸಂಘಟನೆಯು ಸರಳವಾದದ್ದು, ಮೂಲವಾದದ್ದು ಆಗಿತ್ತು. ಮೊದಲನೆಯದು, ದೇವರ ವಾಕ್ಯವನ್ನು ಪ್ರಸಂಗಿಸಿದ, ಬೋಧಿಸಿದ ಸಭಾಸೇವಕರೂ ಬೋಧಕರೂ ಇದ್ದರು. ಎರಡನೆಯದು ಸಾಕಷ್ಟು ಪ್ರೌಢವಸ್ಥೆಗೇರಿದ ಪ್ರತಿಯೊಂದು ಸಭೆಗೆ ಹೆಚ್ಚು ಜನ ಹಿರಿಯರು (ಕೆಲವು ಸಲ "ಮೇಲ್ವಿಚಾರಕರು," "ಕುರುಬರು" ಹಾಗೂ "ಪಾಸ್ಟರರು" ಎಂದು ಕರೆಯಲ್ಪಟ್ಟಿದ್ದಾರೆ). ಸಭೆಗೆ ಮಾರ್ಗದರ್ಶನ ಮಾಡುತ್ತಿದ್ದರು. ಮೂರನೆಯದು, ಪ್ರತಿಯೊಂದು ಸಭೆಗೆ ಹಿರಿಯರ ಮೇಲ್ವಿಚಾರನೆಯಲ್ಲಿ ಸಭಾ ಸೇವೆ ಮಾಡಿದ ಡೀಕನರು ಇದ್ದರು. [2]ಹೊಸ ಒಡಂಬಡಿಕೆಯು ಸಭೆಯು ಒಂದೇ ಶಿರಸ್ಸು ಅಂದರೆ ಕ್ರಿಸ್ತ ಎಂಬ ಹೆಸರನ್ನು ಹೇಳುತ್ತದೆ. ಆತನ ಸಭೆಗೆ ಲೋಕದಲ್ಲಿ ಮುಖ್ಯ ಕೇಂದ್ರ ವಿರುವದಿಲ್ಲ. ಸಭೆಯ ಪ್ರತಿಯೊಂದು ಸ್ಥಳಿಕ ಸಭೆಯು ಕ್ರಿಸ್ತನ ನಾಯಕತ್ವವನ್ನು ಮಾತ್ರ ಅನುಸರಿಸುತ್ತದೆ.

# ಪುರವಣಿ 1

# ಅಧ್ಯಯನ ಪ್ರಶ್ನೆಗಳಿಗೆ ಉತ್ತರಗಳು

## ದೇವರು ಅಸ್ತಿತ್ವದಲ್ಲಿರುವನೋ?

*(ಪ್ರಶ್ನೆಗಳು ಅಧ್ಯಾಯ 1ರಲ್ಲಿವೆ)*

1. ಯಾರಾದರೂ ಕೇಳುವ ಅತೀ ಪ್ರಾಮುಖ್ಯವಾದ ಪ್ರಶ್ನೆಯೂ "ದೇವರು ಅಸ್ತಿತ್ವದಲ್ಲಿರುವನೋ?" ಎಂಬುದು.
2. "ದೇವರು ಅಸ್ತಿತ್ವದಲ್ಲಿರುವನೋ? ಎಂಬ ಪ್ರಶ್ನೆಯು ಬಹಳ ಪ್ರಾಮುಖ್ಯವಾದದ್ದು ಯಾಕಂದರೆ ನಾವು ಈ ಪ್ರಶ್ನೆಗೆ ಹೇಗೆ ಉತ್ತರ ಕೊಡುತ್ತೇವೆಂಬುದು ಜೀವದ ಬಗ್ಗೆ ಇರುವ ನಮ್ಮ ಎಲ್ಲಾ ಇತರ ಪ್ರಶ್ನೆಗಳಿಗೆ ಕೊಡುವ ಉತ್ತರಗಳ ಮೇಲೆ ಪರಿಣಾಮ ಮಾಡುತ್ತದೆ.
3. ಬೈಬಲು ದೇವರ ಬಗೆಗಿನ ಒಪ್ಪಿಕೊಳ್ಳುವಿಕೆಯಿಂದ ಪ್ರಾರಂಭವಾಗುತ್ತದೆ.
4. ದೇವರಲ್ಲಿ ನಂಬುವದಕ್ಕೆ ನಮ್ಮನ್ನು ಒತ್ತಾಯ ಮಾಡುವ ಮೊದಲನೆಯ ಪುರಾವೆಯು ಜಗತ್ತಿನ ಪುರಾವೆಯಾಗಿದೆ. ಭೂಮಿ ಹಾಗೂ ವಿಶ್ವವು ದೇವರ ಅಸ್ತಿತ್ವವನ್ನು ಸ್ಪಷ್ಟವಾಗಿ ಘೋಷಿಸುತ್ತದೆ.
5. ಮನುಷ್ಯನ ಅಸ್ತಿತ್ವವು ದೇವರಿಗೆ ಸಂಬಂಧಿಸಲ್ಪಟ್ಟಲ್ಲದಿದ್ದರೆ, ನಾವು (1) ಜೀವದ ಮೂಲವನ್ನು, (2) ನೈಸರ್ಗಿಕ ನಿಯಮವನ್ನು ಹಾಗೂ (3) ಕುಟುಂಬದ ಅಸ್ತಿತ್ವವನ್ನು ವಿವರಿಸಲಾರೆವು.

## ಬೈಬಲ್, ದೇವರ ವಾಕ್ಯ

*(ಪ್ರಶ್ನೆಗಳು ಅಧ್ಯಾಯ 2ರಲ್ಲಿವೆ)*

1. "ದೇವರಿಂದ ಪ್ರೇರೇಪಿಸಲ್ಪಟ್ಟದ್ದು" ಎಂದು ಭಾಷಾಂತರಿಸಲ್ಪಟ್ಟ ಗ್ರೀಕ ಮಾತು ಅಕ್ಷರಶಃವಾಗಿ "ದೇವರು - ಉಸುರಿದ" ಎಂದರ್ಥವಾಗುತ್ತದೆ. ಲೌಕಿಕ

ಬರಹಗಾರರು ವಿವಿಧ ಉತ್ತೇಜನಗಳಿಂದ "ಪ್ರೇರೇಪಿಸಲ್ಪಟ್ಟರು" ಎಂದು ಹೇಳುತ್ತಾರೆ. ಆದರೆ ಬೈಬಲಿನ ಪ್ರೇರಣೆಯ ಮೂಲವು ದೇವರು ತಾನೇ ಎಂದು ಬೈಬಲು ಒಪ್ಪಿಕೊಳ್ಳುತ್ತದೆ.

2. ಡಿಯೊಕ್ಲೇಷಿಯನು ಬೈಬಲನ್ನು ನಾಶಮಾಡುವ ತನ್ನ ಪ್ರಯತ್ನದಲ್ಲಿ ಯಶಸ್ವಿಯಾಗಲಿಲ್ಲ. ಒಂದು ನೂರು ವರ್ಷಗಳನಂತರ, ಇನ್ನೊಬ್ಬ ಚಕ್ರವರ್ತಿಯು ಹೊಸ ಒಡಂಬಡಿಕೆಯನ್ನು ಪುನಃ ಪ್ರತಿ ಮಾಡಲು ಬಯಸಿದ್ದನ್ನು ಪ್ರಕಟಿಸಿದಾಗ, ಇಪ್ಪತ್ನಾಲ್ಕು ತಾಸುಗಳೊಳಗಾಗಿ ಅವನಿಗೆ ಐವತ್ತು ಪ್ರತಿಗಳು ಕೊಡಲ್ಪಟ್ಟವು.
3. ಆರೋಗ್ಯ ವಿಜ್ಞಾನ ಇಲ್ಲವೇ ಆರೋಗ್ಯಪಾಲನಾ ಕ್ರಮಗಳಲ್ಲಿ ಯಾವುದೇ ರೀತಿ ಯನ್ನು ತಿಳಿಯದ ಜಗತ್ತಿನಲ್ಲಿ ಬರೆಯಲ್ಪಟ್ಟ ಮೋಶೆಯ ಪುಸ್ತಕಗಳು ಆಧುನಿಕ ತತ್ವಗಳನ್ನು ಪ್ರದರ್ಶಿಸುತ್ತವೆ. ಕ್ರಿಮಿಗಳನ್ನು ವಿಜ್ಞಾನಿಗಳು ಸಂಶೋಧಿಸುವದಕ್ಕಿಂತ ಮೂರು ಸಾವಿರ ವರ್ಷಗಳ ಹಿಂದೆಯೇ ಬರೆಯಲ್ಪಟ್ಟ ಯಾಜಕಕಾಂಡ 13:45 ರೋಗವನ್ನು ಪ್ರಸರಿಸುವದನ್ನು ತಡೆಯುವಲ್ಲಿ ಸಹಾಯಕ ನಿರ್ದೇಶನಗಳನ್ನೂ ಕೊಡುತ್ತದೆ.
4. ಬೈಬಲು ಸಾಹಿತ್ಯಕ್ಕೆ ತಿಳಿದ ಪ್ರತಿಯೊಂದು ವಿಷಯವನ್ನು ಒಳಗೊಂಡಿದ್ದರೂ ಎರಡು ಸಾವಿರ ವರುಷಗಳಿಗಿಂತಲೂ ಹೆಚ್ಚು ಸಮಯದಲ್ಲಿ ನಾಲ್ವತ್ತಕ್ಕಿಂತಲೂ ಹೆಚ್ಚು ಲೇಖಕರಿಂದ ಬರೆಯಲ್ಪಟ್ಟಿದ್ದರೂ ಅದು ಸಂಪೂರ್ಣ ಐಕ್ಯತೆಯನ್ನು ಪ್ರಕಟಿಸುತ್ತದೆ.
5. ಬೈಬಲಿನ ಮುಖ್ಯ ಪ್ರಸ್ತಾಪವು ಒಬ್ಬ ಮನುಷ್ಯನ - ಯೇಸು ಕ್ರಿಸ್ತನ ಕಥೆಯಾಗಿದೆ.
6. ಬೈಬಲ್ ಯಾವುದೇ ಪುಸ್ತಕಕ್ಕಿಂತ ಹೆಚ್ಚು ಪ್ರಭಾವವನ್ನು ಮಾನವರ ಮೇಲೆ ಸಾಧಿಸಿದೆ. ಅದು ಇತಿಹಾಸದ ಸರಣಿಯನ್ನು ಬದಲಾಯಿಸಿದೆ. ಸಾಮ್ರಾಜ್ಯ ಗಳನ್ನು ಕಟ್ಟಿದೆ, ಅದರ ಆಜ್ಞೆಗಳಿಗೆ ವಿಧೇಯರಾದವರಿಗೆ ಆಶೀರ್ವಾದವನ್ನು ಜಯವನ್ನೂತಂದಿದೆ.
7. ಬೈಬಲು ವಾಚಕರಿಗೆ ಅವರ ಸ್ವಂತ-ನಿತ್ಯತ್ವಕ್ಕಾಗಿ ನಿರೀಕ್ಷೆಯನ್ನೂ ಭರವಸೆಯನ್ನೂ ಒದಗಿಸುತ್ತದೆ, ಅದು ಪ್ರಿಯವಾದವರು ತೆಗೆದು ಕೊಳ್ಳ ಲ್ಪಡುವಾಗ ಆದರಣೆಯನ್ನು ತರುತ್ತದೆ.
8. ದೇವರ ವಾಕ್ಯದ ಆಶ್ಚರ್ಯಗಳು ಅದರ ಪುರಾತನತ್ವವನ್ನು ಅದರ ಆಧುನಿಕತೆಯನ್ನು, ಅದರ ವಿವಿಧತೆಯನ್ನು, ಅದರ ಐಕ್ಯತೆಯನ್ನು, ಅದರ ಮುಖ್ಯ ಪ್ರಸ್ತಾಪವನ್ನು, ಅದರ ಪ್ರಭಾವವನ್ನು ಹಾಗೂ ಅದರ ಆದರಣೆಯನ್ನು ಒಳಗೊಂಡಿದೆ.

# ತಂದೆಯಾದ ದೇವರು ಯಾರು?

*(ಪ್ರಶ್ನೆಗಳು ಅಧ್ಯಾಯ 3ರಲ್ಲಿವೆ)*

1. ಒಂದೇ ಒಂದು ಜೀವಿಯು ನಿಜವಾದ ಮತ್ತು ಜೀವಿಸುವ ದೇವರಾಗಿದ್ದಾನೆ. ಆತನು ಜಗತ್ತನ್ನು ಸೃಷ್ಟಿಸಿದನು. ನಿತ್ಯನಾದ, ಸರ್ವ ಶಕ್ತನಾದ, ಸರ್ವಜ್ಞಾನಿಯಾದ, ಸರ್ವ ವ್ಯಾಪಿಯಾದ ಒಬ್ಬನೇ ಜೀವಿಯಾಗಿದ್ದಾನೆ.
2. ದೈವತ್ವದ ಹಳೇ ಒಡಂಬಡಿಕೆಯ ತತ್ವವು ಆದಿಕಾಂಡ 1:26, ಆದಿಕಾಂಡ 3:22, ಆದಿಕಾಂಡ 11:7 ಹಾಗೂ ಯೆಶಾಯ 6:8ರಲ್ಲಿ ಕಂಡು ಬರುತ್ತದೆ.
3. ಯೇಸುವಿನ ಬಾಪ್ತಿಸ್ಮ, ಮಾನವನ ವಿಮೋಚನೆಯ ಕಾರ್ಯ, ಪ್ರಾರ್ಥನೆ ಹಾಗೂ ಮಹಾ ನಿಯೋಗದಲ್ಲಿಯ ಬಾಪ್ತಿಸ್ಮವು ತಂದೆ, ಕುಮಾರ ಹಾಗೂ ಪರಿಶುದ್ಧಾತ್ಮನ ಸಹಕಾರದಲ್ಲಿ ಕಾರ್ಯಮಾಡುತ್ತಾರೆಂಬ ಉದಾಹರಣೆಗಳನ್ನು ತೋರಿಸುತ್ತವೆ.
4. ದೇವರ ಬಳಿಗೆ ಬರುವದಕ್ಕೆ ಮನುಷ್ಯನಿಗಿರುವ ಒಂದೇ ಒಂದು ಮಾರ್ಗವು ಯೇಸು ಕ್ರಿಸ್ತನ ಮುಖಾಂತರವಾಗಿರುತ್ತದೆ. ಆತನೊಬ್ಬನೇ ದೇವರಿಗೂ ಮನುಷ್ಯರಿಗೂ ಮಧ್ಯದಲ್ಲಿಯ ಅಧಿಕೃತ ಮಧ್ಯಸ್ಥನಾಗಿರುತ್ತಾನೆ.
5. ದೇವದೂತರ, ಪರಿಶುದ್ಧರ ಇಲ್ಲವೇ (ಜೀವಿಸುವ ಅಥವಾ ಮೃತರಾದ) ಯಾವುದೇ ಇತರ ಜನರ ಮುಖಾಂತರ ದೇವರನ್ನು ಸಮೀಪಿಸಲಾಗದು ಎಂದು ಯೋಹಾನ 14:6, ಮತ್ತು 1 ತಿಮೊಥೆ 2:5 ಬೋಧಿಸುತ್ತವೆ. ಯೇಸು ಕ್ರಿಸ್ತನು ಮಾತ್ರವೇ ತಂದೆಯ ಕಡೆಗೆ ಮಾರ್ಗವಾಗಿದ್ದಾನೆ.
6. ಯೇಸುವು ಮಾನವ ಜನಾಂಗಕ್ಕೆ ತನ್ನ ಸಂಬಂಧವನ್ನು ಪ್ರತಿಬಿಂಬಿಸಲು "ಮನುಷ್ಯ ಕುಮಾರನು" ಎಂದು ಕರೆಯಲ್ಪಟ್ಟಿದ್ದಾನೆ. ಹಾಗೂ ದೇವರೊಂದಿಗಿನ ತನ್ನ ಸಂಬಂಧದಲ್ಲಿ, ಆತನು "ದೇವರ ಕುಮಾರನು" ಎಂದು ಕರೆಯಲ್ಪಟ್ಟಿದ್ದಾನೆ.
7. ದೇವರ ಬಗ್ಗೆ ಬೈಬಲಿನಲ್ಲಿ ಬೋಧಿಸಲ್ಪಟ್ಟ ಕೆಲವು ಸಂಗತಿಗಳು ಇಂತಿವೆ: (1) ತಂದೆ, ಕುಮಾರ, ಪರಿಶುದ್ಧಾತ್ಮನು ಅಸ್ತಿತ್ವದಲ್ಲಿದ್ದಾರೆ. (2) ಈ ಮೂವರು ಒಂದು ಮಹಿಮೆಯುಳ್ಳ ದೈವತ್ವವಾಗಿದ್ದಾರೆ. (3) ಅವರು ಐಕ್ಯವಾಗಿದ್ದು ಒಂದೇ ಯಾಗಿ ಅಸ್ತಿತ್ವದಲ್ಲಿರುವರು. (4) ಅವರು ನಿತ್ಯವಾದವರೂ, ಸೃಷ್ಟಿಸಲ್ಪಟ್ಟ ಎಲ್ಲಾ ಸಂಗತಿಗಳಿಗಿಂತಲೂ ವಿಶಿಷ್ಠವಾದವರೂ ಭಿನ್ನವಾದವರೂ ಆಗಿದ್ದಾರೆ. (5) ಚಿತ್ತದಲ್ಲಿಯೂ ಉದ್ದೇಶದಲ್ಲಿಯೂ ಅವರು ಒಂದೇಯಾಗಿದ್ದಾರೆ.
8. ಈ ಸತ್ಯಗಳು ದೇವರು ಎಲ್ಲಾ ಸಂಗತಿಗಳನ್ನು ಸೃಷ್ಟಿಸಿದನು ಎಂದು ಘಟನೆಯ ಮೇಲೆ ಅವಲಂಭಿಸಿವೆ: (1) ಎಲ್ಲಾ ವಾಸ್ತವಿಕತೆಗಳ ಹಿಂದೆ ಆತನು ಇರುವಾತ ನಾಗಿದ್ದಾನೆ, (2) ಆತನು ನಿತ್ಯನು, (3) ಆತನು ಸರ್ವ ಶಕ್ತನು, (4) ಆತನು ಸರ್ವ ಜ್ಞಾನಿಯು, (5) ಆತನು ಸರ್ವವ್ಯಾಪಿಯು, (6) ಆತನು ಒಬ್ಬನೇ ನಿಜ ವಾದ ಹಾಗೂ ಜೀವಿಸುವ ದೇವರು.
9. ಜಗತ್ತಿನಲ್ಲಿ ಎಲ್ಲವನ್ನು ಒಟ್ಟಾಗಿ ಹಿಡಿದು ದೇವರು ಕಾರ್ಯಮಾಡುವದನ್ನು

ಮುಂದುವರೆಸುತ್ತಾನೆಂದು ಕೊಲೊಸ್ಸೆ 1:16, 17ರಲ್ಲಿ ನಮಗೆ ಹೇಳಲ್ಪಟ್ಟಿದೆ. ತನ್ನ ನೈಸರ್ಗಿಕ ನಿಯಮಗಳೊಂದಿಗೆ ಸರ್ವಶಕ್ತ ಹಸ್ತವು ಭೂಮಿಯನ್ನು ಕಾಪಾಡುತ್ತದೆ ಎಂದು ತರ್ಕಶಾಸ್ತ್ರವೂ ಅವಲೋಕನವೂ ನಮಗೆ ಹೇಳು ತ್ತವೆ. ಆತನು ನಮಗೆ ಗಾಳಿಯನ್ನೂ, ನೀರನ್ನೂ, ಸೂರ್ಯ ಪ್ರಕಾಶವನ್ನೂ ಭೂಲೋಕಕ್ಕಾಗಿಯೂ ಅದರ ಜನರಿಗಾಗಿಯೂ ಒದಗಿಸುವದನ್ನು ಮುಂದುವರಿಸುತ್ತಾನೆ.

10. ಯೇಸು ಕ್ರಿಸ್ತನ ಮುಖಾಂತರವಾಗಿ ದೇವರ ನೀತಿಯುಳ್ಳ ನ್ಯಾಯತೀರ್ಪು ವೈಯ ಕ್ತಿಕವಾದದ್ದೂ, ನಿರ್ದಿಷ್ಟವಾದದ್ದು ವಿಶ್ವವ್ಯಾಪ್ತಿಯಾದದ್ದೂ ಆಗಿರುತ್ತದೆ.

## ಯೇಸು, ದೇವರ ಕುಮಾರ

*(ಪ್ರಶ್ನೆಗಳು ಅಧ್ಯಾಯ 4ರಲ್ಲಿವೆ)*

1. ಯೇಸು ಕ್ರಿಸ್ತನು ದೇವರ ಕುಮಾರನಾಗಿರುವನು ಎಂಬುದು ಕ್ರೈಸ್ತತ್ವದ ಅಂತರಾಳದಲ್ಲಿರುವುದು.
2. ಯೇಸುವಿನ ವಂಶಾವಳಿಯ ಕೆಲವು ವಿಶೇಷತೆಗಳನ್ನೊಳಗೊಂಡು ಆತನ ಜನನವು ಮುಂತಿಳಿಸಲ್ಪಟ್ಟಿತು. ಆತನ ಜನನದ ಸ್ಥಳ ಹಾಗೂ ಸ್ವರೂಪವು ಮುಂತಿಳಿಸಲ್ಪಟ್ಟವು. ಯೇಸುವಿನ ಐಗುಪ್ತಕ್ಕೆ ಪಲಾಯನವನ್ನು ಆತನ ಜನನದ ಸಮಯದಲ್ಲಿಯ ಸಂಹಾರಗಳನ್ನು ಪ್ರವಾದಿಗಳು ಮುಂತಿಳಿಸಿದರು. ಗಲಿಲಾಯದಲ್ಲಿಯ ಆತನ ಜೀವನವನ್ನೂ ಯೆರೂಸಲೇಮಿನಲ್ಲಿ ಆತನ ಜಯ ಪ್ರವೇಶವನ್ನೂ ಪ್ರವಾದನೆಗಳು ತಿಳಿಸಿದವು. ಆತನ ಸೇವೆ, ಸಾಮ್ಯಗಳಲ್ಲಿ ಆತನ ಬೋಧನೆ, ಅನ್ಯರ ಮಧ್ಯದಲ್ಲಿ ಆತನ ಸೇವೆ, ಯೆಹೂದಿ ನಾಯಕರಿಂದ ಆತನ ತಿರಸ್ಕಾರ ಎಲ್ಲವೂ ಮುಂತಿಳಿಸಲ್ಪಟ್ಟವು. ಯೇಸುವು ಹಿಡಿದು ಕೊಡಲ್ಪಟ್ಟದ್ದು ಮತ್ತು ಮರಣವು ಪ್ರವಾದನೆಯಲ್ಲಿ ವಿವರವಾಗಿ ಚಿತ್ರಿಸಲ್ಪಟ್ಟವು. ಆತನು ಮರಣದ ಸಮಯದಲ್ಲಿ ಹೇಳಿದ ಮಾತುಗಳು, ಆತನ ಹೂಣಿಡುವಿಕೆ, ಪುನರುತ್ಥಾನ ಮತ್ತು ದಿವಾರೋಹಣದ ಬಗೆಗಿನ ಮಾಹಿತಿಯೊಂದಿಗೆ ಮುಂಚಿತವಾಗಿಯೇ ದಾಖಲೆ ಮಾಡಲ್ಪಟ್ಟಿದ್ದವು ("ಯಾಕಂದರೆ ಆತನು ಹಳೇ ಒಡಂಬಡಿಕೆಯ ಪ್ರವಾದನೆ ಗಳನ್ನು ನೆರವೇರಿಸುವನು" ಎಂಬುದನ್ನು 4ನೇ ಅಧ್ಯಾಯದಲ್ಲಿ ನೋಡಿರಿ).
3. ಯೇಸುವಿನ ಜೀವನವನ್ನು ಕುರಿತ ಪ್ರವಾದನೆಗಳ ನೆರವೇರುವಿಕೆಯು ಯೇಸುವು ದೈವಿಕನಾಗಿದ್ದನು ಹಾಗೂ ಬೈಬಲನ್ನು ಬರೆದವರು ಪ್ರೇರೇಪಿ ಸಲ್ಪಟ್ಟಿದ್ದರೆಂಬುದನ್ನು ತೋರಿಸುತ್ತದೆ.
4. ಯೇಸುವು ತಾನು ಅಬ್ರಹಾಮನಿಗಿಂತಲೂ ಮೊದಲು ಇದ್ದವನೆಂದೂ ಲೋಕದ ಉತ್ಪತ್ತಿಗಿಂದ ಮೊದಲು ದೇವರೊಂದಿಗೆ ಇದ್ದವನೆಂದೂ ಹೇಳಿದನು. ತಾನು ಪರಲೋಕದಿದಂದ ಬಂದೆನೆಂದೂ ಭೂಲೋಕದಲ್ಲಿ ಎಲ್ಲಾ ಅಧಿಕಾರವೂ ತನಗಿರುವುದೆಂದೂ ಹೇಳಿದನು.
5. ತಾನು ಲೋಕಕ್ಕೆ ಬೆಳಕಾಗಿದ್ದೇನೆ ಎಂದು ಯೇಸು ಹೇಳಿದನು; ಕುರುಡರು

ನೋಡುವಂತೆ ಮಾಡಿದನು. ತಾನೇ ಜೀವದ ರೊಟ್ಟಿ ಎಂದು ಕರೆದು ಕೊಂಡನು ಹಾಗೂ ಐದು ಸಾವಿರ ಜನರಿಗೆ ಊಟಕೊಟ್ಟನು. ತಾನು ಪುನರುತ್ಥಾನವೂ, ಜೀವವೂ ಆಗಿದ್ದೇನೆಂದು ಹೇಳಿದನು ಮತ್ತು ಲಾಜರನನ್ನು ಸತ್ತವರೊಳಗಿಂದ ಎಬ್ಬಿಸಿದನು.

6. ಯೇಸುವಿನ ಒಳ್ಳೆಯತನವು ಪಿಲಾತನ ಹೆಂಡತಿಯಿಂದ, ಹೆರೋದನಿಂದ, ಶಿಲುಬೆಯ ಮೇಲಿನ ಕಳ್ಳನಿಂದ ಹಾಗೂ ಯೂದನಿಂದಲೂ ಸಹ ಗುರಿತಿಸಲ್ಪಟ್ಟಿತು.
7. ಕರ್ತನ ದಿನವು, ಕರ್ತನ ಭೋಜನವು, ಬಾಪ್ತಿಸ್ಮವು, ಹಾಗೂ ನಮ್ಮ ಕ್ಯಾಲಂಡರಿನ ದಿನಾಂಕಗಳು ಇಂದು ಲೋಕದ ಮೇಲೆ ಇರುವ ಯೇಸುವಿನ ಪ್ರಭಾವದ ಪುರಾವೆಗಳಾಗಿವೆ.

## ಪರಿಶುದ್ಧಾತ್ಮನು ಯಾರು?

*(ಪ್ರಶ್ನೆಗಳು ಅಧ್ಯಾಯ 5ರಲ್ಲಿವೆ)*

1. ಪ್ರಶ್ನೆಯು *"ಯಾರು?"* ಎಂದಿರಬೇಕು *"ಯಾವುದು?"* ಎಂದಿರಬಾರದು. ಯಾಕಂದರೆ ಪರಿಶುದ್ಧಾತ್ಮನು ವ್ಯಕ್ತಿತ್ವದೊಂದಿಗಿರುವ ಜೀವಿಯೂ, ದೈವಿಕ ವ್ಯಕ್ತಿಯೂ ಆಗಿರುತ್ತಾನೆ.
2. ಪರಿಶುದ್ಧಾತ್ಮನು ತೀರ್ಪನ್ನೂ, ಮನಸ್ಸನ್ನೂ, ಚಿತ್ತವನ್ನೂ, ಜ್ಞಾನವನ್ನೂ, ಭಾವನೆಗಳನ್ನು ಪ್ರದರ್ಶಿಸುವ ಸಂಗತಿಯು ಆತನು ಕೇವಲ ಒಂದು ಶಕ್ತಿಯಲ್ಲ ಆದರೆ ಜೀವಿಸುವ ವ್ಯಕ್ತಿಯೆಂಬುದನ್ನು ತೋರಿಸುತ್ತದೆ.
3. "ದುಃಖಿಸಲ್ಪಡುವುದು," "ಅವಮಾನಿಸುವುದು" ಇಲ್ಲವೇ "ನಿಂದಿಸುವುದು" ಎಂಬ ಪದಗಳು ಕಾವ್ಯದ ಇಲ್ಲವೇ ಅಲಂಕಾರಿಕ ಹಿನ್ನೆಲೆಗಳಲ್ಲಿ ಬಿಟ್ಟು ಸಾಮಾನ್ಯವಾಗಿ ಅಧಿಕಾರದ ಇಲ್ಲವೇ ಒತ್ತಡದ ಕೆಟ್ಟ ನಡಿಸುವಿಕೆಯಾಗಿ ಉಪಯೋಗಿಸಲ್ಪಡುವದಿಲ್ಲ. ಈ ವಚನಗಳ ಹಿನ್ನೆಲೆಯು ಕಾವ್ಯವಾಗಿರುವುದು ಇಲ್ಲವೇ ಅಲಂಕಾರಿಕವಾಗಿರುವುದು ಎಂಬುದನ್ನು ಸೂಚಿಸುವುದಿಲ್ಲ. ಒಬ್ಬಾತನು "ಪರಿಶುದ್ಧಾತ್ಮನನ್ನು ದುಃಖಪಡಿಸಿದ್ದರೆ" ಇಲ್ಲವೇ "ಅಪಮಾನಗೊಳಿಸಿದ್ದರೆ" ಆತನು ವ್ಯಕ್ತಿಯಾಗಿರತಕ್ಕದ್ದು.
4. ಪರಿಶುದ್ಧಾತ್ಮನು ತಂದೆಯೊಂದಿಗೂ ಕುಮಾರನೊಂದಿಗೂ ನಿತ್ಯನಾಗಿರುವ, ಸರ್ವ ಜ್ಞಾನದ, ಸರ್ವ ಶಕ್ತಿಯ, ಸರ್ವವ್ಯಾಪಕತ್ವದ ಗುಣಲಕ್ಷಣಗಳನ್ನು ಹಂಚಿಕೊಳ್ಳುತ್ತಾನೆ ತಂದೆಯೆಂತೆಯೂ, ಕುಮಾರನಂತೆಯೂ, ಪರಿಶುದ್ಧಾತ್ಮನಿಗೆ ಸೃಷ್ಟಿಸುವ ಶಕ್ತಿಯಿದೆ.

## ದೇವರು ಮನುಷ್ಯನಾದನು

*(ಪ್ರಶ್ನೆಗಳು ಅಧ್ಯಾಯ 6ರಲ್ಲಿವೆ)*

1. ಹೊಸ ಒಡಂಬಡಿಕೆಯ ಮೊದಲಿನ ನಾಲ್ಕು ಪುಸ್ತಕಗಳು - ಸುವಾರ್ತೆಗಳು - ದೇವರು ಹೇಗೆ ಮನುಷ್ಯನಾದನು ಎಂಬುದನ್ನು ಪ್ರಕಟಿಸುತ್ತವೆ.
2. ಯೇಸುವಿಗೆ ಜನನವು ಪ್ರಾರಂಭವಾಗಿರಲಿಲ್ಲ. ಲೋಕವು ಅಸ್ತಿತ್ವದಲ್ಲಿ ಇರುವ ಮೊದಲೇ ಆತನು ತಂದೆಯ ಮಹಿಮೆಯಲ್ಲಿ ಭಾಗಿಯಾಗಿದ್ದನು.
3. ಯೋಹಾನ 1:1-5 ಈ ನಾಲ್ಕು ಮಹಾ ಸತ್ಯಗಳನ್ನು ಬೋಧಿಸುತ್ತದೆ: (1) ಯೇಸುವು ಸೃಷ್ಟಿಯಾಗಿರುವದಿಲ್ಲ, (2) ಯೇಸುವಿನ ಮುಖಾಂತರ ದೇವರು ಜಗತ್ತನ್ನು ಸೃಷ್ಟಿಸಿದನು. (3) ಯೇಸುವು ಜೀವಿತರಿಗೆ ಜೀವವನ್ನು ಕೊಡುವನು (4) ಯೇಸುವು ಜೀವದ ಹಾಗೂ ಮರಣದ ಕರ್ತನಾಗಿದ್ದಾನೆ.
4. ಯೇಸುವು (1) ಪರಲೋಕವನ್ನು ಬಿಟ್ಟು, (2) ಮನುಷ್ಯನಾಗಿ, (3) ಜನರಿಗೆ ಸೇವೆ ಮಾಡುವವನಾಗಿ, (4) ಮರಣಕ್ಕೆ ಒಪ್ಪಿಸಿಕೊಟ್ಟವನಾಗಿ ಇಳಿದು ಬಂದನು.
5. ದೇವರು ಮನುಷ್ಯನಾದನು ಎಂಬ ಸಂಗತಿಯು ಕ್ರೈಸ್ತತ್ವದ ಕೇಂದ್ರ ಸತ್ಯ ವಾಗಿದೆ.
6. ಯೇಸುವಿನ ಜನನವು ಅದ್ವಿತೀಯವಾದುದು ಯಾಕಂದರೆ ಆತನು ಕನ್ಯೆಯಿಂದ ಜನಿಸಿ ಬಂದನು.
7. ಯೇಸುವು (1) ದೇವರಾಗಿದ್ದನು ಮತ್ತು ದೇವರಾಗಿದ್ದಾನೆ, (2) ಮನುಷ್ಯನಾದನು, (3) ದೈವವು - ಮಾನವನಂತೆ ಭೂಲೋಕದ ಮೇಲೆ ವಾಸಿಸಿದನು ಎಂಬುದನ್ನು ನಾವು ಮರೆಯಬಾರದು.
8. ಯೇಸುವು ದೇವರಾಗಿದ್ದನು; ಮನುಷ್ಯನು ಇರುವೆ ಯಾಗುವದಕ್ಕಿಂತಲೂ ಆತನಿಗೆ ಮಾನವನಾಗುವುದು ಅತೀ ದೊಡ್ಡ ಕೆಳಗಿನ ಹೆಜ್ಜೆಯಾಗಿತ್ತು.

## ನಾವು ಯೇಸುವನ್ನು ಹೇಗೆ ದೃಷ್ಟಿಸಬೇಕು?

*(ಪ್ರಶ್ನೆಗಳು ಅಧ್ಯಾಯ 7ರಲ್ಲಿವೆ)*

1. "ರಕ್ಷಕ" ಎಂಬ ಪದವು ಇತರರನ್ನು ದೊಡ್ಡ ಗಂಡಾಂತರದಿಂದ ಕಾಪಡುವವನಿಗೆ ಸಂಬಂಧಿಸಿದೆ.
2. ನಮ್ಮ ಪಾಪಗಳಿಂದ ನಮ್ಮನ್ನು ಆತನು ರಕ್ಷಿಸುವದರಲ್ಲಿ ಯೇಸುವು ಅದ್ವಿತೀಯನಾಗಿದ್ದಾನೆ.
3. "ಕ್ರಿಸ್ತ" ಅಂದರೆ "ಅಭಿಷಕ್ತ ಇಲ್ಲವೇ ದೇವರಿಂದ ಆಯ್ಕೆಯಾದಾತನು" ಎಂದು ಅರ್ಥವಾಗುತ್ತದೆ.
4. ಯೇಸುವಿನ ಬಾಪ್ತಿಸ್ಮದಲ್ಲಿ ದೇವರು ಆತನನ್ನು ತನ್ನ ಮಗನೆಂದು ಪ್ರಕಟಿಸಿದ್ದರಿಂದ ಯೇಸುವು ದೇವರ ಕುಮಾರನಾಗಿದ್ದನೆಂದು ನಾವು ತಿಳಿದುಕೊಂಡಿದ್ದೇವೆ.

ನಮಗೆ ಮೂರು ಸಾಕ್ಷಿಗಳು ಕೊಡಲ್ಪಟ್ಟಿವೆಯೆಂದು ಅಪೊಸ್ತಲ ಯೋಹಾನನು ಹೇಳಿದ್ದಾನೆ: ಆತ್ಮ, ನೀರು, ಹಾಗೂ ರಕ್ತ.

5. ಪರಿಶುದ್ಧಾತ್ಮ, ನೀರು ಹಾಗೂ ರಕ್ತದ ಬಗ್ಗೆ ಅಪೊಸ್ತಲನು ಮಾತಾಡುವಾಗ ಯೇಸುವಿನ ಜೀವನದಲ್ಲಿಯ ಘಟನೆಗಳನ್ನು ಸಂಬಂಧಿಸಿ ಹೇಳಿದನು. ನೀರಿನಲ್ಲಿ ಆತನು ಬಾಪ್ತಿಸ್ಮ ಹೊಂದಿದಾಗ ಆತ್ಮವು ಆತನ ಮೇಲೆ ಬಂದಿತು ಮತ್ತು ರಕ್ತವು ಆತನ ಮರಣದ ಸುತ್ತಲಿನ ಘಟನೆಗಳಿಗೆ ಸಂಬಂಧಿಸಿದೆ.
6. ಪೇತ್ರನು ತನ್ನ ಕೇಳುಗರಿಗೆ ಯೇಸುವನ್ನು ಕರ್ತನೆಂದೂ ಕ್ರಿಸ್ತನೆಂದೂ ಸ್ವೀಕರಿಸಬೇಕೆಂದೂ ಆಹ್ವಾನಿಸಿದನು (ಅಪೊಸ್ತಲರ ಕೃತ್ಯಗಳು 2:36).
7. ಯೇಸುವು ದೇವರಾಗಿದ್ದರೆ (ಆತನು ಆಗಿದ್ದಾನೆ) ಆಗ ನಾವು ಆತನ ಬೋಧನೆಗಳಿಗೆ ಒಪ್ಪಿಕೊಳ್ಳತಕ್ಕದ್ದು ನಮ್ಮ ಜೀವನದಲ್ಲಿ ಪ್ರಥಮಸ್ಥಾನ ಕೊಡತಕ್ಕದ್ದು.

## ಯೇಸುವು ಭೂಲೋಕಕ್ಕೆ ಯಾಕೆ ಬಂದನು?

*(ಪ್ರಶ್ನೆಗಳು ಅಧ್ಯಾಯ 8ರಲ್ಲಿವೆ)*

1. ಭೂಲೋಕಕ್ಕೆ ಕರ್ತನ ಆಗಮನವು ಮಾನವ ಚರಿತ್ರೆಯಲ್ಲಿ ಒಂದು ಅತಿದೊಡ್ಡ ಘಟನೆಯಾಗಿತ್ತು. ಆತನು ಶಿಲುಬೆಯ ಮೇಲೆ ಸಾಯುವದಕ್ಕೆ ಬರುವದರ ಮೇಲೆ ನಮ್ಮ ರಕ್ಷಣೆಯು ಅವಲಂಭಿಸಿತ್ತು.
2. ಯೇಸುವು ಸಂಪೂರ್ಣವಾಗಿ ಮನುಷ್ಯನೂ, ಸಂಪೂರ್ಣವಾಗಿ ದೇವರೂ ಆಗಿದ್ದನು.
3. ಯೇಸುವು ಸಂಪೂರ್ಣವಾಗಿ ದೈವಿಕನೂ ಸಂಪೂರ್ಣವಾಗಿ ಮಾನವನೂ ಆಗಿದ್ದನು.
4. ನಮ್ಮ ಕರ್ತನು ತನ್ನ ಸೇವೆ, ಮರಣ ಹಾಗೂ ಪುನರುತ್ಥಾನದಿಂದ ಒಂದು ಜನಾಂಗವನ್ನು ಕರೆಯಲು, ಅದನ್ನು ತನ್ನ ಸಭೆಯೆಂದು ಕರೆಯಲು ಬಂದನು.
5. ಯೇಸುವು ಹನ್ನೆರಡು ಜನ ಅಪೊಸ್ತಲರನ್ನು ಆಯ್ದುಕೊಂಡನು ಮತ್ತು ತಾನೇ ಸ್ವತಃ ತರಬೇತಿ ಕೊಟ್ಟನು. ಆದರೆ ತಾನು ಹೊರಟು ಹೋದನಂತರ ಅವರು ಕಾರ್ಯ ಮಾಡುವದಕ್ಕಾಗಿ ಅವರನ್ನು ತರಬೇತಿಗೊಳಿಸಿದನೆಂಬುದು ಸ್ಪಷ್ಟವಾಗಿತ್ತು (ಯೋಹಾನ 14:19).
6. ನಾವು ಆತನ ಆತ್ಮಿಕ ದೇಹವಾಗಿರುವದರಿಂದ ಕ್ರಿಸ್ತನ ಜೀವಿತಕ್ಕೆ ಹೇಗೆ ಉತ್ತರ ಕೊಡಬೇಕೆಂಬುದನ್ನು ಪತ್ರಿಕೆಗಳು ತೋರಿಸುತ್ತವೆ.
7. ಈಗ ನಾವು ಆತನ ಸಭೆಯಾಗಿರದೇ ಯೇಸುವಿನ ಜೀವಿತಕ್ಕೆ ಯೋಗ್ಯವಾಗಿ ಉತ್ತರ ಕೊಡಲಾರೆವು.
8. ಆತನ ಸಭೆಯಂತೆ ಜೀವಿಸದೇ ಈ ಲೋಕದಲ್ಲಿ ನಮಗಾಗಿರುವ ಯೇಸುವಿನ ನಿಯೋಗವನ್ನು ಪೂರೈಸಲಾರೆವು.

## ಶಿಲುಬೆ ಮತ್ತು ಸಭೆ

*(ಪ್ರಶ್ನೆಗಳು ಅಧ್ಯಾಯ 9ರಲ್ಲಿವೆ)*

1. ಬೈಬಲಿನ ಕಥೆಯ ಕೇಂದ್ರವು ಮಾನವರಿಗಾಗಿ ದೇವರ ಕುಮಾರನಿಂದ ಮಾಡಲ್ಪಟ್ಟ ಆತನ ಯಜ್ಞವಾಗಿದೆ.
2. ಕ್ರೈಸ್ತತ್ವದ ಕೇಂದ್ರದಲ್ಲಿ ಮಾತ್ರವೇ ಪಾಪಕ್ಕಾಗಿ ದೈವಿಕ ಯಜ್ಞ ಹಾಗೂ ಸತ್ತವರೊಳಗಿಂದ ಆ ಯಜ್ಞದ ಪುನರುತ್ಥಾನ ಇರುವುದು.
3. ಸಭೆಯಿಲ್ಲದೆ ಕ್ರೈಸ್ತತ್ವವು ಅಸ್ತಿತ್ವದಲ್ಲಿರಲಾರದು. ಯಾಕಂದರೆ ದೇಹವಿಲ್ಲದ ಶಿರಸ್ಸು ಕೆಲಸ ಮಾಡಲಾರದು ಅಥವಾ ಶಿರಸ್ಸು ಇಲ್ಲದೇ ದೇಹವು ಕಾರ್ಯಮಾಡಲಾರದು.
4. ಶಿಲುಬೆಯು (1) ಸಭೆಯನ್ನು ಸೃಷ್ಟಿಸುತ್ತದೆ, (2) ಸಭೆಯನ್ನು ಶುದ್ಧೀಕರಿಸುತ್ತದೆ, ಹಾಗೂ (3) ಸಭೆಗೆ ಒತ್ತಾಯ ಮಾಡುತ್ತದೆ ಇಲ್ಲವೇ ಚುರುಕುಗೊಳಿಸುತ್ತದೆ.
5. ಆತನಲ್ಲಿ ನಂಬಿಕೆಯಿಡುವುದು (ರೋಮಾಪುರ 10:10), ಪಾಪಕ್ಕಾಗಿ ಮಾನಸಾಂತರ (ಅಪೊಸ್ತಲರ ಕೃತ್ಯಗಳು 11:18), ಕ್ರಿಸ್ತನನ್ನು ದೇವರ ಕುಮಾರನೆಂದು ಅರಿಕೆ ಮಾಡುವುದು (ರೋಮಾಪುರ 10:10) ಹಾಗೂ ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದುವುದು (ಗಲಾತ್ಯ 3:27) ಇದರ ಮುಖಾಂತರ ಕ್ರಿಸ್ತನ ದೇಹದೊಳಗೆ ಪ್ರವೇಶಿಸುತ್ತಾರೆ.
6. ಕ್ಷಮಾಪಣೆ ಹಾಗೂ ಜೀವ ಹೊಂದಿಕೊಳ್ಳಲು ಯೇಸು ನಮ್ಮನ್ನು ಆಹ್ವಾನಿಸುತ್ತಾನೆ.
7. ಯೇಸುವಿನ ದೇಹವು ಸಭೆಯಾಗಿದೆ.

## "ಸಭೆಯು" ಏನು ಆಗಿರುತ್ತದೆ?

*(ಪ್ರಶ್ನೆಗಳು ಅಧ್ಯಾಯ 10ರಲ್ಲಿವೆ)*

1. ಪರಿಶುದ್ಧಾತ್ಮನಿಂದ ಉಪಯೋಗಿಸಲ್ಪಡುವ ಪದಗಳನ್ನು ಅರ್ಥ ಮಾಡಿಕೊಳ್ಳುವುದು ನಿರ್ಣಾಯಕವಾದದ್ದಾಗಿದೆ. ಬೈಬಲು ಜಗತ್ತಿನ ಅಧ್ಯಯನ ಮಾಡಲು ಪದಗಳ ಅರ್ಥಗಳನ್ನೂ ಉದಾಹರಣೆಗಳನ್ನೂ ಯೇಸುವಿನಿಂದಲೂ ಅಪೊಸ್ತಲರಿಂದಲೂ ಉಪಯೋಗಿಸಲ್ಪಟ್ಟ ವಿಚಾರ ರೂಪಗಳನ್ನು ನೋಡಲು ನಾವು ಸಿದ್ಧರಾಗಿರಬೇಕು (ಅಧ್ಯಾಯ 10ನ್ನು ಹಾಗೂ ಪುರಾವಣಿ 3ನ್ನು ನೋಡಿರಿ).
2. "ಸಭೆ" ಎಂಬ ಪದವು ಕ್ರಿಸ್ತನ ಸುವಾರ್ತೆಗೆ ವಿಧೇಯರಾದವರ ಮತ್ತು ಕ್ರಿಸ್ತನ ರಕ್ತದಿಂದ ವಿಮೋಚಿತರಾದವರ ಸಭೆಗೆ ಸಂಬಂಧಿಸಿರುತ್ತದೆ. ಸಭೆಯು ಒಂದು ಸ್ಥಳದಲ್ಲಿಯ ಕ್ರೈಸ್ತನ ಸ್ಥಳಿಕ ಕೂಟದಂತೆ "ಸಭೆ" ಆಗಿರುತ್ತದೆ. ಅದು ಜಗತ್ತಿನಲ್ಲೆಲ್ಲಾ ವಿಮೋಚಿಸಲ್ಪಟ್ಟ ಎಲ್ಲರಿಗೆ ಸಂಬಂಧಿಸಿದೆ.
3. ಸಭೆಯು ದೇವರ ಆಲಯವಾಗಿದೆ ಎಂಬ ಸಂಗತಿಯ ಅರ್ಥವು ದೇವರು ತನ್ನ

ಜನಾಂಗದ ಮಧ್ಯದಲ್ಲಿ ವಾಸಿಸುವನು ಎಂದಾಗುತ್ತದೆ. ಈ ಕಾರಣದಿಂದ ದೇವರು ವಾಸಿಸುತ್ತಿರುವ ಜನಾಂಗದಂತೆ ಜೀವಿಸಬೇಕು, ಕಾರ್ಯ ಮಾಡಬೇಕು ಹಾಗೂ ಆರಾಧಿಸಬೇಕು.

4. ಕ್ರೈಸ್ತರು "ಜೀವಿಸುವ" ಕಟ್ಟಡ, ಸಭೆ ಆಗಿದ್ದಾರೆ. ಪ್ರತಿಯೊಬ್ಬ ಕ್ರೈಸ್ತನು ಬೆಳವಣಿಗೆಯ ಸತತ ಸ್ಥಿತಿಯಲ್ಲಿರಬೇಕು.
5. ಗಂಡನು ಹೆಂಡತಿಗೆ ತಲೆಯಾಗಿರುವಂತೆ, ಕ್ರಿಸ್ತನು ಸಭೆಯ ಶಿರಸ್ಸಾಗಿದ್ದಾನೆ. ಗಂಡನು ತನ್ನ ಸ್ಥಿತಿಯಲ್ಲಿರಬೇಕು.
6. ಒಬ್ಬನು ವಿಶ್ವಾಸ, ಮಾನಸಾಂತರ, ಅರಿಕೆ ಹಾಗೂ ಬಾಪ್ತಿಸ್ಮದ ಮುಖಾಂತರ ಕ್ರಿಸ್ತನ ಸಭೆಯನ್ನು ಪ್ರವೇಶಿಸುತ್ತಾನೆ. ರಕ್ಷಿಸಲ್ಪಟ್ಟ ಪ್ರತಿಯೊಬ್ಬ ವ್ಯಕ್ತಿಯನ್ನು ದೇವರು ತನ್ನ ಸಭೆಗೆ ಕೂಡಿಸುತ್ತಾನೇ, ಆದರೆ ಮನುಷ್ಯನಲ್ಲ.
7. ಸಭೆಯು ಕ್ರಿಸ್ತನ ಹೆಸರನ್ನು ಧರಿಸಿರುವುದು, ಆತನನ್ನು ಆರಾಧಿಸಲು ಒಂದಾಗಿ ಕೂಡಿಬರುವುದು, ಲೋಕದಲ್ಲಿ ಆತನ ಕೆಲಸ ಮಾಡುವುದು. ಕ್ರಿಸ್ತನ ಪರಿಶುದ್ಧಾತ್ಮನು ಕ್ರೈಸ್ತರಲ್ಲಿ ಜೀವಿಸುವನು.

## "ದಿ ಗ್ರೇಟೆಸ್ಟ್ ಸ್ಟೋರಿ ಎವರ ಟೋಲ್ಡ್"ನ ಅನಂತರ

*(ಪ್ರಶ್ನೆಗಳು ಅಧ್ಯಾಯ 11ರಲ್ಲಿವೆ)*

1. ಸಭೆಯು ಮಹಾ ನಿಯೋಗದ ನೆರವೇರುವಿಕೆಯಾಗಿರುವುದು (ಮತ್ತಾಯ 28:20) ಹಾಗೂ ಭೂಲೋಕದ ಮೇಲೆ ಕ್ರಿಸ್ತನ ದೇಹವಾಗಿರುವುದು.
2. ಅಪೊಸ್ತಲರ ಕೃತ್ಯಗಳು 2:1ರಲ್ಲಿ "ಅವರು" ಎಂಬ ಸರ್ವನಾಮವು ಅಪೊಸ್ತಲರ ಕೃತ್ಯಗಳು 1:26ರಲ್ಲಿಯ "ಹನ್ನೊಂದು ಜನ ಅಪೊಸ್ತಲರು" ಎಂಬುದಕ್ಕೆ ಸಂಬಂಧಿಸಿದೆ. ಪಂಚಾಶತ್ತಮ ದಿನದಂದು ಅಪೊಸ್ತಲರನ್ನು ಬಿಟ್ಟು ಬೇರೆ ಯಾರಾದರೂ ಪರಿಶುದ್ಧಾತ್ಮ ಬಾಪ್ತಿಸ್ಮವನ್ನು ಸ್ವೀಕರಿಸಿದರು ಎಂಬುದನ್ನು ಸೂಚಿಸುವುದಿಲ್ಲ.
3. ದೇವರ ಸಂದೇಶವನ್ನು ಪ್ರಕಟಿಸುವದಕ್ಕಾಗಿ, ಸಂದೇಶವು ದೇವರಿಂದ ಬಂದದ್ದೆಂದು ದೃಢಪಡಿಸುವದಕ್ಕಾಗಿ ಹಾಗೂ ಇತರ ಕ್ರೈಸ್ತರಿಗೆ ಅದ್ಭುತಕರವಾದ ವರಗಳನ್ನು ಕೊಡುವದಕ್ಕಾಗಿ ಅಪೊಸ್ತಲರು ಪರಿಶುದ್ಧಾತ್ಮನಿಂದ ಬಾಪ್ತಿಸ್ಮ ಮಾಡಿಸಲ್ಪಟ್ಟರು.
4. ಪರಿಶುದ್ಧಾತ್ಮನಲ್ಲಿ ಅಪೊಸ್ತಲರ ಬಾಪ್ತಿಸ್ಮವು ಹೊಸ ಒಡಂಬಡಿಕೆಯು ದೈವ ಪ್ರೇರಿತ ಜನರಿಂದ ಕೊಡಲ್ಪಟ್ಟಿತು ಎಂಬುದನ್ನು ದೃಢಪಡಿಸುತ್ತದೆ.
5. ಕ್ರಿಸ್ತನ ದೈವತ್ವದ ಪುರಾವೆಯಾಗಿ ಪೇತ್ರನು ಆತನ ಅದ್ಭುತ ಕಾರ್ಯಗಳ, ಪುನರುತ್ಥಾನದ, ಪ್ರವಾದನೆಯ ನೆರವೇರುವಿಕೆಯ, ಸಾಕ್ಷಿಗಳ ಪುರಾವೆಯ, ಹಾಗೂ ಪರಿಶುದ್ಧಾತ್ಮನ ಇಳಿದು ಬರುವಿಕೆಯ ಬಗ್ಗೆ ಮಾತನಾಡಿದನು.
6. ವಿಮೋಚನೆಯ ದೇವರ ಯೋಜನೆಗೆ ಕ್ರಿಸ್ತನ ಪುನರುತ್ಥಾನವು ಅತೀ ಮಹತ್ವದ್ದಾಗಿದೆ. ಯೇಸುವು ಸತ್ತವರೊಳಗಿಂದ ಎದ್ದು ಬಾರದಿದ್ದರೆ, ಆತನು

ದೇವರ ದೈವಿಕ ಕುಮಾರನು ಎಂದು ಯೋಚಿಸಲ್ಪಡುತ್ತಿರಲಿಲ್ಲ.

7. ಪಾಪದಲ್ಲಿ ಸಿಕ್ಕಿಕೊಳ್ಳುವದಕ್ಕಿಂತ ದೊಡ್ಡದಾದ ದುಃಖಾಂತ್ಯದ ಬೇರೆ ವಿಷಯವು ಇಲ್ಲ.
8. ರಕ್ಷಣೆಯ ಶರತ್ತುಗಳನ್ನು ಕುರಿತು ಮಾರ್ಕ 16:15, 16 ವಿಶ್ವಾಸವನ್ನು ಒತ್ತಿ ಹೇಳುತ್ತದೆ; ಲೂಕ 24:46, 47 ಮಾನಸಾಂತರವನ್ನೂ ಪಾಪಗಳ ಕ್ಷಮಾಪಣೆಯನ್ನು ಒತ್ತಿ ಹೇಳುತ್ತದೆ; ಮತ್ತಾಯ 28:18-20 ಬಾಪ್ತಿಸ್ಮವನ್ನು ಒತ್ತಿ ಹೇಳುತ್ತದೆ.
9. ಅಪೊಸ್ತಲರ ಕೃತ್ಯಗಳು 22:16ನೇ ವಚನವು ಅಪೊಸ್ತಲರ ಕೃತ್ಯಗಳು 2:38ರೊಂದಿಗೆ ಸಂಬಂಧಿಸಿ ಬಾಪ್ತಿಸ್ಮವು ಪಾಪಗಳ ಪರಿಹಾರಕ್ಕಾಗಿ ಸ್ವೀಕರಿಸಲ್ಪಡುವುದು ಎಂಬುದನ್ನು ಸಿದ್ಧಪಡಿಸಿ ತೋರಿಸುತ್ತದೆ.

## ಹೊಸ ಒಡಂಬಡಿಕೆಯ ಸಭೆ

*(ಪ್ರಶ್ನೆಗಳು ಅಧ್ಯಾಯ 12ರಲ್ಲಿವೆ)*

1. "ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿ ನಿರತರಾಗಿದ್ದರು" ಅಂದರೆ ನಂಬಿಕಸ್ತಿಕೆಯಿಂದ ಪ್ರೇರಿತರಾದ ಅಪೊಸ್ತಲರು ಬೋಧಿಸಿದ್ದನ್ನು ಅನುಸರಿಸುತ್ತಿದ್ದರು. ಕ್ರೈಸ್ತರಿಗೆ ಸಹ ದೇವರ ವಾಕ್ಯಕ್ಕೆ ಅದೇ ರೀತಿಯ ದೃಢವಾದ ಸಮರ್ಪಣೆ ಇರಬೇಕಾಗಿತ್ತು.
2. ಯೆರೂಸಲೇಮಿನಲ್ಲಿಯ ಸಭೆಯು ಮನಸ್ಸಿನ, ಹೃದಯದ ಹಾಗೂ ತತ್ವದ (ಬೋಧನೆಯ) ಏಕತೆಯನ್ನು ಹಂಚಿಕೊಂಡಿತು.
3. ಇಂದಿನ ಸಭೆಯು ತನ್ನ ದಯಾಕಾರ್ಯಕ್ಕೂ ದೇವರ ವಾಕ್ಯಕ್ಕೆ ವಿಧೇಯತೆಗೂ ತಿಳಿಯಲ್ಪಡತಕ್ಕದ್ದು. ಸುವಾರ್ತೆಗೆ ವಿಧೇಯನಾದ ಪ್ರತಿಯೊಬ್ಬ ವ್ಯಕ್ತಿಯು ಕ್ರಿಸ್ತನೊಂದಿಗೂ ಸಭೆಯ ಇತರ ಎಲ್ಲಾ ಸದಸ್ಯರೊಂದಿಗೂ ಒಂದಾಗಿ ಮಾಡಲ್ಪಟ್ಟಿದ್ದಾನೆ. ಕ್ರೈಸ್ತರು ಒಂದೇ ಹೃದಯ ಮತ್ತು ಜೀವದೊಂದಿಗೆ ಒಂದು ಕುಟುಂಬವಾಗಿದ್ದಾರೆ.
4. ಹೊಸ ಒಡಂಬಡಿಕೆಯ ಸಭೆಯು ಯಾವುದನ್ನು ತೀರ್ಮಾನಿಸುವುದೋ ಅದು ದೇವರಿಗಾಗಿರುವ ನಮ್ಮ ಅನುದಿನದ ಜೀವನದ ಮೇಲೆ, ನಮ್ಮ ಆತ್ಮಿಕ ಗುರುತಿನ ಮೇಲೆ, ನಮ್ಮ ಆರಾಧನೆಯ ಮೇಲೆ, ಹಾಗೂ ನಮ್ಮ ಆತ್ಮಿಕ ಸೇವೆಯ ಮೇಲೆ ಪ್ರಭಾವ ಬೀರುವುದು.
5. ಹೊಸ ಒಡಂಬಡಿಕೆಯ ಸಭೆಯು ಪಂಚಾಶತ್ತಮ ಹಬ್ಬದ ದಿನದಂದು ಪ್ರಾರಂಭಿಸಲ್ಪಟ್ಟಿತು ಎಂಬುದನ್ನು ಅಪೊಸ್ತಲರ ಕೃತ್ಯಗಳು 2:41-47; 5:11; 7:38 ಮತ್ತು 8:1, 3 ತೋರಿಸುತ್ತವೆ.
6. ದೇವರ ವಾಕ್ಯದಿಂದ ಬಲು ದೂರ ಹೋಗುವಂಥವುಗಳು ಕ್ರಿ. ಶ. ಎರಡನೆಯ ಶತಮಾನದಲ್ಲಿ ಪ್ರಾರಂಭವಾದವು. ಈ ರೀತಿಯ ಹೋಗುವಿಕೆಗಳು ಏಳನೆಯ ಶತಮಾನದಲ್ಲಿ ಕಥೋಲಿಕ ಸಭೆಯ ಉದಯ, ಪೋಪನನ್ನು ಸ್ವೀಕರಿಸಿದ್ದು ಹಾಗೂ ಜಟಿಲವಾದ ಪುರೋಹಿತ ಪ್ರಭುತ್ವ ಅಸ್ತಿತ್ವವನ್ನು ತಂದವು.

ಹದಿನಾರನೆಯ ಶತಮಾನದಲ್ಲಿ ಇತರ ಧರ್ಮ ಪಂಗಡಗಳು (denominations) ಹುಟ್ಟಿಕೊಳ್ಳಲಿಕ್ಕೆ ಪ್ರಾರಂಭಿಸಿದವು.

7. ವೈಯಕ್ತಿಕ ಕ್ರೈಸ್ತರು ಕ್ರಿಸ್ತನ ದೇಹವನ್ನು ರಚಿಸುತ್ತಾರೆ.
8. ಹೊಸ ಒಡಂಬಡಿಕೆಯಲ್ಲಿ ಕಂಡು ಬರುವ ಹೆಸರನ್ನು ಬಿಟ್ಟು ಬೇರೆಯಾವುದೇ ಹೆಸರು ಒಂದು ಗುಂಪನ್ನು ಹೊಸ ಒಡಂಬಡಿಕೆಯ ಸಭೆಯೆಂದು ಗುರುತಿಸಲಾರದು.
9. ಹೌದು. ದೇವರು ಆಜ್ಞೆಗಳಿಗೆ ಅನುಸಾರವಾಗಿ ಸ್ಥಾಪಿಸಿಲ್ಪಟ್ಟ ಹೊಸ ಒಡಂಬಡಿಕೆಯ ಸಭೆಯ ಪದ್ಧತಿಗಳನ್ನು ಕ್ರೈಸ್ತರು ಇಂದು ಅನುಸರಿಸತಕ್ಕದ್ದು.

## ದೇವರ ಜನರಿಗಾಗಿ ವಿಶೇಷ ವಾಕ್ಯಗಳು

*(ಪ್ರಶ್ನೆಗಳು ಅಧ್ಯಾಯ 13ರಲ್ಲಿವೆ)*

1. ದೇವರು ಇಸ್ರಾಯೇಲಿನ ಅರಸನಾಗಿದ್ದನು, ಆಡಳಿತೆಯ ಮುಖ್ಯಸ್ಥನೂ ಅದರ ಧರ್ಮದ ಶಿರಸ್ಸೂ ಆಗಿದ್ದನು. ಇಸ್ರಾಯೇಲು ಒಂದು "ದೇವಾಧಿಪತ್ಯವಾಗಿತ್ತು" (ದೇವರು ಜನಾಂಗವನ್ನು ಆಳಿದನು).
2. ಅರಸನಾದ ಸೌಲನು ಯೆಹೋವನ ಸೇವಕನಾಗಿರಬೇಕಾಗಿತ್ತು ಅವನ ಅಧಿಕಾರವು ಮೋಶೆಯ ಧರ್ಮಶಾಸ್ತ್ರದಿಂದ ಮಿತಿಗೊಳಿಸಲ್ಪಟ್ಟಿತ್ತು.
3. ದಾನಿಯೇಲನ ಪ್ರವಾದನೆಯ ಪ್ರಕಾರವಾಗಿ ಬರಲಿಕ್ಕಿದ್ದ ರಾಜ್ಯವು ವಿಶೇಷವಾದದ್ದಾಗಿತ್ತು. ಎಲ್ಲಾ ಇತರ ರಾಜ್ಯಗಳಿಗಿಂತ ಮಿಗಿಲಾದ ಲಕ್ಷಣವುಳ್ಳ ನಿತ್ಯ ರಾಜ್ಯವು ಅದಾಗಿತ್ತು.
4. ಪರಿಶುದ್ಧಾತ್ಮನ ಮಾರ್ಗದರ್ಶನದ ಮುಖಾಂತರ, "ರಾಜ್ಯ" ಎಂಬ ಪದವು ಕ್ರಮೇಣವಾಗಿ "ಸಭೆ" ಎಂಬ ಪದದಿಂದ ಬದಲಾಗಿ ಇಡಲ್ಪಟ್ಟಿತು. ಈ ಪದದ ಉಪಯೋಗವು ಜನರ ಹೃದಯಗಳ ಮೇಲಿನ ಕ್ರಿಸ್ತನ ರಾಜ್ಯಾಡಳಿತವು ಹೇಗೆ ಸಭೆಯನ್ನು ಸೃಷ್ಟಿಸುವುದು ಎಂಬುದನ್ನು ತೋರಿಸುತ್ತದೆ.
5. ಪೌಲನು ದೇವರ ರಾಜ್ಯದಲ್ಲಿದ್ದನು ಆದರೆ ಪರಲೋಕ ರಾಜ್ಯದಲ್ಲಿ ಪ್ರವೇಶಿಸುವದನ್ನು ಮುನ್ನೋಡಿದನು. ನಂಬಿಗಸ್ತ ಕ್ರೈಸ್ತರು ಈಗ ಕ್ರಿಸ್ತನ ಆತ್ಮಿಕ ಆಡಳಿತೆಯ ಅಧೀನತೆಯಲ್ಲಿರುವರು, ಆದರೆ ನಿತ್ಯತ್ವದಲ್ಲಿ ದೇವರೊಂದಿಗೆ, ಕ್ರಿಸ್ತನೊಂದಿಗೆ ಹಾಗೂ ಪರಿಶುದ್ಧಾತ್ಮ ನೊಂದಿಗೆ ಪೂರ್ಣವಾದ ಹಾಗೂ ನಿಕಟವಾದ ಸಂಬಂಧದಲ್ಲಿ ಪ್ರವೇಶಿಸುವರು.
6. "ಸಭೆ" ಎಂಬ ಪದವು ಹೊಸ ಒಡಂಬಡಿಕೆಯಲ್ಲಿ 114 ಸಲ ಉಪಯೋಗಿಸಲ್ಪಟ್ಟಿರುವುದು. ಹೊಸ ಒಡಂಬಡಿಕೆಯಲ್ಲಿಯ ಈ ಮಹತ್ವವಾದ ಪದವು ಉಪಯೋಗವನ್ನು ಅರ್ಥಮಾಡಿಕೊಳ್ಳದೆ ರಕ್ಷಣೆಯ ಕ್ರಿಸ್ತನ ಮಾರ್ಗವನ್ನು ನಾವು ಅರ್ಥಮಾಡಿಕೊಳ್ಳಲಾರವು (ಪುರಾವಣಿ 3 ನೋಡಿರಿ).
7. "ಸಭೆ" ಎಂಬ ಪದವು, ಅಪೊಸ್ತಲರ ಕೃತ್ಯಗಳು 19:25ರಲ್ಲಿಯಂತೆ ಸಾಮಾನ್ಯವಾಗಿ ಒಂದು ಕೂಟ ಎಂದರ್ಥ ಕೊಡುತ್ತದೆ.

8. ಹೊಸ ಒಡಂಬಡಿಕೆಯಲ್ಲಿ "ಸಭೆ" ಎಂಬ ಪದವು ಯಾವಾಗಲೂ ಒಂದು ಧಾರ್ಮಿಕ ಇಲ್ಲವೇ "ಹೊರಗೆ ಕರೆಯಲ್ಪಟ್ಟ" ಕೂಟ ಎಂದು ಅರ್ಥಕೊಡುವದಿಲ್ಲ.

## ಸಭೆಯ ದೈವಿಕ ಅಂಕಿತಗಳು

*(ಪ್ರಶ್ನೆಗಳು ಅಧ್ಯಾಯ 14ರಲ್ಲಿವೆ)*

1. ಯೇಸುವು ಅರಸನು (ಶಿರಸ್ಸು) ಹಾಗೂ ಸಭೆಯ ಸದಸ್ಯರು ಆತನ ಆತ್ಮಿಕ ರಾಜ್ಯದ ನಾಗರಿಕರು.
2. ಕ್ರಿಸ್ತನು ಸಭೆಯನ್ನು ಸ್ಥಾಪಿಸಿದನು, ಕೊಂಡು ಕೊಂಡನು, ಒಡೆಯನಾದನು, ಹಾಗೂ ಅದರ ಶಿರಸ್ಸಾಗಿ ಸೇವೆ ಮಾಡುವನು. ಸಭೆಯು "ದೇವರ ಸಭೆ" ಎಂದು ದೃಷ್ಟಿಸಲ್ಪಡಬಹುದು.
3. ದೇವರಿಂದ ಸಭೆಗೆ ವಿಶಿಷ್ಠವಾದ ಅಂಕಿತಗಳು ಕೊಡಲ್ಪಟ್ಟವು. ಅವು ದೈವಿಕ ಉದ್ದೇಶವನ್ನು ನೆರವೇರಿಸುವವು ಹಾಗೂ ನಾವು ಅವುಗಳನ್ನು ಉಪಯೋಗಿಸತಕ್ಕದ್ದು.
4. ಬೈಬಲ್ ಮಾಡುವಂತೆ ನಾವು ಸಭೆಗೆ ಸಂಬಂಧಿಸುವಾಗ, ನಾವೇನು ಆಗ ಬೇಕೆಂದು ದೇವರು ಬಯಸುವನೋ ಆ ಸರಿಯಾದ ಮಾರ್ಗದಲ್ಲಿ ನಮ್ಮನ್ನು ಇಟ್ಟು ಕೊಳ್ಳುತ್ತೇವೆ.
5. ಕ್ರೈಸ್ತರು ದೇವರ ಕುಟುಂಬ. ತಮ್ಮ ಮಾರ್ಪಡುವಿಕೆಯಲ್ಲಿ ದೇವರು ಜನರನ್ನು ತನ್ನ ಮಕ್ಕಳಾಗಿ ದತ್ತು ಸ್ವೀಕರಿಸುತ್ತಾನೆ, ಕುಟುಂಬದ ಹಕ್ಕುಗಳನ್ನು ಕೊಡುತ್ತಾನೆ ಹಾಗೂ ಕ್ರಿಸ್ತನೊಂದಿಗೆ ನಿತ್ಯಜೀವದ ಬಾಧ್ಯಸ್ಥರನ್ನಾಗಿ ಮಾಡುತ್ತಾನೆ.
6. "ಕ್ರೈಸ್ತನು" ಕ್ರಿಸ್ತನ ಅನುಯಾಯಿ ಆಗಿದ್ದು, ಯೇಸು ತನ್ನ ಹಿಂಬಾಲಕರಿಗೆ ಜೀವಿ ಸಲು ಹೇಳಿದಂತೆ - ಜೀವಿಸಲು ಪ್ರಯತ್ನಿಸುತ್ತಾನೆ.
7. "ನನಗಂತೂ ಬದುಕುವದೆಂದರೆ ಕ್ರಿಸ್ತನೇ, ಸಾಯುವುದು ಲಾಭವೇ" ಎಂದು ಪೌಲನು ಹೇಳಿದನು.
8. ಒಬ್ಬನು ಮಾರ್ಪಡುವಾಗ ದೇವರ ಮಗುವಾಗಿ ಸ್ವೀಕರಿಸಲ್ಪಡುತ್ತಾನೆ. ಅವನಿಗೆ/ಅವಳಿಗೆ ನಿತ್ಯವಾದ ಬಾಧ್ಯಸ್ಥಿಕೆಯಿರುತ್ತದೆ. ಹಾಗೆಯೇ ದೇವರ ಭೂಲೋಕದ ಕುಟುಂಬದ ಬಲವೂ ಸಹಾಯವೂ ಇರುತ್ತದೆ. ದೇವರು ತಂದೆಯಾಗಿದ್ದಾನೆ, ಯೇಸುವು ಹಿರಿಯ ಸಹೋದರನಾಗಿದ್ದಾನೆ ಹಾಗೂ ಎಲ್ಲಾ ಕ್ರೈಸ್ತರು ಸಹೋದರ, ಸಹೋದರಿಯರಾಗಿದ್ದಾರೆ.
9. "ಶಿಷ್ಯ" ಎಂಬ ಪದವು ಹೊಸ ಒಡಂಬಡಿಕೆಯಲ್ಲಿ 238 ಸಲ ಕಂಡುಬರುತ್ತದೆ.
10. ಶಿಷ್ಯನು ತನ್ನನ್ನು ತನಗಿಂತ ದೊಡ್ಡವನಿಗೆ ಒಪ್ಪಿಸುವವನೂ. ಆ ದೊಡ್ಡವನಿಂದ ಸತತವಾಗಿ ಕಲಿಯುವವನೂ ಆಗಿದ್ದಾನೆ. ಅವನು ಕೇಳುವವನೂ, ಕಲಿಯುವವನೂ ಹಾಗೂ ಅಧ್ಯಯನ ಮಾಡುವವನೂ ಆಗಿರುವನು.

11. “ಪರಿಶುದ್ಧರು” (saints) ದೇವರಿಗಾಗಿ ಮೀಸಲಾಗಿ ಇಡಲ್ಪಟ್ಟವರು. ಒಬ್ಬನು ಕ್ರೈಸ್ತನಾಗುವಾಗ, ಅವನು ದೇವರಿಗಾಗಿ ಪ್ರತ್ಯೇಕಿಸಲ್ಪಟ್ಟವನಾಗಿ “ಪರಿಶುದ್ಧನು” ಆಗಿರುವನು. ಅವನು ಪವಿತ್ರ ಕರೆಯಿಂದ ಕರೆಯಲ್ಪಟ್ಟಿರುವನು, ಪರಿಶುದ್ಧ ನಡತೆಯಲ್ಲಿ ಜೀವಿಸುವನು, ಹಾಗೂ ಅಂತಿಮ ದಿನದಲ್ಲಿ ದೇವರ ಮುಂದೆ “ಪರಿಶುದ್ಧನಾಗಿಯೂ, ನಿರ್ದೋಷಿಯಾಗಿಯೂ ನಿರಪರಾಧಿಯಾಗಿಯೂ” ಕಂಡುಕೊಳ್ಳುವದನ್ನು ಹುಡುಕುವನು (ಕೊಲೊಸ್ಸೆ 1:22 ನೋಡಿರಿ).

## ಕ್ರಿಸ್ತ, ಸಭೆಯ ಶಿರಸ್ಸು

*(ಪ್ರಶ್ನೆಗಳು ಅಧ್ಯಾಯ 15ರಲ್ಲಿವೆ)*

1. ಮುನ್ನಡೆಯಲಿಲ್ಲದಿರುವ ನಾಯಕತ್ವವು ನಿಜವಾದ ನಾಯಕತ್ವವಾಗಿರುವದಿಲ್ಲ.
2. ಯೇಸುವು ತನ್ನ ನಿಯಮದಿಂದ ಸಭೆಯನ್ನು ನಡಿಸುತ್ತಾನೆ (ಎಫೆಸ 1:21, 23; ಕೊಲೊಸ್ಸೆ 1:18, 19 ನೋಡಿರಿ).
3. ಸಮಯದ ಅಂತ್ಯದ ವರೆಗೆ ಕ್ರಿಸ್ತನು ಸಭೆಯ ಶಿರಸ್ಸಾಗಿ ಆಳಿಕೆ ಮಾಡುವನು.
4. ಯೇಸುವು ಪರಿಪೂರ್ಣ ಜೀವಿತ ಜೀವಿಸುವದರಿಂದಲೂ ತಂದೆಯಾದ ದೇವರಿಗೆ ತನ್ನ ವಿಧೇಯತೆಯಿಂದಲೂ ನಮ್ಮ ಪರಿಪೂರ್ಣ ರಕ್ಷಕನಾದನು.
5. ನಾವು ದೃಷ್ಟಿಸುವಂಥದ್ದರಂತೆಯೇ ನಾವಾಗುವೆವು. ಹೇಗೆ ಜೀವಿಸಬೇಕೆಂಬ ಮಾದರಿಯಾದ ಕ್ರಿಸ್ತನ ಜೀವಿತದ ಕಡೆಗೆ ಕ್ರೈಸ್ತರು ನೋಡುವರು. ಆತನು ತನ್ನ ಪರಿಪೂರ್ಣ ಜೀವಿತದಿಂದ ಅವರನ್ನು ಯಾವಾಗಲೂ ನಡಿಸುವನು.
6. ದೀನತೆಯ ಮತ್ತು ಸೇವೆಯ ಕ್ರಿಸ್ತನ ಉದಾಹರಣೆಯನ್ನು ನಾವು ಅನುಸರಿಸತಕ್ಕದ್ದು.
7. ಅಗತ್ಯವಿರುವ ಯಾವುದೇ ವಿಧದಲ್ಲಿ ಒಬ್ಬರಿಗೊಬ್ಬರು ಸೇವೆ ಮಾಡುವದರಿಂದ ಕ್ರೈಸ್ತರು “ಒಬ್ಬರ ಪಾದಗಳನ್ನು ಒಬ್ಬರು ತೊಳೆಯುವರು.”

## ಸಭೆಯನ್ನು ಪ್ರವೇಶಿಸುವುದು

*(ಪ್ರಶ್ನೆಗಳು ಅಧ್ಯಾಯ 16ರಲ್ಲಿವೆ)*

1. ಕರ್ತನ ಸಭೆಯ ಅಮೂಲ್ಯವಾದ ಬೆಲೆಯು ಅದರ ದೈವಿಕ ಮೂಲದಿಂದ, ಅದರ ಶ್ರೇಷ್ಠ ಬೆಲೆಯಿಂದ, ಹಾಗೂ ಅದರ ಮೇಲಿಟ್ಟಿರುವ ದೊಡ್ಡ ಮೌಲ್ಯದಿಂದ ತೋರಿಸಲ್ಪಟ್ಟಿರುವುದು.
2. ಹೌದು, ಮಹಾ ನಿಯೋಗದ ಶರತ್ತುಗಳು ಇಂದು ನಮ್ಮ ಮೇಲೆ ಬಂಧಿಸುತ್ತವೆ. ಇವು ಲೋಕಾಂತ್ಯದ ವರೆಗೆ ಪರಿಣಾಮಕಾರಿಯಾಗಿರುತ್ತವೆ (ಮತ್ತಾಯ 28:18-20).
3. ಶಿಲುಬೆಯ ಮೇಲಿನ ಕಳ್ಳನು ರಕ್ಷಿಸಲ್ಪಟ್ಟಂತೆ ನಾವು ರಕ್ಷಿಸಲ್ಪಡಲಾರವು ಯಾಕಂದರೆ ಕಳ್ಳನು ಹಳೇ ಒಡಂಬಡಿಕೆಯ ಅಡಿಯಲ್ಲಿ ಮರಣ ಹೊಂದಿದನು. ಈಗ ಕ್ರಿಸ್ತನು ನಮಗಾಗಿ ಮರಣ ಹೊಂದಿದ್ದರಿಂದ, ನಾವು ಆತನ ಮಹಾ

ನಿಯೋಗಕ್ಕೆ ವಿಧೇಯರಾಗತಕ್ಕದ್ದು.

4. ಇಂದು ಸಭೆಯ ಸದಸ್ಯನಾಗುವದಕ್ಕಾಗಿ, ಒಬ್ಬನು ನಂಬತಕ್ಕದ್ದು, ಮಾನಸಾಂತರ ಪಡತಕ್ಕದ್ದು, ಕ್ರಿಸ್ತನನ್ನು ಅರಿಕೆ ಮಾಡತಕ್ಕದ್ದು ಹಾಗೂ ಬಾಪ್ತಿಸ್ಮ ಹೊಂದತಕ್ಕದ್ದು (ಅಪೊಸ್ತಲರ ಕೃತ್ಯಗಳು 2:38, 47).
5. ರಕ್ಷಿಸಲ್ಪಟ್ಟವರನ್ನು ಕರ್ತನ ಸಭೆಗೆ ಜನರು ಕೂಡಿಸುವದಿಲ್ಲ: ದೇವರು ಮಾತ್ರವೇ ಅದನ್ನು ಮಾಡುತ್ತಾನೆ.
6. ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಒಬ್ಬನು ಕ್ರೈಸ್ತನಾಗಲು ಮಾಡಿದ್ದನ್ನು ಒಬ್ಬನು ಮಾಡುವಾಗ, ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ತನ್ನ ಚಿತ್ತಕ್ಕೆ ವಿಧೇಯರಾದವರಿಗೆ ತಾನು ಮಾಡಿದ್ದನ್ನು ದೇವರು ಅವನಿಗಾಗಿಯೂ ಮಾಡುವನು.
7. ಅಪೊಸ್ತಲರ ಕೃತ್ಯಗಳು 2ರಲ್ಲಿ ಜನರು ಮಾಡಿದ ರೀತಿಯಲ್ಲಿಯೇ ಸುವಾರ್ತೆಗೆ ವಿಧೇಯನಾಗುವದರಿಂದ ಒಬ್ಬನು ತಾನು ಕ್ರಿಸ್ತನ ಸಭೆಯಲ್ಲಿದ್ದೇನೆಂದು ನಿಶ್ಚಿತನಾಗಬಹುದು ದೇವರ ವಾಗ್ದಾನಗಳು ನಿಶ್ಚಿತವಾದವುಗಳಾಗಿರುವದರಿಂದ ಅವನು ನಿಶ್ಚಿತನಾಗಿರಬಹುದು.
8. ಹೌದು, ರಕ್ಷಣೆಗಾಗಿರುವ ಕರ್ತನ ಶರತ್ತುಗಳು ಕೆಡಿಸಲ್ಪಡುವಾಗ ದೊಡ್ಡ ಹಾನಿಯೂ ಮಾಡಲ್ಪಡುತ್ತದೆ. ಶರತ್ತುಗಳಿಗೆ ವಿಧೇಯರಾಗದೇ ಹಾಗೂ ಕರ್ತನ ಯೋಜನೆಯಲ್ಲಿ ಅವುಗಳ ಮಹತ್ವವನ್ನು ನೋಡದೇ ಯಾರೂ ಯೇಸುವಿನ ನಿಯೋಗವನ್ನು ಗಂಭೀರವಾಗಿ ತೆಗೆದು ಕೊಳ್ಳಲಾರರು.

## ಸಭೆಯ ಐಕ್ಯತೆ

*(ಪ್ರಶ್ನೆಗಳು ಅಧ್ಯಾಯ 17ರಲ್ಲಿವೆ)*

1. ಐಕ್ಯತೆಯು ಆಹ್ಲಾದಕರವಾದದ್ದು ಯಾಕಂದರೆ ಅದು ಕ್ರಿಸ್ತನಲ್ಲಿ ವಿಶ್ವಾಸವನ್ನು ಬೆಳೆಸುತ್ತದೆ. ಕ್ರಿಸ್ತನು ಅದಕ್ಕಾಗಿ ಪ್ರಾರ್ಥಿಸಿದ್ದರಿಂದ ಅದು ಒಳ್ಳೆಯದಾಗಿದೆ.
2. ಕ್ರಿಸ್ತನು ಶಿಲುಬೆಗೆ ಹಾಕಲ್ಪಡುವ ಮೊದಲು ವಿಶ್ವಾಸಿಗಳ ಐಕ್ಯತೆಗಾಗಿ ಪ್ರಾರ್ಥಿಸಿದನು.
3. ಯೇಸು ಕ್ರಿಸ್ತನ ಹೆಸರಿನಲ್ಲಿಯೇ ಪೌಲನು ಐಕ್ಯತೆಗಾಗಿ ಬೇಡಿಕೊಂಡನು.
4. ಒಂದೇ ಕುಟುಂಬದ ಸದಸ್ಯರಂತೆ ಕ್ರೈಸ್ತರು ಕ್ರಿಸ್ತನೊಂದಿಗೆ ಹಾಗೂ ಒಬ್ಬರೊಬ್ಬರೊಂದಿಗೆ ಒಂದಾಗಿದ್ದಾರೆ.
5. ಒಬ್ಬನು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದುವಾಗ, ಅವನಾಗಲೀ ಇಲ್ಲವೇ ಅವಳಾಗಲೀ ಇತರ ಕ್ರೈಸ್ತರೊಂದಿಗೆ ಒಂದಾಗುತ್ತಾರೆ.
6. ಸಭೆಗೆ ಬೋಧನೆಯಲ್ಲಿಯೂ, ವಿಶ್ವಾಸದಲ್ಲಿಯೂ ಏಕತೆಯಿರುತ್ತದೆ. ಕ್ರಿಸ್ತನ ದೇಹದೊಳಗೆ ಪ್ರವೇಶಿಸುವ ಪ್ರತಿಯೊಬ್ಬನಿಗೂ ಪರಿಶುದ್ಧಾತ್ಮನಿಂದ ಐಕ್ಯತೆಯು ಕೊಡಲ್ಪಡುತ್ತದೆ, ಆದರೆ ಐಕ್ಯತೆಯನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ಕ್ರೈಸ್ತನಿಗೆ ಪರಿಶುದ್ಧ ಬರಹಗಳ ಬೋಧನೆಗಳಿಗೆ ವಿಧೇಯರಾಗುವದಾಗಿದೆ.
7. ಕ್ರಿಸ್ತನ ಚಿತ್ತಕ್ಕೆ ಸಮರ್ಪಿಸುವುದು ಐಕ್ಯತೆಯನ್ನು ಹುಟ್ಟಿಸುತ್ತದೆ.

8. ಬೋಧನೆಯಲ್ಲಿ ಐಕ್ಯತೆಯು ಬೈಬಲಿಗೆ ವಿಧೇಯನಾಗುವ ಪ್ರತಿಯೊಬ್ಬ ಕ್ರೈಸ್ತನ ಚಿಂತನೆಯಿಂದ ಬರುತ್ತದೆ; ಅನುದಿನದ ಜೀವನದಲ್ಲಿಯ ಐಕ್ಯತೆಯು ಒಬ್ಬರಿಗೋಸ್ಕರ ಒಬ್ಬರಿಗಿರುವ ಚಿಂತನೆಯಿಂದ ಬರುತ್ತದೆ. ಸಭೆಗೆ ಎರಡೂ ಅಗತ್ಯವಾಗಿರುತ್ತದೆ.
9. ಐಕ್ಯತೆಯನ್ನು ಕಾಯ್ದುಕೊಳ್ಳಲು ಕ್ರೈಸ್ತರು ಸಹೋದರ ಸಹೋದರಿಯರನ್ನು ಪ್ರೀತಿಯಿಂದಲೂ ಕೃಪೆಯಿಂದಲೂ ಯೋಚಿಸತಕ್ಕದ್ದು. ಸ್ವಾರ್ತತೆಯಿಂದ ಏನನ್ನು ಮಾಡದೇ, ತನ್ನ ಸ್ವಂತ ಅಭಿಪ್ರಾಯಗಳನ್ನೂ ಅಪೇಕ್ಷೆಗಳನ್ನೂ ಕಡಿಮೆ ಮಾಡಿಕೊಳ್ಳಬೇಕು.

## ನಿತ್ಯ ಬಹುಮಾನ ಹಾಗೂ ಶಿಕ್ಷೆ

*(ಪ್ರಶ್ನೆಗಳು ಅಧ್ಯಾಯ 18ರಲ್ಲಿವೆ)*

1. ದೇವರು ಪ್ರೀತಿಸುವವನೂ ದಯೆಯುಳ್ಳವನೂ ದೀರ್ಘಶಾಂತನೂ ಆಗಿರುವಾಗ, ಆತನು ರೋಷದ ಹಾಗೂ ಪ್ರತೀಕಾರದ ದೇವರೂ ಆಗಿದ್ದಾನೆ. ದೇವರು ದಯೆಯುಳ್ಳವನು, ಉಗ್ರನು ಎರಡೂ ಆಗಿದ್ದಾನೆ.
2. ಅಂತ್ಯವಿಲ್ಲದೇ ನಿತ್ಯತ್ವದಲ್ಲೆಲ್ಲಾ ದುಷ್ಟರ ದಂಡನೆಯು ಮುಂದುವರಿಯುತ್ತದೆ. ಅವರ ಯಾತನೆಯು “ಯುಗಯುಗಾಂತರಗಳಲ್ಲಿಯೂ” ಮುಂದುವರಿಯುವುದೆಂದು ಪ್ರಕಟನೆ 14:11 ಹೇಳುತ್ತದೆ.
3. ನರಕಕ್ಕೆ ಕಳುಹಿಸಲ್ಪಡುವವರು ದೇವರಿಂದ ಬೇರೆಯಾಗಿ ಇಡಲ್ಪಡುತ್ತಾರೆ, ಸೈತಾನನೊಂದಿಗೂ ಅವನ ದೂತರೊಂದಿಗೂ ಇರುತ್ತಾರೆ, ಬೆಂಕಿ ಗಂಧಕಗಳು ಉರಿಯಲ್ಲಿ, ಹೊರಗಿನ ಕತ್ತಲೆಯಲ್ಲಿ ಹಾಗೂ ದೇವರ ಪ್ರತೀಕಾರದ ಹಿಂಸೆಯಲ್ಲಿ ಯಾತನೆ ಪಡುತ್ತಾರೆ.
4. ದಂಡಿಸಲ್ಪಡುವವರು ಹಟಮಾರಿಗಳೂ ಪಶ್ಚಾತ್ತಾಪವಿಲ್ಲದ ಹೃದಯದವರೂ, ದೇವರನ್ನರಿಯದವರೂ ಹಾಗೂ ಸತ್ಯಕ್ಕೆ ವಿಧೇಯರಾಗದವರೂ ಆಗಿರುವರೆಂದು ಪೌಲನು ವಿವರಿಸಿದ್ದಾನೆ.
5. ನಮ್ಮ ಅತೀ ದೊಡ್ಡ ಗುರಿಯು ಪರಲೋಕವನ್ನು ತಲುಪುವಂಥದ್ದೂ ನರಕದ ಭಯಾನಕತೆಗಳನ್ನು ತಪ್ಪಿಸಿಕೊಳ್ಳುವುದೂ ಆಗಿರಬೇಕು.
6. ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ಅಧೀನತೆಯಲ್ಲಿದ್ದವರಿಗೆ ದೀರ್ಘಾಯುಸ್ಸು ಮತ್ತು ಸಮೃದ್ಧಿಯೊಂದಿಗೆ ಕಾನಾನ ದೇಶವು ವಾಗ್ದಾನವಾಗಿ ಕೊಡಲ್ಪಟ್ಟಿತು. ಪರಲೋಕದಲ್ಲಿ ಸದಾಕಾಲಕ್ಕೆ ಸ್ಥಳವು ಕ್ರೈಸ್ತರಿಗೆ ವಾಗ್ದಾನವಾಗಿ ಕೊಡಲ್ಪಟ್ಟಿದೆ.
7. “ಪರಲೋಕ” ಎಂಬುದು ಮೂರು ಭಿನ್ನವಾದ ಕ್ಷೇತ್ರಗಳಿಗೆ ಸಂಬಂಧಿಸಿದೆ; (1) ಮೋಡಗಳಿರುವ ಪಕ್ಷಿಗಳು ಹಾರಾಡುವ ಆಕಾಶ; (2) ನಕ್ಷತ್ರಗಳೊಂದಿಗೂ ನಕ್ಷತ್ರರಾಶಿ ತುಂಬಿರುವ ವಿಶ್ವ; (3) ಹಾಗೂ ದೇವರ ವಾಸ ಸ್ಥಾನ.
8. ದೇವರು ನಮ್ಮ ಬೆಳಕಾಗಿರುವದರಿಂದ ಸೂರ್ಯ, ಚಂದ್ರ ಇಲ್ಲವೇ ದೀಪ

ನಮಗೆ ಬೇಕಾಗಿಲ್ಲ. ಜೀವವೃಕ್ಷಕ್ಕೆ ನಮಗೆ ಲಭ್ಯತೆಯಿರುವದರಿಂದ ನಮಗೆ ದೈಹಿಕ ಆಹಾರದ ಅವಶ್ಯಕತೆಯಿರುವದಿಲ್ಲ.

9. ದೇವರ ಚಿತ್ತವನ್ನು ಮಾಡುವವರು ಪರಲೋಕಕ್ಕೆ ಹೋಗುವರು.

## ಮಾನಸಾಂತರ

*(ಪ್ರಶ್ನೆಗಳು ಅಧ್ಯಾಯ 19ರಲ್ಲಿವೆ)*

1. ತನ್ನ ಮರಣದ ನಂತರ, ಐಶ್ವರ್ಯವಂತನ ಪ್ರಾಧಾನ್ಯತೆಗಳು ಬದಲಾದವು. ಅವನು ತನ್ನ ಸ್ಥಿತಿಯ ಬಗ್ಗೆ ಹಾಗೂ ತನ್ನ ಸಹೋದರರ ಆತ್ಮಿಕ ಪರಿಸ್ಥಿತಿಯ ಬಗ್ಗೆ ಚಿಂತಿಸುವವನಾದನು.
2. "ಮಾನಸಾಂತರ" ಎಂಬುದು ಮೂಲೆಗಲ್ಲಿನಂತಿರುವ ಪದವಾಗಿದೆ ಯಾಕಂದರೆ ಮಾನಸಾಂತರ ಪಟ್ಟವರು ಮಾತ್ರವೇ ಕ್ರೈಸ್ತರಾಗ ಬಹುದು. ನಿಜವಾದ ಮಾನಸಾಂತರದಿಂದ ಮಾತ್ರವೇ ನಿತ್ಯ ಜೀವದ ಬಾಗಿಲು ತೆರೆಯಲ್ಪಡುವುದು.
3. ಯೂದನ ದುಃಖಪಡುವಿಕೆಯು (ಮತ್ತಾಯ 27:3) ಮಾನಸಾಂತರವು ಕೇವಲ ದುಃಖಪಡುವಿಕೆಗಿಂತ ಹೆಚ್ಚಿನದಾಗಿದೆಯೆಂಬುದನ್ನು ಪ್ರದರ್ಶಿಸುತ್ತದೆ. ಯೂದನು ತಾನು ಯೇಸುವನ್ನು ಹಿಡಿದುಕೊಟ್ಟದ್ದಕ್ಕಾಗಿ ದುಃಖಪಟ್ಟನು ಆದರೆ ಮಾನಸಾಂತರ ಪಡಲಿಲ್ಲ.
4. ದೇವರ ಚಿತ್ತಾನುಸಾರವಾದ ದುಃಖವು ಮಾನಸಾಂತರವನ್ನು ಹುಟ್ಟಿಸುತ್ತದೆ. ದೇವರ ಚಿತ್ತಾನುಸಾರವಾದ ದುಃಖವು ಪ್ರತಿಕ್ರಿಯೆಯ ಭಾಗವಾಗಿದೆ ಆದರೆ ಅದು ತಾನೇ ಮಾನಸಾಂತರವಾಗಿರುವದಿಲ್ಲ.
5. ಸೌಲನು ಚಿತ್ತದ ದೃಢವಾದ ಬದಲಾವಣೆ ಮಾಡಿಕೊಂಡನು, ಅದು ಅವನ ಮಾನಸಾಂತರವನ್ನು ಸ್ಪಷ್ಟವಾಗಿ ತೋರಿಸಿತು. ಕ್ರಿಸ್ತನ ಸಭೆಯನ್ನು ಹಿಂಸಿಸುವದನ್ನು ಅವನು ನಿಲ್ಲಿಸಿದನು. ಹಾಗೂ ತನ್ನ ಇಡೀ ಜೀವಿತವನ್ನು ಯೇಸುವಿಗೆ ಸಮರ್ಪಿಸಿದನು.
6. ಥೆಸಲೊನೀಕದವರು ತಮ್ಮ ಮಾನಸಾಂತರದಲ್ಲಿ, "ವಿಗ್ರಹಗಳನ್ನು ಬಿಟ್ಟು ಬಿಟ್ಟು ದೇವರ ಕಡೆಗೆ ತಿರಿಗಿ ಕೊಂಡು ಜೀವವುಳ್ಳ ಸತ್ಯ ದೇವರನ್ನು ಸೇವಿ ಸುವವರಾದುದರಿಂದ" (1 ಥೆಸಲೊನೀಕ 1:9) ಪೌಲನು ಅವರನ್ನು ಹೊಗಳಿದನು. ಮಾನಸಾಂತರವು ಕೇವಲ ಪಾಪದಿಂದ ತಿರುಗಿಕೊಳ್ಳುವದಷ್ಟೇ ಅಲ್ಲ, ಆದರೆ ದೇವರ ಕಡೆಗೆ ತಿರುಗಿಕೊಳ್ಳುವುದು ಎಂಬುದನ್ನು ಪ್ರದರ್ಶಿಸಿದರು.
7. ಮಾನಸಾಂತರವು ಕೇವಲ ಪಾಪದ ಅರಿಕೆ ಮಾಡುವದಕ್ಕಿಂತ ಹಚ್ಚಾದದ್ದಾಗಿರುತ್ತದೆ. ಅದರಲ್ಲಿ ಪಾಪದಿಂದ ಹಿಂದಿರುಗುವುದೂ ಕ್ರಿಸ್ತನ ಕಡೆಗೆ ತಿರುಗುವುದೂ ಇರತಕ್ಕದ್ದು. ಇನ್ನೊಬ್ಬ ವ್ಯಕ್ತಿಗೆ ಪಾಪಗಳನ್ನು ಅರಿಕೆ ಮಾಡುವುದು ಮಾನಸಾಂತರ ಎಂದು ಕೆಲವರು ಯೋಚಿಸುತ್ತಾರೆ. ನಮ್ಮ ಪಾಪವನ್ನು ಒಪ್ಪಿಕೊಳ್ಳುವುದು ಮಹತ್ವದ್ದು (ಯಾಕೋಬ 5:16), ಆದರೆ ಪಾಪಭರಿತ ಆಚರಣೆಗಳನ್ನು ತೆಗೆದು ಹಾಕುವಂಥದ್ದೂ ಇರತಕ್ಕದ್ದು.

8. ದೇವರ ಒಳ್ಳೆಯತನವು, ಬಹುಮಾನದ ವಾಗ್ದಾನವು ಹಾಗೂ ದಂಡನೆಯ ಭಯವು ಮಾನಸಾಂತರಕ್ಕಾಗಿ ಮೂರು ಬೈಬಲಿನ ಪ್ರೋತ್ಸಾಹಕಗಳಾಗಿವೆ.

## ಯೇಸುವಿನೊಂದಿಗೆ ನೀವೇನು ಮಾಡುವಿರಿ?

*(ಪ್ರಶ್ನೆಗಳು ಅಧ್ಯಾಯ 20ರಲ್ಲಿವೆ)*

1. ಯೇಸುವು ಪರಲೋಕಕ್ಕೆ ಒಂದೇ ಮಾರ್ಗವಾಗಿರುವದರಿಂದ, ಆತನಿಗೆ ನಮ್ಮ ಪ್ರತಿಕ್ರಿಯೆಯು ನಾವು ನಿತ್ಯತ್ವವನ್ನು ಎಲ್ಲಿ ಕಳೆಯುವೆವು ಎಂಬುದನ್ನು ನಿಶ್ಚಯಿಸುತ್ತದೆ.
2. ಶಿಶುಗಳು ಮತ್ತು ಚಿಕ್ಕಮಕ್ಕಳು ಬಾಪ್ತಿಸ್ಮ ಹೊಂದುವ ಅವಶ್ಯಕತೆಯಿರುವುದಿಲ್ಲ. ಯಾಕಂದರೆ ಅವರು ಪಾಪವು ಏನಾಗಿದೆಯೆಂಬುದನ್ನು ಅರ್ಥಮಾಡಿಕೊಳ್ಳುವದಿಲ್ಲ.
3. ಬಾಪ್ತಿಸ್ಮವು ಪಾಪಗಳನ್ನು ತೆಗೆದು ಹಾಕುವದಕ್ಕಾಗಿ ಇಲ್ಲವೇ ಪಾಪಗಳ ಕ್ಷಮಾಪಣೆಗಾಗಿ ಇರುತ್ತದೆ.
4. ಹೊಸ ಒಡಂಬಡಿಕೆಯ ಸಭೆಯನ್ನು ಗುರಿತಿಸಲು ಈ ಪ್ರಶ್ನೆ ಕೇಳಿರಿ: "ಅವರು ಹೊಸ ಒಡಂಬಡಕೆಯ ಸಭೆಯಾಗಿರಲು ಪ್ರಯತ್ನಿಸುತ್ತಿರುವರೋ?"; "ಪ್ರತೀ ಭಾನುವಾರ ಅವರು ಕರ್ತನ ಭೋಜನದಲ್ಲಿ ಪಾಲುಗಾರರಾಗುತ್ತಿರುವರೋ?"; "ಸಂಗೀತ ವಾದ್ಯಗಳಿಲ್ಲದೆ ಹಾಡುತ್ತಿರುವರೋ?"; "ಯೇಸುವಿನ ಹೆಸರಿನಲ್ಲಿ ಅವರು ಪ್ರಾರ್ಥಿಸುವರೋ?"; "ಅವರು ಪ್ರತೀವಾರ ಕಾಣಿಕೆ ಕೊಡುತ್ತಿರುವರೋ?"; "ಅವರು ಹೇಗೆ ಸಂಘಟಿಸಲ್ಪಟ್ಟಿದ್ದಾರೆ?"; "ಅವರಿಗೆ ಈ ಲೋಕದ ಮುಖ್ಯ ಕಛೇರಿ ಇರುವುದೋ?"; "ಅವರ ನಿಯೋಗವು ಯಾವುದು?"
5. ಬಾಪ್ತಿಸ್ಮವು ನೀರಿನಲ್ಲಿ ಹೂಣಿಡುವಿಕೆಯಾಗಿದೆಯೆಂದು ರೋಮಾಪುರ 6:4 ಬೋಧಿಸುತ್ತದೆ.
6. ಕ್ರೈಸ್ತನ ಜೀವಿತವನ್ನು ಸಂಕ್ಷೇಪವಾಗಿ ಹೇಳುವ ಉತ್ತಮ ಮಾರ್ಗವು ಅವನು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದಿರುವನು ಹಾಗೂ ಕ್ರಿಸ್ತನ ಅನುಯಾಯಿ ಆಗಿದ್ದಾನೆ ಎಂದು ಹೇಳುವುದು.
7. ದೇವರಿಗೆ ಕ್ರಿಸ್ತನ ನಂಬಿಗಸ್ತ ವಿಧೇಯತೆಯನ್ನು ಅನುಸರಿಸಲು ಕ್ರೈಸ್ತನು ದೇವರ ವಾಕ್ಯಕ್ಕೆ ಸಮೀಪದಲ್ಲಿರುತ್ತಾನೆ.
8. ಪ್ರತೀ ಭಾನುವಾರ ಇಲ್ಲವೇ ಕರ್ತನ ದಿನದಂದು ಕ್ರೈಸ್ತರು ಹಾಡುವದರಿಂದ, ಪ್ರಾರ್ಥಿಸುವದರಿಂದ, ದೇವರ ವಾಕ್ಯದ ಅಧ್ಯಯನ ಮಾಡುವದರಿಂದ, ಕರ್ತನ ಭೋಜನದಲ್ಲಿ ಪಾಲುಗಾರರಾಗುವದರಿಂದ, ತಮ್ಮ ಹಣವನ್ನು ಕೊಡುವದರಿಂದ ಒಟ್ಟಾಗಿ ಆರಾಧಿಸುತ್ತಾರೆ.
9. ಕರ್ತನ ಭೋಜನವನ್ನು ಸ್ಥಾಪಿಸುವದರಲ್ಲಿ ಯೇಸುವು ಹುಳಿಯಿಲ್ಲದ ರೊಟ್ಟಿಯನ್ನು ದ್ರಾಕ್ಷಾರಸವನ್ನು ಉಪಯೋಗಿಸಿದನು.

10. ಕ್ರೈಸ್ತರಾಗಲು ಹಾಗೂ ಕ್ರಿಸ್ತನಂತೆ ಜೀವಿಸಲು ನೀವು ಮಾಡಬೇಕಾದದ್ದು: (1) ಕ್ರಿಸ್ತನ ಬಳಿಗೆ ಬರುವುದು, (2) ಆತನಿಗಾಗಿ ಜೀವಿಸಲು ಪ್ರಾರಂಭಿಸುವುದು, (3) ಕ್ರಮವಾಗಿ ಇತರ ಕ್ರೈಸ್ತರೊಂದಿಗೆ ಆರಾಧಿಸುವುದು, ಹಾಗೂ (4) ಇತರರಿಗೆ ಸೇವೆ ಮಾಡಲು ಪ್ರಾರಂಭಿಸುವುದು.

# ಪುರಾವಣಿ 2

# ಸತ್ಯದ ವಾಕ್ಯವನ್ನು ಸರಿಯಾಗಿ ಉಪಯೋಗಿಸಲು ಅಧ್ಯಯನ ಸಹಾಯಗಳು

*“ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಪ್ರಯಾಸಪಡು. ಅವಮಾನಕ್ಕೆ ಗುರಿಯಾಗದ ಕೆಲಸವನ್ನೂ ಸತ್ಯವಾಕ್ಯವನ್ನೂ ಸರಿಯಾಗಿ ಉಪದೇಶಿಸುವವನೂ ಆಗಿರು” (2 ತಿಮೊಥೆ 2:15).*

ಸತ್ಯವಾಕ್ಯವನ್ನು (ಬೈಬಲನ್ನು) ಸರಿಯಾಗಿ ಉಪಯೋಗಿಸುವುದು ಬಹಳ ಪ್ರಾಮುಖ್ಯವಾದ ಸಂಗತಿಯಾಗಿದೆ. ಇತರ ಸಂಗತಿಗಳಲ್ಲಿ, ಇದರ ಅರ್ಥ ಹಳೇ ಒಡಂಬಡಿಕೆಯ ಮತ್ತು ಹೊಸ ಒಡಂಬಡಿಕೆಯ ಮಧ್ಯದಲ್ಲಿಯ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳುವುದಾಗಿದೆ. ಹಳೇ ಒಡಂಬಡಿಕೆಯು ಛಾಯೆಯಾಗಿದ್ದರೆ, ಹೊಸ ಒಡಂಬಡಿಕೆಯು ನಿಜ ಸ್ವರೂಪವಾಗಿದೆ (ಇಬ್ರಿಯ 10:1). ಹಳೇ ಒಡಂಬಡಿಕೆಯು “ಶಿಲುಬೆಗೆ ಜಡಿಯಲ್ಪಟ್ಟಿದೆ” ಮತ್ತು ಹೊಸ ಒಡಂಡಿಕೆಯು ಈಗ ಆತ್ಮಿಕವಾಗಿ ಬಂಧಿಸುವ ನಿಯಮವಾಗಿದೆ (ಕೊಲೊಸ್ಸೆ 2:14). ಉದಾಹರಣೆಗಳಿಗಾಗಿ ಮತ್ತು ದೇವರು ಯಾವಾಗಲೂ ತನ್ನ ವಾಗ್ದಾನಗಳನ್ನು ಹೇಗೆ ಕೈಕೊಳ್ಳುವನೆಂಬುದನ್ನು ಪ್ರದರ್ಶಿಸುವದಕ್ಕಾಗಿ ಹಳೇ ಒಡಂಬಡಿಕೆಯು ಬೆಲೆಯುಳ್ಳದ್ದಾಗಿದೆ (1 ಕೊರಿಂಥ 10:6). ದೇವರ ವಾಗ್ದಾನಗಳು ಹಳೇ ಒಡಂಬಡಿಕೆಯಲ್ಲಿ ಮಾಡಲ್ಪಟ್ಟಿವೆ ಹಾಗೂ ಹೊಸ ಒಡಂಬಡಿಕೆಯಲ್ಲಿ ನೆರವೇರಿಸಲ್ಪಟ್ಟಿವೆ (ಪುರಾವಣಿ 2ರಲ್ಲಿ“ಸತ್ಯ ವಾಕ್ಯವನ್ನು ಸರಿಯಾಗಿ ಉಪಯೋಗಿಸುವುದು” ಎಂಬ ಚಾರ್ಟನ್ನು ಅಧ್ಯಯನ ಮಾಡಿರಿ).

# ಸತ್ಯ ವಾಕ್ಯವನ್ನು ಸರಿಯಾಗಿ ಉಪಯೋಗಿಸುವುದು

## 2 ತಿಮೊಥೆ 2:15

| ಹಳೇ ಒಡಂಬಡಿಕೆ | ಹೊಸ ಒಡಂಬಡಿಕೆ |
|---|---|
| **ವಾಗ್ದಾನಗಳು ಮಾಡಲ್ಪಟ್ಟದ್ದು** (ಆದಿಕಾಂಡ 3:15; 12:3) | **ವಾಗ್ದಾನಗಳು ನೆರವೇರಿಸಲ್ಪಟ್ಟದ್ದು** |
| 1. ಸ್ಥಾಪಿಸಲ್ಪಡ ಬೇಕಾಗಿದ್ದ ರಾಜ್ಯ (ದಾನಿಯೇಲ 2:44) | ಮಾರ್ಕ 9:1; ಅಪೊಸ್ತಲರ ಕೃತ್ಯಗಳು 1:8; 2:1-4; ಲೂಕ 22:29, 30; 1 ಕೊರಿಂಥ 11:23 |
| 2. ಕಟ್ಟಲ್ಪಡಲಿರುವ ದೇವರ ಮನೆ (ಯೆಶಾಯ 2:2, 3) | ಇಬ್ರಿಯ 10:21; 1 ತಿಮೊಥೆ 3:15 |
| "ಅಂತ್ಯ ದಿನಗಳಲ್ಲಿ" ಆಗುವುದು<br>ಯೆರೂಸಲೇಮಿನಲ್ಲಿ ಪ್ರಾರಂಭವಾಗುವುದು<br>ಎಲ್ಲಾ ಜನಾಂಗಗಳು ಪ್ರವೇಶಪಡೆಯುವವು | ಅಪೊಸ್ತಲರ ಕೃತ್ಯಗಳು 2:16, 17; ಇಬ್ರಿಯ 1:1,<br>2 ಲೂಕ 24:46, 47; ಅಪೊಸ್ತಲರ ಕೃತ್ಯಗಳು 1:4-8<br>ಅಪೊಸ್ತಲರ ಕೃತ್ಯಗಳು 2:9; ರೋಮಾಪುರ 1:16 |
| 3. ಕ್ರಿಸ್ತನು ಅರಸನಾಗಿರುವನು (ಯೆರಮೀಯ 23:5, 6) | ಮತ್ತಾಯ 28:18; ಅಪೊಸ್ತಲರ ಕೃತ್ಯಗಳು 2:29-33 |
| 4. ಹೊಸ ಒಡಂಬಡಿಕೆಯ ನಿರ್ಬಂಧ (ಯೆರೆಮೀಯ 31:31) | ಮತ್ತಾಯ 16:18, 19; ಅಪೊಸ್ತಲರ ಕೃತ್ಯಗಳು 2:36-38; ಇಬ್ರಿಯ 9:15-17 |
| 5. ಪರಿಶುದ್ಧಾತ್ಮನು ಕೊಡಲ್ಪಡುವನು (ಯೋವೇಲ 2:28) | ಅಪೊಸ್ತಲರ ಕೃತ್ಯಗಳು 2:16-21 |

**ಸಭೆಯನ್ನು ಕುರಿತು ಮಾಡಿದ ಎಲ್ಲಾ ವಾಗ್ದಾನಗಳು ಅಪೊಸ್ತಲರ ಕೃತ್ಯಗಳು 2ರಲ್ಲಿ ನೆರವೇರಿರುವವು. ಈ ಅಧ್ಯಾಯವು ಒಂದು ದಿನದ, ಪಂಚಾಶತ್ತಮದ ದಿನದ ಘಟನೆಗಳನ್ನು ದಾಖಲೆ ಮಾಡುತ್ತದೆ.**

ಅಪೊಸ್ತಲರ ಕೃತ್ಯಗಳು 2ರ ಮೊದಲು ರಾಜ್ಯದ ಬಗ್ಗೆ ಮಾತಾಡುವಾಗ ಪ್ರತಿಯೊಂದು ಪರಿಶುದ್ಧ ಲೇಖನವು ರಾಜ್ಯದ ಬಗ್ಗೆ ಮಾತಾಡುತ್ತವೆ ಅದು ಭವಿಷ್ಯದಲ್ಲಿದೆ ಎಂದು ಮಾತಾಡುತ್ತವೆ (ಯೆಶಾಯ 2:2-4; ಮೀಕ 4:1, 2; ದಾನಿಯೇಲ 2:44; ಮತ್ತಾಯ 3:1, 2; 6:9, 10; 16:18; ಮಾರ್ಕ 9:1).

**ಅಪೊಸ್ತಲರ ಕೃತ್ಯಗಳು 2: ಪಂಚಾಶತ್ತಮ ದಿನ**

ಅಪೊಸ್ತಲರ ಕೃತ್ಯಗಳು 2ರ ನಂತರ ಪ್ರತಿಯೊಂದು ಪರಿಶುದ್ಧ ಲೇಖನವು ರಾಜ್ಯದ ಬಗ್ಗೆ ಮಾತಾಡುವಾಗ ಅದು ಅಸ್ತಿತ್ವದಲ್ಲಿದೆ ಎಂದು ಮಾತಾಡುತ್ತವೆ (ಅಪೊಸ್ತಲರ ಕೃತ್ಯಗಳು 2:47; ಕೊಲೊಸ್ಸೆ 1:13, 14).

# ಬೈಬಲಿಗೆ ಅನುಗುಣವಾಗಿ
# ಒಂದು ಹೊಸ ಸಭೆಯನ್ನು ಸಂಘಟಿಸುವುದು ಹೇಗೆ

**ಸ್ವತಂತ್ರವಾದ ದೇಹದಂತೆ** - ಕರ್ತನ ಸಭೆಯ ಪ್ರತಿಯೊಂದು ಸಭಾಮಂಡಳಿಯು ಪ್ರತ್ಯೇಕವಾದ, ಸ್ವತಂತ್ರವಾದ ಘಟಕವಾಗಿದೆ. ಒಂದು ಸಭೆಯು ಮತ್ತೊಂದು ಸಭೆಯ ಮೇಲೆ ಎಂದೂ ಇರುವದಿಲ್ಲ. ಸಭೆಗಳ ಸಂಘಟನೆಯಿರುವದಿಲ್ಲ. ಇಲ್ಲವೇ ಸ್ಥಳಿಕ ಸಭೆಗಿಂತ ವಿಶಾಲವಾದ ಬೇರೆ ಯಾವುದೇ ಸಂಸ್ಥೆಯಿರುವದಿಲ್ಲ.

**ಕ್ರಿಸ್ತನ ದೇಹದಂತೆ** - ಬೈಬಲ್‌ನಲ್ಲಿ ಸಭೆಯು "ಕ್ರಿಸ್ತನ ದೇಹ" ಎಂದು ಕರೆಯಲ್ಪಟ್ಟಿದೆ. ಈ ರೂಪಕದಲ್ಲಿ ಕ್ರಿಸ್ತನು "ದೇಹದ ಶಿರಸ್ಸು" ಆಗಿದ್ದಾನೆಂದು ನಾವು ನೋಡುತ್ತೇವೆ (ಕೊಲೊಸ್ಸೆ 1:18; ಎಫೆಸೆ 1:22). ಪ್ರಾಕೃತಿಕ ದೇಹದ ಪ್ರತಿಯೊಂದು ಅಂಗಕ್ಕೆ ಪ್ರತ್ಯೇಕವಾದ ಕಾರ್ಯವಿರುವಂತೆ ಕ್ರಿಸ್ತನ ದೇಹದಲ್ಲಿಯೂ ಇರುವುದು. ಸಭೆಯ ಯಾವುದೇ ಸದಸ್ಯನು ಇನ್ನೊಬ್ಬನಿಗಿಂತ ಹೆಚ್ಚು ಮಹತ್ವವುಳ್ಳವನಾಗಿರುವದಿಲ್ಲ. ಇಡೀ ದೇಹದ, ಸಭೆಯ ಯೋಗಕ್ಷೇಮಕ್ಕಾಗಿ ಎಲ್ಲರಿಗೂ ಸ್ಥಳವಿರುವುದು ಹಾಗೂ ಕೊಡುಗೆಯಿರುವುದು.

**ಒಂದೇ ಶಿರಸ್ಸಿನಂತೆ ಯೇಸುವಿನೊಂದಿಗೆ** - ಕ್ರಿಸ್ತನು "ಸಭೆಯ ಶಿರಸ್ಸು" ಆಗಿದ್ದಾನೆ. ಹೀಗೆ ಆತನಿಗೆ ಎಲ್ಲಾ ಅಧಿಕಾರವಿದೆ (ಮತ್ತಾಯ 28:18) ಸಭೆಯ ರಚನೆಯನ್ನು ಬದಲಾಯಿಸಲು ಯಾರಿಗೂ ಅಪ್ಪಣೆಯಿರುವದಿಲ್ಲ. ಯಾಕಂದರೆ ಹಾಗೆ ಮಾಡಲು ಯಾರಿಗೂ ಅಧಿಕಾರವಿರುವದಿಲ್ಲ.

**ಹಿರಿಯರ ನಾಯಕತ್ವದಲ್ಲಿ** - ಸಂಖ್ಯೆಯಲ್ಲಿಯೂ ಆತ್ಮಿಕ ಪ್ರೌಢತೆಯಲ್ಲಿಯೂ ಸ್ಥಳಿಕ ಸಭೆಯು ಬೆಳೆಯುತ್ತಿರುವಂತೆ ಸಭೆಯೊಳಗಿಂದ ಜನರು ಹಿರಿಯರಾಗಿ ಸೇವೆ ಮಾಡಲು ನೇಮಿಸಲ್ಪಡಬೇಕು. ಈ ಜನರು ಸಭೆಯಿಂದಲೇ ಆಯ್ಕೆ ಮಾಡಿಕೊಳ್ಳಲ್ಪಡಬೇಕು: ಅವರು ತಮ್ಮಷ್ಟಕ್ಕೆ ತಾವೇ ನೇಮಕ ಮಾಡಿ ಕೊಂಡವರಾಗಿರಬಾರದು. ಹಿರಿಯರು "ಕುರುಬರು" ಎಂದೂ ಕರೆಯಲ್ಪಟ್ಟಿರುವರು ಮತ್ತು ಮಂದೆಯನ್ನು ಕಾಪಾಡುವ ಸೇವೆ ಮಾಡುವರು (1 ಪೇತ್ರ 5:1-5). ಹಿರಿಯರ ಅರ್ಹತೆಗಳು 1 ತಿಮೊಥೆ 3:1-8 ಮತ್ತು ತೀತ 1:5-8ರಲ್ಲಿ ಕಂಡು ಬರುತ್ತವೆ. ಹಿರಿಯರು, ಡೀಕನರು ಇಲ್ಲದೇ ಸಭೆಯು ಸ್ಥಾಪಿಸಲ್ಪಡ ಬಹುದು. ಪ್ರಾರಂಭದಲ್ಲಿ ಅವರಿಲ್ಲದೆ ಅದು ಅಸ್ತಿತ್ವದಲ್ಲಿರತಕ್ಕದ್ದು. ಯಾಕಂದರೆ ಈ ಹುದ್ದೆಗಳಲ್ಲಿ ಸೇವೆ ಮಾಡುವವರು ವರ್ಷಗಳ ಅನುಭವದಿಂದ ಚೆನ್ನಾಗಿ ಅರ್ಹತೆಯುಳ್ಳವರಾಗಿರತಕ್ಕದ್ದು.

**ಡೀಕನರು ಸೇವೆ ಮಾಡಲು ನೇಮಿಸಲ್ಪಡುವದರೊಂದಿಗೆ** - ಸಭೆಯಲ್ಲಿ ಸೇವೆ ಮಾಡಲು ಡೀಕನರಾಗಿ ಪುರುಷರು ನೇಮಿಸಲ್ಪಡಬೇಕು. ಅವರು ಹಿರಿಯರ ಕೆಳಗೆ ಸೇವೆ ಮಾಡುವರು (ಫಿಲಿಪ್ಪಿ 1:1; ಅಪೊಸ್ತಲರ ಕೃತ್ಯಗಳು 20:28). ಅವರ ಅರ್ಹತೆಗಳು 1 ತಿಮೊಥೆ 3:8-13ರಲ್ಲಿ ಕಂಡು ಬರುತ್ತವೆ.

# ಕ್ರೈಸ್ತ ಪುರುಷ

ಅನೇಕ ವಿಧಗಳಲ್ಲಿ, ಕ್ರೈಸ್ತ ಪುರುಷರಿಗೆ ಕ್ರೈಸ್ತ ಮಹಿಳೆಯರಿಗಿದ್ದ ಜವಾಬ್ದಾರಿಕೆಗಳೇ ಇರುತ್ತವೆ. ಇಬ್ಬರೂ ನಂಬಿಕೆಯಿಂದ ದೇವಾರಾಧನೆಗಳಲ್ಲಿ ಭಾಗವಹಿಸಬೇಕು (ಇಬ್ರಿಯ 10:25), ಕೊಡುವದರಲ್ಲಿ ಉದಾರಿಗಳಾಗಿರ ಬೇಕು (1 ಕೊರಿಂಥ 16:2), ಶುದ್ಧ ಜೀವನ ನಡಿಸಬೇಕು (ಯಾಕೋಬ 1:27), ಸುವಾರ್ತೆ ಸಾರಬೇಕು (ಮತ್ತಾಯ 28:19, 20), ಬೈಬಲ್ ಅಧ್ಯಯನ ಮಾಡಬೇಕು (2 ತಿಮೊಥೆ 2:15; ಅಪೊಸ್ತಲರ ಕೃತ್ಯಗಳು 17:11) ಹಾಗೂ ಆತ್ಮಿಕವಾಗಿ ಬೆಳೆಯ ಬೇಕು (1 ಪೇತ್ರ 2:2).

**ಕ್ರೈಸ್ತ ಪುರುಷನು ಏನು ಮಾಡಬಾರದು**

1. ಅವನು ತನ್ನ ಹೆಂಡತಿಯನ್ನೂ ಮಕ್ಕಳನ್ನೂ ದುರುಪಯೋಗಪಡಿಸಿಕೊಳ್ಳ ಬಾರದು (ಎಫೆಸ 5:25-31; 1 ಪೇತ್ರ 3:7; 1 ಥೆಸಲೊನೀಕ 2:11).

2. ಅವನು ಉಗ್ರನಾಗಿರಬಾರದು (ರೋಮಾಪುರ 12:18).

3. ಅವನು ಜಾರತ್ವ ಮಾಡುವವನಾಗಿರ ಬಾರದು (1 ಕೊರಿಂಥ 6:18, 19).

4. ಅವನು ಸುಖಭೋಗಗಳನ್ನು ಹುಡುಕುವವನಾಗಿರ ಬಾರದು (2 ತಿಮೊಥೆ 3:4; ತೀತ 3:3).

5. ಅವನು ಭಾವನೆಗಳಿಲ್ಲದವನೂ ಭಾವನಾಪರವಶನಾಗದವನೂ ಆಗಿರಬಾರದು (ಲೂಕ 22:62; ಯೋಹಾನ 11:35; ಅಪೊಸ್ತಲರ ಕೃತ್ಯಗಳು 20:37).

**ಕ್ರೈಸ್ತ ಪುರುಷನು ಏನು ಮಾಡಬೇಕು**

1. ಕರ್ತನ ಸಭೆಯಲ್ಲಿ ಅವನು ನಾಯಕತ್ವಕ್ಕಾಗಿ ಜವಾಬ್ದಾರನಾಗಿರುವನು (1 ತಿಮೊಥೆ 2:8-15; 1 ಕೊರಿಂಥ 14:33, 36).

2. ಅವನು ತನ್ನ ಕುಟುಂಬವನ್ನು ಪ್ರೀತಿಯಿಂದ ನಡಿಸಬೇಕು (ಎಫೆಸ 5:21-33; ಕೊಲೊಸ್ಸೆ 3:18-21; 1 ಪೇತ್ರ 3:1-6; 1 ಕೊರಿಂಥ 11:2-5).

3. ಅವನು ತನ್ನ ಕುಟುಂಬದ ಆತ್ಮಿಕ ಮತ್ತು ದೈಹಿಕ ಅಗತ್ಯತೆಗಳನ್ನು ಒದಗಿಸ ಬೇಕು (1 ತಿಮೊಥೆ 5:8).

4. ತನ್ನ ಮಕ್ಕಳು ಯೋಗ್ಯವಾಗಿ ಬೆಳೆಸುವುದರ ಬಗ್ಗೆ ನಿಶ್ಚಿತತೆಯುಳ್ಳವನಾಗಿರಬೇಕು (ಎಫೆಸ 6:4).

**ಪುರುಷರಿಗಾಗಿ ಹೊಸ ಒಡಂಬಡಿಕೆಯ "ಪಾತ್ರದ ಆದರ್ಶಗಳು"**

1. ಎಲ್ಲಾ ಕ್ರೈಸ್ತರು ಸಭೆಯಲ್ಲಿಯ ನಾಯಕರಿಗಾಗಿ ಕೊಡಲ್ಪಟ್ಟ ಅರಹತೆಗಳುಳ್ಳವರಾಗಿರಲು ಹಂಬಲಿಸಬೇಕು. (ಪುರಾವಣಿ 2ರಲ್ಲಿ "ಹಿರಿಯರು ಏನಾಗಿರಬೇಕು, ಎಲ್ಲಾ ಕ್ರೈಸ್ತರು ಏನಾಗಿರಬೇಕು" ಎಂಬ ಚಾರ್ಟುಗಳನ್ನು ನೋಡಿರಿ.)

2. ಅವರು ಯೇಸುವಿನಂತೆ ಸೇವಕ-ನಾಯಕರಾಗಿರ ಬೇಕು (ಲೂಕ 22:27).

3. ಬಾರ್ನಬನಂತೆ ಹಣಕಾಸಿನ ಕೊಡುಗೆಯಲ್ಲಿ ಉದಾರಿಗಳೂ ಪ್ರೋತ್ಸಾಹಿಸುವ ಮಾತುಗಳಿಂದ ಕೂಡಿದವರೂ ಆಗಿರಬೇಕು (ಅಪೊಸ್ತಲರ ಕೃತ್ಯಗಳು 4:36, 37).

4. ಫಿಲೆಮೋನನಂತೆ, ಪುರುಷರು ತಮ್ಮ ಮನೆಗಳನ್ನು ಜೊತೆ ಕ್ರೈಸ್ತರಿಗೆ ತೆರೆದಿಡ ಬೇಕು (ಫಿಲೆಮೋನ 2) ಮತ್ತು ಸಹೋದರರಿಗೆ ಉತ್ತಮವಾದದ್ದನ್ನು ಮಾಡುವದಕ್ಕಾಗಿ ವೈಯಕ್ತಿಕ ಭಿನ್ನತೆಗಳನ್ನು ಬದಿಗಿಡಬೇಕು (ಫಿಲೆಮೋನ 10-20).

# ಕ್ರೈಸ್ತ ಮಹಿಳೆ

**ಬೈಬಲ್ ಪ್ರಕಾರವಾಗಿ ಕ್ರೈಸ್ತ ಮಹಿಳೆ ಏನು ಮಾಡಬಾರದು:**

1. ಸಭೆಯ ಕೂಟದಲ್ಲಿ ನಾಯಕತ್ವ ಉಪಯೋಗಿಸಲಿಕ್ಕೆ ಪ್ರತಿಬಂಧಿಸಲ್ಪಟ್ಟಿದ್ದಾಳೆ (1 ಕೊರಿಂಥ 14:34, 35; ನೋಡಿರಿ 14:19, 23, 26, 28). ಕೂಟದಲ್ಲಿ ಪ್ರಸಂಗಿಗಳು ಮಾತನಾಡುವರು. ಆದುದರಿಂದ ಕ್ರೈಸ್ತ ಮಹಿಳೆಯರು ಪ್ರಸಂಗಿಗಳಾಗಿ ಸೇವೆ ಮಾಡ ಬಾರದು.

2. ಪುರುಷರ ಮೇಲೆ ಅಧಿಕಾರ ನಡಿಸುವುದು ಪ್ರತಿಬಂಧಿಸಲ್ಪಟ್ಟಿದೆ, ಆದುದರಿಂದ ಆಕೆ ಹಿರಿಯಳಾಗಿ ಇಲ್ಲವೇ ಡೀಕನಳಾಗಿ ಸೇವೆ ಮಾಡಲಾರಳು (1 ತಿಮೊಥೆ 2:12; 3:2).

3. ತನ್ನ ಗಂಡನ ಅಧಿಕಾರವನ್ನು ತಿರಸ್ಕರಿಸುವಂತೆ ಕಾಣುವದಕ್ಕೆ ಆಕೆ ಪ್ರತಿ ಬಂಧಿಸಲ್ಪಟ್ಟಿದ್ದಾಳೆ (1 ಕೊರಿಂಥ 11).

**ಕ್ರೈಸ್ತ ಮಹಿಳೆ ಬೈಬಲ್ ಪ್ರಕಾರವಾಗಿ ಏನನ್ನು ಮಾಡಬೇಕು:**

1. ಪುರುಷರ ಮೇಲೆ ಆಕೆಗೆ ಅಧಿಕಾರವಿಲ್ಲದ ಚಟುವಟಿಗೆಗಳನ್ನು ನಡಿಸುವದರಲ್ಲಿ ಆಕೆ ಪ್ರತಿಬಂಧಿಸಲ್ಪಟ್ಟಿಲ್ಲ.

2. ಇತರ ಮಹಿಳೆಯರಿಗೆ ಇಲ್ಲವೇ ಮಕ್ಕಳಿಗೆ ಬೋಧಿಸುವದರಿಂದ ಆಕೆ ಪ್ರತಿಬಂಧಿಸಲ್ಪಟ್ಟಿಲ್ಲ. ಕೆಲವು ಸಂದರ್ಭಗಳಲ್ಲಿ ಆಕೆ ಬೋಧಿಸಬಹುದು. ಇಲ್ಲವೇ ಪುರುಷರಿಗೆ ಬೋಧಿಸಲು ಸಹಾಯ ಮಾಡಬಹುದು (ಅಪೊಸ್ತಲರ ಕೃತ್ಯಗಳು 18:24-28; ತೀತ 2:4).

3. ವೈಯಕ್ತಿಕ ಕಾರ್ಯ ಮಾಡುವದಕ್ಕೆ, ವ್ಯಕ್ತಿಗಳನ್ನು ಕ್ರಿಸ್ತನ ಬಳಿಗೆ ನಡಿಸುವದಕ್ಕೆ ಆಕೆ ಪ್ರತಿಬಂಧಿಸಲ್ಪಟ್ಟಿರುವದಿಲ್ಲ.

4. ಸಭೆಗಾಗಿ ಕೆಲಸ ಮಾಡುವುದು, ಬೈಬಲ್ ಅಧ್ಯಾಯನಕ್ಕನುಗುಣವಾಗಿ ಮಾಡಲು ಆಕೆಗೆ ಸರಿಯಾದ ಯಾವುದೇ ಉದ್ಯೋಗಕ್ಕಾಗಿ ಸಂಬಳ ಪಡೆಯುವುದು ಪ್ರತಿ ಬಂಧಿಸಲ್ಪಟ್ಟಿರುವದಿಲ್ಲ.

**ಮಹಿಳೆಯರಿಗಾಗಿ ಹೊಸ ಒಡಂಬಡಿಕೆಯ "ಪಾತ್ರದ ಆದರ್ಶಗಳು"**

1. ಮಹಿಳೆಯರು ಯೇಸುವನ್ನು ಹಿಂಬಾಲಿಸಿದರು ಮತ್ತು ಆತನ ಬೋಧನೆಯಲ್ಲಿ ಆರ್ಥಿಕವಾಗಿ ಆತನಿಗೆ ಸಹಾಯ ಮಾಡಿದರು (ಮತ್ತಾಯ 27:55; ಲೂಕ 8:1-3).

2. ಲಾಜರನ ಸಹೋದರಿ, ಮರಿಯಳು ಕರ್ತನ ಪಾದಗಳ ಬಳಿಯಲ್ಲಿ ಕುಳಿತುಕೊಂಡು ಆತನ ವಾಕ್ಯವನ್ನು ಕೇಳಿದಳು (ಲೂಕ 10:39, 42).

3. ಮಗ್ದಲದ ಮರಿಯಳು ಯೇಸುವಿನ ಭಕ್ತಿಯುಳ್ಳ ಹಿಂಬಾಲಕಳಾಗಿದ್ದಳು. ಪುನರುತ್ಥಾನನಾದ ಕರ್ತನ ಬಗ್ಗೆ ಇತರರಿಗೆ ಹೇಳುವಲ್ಲಿ ಆಸಕ್ತಳಾಗಿದ್ದಳು (ಯೋಹಾನ 20:1-18).

4. ದೊರ್ಕಳು ಇಲ್ಲವೇ ತಬೀಥಳು "ದಯೆಯ ಮತ್ತು ಧರ್ಮದ" ಕಾರ್ಯಗಳನ್ನು ಮಾಡಿದಳು (ಅಪೊಸ್ತಲರ ಕೃತ್ಯಗಳು 9:36).

5. ಫೋಯಿಬೆಯು "ಸಭೆಯ ಸೇವಕಿಯಾಗಿದ್ದಳು" ಪೌಲನಿಗೆ ಸಹಾಯಕಳಾಗಿದ್ದಳು (ರೋಮಾಪುರ 16:1, 2).

6. ಪ್ರಿಸ್ಕಿಲ್ಲಳು ನಂಬಿಗಸ್ತ ಪತ್ನಿಯಾಗಿದ್ದಳು. ಅಪೊಸ್ತಲನ ಜೊತೆ ಕೆಲಸದವಳಾಗಿದ್ದಳು, ಮಿಶನರಿಯಾಗಿದ್ದಳು, ತನ್ನ ಗಂಡನೊಂದಿಗೆ, ತನ್ನ ಸ್ವಂತ ಮನೆಯಲ್ಲಿ ಸಭೆ ಸೇರುವುದಕ್ಕೆ ಅವಕಾಶ ಕೊಟ್ಟಳು. (ನೋಡಿರಿ ರೋಮಾಪುರ 16:3-5; ಅಪ್ರೊಲರ ಕೃತ್ಯಗಳು 18:1-3; ಅಪೊಸ್ತಲರ ಕೃತ್ಯಗಳು 18:24-28).

# ಎಲ್ಲಾ ಕ್ರೈಸ್ತರು ಏನಾಗಿರಬೇಕು

| ಹಿರಿಯರು | ವಿಶೇಷಗುಣ | ಎಲ್ಲಾ ಕ್ರೈಸ್ತರು |
|---|---|---|
| 1 ತಿಮೊಥೆ 3:2 | ದೋಷಾರೋಪಣೆಯಿಲ್ಲದವರು (ನಿರ್ದೋಷಿಗಳು) | 1 ತಿಮೊಥೆ 5:7; 6:14 |
| 1 ತಿಮೊಥೆ 3:2 | ಸ್ವಸ್ಥ ಚಿತ್ತನಾಗಿರಬೇಕು (ಜಾಗರೂಕನಾಗಿರಬೇಕು) | 1 ಪೇತ್ರ 1:13; 4:7; 5:8 |
| 1 ತಿಮೊಥೆ 3:2 | ವಿವೇಕವುಳ್ಳವನಾಗಿರಬೇಕು (ವಿವೇಕವುಳ್ಳ; ಬುದ್ಧಿಯುಳ್ಳವನಾಗಿರಬೇಕು) | ತೀತ 2:2, 5; ರೋಮಾಪುರ 12:3 |
| 1 ತಿಮೊಥೆ 3:2 | ಅತಿಥಿ ಸತ್ಕಾರ ಮಾಡುವವನು | ರೋಮಾಪುರ 12:13; ಇಬ್ರಿಯ 13:2 |
| 1 ತಿಮೊಥೆ 3:2 | ಬೋಧಿಸಲು ಶಕ್ತನು | ಇಬ್ರಿಯ 5:12 |
| 1 ತಿಮೊಥೆ 3:3 | ಮದ್ಯಪಾನಕ್ಕೆ (ಕುಡುಕನಾಗಿರಬಾರದು) | ತೀತ 2:3; ಎಫೆಸ 5:18 |
| 1 ತಿಮೊಥೆ 3:3 | ಸಾಧು (ತಾಳ್ಮೆಯುಳ್ಳವನಾಗಿರಬೇಕು) | ಫಿಲಿಪ್ಪಿ 4:5; ಕೊಲೊಸ್ಸೆ 3:13; ತೀತ 3:2 |
| 1 ತಿಮೊಥೆ 3:3 | ಜಗಳಗಂಟನಾಗಿರ ಬಾರದು (ಕಲಹ ಪ್ರಿಯನಾಗಿರಬಾರದು; ತಕರಾರಿಯಾಗಿರಬರದು) | ಯಾಕೋಬ 4:2; 2 ತಿಮೊಥೆ 2:24 |
| 1 ತಿಮೊಥೆ 3:3 | ದ್ರವ್ಯಾಶೆಯಿಲ್ಲದವನಾಗಿರಬೇಕು | 1 ತಿಮೊಥೆ 6:10; 2 ತಿಮೊಥೆ 3:2 |
| 1 ತಿಮೊಥೆ 3:4 | ಸನ್ಮಾನಿಸುವ, ವಿಧೇಯರಾಗುವ ಮಕ್ಕಳುಳ್ಳವನಾಗಿರಬೇಕು | ಎಫೆಸ 6:1-4 |
| 1 ತಿಮೊಥೆ 3:7 | ಹೊರಗಿಣವರಿಂದ ಒಳ್ಳೆಯನೆನಿಸಿ ಕೊಂಡವನಾಗಿರಬೇಕು | 1 ಪೇತ್ರ 2:12-16 |
| ತೀತ 1:8 | ನ್ಯಾಯವಂತನಾಗಿರಬೇಕು (ಪ್ರಮಾಣಿಕತೆಯುಳ್ಳವನಾಗಿರಬೇಕು) | ಕೊಲೊಸ್ಸೆ 4:1 |
| ತೀತ 1:8 | ದೇವ ಭಕ್ತನಾಗಿರಬೇಕು (ಪರಿಶುದ್ಧನು) | ಎಫೆಸ 4:24; 1 ತಿಮೊಥೆ 2:8 |
| ತೀತ 1:8 | ಆತ್ಮಸಂಯಮ (ಸ್ವಸ್ಥ ಚಿತ್ತನಾಗಿರಬೇಕು) | ಗಲಾತ್ಯ 5:23 |

ಎಲ್ಲಾ ಕ್ರೈಸ್ತರಿಗೆ ಇರಬೇಕಾಗಿರದ ಮೂರು ಗುಣಲಕ್ಷಣಗಳು ಹಿರಿಯರಿಗಿರಬೇಕು. ಹಿರಿಯನು "ಒಬ್ಬಳೇ ಹೆಂಡತಿಯ ಗಂಡನಾಗಿರತಕ್ಕದ್ದು," "ನಂಬಿಕೆಯುಳ್ಳ ಮಕ್ಕಳುಳ್ಳವನಾಗಿರಬೇಕು" ಹಾಗೂ "ಹೊಸದಾಗಿ ಸಭೆಗೆ ಸೇರಿದವನಾಗಿರಬಾರದು" (1 ತಿಮೊಥೆ 3:2, 6; ತೀತ 1:6). (ಮದುವೆಯಾದ ಕ್ರೈಸ್ತನಿಗೆ ಒಬ್ಬಳೇ ಒಬ್ಬ ಹೆಂಡತಿಯಿರಬೇಕು. ಮದುವೆಯಾಗದ ಪುರುಷನೂ ಇಲ್ಲವೇ ಸ್ತ್ರೀಯೂ ಕ್ರೈಸ್ತರಾಗಬಹುದು.)

# ಪುರವಣಿ 3

# ಹೊಸ ಒಡಂಬಡಿಕೆಯಲ್ಲಿ "ಸಭೆ" ಮತ್ತು "ಸಭೆಗಳು" ಎಂಬ ಪದಗಳು

ಹೊಸ ಒಡಂಬಡಿಕೆಯ ಸಭೆಯ ಲಕ್ಷಣವನ್ನು ಹೆಚ್ಚು ಉತ್ತಮವಾಗಿ ಅರ್ಥ ಮಾಡಿಕೊಳ್ಳಲು "ಸಭೆ" ಮತ್ತು "ಸಭೆಗಳು" ಎಂಬ ಪದಗಳು ಭಿನ್ನವಾದ ಹಿನ್ನೆಲೆಗಳಲ್ಲಿ ಉಪಯೋಗಿಸಿದ್ದನ್ನು ಜಾಗರೂಕತೆಯಿಂದ ಅಧ್ಯಯನ ಮಾಡಿರಿ. ಮೊದಲನೆಯದಾಗಿ, "ಸಭೆ" ಎಂಬ ಪದವು ವಿಶೇಷ ಉದ್ದೇಶಕ್ಕಾಗಿ ಇಲ್ಲವೇ ತಾನಾಗಿಯೇ ಕೂಡಿಬಂದ ಲೌಕಿಕ ಸಭೆಯೆಂಬ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 19:32, 39, 41 ನೋಡಿರಿ). ಎರಡನೆಯದಾಗಿ, ಸಾರ್ವತ್ರಿಕ ಅರ್ಥದಲ್ಲಿ ದೇವರ ಜನಾಂಗದ ಎಲ್ಲರಿಗೆ ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ (ಮತ್ತಾಯ 16:18 ನೋಡಿರಿ). ಮೂರನೆಯದಾಗಿ, ಒಂದು ಸ್ಪಷ್ಟವಾದ ಜನಾಂಗಿಕ ಹಿನ್ನೆಲೆಯಿಂದ ರಕ್ಷಿಸಲ್ಪಟ್ಟವರಿಗೆ ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ (ರೋಮಾಪುರ 16:4 ನೋಡಿರಿ). ನಾಲ್ಕನೆಯದಾಗಿ, ಕೊಡಲ್ಪಟ್ಟ ಸರ್ವ ಸಾಮಾನ್ಯ ಕ್ಷೇತ್ರದಲ್ಲಿಯ ಸಭೆಗಳಿಗೆ ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ (ನೋಡಿರಿ ಗಲಾತ್ಯ 1:2 ಮತ್ತು ಅಪೊಸ್ತಲರ ಕೃತ್ಯಗಳು 9:31). ಐದನೆಯದಾಗಿ, ಈ ಪದವು ಒಟ್ಟಾಗಿ ಆರಾಧಿಸುತ್ತಿರುವ ಕ್ರೈಸ್ತರ ನಿಶ್ಚಿತವಾದ ಗುಂಪಿಗೆ ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ (ನೋಡಿರಿ 1 ಕೊರಿಂಥ 1:2 ಮತ್ತು ಕೊಲೊಸ್ಸೆ 4:16). ಆರನೆಯದಾಗಿ, ಆರಾಧನೆಗಾಗಿ ಹಾಗೂ ಅಧ್ಯಯನಕ್ಕಾಗಿ ಕ್ರೈಸ್ತರು ಕೂಡಿ

ಬಂದದ್ದಕ್ಕೆ ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ (ನೋಡಿರಿ 1 ಕೊರಿಂಥ 11:18).

ಹೊಸ ಒಡಂಬಡಿಕೆಯಲ್ಲಿ "ಸಭೆ" ಮತ್ತು "ಸಭೆಗಳು" ಎಂಬ ಪದಗಳನ್ನು ಪರಿಶುದ್ಧಾತ್ಮನು ಉಪಯೋಗಿಸಿದ್ದನ್ನು ಜಾಗರೂಕತೆಯಿಂದ ಅಧ್ಯಯನ ಮಾಡಿರಿ. ಆವರಣ ಚಿನ್ಹೆಗಳಲ್ಲಿಯ ಅಂಕಿಗಳ ಪದವು ಇಲ್ಲವೇ ಪದ ಪ್ರಯೋಗವು ಕಂಡು ಬರುವ ಸಂಖ್ಯೆಯನ್ನು ಸೂಚಿಸುತ್ತದೆ.

## "ಸಭೆ" (79)

ಮತ್ತಾಯ (3) - 16:18; 18:17 (ಎರಡು ಸಲ).

ಅಪೊಸ್ತಲರ ಕೃತ್ಯಗಳು (21) - 2:47 (KJVಯಲ್ಲಿ "ಸಭೆ" ಎಂದಿದೆ ಆದರೆ ಅಪೊಸ್ತಲರ ಕೃತ್ಯಗಳು 2:47ರಲ್ಲಿ ಅದರ ಕಾಣುವಿಕೆಗೆ ಕೈಬರಹ ಪ್ರತಿಯ ಪುರಾವೆಯು ಸ್ಪಷ್ಟವಾಗಿಲ್ಲ); 5:11; 7:38 ("congregation" ಎಂಬ ಪದ *ekklesia* ["church"] ದಿಂದ ಬರುತ್ತದೆ); 8:1; 8:3; 9:31; 11:22; 11:26; 12:1; 12:5; 13:1; 14:23; 14:27; 15:3; 15:4; 15:22; 18:22; 19:32 ("assembly" ಪದವು ಎಕ್ಲೇಸಿಯಾ ["ಚರ್ಚ್"] ದಿಂದ ಬರುತ್ತದೆ); 19:39 ("ಅಸೆಂಬ್ಲಿ" ಪದವು ಎಕ್ಲೇಸಿಯಾ ["ಚರ್ಚ್"] ದಿಂದ ಬರುತ್ತದೆ); 19:40, 41 ("ಅಸೆಂಬ್ಲಿ" ಪದ ಎಕ್ಲೇಸಿಯಾ ["ಚರ್ಚ್"] ದಿಂದ ಬರುತ್ತದೆ); 20:17; 20:28.

ರೋಮಾಪುರದವರಿಗೆ (3) - 16:1; 16:5; 16:23.

1 ಕೊರಿಂಥದವರಿಗೆ (16) - 1:2; 4:17; 6:4; 10:32; 11:18; 11:22; 12:28; 14:4; 14:5; 14:12; 14:19; 14:23; 14:28; 14:35; 15:9; 16:19.

2 ಕೊರಿಂಥದವರಿಗೆ (1) - 1:1.

ಗಲಾತ್ಯದವರಿಗೆ (1) - 1:13.

ಎಫೆಸದವರಿಗೆ (9) - 1:22; 3:10; 3:21; 5:23; 5:24; 5:25; 5:27; 5:29; 5:32.

ಫಿಲಿಪ್ಪಿಯವರಿಗೆ (2) - 3:6; 4:15.

ಕೊಲೊಸ್ಸೆಯವರಿಗೆ (4) - 1:18; 1:24; 4:15; 4:16.

1 ಥೆಸಲೊನೀಕದವರಿಗೆ (1) - 1:1.

2 ಥೆಸಲೊನೀಕದವರಿಗೆ (1) - 1:1.

1 ತಿಮೊಥೆಯನಿಗೆ (3) - 3:5; 3:15; 5:16.

ಫಿಲೆಮೋನನಿಗೆ (1) - 2.

ಇಬ್ರಿಯರಿಗೆ (2) - 2:12; 12:23.

ಯಾಕೋಬ (1) - 5:14.
3 ಯೋಹಾನ (3) - 6; 9; 10.
ಪ್ರಕಟನೆ (7) - 2:1; 2:8; 2:12; 2:18; 3:1; 3:7; 3:14.

## "ಸಭೆಗಳು" (35)

ಅಪೊಸ್ತಲರ ಕೃತ್ಯಗಳು (2) - 15:41; 16:5.
ರೋಮಾಪುರದವರಿಗೆ (2) - 16:4; 16:16.
1 ಕೊರಿಂಥದವರಿಗೆ (6) - 7:17; 11:16; 14:33; 14:34; 16:1; 16:19.
2 ಕೊರಿಂಥದವರಿಗೆ (8) - 8:1; 8:18; 8:19; 8:23; 8:24; 11:8; 11:28; 12:13.
ಗಲಾತ್ಯದವರಿಗೆ (2) - 1:2; 1:22.
1 ಥೆಸಲೊನೀಕದವರಿಗೆ (1) - 2:14.
2 ಥೆಸಲೊನೀಕದವರಿಗೆ (1) - 1:4.
ಪ್ರಕಟನೆ (13) - 1:4; 1:11; 1:20 (ಎರಡು ಸಲ); 2:7, 11, 17, 29; 3:6, 13, 22; 2:23; 22:16.

# ಪುರವಣಿ 4

# ಹೊಸ ಒಡಂಬಡಿಕೆಯಲ್ಲಿ "ರಾಜ್ಯ" ಮತ್ತು "ರಾಜ್ಯಗಳು" ಎಂಬ ಪದಗಳು

ಹೊಸ ಒಡಂಬಡಿಕೆಯಲ್ಲಿ "ರಾಜ್ಯ" ಎಂಬ ಪದದ ಮೂಲ ಅರ್ಥವು "ಆಳ್ವಿಕೆ, ಪ್ರಭಾವ ಇಲ್ಲವೇ ಸಾರ್ವಭೌಮತ್ವ" ಎಂದಿದೆ. ಆದುದರಿಂದ ದೇವರ ರಾಜ್ಯವು ದೇವರ ಆಳ್ವಿಕೆ ಇಲ್ಲವೆ ಸಾರ್ವಭೌಮತ್ವವಾಗಿದೆ.

"ರಾಜ್ಯವು" ಹೊಸ ಒಡಂಬಡಿಕೆಯಲ್ಲಿ ಸುಮಾರು ಆರು ಭಿನ್ನವಾದ ಹಿನ್ನೆಲೆಗಳಲ್ಲಿ ಉಪಯೋಗಿಸಲ್ಪಟ್ಟಿದೆ. ಮೊದಲನೆಯದಾಗಿ, ಪದವು ಭೂಲೋಕದ, ರಾಜ ಕೀಯ ಆಳ್ವಿಕೆಗೆ ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ (ಮತ್ತಾಯ 4:8 ನೋಡಿರಿ). ಎರಡನೆಯದಾಗಿ ಇಸ್ರಾಯೇಲ ರಾಜ್ಯಕ್ಕೆ ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ (ನೋಡಿರಿ ಮತ್ತಾಯ 8:12). ಮೂರನೆಯದಾಗಿ, ದೇವರ ಶಕ್ತಿ ಇಲ್ಲವೇ ಆಳ್ವಿಕೆಗೆ ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ (ಮತ್ತಾಯ 12:28 ನೋಡಿರಿ). ನಾಲ್ಕನೆಯದಾಗಿ, ಸಭೆಗೆ, ಇಂದು ಭೂಲೋಕದಲ್ಲಿ ದೇವರ ವಿಶೇಷ ಆಳ್ವಿಕೆಗೆ ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ (ಮತ್ತಾಯ 11:11; 16:18; ಯೋಹಾನ 3:5; ಕೊಲೊಸ್ಸೆ 1:13 ನೋಡಿರಿ). ಐದನೆಯದಾಗಿ, ದೇವರ ನಿತ್ಯ ರಾಜ್ಯದಂತೆ ಪರಲೋಕಕ್ಕೆ ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ (ನೋಡಿರಿ ಲೂಕ 13:28). ಆರನೆಯದಾಗಿ, ಸೈತಾನನ ಪ್ರಭುತ್ವದ ಕ್ಷೇತ್ರದ ಬಗ್ಗೆ ಅದು ಉಪಯೋಗಿಸಲ್ಪಟ್ಟಿದೆ (ನೋಡಿರಿ ಮತ್ತಾಯ 12:26).

"ಪರಲೋಕ ರಾಜ್ಯ" ಎಂಬುದನ್ನು ಮತ್ತಾಯನು ಹೆಚ್ಚಾಗಿ ಉಪಯೋಗಿಸಿದ್ದಾನೆ. ಮಾರ್ಕ, ಲೂಕ ಮತ್ತು ಯೋಹಾನರು ವ್ಯತ್ಯಾಸವಿಲ್ಲದೆ "ದೇವರ ರಾಜ್ಯ" ಎಂಬ ಮಾತನ್ನು ಉಪಯೋಗಿಸಿದ್ದಾರೆ. ಎರಡೂ ಪದಗಳಿಗೂ ಸ್ಪಷ್ಟವಾಗಿ ಒಂದೇ ಅರ್ಥವಿರುತ್ತದೆ.

ಹೊಸ ಒಡಂಬಡಿಕೆಯಲ್ಲಿ "ರಾಜ್ಯ" ಎಂಬ ಪದವನ್ನು ಪರಿಶುದ್ಧಾತ್ಮನು ಉಪಯೋಗ ಮಾಡಿದ್ದನ್ನು ಜಾಗರೂಕತೆಯಿಂದ ಅಧ್ಯಯನ ಮಾಡಿರಿ. ಆವರಣ ಚಿನ್ಹೆಗಳಲ್ಲಿಯ ಅಂಕಿಗಳ ಪದವು ಇಲ್ಲವೇ ಪದ ಪ್ರಯೋಗವು ಕಂಡು ಬರುವ ಸಂಖ್ಯೆಯನ್ನು ಸೂಚಿಸುತ್ತದೆ.

## "ರಾಜ್ಯ" (A kingdom) (2)

ಲೂಕ (1) - 22:29, 30.
ಇಬ್ರಿಯರಿಗೆ (1) - 12:28.

## "ರಾಜ್ಯ" (the kingdom) (11)

ಮತ್ತಾಯ (4) - (ಈ ವಚನದ ಕೊನೆಯ ವಾಕ್ಯವು ಹೆಚ್ಚಾದ ನಂಬಲರ್ಹ ಕೈಬರಹ ಪ್ರತಿಗಳಲ್ಲಿ ಕಂಡು ಬರುವದಿಲ್ಲ); 8:12; 13:19; 13:38; 25:34.
ಮಾರ್ಕ (1) - 11:10.
ಲೂಕ (1) - 12:32.
ಅಪೊಸ್ತಲರ ಕೃತ್ಯಗಳು (2) - 1:6; 20:25.
1 ಕೊರಿಂಥದವರಿಗೆ (1) - 15:24.
ಯಾಕೋಬ (1) - 2:5.
ಪ್ರಕಟನೆ (1) - 1:9.

## "ಪರಲೋಕ ರಾಜ್ಯ" (31)

ಮತ್ತಾಯ (31) - 3:2; 4:17; 5:3; 5:10; 5:19 (ಎರಡು ಸಲ); 5:20; 7:21; 8:11; 11:11; 11:12; 13:11; 13:24; 13:31; 13:33; 13:44; 13:45; 13:47; 13:52; 16:19; 18:1; 18:3; 18:4; 18:23; 19:12; 19:14; 19:23; 20:1; 22:2; 23:13; 25:1.

## “ರಾಜ್ಯದ ಸುವಾರ್ತೆ” (3)

ಮತ್ತಾಯ (3) - 4:23; 9:35; 24:14.

## “ದೇವರ ರಾಜ್ಯ” (67)

ಮತ್ತಾಯ (4) - 12:28; 19:24; 21:31; 21:43.

ಮಾರ್ಕ (14) - 1:15; 4:11; 4:26; 4:30; 9:1; 9:47; 10:14; 10:15; 10:23; 10:24; 10:25; 12:34; 14:25; 15:43.

ಲೂಕ (32) - 4:43; 6:20; 7:28; 8:1; 8:10; 9:2; 9:11; 9:27; 9:60; 9:62; 10:9; 10:11; 11:20; 13:18; 13:20; 13:28; 13:29; 14:15; 16:16; 17:20 (ಎರಡು ಸಲ); 17:21; 18:16; 18:17; 18:24; 18:25; 18:29, 30; 19:11; 21:31; 22:16; 22:18; 23:50, 51.

ಯೋಹಾನ (2) - 3:3; 3:5.

ಅಪೊಸ್ತಲರ ಕೃತ್ಯಗಳು (6) - 1:3; 8:12; 14:22; 19:8; 28:23; 28:31.

ರೋಮಾಪುರದವರಿಗೆ (1) - 14:17.

1 ಕೊರಿಂಥದವರಿಗೆ (4) - 4:20; 6:9; 6:10; 15:50.

ಗಲಾತ್ಯದವರಿಗೆ (1) - 5:21.

ಕೊಲೊಸ್ಸೆಯವರಿಗೆ (1) - 4:11.

2 ಥೆಸಲೊನೀಕದವರಿಗೆ (1) - 1:5

ಪ್ರಕಟನೆ (1) - 12:10.

## “ಕ್ರಿಸ್ತನ ರಾಜ್ಯ” (15)

ಮತ್ತಾಯ (3) - 13:41; 16:28; 20:21.

ಲೂಕ (3) - 1:33; 22:30; 23:42.

ಯೋಹಾನ (3) - 18:36 (ಮೂರು ಸಲ).

ಕೊಲೊಸ್ಸೆಯವರಿಗೆ (1) - 1:13.

2 ತಿಮೊಥೆ (2) - 4:1; 4:18.

ಇಬ್ರಿಯರಿಗೆ (1) - 1:8.

2 ಪೇತ್ರ (1) - 1:11.

ಪ್ರಕಟನೆ (1) - 11:15.

## ತಂದೆಯ ರಾಜ್ಯ (7)

ಮತ್ತಾಯ (4) - 6:10; 6:33; 13:43; 26:29.
ಲೂಕ (2) - 11:2; 12:31.
1 ಥೆಸಲೊನೀಕ (1) - 2:12.

## "ಕ್ರಿಸ್ತನ ಮತ್ತು ದೇವರ ರಾಜ್ಯ" (1)

ಎಫೆಸದವರಿಗೆ (1) - 5:5.

## ಭೂಲೋಕದ "ರಾಜ್ಯ" ಇಲ್ಲವೇ "ರಾಜ್ಯಗಳು" (20)

ಮತ್ತಾಯ (4) - 4:8; 12:25; 24:7 (ಎರಡು ಸಲ).
ಮಾರ್ಕ (5) - 3:24 (ಎರಡು ಸಲ); 6:23; 13:8 (ಎರಡು ಸಲ).
ಲೂಕ (6) - 4:5; 11:17; 19:12; 19:15; 21:10 (ಎರಡು ಸಲ).
ಇಬ್ರಿಯರಿಗೆ (1) - 11:33.
ಪ್ರಕಟನೆ (4) - 11:15; 17:12; 17:17; 17:18 ("ಭೂಲೋಕದ ಅರಸರುಗಳ ಮೇಲಿನ ರಾಜ್ಯ" ಎಂದು ಗ್ರೀಕ್ ಮೂಲ ಪಾಠದಲ್ಲಿದೆ).

## ಸೈತಾನನ ರಾಜ್ಯ (3)

ಮತ್ತಾಯ (1) - 12:26.
ಲೂಕ (1) - 11:18.
ಪ್ರಕಟನೆ (1) - 16:10.

# ಹೆಚ್ಚಿನ ಬೈಬಲಿನ ಅಧ್ಯಾಯನಕ್ಕಾಗಿ ಮಾರ್ಗದರ್ಶಿ

## ಬೈಬಲ್ ಪ್ರಕಾರವಾಗಿ ದೇವರೊಂದಿಗೆ ಸಮಾಧಾನವನ್ನು ಪಡೆಯುವುದು ಹೇಗೆ?

1. ದೇವರೊಂದಿಗೆ ಸಮಾಧಾನ ಇಲ್ಲವೇ ರಕ್ಷಣೆಯು ಯೇಸು ಕ್ರಿಸ್ತನಲ್ಲಿಯ ವಿಶ್ವಾಸದಿಂದ ಪಡೆದು ಕೊಳ್ಳಬಹುದಾದ ಆತನ ವರ. ಓದಿರಿ ರೋಮಾಪುರ 5:1, 2; ಯೋಹಾನ 14:6.
2. ನಿಮ್ಮ ರಕ್ಷಣೆಗಾಗಿ ಯೇಸು ಮರಣ ಹೊಂದಿದನು. ಓದಿರಿ 1 ಪೇತ್ರ 2:21-24; 2 ಕೊರಿಂಥ 5:21.
3. ಆತನು ಶಿಲುಬೆಯ ಮೇಲೆ ಯಜ್ಞವಾಗಿ ಅರ್ಪಿಸಲ್ಪಟ್ಟನು. ಓದಿರಿ ಮತ್ತಾಯ 27:27-54.
4. ಏನು ಬರಲಿಕ್ಕಿದೆ ಎಂಬುದನ್ನು ಮೊದಲೇ ಆತನು ತಿಳಿದಿದ್ದರೂ ತನ್ನನ್ನು ದೇವರ ಚಿತ್ತಕ್ಕೆ ಒಪ್ಪಿಸಿಕೊಟ್ಟನು. ಓದಿರಿ ಮತ್ತಾಯ 26:47-56.
5. ಆತನ ಒಪ್ಪಿಸಿಕೊಡುವಿಕೆಯು ಪ್ರೀತಿಯಿಂದ ನಡಿಸಲ್ಪಟ್ಟಿತು. ಓದಿರಿ ಯೋಹಾನ 15:13.
6. ಆತನ ಪ್ರೀತಿಯು ಆತನ ದೈವಿಕ ಮೂಲವನ್ನು ಪ್ರತಿಬಿಂಬಿಸಿತು. ಓದಿರಿ ಯೋಹಾನ 3:16.
7. ಆತನು ದೇವರ ಕುಮಾರನಾಗಿದ್ದನು ಮತ್ತು ಇನ್ನೂ ಹೆಚ್ಚಾಗಿದ್ದನು. ಓದಿರಿ ಯೋಹಾನ 1:1-14.
8. ಆತನು ದೇವರಾಗಿದ್ದರೂ ದೇವರಿಗೆ ವಿಧೇಯರಾಗಿರುವದನ್ನು ಕಲಿತುಕೊಂಡನು. ನೀವೂ ಸಹ ದೇವರಿಗೆ ವಿಧೇಯಾರಾಗುವದನ್ನು ಕಲಿತುಕೊಳ್ಳತಕ್ಕದ್ದು. ಓದಿರಿ ಇಬ್ರಿಯ 5:8, 9.
9. ಅವಿಧೇಯತೆಯ ನಿತ್ಯನಾಶನವನ್ನು ಅನುಭವಿಸುವುದು ಮತ್ತು ಕರ್ತನ ಸನ್ನಿಧಿಯಿಂದ ದೂರಮಾಡುವುದು. ಓದಿರಿ 2 ಥೆಸಲೊನೀಕ 1:7-9.
10. ನಿಮ್ಮ ಪಾಪಗಳು ನಿಮ್ಮನ್ನು ದೇವರಿಂದ ಅಗಲಿಸಿವೆ. ಓದಿರಿ ರೋಮಾಪುರ 3:23; 6:23.
11. ಪಾಪ ಮಾಡುವದನ್ನು ಮುಂದುವರಿಸುವವರು ಅವಿಧೇಯರಾಗಿರುವರು ಮತ್ತು ಪರಲೋಕಕ್ಕೆ ಹೋಗುವದಿಲ್ಲ. ಓದಿರಿ ಗಲಾತ್ಯ 5:19-21.
12. ಶುದ್ಧೀಕರಣವೂ ತೊಳೆಯುವಿಕೆಯೂ ಯೇಸುಕ್ರಿಸ್ತನ ಮುಖಾಂತರ ದೊರೆಯುವವು. ಓದಿರಿ 1 ಕೊರಿಂಥ 6:9-11.
13. ನಿಮ್ಮ ಪಾಪಗಳಿಗಾಗಿ ದುಃಖವನ್ನು ವ್ಯಕ್ತಪಡಿಸಿ ಪಾಪಭರಿತ ಜೀವನದಿಂದ ದೂರ ಹೋಗುವದರಿಂದ ನೀವು ನಿತ್ಯನಾಶನವನ್ನು ತಪ್ಪಿಸಿಕೊಳ್ಳಬಹುದು. ಓದಿರಿ 2 ಕೊರಿಂಥ 7:9, 10.
14. ಪಾಪಗಳ ಕ್ಷಮಾಪಣೆಗಾಗಿ ಯೇಸು ಶಿಲುಬೆಯ ಮೇಲೆ ತನ್ನ ರಕ್ತ ಸುರಿಸಿದನು. ಓದಿರಿ ಯೋಹಾನ 19:33, 34; ಮತ್ತಾಯ 26:28.

15. ಕ್ರಿಸ್ತನ ರಕ್ತವು ನಿಮ್ಮನ್ನು ವಿಮೋಚಿಸುವುದು. ಓದಿರಿ 1 ಪೇತ್ರ 1:18, 19.
16. ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದುದರಿಂದ ವಿಮೋಚನೆಯು ಸಾಧ್ಯವಾಗಿದೆ. ಓದಿರಿ 1 ಕೊರಿಂಥ 15:20-22; 1 ಪೇತ್ರ 3:21.
17. ನೀವು ಮಾನಸಾಂತರ ಪಡುವಾಗ, ಆತನ ಮರಣ ಪುನರುತ್ಥಾನದಲ್ಲಿ ಬಾಪ್ತಿಸ್ಮ ಹೊಂದುವಾಗ ಮತ್ತು ನೂತನ ಜೀವಿತಕ್ಕೆ ಎಬ್ಬಿಸಲ್ಪಡುವಾಗ ನೀವು ವಿಮೋಚನೆಯನ್ನೂ ಕ್ಷಮಾಪಣೆಯನ್ನೂ ಹೊಂದಿಕೊಳ್ಳುವಿರಿ. ಓದಿರಿ ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:36-39; ರೋಮಾಪುರ 6:3, 4; ಕೊಲೊಸ್ಸೆ 2:12-14.
18. ನಿಮ್ಮ ಪಾಪಗಳು ತೊಳೆಯಲ್ಪಡಬೇಕೆಂದು ಬಯಸುವಿರೋ? ಕ್ರಿಸ್ತನಲ್ಲಿ ನೂತನ ಜೀವಿತ ಬಯಸುವಿರೋ? ಓದಿರಿ ಅಪೊಸ್ತಲರ ಕೃತ್ಯಗಳು 22:16.
19. ವಿಧೇಯತೆಯು ಏನು ಮಾಡುತ್ತದೆ ಎಂಬುದಕ್ಕೆ ಒಂದು ಉದಾಹರಣೆಯಾಗಿ ಓದಿರಿ ಅಪೊಸ್ತಲರ ಕೃತ್ಯಗಳು 8:26-39.
20. ಐಥಿಯೋಪ್ಯದವನು ಯೇಸುವಿನಲ್ಲಿ ತನ್ನ ವಿಶ್ವಾಸವನ್ನು ಅರಿಕೆ ಮಾಡಿ ನೀರಿನಲ್ಲಿ ಮುಳುಗೇಳಿಸಲ್ಪಟ್ಟನು. ನೀವು ಏನು ಮಾಡುವಿರಿ?

# ಹೆಚ್ಚಿನ ಅಧ್ಯಯನಕ್ಕಾಗಿ

ನೀವು ಬಾಪ್ತಿಸ್ಮ ಹೊಂದಿದ ನಂತರ, ದಯವಿಟ್ಟು ನಮಗೆ ಬರೆದು ತಿಳಿಸಿರಿ. ನಿಮ್ಮ ಊರಿನಲ್ಲಿ ಕ್ರಿಸ್ತನ ಒಂದು ಸಭೆಯಿದ್ದರೆ ದಯವಿಟ್ಟು ಅದನ್ನು ಸಂಪರ್ಕಿಸಿರಿ. ನಿಮಗೆ ಸಭೆಯನ್ನು ಕಂಡು ಕೊಳ್ಳಲಿಕ್ಕೆ ಆಗದಿದ್ದರೆ, ನೀವು ಒಂದನ್ನು ನಿಮ್ಮ ಮನೆಯಲ್ಲಿ ಪ್ರಾರಂಭಿಸಬಹುದು. (ಪುರಾವಣಿ 2ರಲ್ಲಿ "ಬೈಬಲಿಗೆ ಅನುಗುಣವಾಗಿ ಒಂದು ಹೊಸ ಸಭೆಯನ್ನು ಸಂಘಟಿಸುವುದು ಹೇಗೆ" ಎಂಬ ಚಾರ್ಟನ್ನು ನೋಡಿರಿ.) ಹತ್ತು ಇಲ್ಲವೇ ಹೆಚ್ಚು ಜನ ಕ್ರೈಸ್ತರು ಭಾಗವಹಿಸುವಾಗ ನಮಗೆ ತಿಳಿಸಸಿರಿ. ಸತ್ಯವೇದ ಕ್ಲಾಸುಗಳಿಗಾಗಿ ಮತ್ತು ಬೋಧನೆಗಾಗಿ ನಿಮಗೆ ನಾವು ಸಾಹಿತ್ಯವನ್ನು ಕಳುಹಿಸುವೆವು. ಪ್ರತಿ ಎರಡು ತಿಂಗಳಿಗೆ ಒಂದು ಸಲ ವಿವಿಧ ಬೈಬಲ್ ಪುಸ್ತಕಗಳ ಮೇಲೆ ಮತ್ತು ವಿಷಯಗಳ ಮೇಲೆ ಅಧ್ಯಯನಗಳನ್ನು ಟ್ರೂತ್ ಫಾರ್ ಟುಡೇ ವರಲ್ಡ್ ಮಿಶನ್ ಸ್ಕೂಲ್ ಪ್ರಕಟಿಸುವುದು. ದೇವರ ಚಿತ್ತವನ್ನು ಕಲಿತುಕೊಳ್ಳಲು, ಆತ್ಮಿಕವಾಗಿ ಬೆಳೆಯಲು ಹಾಗೂ ಯೇಸುಕ್ರಿಸ್ತನ ಶುಭವಾರ್ತೆಯನ್ನು ಇತರರಿಗೆ ಬೋಧಿಸಲು ಬಯಸುವವರಿಗಾಗಿ ಇವು ಇರುವವು. ಸಾಹಿತ್ಯವು ಉಚಿತವಾಗಿ ಲಭ್ಯವಿರುವುದು. ಈ ಸುವಾರ್ತೆಯ ಸಾಹಿತ್ಯವನ್ನು ಸ್ವೀಕರಿಸಲು ಬಯಸಿದರೆ, ದಯವಿಟ್ಟು, ಈ ಕೆಳಗಿನ ಫಾರ್ಮನ್ನು ಪೂರ್ಣವಾಗಿ ತುಂಬಿರಿ ಹಾಗೂ ನಮ್ಮ ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸಿರಿ:

ಟ್ರೂತ್ ಫಾರ್ ಟುಡೇ,
ಪೋಸ್ಟ್ ಬ್ಯಾಗ್ ನಂಬರ್ 5311,
ಶಿವಾಜಿನಗರ,
ಬೆಂಗಳೂರು - 560 001.

ಪೂರ್ಣ ಹೆಸರು ______________________________

ವಿಳಾಸ ______________________________

______________________________

ಪಟ್ಟಣ ಇಲ್ಲವೇ ಗ್ರಾಮ ______________________________

ಪ್ರಾಂತ್ಯ ______________________________ ದೇಶ ________

ಲಭ್ಯವಿದ್ದರೆ ನಿಮ್ಮ e-mail ವಿಳಾಸ ಸೂಚಿಸಿರಿ:______________________________

ಇದನ್ನು ಓದಿದ ನಂತರ ನಿಮ್ಮ ಅಗತ್ಯತೆಯನ್ನು ಸೂಚಿಸಿರಿ.

☐ ನನಗಾಗಿ ಒಂದು ಪ್ರತಿ ಬೇಕು.

☐ ದೇವರಿಗೆ ಸಮರ್ಪಿಸಿಕೊಳ್ಳುವ ಮೊದಲು ನಾನು ಹೆಚ್ಚು ಅಧ್ಯಯನ ಮಾಡಲು ಬಯಸುತ್ತೇನೆ.

☐ ನಾನು ಬಾಪ್ತಿಸ್ಮ ಹೊಂದಿದ್ದೇನೆ ಮತ್ತು ಕ್ರಮಪ್ರಕಾರವಾಗಿ ಸಾಹಿತ್ಯ ಪಡೆಯಲು ಬಯಸುತ್ತೇನೆ.

ಟ್ರೂತ್ ಫಾರ್ ಟುಡೇ, ಸಾಹಿತ್ಯವನ್ನು ಯಾವ ಭಾಷೆಯಲ್ಲಿ ಸ್ವೀಕರಿಸಲು ಬಯಸುವಿರಿ? ಒಂದನ್ನು ಆಯ್ದುಕೊ:

☐ ಇಂಗ್ಲೀಷ್ ☐ ಹಿಂದಿ ☐ ಕನ್ನಡ ☐ ಮಲಯಾಳಂ

☐ ತಮಿಳು ☐ ತೆಲುಗು ☐ ಪಂಜಾಬಿ